TIGHT BINDING

UNIVERSAL
LIBRARY
OU_198302
UNIVERSAL
LIBRARY

OUP—408—16-6-64—5,000.

OSMANIA UNIVERSITY LIBRARY

Call No. K894·8141/P98B Accession No. K6376

Author ಪೈಪ್ಪಪ್ಪಿ, ಕೆ. ವಿ.

Title ಪಠಕಿಗಳ ಪೈಭವ ಸಂಗ್ರಹ. 1955.

This book should be returned on or before the date last marked below.

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೪೨

ಪ್ರಧಾನ ಸಂಪಾದಕ :
ಕೆ. ವಿ. ಪುಟ್ಟಪ್ಪ, ಎಂ.ಎ.

ಭರತೇಶ ವೈಭವ ಸಂಗ್ರಹ

ಸಂಪಾದಕ :
ಟಿ. ಎಸ್. ಶಾಮರಾವ್, ಎಂ. ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೫

ಮೊದಲನೆಯ ಮುದ್ರಣ ೧೯೫೫

ಎಲ್ಲ ಹಕ್ಕುಗಳನ್ನು ಕಾದಿರಿಸಿದೆ

ಬೆಲೆ :

ಸಾದಾ ಪ್ರತಿ : ೨—೮—೦] [ಕ್ಯಾಲಿಕೋ ಪ್ರತಿ : ೩—೦—೦

ಮುದ್ರಣ :
ಇಂಡಿಯಾ ಪ್ರೆಸ್, ಮೈಸೂರು.

ಮುನ್ನುಡಿ

ಕಾವ್ಯ, ವಸ್ತು ಮತ್ತು ದರ್ಶನದ ದೃಷ್ಟಿಯಿಂದ ನೋಡುವುದಾದರೆ ಭರತೇಶ ವೈಭವದ ಕರ್ತೃವಾದ ರತ್ನಾಕರವರ್ಣಿ ಹಿಂದಿನ ಮಹಾಕವಿಗಳ ಪಂಕ್ತಿಯಲ್ಲಿ ಪ್ರಥಮ ಶ್ರೇಣಿಗೆ ಏರುವಂತೆ ತೋರುತ್ತದೆ. ಆದರೆ ರೀತಿಯ ಕೊನೆಯ ಪಾದವಾದ ಭಾಷೆ ಮತ್ತು ಛಂದಸ್ಸುಗಳ ದೃಷ್ಟಿಯಿಂದ ಆ ಸ್ಥಾನ ಆ ಎತ್ತರದಲ್ಲಿಯೇ ಏರಿಳಿತಗಳಿಲ್ಲದೆ ಇರಬಲ್ಲುದೆಂದು ಹೇಳಲಾಗುವುದಿಲ್ಲ. ಹೀಗಿದ್ದರೂ ರತ್ನಾಕರವರ್ಣಿ ನಿಜವಾಗಿಯೂ ಮಹಾಕವಿ ಎಂಬ ಹೆಸರಿಗೆ ಅದರ ಸಂಪೂರ್ಣಾರ್ಥದಲ್ಲಿ ಅರ್ಹನಾಗುತ್ತಾನೆ; ಇದು ಔಪಚಾರಿಕವಲ್ಲ.

ಭರತೇಶ ವೈಭವದಲ್ಲಿ ತ್ಯಾಗ ಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಪ್ರತಿಮಿಸಿದ್ದಾನೆ. ಅಷ್ಟೆ ಅಲ್ಲ, ಕವಿ ಆದರ್ಶವನ್ನು ಭರತನ ಜೀವನದಲ್ಲಿ ಮಾತ್ರವೇ ಅಲ್ಲದೆ ಇಡೀ ಕಾವ್ಯದ ವಿವರ ವಿವರಗಳಲ್ಲೆಲ್ಲ ಬುದ್ಧಿಪೂರ್ವಕವಾಗಿ ಪ್ರತಿಮಿಸಿರುವುದನ್ನು ನೋಡಿದರಂತೂ ಇಂತಹ ಕಾವ್ಯಸೃಷ್ಟಿ ಜಗತ್ತಿನ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣುವುದಿಲ್ಲ. ಆ ದೃಷ್ಟಿಯಿಂದ ಈ ಕೃತಿ ಜಗತ್ ಕೃತಿ. ಸಿದ್ಧವ್ಯಕ್ತಿಗೆ ಜೀವನವೆಲ್ಲ ಉಪಾಸನೆ; ಅವನಿಗೆ ಅಲ್ಪ ಎಂಬುದಿಲ್ಲ: ಅತ್ಯಂತ ಸಾಮಾನ್ಯ ಜೀವನದ ಅತ್ಯಂತ ಸಾಮಾನ್ಯ ಘಟನೆಗಳೂ ಮಹತ್ವ ಪೂರ್ಣವಾದುವು; ಅಂಥವನು ಲೋಕ ವ್ಯವಹಾರದಲ್ಲೂ ಅಲೋಕವ್ಯವಹಾರಿಯಾಗುತ್ತಾನೆ—ಎಂಬುದನ್ನು ಕವಿ ಭರತೇಶನ ಜೀವನದಲ್ಲಿ ಎತ್ತಿ ತೋರಿದ್ದಾನೆ. ಭಗವದ್‌ಗೀತೆಯಲ್ಲಿ ಹೇಳುವ ಸ್ಥಿತಪ್ರಜ್ಞನನ್ನು ಕವಿ ಭರತನಲ್ಲಿ ಸೃಷ್ಟಿಸಿದ್ದಾನೆ. ಕರ್ಮದಲ್ಲಿದ್ದೂ ನಿಷ್ಕರ್ಮಿಯಾಗಿರುವ, ನಿಷ್ಕರ್ಮಿಯಾಗಿದ್ದೂ ಲೋಕ ಸಂಗ್ರಹ ಹಿತಾರ್ಥವಾಗಿ ಕರ್ಮಿಯಾಗುವ ನಿಷ್ಕಾಮ ಕರ್ಮಿಯನ್ನು ಕವಿ ಭರತನಲ್ಲಿ ಕಾಣಿಸಿದ್ದಾನೆ.

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ।
ಕುರ್ಯಾದ್ವಿದ್ವಾಂಸ್ತಥಾಽಸಕ್ತಃ ಚಿಕೀರ್ಷುರ್ ಲೋಕ ಸಂಗ್ರಹಮ್॥

ತನ್ನ ಕರ್ಮೇಂದ್ರಿಯಗಳಿಂದ ಸರ್ವ ಕರ್ಮವನ್ನು ಮಾಡಿಸಿದರೂ ಮನಸ್ಸಿನಿಂದ

ಇಂದ್ರಿಯಗಳನ್ನು ನಿಗ್ರಹಿಸಿರುವುದರಿಂದ ಭರತ ಜೀವನ್ಮುಕ್ತನಾಗಿದ್ದಾನೆ.

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ।
ಕರ್ಮೇಂದ್ರಿಯೈಃ ಕರ್ಮ ಯೋಗಮಸಕ್ತಃ ಸವಿಶಿಷ್ಯತೇ॥

೩—೭

ಭೂಮಂಡಲಾಧಿಪತಿಯಾಗಿ ಸಿಂಹವಿಷ್ಟರಮಂಡಿತನಾಗಿ ಶೋಭಿಸುವಾಗಲೂ

" ಗಾನಮುದ್ದಳಿಗೆ ತಾಳಲಯಕೆ ನರ್ತಿಪ ಮಂದ। ಯಾನೆಗೆ ಶಿರದ
ಕುಂಭದೊಳು।
ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿ ಸಂ। ಧಾನದೊಳಗೆ ಅವನ
ನೆನಹು॥

—ಇರುತ್ತದೆ.

"ಮಾಂಡಳಿಕರ ಕೈಯ ಹಡಪ ಹಾವುಗೆ ಕುಂಚ ಗಿಂಡಿ ಹಿಡಿಸಿ ಕೊಂಬ" ಇವನು ತನ್ನ ಗುರುವಿನ ಬರವನ್ನು ತಿಳಿದೊಡನೆ " ಗಂಡಗರ್ವವ ಬಿಟ್ಟು ನಡೆದನು—ಗುರುವಿಗೆ ಗಿಂಡಿಯೂಳಿಗದವನಾಗಿ." ಬಂದ ಗುರುವಿಗೆ ಭಕ್ತಿ ಪೂರ್ವಕವಾಗಿ ನಮಸ್ಕರಿಸಿ ಅವರ ಪ್ರದಕ್ಷಿಣೆ ಬರುವಾಗಲೂ ಅವನು ತನ್ನೊಳಗಿನ ಪರಮಹಂಸನನ್ನೂ ಪ್ರದಕ್ಷಿಣೆ ಬರುತ್ತಾನೆ.

ಬಲಗೊಂಡನುರೆ ಮೂರು ಬಾರಿ ತನ್ನೊಳು ತಾನು। ಗೆಲವೇರಿ ಮುನಿ
ಗಳಿರ್ವರಿಗೆ।
ನಲಿದೆರಗಿದನು ನಿಧಾನದೆಡೆಗೆ ದೀಪ। ಕಳಿಕೆ ತಾನೆರಗುವಂದದೊಳು॥

ಗುರುಪ್ರಸಾದವನ್ನು ತನ್ನ ತೊಂಬತ್ತಾರು ಸಹಸ್ರ ಸತೀವೃಂದದ ಮಧ್ಯೆ ಕುಳಿತು ಅವರೆಲ್ಲರಿಗೂ ಹಂಚಿ ಅದನ್ನು ತಾನೂ ಸ್ವೀಕರಿಸುತ್ತಿದ್ದರೂ, ಅವನ ಎದೆಯ ಸಂಧಾನ ಗುರುಹಂಸನಾಥನೊಡನೆ ಜೊತೆಜೊತೆಯಲ್ಲೆ ನಿರಂತರವಾಗಿ ನಡೆದಿರುತ್ತದೆ.

ಹರಿವಾಣ ಬಟ್ಟಲುಗಳಿಗೆ ಬಾಯ್ದೆರೆದಾಗ। ಕರತಲ ಸಂಧಾನವಿಹುದು।
ಗುರುಹಂಸನಾಥಗೆ ಸಿದ್ಧಲೋಕಕೆ ಪೋಗಿ। ಬರುತಿಹುದೆದೆಯ ಸಂಧಾನಾ॥

ಈ ಎಲ್ಲ ತಪಸ್ಸಿಗಿಂತಲೂ ಮಹತ್ತರವಾದೊಂದು ತಪಸ್ಸನ್ನು ಅದರ ಸಿದ್ಧಿಯನ್ನು ಭರತ ತನ್ನ ಸತಿ ಕುಸುಮಾಜಿಯೊಡನೆ ಸುಖಿಸುವಂದು ನಡೆಸುತ್ತಿದ್ದ ಆತ್ಮ ಪರಮಾತ್ಮ ರತಿಯಲ್ಲಿ ದರ್ಶಿಸಬಹುದು.

ಸಂಕಲ್ಪವಿಲ್ಲ ವಿಕಲ್ಪವಿಲ್ಲೊಂದರಿ ಸೋಂಕಿಲ್ಲ ತನ್ನನೆ ತಾನು
ಸೋಂಕಿ ತನ್ನೊಳು ಹುಟ್ಟಿದಾನಂದರಸದೊಳು ತೇಂಕಾಡುತಿದ್ದನಾ
ಭೋಗಿ॥

ಹೀಗೆ ಭರತನ ಜೀವನದಲ್ಲಿ ಲೋಕವ್ಯವಹಾರವೆಲ್ಲವೂ ಅಲೌಕವ್ಯವ ಹಾರವಾಗಿಯೆ ಇವೆ. ಅಂತಾಗಿ, ಕಾವ್ಯದಲ್ಲಿ ಪ್ರಧಾನತಃ ಭರತನ ಜೀವನದಲ್ಲಿ ಮೈದೋರುವ ಶೃಂಗಾರ ಸಾಮಾನ್ಯ ಜನರ ದೃಷ್ಟಿಯಲ್ಲಿ ಅಶ್ಲೀಲವೆಂಬಂತೆ ಕಂಡರೂ ದರ್ಶನದ ಔನ್ನತ್ಯದಿಂದ ಪರಿಗಣಿತವಾದಾಗ ಅದು ಗಾಂಭೀರ್ಯವಾಗಿ ತೋರುತ್ತದೆ. "ಮಹಿಮೆ ತಾಂ ಮಾಳ್ಪುದನಿತುಂ ಮಹತ್ ಕಲೆಯಲ್ತೆ!" † ಕವಿಯೆ ಅದನ್ನು ಹೇಳುತ್ತಾನೆ.

"ಮಾರ್ಗವಲ್ಲೆಂಬಂತೆ ತೋರ್ಪುದನ್ಯರಿಗೆ ಸಾ ನ್ಮಾರ್ಗದೊಳವನಿರು
ತಿಹನು।
ಆರ್ಗೆ ತಿಳಿಯಬಹುದಾತ್ಮವಿಜ್ಞಾನಿಯಂ। ತರ್ಗತವನು ಜಿನ ಬಲ್ಲ॥"
"ಗೂಳಿ ನಡೆವ ಹಜ್ಜೆ ತೋರುವುದಲ್ಲದೆ। ಗಾಳಿಯ ಹಜ್ಜೆ ತೋರು
ವುವೆ!" ಎಂದು.

ಷೋಡಶ ಸಹಸ್ರ ಸತೀಲೋಲನಾದ ಭಾಗವತ ಶ್ರೀಕೃಷ್ಣನನ್ನು ಈ ಭರತ ನೆನಪಿಗೆ ತರುತ್ತಾನೆ. ಇಬ್ಬರನ್ನೂ ವರ್ಣಿಸುವಂತಹ ಪಂಕ್ತಿಗಳನ್ನು ಗೀತೆ ಯಿಂದಲೇ ಉದ್ಧರಿಸಬಹುದೆಂದು ತೋರುತ್ತದೆ. ಅದಕ್ಕೆ ಮೊದಲು ಈ ಕವಿ ಭರತನನ್ನು ವರ್ಣಿಸಿರುವ ಒಂದು ಪದ್ಯವನ್ನು ನೋಡಬಹುದು:

ಭೋಗ ವಿಚಾರವು ಬೇಕು ನೃಪತಿಗಾತ್ಮ। ಯೋಗ ವಿಚಾರವು ಬೇಕು॥
ರಾಗರಸಿಕನಾಗಬೇಕು ಭಾವಿಸೆ ವೀತ। ರಾಗರಸಿಕನಾಗಬೇಕು॥

ಕರ್ಮದಲ್ಲಿ ಅಕರ್ಮವನ್ನೂ, ಅಕರ್ಮದಲ್ಲಿ ಕರ್ಮವನ್ನೂ ಮಾಡುವ; ಎಲ್ಲರಂತೆ ಎಲ್ಲ ಕರ್ಮವನ್ನೂ ಮಾಡಿದರೂ ಅವೆಲ್ಲವನ್ನೂ ಪರಮಾತ್ಮನಲ್ಲಿ ಅರ್ಪಿಸಿ ತಾವರೆಯ ಎಲೆಯಂತೆ ನೀರಿಗಂಟದೆ ಇರುವ ಜೀವನ್ಮುಕ್ತನನ್ನು ಭಗವದ್ಗೀತೆಯು ಈ ಶ್ಲೋಕಗಳಿ ವರ್ಣಿಸುತ್ತವೆ.

---

† "ಶ್ರೀರಾಮಾಯಣ ದರ್ಶನಂ" : ಅಯೋಧ್ಯಾ ಸಂಪುಟ. ಪುಟ : ೧೫೪ ಸಂಚಿಕೆ : "ಪಾದುಕಾ ಕಿರೀಟ." : ಪಂಕ್ತಿ : ೬೮.

ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ।
ಸ ಬುದ್ಧಿಮಾನ್ ಮನುಷ್ಯೇಷು ಸಯುಕ್ತಃ ಕೃತ್ಸ್ನ ಕರ್ಮಕೃತ್
೪—೧೮

ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್‌ಸ್ವಪನ್
ಶ್ವಸನ್॥
೫—೮

ಪ್ರಲಪನ್ವಿಸೃಜನ್ ಗೃಹ್ಣನ್ ಉನ್ಮಿಷನ್ ನಿಮಿಷನ್ನಪಿ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್। ೫—೯

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಂ ಕರೋತಿ ಯಃ
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ॥ ೫—೧೦

ಬೃಹತ್ತಿನ ದೃಷ್ಟಿಯಲ್ಲಿಲ್ಲದಿದ್ದರೂ ಗುಣವ ಔನ್ನತ್ಯದಲ್ಲಿ ಇದನ್ನೆ ಹೋಲುವ ಹರಿಹರನ ನಂಬಿಯಣ್ಣನ ರಗಳೆಯಲ್ಲಿ ಇದೆ ದರ್ಶನ ಪ್ರತಿಮಿತವಾಗಿರುವುದನ್ನು ಕಾಣುತ್ತೇವೆ. ಅಲ್ಲಿ " ಮಾಡಿತೆಲ್ಲಂ ಪೂಜೆಯಾಗಿ, ಆಡಿತೆಲ್ಲಂ ಸ್ತುತಿಯಾಗಿ" ಪರಿಣಾಮಗೊಳ್ಳುವದನ್ನೂ "ಕಾಮ ರತಿ ಕ್ರೀಡಾ ಕಾರ್ಯಂ ಶಿವಾರ್ಪಿತ ಕಾರಣ" ವಾಗುವುದನ್ನೂ ಕವಿ ನಂಬಿಯ ಜೀವನದಲ್ಲಿ ಕಾಣಿಸಿದ್ದಾನೆ. ಹರಿಹರನೆ ನಂಬಿಯನ್ನು ಹೀಗೆ ಒಂದೆ ವೃತ್ತದಲ್ಲಿ ವರ್ಣಿಸಿದ್ದಾನೆ :

ನೋಡುವ ಜೆಲ್ವುಮಂ, ನುಡಿವ ವಾಕ್ಯಮುಮುಂ, ಮನದುಳ್ಕಿದಕ್ಕಱಿಂ
ಕೂಡುವ ಸೌಖ್ಯಮಂ, ತನಗೆ ಬಂದ ಮಹೋನ್ನತ ಸಂಪದಂಗಳಂ,
ಪಾಡಿಸುವಳ್ತಿಯಂ, ಸವಿವ ಸರ್ವ ಪದಾರ್ಥ ಸುಖಂಗಳಂ, ಕರಂ
ಕೂಡೆ ಶಿವಾರ್ಪಿತಂಗುಡುತ ಸೌಂದರನೊಪ್ಪುತಿರಲ್ ನಿರಂತರಂ"

ಹೀಗೆ ಭರತೇಶವೈಭವದ ವಸ್ತು ದರ್ಶನಗಳು ಗಹನವಾದುವು. ಆದರೆ ಮೊದಲೆ ಹೇಳಿದಂತೆ ಅದರ ಭಾಷೆ ಮತ್ತು ಛಂದಸ್ಸು ಆ ಭಾರವನ್ನು ಅನಲು ಸಮರ್ಥವಾಗಿವೆ ಎಂದು ಹೇಳಲು ಕಷ್ಟವಾಗುತ್ತದೆ. ಹಡಗಿನಲ್ಲಿ ದಾಟ ಬೇಕಾದ ಸಾಗರವನ್ನು ಹರಿಗೋಲಿನಲ್ಲಿ ದಾಟಲು ಹೊರಟಂತಿದೆ ಈ ಸಾಹಸ.

ಎಲ್ಲಿ ಸಾಮಾನ್ಯ ಸಾಧಾರಣ ಸಂಸಾರದ ಮೃದು ಲಲಿತ ವ್ಯಾಪಾರಗಳನ್ನು ಕವಿ ಚಿತ್ರಿಸಲು ಹೊರಟಿದ್ದಾನೆಯೋ ಅಲ್ಲೆಲ್ಲ ಅದು ಅತ್ಯಂತ ಸಮರ್ಪಕವಾಗಿಯೇ ಇದ್ದರೂ, ಸಮಗ್ರ ಕಾವ್ಯದ ದೃಷ್ಟಿಯಿಂದ ಹೇಳುವುದಾದರೆ, ಅಂದರೆ ಯುದ್ಧ ಮೊದಲಾದ ವೀರ ರೌದ್ರಾದಿ ರಸಗಳನ್ನು ಚಿತ್ರಿಸುವಾಗ ಈ ರೀತಿ ಅಥವಾ ವಿಧಾನ ಹೊತ್ತಹೊರೆಯ ಗುರುಭಾರಕ್ಕೆ ಕುಸಿಯುವಂತೆ ಕಾಣುತ್ತದೆ.

ಆದರೂ ಒಂದು ದೃಷ್ಟಿಯಿಂದ ಇದನ್ನು ಸಮರ್ಥಿಸಲೂ ಬಹುದು. ಸಾಮಾನ್ಯ ಹಳ್ಳಿಗರಿಗೂ ಪ್ರಿಯವಾಗುವಂತೆ ಸುಲಭವಾದ ರೀತಿಯಲ್ಲಿ ಹೇಳುವುದೆ ಕವಿಯ ಮುಖ್ಯೋದ್ದೇಶವಾಗಿತ್ತೆನ್ನಬಹುದು. ತನ್ನ ಉದ್ದೇಶ ಸಾಧನೆಗೆ ಅವನು ಹಿಡಿದ ಹಾದಿಯೆ ಸರಿಯಾಗಿರಬಹುದು. ಆದುದರಿಂದಲೆ "ಹಾಡುಗಬ್ಬ"ವನ್ನು ರಚಿಸುವುದಕ್ಕೆ ಕೈಹಾಕಿರಬೇಕು :—

ಕಬ್ಬಿಗರೋದುಗಬ್ಬವ ಹಾಡುಗಬ್ಬವ। ಕಬ್ಬದೊಳೊರೆವರಿವೆರಡು।
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ। ಕಬ್ಬ ಹೇಳಿಲೆ ಸರಸ್ವತಿಯೆ॥
ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು। ರಯ್ಯಾಮಂಚಿದಿಯೆನೆ
ತೆಲುಗಾ।
ಅಯ್ಯಯ್ಯ ಎಂಚ ಪ್ರೌರ್ಢಂಡೆಂದು ತುಳುವರು। ಮೆಯ್ಯುಬ್ಬಿ ಕೇಳ
ಬೇಕಣ್ಣಾ॥
ರಳಕುಳ ಶಿಥಿಲಸಮಾಸ ಮುಂತಾದವ। ರೊಳಗಿಲ್ಲ ಕೆಲವುಳ್ಳರುಂಟು।
ಕೆಲವಿಲ್ಲಾದರುವಿಲ್ಲವೇಕೆಂದರವರ ಕೋ। ಟಲೆಯೇಕೆ ಹಾಡುಗಬ್ಬ
ದೊಳು॥
ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು। ವಿಕಳವಾದರು ದೋಷವಿಲ್ಲ।
ಸಕಲ ಲಕ್ಷಣಕಾಗಿ ಬಿರುಸುಮಾಡಿದರೆ ಪು । ಸ್ತಕದ ಬದನೆಕಾ
ಯಹುದು॥

ಹಿಂದಿನ ಕನ್ನಡ ಸಾಹಿತ್ಯದಲ್ಲಿ ಹಳೆಯ ಕಥೆ ಮತ್ತು ವಿಷಯ ಇವುಗಳಿಂದ ಅತ್ಯಂತ ಸ್ವತಂತ್ರವಾದ ದರ್ಶನವಸ್ತುವನ್ನು ಸೃಷ್ಟಿಸಿ ತನ್ನದೆ ಆದ ಒಂದು ನೂತನ ಮಾರ್ಗದಿಂದ ಭರತೇಶವೈಭವದಂತಹ ಬೃಹತ್ಕಾವ್ಯವನ್ನು ರಚಿಸಿ

ಮಹಾಕೃತಿಯನ್ನಾಗಿಸಿದ ಮಹಾಕವಿಯ ಕೀರ್ತಿ ರತ್ನಾಕರವರ್ಣಿಗೊಬ್ಬನಿಗೆ ಸಲ್ಲುತ್ತದೆ.

ಕಥಾಸರಣಿಗೆ ಅಡಚಣೆಯಾಗದಂತೆ, ಕವಿಯ ದರ್ಶನಕ್ಕೆ ಭಂಗ ಬರದಂತೆ, ಮೂಲದ ಸ್ವಾರಸ್ಯ ಕೆಡದಂತೆ ಬೃಹದ್‌ಗಾತ್ರದ ಮಹಾಕಾವ್ಯವನ್ನು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಸಂಗ್ರಹಿಸಿ, ಜೊತೆಗೆ ಕವಿಕಾವ್ಯ ವಿಮರ್ಶೆಯನ್ನು ಒದಗಿಸಿಕೊಟ್ಟು ಉಪಕರಿಸಿರುವ ಶ್ರೀ ತ. ಸು. ಶಾಮರಾಯರಿಗೆ ವಂದನೆ ಸಲ್ಲಬೇಕಾಗಿದೆ.

೧-೮-೧೯೫೫
ಮೈಸೂರು

ಕೆ. ವಿ. ಪುಟ್ಟಪ್ಪ,
ಪ್ರಧಾನ ಸಂಪಾದಕ
ಮತ್ತು ಪ್ರಕಟನ ಸಮಿತಿಯ ಅಧ್ಯಕ್ಷ.

ಪೀಠಿಕೆ

ಕವಿ ಚರಿತ್ರೆ

ಭರತೇಶ ವೈಭವವನ್ನು ಬರೆದ ಕವಿ ರತ್ನಾಕರವರ್ಣಿ. ಈತನು ಅಪರಾಜಿತೇಶ್ವರಶತಕ, ತ್ರಿಲೋಕಶತಕ, ರತ್ನಾಕರಾಧೀಶ್ವರಶತಕ—ಎಂಬ ಶತಕತ್ರಯವನ್ನೂ 'ಎರಡುಸಾವಿರ ಗ್ರಂಥದಷ್ಟು ಅಧ್ಯಾತ್ಮಗೀತೆ' ಗಳನ್ನೂ ರಚಿಸಿದ್ದಾನೆ. ಭರತೇಶ ವೈಭವದಿಂದ ಕವಿಯ ವಿಷಯವಾಗಿ ಕೆಲವು ಸಂಗತಿಗಳು ತಿಳಿದುಬರುತ್ತವೆ. ಅವುಗಳ ಸಾರವನ್ನು ಇಲ್ಲಿ ಕೊಡಬಹುದು.

ಕವಿಗೆ ರತ್ನಾಕರವರ್ಣಿ, ರತ್ನಾಕರಸಿದ್ಧ, ರತ್ನಾಕರ ಅಣ್ಣ—ಎಂಬ ಪರ್ಯಾಯ ನಾಮಗಳಿದ್ದವಾದರೂ 'ರತ್ನಾಕರಸಿದ್ಧ' ಎಂಬುದು ಆತನ ಮೆಚ್ಚಿಗೆಯ ಹೆಸರು. "ಸಿದ್ಧಪದಕೆ ಸೋತೆನಾಗಿ ರತ್ನಾಕರ | ಸಿದ್ಧನೆಂದೆನ ಲೊಲ್ಪೆ....." ಎಂದು ಹೇಳಿಕೊಂಡಿದ್ದಾನೆ. ಸಿದ್ಧಪದಕ್ಕೆ ಸೋತ ಸುಸಂಸ್ಕೃತ ಜೀವಿಯಾದ ರತ್ನಾಕರನಿಗೆ "ಆಮಯ, ಜನನ ಮರಣವುಳ್ಳ ಜನಕರ | ನಾಮವ...." ಹೇಳಿಕೊಂಡು ಹೆಮ್ಮೆಪಡುವುದು ಸರಿಗಾಣಲಿಲ್ಲ. 'ಶ್ರೀ ಮಂದರ ಸ್ವಾಮಿ ನನ್ನಯ್ಯ' ಎಂದು ನುಡಿಯುತ್ತಾನೆ. ತನ್ನ ನಾಡು ಕರ್ನಾಟ ಸುಕ್ಷೇತ್ರ. ವಂಶ ಕ್ಷತ್ರಿಯವಂಶ. ಈತನಿಗೆ ಶ್ರೀಶುಚಿದೀಕ್ಷೆಯನ್ನು ಕೊಟ್ಟವನು 'ದೇಶಿಗಣಾಗ್ರಣಿ ಚಾರುಕೀರ್ತ್ಯಾಚಾರ್ಯ.' 'ಮೋಕ್ಷಾಗ್ರಗುರು ಹಂಸನಾಥ.' ಮೋಕ್ಷಾಗ್ರಗುರುವಿನ ಆಜ್ಞೆಗೆ ತಲೆಬಾಗಿಯೇ ಆತ್ಮಲೀಲಾರ್ಥವಾಗಿ 'ಭರತೇಶ ವೈಭವವೆಂಬ ಕಾವ್ಯವನಿದ | ನೊರೆ' ದದ್ದು. ಜೈನಕವಿಗಳೆಲ್ಲರೂ ಪ್ರಾಯಿಕವಾಗಿ ಸ್ತೋತ್ರಮಾಡುವ ಗುರುಪರಂಪರೆಯ ಗೋಜಿಗೇ ಈತ ಹೋಗಿಲ್ಲ.

ಕವಿಯ ಜೀವನದಮೇಲೆ ಬೆಳಕನ್ನು ಬೀರುವ ಎರಡನೆಯ ಸಾಧನ ದೇವಚಂದ್ರನ ರಾಜಾವಳೀಕಥೆ. ಈ ಗ್ರಂಥದಿಂದ ರತ್ನಾಕರನು ಸೂರ್ಯ

ವಂಶದ ರಾಜಕುಲದವನೆಂದೂ, ದೇವರಾಜನೆಂಬುವನ ಮಗನೆಂದೂ ತಿಳಿಯ ಬರುತ್ತದೆ. ಈತನು ' ಬಾಲಕಾಲದೊಳೆ ಕಾವ್ಯಾಲಂಕಾರ ಲಕ್ಷಣಶಾಸ್ತ್ರದೊಳತಿ ನಿಪುಣನಾಗಿ ' ಪರಮಾಗಮಗಳನ್ನೆಲ್ಲಾ ಹೃದ್ಗತಮಾಡಿಕೊಂಡು ಕವೀಶ್ವರ ನಾಗಿ ಸೋಮವಂಶದ ಭೈರಸ ಒಡೆಯರ ಸಭೆಯಲ್ಲಿ ಶೃಂಗಾರಕವಿಯೆಂದು ಪ್ರಖ್ಯಾತಿಪಡೆದಿದ್ದನು. ಯೋಗರತ್ನಾಕರ ಶಾಸ್ತ್ರಾಭ್ಯಾಸದಿಂದ ದಶವಾಯು ಗಳನ್ನೂ ಸಾಧಿಸಿದ್ದ ಈತನನ್ನು ಕಂಡು ಭೈರಸ ಒಡೆಯರ ಮಗಳು ಮೋಹ ಪರವಶಳಾದಳು. ರತ್ನಾಕರನು ತನ್ನ ಯೋಗಾಭ್ಯಾಸ ಬಲದಿಂದ ಸೌಧಾಗ್ರ ವನ್ನು ಏರಿ ಗವಾಕ್ಷಿಯಿಂದ ಒಳಗೆ ಇಳಿದು ' ಅವಳೊಳೆ ನೇಹಂ ಮಾಡುತ್ತಿ ದ್ದನು.' ರಾಜನಿಗೆ ಇದು ಗೊತ್ತಾಯಿತು. ಆತನು ರತ್ನಾಕರನನ್ನು ಹಿಡಿದು ಶಿಕ್ಷಿಸಬೇಕೆಂಬ ಪ್ರಯತ್ನದಲ್ಲಿರಲು, ಇದನ್ನರಿತ ರತ್ನಾಕರವರ್ಣಿ ಆ ರಾತ್ರಿಯೇ ತನ್ನ ಗುರುವಾದ ಮಹೇಂದ್ರಕೀರ್ತಿಯ ಬಳಿಗೆ ಓಡಿಹೋಗಿ, ಅಣುವ್ರತ ದೀಕ್ಷೆಯನ್ನು ಕೈಕೊಂಡು ಅಧ್ಯಾತ್ಮತತ್ವ ತತ್ಪರನಾದನು. ಅಲ್ಲಿ ' ವಿಜಯ ಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನು ಪ್ರೇಕ್ಷೆಗಳಂ ಕನ್ನಡದಿಂ ಸಂಗೀತಮಾಗಿ ವೃತ್ತವಚನದಿಂ ಮಾಡಿ ಆನೆಯಮೇಲೆ ಪ್ರಭಾವನೆಯಂ ' ಮಾಡಿಸಿದರು. ಇದನ್ನು ಕಂಡು ರತ್ನಾಕರನು ಭರತೇಶ್ವರ ಚರಿತೆಯನ್ನು ಎಂಭತ್ತುನಾಲ್ಕು ಸಂಧಿಗಳಷ್ಟು ಬರೆದು ವಿಜಯಣ್ಣನ ಕಾವ್ಯಕ್ಕೆ ದೊರೆತ ಪುರಸ್ಕಾರವನ್ನು ತನ್ನ ಕಾವ್ಯಕ್ಕೂ ದಯಪಾಲಿಸುವಂತೆ ಗುರುಗಳನ್ನು ಬೇಡಿದನು. ಆದರೆ ಪಟ್ಟಾಚಾರ್ಯರು ' ಇದರೊಳೆರಡು ಮೂರು ವಾಕ್ಯಂ ಪುರಾಣಕ್ಕೆ ವಿರೋಧಮಿರ್ಪುದು ; ಅದರಿಂದೆ ಆಗದು ' ಎಂದು ಹೇಳಿದರು. ಅದೇ ನೆಪದಿಂದ ಪಟ್ಟಾಚಾರ್ಯರಿಗೂ, ರತ್ನಾಕರನಿಗೂ ಸಂವಾದ ಬೆಳೆದು ಚರ್ಚೆಯಾಯಿತು. ಕುಪಿತರಾದ ಆಚಾರ್ಯರು ಕವಿಯನ್ನು ತಿರಸ್ಕರಿಸಿ ಏಳುನೂರು ಶ್ರಾವಕರಲ್ಲಿ ಆತನಿಗೆ ಭಿಕ್ಷೆ ದೊರೆಯದಂತೆ ಮಾಡಿದರು. ಸೇರಿಗೆ ಸವ್ವಾಸೇರಿನಂತಿದ್ದ ರತ್ನಾಕರನು ತನ್ನ ತಂಗಿಯಿಂದ ಆಹಾರವನ್ನು ಪಡೆ ಯುತ್ತಾ ಇದ್ದು, ತನಗಾದ ಅನ್ಯಾಯಕ್ಕೆ ಜಿನಸಮಯವನ್ನೇ ಗುರಿಮಾಡಿ ವೀರಶೈವಮತಕ್ಕೆ ಸೇರಿದನು. ' ಆತ್ಮಜ್ಞಾನಿಗೆ ಜಾತಿ ಕುಲಮಾವುದಾದೊಡಂ ಸಮಮೆಂದು ' ಲಿಂಗಧಾರಣೆ ಮಾಡಿಕೊಂಡು ವೀರಶೈವಶಾಸ್ತ್ರ ಪುರಾಣಗಳ

ಪರಿಚಯವನ್ನು ಪಡೆದನು. ಆದರೆ ಕೆಲವು ದಿನಗಳಲ್ಲಿಯೇ ಕೋಪವು ಉಪ ಶಮಿಸಿ ಪುನಃ ಜೈನಮತಾವಲಂಬಿಯಾಗಿ ಸನ್ಮಾರ್ಗದಲ್ಲಿ ನಂಬಿ ನಡೆದನು. 'ರತ್ನಾಕರ ಶತಕಂ, ಅಪರಾಜಿತ ಶತಕಂ, ತ್ರಿಲೋಕಶತಕಂ, ಅಧ್ಯಾತ್ಮಗೀತಂ ಗಳ್ ಎರಡುಸಾವಿರ ಗ್ರಂಥದಷ್ಟು ಪೇಳಿದಂ. ಶಕ ವರುಷ ೧೪೭೯ ಸಂದಿ ರ್ದುದು. ರಾಜಒಡೆಯರ ಕಾಲವಾದಮೇಲೆ ಚಾಮರಾಜನ ಕಾಲದಲ್ಲಿ ಸಭೆಯಲ್ಲಿ ರತ್ನಾಕರಾರ್ಯವಿರಚಿತ ಭರತೇಶ್ವರ ಚರಿತೆ ಎಂಭತ್ತುನಾಲ್ಕು ಸಂಧಿಯನೋದಿದರು.'

ಕವಿಯ ವಿಚಾರವಾದ ದಂತಕಥೆಯೊಂದು ಜನಜನಿತವಾಗಿ ಪ್ರಚಾರ ದಲ್ಲಿರುವಂತೆ ಶ್ರೀಮರ್ಮಾ ಉಗ್ರಾಣದ ಮಂಗೇಶರಾಯರು ಸಂಪಾದಿಸಿರುವ ಭರತೇಶ ವೈಭವ ಗ್ರಂಥದ ಮುನ್ನುಡಿಯಿಂದ ತಿಳಿದುಬರುತ್ತದೆ. ಚಾರುಕೀರ್ತಿ ಯೋಗಿಯಿಂದ ಎಳೆವರೆಯದಲ್ಲಿಯೇ ದೀಕ್ಷೆಪಡೆದ ರತ್ನಾಕರನು ದಿನದಿನಕ್ಕೂ ಉದಿತೋದಿತನಾಗಿ ಕೀರ್ತಿಶಾಲಿಯಾಗುತ್ತಾ ತನ್ನ ಶಿಷ್ಯ ಸಮುದಾಯದಿಂದ ಪರಿವೇಷ್ಟಿತನಾಗಿರಲು ಕೆಲವು ಕುಹಕಿಗಳು ಮಾತ್ಸರ್ಯದಿಂದ ಆತನು ಮಲ ಗುವ ಮಂಚದ ಕೆಳಗೆ ಒಬ್ಬ ವೇಶ್ಯೆಯನ್ನು ಬೈಚಿಟ್ಟು ಈತನ ಹೆಸರಿಗೆ ಕಳಂಕ ವನ್ನು ತಂದೊಡ್ಡಲು ಪ್ರಯತ್ನಿಸಿದರು. ಅವಮಾನಿತನಾದ ರತ್ನಾಕರನು ಶಿಷ್ಯರ ಬೇಡಿಕೆಗಳೆಲ್ಲವನ್ನೂ ನಿರಾಕರಿಸಿ ನೆಟ್ಟನೆ ನಡೆದು, ಹೊಳೆಯನ್ನು ಸೇರಿ, ಜಿನಧರ್ಮಕ್ಕೆ ಜಲಾಂಜಲಿಯಿತ್ತೆನೆಂದು ಘೋಷಿಸಿ, ನೀರಿನಲ್ಲಿ ಮುಳುಗುಹಾಕಿ ಮೇಲೆದ್ದು ಘಟ್ಟದಮೇಲಕ್ಕೆ ಹೋದನು. ಅಲ್ಲಿ ಶೈವಗ್ರಂಥ ವೊಂದನ್ನು ಆನೆಯಮೇಲಿರಿಸಿ ಮೆರೆಸುತ್ತಿದ್ದುದನ್ನು ಕಂಡು, ಆ ಗ್ರಂಥವು ಕೇವಲ ನೀರಸವಾದುದೆಂದು ಎಲ್ಲರಮುಂದೆ ಮುಚ್ಚುಮರೆಯಿಲ್ಲದೆ ತನ್ನ ಅಭಿ ಪ್ರಾಯವನ್ನು ಸಾರಿದನು. ಕುಪಿತರಾದ ಜನರು ರಾಜನಲ್ಲಿ ದೂರಿದರು. ರಾಜನು ರತ್ನಾಕರನನ್ನು ಕರೆಸಿ ಈ ವಿಚಾರದಲ್ಲಿ ಪ್ರಶ್ನಿಸಲು, ಆತನು ನಿರ್ಭಯನಾಗಿ, ಒಂಭತ್ತು ತಿಂಗಳ ಅವಧಿಯೊಳಗಾಗಿ ಭರತೇಶವೈಭವವೆಂಬ ಹತ್ತುಸಹಸ್ರಪದ್ಯಗಳನ್ನೊಳಗೊಂಡ ಮಹಾಗ್ರಂಥವನ್ನು ಬರೆದು ರಾಜನನ್ನೂ ಆತನ ಸಭಾಸದಸರನ್ನೂ ಮೆಚ್ಚಿಸಿದನು. ಅನಂತರ, ರಾಜನ ಬೇಡಿಕೆಯಂತೆ ವೀರಶೈವ ಮತವನ್ನವಲಂಬಿಸಿದನು. ಆದರೂ ತನ್ನ ಮರಣಾನಂತರ ಉತ್ತರ

ಕ್ರಿಯೆಗಳನ್ನು ಜೈನರೇ ನಡಸಬೇಕೆಂದು ತಿಳಿಸಿದುದಲ್ಲದೆ, ಸಾಯುವ ಮುನ್ನ ತಾನು ಮನಸಾ ಜೈನನಾಗಿಯೇ ಇದ್ದನೆಂಬುದನ್ನೂ, ತಾನು ಕೊರಳಲ್ಲಿ ಕಟ್ಟಿ ಕೊಂಡಿದ್ದುದು ಕೇವಲ ಒಂದು ಗೋಟಡಿಕೆಯೇ ಹೊರತು ಲಿಂಗವಲ್ಲವೆಂಬು ದನ್ನೂ ಎಲ್ಲರಿಗೂ ಪ್ರತ್ಯಕ್ಷಪ್ರಮಾಣಮಾಡಿಕೊಟ್ಟನು.

ಮೇಲಿನ ಎರಡು ಕಥೆಗಳಿಂದಲೂ ರತ್ನಾಕರನು ಶೃಂಗಾರಕ್ಕೆ ಮನ ಸೋತ ರಸಿಕಜೀವಿಯೆಂಬ ಭಾವನೆ ಜನರ ಮನಸ್ಸಿನಲ್ಲಿ ಬೇರೂರಿ ಪರಂಪರಾ ಗತವಾಗಿ ಬೆಳೆಯುತ್ತಾ ಬಂದಿರುವಂತೆ ತೋರುತ್ತದೆ. ಭರತೇಶ ವೈಭವವನ್ನು ಓದಿದವರಿಗೆ ಇದರಲ್ಲಿ ಸ್ವಲ್ಪ ತಥ್ಯಾಂಶವೂ ಇರುವಂತೆ ತೋರುತ್ತದೆ. ಅನುಭವವೇದ್ಯವಾದ ರಸಿಕಜೀವನವನ್ನು ಕವಿ ಕನ್ನಡಿಸುತ್ತಿರುವನೆಂದು ಹೇಳಿದರೂ ಹೇಳಬಹುದು. ಕವಿಯು ನಿರ್ದುಷ್ಟವಾದ ರಸಿಕಜೀವನವನ್ನು ನಡೆಸಿರಬಹುದು. ಅಷ್ಟುಮಾತ್ರಕ್ಕೆ ಆತನಲ್ಲಿ ಅಲ್ಲಸಲ್ಲದ ಆರೋಪವನ್ನು ಹೊರಿಸುವುದು ಎಷ್ಟು ಯೋಗ್ಯವಾದುದೋ ಹೇಳುವುದು ಕಷ್ಟ. ಕಾಳಿದಾಸನ ಶೃಂಗಾರರಸ ನಿರ್ಮಾಣ ನೈಪುಣ್ಯವನ್ನು ಕಂಡು ಜನತೆ ಹಲವು ಕಥೆಗಳನ್ನು ಹೆಣೆದಿರುವಂತೆ ರತ್ನಾಕರನ ವಿಚಾರದಲ್ಲಿಯೂ ಏಕೆ ಮಾಡಿರಬಾರದು? ಆದರೆ ಮೇಲಿನ ಕಥೆಗಳಲ್ಲಿ ಕಾಣಬರುತ್ತಿರುವ, ಜೈನಮತೀಯನಾದ ಈ ಕವಿ ಒಮ್ಮೆ ವೀರಶೈವಮತವನ್ನು ಅವಲಂಬಿಸಿದ್ದನೆಂಬ ಮಾತು ಬಹುಮಟ್ಟಿಗೆ ನಿಲ್ಲಬಲ್ಲುದೆಂದು ತೋರುತ್ತದೆ. ಕವಿಯು ವೀರಶೈವಮತಕ್ಕೆ ಸೇರಿದ್ದನೆಂದು ನಿಶ್ಚಯವಾಗಿ ತಿಳಿಸುವಷ್ಟು ಸಾಧನಸಾಮಗ್ರಿಗಳಾವುವೂ ಈಗ ದೊರೆತಿಲ್ಲ. ಆದರೂ ಜೈನಮತಸ್ಥನಾದ ದೇವಚಂದ್ರನೇ ಸ್ವಮತಸ್ಥನಾದ ಕವಿಯ ವಿಷಯ ದಲ್ಲಿ ಈ ಮಾತನ್ನು ಹೇಳಿರುವುದೂ, ಕವಿಯು ಸಂಪ್ರದಾಯಬದ್ಧವಾದ ಪುರಾಣ ಕಥಾಕಟ್ಟಡದಲ್ಲಿ ಥೈರ್ಯದಿಂದ ಬೇಕಾದ ಬದಲಾವಣೆಗಳನ್ನು ಮಾಡಿಕೊಂಡು ಕವಿಸಿರಂಕುಶಮತಿಯನ್ನು ಮೆರೆದಿರುವುದೂ, ಭೋಗಾಂಗ, ಯೋಗಾಂಗ, ತ್ಯಾಗಾಂಗಗಳೆಂಬ ಅಂಗತ್ರಯಗಳನ್ನೂ ಯೋಗ-ಭೋಗಗಳ ಸಾಮರಸ್ಯ ಸಿದ್ಧಾಂತವನ್ನೂ ತನ್ನ ಗ್ರಂಥದಲ್ಲಿ ಅಳವಡಿಸಿಕೊಂಡಿರುವುದೂ, 'ಉಂಡುಪವಾಸಿ, ಬಳಸಿ ಬ್ರಹ್ಮಚಾರಿ' ಇತ್ಯಾದಿ ವಾಕ್ಯಭಾಗಗಳನ್ನೂ 'ಮೊಲೆಯಮೇಲಿದ್ದ ಯೋಗಿಗಳುಂಟು' ಇತ್ಯಾದಿ ವಾಕ್ಯಗಳನ್ನೂ ಬಳಸಿರು

ವುದೂ ನೋಡಿದರೆ ಕವಿಯ ಬಗೆಗಣ್ಣಿನೆದುರು ಆ ಮತದ ತತ್ವಗಳು ತಕ್ಕಷ್ಟು ತಾಂಡವವಾಡಿ ಕವಿಯ ಆಸಕ್ತಿಯನ್ನು ಸೆಳದಿದ್ದವೇನೋ ಎನ್ನಿಸುತ್ತದೆ. ಇದೂ ಅಲ್ಲದೆ ಪಾಲ್ಕುರಿಕೆ ಸೋಮನಾಥವಿರಚಿತವೆಂದು ಪ್ರಸಿದ್ಧವಾಗಿರುವ 'ಸೋಮೇಶ್ವರ ಶತಕವು' ರತ್ನಾಕರ ವಿರಚಿತವೆಂಬ ಪ್ರತೀತಿ ಇದೆ. ಆ ಗ್ರಂಥದ ಪುರಾತನ ತಾಳಪತ್ರವೊಂದರಲ್ಲಿ ಈ ಕೆಳಗಿನ ಪದ್ಯವಿರುವುದಾಗಿಯೂ ಹೇಳುತ್ತಾರೆ.

ವರಸವಮ್ಮಕ್ಕ ಸುಧರ್ಮ ಜೈನ ಮತಮೊಳ್ತಾಂ ಪುಟ್ಟಿಯಾ ದೀಕ್ಷೆಯಂ ।
ಧರಿಸೀ ಸನ್ಮತ ಕಾವ್ಯಶಾಸ್ತ್ರಗಳನುಂ ನಿರ್ಮಾಣಮಂ ಮಾಡುತಂ ॥
ವರ ರತ್ನಾಕರ ಯೋಗಿಯೆಂದು ನಿರುತಂ ವೈರಾಗ್ಯ ಬಂದೇವಲಾಂ ।
ಹರದೀಕ್ಷಾವ್ರತನಾವೆನೈ ಹಂಹರಾ ಶ್ರೀ ಚೆನ್ನಸೋಮೇಶ್ವರಾ ।

ಇದನ್ನು ನೋಡಿದರೆ ಕವಿಯು ವೀರಶೈವ ಮತಕ್ಕೆ ಸೇರಿದ್ದಾಗ ಸೋಮೇಶ್ವರ ಶತಕವನ್ನು ಬರೆದಿರಬಹುದೆಂದು ಅನುಮಾನಿಸಲು ಆಸ್ಪದವಿದೆ. ಶೈಲಿಯಲ್ಲಿಯೂ ರತ್ನಾಕರಶತಕ-ಸೋಮೇಶ್ವರಶತಕಗಳು ಪರಸ್ಪರ ಹೋಲುತ್ತವೆ. ಆದರೂ ಇಷ್ಟರಿಂದಲೇ ಘಂಟಾಘೋಷವಾಗಿ 'ಇದಮಿತ್ಥಂ' ಎಂದು ಹೇಳಲು ಸಾಧ್ಯವಿಲ್ಲ. ಕವಿಯ ಅನುಭವಸಾಗರವನ್ನು ಸಾಮಾನ್ಯ ಜನರ ನಂಬಿಕೆ ಸಂಪ್ರದಾಯಗಳ ಹೊಳೆಗಳೆಲ್ಲವೂ ಸೇರಿರಬಹುದಾದರೂ ಅವನು ಅವುಗಳ ಹಂಗಿನ ಎಲ್ಲೆಗಳಿಗೆ ಅಳವಡದವನು. ಆದುದರಿಂದ ಇನ್ನೂ ನಿಷ್ಕೃಷ್ಟವಾದ ಪ್ರಮಾಣಗಳು ದೊರೆಯುವವರೆಗೆ ಈ ಮತಾಂತರದ ಕಥೆಯನ್ನು ಅಡ್ಡಗೋಡೆಯಮೇಲಿನ ದೀಪದಂತಿಟ್ಟಿರುವುದು ಒಳ್ಳೆಯದು.

ಭರತೇಶವೈಭವದ ಕೊನೆಯಲ್ಲಿ ತನ್ನ ಗ್ರಂಥವು "ವೃಷಭಮಾಸದಿ ತೊಡಗಿತು ಕುಂಭಮಾಸ ಸ । ದ್ವಿಷಯದಿ ಕೃತಿಪೂರ್ಣವಾಯ್ತು" ಎಂಬ ಕವಿಯ ಹೇಳಿಕೆಯೇ ಒಂಭತ್ತು ತಿಂಗಳುಗಳಲ್ಲಿ ಆ ಹತ್ತುಸಹಸ್ರಪದ್ಯಗಳ ಬೃಹದ್ಗ್ರಂಥವು ರಚಿತವಾಯ್ತೆಂಬ ಅಭಿಪ್ರಾಯಕ್ಕೆ ಆಧಾರ. ಈ ಆಧಾರದ ಮೇಲೆಯೇ ದಂತಕಥೆ ಅಂಕುರಿಸಿ ಚಿಗುರಿರುವುದು. ಈ ಸಂದರ್ಭದಲ್ಲಿ ಶ್ರೀಮಾ ಕೆ. ವಿ. ಪುಟ್ಟಪ್ಪನವರು ಪ್ರಬುದ್ಧಕರ್ಣಾಟಕದ ಖನಿಯ ಸಂಪುಟದ

ಳನೆಯ ಸಂಚಿಕೆಯಲ್ಲಿ ಬರೆದಿರುವ 'ಪಂಪನಲ್ಲಿ ಭವ್ಯತೆ' ಎಂಬ ಲೇಖನದ ನೆನಪು ಬರುತ್ತದೆ. ಪಂಪನು ತನ್ನ ಮಹಾಕಾವ್ಯಗಳಲ್ಲಿ ಒಂದನ್ನು ಆರು ತಿಂಗಳನಲ್ಲಿಯೂ ಮತ್ತೊಂದನ್ನು ಮೂರುತಿಂಗಳನಲ್ಲಿಯೂ ಬರೆದನೆಂಬುದರ ವಿವರಣೆಯನ್ನು ಅವರು ಹೀಗೆ ಕೊಟ್ಟಿದ್ದಾರೆ.—"ರಚನಾ ಸಮಯದ ನಿಮಿಷಗಳನ್ನೂ, ಗಂಟೆಗಳನ್ನೂ ಕೂಡಿಸಿ ಬಂದ ಹೊತ್ತಿನ ಮೊತ್ತವನ್ನು ತಿಂಗಳುಗಳಾಗಿ ಭಾಗಿಸಿರುವನೆಂದುಕೊಂಡರೆ ನಮ್ಮ ಆಶ್ಚರ್ಯ ವಿಸ್ಮಯದ ಎಲ್ಲೆಯನ್ನು ಮುಟ್ಟದಿರಬಹುದು. ಹಾಗಲ್ಲದೆ, ಸಮಗ್ರಕೃತಿಯನ್ನೂ, ಅದನ್ನು ಉತ್ತುಬಿತ್ತುವ ಮೊತ್ತಮೊದಲಿಂದ ಹಿಡಿದು ರಸಾನ್ನಭೋಜನದ ಸಮಾರಾಧನೆಯ ಸಿದ್ಧಿಯ ತುತ್ತತುದಿಯವರೆಗೂ, ಮೂರು ಮತ್ತು ಆರು ತಿಂಗಳುಗಳಲ್ಲಿ ಮುಗಿಸಿದನೆಂದರೆ ನಂಬುಗೆ ತತ್ತರಿಸುತ್ತದೆ. ಪವಾಡ ಸಂದರ್ಶನವಾದಂತಾಗುತ್ತದೆ.' ಪಂಪನ ವಿಚಾರದಲ್ಲಿ ಹೇಳಿದ ಮಾತು ರತ್ನಾಕರನ ವಿಚಾರದಲ್ಲಿ ಸತ್ಯಕ್ಕೆ ಮತ್ತೂ ಹತ್ತಿರವೆಂದೇ ಹೇಳಬೇಕು. ಪಂಪನು ಭಾರತಕ್ಕೆ ಆರುತಿಂಗಳಕಾಲ ಹಿಡಿಯಿತೆಂದು ಮಗುಂ ಆಗಿ ಹೇಳಿದ್ದಾನೆ. ರತ್ನಾಕರ ವೃಷಭ-ಕುಂಭಮಾಸಗಳ ಅಂತರದಲ್ಲಿ ಬರೆದುದೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದರೆ ಯಾವ ವೃಷಭಮಾಸದಲ್ಲಿ ಮೊದಲಾಯಿತು? ಯಾವ ಕುಂಭಮಾಸದಲ್ಲಿ ಕೊನೆಯಾಯಿತು? ಕವಿಯ ಲೆಕ್ಕಣಿಕೆಯ ಓಟದಲ್ಲಿ ನಮಗೆ ಯಾವ ಸಂದೇಹವೂ ಇಲ್ಲವಾದರೂ ವೃಷಭಮಾಸ ಕುಂಭಮಾಸಗಳು ಬೇರೆ ಬೇರೆಯ ವರ್ಷದ ಮಾಸಗಳೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಶ್ರೀಮಾ ಪುಟ್ಟಪ್ಪನವರು ಹೇಳುವಂತೆ ಇದೊಂದು ಪವಾಡ ಸಂದರ್ಶನವಾದೀತು.

ಕವಿಯು ಈರ್ಷೆಯಿಂದ ಕಾವ್ಯಕರ್ಮಕ್ಕೆ ಕೈಹಾಕಿದನೆಂಬ ಮಾತಿನಲ್ಲೂ ಹೆಚ್ಚು ಹುರುಳಿದ್ದಂತೆ ತೋರುವುದಿಲ್ಲ. ಭರತೇಶವೈಭವದ ಕೊನೆಯಲ್ಲಿ ಕವಿ ಆಡಿರುವ ಮಾತುಗಳ ಧಾಟಿಯೇ ಇದಕ್ಕೂ ಮೂಲವೆಂದು ತೋರುತ್ತದೆ. ಆತನ ಕಾವ್ಯಸ್ಫೂರ್ತಿಯನ್ನು ಕಂಡು ಹಲವರು ಕರುಬಿದಂತೆ, ಕಟುವಾಗಿ ಟೀಕೆಮಾಡಿದಂತೆ ಕಾಣುತ್ತದೆ. ಅದಕ್ಕಾಗಿ ಕವಿ ನೊಂದಮನದಿಂದ ನಾಲ್ಕು ಮಾತುಗಳನ್ನು ತೋಡಿಕೊಳ್ಳುತ್ತಾನೆ. ತಾನು 'ಕೀರ್ತಿಯ ಬಯಸಿ' ಕಾವ್ಯವನ್ನು ಉಸುರಲಿಲ್ಲವಂತೆ; ಕೀರ್ತಿ ತಾನಾಗಿಯೇ ಬರುತ್ತದಂತೆ. ಇದನ್ನು

ಕಂಡು " ಕೀರ್ತಿಯ ಬಯಸಿ ಕಣ್ಣುಸುರಾಗಿ ಕೆಲಬರು | ಧೂರ್ತರು ಪೇಚಾಡುತಿಹರು." ಅಷ್ಟಕ್ಕೇ ಬಿಡದೆ ಅವರು ಕವಿಕರ್ಮಕ್ಕೂ ತೊಡಗುತ್ತಾರೆ. ಆದರೆ ಕವಿತೆ ಸಾಗುವುದೂ ಇಲ್ಲ; ಕವಿಗೆ ಶೋಭಿಸುವುದೂ ಇಲ್ಲ. ಇದರಿಂದ ಕಸಿವಿಸಿಗೊಂಡು ರತ್ನಾಕರನ ಕವಿತೆಯನ್ನು ' ಬಿಡು ಹೊಸಕವಿತೆಯನೆಂದು ಪೂರ್ವದ ಶಾಸ್ತ್ರ | ಗಡಬಡೆ ಮಾಡುವರೊಡನೆ.' ಮತ್ತೊಬ್ಬರ ತಂಟೆ ತಗಾದೆಗಳಿಲ್ಲದೆ ತಾನಿರುತ್ತಿದ್ದರೂ ಅವನಮೇಲಿನ ಅಸೂಯಾಪರರು ಅಲ್ಲ ಸಲ್ಲದ ಪಟಾಟೋಪಗಳನ್ನು ನಡಸುತ್ತಾ "ನೆರಪಿ ಹೊತ್ತಗೆಗಳ ಹೊರೆಗಟ್ಟಿ ಭವಸೇನ | ಗುರುಗಳಂತವರಾಡುತಿಹರು." ಕವಿ ಅತ್ತಕಡೆ ಕಣ್ಣು ಹಾಕದೆ ತನಗೆ ತಾನು ಆತ್ಮನಿರೀಕ್ಷಣೆಯಲ್ಲಿ ನಿರತನಾಗಿರುವನು. ಆ ಸಮಯದಲ್ಲಿ ಅವನ ನಿಂದಕರು "ಮೈಯ ಬೆತ್ತಲೆಮಾಡಿ ಮನವ ಕತ್ತಲೆಮಾಡಿ ಹುಯ್ಯಲಿಡುತ ಸುತ್ತುತಿಹರು". ಏನೇನು ಮಾಡಿದರೂ ಎಷ್ಟೆಷ್ಟು ಬಿದ್ದು ಬಿದ್ದು ಹೊರಳಾಡಿದರೂ ರತ್ನಾಕರ ಕವಿಗೆ ಕೀರ್ತಿ ಬರುತ್ತಲೇ ಇದೆ; ತಮಗೆ ಮಾತ್ರ ಇಲ್ಲ. ಆದ್ದರಿಂದ ರತ್ನಾಕರನ ಕಾವ್ಯಗಳನ್ನೆಲ್ಲಾ ಹೊಲಸು ಕಾವ್ಯಗಳೆಂದು ಜರೆದರು. ಆದರೂ ಕವಿ ಅವರನ್ನು ಪ್ರತಿಭಟಿಸಲಿಲ್ಲವಂತೆ ಏಕೆ ಪ್ರತಿಭಟಿಸಬೇಕು, ತನ್ನ ಕಾರ್ಯವನ್ನು ಗಂಧರ್ವರೇ ಮಾಡುವಾಗ? " ಬುಧರು ರಾಜಕರ್ಕಳೆ ನೂಂಕಿದರವರ." ತಾನೇನು ಮಾತ್ಸರ್ಯಕ್ಕೆ ಕಾವ್ಯ ಹೇಳಿದವನಲ್ಲವಾದುದರಿಂದ ' ಮೋನದೊಳಿದ್ದ'. ತನ್ನ ಕಾವ್ಯಗಳನ್ನು ' ಮುನಿಗಳು ನೃಪರು ವಿದ್ವಾಂಸರು ಕೊಂಡೊಯ್ದರೊಲಿದು'. ಇತರರು ಸ್ಪರ್ಧಿಸ ಬಂದರೆ ಕವಿಗೆ ಸ್ವಲ್ಪವೂ ಹೆದರಿಕೆಯಿಲ್ಲವಂತೆ. ಏಕೆಂದರೆ ಇತರರು ಒಂದು ತಿಂಗಳು ಓದಿದ ಶಾಸ್ತ್ರ ಈತನಿಗೆ ಒಂದು ದಿನದಲ್ಲಿಯೇ ಅವಗತವಾಗುತ್ತದೆಯಂತೆ. ಇಷ್ಟಾದರೂ ತನ್ನ ಮೂಗನ್ನೆ ಮೇಲೆ ಮಾಡಿಕೊಂಡಿರ ಬೆಂಕೆಂಬ ಹಟಮಾರಿತನವೇನೂ ಇಲ್ಲ, ರತ್ನಾಕರನಿಗೆ. ತಾನೇನೂ ಸರ್ವಜ್ಞನಲ್ಲ; ತನ್ನ ಮಾತುಗಳೇ ಕಡೆಯ ಸಿದ್ಧಾಂತವಲ್ಲ. ಪರಮರಹಸ್ಯ ಎಷ್ಟೋ ಇದೆ. ' ಆತ್ಮನ ಮಾಹಾತ್ಮ್ಯ ಪರಿಮಿತವಲ್ಲ.' ತಾನು ಕಾವ್ಯ ಬರೆಯುತ್ತಿರುವುದು ಇನ್ನೊಬ್ಬರ ಬೋಧನೆಗಾಗಿ ಅಲ್ಲ; ಆತ್ಮ ಲೀಲಾರ್ಥವಾಗಿ. ಆದ್ದರಿಂದ ಬೇಕಾದರೆ ಆಲಿಸಬಹುದು, ಬೇಡವಾದರೆ ' ಪರಾಕು ಮಾಡಬಹುದು.' ಕವಿಗೆ ಅದರಿಂದ ಸಂತೋಷವೂ ಇಲ್ಲ; ಸಂಕಟವೂ ಇಲ್ಲ.

ಇದರಿಂದ ಕವಿಯ ಕೀರ್ತಿಯನ್ನು ಕಂಡು ಕರುಬಿ ಕಸಿವಿಸಿಗೊಳ್ಳುತ್ತಿದ್ದ ಜನರಿದ್ದರೆಂದು ಗೊತ್ತಾಗುತ್ತದೆಯೆ ಹೊರತು ಕವಿಯು ಯಾವುದೊಂದು ಗ್ರಂಥದಮೇಲಿನ ಹುರುಡಿನಿಂದ ಕಾವ್ಯವನ್ನು ಬರೆದನೆಂದು ಹೇಳಲಾಗುವುದಿಲ್ಲ.

ರಾಜಾವಳೀ ಕಥೆಯಲ್ಲಿ ಹಲವು ಐತಿಹಾಸಿಕ ಸಂಗತಿಗಳು ಉದಾಹೃತವಾಗಿವೆ. ರತ್ನಾಕರನು ತಾಯ್ತಂದೆಗಳ ವಿಚಾರವಾಗಿ ಮೌನವನ್ನು ವಹಿಸಿ "ಶ್ರೀ ಮಂದರಸ್ವಾಮಿ ನನ್ನಯ್ಯ" ಎಂದು ಹೇಳಿಕೊಂಡಿದ್ದಾನಷ್ಟೆ! ದೇವ ಚಂದ್ರನು ಕವಿಯ ತಂದೆ ಸೂರ್ಯವಂಶಕ್ಕೆ ಸೇರಿದ ದೇವರಾಜನೆಂದು ತಿಳುಹಿಸುತ್ತಾನೆ. ಅಲ್ಲದೆ ಕವಿಯು ಸೋಮವಂಶದ ಭೈರಸ ಒಡೆಯರ ಆಶ್ರಯದಲ್ಲಿದ್ದನೆಂದೂ ತಿಳಿಸುತ್ತಾನೆ. ಮೇಲೆ ಉದಾಹರಿಸಿರುವ ಕವಿಯ ಮಾತುಗಳಿಂದಲೇ ಆತನು ಯಾವುದೋ ಒಂದು ರಾಜಾಸ್ಥಾನದಲ್ಲಿದ್ದನೆಂದು ತಿಳಿದುಬರುತ್ತದೆ. ದೇವಚಂದ್ರನು ಸಂದೇಹಕ್ಕೆ ಎಡೆಯಿಲ್ಲದಂತೆ ಅದನ್ನು ಸ್ಪಷ್ಟಪಡಿಸುತ್ತಾನೆ. ಕವಿಯು 'ತ್ರಿಲೋಕಶತಕ' ದಲ್ಲಿ ತನ್ನ ಊರು ವೇಣುಪುರ (ಮೂಡಬಿದಿರೆ) ಎಂದು ಹೇಳಿಕೊಂಡಿರುವುದರಿಂದ ಅದರ ಸಮೀಪದಲ್ಲಿಯೇ ಇರುವ ಕಾರ್ಕಳದಲ್ಲಿ ಸುಮಾರು ೫೦೦ ವರ್ಷಗಳವರೆಗೆ ಆಳುತ್ತಿದ್ದ ಭೈರಸ ವಂಶದವರು ಕವಿಗೆ ಆಶ್ರಯದಾತರಾಗಿದ್ದರೆಂದು ನಂಬಲು ಬೇಕಾದಷ್ಟು, ಅವಕಾಶವಿದೆ. ಇಂಥ ಭೈರಸ ಒಡೆಯನ ಆಸ್ಥಾನದಲ್ಲಿಯೇ ಇದ್ದನೆಂದು ನಿಶ್ಚಯಿಸುವ ಮುನ್ನ ಕವಿಯ ಕಾಲವನ್ನು ನಿಶ್ಚಯಿಸುವುದು ಅಗತ್ಯ.

ರತ್ನಾಕರಶತಕದ ಸಂಪಾದಕರುಗಳಾದ ಶ್ರೀ ಎಸ್. ಜಿ. ನರಸಿಂಹಾಚಾರ್ ಮತ್ತು ಎಂ. ಎ. ರಾಮಾನುಜಯ್ಯಂಗಾರ್—ಇವರು ಕವಿಯ ಕಾಲವನ್ನು '೧೫ನೆಯ ಶತಮಾನದ ಅಂತ್ಯ ಮತ್ತು ೧೬ನೆಯ ಶತಮಾನದ ಆದಿ ಭಾಗ' ಎಂದು ನಿರ್ಧರಿಸಿದ್ದಾರೆ. ಇದಕ್ಕೆ ಇವರಿಗಿರುವ ಆಧಾರ ಮೂಡಬಿದರೆಯ ಕೈ ಬರೆಹದ ಪ್ರತಿಯೊಂದರ ಕೊನೆಯಲ್ಲಿ ಕಂಡುಬರುವ ಈ ಕೆಳಗಿನ ಪದ್ಯಗಳು—

ಶ್ರೀ ಶಕವರ್ಷವು ಸಾಸಿರದೈನೂರ । ಲೇಸೆಂಬತ್ತೆರಡನೆಯ ।
ಶ್ರೀ ಶಾರ್ವರಿ ವರ್ಷದ ಶುಭತರನಿಜ । ವೈಶಾಖ ಶುದ್ಧ ಪಂಚಮಿಯ ।

ಭೃಗುವಾರ ಪುನರ್ವಸು ತಾರಾಯುತ ಗಂಡ | ಮಿಗೆ ಯೋಗ ವಣಿಜಾಕರಣಾ|
ಮೃಗಪತಿ ಲಗ್ನವೆಸೆಯಲು ಲಿಖಿತವಾಯ್ತು | ಸುಗುಣ ಭರತರಾಜಕೃತಿಯು ||

ಮೇಲಿನ ಪದ್ಯಗಳಿಂದ ಕವಿಯು ಗ್ರಂಥವನ್ನು ರಚಿಸಿ ಮುಗಿಸಿದ ಕಾಲವು ಸೂಚಿತವಾಗಿದೆಯೆಂದು ಇಟ್ಟುಕೊಳ್ಳುವುದಾದರೆ ಆ ಕಾಲ ಶಾ. ಶ. ೧೫೮೨ ಎಂದರೆ ಕ್ರಿ. ಶ. ೧೬೬೦ ಎಂದಾಗುತ್ತದೆ. (೧೭ ನೆಯ ಶತಮಾನ) ಆದ್ದರಿಂದ ರತ್ನಾಕರ ಶತಕದ ಸಂಪಾದಕರುಗಳ ನಿರ್ಧಾರ ಅರ್ಥವಿಲ್ಲದುದಾಗುತ್ತದೆ. ಕವಿ ಚರಿತೆಕಾರರಾದ ದಿವಂಗತ ಶ್ರೀ ಆರ್. ನರಸಿಂಹಾಚಾರ್ಯರವರು ಈ ಅಭಿಪ್ರಾಯವನ್ನು ಕುರಿತು 'ಭರತೇಶ್ವರ ಚರಿತೆಯ ಕಡೆಯಲ್ಲಿ ಗ್ರಂಥವು ಪೂರ್ತಿಯಾದ ಮೇಲೆ ಕೆಲವು ಪದ್ಯಗಳಲ್ಲಿ ಆವನೋ ಒಬ್ಬನು ಶಕ ೧೫೮೨ ಶಾರ್ವರಿಯಲ್ಲಿ ಎಂದರೆ ಕ್ರಿ. ಶ. ೧೬೬೦ ರಲ್ಲಿ ಪ್ರತಿ ಮಾಡಿದಂತೆ (ಲಿಖಿಯಿಸಿದಂ) ಹೇಳಿರುವುದನ್ನು ನೋಡಿ ಇದೇ ಗ್ರಂಥ ರಚನಾ ಕಾಲವೆಂದು ಕೆಲವರು ಭ್ರಮಿಸಿರುವಂತೆ ಕಾಣಬರುತ್ತದೆ' ಎಂದು ಹೇಳಿ 'ತ್ರಿಲೋಕ ಶತಕದಲ್ಲಿ ಕಂಡು ಬರುವ ಕೆಳಗಿನ ಪದ್ಯದ ಆಧಾರದಿಂದ ಕವಿಯ ಕಾಲವನ್ನು ಕ್ರಿ. ಶ. ೧೫೫೭ ಎಂದು ನಿರ್ಧರಿಸಿದ್ದಾರೆ.

ಮಣಿ ಶೈಲಂ ಗತಿ ಯಿಂದು ಶಾಲಿಶಕ ಕಾಲಂ ಸಂದಿರಲ್ ತೌಳವಾಂ |
ಗಣದೊಳ್ಪೇಣುಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ |
ಕ್ಷಣ ತಾತ್ಪರ್ಯಮಿದೀ ತ್ರಿಲೋಕ ಶತಕಂ.....

"ಮಣಿ ಶೈಲಂ ಗತಿ ಯಿಂದು ಶಾಲಿಶಕ ಕಾಲಂ" ಎಂಬಲ್ಲಿ ಮಣಿ ೯, ಶೈಲ: ೭ ಇಂದು: ೧, ಎಂಬುದರಲ್ಲಿ ಸಂಶಯವೇನೂ ಇಲ್ಲ. 'ಗತಿ' ಎಂಬಲ್ಲಿ ಕವಿಚರಿತೆಕಾರರು ಭೂತಸಂಖ್ಯೆ ೪ ಎಂಬುದು (ಗತಿ: ಚತುರ್ಗತಿಗಳು ೪?) ಮಾತ್ರ ಸಂದೇಹಾಸ್ಪದವಾಗಿದೆ. ಭೂತಸಂಖ್ಯೆಗಳ ಉಪಯೋಗದಲ್ಲಿ ಹಿಂದೂ ಜೈನರೆಂಬ ಭೇದವೇನೂ ಇಲ್ಲ. ಎಲ್ಲರೂ ಉಪಯೋಗಿಸುವ ಸಂಖ್ಯೆಗಳು ಒಂದೇ ರೀತಿಯಾಗಿರುತ್ತವೆ. 'ಗತಿ' ಎಂದರೆ ಚತುರ್ಗತಿ ಎಂದು ಇಟ್ಟುಕೊಳ್ಳುವುದಾದರೆ ಆ ಸಮಾಸಪದಕ್ಕೆ ಸಂಸ್ಕೃತ ಕೋಶಗಳಲ್ಲಿ ಎರಡು ಅರ್ಥಗಳು ಮಾತ್ರ ಕಂಡು ಬರುತ್ತವೆ. ೧ ಆಮೆ—ಚತುರ್ಗತಿರಸ್ಯ ಕಚ್ಛಪ; ಕ್ರೋಢಪಾದಶ್ಚತು

ರ್ಗತಿಃ (ಹೇಮಚಂದ್ರನ ಅಭಿಧಾನ ಚಿಂತಾಮಣಿ – ಶ್ಲೋಕ ೧೩೫೩) ೨. ವಿಷ್ಣು — ಚತುರ್ಣಾಂ ಆಶ್ರಮಾಣಾಂ ವರ್ಣಾನಾಂ ಬ್ರಾಹ್ಮಣಾಧೀನಾಂ ಯಥೋಕ್ತಕಾರಿಣಾಂ ಗತಿರಾಶ್ರಯಃ ವಿಷ್ಣುಃ (ಮಹಾಭಾರತ: ಪರ್ವ ೧೩, ಅಧ್ಯಾಯ ೧೪೯, ಶ್ಲೋಕ ೬೫). ಶಬ್ದ ಕಲ್ಪದ್ರುಮ ಎಂಬ ಸಂಸ್ಕೃತ ಕೋಶದಲ್ಲಿ "ಅತ ಏವ ಗತಿಃ" ಎಂಬುದಕ್ಕೆ ಳ ಎಂಬ ಅರ್ಥ ಇಲ್ಲ; ಆ ಅರ್ಥದಲ್ಲಿ ಬಳಸಲು ಸಾಧ್ಯವೂ ಇಲ್ಲ. ಇನ್ನು ೩ ಎಂಬುದಕ್ಕಿರುವ ಭೂತ ಸಂಖ್ಯೆಗಳ ಪರ್ಯಾಯದಲ್ಲಿ 'ತ್ರಿಗತ' ಎಂದಿದೆ. (ಬೇರೆಯವು ತ್ರಿಜಗತ್, ತ್ರಿಗುಣ, ತ್ರಿಕಾಲ, ತ್ರಿಣೇತ್ರ.) ಆದಕಾರಣ ಗತ ೩. 'ಗತ' ಎಂದು ಬರೆಯಬೇಕಾದಲ್ಲಿ ರತ್ನಾಕರನು ಗತಿ ಎಂದು ತಪ್ಪು ಬರೆದಿರಬಹುದು. ಅಥವಾ ಸಂಪ್ರತಿಕಾರರು ಹಾಗೆ ಎತ್ತಿಕೊಂಡಿರಲೂ ಬಹುದು ಅಥವಾ ಆ ಶತಕದ ಪ್ರತಿಗಳನ್ನು ಓದಿದವನು 'ಗತಿ' ಎಂದು ಎತ್ತಿಕೊಂಡಿರಬಹುದು. ಹೇಗೂ ಗತ ಅಥವಾ ಗತಿ ಎಂದರೆ ೩ ಎಂದೇ ತೋರುತ್ತದೆ. ಆದ್ದರಿಂದ ಆ ಶತಕದ ವರ್ಷ ಮಣಿ : ೯, ಶೈಲ : ೭. ಗತಿ (ಗತ): ೩, ಇಂದು : ೧. 'ಅಂಕಾನಾಂ ವಾಮತೋ ಗತಿಃ ಎಂಬ ನಿಯಮದಂತೆ 'ತ್ರಿಲೋಕ ಶತಕ'ದ ಕಾಲ ಶಾ.ಶ. ೧೩೭೯ ಎಂದರೆ ಕ್ರಿ.ಶ. ೧೪೫೭ ಎಂದಾಗುತ್ತದೆ. (ಭೂತಸಂಖ್ಯೆಗಳಲ್ಲಿ ೩ ; ಗತ ಎಂಬ ಆಧಾರಗ್ರಂಥಗಳು — George Buhler's Indian Paleography, German Edition P 80. A C. Burnell's South Indian Paleography P. 97.) ಆದರೆ ಕವಿಯ ಕಾಲ ಶಾ. ಶ. ೧೪೭೯ ಎಂಬ ದೇವಚಂದ್ರನ ಹೇಳಿಕೆ ಗತಿಯೇನು? ಅದೇ ದೇವಚಂದ್ರನೇ ಕವಿಯು ದ್ವಾದಶಾನುಪ್ರೇಕ್ಷೆಯ ಕರ್ತೃವಾದ ವಿಜಯಣ್ಣನ ಸಮ ಕಾಲೀನನೆಂದು ಹೇಳುತ್ತಾನೆ. ವಿಜಯಣ್ಣನ ಕಾಲ ಕ್ರಿ. ಶ. ೧೪೫೦ ಎಂದು ನಮಗೆ ನಿಷ್ಕೃಷ್ಟವಾಗಿ ಗೊತ್ತಿದೆ. ಕವಿಚರಿತ ಕಾರರು ರಾಜಾವಳಿಯಲ್ಲಿ ಕೊಟ್ಟಿರುವ ಕಾಲವನ್ನು ಮಾತ್ರ ಸ್ವೀಕರಿಸಿ, ಅದರಲ್ಲಿ ಬರುವ ರತ್ನಾಕರ ವರ್ಣಿ ಹಾಗೂ ವಿಜಯಣ್ಣನ ಸಮಸಾಮಯಕತೆಯ ವಿಚಾರವನ್ನು ನಿರಾಕರಿಸಿದ್ದಾರೆ. ಇದು ಅಷ್ಟು ಸಮರ್ಪಕವೆಂದು ಹೇಳಲಾಗುವುದಿಲ್ಲ. ಕವಿಯ ಕಾಲವನ್ನು ಕೊಡುವಲ್ಲಿ ಕ್ರಿ. ಶ. ೧೩೭೯ ಎಂಬುದಕ್ಕೆ ಬದಲಾಗಿ ೧೪೭೯ ಎಂದು ದೇವಚಂದ್ರನು ಪ್ರಮಾದವಶದಿಂದ ಹೇಳಿರಬಹುದೆಂದು ತೋರುತ್ತದೆ. ಆದ್ದರಿಂದ ಕವಿ ಹದಿನೈದನೆಯ ಶತ

ಮಾನದ ಮಧ್ಯದಲ್ಲಿದ್ದವನು; ಆತನು ತ್ರಿಲೋಕಶತಕವನ್ನು ಬರೆದುದು ಕ್ರಿ. ಶ. ೧೪೫೭ ರಲ್ಲಿ!

ಕವಿಯ ಹುಟ್ಟಿದೂರಿನ ವಿಚಾರವಾಗಿ ಹೆಚ್ಚು ವಿವಾದಕ್ಕೆ ಆಸ್ಪದ ವೇನೂ ಕಾಣಬರುತ್ತಿಲ್ಲ. ಮೇಲೆ ಉದ್ಧರಿಸಿರುವ ತ್ರಿಲೋಕಶತಕದ ಪದ್ಯ ಭಾಗದಲ್ಲಿ ಕವಿಯು ಸ್ಪಷ್ಟವಾಗಿ ತಿಳಿಸಿದ್ದಾನೆ—ತನ್ನೂರು ತೌಳವಾಂಗಣದ ವೇಣುಪುರವೆಂದು. ಈ ವೇಣುಪುರವು ಪಶ್ಚಿಮ ತೀರದಲ್ಲಿರುವ ಮೂಡ ಬಿದಿರೆ ಎಂದು ವಿದ್ವಾಂಸರ ಅಭಿಪ್ರಾಯ. ಇದನ್ನು ಸ್ಥಿರಪಡಿಸುತ್ತಾ ಶ್ರೀಮಾ ಉ. ಮಂಗೇಶರಾಯರು ಪ್ರಬುದ್ಧ ಕರ್ನಾಟಕದ ವಿಕ್ರಮಸಂವತ್ಸರದ ಸಂಕ್ರಾಂತಿ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತಾರೆ—

" ಈ ವೇಣುಪುರವೇ ಮೂಡಬಿದಿರೆ ಎಂಬುದು ಹೇಗೆ? ಮೂಡಬಿದಿರೆ ಯನ್ನು ಅಲ್ಲಿ ದೊರಕುವ ಶಾಸನಗಳಲ್ಲೆಲ್ಲಾ ವೇಣುಪುರವೆಂದೇ ಕರೆದಿರು ತ್ತದೆ. ಮೂಡಬಿದಿರೆಯ ' ಸಾವಿರ ಕಂಬದ ಬಸದಿ,' ' ಹೊಸಬಸದಿ,' 'ತ್ರಿಭು ವನ ಚೂಡಾಮಣಿ '—ಎಂದು ಕರೆಯಲ್ಪಡುವ ಬಸದಿಯ ಒಂದು ಶಾಸನದಲ್ಲಿ ' ಶಕನೃಪಕಾಲ ' ೧೩೫೧ ನೆಯ ಸೌಮ್ಯಸಂವತ್ಸರದ ಮಾಘಶುದ್ಧ ಪಂಚಮಿ ಗುರುವಾರದಲ್ಲಿ ತ್ರಿಭುವನ ಚೂಡಾಮಣಿಯೆಂಬ ಮಹಾಚೈತ್ಯಾಲಯಮಂ ಪ್ರಾರಂಭಿಸಿ . . . ವೇಣುಪುರದ ಎಂಟು ಪ್ರಜೆಸೆಟ್ಟಿಗಾರರು . . . ದೇವರಾಯ ಮಹಾರಾಯರ ನಿರೂಪದಿಂ ಅಭಿನವ ಚಾರುಕೀರ್ತಿಪಂಡಿತ ದೇವರುಗಳಿಗೆ ನಿರ್ಮಾಣಾರ್ಥವಾಗಿ ಕೋಟೀಶ್ವರದಲ್ಲಿ ಶಾಲಿಕೆನಾಡು ಚವುಟರು ಮುಖ್ಯ ವಾದ ಅರುವರು ಬಲ್ಲಾಳುಗಳ ಸಹಾಯದಿಂ ತ್ರಿಭುವನ ಚೂಡಾಮಣಿ ಎಂಬ ಮಹಾಚೈತ್ಯಾಲಯಮಂ ಜಗದಾಶ್ಚರ್ಯಮಪ್ಪಂತು ಮಾಡಿಸಿದರ್ " ಎಂದೂ,

ಇನ್ನೊಂದು ಶಾಸನದಲ್ಲಿ ". . . ಆ ಮೂಡಬಿದಿರೆಯ ಹಲರು ತ್ರಿಭುವನ ಚೂಡಾಮಣಿ ಚೈತ್ಯಾಲಯಕ್ಕೆ ಶ್ರೀ ಚಂದ್ರಪ್ರಭತೀರ್ಥೇಶ್ವರರ ಪರಮೋ ದಾರಿತ ದಿವ್ಯಮೂರ್ತಿಯಂ . . . ನಿರ್ಮಲಿಸಿದರ್ " ಎಂದೂ ಇದೆ. ಮೂಡ ಬಿದಿರೆ, ವೇಣುಪುರ–ಈ ಎರಡು ಹೆಸರುಗಳು ಸಮಾನವಾಗಿ ಬಳಕೆಯಲ್ಲಿದ್ದುವು. ಬೇರೊಂದು ಶಾಸನದಲ್ಲಿರುವ

1 ಈ ವಿಷಯದ ನಿರ್ಧಾರಕ್ಕೆ ಶ್ರೀಮಾನ್ ಗೋವಿಂದಪೈಗಳವರು ನನಗೆ ಬರೆದಿರುವ ಪತ್ರವೇ ಆಧಾರ.

" ಪುರುಹೂತೋರು ಪುರಾಭ ವೇಣುಪುರದೊಳ್ ಭವ್ಯರ್ ಪಲರ್ ಮಾಡಿಸಲ್ ।
ನರಚಂದ್ರಪ್ರಭಗೇಹಮಂ ತ್ರಿಭುವನೀ ಚೂಡಾಮಣೀಖ್ಯಾತಮಂ ।
ಭರದಿಂ ನಾಡಿಸಿದಂ ತೃತೀಯ ನಿಲಯಕ್ಕಾ ಚೈತ್ಯಗೇಹಾಗ್ರದೊಳ್ ।
ಕರಚೆಲ್ವಾಗಿರೆ ತಾಮ್ರ ದಿಂ ಪೊದಕೆಯಂ ಶ್ರೀ ಭೈರವಾಕ್ಷ್ಯಾವರಂ ॥ "

ಎಂಬ ವೃತ್ತದಲ್ಲಿ ಮೂಡಬಿದಿರೆಯನ್ನು ವೇಣುಪುರವೆಂದೇ ಕರೆದಿರುತ್ತದೆ ಇದೆಲ್ಲ ಸರಿಯೇ ; ಆದರೂ ವೇಣುಪುರವೆಂಬುದು ವೇಣೂರು ಏತಕ್ಕಾಗ ಬಾರದು ? ಎಂಬ ಸಂಶಯವು ಕೆಲವರಿಗೆ ಬರಬಹುದು. ಆದರೆ ವೇಣೂರು ಎಂದು ಈಗ ಕರೆಯಲ್ಪಡುವ ಅಜಿಲರ ರಾಜಧಾನಿಯಾದ, ಗೋಮಟೇಶ್ವರನ ಪ್ರತಿಮೆಯೊಂದಿದ್ದು ಪ್ರಸಿದ್ಧವಾಗಿರುವ, ಊರಿನ ಹೆಸರು ನಿಜವಾಗಿ ಏಣೂರು ; ವೇಣೂರು ಅಲ್ಲ. ಇಲ್ಲಿ ಎರಡೂರು, ಮೂರೂರು, ನಾಕೂರು, ಐದೂರು, ಆರೂರು, ಏಣೂರು, ಎಣ್ಮೂರು ಎಂಬ ಗ್ರಾಮಗಳಿವೆ.

ಆದ ಪ್ರಯುಕ್ತ ಭರತೇಶ್ವರ ವೈಭವದ ಕರ್ತೃವು ಹೇಳುವ ವೇಣು ಪುರವು ಮೂಡಬಿದಿರೆಯೇ ಹೊರತು (ವೇಣೂರು) ಏಣೂರು ಅಲ್ಲ. ಈ ಭಾಗ ದಲ್ಲಿ ದೇವಚಂದ್ರನ ಹೇಳಿಕೆಯನ್ನು ನಂಬಬಹುದು.

ಕವಿಯ ಗ್ರಂಥಗಳ ವಿಷಯವಾಗಿಯೂ ತಕ್ಕಷ್ಟು ವಾದ ವಿವಾದಗಳು ನಡೆದಿವೆ. ಶತಕತ್ರಯಗಳಲ್ಲೊಂದಾದ ರತ್ನಾಕರ ಶತಕವನ್ನು ಬರೆದ ಕವಿಯು ಉಳಿದ ಎರಡು ಶತಕಗಳನ್ನೂ ಭರತೇಶ್ವರ ವೈಭವವನ್ನೂ ಬರೆದ ಕವಿಯಿಂದ ಭಿನ್ನನಾಗಿರಬೇಕೆಂಬುದು ಒಂದು ಮತ. ಈ ಮತದ ಮುಖ್ಯ ಪೋಷಕರು ದಿವಂಗತ ಶ್ರೀಮಾ ಆರ್. ನರಸಿಂಹಾಚಾರ್ಯರವರು. ಅವರ ವಾದಸರಣಿ ಯಿದು ;—

i ಭರತೇಶ ವೈಭವ, ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕ ಗಳನ್ನು ಬರೆದ ರತ್ನಾಕರವರ್ಣಿಯು ತನ್ನ ಗ್ರಂಥಗಳಲ್ಲಿ ಅಪರಾಜಿತೇಶ್ವರ, ಮಂದರ ಸ್ವಾಮಿಗಳನ್ನು ಸ್ತುತಿಸಿದ್ದಾನೆ. ಅಲ್ಲದೆ ಚಿದಂಬರ ಪುರುಷ, ನಿರಂಜನ ಸಿದ್ಧ ಎಂಬ ವಿಶೇಷಣಗಳನ್ನು ಪ್ರಯೋಗಿಸಿದ್ದಾನೆ. ಇವು ಈ ಮೂರು ಕಾವ್ಯ

ಗಳಲ್ಲಿ ನಿಯತವಾಗಿ ಬರುತ್ತವೆ. ಆದರೆ ಶೃಂಗಾರಕವಿ ಹಂಸರಾಜಕೃತವಾದ ರತ್ನಾಕರಾಧೀಶ್ವರ ಶತಕದಲ್ಲಿ ಇವುಗಳು ಕಂಡು ಬರುವುದಿಲ್ಲ.

ii ರತ್ನಾಕರವರ್ಣಿಯ ಗುರು ಚಾರುಕೀರ್ತಿ. ಹಂಸರಾಜನ ಗುರು ದೇವೇಂದ್ರಕೀರ್ತಿ.

iii ದೇವಚಂದ್ರನು ರತ್ನಾಕರವರ್ಣಿಯ ಗುರು ಮಹೇಂದ್ರಕೀರ್ತಿ ಎಂದು ಹೇಳಿರುವನಾದರೂ ಅದು ಅಷ್ಟು ನಂಬಿಕೆಗರ್ಹವಾದುದಲ್ಲ. ದೇವ ಚಂದ್ರನ ಹೇಳಿಕೆಯಂತೆ ಕ್ರಿಸ್ತಶಕ ೧೫೫೭ರಲ್ಲಿದ್ದ ರತ್ನಾಕರವರ್ಣಿಯೂ, ೧೪೪೮ರಲ್ಲಿದ್ದ ದ್ವಾದಶಾನುಪ್ರೇಕ್ಷೆಯ ಕರ್ತೃ ವಿಜಯಣ್ಣನೂ ಸಮಕಾಲೀನರು. ಇದೂ ಅಲ್ಲದೆ ರತ್ನಾಕರವರ್ಣಿಯೇ ಹೇಳಿರುವ ಮಾತುಗಳನ್ನು ಬಿಟ್ಟು ದೇವ ಚಂದ್ರನ ಮಾತುಗಳನ್ನು ನಂಬುವುದೇಕೆ? ಒಂದು ಪಕ್ಷ ನಂಬಿದರೂ ಮಹೇಂದ್ರಕೀರ್ತಿ, ದೇವೇಂದ್ರಕೀರ್ತಿ ಎಂಬ ಹೆಸರುಗಳು ಬೇರೆ ಬೇರೆ ವ್ಯಕ್ತಿ ಗಳನ್ನು ಸೂಚಿಸುತ್ತಿರಬಹುದು. ಇದಕ್ಕೆ ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಎಷ್ಟೋ ಉದಾಹರಣೆಗಳು ದೊರೆಯುತ್ತವೆ. ಅವು ಪರ್ಯಾಯನಾಮಗಳು ಬೇರೆ ಅಲ್ಲ.

iv ರತ್ನಾಕರವರ್ಣಿಗೆ 'ಶೃಂಗಾರಕವಿ ಹಂಸರಾಜ' ಎಂಬ ಬಿರುದು ಇದ್ದುದಕ್ಕೆ ಯಾವ ಪ್ರಮಾಣವೂ ಇಲ್ಲ. ಶೃಂಗಾರಕವಿ ಎಂಬ ಬಿರುದು ಕೆಲವು ಕವಿಗಳಿಗಿದ್ದರೂ ಅದರೊಂದಿಗೆ ಸೇರಿರುವ 'ಹಂಸರಾಜ' ಎಂಬುದಕ್ಕೆ ಅರ್ಥವಿಲ್ಲ. ಶಬ್ದಮಣಿದರ್ಪಣದ ೨೮೯ನೆಯ ಸೂತ್ರದ ಕೆಳಗೆ ಕೇಶಿರಾಜನು ಹಂಸರಾಜನೆಂಬ ಒಬ್ಬ ಕವಿಯನ್ನು ಸ್ಮರಿಸುತ್ತಾನೆ. ಆ ಹಂಸರಾಜನೆಂಬು ವನು ಬಹುಶಃ ರತ್ನಾಕರಾಧೀಶ್ವರ ಶತಕದ ಕರ್ತೃವಾಗಿರಬೇಕು.

v ಶತಕತ್ರಯವನ್ನು ಸಂಪಾದಿಸಿರುವ ಶ್ರೀಮಾ ಶಾಂತಿರಾಜಶಾಸ್ತ್ರಿ ಗಳು ರತ್ನಾಕರಾಧೀಶ್ವರ ಶತಕದ ಅಂತ್ಯದಲ್ಲಿರುವ "ಶ್ರೀಮದ್ದೇವೇಂದ್ರಕೀರ್ತಿ" ಇತ್ಯಾದಿ ಗದ್ಯವನ್ನು ಉಳಿದೆರಡು ಶತಕಗಳ ಕೊನೆಯಲ್ಲಿಯೂ ಸೇರಿಸಿದ್ದಾರೆ. ಕವಿಚರಿತೆಕಾರರ ಗಮನಕ್ಕೆ ಬಂದಿರುವ ಯಾವ ಆ ಕೈಬರಹದ ಪ್ರತಿಯ ಲ್ಲಿಯೂ ಆ ಗದ್ಯಭಾಗವು ಕಂಡುಬರುವುದಿಲ್ಲ.

vi ರತ್ನಾಕರ ತನ್ನ ಗ್ರಂಥಗಳಲ್ಲಿ ಯಾವ ಕವಿಯನ್ನೂ ಹೆಸರಿಸಿಲ್ಲ; ಕವಿಹಂಸನು ಅಗ್ಗಳ, ಮಧುರ–ಇತ್ಯಾದಿ ಕವಿಗಳನ್ನು ಹೇಳುತ್ತಾನೆ.

ಮೇಲಿನ ಕಾರಣಗಳಿಂದ ರತ್ನಾಕರಾಧೀಶ್ವರ ಶತಕದ ಕರ್ತೃವು ಉಳಿದ ಗ್ರಂಥಗಳ ಕರ್ತೃವಿನಿಂದ ಭಿನ್ನನಾದವನು. ಆತನ ಹೆಸರು ಶೃಂಗಾರಕವಿ ಹಂಸರಾಜ.

ಈ ವಾದವನ್ನು ಶತಕತ್ರಯದ ಸಂಪಾದಕರಾದ ಶ್ರೀಮಾ ಶಾಂತಿರಾಜ ಶಾಸ್ತ್ರಿಗಳೂ, ಭರತೇಶ ವೈಭವದ ಸಂಪಾದಕರಾದ ಶ್ರೀಮಾ ಉಗ್ರಾಣ ಮಂಗೇಶರಾಯರೂ ಪ್ರತಿಭಟಿಸಿದ್ದಾರೆ. ಮೇಲಿನ ಆಕ್ಷೇಪಣೆಗಳೆಲ್ಲಕ್ಕೂ ಸಮರ್ಪಕವಾದ ಉತ್ತರವನ್ನು ಇದುವರೆಗೆ ಇನ್ನೂ ಯಾರೂ ಕೊಟ್ಟಿಲ್ಲ. ಆದರೂ ಅವರ ಪ್ರತಿವಾದವನ್ನು ಒಳಗೊಂಡು ಇಷ್ಟು ಹೇಳಬಹುದು.

i ಶೃಂಗಾರ ಕವಿಹಂಸರಾಜನೆಂಬುದು ರತ್ನಾಕರವರ್ಣಿಯ ಒಂದು ಬಿರುದೇ ಹೊರತು ಆ ಹೆಸರಿನ ಬೇರೊಬ್ಬ ಕವಿ ಇದ್ದನೆಂದು ಹೇಳುವುದಕ್ಕಾಗುವುದಿಲ್ಲ. ರಾಜಹಂಸ ಅಥವಾ ಹಂಸರಾಜ ಎಂದರೆ ರಾಜಶ್ರೇಷ್ಠನೆಂದು ಅರ್ಥ. ಶೃಂಗಾರ ಕವಿರಾಜಹಂಸನೆಂದರೆ ಶೃಂಗಾರಕವಿಗಳಲ್ಲಿ ಬಹಳ ಶ್ರೇಷ್ಠನಾದವನು ಎಂದಾಗುತ್ತದೆ. ಭರತೇಶ ವೈಭವವನ್ನು ಓದಿದಲ್ಲಿ ಈ ಕವಿಯು ಈ ಬಿರುದಿಗೆ ಹೇಗೆ ಪಾತ್ರನೆಂಬುದು ಕಂಡುಬರದೇ ಇರಲಾರದು.

ii ಕವಿಯು ಭೈರಸ ಒಡೆಯರ ಆಸ್ಥಾನದಲ್ಲಿ 'ಶೃಂಗಾರಕವಿ'ಯಾಗಿದ್ದನು, ಎಂದು ದೇವಚಂದ್ರನು ತಿಳಿಸುತ್ತಾನೆ. ಅವನ ಹೇಳಿಕೆಯನ್ನು ದಂತಕಥೆ ಎಂದು ಅಲ್ಲಗಳೆಯುವುದು ಸರಿಯಲ್ಲ. ಕವಿಚರಿತೆಕಾರರು ದೇವಚಂದ್ರನ ಹಲವು ಹೇಳಿಕೆಗಳನ್ನು ಸ್ವೀಕರಿಸಿದ್ದಾರೆ. ಇದನ್ನು ಮಾತ್ರ ಏಕೆ ಸ್ವೀಕರಿಸಬಾರದು? ಕಥೆ ಎಂದಮೇಲೆ ಸತ್ಯದ ಮೇಲೆ ಅಸತ್ಯದ ಬಣ್ಣವನ್ನು ಬಳಿದಿರಬಹುದು; ಆದರೂ ಆ ಕಥೆಯ ಅಂತರಾಳದಲ್ಲಿ ಸತ್ಯವಿರಬಹುದು. ರತ್ನಾಕರನ ಗುರುವಿನ ವಿಚಾರದಲ್ಲಿ ಸುಳ್ಳು ಹೇಳಿ ಅವನು ಸಾಧಿಸಬೇಕಾಗಿರುವ ಮಹಾಕಾರ್ಯ ತಾನೇ ಏತರದು? ಕವಿಯು ಸೂರ್ಯವಂಶದ ರಾಜ

ಕುಮಾರನೆಂದು ದೇವಚಂದ್ರನು ಹೇಳಿರುವ ಮಾತು ಸುಳ್ಳೆ? ಕವಿಯೇ ಭರತೇಶ ವೈಭವದಲ್ಲಿ ತಾನು ಕ್ಷತ್ರಿಯವಂಶಜನೆಂದು ಹೇಳಿಕೊಂಡಿಲ್ಲವೇ? ಆದ್ದರಿಂದ ಮಹೇಂದ್ರಕೀರ್ತಿಯು ರತ್ನಾಕರವರ್ಣಿಯ ಗುರು ಏಕಾಗ ಬಾರದು?

iii ಮಹೇಂದ್ರಕೀರ್ತಿ ದೇವೇಂದ್ರಕೀರ್ತಿಗಳೆಂಬುವರು ಬೇರೆ ಬೇರೆ ಗುರುಗಳೆಂದು ಸಾಧಿಸಹೊರಡುವುದು ದೇವನೂರೂ ಸುರಪುರವೂ ಬೇರೆ ಬೇರೆ ಎಂದು ಹೊರಡುವ ವಾದದಂತೆ ಆಗುವುದಿಲ್ಲವೇ? ಅವು ಒಬ್ಬನೇ ಗುರುವಿನ ಪರ್ಯಾಯನಾಮಗಳಿರಬಹುದೆಂದು ಊಹಿಸುವುದಕ್ಕೆ ಅವಕಾಶವಿದೆ.

iv ರತ್ನಾಕರನು ಭರತೇಶವೈಭವದಲ್ಲಿ ತನ್ನ ಗುರು ಚಾರುಕೀರ್ತಿ ಯೋಗೀಶ್ವರನೆಂದು ಹೇಳಿದ್ದಾನೆ. ರತ್ನಾಕರಾಧೀಶ್ವರ ಶತಕದಲ್ಲಿ ದೇವೇಂದ್ರ ಕೀರ್ತಿ ಎಂದು ಹೇಳಿಕೊಂಡಿದ್ದಾನೆ. ಒಬ್ಬ ಕವಿಗೆ ಇಬ್ಬರು ಗುರುಗಳಿದ್ದಿರ ಬಹುದೆ? ಚಾರುಕೀರ್ತಿ ಎಂಬುದು ಮೂಡಬಿದಿರೆಯ ಪೀಠದ ಹೆಸರು; ದೇವೇಂದ್ರಕೀರ್ತಿ ಎಂಬುದು ಘಟ್ಟದ ಮೇಲಿನ ಹುಂಬಚ್ಚ ಪೀಠದ ಹೆಸರು. ರತ್ನಾಕರನು ವೀರಶೈವನಾಗಿ ಪುನಃ ಜೈನ ಮತವನ್ನು ಅಂಗೀಕರಿಸಿದ ಮೇಲೆ ಇವನಿಗೆ ಬೇರೊಬ್ಬ ಗುರು ಸಿಕ್ಕಿರಬಹುದು. ಆತನೇ ಮಹೇಂದ್ರಕೀರ್ತಿಯಾಗಿ ರಬಹುದು. ಎರಡನೆಯ ಬಾರಿ ಜೈನ ಮತವನ್ನು ಸ್ವೀಕರಿಸಿದ ಮೇಲೆ ರತ್ನಾಕರಾಧೀಶ್ವರ ಶತಕವನ್ನು ಬರೆದನೆಂದು ನಾವಿಟ್ಟುಕೊಳ್ಳುವುದಾದರೆ ಮಹೇಂದ್ರಕೀರ್ತಿಯನ್ನು ಸ್ಮರಿಸಿರುವುದು ನ್ಯಾಯವಾಗಿಯೇ ತೋರುತ್ತದೆ. ಎಂದರೆ ಕವಿಗೆ ಇಬ್ಬರು ಗುರುಗಳಿದ್ದರು, ಎಂದು ಹೇಳಿದಂತಾಗುತ್ತದೆ—ವೀರ ಶೈವ ಮತಕ್ಕೆ ಸೇರುವುದಕ್ಕೆ ಮೊದಲು ಚಾರುಕೀರ್ತಿ, ಎರಡನೆಯ ಬಾರಿ ಜೈನನಾದ ಮೇಲೆ ಮಹೇಂದ್ರಕೀರ್ತಿ. ವೀರಶೈವ ಮತಕ್ಕೆ ಸೇರಿದನೆಂಬು ದನ್ನು ನಂಬದಿದ್ದರೂ ಇಬ್ಬರು ಗುರುಗಳಿರುವುದು ಅಷ್ಟೇನೂ ಅಸ್ವಾಭಾವಿಕ ವಾಗಿ ತೋರುವುದಿಲ್ಲ.

v ಶಬ್ದಮಣಿದರ್ಪಣಕಾರನು ಹೇಳುವ ಹಂಸರಾಜನು ಶೃಂಗಾರಕವಿ ಹಂಸರಾಜನಿಂದ ಪ್ರತ್ಯೇಕವಾಗಿರಬೇಕು. ಹಂಸರಾಜ ಕವಿಯು ಬರೆದಿರುವ

ಗ್ರಂಥವು ಇನ್ನೂ ಬೆಳಕಿಗೆ ಬರದೆ ಗುಪ್ತಸುಪ್ತಿಯಲ್ಲಿರಬಹುದು. ಹೀಗೆ ನಿಶ್ಚಿಂತೆಯಿಂದ ಕಣ್ಮರೆಯಲ್ಲಿ ಕುಳಿತಿರುವ ಗ್ರಂಥವು ಕನ್ನಡದಲ್ಲಿ ಇದೊಂದೇ ಅಲ್ಲ.

vi ರತ್ನಾಕರಾಧೀಶ್ವರ ಶತಕದ ಕರ್ತೃವು ರತ್ನಾಕರನೇ ಇರಬೇಕೆಂಬುದಕ್ಕೆ ಆ ಗ್ರಂಥದ ಪ್ರತಿಯೊಂದು ಪದ್ಯದ ಕೊನೆಯಲ್ಲಿಯೂ ಕಂಡುಬರುವ 'ರತ್ನಾಕರಾಧೀಶ್ವರ' ಎಂಬ ಅಂಕಿತವು ಪೋಷಕವಾಗಿದೆ.

ಕನ್ನಡ ಸಾಹಿತ್ಯವನ್ನು ಓದಿರುವವರಿಗೆ ಈ ಮಾತಿನ ಸತ್ಯದ ನಿದರ್ಶನಕ್ಕೆ ಸಾಕಷ್ಟು ಆಧಾರಗಳು ದೊರೆಯುವುದೇನೂ ಕಷ್ಟವಲ್ಲ.

vii ಮೇಲೆ ಹೇಳಿದ ಎಲ್ಲ ಕಾರಣಗಳಿಗಿಂತಲೂ ಅತ್ಯಂತ ಮುಖ್ಯವಾದ ಕಾರಣ ಗ್ರಂಥದ ಆಂತರಿಕ ಪ್ರಮಾಣ. ರತ್ನಾಕರನ ಇತರ ಗ್ರಂಥಗಳಲ್ಲಿ ಕಂಡುಬರುವ ಪದ್ಯಭಾಗಗಳು ರತ್ನಾಕರಶತಕದಲ್ಲಿ ಕಂಡುಬರುತ್ತವೆ. (ಭರತೇಶವೈಭವದ ಪೀಠಿಕಾಭಾಗದಿಂದ ಎತ್ತಿಕೊಂಡಿದ್ದು.)

ರತ್ನಾಕರಾಧೀಶ್ವರಶತಕ	ಭರತೇಶ ವೈಭವ
ಸಿರಿಯೊಳ್ ಸುವರ್ಣ ಮರಲೊಳ್ ಸೌಭಾಗ್ಯಮಾ ಕ್ಷೀರದೊಳ್ ನರುನೈ ಕಾಷ್ಠದೊಳಗ್ನಿಯಿರ್ಪ ತೆರದಿಂದೀ ಮೈಯೊಳೊಂದಿರ್ಪನು.	ಕನಕ ಕಲ್ಲೊಳಗೆ ಕಾಷ್ಠದೊಳಗ್ನಿ ಪಾಲೊಳಗನುವಿಡಿದಾಜ್ಯವಿಪ್ಪಂತೆ ತನು ವಿನೊಳಿಹನಾತ್ಮಂ.
ಬಿಸಿಲಿಂ ಕಂದದ ಬೆಂಕೆಯಿಂ ಸುಡದ ನೀರಿಂ ನಾಂದದುಗ್ರಾಸಿ ಛೇದಿಸಲುಂ ಬಾರದ ಚಿನ್ಮಯಂ ಮೆರೆದು ತನ್ನೊಳ್ಪಂ ಪರಧ್ಯಾನದಿಂ ಪಸಿವಿಂದೀ ಬಹುಬಾಧೆಯಿಂ ರುಜಿಗಳಿಂ ಕೇಡಾಗುವೀ ಮೈಗೆ ಸಂದಿಸಿವಂ.	ನೀರಿಂದ ನೆನೆಯ ಕಿಚ್ಚಿಂದ ಬೇಯನು ಖಡ್ಗಧಾರೆಗೆ ಸಂಧಿಸನಾತ । ನೀರು ಕಿಚ್ಚಾಯುಧ ರುಜೆಗಳ ಬಾಧೆ ಶರೀರಕೆ.

ರತ್ನಾಕರಾಧೀಶ್ವರಶತಕ	ಭರತೇಶವೈಭವ
ನಳಿನೀನಾಳಕೆ ಮೂಲದಿಂ ತುದಿವರಂ ಸಂಪೂರ್ಣದಿಂ ಸ್ವಚ್ಛದಿಂದೊಳಗೆಂತಿ ರ್ಪುದು ತಂತುವಂತೆ ನರರ್ಗಂ ಕೆಂಬ ಜ್ಜಿಯಿಂ ನೆತ್ತಿ ಮುಟ್ಟಳತೆಂ ತಪ್ಪದೆ ಮೂರ್ತಿ ತುಂಬಿ ಪಳುಕಿಂಗೆಯ್ದಿರ್ದ ನಿಮ್ಮೊಂದು ನಿರ್ಮಳ ಬಿಂಬೋಪಮ ನಾತ್ಮ ನಿರ್ದಪಂ.	ಅಂಬುಜನಾಳಕೆ ಮೊದಲಿಂದ ತುದಿ ಮುಟ್ಟಿ ತುಂಬಿನೊಲಿರ್ಪ ರೀತಿಯೊಳು। ಕೆಂಬಜ್ಜಿಯಿಂಪ ಮಸ್ತಕಮುಟ್ಟಿ ಜೀವ ಮೈ ತುಂಬಿಹನು.
ಕವಿತಾಶಕ್ತಿಯೆ ಕಲ್ಪವಲ್ಲಿ.	ಕವಿತೆಯೆಂಬುದು ಕಲ್ಪತರು.

ಮೇಲಿನ ಕಾರಣಗಳು ರತ್ನಾಕರಾಧೀಶ್ವರ ಶತಕವನ್ನು ರಚಿಸಿದವನು ರತ್ನಾಕರನೆ ಆಗಿರಬಹುದೆಂದು ಪುಷ್ಟಿಗೊಳಿಸುತ್ತವೆ.

ರತ್ನಾಕರನು ಹಲವು ಕಾಲ ಅತ್ಯಂತ ಸುಖಿಯಾದ ಸಂಸಾರಿಯಾಗಿದ್ದು ಅನಂತರ 'ವರ್ಣಿ' ಅಥವಾ ಬ್ರಹ್ಮಚಾರಿಯಾದನೆಂದು ತೋರುತ್ತದೆ. ಭರತೇಶ ವೈಭವವನ್ನು ಬರೆವಾಗಲಂತೂ ಆತನು ಸಂನ್ಯಾಸಿಯಾಗಿದ್ದನೆಂದು ಹೇಳುವುದು ಬಹು ಸಾಹಸದ ಮಾತೆಂದೇ ಹೇಳಬೇಕು.

ರತ್ನಾಕರನು ಜೈನಾಗಮಗಳಲ್ಲಿ ಹಲವನ್ನು ಹೃದ್ಗತಮಾಡಿಕೊಂಡಿದ್ದುದಲ್ಲದೆ ವ್ಯಾಕರಣ, ಛಂದಸ್ಸು, ಅಲಂಕಾರ, ಕಾವ್ಯ, ನಾಟಕ, ಕಾಮಶಾಸ್ತ್ರ ಮೊದಲಾದ ಶಾಸ್ತ್ರ ಮತ್ತು ಸಾಹಿತ್ಯಗಳಲ್ಲಿ ನಿಷ್ಣಾತನಾಗಿದ್ದಿರಬೇಕು. ಈತ ಬಹು ಸುಸಂಸ್ಕೃತನಾದ ಕವಿ. ದೈವದತ್ತವಾದ ಪ್ರತಿಭೆ, ಧರ್ಮಾನುರಾಗಗಳು ಈತನ ಜೀವನದ ಉಸಿರು.

ಶತಕತ್ರಯಿ

ಕವಿಗೆ ಜೈನಾಗಮಗಳು ಕರತಲಾಮಲಕವಾಗಿದ್ದವೆನ್ನುವುದಕ್ಕೆ ಆತನ ಶತಕತ್ರಯವೇ ದೊಡ್ಡ ಸಾಕ್ಷಿ. ಇವುಗಳಲ್ಲಿ ಒಂದೊಂದರಲ್ಲಿಯೂ ೧೨೮ ಪದ್ಯಗಳಿವೆ (ತ್ರಿಲೋಕ ಶತಕದಲ್ಲಿ ೧೨೯ ಪದ್ಯಗಳಿದ್ದರೂ ಕಡೆಯ ಪದ್ಯ ಪ್ರಕ್ಷಿಪ್ತವೆಂಬ ಅಭಿಪ್ರಾಯವಿದೆ.) ಇವುಗಳಲ್ಲಿ ಒಂದಾದ ತ್ರಿಲೋಕ ಶತಕವು ಜೈನ ಮತಾನುಸಾರವಾದ ಲೋಕಸ್ಥಿತಿಯನ್ನು ವರ್ಣಿಸುವುದಾಗಿದೆ. ಇದೊಂದೇ ಕಂದಪದ್ಯರೂಪದಲ್ಲಿರುವುದು; ಉಳಿದುವೆರಡೂ ವೃತ್ತರೂಪದಲ್ಲಿವೆ. ಇವೆರಡರಲ್ಲಿ ಅಪರಾಜಿತೇಶ್ವರ ಶತಕವು ಶೈಲಿಯಲ್ಲಿ ಇನ್ನೂ ಎಳಬು. ವಿಷಯನಿರೂಪಣಾಸರಣಿಯಲ್ಲಿ ಹೆಚ್ಚು ಜಾಣ್ಮೆಯಿಲ್ಲ; ನವೀನತೆಯಿಲ್ಲ. ಬರಿಯ ಮಾತುಗಳ ಜೋಡಣೆ. ಕಲಿಕೆಯ ಕೈಯೇ ಹೊರತು ನುರಿತ ಕೈಯಲ್ಲ. ಹೇಳುವ ನೀತಿ ಕಠಿಣವಾಗಿದೆ ಅನುಸರಣೆಗೆ. ಸ್ವಾನುಭವದ ಕುಲುಮೆಯಲ್ಲಿ ಕಾದು, ಸುಖದುಃಖಗಳ ಸುತ್ತಿಗೆ ಏಟು ತಿಂದು, ಕಠಿಣತೆಯ ಕಾಳಿಕೆಯನ್ನು ಕಳೆದುಕೊಂಡು, ಸಿದ್ಧಿಗಂಡ ಸಾಧಕನ ಮಾತುಗಳಲ್ಲ ನಾವಿಲ್ಲಿ ಕಾಣುವುದು. ಉಚ್ಚ ಧ್ಯೇಯವನ್ನು ಸಾಧಿಸಹೊರಡುವ ಮುನ್ನ ನಿಶ್ಚಯಿಸಿಕೊಂಡಿರುವ ನಿಯಮ ಕಾಠಿಣ್ಯತೆಯನ್ನು.

ರತ್ನಾಕರ ಶತಕದಲ್ಲಿಯಾದರೋ ಕವಿಯ ಪರಿಪಾಕಗೊಂಡ ಮನಸ್ಸಿನ ಮಾರ್ದೊಳಪನ್ನು ನಾವು ಕಾಣಬಹುದು. 'ವೈರಾಗ್ಯ ನೀತಿಯಾತ್ಮವಿಚಾರಂ ತಾಂ ಬಗೆದು ನೋಡೆ ರಾಜಿಸುಗುಂ'—ಈ ಕಾವ್ಯದಲ್ಲಿ. ವಸ್ತುವೇನೋ ಅಪರಾಜಿತೇಶ್ವರ ಶತಕದ ವಸ್ತುವೇ. ಅಲ್ಲಿ ವಸ್ತು ನಿರೂಪಣೆಯೇ ಮುಖ್ಯವಾದ ಗುರಿಯಾಗಿದ್ದರೆ, ನೀತಿ ನಿರೂಪಣೆಯೇ ಪ್ರಮುಖವಾಗಿದ್ದರೆ, ಇಲ್ಲಿ ಅದನ್ನೇ ಹೇಳಿರುವ ಬಗೆ ಹೊಸದು. ಮಾತುಗಳಲ್ಲಿ ಚಮತ್ಕಾರವಿದೆ; ಕ್ಷುರಧಾರೆಯಂತೆ ನಿಶಿತವಾಗಿಯೂ ಇದೆ. 'ಶಾಸ್ತ್ರ ಹೇಳುವುದಕ್ಕೆ; ಬದನೆಯಕಾಯಿ ತಿನ್ನುವುದಕ್ಕೆ' ಎಂಬಂತಿರುವವರನ್ನು ಕುರಿತು ಹೇಳುತ್ತಾನೆ—

ಶಾಸ್ತ್ರಂ ಬಂದೊಡೆ ಶಾಂತಿ ಸ್ಮೈರಣೆ ನಿಗರ್ವಂ ನೀತಿ ಮೆಲ್ಪಾತು ಮಃ।
ಕ್ತಿ ಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಳ್ಕಂತಲ್ಲದಾ ಶಾಸ್ತ್ರದಿಂ।
ದುಸ್ತ್ರೀಚಿಂತನೆ ದುರ್ಮುಖಂ ಕಲಹಮುದ್ಗರ್ವಂ ಮನಂಗೊಂಡೊಡಾ।
ಶಾಸ್ತ್ರಂ ಶಸ್ತ್ರಮೆ, ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾಧೀಶ್ವರಾ ॥

ಕಡೆಯ ಪಾದದಲ್ಲಿ ಕಂಡುಬರುವ ಕಿಡಿಹೊತ್ತ ನುಡಿಗಳ ಬೆಡಗಿನಲ್ಲಿದೆ ರತ್ನಾಕರನ ಮಾರ್ಮಿಕತೆ.

ಭೋಗ ಬೇಡವೆಂದು ತೆಗಳಿ ಅದನ್ನು ಅತ್ತ ನೂಕುವುದಲ್ಲ ರತ್ನಾಕರನ ಸ್ವಭಾವ. ಪೂರ್ವಪುಣ್ಯವಿಹೀನನಾಗಿ ಅದು ದೊರೆಯದಂದು ಬಾಯ್ಬಾಯಿ ಬಿಡುತ್ತಾ ತೊಳಲಿ ಬಳಲುವವನನ್ನು ಕಂಡು ಕರುಣೆಯಿಂದ ಹೇಳುತ್ತಾನೆ—

ಪುಣ್ಯಂಗೈಯದೆ ಪೂರ್ವದೊಳ್ ಬರಿದೆ ತಾನೀಗಳ್ ಮನಂ ನೋಯೆ ಲಾ।
ವಣ್ಯಕ್ಕಾಭರಣಕ್ಕೆ ಭೋಗಕೆನಿಸುಂ ರಾಗಕ್ಕೆ ಚಾಗಕ್ಕೆ ಕಾ।
ರುಣ್ಯಕ್ಕಗ್ಗದ ಲಕ್ಷ್ಮಿಯಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾಮಹಾ।
ರಣ್ಯಂಬೊಕ್ಕಕಟೀಕೆ ಚಿಂತಿಸುವರೋ ರತ್ನಾಕರಾಧೀಶ್ವರಾ ॥

ಪೂರ್ವಪುಣ್ಯದಿಂದ ಭೋಗ ಬಂದಾಗ ಮಾನವ ಮೈಮರೆಯಬಾರದು. ಪೂರ್ವದ ಬುತ್ತಿ ಸವೆಯದ ಮುನ್ನವೇ ಮುಂದಿನ ಮಾರ್ಗಕ್ಕೆ ಅನುಕೂಲ ಗಳನ್ನು ಕಲ್ಪಿಸಿಕೊಳ್ಳಬೇಕು—

ನರರೊಳ್ ಪುಟ್ಟಿ ನರೇಂದ್ರನಾದ ದಿನದೊಳ್ ಸದ್ಧರ್ಮಮಂ ಸನ್ಮನೀ।
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥರ್ಗಾಶ್ರಿತರ್ಗೀಯುತುಂ।
ಪರಿವಾರ ಪ್ರಜೆಗಳ್ಗೆ ತಾಯತೆರದಿಂದೋವುತ್ತುಮಿರ್ಪಂ ಧರಾ।
ವರನಿಂದಾ ಬರ್ದಿಲಕ್ಕೆ ನಾಳಿನವನೈ ರತ್ನಾಕರಾಧೀಶ್ವರಾ ॥

ಮದವೆದ್ದ ಮನವನ್ನು ಅಂಕೆಯಲ್ಲಿಡುವುದು ಬಹುಕಷ್ಟ.

ಮದನೆದ್ದಾಸೆಗೆ ಕಲ್ಲಪೊಯ್ಸುದಿನಿದೇ ? ಮೆಯ್ತೀಂಟಿಗಂ ಕಜ್ಜಿಗಂ।
ಬದಿಯುಂ ತೋಡುವುದೊಳ್ಳಿತಲ್ತು ; ಬಗೆವಂದಾತ್ಮಂಗೆ ನಾರೀರತಂ।
ಮುದವೊಲ್ತಾ ಮೊಡನುಂತದಂ ಬಿಡಲಶಕ್ಯಂ ; ಬಿಟ್ಟೊಡೀ ಯೌವನೋ!
ನ್ಮದದುದ್ರೇಕವಡಂಗದೇವೆನಕಟಾ ! ರತ್ನಾಕರಾಧೀಶ್ವರಾ ! ॥

ರತ್ನಾಕರನ ಧರ್ಮಪ್ರತಿಪಾದನೆಯಲ್ಲಿ, ಆತನ ತತ್ವ ಜಿಜ್ಞಾಸೆಯಲ್ಲಿ ಒಂದು ಅಲೌಕಿಕವಾದ ಔದಾರ್ಯವಿದೆ. ಬಹುಶಃ ಮತ್ತಾವ ಜೈನ ಕವಿಯಲ್ಲಿಯೂ ಕಾಣಬರದ ಒಂದು ಸ್ವತಂತ್ರ ಮನೋವೃತ್ತಿಯಿದೆ. ಮನಗಂಡುದನ್ನು ನಿರ್ದಾಕ್ಷಿಣ್ಯವಾಗಿ ನುಡಿಯಬಲ್ಲ ಕೆಚ್ಚಿದೆ. 'ತನು, ರೂಪು, ವಿಭವ, ಯೌವನ, ಧನ, ಸೌಭಾಗ್ಯ, ಆಯುರಾದಿಗಳ್ ಮಿಂಚಿನ ಪೊಳಪಿನಂತೆ, ಮುಗಿಲ ನೆಳಲಂತೆ, ಇಂದ್ರ ಧನುಸ್ಸಿನಂತೆ, ಬೊಬ್ಬುಳಿಕೆಯುರ್ಬಿನಂತೆ' ಕ್ಷಣ ಭಂಗುರವೆಂಬ ಜೈನರ ಕ್ಷಣಿಕವಾದ, ರತ್ನಾಕರನಿಗೆ ಅಷ್ಟು ರುಚಿಸುವುದಿಲ್ಲ. ಕ್ಷಣಿಕವಾದರೂ ಅದು ಭೋಗಕ್ಕೆ ಅಯೋಗ್ಯವಲ್ಲ; ಕ್ಷಣಿಕವೆಂಬುದನ್ನು ಅರಿತು, ಭೋಗವಿಮುಖನಾಗದೆಯೇ ಶಾಶ್ವತ ಸುಖವನ್ನು ಅರಸುತ್ತಾ ಹೋಗಬೇಕೆಂಬುದು ಆತನ ಸಂದೇಶ. ಇದೇ ಭಾವವು ಭರತೇಶ ವೈಭವದಲ್ಲಿ ತಾನೇ ತಾನಾಗಿ ತಾಂಡವವಾಡುತ್ತಿರುವುದರಿಂದ ಅದನ್ನು ಮುಂದೆ ವಿಶದವಾಗಿ ವಿವೇಚಿಸೋಣ.

ಒಟ್ಟಿನಲ್ಲಿ ಶತಕತ್ರಯವು, ಅದರಲ್ಲಿಯೂ ರತ್ನಾಕರ ಶತಕವು, ಜೈನರಿಗೆ ಮಾತ್ರವಲ್ಲದೆ ಇತರರಿಗೂ ಆದರಣೀಯವಾದುದು. ಕವಿಯ ಆತ್ಮರೋದನವನ್ನು ಹೃದಯಂಗಮವಾಗಿ ಚಿತ್ರಿಸಿರುವ ಆ ಕಾವ್ಯ ಜೈನೇತರರೂ ಬಳಸಿಕೊಂಡು ಭೋಗಿಸಬಹುದಾದ ದೊಡ್ಡ ಆಸ್ತಿ.

ಕ ಥಾ ಸಾ ರ

ಪುರುಪರಮೇಶ್ವರನಾದ ವೃಷಭನಾಥನ ನೂರ್ವರು ಮಕ್ಕಳಲ್ಲಿ ಹಿರಿಯನೂ ಹದಿನಾರನೆಯ ಮನುವೂ ಪ್ರಥಮ ಚಕ್ರಿಯೂ ಆದ ಭರತ ಮಹಾರಾಜನು ಭರತ ಭೂತಳಕ್ಕೆ ಸಿಂಗರವಾದ ಅಯೋಧ್ಯಾಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಉದಯದಲ್ಲಿಯೇ ಎದ್ದು ದೇವತಾರ್ಚನೆಯನ್ನು ನೆರವೇರಿಸಿ, ಒಡ್ಡೋಲಗವನ್ನು ನೆರಹಿ, ಮಧ್ಯಾಹ್ನದವರೆಗೂ ಕವಿಗಾಯಕರ ಗೋಷ್ಠಿಯಲ್ಲಿದ್ದು, ಅನಂತರ ಮುನಿಭುಕ್ತಿ ನಿಯಮವನ್ನು ಪಾಲಿಸಿದ ಮೇಲೆ ತನ್ನ ಸಹಸ್ರಾರು ರಾಣಿಯರೊಂದಿಗೆ ನೃತ್ಯ, ವಾದ್ಯ, ಗೀತ, ನಾಟಕಾದಿ ಸುಖ ಸಂಕಥಾ ವಿನೋದಗಳಲ್ಲಿ ಕಾಲಕಳೆಯುವುದು ಆತನ ದಿನಚರಿ. ಆತನಿಗೆ ಭೂಭಾರವನ್ನು ಹೊತ್ತಿರುವೆನೆಂಬ ಚಿಂತೆಯಿಲ್ಲ; ಆಲಸ್ಯವಿಲ್ಲ. ಒಂದರ ಮೇಲೂ ಕಾಮವಿಲ್ಲ. ವಿಸ್ತಾರವಾದ ತನ್ನ ರಾಜ್ಯವನ್ನು ಸುಕ್ಷೇಮದಿಂದ ಬಹುಕಾಲ ಆಳುತ್ತಿರಲು, ಒಮ್ಮೆ ಆತನ ಆಯುಧಾಗಾರದಲ್ಲಿ ದಿಗ್ವಿಜಯ ಸೂಚಕವಾದ ಚಕ್ರರತ್ನ ಉದಿಸಿತು. ಮಂತ್ರಿಗಳು ಇದನ್ನು ನಿವೇದಿಸಿ, ಧರೆಯನ್ನು ಸಾಧಿಸಲು ಸಮಯವೆಂದು ಸೂಚಿಸಿದರು. ಚಕ್ರಿಯು ತೀರ್ಥಂಕರ ಪೂಜೆಯನ್ನು ನೆರವೇರಿಸಿ ವಿಜಯದಶಮಿಯ ದಿನ ದಿಗ್ವಿಜಯ ಪ್ರಯಾಣವನ್ನು ಬೆಳೆಸಿದನು. ಚಕ್ರರತ್ನವು ದಾರಿ ತೋರುತ್ತಾ ಮುಂದೆ ಸಾಗಲು ಅಮಿತವಾದ ಚತುರಂಗ ಬಲವು ಸಮುದ್ರ ನಿರ್ಘೋಷವನ್ನು ಮೀರಿಸುವ ಗಜಬಜೆಯಿಂದ ಅದನ್ನು ಹಿಂಬಾಲಿಸಿತು. ರಾಜನ ಸಹಸ್ರ ಸಹಸ್ರ ಸಂಖ್ಯೆಯ ರಾಣಿಯರು ತಮ್ಮ ಅತ್ತೆಯಾದ ಯಶಸ್ವತೀ ದೇವಿಯಿಂದ ಅನುಜ್ಞೆ ಪಡೆದು ರಾಜನನ್ನು ಹಿಂಬಾಲಿಸಿದರು. ಅನುಕೂಲ, ನಾಗರ, ದಕ್ಷಿಣ ಮೊದಲಾದ ಕೆಳೆಯರೂ ರಾಜನ ವಿನೋದಕ್ಕಾಗಿ ಆತನ ಜೊತೆಯಲ್ಲಿಯೇ ಹೊರಟರು.

ಭರತನ ದಿಗ್ವಿಜಯದಲ್ಲಿ ಯುದ್ಧಪ್ರಸಕ್ತಿ ಹ್ರಸ್ವವಾಗಿ ಅನಂಗ ಸಾಮ್ರಾಜ್ಯದ ಸುಖಪರಿಕರಗಳ ಹೃದಯಂಗಮವಾದ ವರ್ಣನೆ ವಿಸ್ತಾರವಾಗಿ ಬಂದಿದೆ.

ಇಗೋ ಕೋಳ್ಕೈಸರು; ಅಗೋ ನೆತ್ತರ ಕಾಲುವೆ; ಅತ್ತಕಡೆ ಬಡಿದಾಡುವ ಅಟ್ಟೆ; ಇತ್ತಕಡೆ ಕುಣಿದಾಡುವ ರುಂಡ; ಕತ್ತಿಗಳ ಝಣಝಣತ್ಕಾರದ ನಡುವೆ ಗೆದ್ದವರ ಆರ್ಭಟ, ಗಾಯಗೊಂಡವರ ಚೀರಾಟ, ಸಾವವರ ನರಳಾಟ—ಇತ್ಯಾದಿ ಭೀಭತ್ಸಪೂರಿತವಾದ ರಣ ಕೋಲಾಹಲಕ್ಕೆ ಇಲ್ಲಿ ಎಡೆಯಿಲ್ಲ. ಕೊನೆಗೆ, ಇದಿರು ಬಿದ್ದು, ಮೈ ತಿಳಿದ ಮೇಲೆ ಮರೆ ಹೊಕ್ಕವನನ್ನು ದಂಡಿಸುವಾಗ ಸಹ 'ಗುಲಾಮ' ಎಂಬುದಕ್ಕಿಂತ ಹೆಚ್ಚು ಕಠಿಣವಾದ ಮಾತು ಕಥಾನಾಯಕನ ಬಾಯಲ್ಲಿ ಬರುವುದಿಲ್ಲ. ಒಮ್ಮೆ ಸುರಸುಂದರಿಯರಾದ ತನ್ನ ಹೆಂಡಿರೊಡನೆ ಸರಸ ಸಲ್ಲಾಪ; ಮತ್ತೊಮ್ಮೆ ಮಗನ ಬಾಲಲೀಲೆಗಳನ್ನು ನೋಡುತ್ತಾ, ನಲಿಯುವುದು; ಆಗಾಗ ಮದುವೆ, ಹೆರಿಗೆ, ಜಾತಕರ್ಮ—ಇತ್ಯಾದಿಗಳ ಸಂಭ್ರಮವೇ ಇಲ್ಲಿ ಹೆಚ್ಚು.

ಭರತನು ಸಮಸ್ತ ಪರಿವಾರದೊಡನೆ ಪಯಣದ ಮೇಲೆ ಪಯಣವನ್ನು ಬೆಳೆಸಿ ಪೂರ್ವಸಾಗರದ ತಡಿಯಲ್ಲಿ ಬೀಡುಬಿಟ್ಟನು. ಆತನು ಮುಟ್ಟಿದುದೆಲ್ಲವೂ ಚಿನ್ನ. ಸ್ವಲ್ಪವೂ ರಕ್ತಪಾತವಿಲ್ಲದೆ ಪೂರ್ವಸಾಗರ ಪರ್ಯಂತ ರಾಜ್ಯವು ಆತನ ಅಧೀನವಾಯಿತು. ಬೀಡು ಬಿಟ್ಟಿಡೆ ರಾಜಸಿಗೊಂದು ಅರಮನೆ ಸಿದ್ಧವಾಯಿತು, ಅದನ್ನು ಪ್ರವೇಶಿಸಿ, ದಣಿದ ರಾಣಿಯರನ್ನು ಸಂತೈಸಿ, ಮಗನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆಟವಾಡಿಸುತ್ತಾ, ರಾಣಿಯರಿಗೆ ಸಮುದ್ರದ ಸೊಬಗನ್ನು ಬಗೆಬಗೆಯಾಗಿ ಬಣ್ಣಿಸುತ್ತಾ ಆ ದಿನವನ್ನು ಕಳೆದನು.

ಮರುದಿನದಿಂದ ಮೂರು ದಿನಗಳು ಉಪವಾಸ. ಬೀಡು ಬಿಟ್ಟಿಡೆಯಲ್ಲೆಲ್ಲಾ ಭರತನು ಈ ವ್ರತವನ್ನು ತಪ್ಪದೆ ಆಚರಿಸುವನು. ಈ ಅಂತರದಲ್ಲಿ ಸುತ್ತುಮುತ್ತಿನ ರಾಜರೆಲ್ಲರೂ ಕಪ್ಪಕಾಣಿಕೆಗಳನ್ನು ತಂದಿತ್ತರು. ಸಮುದ್ರ ಮಧ್ಯದ ದ್ವೀಪವಾಸಿಯಾದ ಮಾಗಧನೆಂಬ ವ್ಯಂತರ ರಾಜನೊಬ್ಬನು ಮಾತ್ರ ಬರಲಿಲ್ಲ. ಅವನ ಉದ್ಧಟತನವನ್ನು ಕಂಡು ಭರತನಿಗೆ ನಗು. 'ಮಾಗಧ ನನಗೊಬ್ಬ ಪಗೆಯೆ? ಸೂರ್ಯನಿಗೆ ದೊಡ್ಡ ಗೂಗೆಯ ಯೋಚನೆಯೇಕೆ?' ಎಂದುಕೊಂಡು ತನ್ನ ರಥವೇರಿ ಸಾಗರದ ಮೇಲೆ ನಡೆದ. ಆತನ

ರಥವೂ ತೇಜಿಗಳೂ ನೆಲದ ಮೇಲೆ ನಡೆಯುವಂತೆ ನೀರಿನ ಮೇಲೂ ನಡೆಯ ಬಲ್ಲುವು. ಹನ್ನೆರಡು ಯೋಜನ ದೂರ ಹರಿದು ರಥ ನಿಂತಿತು. ರಾಜನು ಅಲ್ಲಿಂದ ಬಿಲ್ಲಿನಲ್ಲಿ ಬಾಣವೊಂದನ್ನು ಅನುಸಂಧಾನ ಮಾಡಿ ಮಾಗಧಿಯ ನಗರಿಯತ್ತ ಪ್ರಯೋಗಿಸಿದನು. ಅದು ನೇರವಾಗಿ ಹಾರಿಹೋಗಿ ವ್ಯಂತರನ ಓಲಗ ಶಾಲೆಯಲ್ಲಿದ್ದ ಕಂಭಕ್ಕೆ ಬರಸಿಡಿಲ ಆರ್ಭಟದಿಂದ ಬಡಿದು ನೆಟ್ಟು ಕೊಂಡಿತು. ಅದನ್ನು ಕಂಡು ಹುಲಿಯನ್ನು ಕಂಡ ಹುಲ್ಲೆಯಿಂಡಿನಂತೆ ಸಭೆ ಯೆಲ್ಲವೂ ಚೆಲ್ಲಾಪಿಲ್ಲಿಯಾಯಿತು. ಬಲ್ಲಿದನಾದ ಮಾಗಧನು ಮಾತ್ರ ಆ ಬಾಣವನ್ನು ತರಿಸಿ ಅದರ ಹಿಳುಕಿನೋಲೆಯನ್ನು ಕರಣಿಕನ ಕೈಲಿ ಓದಿಸಿದ. 'ಶ್ರೀಮನ್ಮಹಾಪುರುಜಿನೇಂದ್ರನ ಸುಕುಮಾರನೂ, ಗುರುಹಂಸನಾಥನ ಭಾವಕ್ಕೆ ಸೊಕ್ಕಿದ ಅರಿರಾಯರೆಂಬ ಗಿರಿಗಳಿಗೆ ವಜ್ರದಂಡಪ್ರಾಯನೂ ಆದ ಪ್ರಚಂಡ ಭರತಚಕ್ರೇಶ್ವರನು ನಮ್ಮ ಕಿಂಕರ ಮಾಗಧನಿಗೆ ಕೊಟ್ಟ ನಿರೂಪ— ನಾಳೆ ಬಂದು ನೀನು ನಮ್ಮನ್ನು ಕಾಣತಕ್ಕದ್ದು. ಇದು ಪರಮ ಶಾಸನ.' ಕೇಳಿ ಮಾಗಧನು ಕಿಡಿಕಿಡಿಯಾದನು; ಬೊಡುಗಚ್ಚಿ 'ಸುಡು, ಸುಡು ಆ ಓಲೆ ಯನ್ನು' ಎಂದು ಗಜರಿ ಗರ್ಜಿಸಿದನು; ಅವನ ಕೊಬ್ಬನ್ನು ಇಳಿಸುವೆನೆಂದು ಹುಚ್ಚಿದ್ದು ನುಡಿದನು. ಆಗ ಮಂತ್ರಿಗಳು ಸೂನೃತವಚನಗಳಿಂದ ಅವನನ್ನು ಸಂತೈಸಿ 'ಭರತಚಕ್ರೇಶ್ವರ ಸಾಮಾನ್ಯನಲ್ಲ. ದೇವರ ದೇವನ ಆತ್ಮಜ; ಅದ್ಭುತ ಸಂಪತ್ತಿಗೆ ಅಧಿಪತಿ; ಕಿಂಚಿತ್ತೂ ಭಯವಿಲ್ಲದ ನಿಶ್ಶಂಕ; ಚರ ಮಾಂಗ. ಆದುದರಿಂದ ಕಾಳಗ ತರವಲ್ಲ. ಸಮಾನನೊಡನೆ ಯುದ್ಧ ಮಾಡುವುದು ಸರಿಯೇ ಹೊರತು ಅಧಿಕನೊಡನೆ ಹೋರಾಡುವುದು ತನ್ನನ್ನು ತಾನೇ ಇರಿದುಕೊಂಡಂತೆ.' ಎಂದು ಹೇಳಿದರು. ಹಿತವರ ಸೂಕ್ತಿಯಿಂದ ಮಾಗಧನ ನೆತ್ತಿಯ ಪಿತ್ತ ಇಳಿದುಹೋಯಿತು. ಮರುದಿನ ತೆಪ್ಪಗೆ ಕಪ್ಪ ಕಾಣಿಕೆಗಳೊಡನೆ ಹೋಗಿ, ಓಲಗಸಾಲೆಯಲ್ಲಿ ಠೀವಿಯಿಂದ ಕುಳಿತಿದ್ದ ಭರತನಿ ಗೊಪ್ಪಿಸಿ, ಆತನ ಸಾಮಂತನಾದನು. ಅಷ್ಟರಲ್ಲಿಯೇ ಅರಮನೆಯ ದೂತಿ ಯೊಬ್ಬಳು ಸಂತೋಷದಿಂದ ಏದುತ್ತಾ ಓಡಿಬಂದು, ಕುಸುಮಾಜಿ ಸುಕುಮಾರ ನನ್ನು ಹೆತ್ತಳೆಂದು ಆತನ ಕಿವಿಯಲ್ಲಿ ಒಸಗೆಯನ್ನು ಬಿತ್ತಿದಳು. ಹರ್ಷಚಿತ್ತ ನಾದ ಚಕ್ರಿ ಓಡ್ಡೋಲಗವನ್ನು ಅಲ್ಲಿಗೇ ಹರಿಸಿ, ಅರಮನೆಗೆ ಹೋಗಿ, ಮಗನ ಜಾತಕರ್ಮಾದಿಗಳನ್ನು ವೈಭವದಿಂದ ನೆರವೇರಿಸಿದನು. ಅಲ್ಲಿಯೇ ಆರು

ತಿಂಗಳು ಬೀಡು ಬಿಟ್ಟಿದ್ದು ಅನಂತರ ಪರಿವಾರ ಸಮೇತ ದಕ್ಷಿಣ ದಿಕ್ಕಿಗೆ ಪಯಣ ಬೆಳೆಸಿದನು. ಪರಿವಾರವೆಲ್ಲಾ ಮದುವೆ ದಿಬ್ಬಣದಂತೆ ಮಂದಮಂದ ವಾಗಿ ಮುಂದುವರಿದು ದಕ್ಷಿಣ ಸಮುದ್ರದ ದಡವನ್ನು ಸೇರಿತು. ಹಿಂದಿ ನಂತೆಯೇ ದಕ್ಷಿಣ ಸಮುದ್ರದವರೆಗೆ ಇರುವ ರಾಜ್ಯವೆಲ್ಲಾ ಭರತನ ವಶವಾದು ದಲ್ಲದೆ, ಆ ಸಮುದ್ರ ಮಧ್ಯದಲ್ಲಿದ್ದ ವರತನುವೂ ಮಾಗಧನಂತೆ ಮೊದಲು ಮಲೆತುನಿಂತರೂ ಕಡೆಗೆ ಆತನ ಚಕ್ರವರ್ತಿತ್ವವನ್ನು ಒಪ್ಪಿಕೊಂಡು ಕಪ್ಪ ಕಾಣಿಕೆಗಳನ್ನರ್ಪಿಸಿದನು. ಅನಂತರ ಪಶ್ಚಿಮಕ್ಕೆ ಪ್ರಯಾಣ. ಮಾರ್ಗ ಮಧ್ಯದಲ್ಲಿ ಚಂದ್ರಿಕಾದೇವಿಯೆಂಬ ರಾಣಿ ಪುತ್ರನನ್ನು ಪ್ರಸವಿಸಲು, ಅಲ್ಲಿಯೇ ಆರು ತಿಂಗಳಿದ್ದು ಆಮೇಲೆ ಪ್ರಯಾಣ ಮಾಡಿ ಪಶ್ಚಿಮ ಸಮುದ್ರವನ್ನು ಸೇರಿದನು. ಆ ಕಡಲ ಮಧ್ಯದ ನಾಡೊಡೆಯನಾದ ಪ್ರಭಾಸಾಮರ ವ್ಯಂತರ ನನ್ನು ಗೆದ್ದು ಕಪ್ಪಕಾಣಿಕೆಗಳನ್ನು ಪಡೆದನು. ಅಲ್ಲಿ ಐವರು ಕುವರರುದಿಸಿ ದರು. ಯಥಾಪ್ರಕಾರ ಆರು ತಿಂಗಳು ಅಲ್ಲಿ ತಂಗಿದ್ದು ಆಮೇಲೆ ಸಿಂಧು ನದಿಯ ದಕ್ಷಿಣ ತಡಿಯನ್ನು ಹಿಡಿದು ಮ್ಲೇಚ್ಛರಾಜ್ಯಗಳ ಮೇಲೆ ದಂಡೆತ್ತಿ ನಡೆದನು.

ದಾರಿಯಲ್ಲಿ ವಿಜಯಾರ್ಧ ಪರ್ವತವು ದೊಡ್ಡದೊಂದು ಗೋಡೆಯಂತೆ ಅಡ್ಡವಾಗಿ ನಿಂತಿತ್ತು. ಅದರ ಮಧ್ಯದಲ್ಲಿ ಒಂದು ವಜ್ರಕವಾಟ. ಅದನ್ನು ಒಡೆದರೆ ತಮಿಸ್ರಗುಹೆಯೆಂಬ ಒಂದು ಗುಹಾ ಮಾರ್ಗವು ದೊರೆಯುವುದು. ಅದರ ಮೂಲಕ ಹಾದು ಅದರ ಉತ್ತರ ದಿಗ್ಭಾಗವನ್ನು ಸೇರಬೇಕು. ಆದರೆ ಕವಾಟವನ್ನು ಒಡೆಯುವುದು ಸುಲಭವಾದ ಕಾರ್ಯವಲ್ಲ. ಅದನ್ನು ಒಡೆದೊಡನೆಯೇ ಹನ್ನೆರಡು ಗಾವುದ ಉದ್ದ ಕಿಚ್ಚು ಉಚ್ಚಳಿಸುವುದು. ಅದನ್ನು ನಿವಾರಿಸುವುದಕ್ಕಾಗಿ ಭರತನ ಆಜ್ಞೆಯಿಂದ ದೊಡ್ಡ ಅಗಳೊಂದು ನಿರ್ಮಾಣ ವಾಯಿತು. ಅದರ ತುಂಬ ನೀರು ತುಂಬಿದ ಮೇಲೆ ರಾಜನು ತನ್ನ ದಂಡರತ್ನದಿಂದ ವಜ್ರಕವಾಟವನ್ನು ಒಡೆದು ಹಾಕಿದನು. ಅದರ ಆರ್ಭಟಕ್ಕೆ ವಿಜಯಾರ್ಧಗಿರಿ ನಡುಗಿತು. ಅದರ ಮೇಲಿದ್ದ ವ್ಯಂತರಾಮರರೆಲ್ಲಾ ಅಲ್ಲಾಡಿ ಹೋದರು. ಆ ಗಿರಿಯ ಒಡೆಯನಾದ ವಿಜಯಾರ್ಧದೇವನು ತನ್ನ ವ್ಯಂತರ ಪರಿವಾರದೊಡನೆ ಭರತನ ಬಳಿಗೆ ಬಂದು, ಕಪ್ಪವಿತ್ತು ಮನ್ನಣೆಗೊಂಡು

ಹೋದನು. ಗುಹೆಯ ಬೆಂಕಿ ಆರಲು ಆರು ತಿಂಗಳು ಬೇಕು. ಈ ಅವಕಾಶ ದಲ್ಲಿ ಮ್ಲೇಚ್ಛರಾಜರನ್ನೆಲ್ಲಾ ಗೆಲ್ಲುವಂತೆ ತನ್ನ ಸೇನಾನಿಗಳಾದ ಜಯ, ವಿಜಯಾಂಕರನ್ನು ಅಟ್ಟಿದನು.

ವಿಜಯಾರ್ಧಪರ್ವತದ ತಪ್ಪಲಿನಲ್ಲಿ ಗಗನವಲ್ಲಭವೆಂಬ ಒಂದು ಪಟ್ಟಣ. ನಮಿ ಅದರ ರಾಜ. ರಥಚಕ್ರವಾಳಪುರವೆಂಬ ಮತ್ತೊಂದು ಪಟ್ಟಣಕ್ಕೆ ವಿನಮಿ ರಾಜ. ಈ ಸೋದರರು ಭರತನ ಸೋದರ ಮಾವನ ಮಕ್ಕಳು. ಆತನು ವಜ್ರಕವಾಟವನ್ನು ಭೇದಿಸಿದುದನ್ನು ಕೇಳಿ ವಿನಮಿಗೆ ಆನಂದ. ಆದರೆ ಹಿರಿಯನಾದ ನಮಿಗೆ ಚಿಂತೆ. 'ನಮ್ಮ ಭಾವಾಜಿ ನಿಮಿಷ ಮಾತ್ರದಲ್ಲಿ ಕವಾಟವನ್ನು ಹೋಳುಮಾಡಿದ; ನಮ್ಮ ಭಾವಾಜಿಗೆ ಸಮನಾರು?' ಎಂದು ನಲಿದು ನರ್ತಿಸುತ್ತಿರುವ ತಮ್ಮನನ್ನು ಕಂಡು ನಮಿ ಕೋಪದಿಂದ 'ನಿನಗೆ ಮಕ್ಕಳಾಟಿಕೆ. ರಾಜಾಂಗದ ದಿಕ್ಕರಿಯದೆ ಭಾವಾಜಿಯ ಪೌರುಷವನ್ನು ಕಂಡು ಬೀಗುತ್ತಿದ್ದಿ. ಷಟ್ಖಂಡದೊಡೆಯನಾದ ನಿಮ್ಮ ಭಾವಾಜಿ ರಾಜಸಮೂಹ ವೆಲ್ಲವೂ ತನ್ನನ್ನು ಓಲೈಸಬೇಕೆನ್ನುತ್ತಾನೆ. ಸರಿಸರಿಯಾಗಿ ಕುಳಿತು ಸರಸ ದಿಂದ ನೀನು ತಾನೆಂದು ನುಡಿಯುವ ಹಕ್ಕು ಹೋಯಿತು. ಇನ್ನೇನಿದ್ದರೂ ಕಾಣಿಕೆಯಿತ್ತು ಗೌರವದಿಂದ ಕಂಡು, ಅಯ್ಯಾ! ಜೀಯಾ! ಲೇಸು! ಎಂದು ನುಡಿವ ಸೇವಕರಾಗಬೇಕು.' ಅಣ್ಣ ನುಡಿವ ಸರಣಿ ತಮ್ಮನಿಗೆ ಸರಿಬೀಳಲಿಲ್ಲ. ಮಂತ್ರಿ ಮೃದು ನುಡಿಗಳಿಂದ ಹೇಳಿನೋಡಿದರೂ ನಮಿ ದಾರಿಗೆ ಬರಲಿಲ್ಲ. ಚಿಕ್ಕಂದಿನಿಂದ ಭರತನಿಗೆ ಅರ್ಪಿಸಬೇಕೆಂದು ಬೆಳಸಿದ್ದ ಸುಭದ್ರೆಯೆಂಬ ತಂಗಿ ಯನ್ನು ಈಗ ಆತನಿಗೆ ವಿವಾಹ ಮಾಡಿ ಕೊಡುವುದಕ್ಕೂ ಆತ ಒಪ್ಪಲಿಲ್ಲ. ಕೊನೆಗೆ ತಾನು ಹೋಗಿ ಭರತನನ್ನು ಕಂಡು ಕಾಣಿಕೆಯೊಪ್ಪಿಸುವುದಕ್ಕೂ ಸಹ ಅವನು ಒಡಂಬಡಲಿಲ್ಲ. ತನ್ನ ಸುದ್ದಿ ಬಂದರೆ ವ್ರತಧಾರಿಯಾಗಿರುವನೆಂದು ತಿಳುಹಿಸುವಂತೆ ಹೇಳಿ, ತಮ್ಮನನ್ನೂ ಮಂತ್ರಿಯನ್ನೂ ಜೊತೆಮಾಡಿ ಕಾಣಿಕೆ ಯೊಡನೆ ಭರತನ ಬಳಿಗೆ ಕಳುಹಿದನು. ವಿನಮಿಯ ಜೊತೆಯಲ್ಲಿಯೇ ನೂರಾರು ಜನ ಖೇಚರ ರಾಜರೂ ಭರತರಾಜನನ್ನು ಕಾಣಲು, ಕಾಣಿಕೆ ಯೊಪ್ಪಿಸಲು, ವಿಮಾನಗಳಲ್ಲಿ ಹಾರಿ ಬಂದರು. ಇವರಲ್ಲಿ ಹಲವರು ಭರತ

ರಾಜನಿಗೊಪ್ಪಿಸಲು ರೂಪವತಿಯರಾದ ಸುತೆಯರನ್ನು ಕರೆತಂದಿದ್ದರು.

ವಿನಮಿ ಭರತರಾಜನನ್ನು ಆಸ್ಥಾನ ಮಂಟಪದಲ್ಲಿ ಕಂಡು ಕಾಣ್ಕೆ ಯಿತ್ತನು. ಪರಸ್ಪರ ಕುಶಲಪ್ರಶ್ನೆಗಳಾದುವು. ಉಳಿದ ಖೇಚರ ರಾಜರಲ್ಲಿ 'ಪ್ರಮದ ಪುತ್ರಿಯರ' ತಂದವರನ್ನು ಮೊದಲು ರಾಜನ ಸನ್ನಿಧಿಗೆ ಹೊಗಿಸಿ ದರು. ಅವರಿಗೆ ಕೊಡುವ ಮರ್ಯಾದೆಯೇ ಬೇರೆ. ಬಂದೊಡನೆಯೇ ಕೈ ಮುಗಿ ದರೆ ಸಾಕು. ಅವರಿಗಾಗಿ ಪ್ರತ್ಯೇಕವಾದ ಆಸನಗಳು ಸಿದ್ಧವಾಗುತ್ತವೆ. ಇಂತಹ ಮುನ್ನೂರು ಜನ ರಾಜರು ಪ್ರತ್ಯೇಕ ಪ್ರತ್ಯೇಕವಾಗಿ ಬಂದು ಮರ್ಯಾ ದಿತರಾಗಿ ಆಸನಗಳನ್ನಲಂಕರಿಸಿದರು. ನೋಡಿದವರು 'ರೂಪುಳ್ಳ ಪೆಣ್ಣಿ ಪೆತ್ತವರ ಭಾಗ್ಯವೆ!' ಎಂದು ಕರುಬಬೇಕು. ಇವರ ಸರದಿಯಾದ ಮೇಲೆ ಉಳಿದ ರಾಜರು ಒಬ್ಬೊಬ್ಬರಾಗಿ ಬಂದು ರಾಜನ ಪಾದದಡಿಯಲ್ಲಿ ತಮ್ಮ ಕಪ್ಪಕಾಣಿಕೆಗಳನ್ನಿರಿಸಿ, ಅಡ್ಡಬಿದ್ದು ಎದ್ದು, ನೆಲದ ಮೇಲೆ ಹಾಸಿದ್ದ ಚಕ್ಕಳ ಗಳ ಮೇಲೆ ಕುಳಿತರು. ಇದೆಲ್ಲವನ್ನೂ ಕುಳಿತು ಕಾಣುತ್ತಿದ್ದ ವಿನಮಿಗೆ ತಾನು ಹೆಣ್ಣಿಲ್ಲದೆ ಬಂದುದಕ್ಕೆ ಮನಸ್ಸಿನಲ್ಲಿಯೇ ಮಿಡುಕಾಗಿರಬೇಕು.

ಮರುದಿನ ಮದುವೆ. ಭರತರಾಜನು ಮುನ್ನೂರು ಜನ ಖೇಚರಾಂಗನೆ ಯರನ್ನೂ ಮದುವೆನಿಂದು ಮುನ್ನೂರು ರೂಪುದಾಳಿ, ಬೇರೆಬೇರೆಯಾಗಿ ಬೆರೆದು ಒಮ್ಮೆಯೇ ಅವರೆಲ್ಲರನ್ನೂ ವಿನೋದಗೊಳಿಸಿದನು. ಮಾವಂದಿರಿಗೆ ಬೇಕಾದಷ್ಟು ಉಡುಗೊರೆಯಿತ್ತು ಅಲ್ಲಿಯೇ ಕೆಲವು ದಿನಗಳಿರುವಂತೆ ಉಪ ಚಾರ ಹೇಳಿ ಬೀಡಾರಗಳಿಗೆ ಕಳುಹಿಸಿದ. ಹೊಸ ಹೆಂಡಿರೊಡಗೂಡಿ ಕೆಲವು ದಿನಗಳು ಕಳೆಯುವಷ್ಟರಲ್ಲಿಯೇ ಸುಗ್ಗಿಯ ಮೇಲೆ ಸುಗ್ಗಿ. ಸೇನಾಪತಿ ಯಾದ ವಿಜಯನು ಪಡುವಣ ಖಂಡವನ್ನೆಲ್ಲಾ ಜಯಿಸಿ 'ಹೆಂಗಳ ಜನಕರ ಹಿಂದಿಟ್ಟುಕೊಂಡು' ಬಂದು ಸಾಷ್ಟಾಂಗವೆರಗಿದ, ಆಸ್ಥಾನದಲ್ಲಿದ್ದ ಭರತ ರಾಜನಿಗೆ. ಬಂದ ರಾಜರ 'ಕಪ್ಪಕೆ ತಂದಾನೆ ಕುದುರೆಗಳನು ಹಗಲೊಪ್ಪಿಸಿ ಕೊಂಡನಾ ರಾಯ | ಸುಪ್ಪಾಣಿ ಪೆಂಗಳನೊಂದೆ ಪಸೆಯೊಳಿರುಳೊಪ್ಪ ಪೊಳ್ವೈವಾಹವಾದ ||' ಈ ಮುನ್ನೂರಿಪ್ಪತ್ತು ಭೂಚರಿಯರೊಡನೆ ಸುಖ

ವಾಗಿರುತ್ತಿರಲು ' ಸುಖದ ಮೇಲುತ್ತಮ ಸುಖವೆ ಬಪ್ಪಂತೆ ' ಪೂರ್ವಖಂಡ ವನ್ನೆಲ್ಲಾ ಜಯಿಸಿದ ಜಯರಾಜನ ಸವಾರಿ ಬಂದಿಳಿಯಿತು. ' ನೂತನ ಪ್ರಾಯದ ನಾನೂರು ಪೆಂಗಳು ' ಭರತನ ರಾಣಿಯರ ಮಾಲೆಗೆ ಹೊಸದಾಗಿ ಸೇರಿದರು, ಅದರ ಫಲವಾಗಿ. ಖೇಚರ ಮಾವಂದಿರಂತೆ ಈ ಭೂಚರ ಮಾವಂದಿರೂ ಉಡುಗೊರೆಯಿಂದ ತಣಿದು ಹೋದರು.

ಭಾವನನ್ನು ಕಾಣಹೋದ ವಿನಮಿ ಮದುವೆಯ ಜೊಕ್ಕ ಭೋಜನ ವುಣ್ಣುತ್ತಾ ಕೆಲಕಾಲ ಕಳೆದನು. ಚಕ್ರವರ್ತಿಯ ಅಪ್ಪಣೆಯಿಲ್ಲದೆ ಹಿಂದಿರುಗು ವಂತಿಲ್ಲ. ಚಕ್ರವರ್ತಿಯಾದರೋ ಅಪ್ಪಣೆಯೀಯಲು ವ್ಯವಧಾನವಿಲ್ಲ. ಹೀಗಾಗಿ ಹಲವು ದಿನ ಕಳೆದು ಹೋದುವು. ಮದುವೆಯ ದಿಬ್ಬಣವೆಲ್ಲಾ ಮುಗಿದ ಮೇಲೆ ಒಂದು ದಿನ ಒಡ್ಡೋಲಗವನ್ನು ನೆರಹಿದ. ಆದಿನ ವಿನಮಿ ಯನ್ನು ಬೀಳ್ಕೊಡಬೇಕೆಂದು ನಿಶ್ಚಯಿಸಿ, ಹಾಗೆ ಮಾಡುವ ಮುನ್ನ ನಮಿಯು ಬಂದು ತನ್ನನ್ನು ಕಾಣದೆ ಹೋದುದಕ್ಕಾಗಿ ಅವನನ್ನು ಆಕ್ಷೇಪಿಸಿದನು. ಚಕ್ರಿಯ ಸ್ನೇಹಿತರೂ ಅವನ ಉದ್ಧಟತನವನ್ನು ಎತ್ತಿ ಆಡಿದರು. ಆಗ ನಮಿಯ ಮಂತ್ರಿಯಾದ ಬುದ್ಧಿಸಾಗರನು ಎದ್ದು ನಿಂತು ' ದೇವರ ಅಪ್ಪಣೆ ಯಂತೆ ನಡೆದುಕೊಳ್ಳಲು ಸಿದ್ಧರಾಗಿದ್ದೇವೆ. ತಾವು ವಿಜಯಾರ್ಧ ಪರ್ವತ ವನ್ನು ದಾಟಿ ಹೋಗುವ ಹೊತ್ತಿಗೆ ನಮ್ಮ ಅರಸು ತಮ್ಮನ್ನು ಬಂದು ಕಾಣು ವಂತೆ ನಾನು ಏರ್ಪಡಿಸುವೆನು ' ಎಂದು ಅಭಿವಚನವಿತ್ತನು. ವಿನಮಿಯೂ ಇದಕ್ಕೊಪ್ಪಿದನು. ಇಬ್ಬರೂ ಭರತನನ್ನು ಬೀಳ್ಕೊಂಡು ಹಿಂದಿರುಗಿದರು. ಹೋಗುತ್ತಾ ದಾರಿಯಲ್ಲಿ ' ಸುಭದ್ರಾದೇವಿಯನ್ನು ಕೊಡದಿದ್ದರಾಗುತ್ತದೆಯೆ ? ಈ ಚಕ್ರಿ ಸುಮ್ಮನೆ ಬಿಟ್ಟಾನೆ ? ಏನಾದರೂ ಮಾಡಿ ನಮಿಯನ್ನು ಒಡಂಬಡಿಸ ಬೇಕು ' ಎಂದು ಪರಸ್ಪರ ಮಾತನಾಡಿಕೊಂಡರು. ಇತ್ತ ಭರತನು ತನ್ನ ಸ್ನೇಹಿತರು ಅವರನ್ನು ಆಕ್ಷೇಪಿಸಿ ಅಂಜಿಸಿದುದಕ್ಕೆ ಮೆಚ್ಚಿ ಅವರಿಗೆ ಉಚಿತ ವಾದ ಮನ್ನಣೆಯನ್ನು ಸಲ್ಲಿಸಿದನು.

ಇಷ್ಟು ಹೊತ್ತಿಗೆ ತಮಿಸ್ರಗುಹೆಯ ಬೆಂಕಿ ಆರಿತು. ಆ ಗುಹೆಯ ಹೊಲಬನ್ನರಿತ ಕೃತಮಾಲನನ್ನು ಸೇನಾಪತಿಯೊಡನೆ ಕಳುಹಿ ದಾರಿಯ

ನ್ನೆಲ್ಲಾ ಸುಗಮವಾಗಿ ಮಾಡಿಸಿದ್ದಾಯಿತು. ಅನಂತರ ಪರಿವಾರ ಸಮೇತನಾಗಿ ಗುಹೆಯನ್ನು ಪ್ರವೇಶ ಮಾಡಿದನು. ದಟ್ಟವಾದ ಕತ್ತಲೆಗವಿದಿದ್ದ ಆ ಗುಹೆಯಲ್ಲಿ ಕಾಕಿಣಿ ರತ್ನದಿಂದ ಗೋಡೆಯ ಮೇಲೆ ಗಾವುದಕ್ಕೊಂದು ಸೂರ್ಯ ಚಂದ್ರರನ್ನು ಬರೆದು, ಅದರ ಬೆಳಗಿನಲ್ಲಿ ಸಲೀಸಾಗಿ ಸೈನ್ಯವೆಲ್ಲಾ ಸಾಗಿತು. ಗುಹೆಯ ಮಧ್ಯದಲ್ಲಿ ಸಿಂಧುನದಿ ಇಬ್ಭಾಗವಾಗಿ ಹರಿಯುತ್ತಿತ್ತು. ಒಂದರ ಹೆಸರು ನಿಮಗ್ನ, ಮತ್ತೊಂದು ಉನ್ಮಗ್ನ. ನಿಮಗ್ನದಲ್ಲಿ ಬೆಂಡುಬಿಟ್ಟರೂ ಮುಳಗಿ ಹೋಗುವುದು. ಉನ್ಮಗ್ನದಲ್ಲಿ ಗುಂಡುಬಿದ್ದರೂ ಚಂಡಿನಂತೆ ಪುಟ ನೆಗೆಯುವುದು. ಸೇನಾನಿ ಅವುಗಳಿಗೆ ಸೇತುವೆಕಟ್ಟಿ ಸುಗಮವಾಗಿ ಮಾಡಿದ್ದನು. ಭರತನು ಪರಿವಾರದೊಡನೆ ಅದನ್ನು ಸರಾಗವಾಗಿ ದಾಟಿ ಉತ್ತರದ ಕವಾಟದ ಮೂಲಕ ಗುಹೆಯನ್ನು ದಾಟಿದನು.

ಭರತನ ಸೈನ್ಯವು ಬಯಲಿಗೆ ಬರುತ್ತಿದ್ದಂತೆಯೇ ಎಂದೂ ಕಂಡರಿಯದ ಕಷ್ಟವೊಂದು ಪ್ರಾಪ್ತವಾಯಿತು. ಚಿಲಾತ, ಆವರ್ತರೆಂಬ ಉತ್ತರಖಂಡದ ರಾಜರಿಬ್ಬರು ಭರತನ ಬರವನ್ನು ಕಂಡು ಭಯದಿಂದ ಅವನನ್ನು ನಿಗ್ರಹಿಸುವಂತೆ ತಮ್ಮ ಕುಲದೈವಗಳಾದ ಕಾಲಮುಖ, ಮೇಘಮುಖರನ್ನು ಪ್ರಾರ್ಥಿಸಿದರು. ಆ ದೇವತೆಗಳ ಪ್ರಭಾವದಿಂದ ಆಕಾಶವೆಲ್ಲಾ ಆನೆಯ ಹಿಂಡಿನಂತೆ ಮೋಡಗಳಿಂದ ತುಂಬಿ ಹಗಲಿನಲ್ಲೇ ಕಗ್ಗತ್ತಲು ಕವಿಯಿತು. ಅಂಬರವೇ ಬಾಯ್ತೆರೆದು ಉಗುಳುತ್ತಿರುವುದೋ ಎನ್ನುವಂತೆ ತೆಂಗಿನ ಮರಗಳ ತೋರ ಧಾರೆಗಟ್ಟಿ ಮಳೆ ಸುರಿಯಿತು. ತಗ್ಗುದಿನ್ನೆಗಳೆಲ್ಲಾ ಏಕವಾಗುವಂತೆ ಮಡುಗಟ್ಟಿ ನೀರು ನಿಂತಿತು. ಆದರೂ ಮಳೆ ಸುರಿಯುತ್ತಲೇ ಇದೆ. ಆಗ ಭರತನು ಛತ್ರರತ್ನವನ್ನು ಅಂಬರಕ್ಕೆ ಹರಹಿಸಿದನು. ನೆಲಕ್ಕೆ ಚರ್ಮರತ್ನವನ್ನು ಹಾಸಿಸಿದನು. ಚಕ್ರರತ್ನ, ಕಾಕಿಣಿ ರತ್ನಗಳ ಕಾಂತಿಯಿಂದ ಕತ್ತಲನ್ನು ಹೋಗಲಾಡಿಸಿದನು. ಮೂವತ್ತಾರು ಗಾವುದ ಅಗಲ ನಲವತ್ತೈಂಟು ಯೋಜನ ಉದ್ದ ವಿಸ್ತಾರವಾವ ಸುರಕ್ಷಿತ ಪ್ರದೇಶವಲ್ಲಿ ಪರಿವಾರವು ಸುಕ್ಷೇಮದಿಂದಿತ್ತು. ಹಡಗಿನಲ್ಲಿ ಕುಳಿತು ಸಮುದ್ರವನ್ನು ನೋಡುವ ವ್ಯಾಪಾರಿಯಂತೆ ಭರತ ರಾಜನು ನಿರ್ಭೀತನಾಗಿ ಈ ಅಕಾಲ ವರ್ಷವನ್ನು ನೋಡುತ್ತಿದ್ದನು. ಆತನ ಮನಸ್ಸಿನಲ್ಲಿ ಇದು ಯಾವುದೋ ದುಷ್ಟದೈವಗಳ ಕೆಟ್ಟಚೇಷ್ಟೆಯಿರಬೇಕೆಂದು

ಸಂದೇಹ ಮೂಡಿತು. ತಲೆಯೆತ್ತಿ ಮೇಲೆ ನೋಡುತ್ತಾನೆ — ಮೇಘಮುಖ, ಕಾಲಮುಖರು ತಮ್ಮ ಅನುಚರರೊಡನೆ ಸಾಲಾಗಿ ನಿಂತಿದ್ದಾರೆ! ಒಡನೆಯೇ ಸೇನಾನಿಯಾದ ಜಯನಿಗೆ ಅಪ್ಪಣೆ ಮಾಡಿದನು. ಆತನು ವಿಮಾನದಲ್ಲಿ ಆಕಾಶಕ್ಕೆ ನೆಗೆದು ದುಷ್ಟದೈವಗಳನ್ನೆಲ್ಲಾ ಕಾಗೆಗಳನ್ನು ಬಡಿದೋಡಿಸುವಂತೆ ಹೊಡೆದು ಅಟ್ಟಿದನು. ಇದನ್ನು ಕಂಡು ಚಿಲಾತ, ಆವರ್ತರು ಓಡಿಹೋಗಿ ಅವಿತುಕೊಳ್ಳಲು ಯತ್ನಿಸಿದರು. ಆದರೆ ಜಯರಾಜನ ಬಳಿಯಲ್ಲಿ ಅವರ ಬೇಳೇಕಾಳು ಬೆಂದೀತೇ? ಅವರಿಬ್ಬರನ್ನೂ ಹಿಡಮುರಿಗೆ ಕಟ್ಟಿ ಹಿಡಿತಂದನು. ಅವರ ಸುದ್ದಿಯನ್ನೆಲ್ಲಾ ಕೇಳಿ ಭರತನಿಗೆ ಬಹುಕೋಪ ಬಂತು. ತನ್ನ ಹಡಪಿಗರಿಗೆ ಅವರ ಮುಕುಟವನ್ನು ಎಡಗಾಲಿನಿಂದ ಒದ್ದು ಕೆಡಹುವಂತೆ ಆಜ್ಞಾಪಿಸಿದನು. ಅವರಿಗಾದ ಶಿಕ್ಷೆಯನ್ನು ಕಂಡು ಬೆದರಿ ವ್ಯಂತರರಾಜರೆಲ್ಲರೂ ಬಂದು ಚಕ್ರಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ಆತನ ಕೈಂಕರ್ಯವನ್ನು ಸ್ವೀಕರಿಸಿದರು.

ರಾಜನು ಅಲ್ಲಿಯೇ ಕೆಲವುಕಾಲ ತಂಗಿದ್ದು ಮುಂದಕ್ಕೆ ಪ್ರಯಾಣ ಬೆಳಸಿದನು. ದಾರಿಯಲ್ಲಿ ಸಿಂಧುದೇವಿ ಗಂಗಾದೇವಿಯರು ಸೋದರ ವಾತ್ಸಲ್ಯದಿಂದ ಆತನನ್ನು ಆದರಿಸಿ, ಹರಸಿ ಬೀಳ್ಕೊಟ್ಟರು. ಭರತನು ಪೂರ್ವ ಪಶ್ಚಿಮ ಖಂಡಗಳನ್ನು ಜಯಿಸಿ ನಡುವಣ ಖಂಡದ ನಟ್ಟನಡುವೆ ಇದ್ದ ವೃಷಭಾದ್ರಿಗೆ ಬಂದನು. ಚಕ್ರವರ್ತಿಗಳಾದವರೆಲ್ಲರೂ ಆ ಪರ್ವತದ ಮೇಲೆ ತಮ್ಮ ಅಂಕಮಾಲೆಯನ್ನು ಬರೆಸಬೇಕು. ಹಿಂದಿನ ಚಕ್ರವರ್ತಿಗಳ ಅಂಕಮಾಲೆಯಿಂದ ತುಂಬಿ ಹೋಗಿದ್ದುದರಿಂದ ಭರತನಿಗೆ ಬರೆಸಲು ಅಲ್ಲಿ ತೆರಪೇ ಇರಲಿಲ್ಲ. ಆಗ ಆತನು ದಂಡರತ್ನದಿಂದ ಒಂದು ಶಾಸನವನ್ನು ಅಳಿಸಿ ಕಾಕಿಣೀರತ್ನದಿಂದ ತನ್ನ ಶಾಸನವನ್ನು ಕೆತ್ತಿಸಿದನು. ಈ ಮಜಲಿನಲ್ಲಿ ಎರಡು ಸಹಸ್ರ ಮಾಂಡಲಿಕರ ಹೆಣ್ಣು ಮಕ್ಕಳನ್ನು ಒಂದೇ ಹಸೆಯಲ್ಲಿ ಮದುವೆಯಾದನು.

ಅತ್ತ, ನಮಿಯನ್ನು ಕರೆತರುವೆನೆಂದು ಹೇಳಿ ಹಿಂದಿರುಗಿದ್ದ ವಿನಮಿ ಆತ್ಮೀಯರ ಹಿತವಚನಗಳಿಂದ ಅಣ್ಣನ ಮನಸ್ಸನ್ನು ತಿರುಗಿಸಲು ಪ್ರಯತ್ನಿಸಿ

ದನು. ನಮಿ ಅವರ ಒತ್ತಾಯಕ್ಕೆ ಕಟ್ಟುಬಿದ್ದು ತಂಗಿಯಾದ ಸುಭದ್ರೆಯನ್ನು ಭರತನಿಗೆ ಕೊಡಲೊಪ್ಪಿದರೂ, ಅವನಿದ್ದೆಡೆಗೆ ಹೋಗಿ ಹೆಣ್ಣೊಪ್ಪಿಸಿ ಬರಲು ಆ ಕ್ಷತ್ರಿಯ ವೀರನ ಮನಸ್ಸು ಒಪ್ಪಲಿಲ್ಲ. ಹೆಣ್ಣು ಬೇಕಾದವನು ಹೆಣ್ಣಿದ್ದೆಡೆಗೇ ಬರಬೇಕು ಎಂಬ ಮಗನ ವಾದಸರಣಿಯನ್ನು ಕಂಡು, ಯಶೋಭದ್ರಾದೇವಿ ಮಗಳನ್ನು ಕೊಂಡೊಯ್ದು ಭರತನಿಗೆ ವಿವಾಹ ಮಾಡಿಕೊಟ್ಟು ಬರದಿದ್ದರೆ ತಾನು ಕೈಲಾಸಗಿರಿಗೆ ಹೋಗಿ ತಪವನ್ನು ಕೈಕೊಳ್ಳುವುದಾಗಿ ಹೆದರಿಸಿ ನೋಡಿದಳು. ನಮಿಗೂ ರೇಗಿತು. ' ಗೌರವ ತಪ್ಪಿ ಬಾಳುವ ಸಿರಿಗಿಂತ ಜಿನದೀಕ್ಷೆಯೇ ಲೇಸು. ನೀವು ಮಗಳನ್ನು ಅಳಿಯನಿಗೆ ಕೊಟ್ಟು ವಿಲಾಸದಿಂದ ಬಾಳಿರಿ. ನಾನು ತಪೋವನಕ್ಕೆ ಹೋಗುತ್ತೇನೆ' ಎಂದು ನೊಂದು ನುಡಿದನು. ಸೇರಿಗೆ ಸವ್ವಾಸೇರಾದ ಮಗನನ್ನು ಕಂಡು ಯಶೋಭದ್ರಾದೇವಿ ಅಳುಕಿದಳು. ಚಕ್ರಿ ಕನ್ನೆಯಿದ್ದಲ್ಲಿಗೇ ತನ್ನ ಜನರನ್ನು ಕಳುಹಿ ತಾಳಿಬಂದಿ ಕಟ್ಟಿಸುವೆನೆಂದು ನಂಬುಗೆ ಇತ್ತಳು. ನಮಿಯೂ ತನ್ನ ನಿಶ್ಚಯವನ್ನು ಸ್ವಲ್ಪ ಸಡಿಲಿಸಿ ಹಾಗಾದಲ್ಲಿ ತಂಗಿಯನ್ನು ಕೊಂಡೊಯ್ದು ಲಗ್ನಮಾಡಿ ಕೊಡುವುದಾಗಿ ಒಪ್ಪಿದನು. ಯಶೋಭದ್ರೆಯು ಜಾಣೆಯಾದ ಮಧುವಾಣಿಯೆಂಬ ಮೇಳದವಳೊಡನೆ ಹೇಳಿ ಕಳುಹಿ ಚಕ್ರವರ್ತಿಯನ್ನೂ ಈ ತೀರ್ಮಾನಕ್ಕೆ ಒಪ್ಪಿಸಿದಳು. ಉಂಗುರುಡಿಗೆ ಶಾಸ್ತ್ರ, ಅನಂತರ ಲಗ್ನ—ಇವು ಸಾಂಗವಾಗಿ ನೆರವೇರಿದುವು. ನಮಿಯೇ ಮುಂದೆ ನಿಂತು ವಿಜೃಂಭಣೆಯಿಂದ ಲಗ್ನಕಾರ್ಯಗಳನ್ನು ನೆರವೇರಿಸಿದನು. ಇಷ್ಟೇ ಅಲ್ಲ. ಹೊನ್ನ ಪುತ್ತಳಿಯಂತಿರುವ—ಮಿಂಚಿನ ಮರಿಗಳಂತಿರುವ— ತನ್ನ ಐನೂರು ಸುಕುಮಾರಿಯರನ್ನು ಭರತನ ಮಕ್ಕಳಿಗೆ ಲಗ್ನ ಮಾಡಿಕೊಟ್ಟು ಕೃತಕೃತ್ಯನಾದನು. ಭರತನೂ ತನ್ನ ಐನೂರು ಹೆಣ್ಣು ಮಕ್ಕಳನ್ನು ನಮಿ-ವಿನಮಿಗಳ ಮಕ್ಕಳಿಗೆ ಕೊಟ್ಟು ಲಗ್ನ ಮಾಡಿದನು. ಇಲ್ಲಿಗೆ ಭರತರಾಜನ ಹತ್ತು ಸಹಸ್ರ ವರ್ಷಗಳ ಜೈತ್ರಯಾತ್ರಾ ಪ್ರಕರಣವು ಮುಗಿಯಿತು. ಹಲವು ಕಾಲ ಅಲ್ಲಿ ಸುಖವಾಗಿದ್ದು ಅನಂತರ ರಾಜಧಾನಿಯ ಕಡೆ ಹಿಂದಿರುಗಿದ. ದಾರಿಯಲ್ಲಿದ್ದ ಕೈಲಾಸಗಿರಿಯ ಬಳಿ ಬೀಡು ಬಿಡಿಸಿ, ಸತಿ ಪುತ್ರರೊಡನೆ ಆ ಪರ್ವತವನ್ನೇರಿ ಅಲ್ಲಿದ್ದ ಜಿನನಾಥನನ್ನು ಅನನ್ಯ ಭಕ್ತಿಯಿಂದ ಭಜಿಸಿ ಪೂಜಿಸಿ ಮುಂದೆ ಹೊರಟನು. ಮಗನು ಚಕ್ರವರ್ತಿಯಾಗಿ ಹಿಂದಿರುಗುವ ಸುದ್ದಿಯನ್ನು ಕೇಳಿ ಯಶಸ್ವತೀದೇವಿಯು ಮಗನನ್ನು ಕಾಣುವ

ತವಕದಿಂದ ವಿಮಾನವೇರಿ ಬಂದು, ಅಸಂಖ್ಯಾತವಾಗಿ ಬೆಳೆದಿದ್ದ ಆತನ ಸಂಸಾರವನ್ನು ಕಂಡು ಹಿರಿಹಿರಿ ಹಿಗ್ಗಿದಳು.

ಊರಿಗೆ ಹಿಂದಿರುಗಿ ಬರುತ್ತಿರುವಾಗ ದಾರಿತೋರುತ್ತಾ ಮುಂದೆ ಹೋಗುತ್ತಿದ್ದ ಚಕ್ರ ಪೌದನಪುರದ ಬಳಿ ಇದ್ದಕ್ಕಿದ್ದಂತೆಯೇ ನಿಂತು ಹೋಯಿತು. ಭರತಾನುಜನಾದ ಬಾಹುಬಲಿ ಆ ಪುರಕ್ಕೆ ಅಧಿಪತಿ. ಆತನು ತಮ್ಮಂದಿರೊಡನೆ ಬಂದು ಚಕ್ರವರ್ತಿಗೆ ಆನತನಾದ ಹೊರತು ಚಕ್ರ ಮುಂದಕ್ಕೆ ಉರುಳುವಂತಿಲ್ಲ. ಆದುದರಿಂದ ಭರತನು ತಮ್ಮಂದಿರಿಗೆಲ್ಲಾ ಓಲೆಗಳನ್ನ ಟ್ಟ ದನು. ಅದನ್ನು ಓದಿಕೊಂಡ ತಮ್ಮಂದಿರು ' ತಂದೆ ಕೊಟ್ಟ ಉಂಬಂಳಿಯೊಳ ಗಿರುವ ತಾವು ಈತನಿಗೇಕೆ ಆನತರಾಗಿ ಬಾಳಬೇಕೆಂದು ಬಗೆದು ಕೈಲಾಸ ಗಿರಿಗೆ ಹೋಗಿ ತಂದೆಯ ಬಳಿಯಲ್ಲಿ ದೀಕ್ಷೆತಾಳಿ ತಪೋನಿರತರಾದರು. ಬಾಹುಬಲಿಯೊಬ್ಬನು ಮಾತ್ರ ಅಣ್ಣನ ಮೇಲೆ ಸೆಡೆದು ನಿಂತನು. ಆತನನ್ನು ದಾರಿಗೆ ತರಲು ಚಕ್ರಿ ಸಾಮೋಪಾಯಕ್ಕೆ ಕೈಹಾಕಿ, ವಚನ ಚತುರನಾದ ದಕ್ಷಿಣನನ್ನು ಆತನಲ್ಲಿಗೆ ಕಳುಹಿದನು. ಆತನು ಅಭಿನವ ಮದನನಾದ ಬಾಹುಬಲಿಯ ಬಳಿ ಸೇರಿ ' ಚಕ್ರವರ್ತಿಯಾದ ಭರತನಿಗೆ ತನ್ನ ತಮ್ಮನನ್ನು ಕಣ್ತುಂಬ ಕಾಣುವ ಆರ್ತಿಯಾಗಿದೆ. ಜಗತ್ಪ್ರಸಿದ್ಧರಾದ ನೀವಿಬ್ಬರೂ ಒಂದೆಡೆ ಸೇರಿರುವುದನ್ನು ಕಂಡು ತನ್ನ ಕಣ್ಣ ಹಬ್ಬವನ್ನು ನೆರವೇರಿಸಲು ಪಡೆಯೆಲ್ಲವೂ ಉತ್ಸಾಹ ಪಡುತ್ತಿದೆ. ಚಕ್ರವರ್ತಿ ದೂರದಲ್ಲಿಯೂ ಇಲ್ಲ; ನಿನ್ನ ಊರ ಬಾಗಿ ಲಲ್ಲಿಯೇ ಉತ್ಸುಕನಾಗಿ ನಿಂತಿದ್ದಾನೆ. ಜಗತ್ತನ್ನೇ ಜಯಿಸಿ ಹಿಂದಿರುಗುತ್ತಿ ರುವ ನಿನ್ನ ಹಿರಿಯಣ್ಣನನ್ನು ಬಂದು ಮರ್ಯಾದೆಯಿಂದ ಕಾಣಬೇಕಾದುದು ನಿನ್ನ ಕರ್ತವ್ಯ' ಎಂದು ಸನಿನುಡಿಯಿಂದ ನುಡಿದನು. ಆದರೆ ಈ ಬಿಂಕದ ಮಾತುಗಳಿಗೆ ಬಾಹುಬಲಿ ದಕ್ಕುವವನಲ್ಲ. ಅವುಗಳಿಗೆ ತಕ್ಕ ಕೊಂಕುನುಡಿ ಗಳನ್ನು ಹವಣಿಸಿ ಪ್ರತ್ಯುತ್ತರ ಕೊಟ್ಟು ಕಳುಹಿಸಿದ. ಅಣ್ಣತಮ್ಮಂದಿರಲ್ಲಿ ಪರಸ್ಪರ ಕಲಹ ಅನಿವಾರ್ಯವಾದಂತೆ ಕಾಣಿಸಿತು. ಬಾಹುಬಲಿಯ ಮನಸ್ಸನ್ನು ತಿರುಗಿಸಬೇಕೆಂದು ಭರತನ ಮಂತ್ರಿ ಸಾಮಂತರು ನಡೆಸಿದ ಪ್ರಯತ್ನವೂ ನಿಷ್ಫಲವಾಯಿತು. ಆತನು ಬಲವನ್ನು ಸಜ್ಜುಗೊಳಿಸಲು ನಿರತನಾಗಿದ್ದನು.

ಕೇಳಿ ಭರತನು ಮನದಲ್ಲಿ ಮಿಡುಕಿದನು, ತಮ್ಮನ ಮೇಲೆ ಕೈಮಾಡಬೇಕಲ್ಲಾ ಎಂದು.

ಅದೇ ದಿನ ರಾತ್ರಿ ಭರತನು ನಿದ್ರೆಯಿಲ್ಲದೆ ಪರಮಾತ್ಮಯೋಗದಲ್ಲಿ ತತ್ಪರನಾಗಿ ಕುಳಿತಿದ್ದಾನೆ. ಸುತ್ತಲೂ ಪ್ರಕೃತಿ ಪ್ರಶಾಂತವಾಗಿರುವ ಹೊತ್ತು. ಪಡೆಯೆಲ್ಲವೂ ನಿದ್ರಿಸುತ್ತಿದೆ. ಅವರೊಳಗೆ ಇಬ್ಬರು ಪಡೆವಳರು ಗುಜು ಗುಜು ಮಾತನಾಡುತ್ತಿರುವ ಸದ್ದು ಚಕ್ರಿಯ ಕಿವಿಗೆ ಕೇಳಿಸಿತು. ಹಾಗೆಯೇ ಆಲಿಸಿ ಕೇಳಿದನು, ಅವರಾಡುವ ಮಾತನ್ನು : " ಪಡೆಯ ಸಹಾಯದಿಂದ ಚಕ್ರಿಗೆ ಘನತೆಯೇ ಹೊರತು, ಅದಿಲ್ಲದಿದ್ದರೆ ಇವನೂ ನಮ್ಮಂತೆ ಮನುಷ್ಯ ಮಾತ್ರ " ಎಂದ ಒಬ್ಬ. " ಅಷ್ಟಲ್ಲದೆ ಏನು. ಹಸಿಗೂಡಿ ಹಳ್ಳ. ನಾರೊಡಗೂಡಿ ಹಗ್ಗ." ಎಂದ ಮತ್ತೊಬ್ಬ. ಅವರ ನುಡಿಗೇಳಿ ಚಕ್ರವರ್ತಿಗೆ ತನ್ನ ಪರಾಕ್ರಮವನ್ನು ಸ್ವಲ್ಪ ಪ್ರದರ್ಶಿಸಬೇಕೆಂದು ಮನಸ್ಸಾಯಿತು. ಬೆಳಿಗ್ಗೆ ಓಲಗವನ್ನು ನೆರಹಿ, ತನ್ನ ಕಿರುಬೆರಳಿನ ನರಬಿಗಿದು ಡೊಂಕಾಗಿದೆಯೆಂದು ಹುಸಿಯಾಟವನ್ನು ಹೂಡಿದ. ಮುಖವನ್ನು ಸಪ್ಪಗೆ ಮಾಡಿಕೊಂಡು ನೋವನ್ನು ನಟಿಸಿದ. ಯಂತ್ರತಂತ್ರಗಳಾವುವೂ ಸಫಲವಾಗಲಿಲ್ಲ. ನೆಟ್ಟಗೆಯನ್ನು ತೆಗೆದು ಸರಿಮಾಡಬಹುದೆಂದು ಜಟ್ಟಿಗಳು ಪ್ರಯತ್ನಿಸಿದರು. ಅವರ ಬಲ ಸಾಲದೆಂದು ಕಂಡುಬಂದಿತು. ಬಂಗಾರದ ದೊಡ್ಡ ಸರಪಳಿಯೊಂದನ್ನು ವಿಶ್ವಕರ್ಮನಿಂದ ತಯಾರಿಸಿ ಅದರ ಕೊನೆಯನ್ನು ಕೊಂಕಿದ್ದ ಕಿರುಬೆರಳಿಗೆ ಸಂಧಿಸಿ, ತೇರಿನ ಮಿಳಿಯನ್ನು ಹಿಡಿದುಕೊಳ್ಳುವಂತೆ ಉಳಿದ ಸರಪಳಿಯನ್ನೆಲ್ಲಾ ಹಿಡಿದು, ಹಿಗ್ಗುವಂತೆ ಇಡೀ ಸೈನ್ಯಕ್ಕೇ ಅಪ್ಪಣೆಕೊಟ್ಟ. ಗಾವುದ ಗಾವುದ ಅಳತೆಯುದ್ದ ನಿಂತಿದ್ದ ಸೈನ್ಯ ಹಿಡಿದು ಎಳೆದರೂ ಬೆರಳು ಕದಲ ವಲ್ಲದು. ರಾಜನು ಒಮ್ಮೆ ಬೆರಳನ್ನು ತುಯ್ದುದಕ್ಕೇ ಹಯ ಗಜ ರಥ ಪದಾತಿಗಳೊಡನೆ ಕೂಡಿದ ಸೈನ್ಯ ಹೊಟ್ಟೆ ಮೇಲಾಗಿ ಕೆಳಗೆ ಬಿದ್ದಿತು. ಆಗ ಗೊತ್ತಾಯಿತು ಗೊಣಗಿದವರಿಗೆ ; ಭರತನ ಶಕ್ತಿ ಎಷ್ಟೆಂದು; ಬೆಟ್ಟವನ್ನೇ ಆಣೆಕಲ್ಲಾಡಬಲ್ಲ ಆತನ ಶಕ್ತಿಯ ಮುಂದೆ ಹುಲುಮಾನವರಾದ ತಾವು ಎಷ್ಟೆಂದು. ರಾಜನು ಮುಗುಳ್ನಗೆ ನಗುತ್ತಾ ಎಡಗೈಯಿಂದ ಕಿರುಬೆರಳನ್ನೊತ್ತಿಕೊಂಡು ' ಗುರುಹಂಸ ನಾಥಾಯ ಸ್ವಾಹಾ ' ಎಂದ. ಬೆರಳು

ನೆಟ್ಟಗಾಯ್ತು. ಬಿದ್ದು ನೊಂದ ಪಡೆಗೆ ಬಂಗಾರದ ಸರಪಳಿಯನ್ನೆಲ್ಲಾ ಕಡಿಸಿ, ಹಂಚಿಕೊಟ್ಟು, ಅದನ್ನು ಆನಂದಗೊಳಿಸಿದ.

ಮರುದಿನ ಬಾಹುಬಲಿ ಸರ್ವಸನ್ನಾಹದೊಡನೆ ದಂಡೆತ್ತಿ ಬಂದ, ಅದನ್ನು ಕಂಡು ಇತ್ತಂಡದ ಮಂತಿ ಮಿತ್ರರೂ ಒಟ್ಟಿಗೆ ಕಲೆತು, ವಜ್ರದೇಹಿ ಗಳಾದ ಈ ಸೋದರರ ಕಾದಾಟದಿಂದ ಅಕಾಲಪ್ರಳಯವಾಗುವುದೆಂದು ಯೋಚಿಸಿ, ಇಬ್ಬರನ್ನೂ ಜಲಯುದ್ಧ, ದೃಷ್ಟಿಯುದ್ಧ, ಮಲ್ಲಯುದ್ಧಗಳಿಂದ ಗೆಲುವನ್ನು ನಿಶ್ಚಯಿಸುವಂತೆ ಪ್ರಾರ್ಥಿಸಿದರು. ಅವರೂ ಒಪ್ಪಿದರು. ದೊರೆ ಗಳಿಬ್ಬರೇ ಯುದ್ಧಮಾಡುವರೆಂದೂ, ಷಡಂಗ ವಾಹಿನಿಗಳು ಕೇವಲ ಪ್ರೇಕ್ಷಕ ರಾಗಿರಬೇಕೆಂದೂ ಡಂಗುರ ಹೊಯ್ಸಿದರು. ಎಲ್ಲರೂ ಅತುಲಭುಜಬಲರಾದ ಈ ಅಣ್ಣ ತಮ್ಮಂದಿರ ಕಾಳಗವನ್ನು ಕಾಣುವ ಕುತೂಹಲದಿಂದ ಕಾದ್ರ ನಿಂತಿರಲು ಭುಜಬಲಿ ಕುಸ್ತಿಯ ಕಣವನ್ನು ಪ್ರವೇಶಿಸಿದನು. ಭೋರ್ಗರೆವ ವಾದ್ಯಧ್ವನಿಗಳ ಮಧ್ಯದಲ್ಲಿ ಭರತೇಶನೂ ಕಣವನ್ನು ಪ್ರವೇಶಿಸಿದ. ಆದರೆ ಕಾದುವ ಮುನ್ನ ತಮ್ಮನನ್ನು ಕುರಿತು "ಅಣ್ಣಯ್ಯ! ನಾವಿಬ್ಬರೂ ಒಡ ಹುಟ್ಟಿದವರು; ಜಿನಪುತ್ರರು. ಪರಸ್ಪರ ದ್ವೇಷಕ್ಕೆ ಯಾವುದೊಂದು ಕಾರ ಣವೂ ಕಾಣುತ್ತಿಲ್ಲ. ನಾನು ಮಾಡಿದ ಅಂತಹ ಮಹಾಪರಾಧವಾದರೂ ಏನು, ನಿನಗಿಷ್ಟು ಕೋಪ ಉಕ್ಕಿದುದಕ್ಕೆ? ನಾನೇನಾದರೂ ಒಂದು ಹಾಗದ ತೆರಿಗೆ ಬೇಕೆಂದು ನಿನ್ನ ಮನೆಯ ಬಾಗಿಲಿಗೆ ದೂತರನ್ನೇನಾದರೂ ಅಟ್ಟಿ ದೆನೆ? ಅವಮಾನಕರವಾದ ಯಾವುದಾದರೂ ಮಾತನ್ನು ನಾನಾಗಲಿ, ನನ್ನ ಪರಿವಾರದವರಾಗಲಿ ಆಡಿದ್ದೆವೆ? ನಾವು ಈಗ ಕೈಕೊಂಡಿರುವ ತುಚ್ಛಕಾರ್ಯ ಜಗತ್ತಿಗೆಲ್ಲಾ ದ್ರೋಹದ ಶಾಸನ ಬರೆದುಕೊಟ್ಟಂತಾಗುತ್ತದೆ. ಹೆದರಿ ನಾನು ಹೀಗೆ ಹೇಳುತ್ತಿರುವೆನೆಂದು ಭಾವಿಸಬೇಡ; ನೀನು ಬಾಹಪ್ಪಳಿಸುತ್ತಾ ನಿಂತಿ ರುವಾಗ ನನ್ನ ಕದನದ ಸವಿಯನ್ನು ನಿನಗೆ ತೋರಿಸುವುದಕ್ಕೂ ನಾನೇನೂ ಹಿಂಜರಿಯುವುದಿಲ್ಲ. ಆದರೂ ಹಿರಿಯನಾದ ನಾನು ನಿನಗೆ ಧರ್ಮವನ್ನು ಮೊದಲು ಬೋಧಿಸಿನೋಡಬೇಕಾದುದು ನನ್ನ ಕರ್ತವ್ಯ. ಹೋಗಲಿ, ಪರಸ್ಪರ ಒಬ್ಬರನ್ನೊಬ್ಬರು ಗೆದ್ದು ಸಾಧಿಸಬೇಕಾಗಿರುವ ಕೀರ್ತಿ ತಾನೇ ಏನು? ಬದಿಗರಂತೆ ನಾವು ಹೋರಾಡುವುದಕ್ಕಿಂತ ಅಧಮ ಕಾರ್ಯವಿನ್ನಿಲ್ಲ.

ಇಗೋ ನಾನು ಸೋತೆನೆಂದು ಒಪ್ಪಿಕೊಳ್ಳುತ್ತೇನೆ. ನಿನ್ನದೇ ಗೆಲುವು. ನಿನಗೆ ನನ್ನಲ್ಲಿ ಅಣ್ಣನೆಂಬ ಅಕ್ಕರೆಯಿಲ್ಲದಿದ್ದರೂ, ನನಗೆ ತಮ್ಮನೆಂಬ ಅಕ್ಕರೆ ತುಂಬಿದೆಯಪ್ಪ. ನೀನೇ ಚಕ್ರವರ್ತಿತ್ವವನ್ನು ಕೈಕೊಳ್ಳು. ನಿನ್ನ ಭಾಗ್ಯವನ್ನು ನಾನು ಕಣ್ಣುತುಂಬ ನೋಡಿ ಸಂತೋಷಿಸುತ್ತೇನೆ. ಎಲ್ಲಿಯಾದರೂ ಒಂದು ಚಿಕ್ಕ ರಾಜ್ಯವನ್ನು ನನಗೆ ಕೊಡು, ನಾನು ಸಂತೋಷದಿಂದ ಅದನ್ನು ಸ್ವೀಕರಿಸಿ ತೃಪ್ತನಾಗುತ್ತೇನೆ. ''

ಅಣ್ಣನ ವಚನಮಂತ್ರದಿಂದ ಭುಜಬಲಿಯ ಕೋಪದ ವಿಷ ಇಳಿದು ಹೋಯಿತು. ಗಂಡಗರ್ವವೆಲ್ಲಾ ಸೋರಿಹೋಯಿತು. ನಾಚಿಕೆಯಿಂದ ಅಣ್ಣನ ಮುಖವನ್ನು ಕೂಡ ನೋಡಲಾರದೆ ತಲೆತಗ್ಗಿಸಿದನು. ಅಣ್ಣನೊಡನೆ ಸ್ಪರ್ಧಿಸಿದ ಪಾಪಕ್ಕೆ ಜಿನದೀಕ್ಷೆಯೇ ತಕ್ಕ ಮದ್ದೆಂದು ನಿಶ್ಚಯಿಸಿ, ಅಣ್ಣನ ಪಾದಕ್ಕೆ ನಮಸ್ಕರಿಸಿ ನೇರವಾಗಿ ತಂದೆಯಾದ ಜಿನನ ಬಳಿಗೆ ನಡೆದು ದೀಕ್ಷೆಗೊಂಡು ತಪಸ್ಸಿನಲ್ಲಿ ನಿಂತನು. ಆಗ ಚಕ್ರ ಮುಂದುರುಳಿತು. ಭರತನು ಅಯೋಧ್ಯಾನಗರಿಯನ್ನು ಪ್ರವೇಶಿಸಿ ವೈಭವದಿಂದ ಚಕ್ರವರ್ತಿಪಟ್ಟವನ್ನು ವಹಿಸಿದನು. ಬಾಹುಬಲಿಗೆ ಘೋರವಾದ ತಪಸ್ಸಿನಿಂದಲೂ ಆತ್ಮಜ್ಞಾನವುಂಟಾಗದುದನ್ನು ಕಂಡು, ಭರತನು ತಂದೆಯಾದ ವೃಷಭಜಿನನಿಂದ ಅದರ ಕಾರಣ ವರಿತು, ತಕ್ಕ ನಿಷ್ಕೃತಿಯಿಂದ ಆತನ ಮನಃಕಷಾಯವನ್ನು ತೊಲಗಿಸಿ, ಆತ್ಮ ಶುದ್ಧಿಯನ್ನು ದೊರಕಿಸಿಕೊಟ್ಟನು.

ಅನಂತರ ಭರತ ಚಕ್ರವರ್ತಿ ಅಖಂಡ ಭೂಮಂಡಲಕ್ಕೆ ಚಕ್ರವರ್ತಿಯಾಗಿ ಅನಂತ ಸುಖಭೋಗಗಳನ್ನು ಅನುಭವಿಸುತ್ತಾ ಹಲವು ಕಾಲವನ್ನು ಕಳೆದ ಮೇಲೆ, ಆತನ ತಾಯಿಯಾದ ಯಶಸ್ವತೀದೇವಿ ಗುರುಗಳಿಂದ ದೀಕ್ಷೆಯನ್ನು ಪಡೆದು ಕಂತಿಯಾಗುತ್ತಾಳೆ. ಇಲ್ಲಿಂದ ಮುಂದೆ ಭರತನ ಮನಸ್ಸೂ ಆಮುಷ್ಮಿಕದ ಕಡೆ ಹೆಚ್ಚಾಗಿ ಬಾಗುತ್ತದೆ. ರಜತಾದ್ರಿಯಲ್ಲಿ ನಿರ್ಮಿಸಿದ್ದ ಜಿನನಿವಾಸದ ಮುಖವಸ್ತ್ರವನ್ನು ಬಹಳ ವಿಜೃಂಭಣೆಯಿಂದ ಅನಾವರಣಗೊಳಿಸಿ, ಮಹೋತ್ಸವವನ್ನು ನೆರವೇರಿಸುತ್ತಾನೆ. ಭರತನ ಮಕ್ಕಳಲ್ಲಿ ನೂರ್ವರು ವಿದ್ಯಾಗೋಷ್ಠಿಯಲ್ಲಿರುವಾಗ ಹಸ್ತಿನಪುರಪತಿಯಾದ ಮೇಘೇಶ್ವರನು ದೀಕ್ಷೆ

ಪಡೆದನೆಂಬ ಸುದ್ದಿಯನ್ನು ಕೇಳಿ ವಿರಾಗಹೊಂದಿ ಜಿನದೀಕ್ಷೆ ವಹಿಸಿ ಸಂನ್ಯಾಸಿ ಗಳಾಗುತ್ತಾರೆ. ಇದನ್ನು ಕೇಳಿ ವ್ಯಥಿತಾಂತಃಕರಣನಾದ ಭರತಚಕ್ರವರ್ತಿ ಸಮವಸರಣದಲ್ಲಿದ್ದ ಅವರ ಬಳಿಗೆ ಹೋಗಿ ತೀರ್ಥೇಶಪೂಜೆಯನ್ನು ನೆರವೇರಿ ಸುತ್ತಾನೆ. ಮರುದಿನವೇ ತಂದೆಯಾದ ಪ್ರಥಮ ತೀರ್ಥಂಕರನು ಮುಕ್ತ ನಾಗುತ್ತಾನೆ. ಆತನ ಮೋಕ್ಷ ಕಲ್ಯಾಣವನ್ನು ನೆರವೇರಿಸಿ ಹಿಂದಿರುಗಿದ ಭರತೇಶ್ವರನು ಒಮ್ಮೆ ಕನ್ನಡಿಯಲ್ಲಿ ತನಗೆ ನೆರೆಗೂದಲು ಬಂದಿರುವುದನ್ನು ಕಂಡು, ವೈರಾಗ್ಯ ಪರನಾಗಿ, ಮಗನಾದ ಅರ್ಕಕೀರ್ತಿಗೆ ಪಟ್ಟಗಟ್ಟಿ ಸ್ವಮಹತ್ವ ದಿಂದ ತೈಜಸ ಕಾರ್ಮಣ ತನುಗಳನ್ನು ಸುಟ್ಟು ಕೈವಲ್ಯ ಪದವಿಯನ್ನು ಪಡೆ ಯುತ್ತಾನೆ. ಇದನ್ನು ಕೇಳಿ ಅರ್ಕಕೀರ್ತಿಯೂ ಆತನ ತಮ್ಮಂದಿರೂ ದೀಕ್ಷೆ ಯನ್ನು ವಹಿಸಿ ಕ್ರಮವಾಗಿ ಮುಕ್ತಿಗೆ ಸಲ್ಲುತ್ತಾರೆ.

ಕಥೆಯ ಮೂಲ ಮತ್ತು ಬೆಳವಣಿಗೆ

ಭರತೇಶನ ಕಥೆ ಬಹಳ ಹಳೆಯದು. ಆತನು ತ್ರಿಷಷ್ಟಿಶಲಾಕಾಪುರುಷರಲ್ಲಿ ಒಬ್ಬನು; ಪ್ರಥಮ ಚಕ್ರಿ; ಆದಿತೀರ್ಥಂಕರ ವೃಷಭನಾಥನ ಹಿರಿಯ ಮಗ; ಚರಮಾಂಗ. ಆದುದರಿಂದ ಆದಿತೀರ್ಥಂಕರನ ಜೀವನಚರಿತ್ರೆಯ ಜೊತೆಯಲ್ಲಿ ಈತನ ವೃತ್ತಾಂತಕ್ಕೂ ಸ್ಥಾನವಿದೆ. ಕಾವ್ಯದ ಬಹು ಭಾಗವನ್ನು ಮುಮುಕ್ಷುವಾದ ಜಿನ ದೇವನಿಗೆ ಮೀಸಲಾಗಿರಿಸುವುದು ಸ್ವಾಭಾವಿಕ. ಆತನ ಜೀವನದ ಅಂಗವಾಗಿ ಚಕ್ರವರ್ತಿಯ ಚರಿತ್ರೆ ಬರುತ್ತದೆ, ಅಷ್ಟೆ. ಹೀಗಿರುವುದರಿಂದ ಭರತೇಶನ ಕಥೆಗೆ ಮೂಲವನ್ನು ಹುಡುಕುವಾಗ ಆದಿಜಿನನ ಕಥಾಮೂಲವನ್ನೇ ಬೆದಕಬೇಕು. ಜಿನರ ಜೀವನ ಚರಿತ್ರೆಗಳಿಗೆ ಜೈನರ ಧರ್ಮಸಾಹಿತ್ಯವೇ ಮೂಲವಾದ್ದರಿಂದ ಅವುಗಳ ವ್ಯವಸ್ಥೆಯನ್ನು ಕುರಿತು ಎರಡು ಮಾತುಗಳನ್ನು ಹೇಳುವುದು ಅವಶ್ಯವೆಂದು ತೋರುತ್ತದೆ.

ಉತ್ತರ ದೇಶದಲ್ಲಿ ಕ್ಷಾಮ ಬಂದು ಚಂದ್ರಗುಪ್ತ ಭದ್ರಬಾಹುಗಳು ತಮ್ಮ ಅನುಯಾಯಿಗಳೊಡನೆ ದಕ್ಷಿಣಕ್ಕೆ ಹೊರಟು ಬಂದಮೇಲೆ, ಮೂಲಸ್ಥಾನದಲ್ಲಿದ್ದ ಜೈನರಿಗೂ ವಲಸೆ ಬಂದ ಜೈನರಿಗೂ ತಮ್ಮ ಆಚರಣೆಗಳಲ್ಲಿ, ಸಂಪ್ರದಾಯಗಳಲ್ಲಿ ಕೆಲವು ವ್ಯತ್ಯಾಸಗಳು ತಲೆದೋರಿ, ಹಲವು ದಿನಗಳ ಆಚರಣೆಯಿಂದ ಅವುಗಳು ಅನುಲ್ಲಂಘನೀಯವಾದ ನಿಯಮಗಳಾದುವು. ಇಬ್ಬರ ದೃಷ್ಟಿಯಲ್ಲಿಯೂ ತಾವು ಸರಿ, ಉಳಿದವರು ತಪ್ಪು ಎಂಬ ನಂಬಿಕೆ ಬೇರೂರಿ, ಬೆಳೆದು, ಇಬ್ಬಣ ಅನಿವಾರ್ಯವಾಯಿತು. ಈ ಇಬ್ಬಣದಲ್ಲಿ ಒಂದು ದಿಗಂಬರ; ಮತ್ತೊಂದು ಶ್ವೇತಾಂಬರ. ತಮ್ಮ ಗ್ರಂಥಗಳ ವಿಚಾರದಲ್ಲಿ ಕೂಡ ಇಬ್ಬರಲ್ಲಿಯೂ ಸ್ವಲ್ಪಮಟ್ಟಿಗೆ ಮತಭೇದವಿದೆ. ಜೈನರಲ್ಲಿ ಅತ್ಯಂತ ಪುರಾತನ ಧರ್ಮಗ್ರಂಥಗಳಾದ ಪೂರ್ವಗಳನ್ನೂ ಅಂಗಗಳನ್ನೂ ಒಳಗೊಂಡ

ತಮ್ಮ ಧರ್ಮ ಸಾಹಿತ್ಯ ನಾಮಾವಶೇಷವಾಗಿ ಹೋಗಿದೆಯೆಂದು ದಿಗಂಬರರ ನಂಬಿಕೆ. ಆದ್ದರಿಂದ ಅವರು ಶ್ವೇತಾಂಬರರ ತತ್ಪಗ್ರಂಥಗಳನ್ನು ಪ್ರಮಾಣ ವೆಂದು ಸ್ವೀಕರಿಸುವುದಿಲ್ಲ. ಆದರೆ ಶ್ವೇತಾಂಬರರ ಮತದಂತೆ ಜೈನರ ಧರ್ಮ ಸಾಹಿತ್ಯಕ್ಕೆ ಮೂಲ ಅಂಗಗಳು. ಇವುಗಳಲ್ಲಿ ಪೂರ್ವಗಳೂ ಸೇರಿವೆ. ಹನ್ನೆ ರಡು ಅಂಗಗಳಾಗಿ ಇವುಗಳು ಕ್ರಿ. ಶ. ೪೫೪ರಲ್ಲಿ ಗ್ರಂಥರೂಪವನ್ನು ತಾಳಿದವು. ಅದಕ್ಕೆ ಮೊದಲು ಬ್ರಾಹ್ಮಣರ ವೇದಗಳಂತೆ ಜೈನರ ಅಂಗಗಳೂ ಬಾಯಿಂದ ಬಾಯಿಗೆ ಹರಿದು ಬರುತ್ತಿದ್ದುವು. ಕಾಲಕ್ರಮೇಣ ಈ ವಿಪುಲ ಸಾಹಿತ್ಯ ಬಾಯಿಯಲ್ಲಿ ನಿಲ್ಲದೆ ಖಿಲವಾಗಿ ಹೋಗಬಹುದೆಂಬ ಹೆದರಿಕೆಯಿಂದ ಕ್ರಿ. ಶ. ೪೫೪ರಲ್ಲಿ ವಲ್ಲಭಿಯಲ್ಲಿ ಜೈನರ ಸಭೆ ನಡೆದು, ದೇವರ್ಧಿಯೆಂಬ ಜಿನಮುನಿಯ ಅಧ್ಯಕ್ಷತೆಯಲ್ಲಿ ಅಂಗಗಳು ನಿರ್ದಿಷ್ಟರೂಪವನ್ನು ತಾಳಿದುವು.

ಮೇಲಿನ ಅಲ್ಲ ಅಹುದುಗಳ ವಾದ ನಮಗೆ ಅನಾವಶ್ಯಕ. ಅವು ಪ್ರಮಾಣವಿರಲಿ, ಬಿಡಲಿ; ಹನ್ನೆರಡು ಅಂಗಗಳು ಜೈನರ ಧರ್ಮ ಸಾಹಿತ್ಯದಲ್ಲಿ ಪ್ರಾಚೀನತಮವೆಂಬುದಂತು ನಿರ್ವಿವಾದ. ಇವುಗಳಲ್ಲಿ ಹನ್ನೆರಡನೆಯ ದಾದ ದಿಟ್ಠವಾಯಾಂಗದಲ್ಲಿ ಜಿನನ ಜೀವನಚರಿತ್ರೆ ಬೀಜರೂಪವಾಗಿ ಸಿಕ್ಕು ತ್ತದೆ. ಈ ಅಂಗದ ಒಂದು ಭಾಗವಾದ ಭದ್ರಬಾಹುವಿನ ಕಲ್ಪಸೂತ್ರದಲ್ಲಿ ಪ್ರಥಮ ತೀರ್ಥಂಕರನನ್ನು ಕುರಿತು ಇಷ್ಟುಮಾತ್ರ ತಿಳಿದು ಬರುತ್ತದೆ. [1]

ಕೋಸಲೀಯನಾದ ಋಷಭ, ಸರ್ವಾರ್ಥಸಿದ್ಧಿಯೆಂಬ ವಿಮಾನದಲ್ಲಿ ಮೂವತ್ತು ಸಹಸ್ರ ಸಾಗರೋಪಮಕಾಲ ಸುಖವಾಗಿದ್ದು ಅನಂತರ ಅಲ್ಲಿಂದ ಇಳಿದು ಜಂಬೂದ್ವೀಪದಲ್ಲಿದ್ದ ನಾಭಿ ರಾಜನ ಹೆಂಡತಿ ಮರುದೇವಿಯ ಗರ್ಭ ವನ್ನು ಅರ್ಧರಾತ್ರಿಯಲ್ಲಿ ಅಣುರೂಪದಿಂದ ಪ್ರವೇಶಿಸಿದನು. ಆಗ ಮರು ದೇವಿ ವೃಷಭವೊಂದು ತನ್ನ ಗರ್ಭವನ್ನು ಪ್ರವೇಶಿಸಿದಂತೆ ಕನಸು ಕಂಡು ಎಚ್ಚೆತ್ತಮೇಲೆ ಗಂಡನಿಗೆ ಅದನ್ನು ತಿಳಿಸಿದಳು. ಅದರ ಅರ್ಥ ಯಾರಿಗೂ ಹೊಳೆಯಲಿಲ್ಲ. ನಾಭಿಯೊಬ್ಬನಿಗೆ ಮಾತ್ರ ಗೊತ್ತು. ಚೈತ್ರ ಬಹುಳ ಅಷ್ಟಮಿ ಉತ್ತರಾಷಾಢಾ ನಕ್ಷತ್ರದಲ್ಲಿ ಮರುದೇವಿ ಪ್ರಸವ ವೇದನೆಯನ್ನು ಸ್ವಲ್ಪವೂ

1. Jacobi ಭದ್ರಬಾಹುವಿನ ಕಲ್ಪಸೂತ್ರದಲ್ಲಿ ಕಂಡು ಬರುವ ಭಾಷಾಂತರದ ಸಾರ.

ಅನುಭವಿಸದೆ ಪುತ್ರನನ್ನು ಹೆರುತ್ತಾಳೆ. ರಾಜನು ಕೇವಲ ಸಂತೋಷದಿಂದ ಉತ್ಸವವನ್ನು ನೆರವೇರಿಸುತ್ತಾನೆ. ಕಶ್ಯಪ ಗೋತ್ರಕ್ಕೆ ಸೇರಿದ ಈ ಋಷಭ ನಿಗೆ ಪ್ರಥಮರಾಜ, ಪ್ರಥಮ ಋಷಿ, ಪ್ರಥಮ ಜಿನ, ಪ್ರಥಮ ತೀರ್ಥಂಕರ ಎಂಬ ಪರ್ಯಾಯನಾಮಗಳಾಗುತ್ತವೆ. ಆತನು ಬುದ್ಧಿಮಾನ್, ಸುಂದರ, ಸಂಯಮಿ, ಅದೃಷ್ಟವಾನ್, ನಯವಿದ. ಇಪ್ಪತ್ತು ದಿವ್ಯಸಹಸ್ರವರ್ಷಗಳು ರಾಜ ಕುಮಾರನಾಗಿದ್ದ. ೬೦೩೦೦ ದಿವ್ಯಸಹಸ್ರವರ್ಷಗಳು ರಾಜನಾಗಿದ್ದ. ಜನರ ಉಪಯೋಗಕ್ಕಾಗಿ ಬರೆಹ, ಗಣಿತಶಾಸ್ತ್ರ ಮೊದಲುಗೊಂಡು ಶಕುನ ಶಾಸ್ತ್ರದವರೆಗೆ ಎಪ್ಪತ್ತೆರಡು ಶಾಸ್ತ್ರಗಳನ್ನೂ, ಸ್ತ್ರೀಯರಿಗೆ ಅಗತ್ಯವಾದ ಸಂಗೀ ತಾದಿ ಅರವತ್ತುನಾಲ್ಕುಕಲೆಗಳನ್ನೂ ನೂರು ವಿದ್ಯೆಗಳನ್ನೂ, ಮೂರು ಉದ್ಯೋ ಗಗಳನ್ನೂ ಜನರಿಗೆ ಕಲಿಸಿಕೊಟ್ಟ. ಈತನಿಗೆ ನೂರ್ವರು ಮಕ್ಕಳಾದರು. ಒಬ್ಬೊಬ್ಬನಿಗೆ ಒಂದೊಂದು ರಾಜ್ಯವನ್ನು ಕೊಟ್ಟು ಪಟ್ಟಗಟ್ಟಿದ. ಆಗ ಲೌಕಾಂತಿಕದೇವನು ಪದ್ಧತಿಯಂತೆ ವೃಷಭನ ಬಳಿಗೆ ಬಂದು ಆತನನ್ನು ಹೊಗಳಿ ಎಚ್ಚರಿಸಿದ. ಜಿನನ ಜ್ಞಾನದೃಷ್ಟಿಗೆ ಎಲ್ಲವೂ ಗೋಚರಿಸಿತು. ತನ್ನ ಐಶ್ವರ್ಯವನ್ನು ತ್ಯಾಗ ಮಾಡಿ ಚೈತ್ರ ಬಹುಳ ಅಷ್ಟಮಿ ಮಧ್ಯಾಹ್ನ ಸುದರ್ಶನ ವೆಂಬ ತನ್ನ ಪಲ್ಲಕ್ಕಿಯಲ್ಲಿ ಕುಳಿತು, ದೇವ ದಾನವ ಮಾನವರು ತನ್ನನ್ನು ಹಿಂಬಾಲಿಸಿ ಬರುತ್ತಿರಲು ವಿನೀತಾಪುರದಿಂದ ಹೊರಟು, ಸಿದ್ಧಾರ್ಥವನಕ್ಕೆ ಹೋಗಿ ಅಲ್ಲಿದ್ದ ಅಶೋಕ ವೃಕ್ಷದ ಬಳಿಯಲ್ಲಿ ಮೂರು ದಿನ ನಿರ್ಜಲ ಉಪ ವಾಸವ್ರತವನ್ನು ನಡಸಿದ. ಆನಂತರ ದಿವ್ಯ ವಸ್ತ್ರಗಳನ್ನು ಧರಿಸಿ, ನಾಲ್ಕು ಸಹಸ್ರ ಕ್ಷತ್ರಿಯ ರಾಜರೊಡನೆ ತನ್ನ ಕೂದಲನ್ನು ಕಿತ್ತುಹಾಕಿ, ಗೃಹತ್ಯಾಗ ಮಾಡಿ ಸಂನ್ಯಾಸಿಯಾದನು. ಒಂದು ಸಹಸ್ರವರ್ಷಗಳು ದೇಹದ ಕಡೆ ಗಮನಕೊಡದೆಯೂ ಮತ್ತೊಂದು ಸಹಸ್ರವರ್ಷ ಧ್ಯಾನಾಸಕ್ತನಾಗಿಯೂ ಇದ್ದು, ಫಾಲ್ಗುಣ ಬಹುಳ ಏಕಾದಶಿ ಪ್ರಾತಃಕಾಲ ಪುರಿಮಕಾಳವೆಂಬ ಪುರದ ಹೊರಗೆ ಇದ್ದ ನ್ಯಗ್ರೋಧ ವೃಕ್ಷದ ಕೆಳಗೆ ಮೂರುವರೆ ದಿನಗಳು ನಿರ್ಜಲೋಪ ವಾಸವನ್ನು ಆಚರಿಸಿ ಗಾಢವಾದ ಧ್ಯಾನಾಸಕ್ತನಾಗಿದ್ದು ಕೇವಲ ಜ್ಞಾನವನ್ನು ಪಡೆದನು. ಹುಟ್ಟಿದಂದಿನಿಂದ ಆತನ ಒಟ್ಟು ಜೀವಾವಧಿ ಎಂಭತ್ತು ಸಹಸ್ರದ ನಾನೂರು ಸಹಸ್ರವರ್ಷಗಳು. ಆತನು ತನ್ನ ಕರ್ಮ ಚತುಷ್ಟಯ ಸಮೆದ ಮೇಲೆ ಇನ್ನು ಎಂಟುವರೆ ತಿಂಗಳಿಗೆ ಸುಷಮ ದುಷಮ ಕಾಲಮುಗಿಯಲಿರು

ವಾಗ ಮಾಘ ಬಹುಳ ತ್ರಯೋದಶಿಯ ಅಭಿಜಿನ್ಮುಹೂರ್ತದಲ್ಲಿ ನಾಲ್ಕುವರೆ ದಿನಗಳು ನಿರ್ಜಲೋಪವಾಸ ಮಾಡಿ ದೇಹವನ್ನು ತ್ಯಜಿಸಿದನು. ಆತನಿಗೆ ಕೇವಲ ಜ್ಞಾನೋತ್ಪತ್ತಿಯಾದ ಮೇಲೆ ಅನೇಕ ಸಹಸ್ರ ಶ್ರಮಣ, ಶ್ರಮಣಿಯರೂ, ಲೌಕಿಕ ಶ್ರಾವಕ ಶ್ರಾವಕಿಯರೂ ಇದ್ದರು.

ಮೇಲಿನ ಮೂಲ ರೇಖೆಗಳಿಗೆ ಈಚಿನವರು ಬೇಕಾದಷ್ಟು ಬಣ್ಣ ತುಂಬಿ ಚಿತ್ರಿಸಿದ್ದಾರೆ. ತೀರ್ಥಂಕರನ ಪೂರ್ವಭಾವಗಳ ಕಥೆಯನ್ನು ಸೃಷ್ಟಿಸಿ ಅದಕ್ಕೆ ಸೇರಿಸಿದ್ದಾರೆ. ಜೊತೆಗೆ ಆತನ ಮಗನಾದ ಪ್ರಥಮಚಕ್ರಿ ಭರತನ ಕಥೆಯನ್ನೂ ಕಟ್ಟಿ ಅದರೊಡನೆ ಇಟ್ಟಿದ್ದಾರೆ.

ಅಂಗಗಳಲ್ಲಿ ಜನ್ಮಾಂತರಕ್ಕೆ ಸಂಬಂಧಿಸಿದ ಕಥೆಗಳು ಬೇಕಾದಷ್ಟು ಇವೆಯಾದರೂ ತೀರ್ಥಂಕರನ ಪೂರ್ವಭವದ ವಿಚಾರವಾಗಿ ಏನೂ ಹೇಳುವುದಿಲ್ಲ. ವೃಷಭನ ಪೂರ್ವಭವದ ವಿಚಾರವಾಗಿ ಮೊಟ್ಟಮೊದಲು ನಮಗೆ ದೊರೆಯುವುದು ಭದ್ರಬಾಹುವಿನ ಆವಶ್ಯಕಸೂತ್ರದಲ್ಲಿ. ಕ್ರಿ. ಶ. ೫೨೮ ರಲ್ಲಿದ್ದ ಹರಿಭದ್ರ ತನ್ನ ಆವಶ್ಯಕ ನಿರ್ಯುಕ್ತಿಯ ಮೇಲಿನ ವ್ಯಾಖ್ಯಾನದಲ್ಲಿ ಪೂರ್ವಭವಗಳ ಕಥೆಯನ್ನು ಸ್ವಲ್ಪ ವಿಸ್ತರಿಸಿದ್ದಾನೆ.

ದಿಗಂಬರರು ತಮ್ಮ ಧರ್ಮಗ್ರಂಥಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ.—

೧. ಪ್ರಥಮಾನುಯೋಗ—ತೀರ್ಥಂಕರರು ಮತ್ತು ಇತರ ಮಹನೀಯರ ಚರಿತ್ರೆ.

೨, ಕರಣಾನುಯೋಗ—ಜಗತ್ತಿನ ಕ್ಷೇತ್ರಪರಿಮಾಣದ ವರ್ಣನೆ.

೩. ಚರಣಾನುಯೋಗ—ಜೈನಮುನಿಗಳೂ ಲೌಕಿಕರೂ ಅನುಸರಿಸಬೇಕಾದ ಆಚರಣೆಗಳು.

೪. ದ್ರವ್ಯಾನುಯೋಗ—ವೇದಾಂತ, ತತ್ವಾರ್ಥಸಂಗ್ರಹ.

ಇವುಗಳಲ್ಲಿ ಮೊದಲನೆಯದಾದ ಪ್ರಥಮಾನುಯೋಗವೆಂಬುದು ತೀರ್ಥಂಕರರು ಮತ್ತು ಇತರ ಮಹನೀಯರ ಚರಿತ್ರೆಯನ್ನು ಒಳಗೊಂಡ ಕಥಾ

ಸಾಹಿತ್ಯ. ಈ ವಿಭಾಗಕ್ಕೆ ಸೇರಿದ ಗ್ರಂಥಸಮುದಾಯದಲ್ಲಿ ಎಲ್ಲ ದೃಷ್ಟಿಯಿಂದಲೂ ಅಗ್ರಸ್ಥಾನಾರ್ಹವಾದುದು ಜಿನಸೇನಮುನಿಯ ಮಹಾಪುರಾಣ. ಇದರಲ್ಲಿ ಆದಿಜಿನ ಮತ್ತು ಭರತನ ಚರಿತ್ರೆ ವಿಸ್ತಾರವಾಗಿ ಬಂದಿದೆ. ಕ್ರಿ. ಶ. ೭೮೩ ಈತನ ಕಾಲ. ಮಹಾಪುರಾಣಗಳನ್ನು ಬರೆದವರಲ್ಲಿ ಈತನೇ ಮೊಟ್ಟಮೊದಲನೆಯವನು. ದಿಗಂಬರ ಪಂಥಕ್ಕೆ ಸೇರಿದ ಶಿಲಾಚಾರ್ಯನೂ ಈತನಿಂದ ಈಚೆಯವನೇ. ಆದ್ದರಿಂದ ಜೈನರಪುರಾಣ ಸಾಹಿತ್ಯಕ್ಕೆ ಈತನೇ ವಿಧಾತ; ಪ್ರೇರಕ ಶಕ್ತಿ. ಈಚೆಗೆ ಬಂದವರು ಕಥೆಯ ವಿಸ್ತರಣದಲ್ಲಿ ಅಲ್ಪಸ್ವಲ್ಪ ಮಾರ್ಪಾಟುಗಳನ್ನು ಮಾಡಿಕೊಂಡಿರಬಹುದಾದರೂ ಕಥಾವಸ್ತು ಒಂದೇ. ಆದಿ ಜಿನನ ಭವಾವಳಿಯಾಗಲಿ, ಆತನ ಜೀವನದ ವಿಸ್ತೃತ ಚರಿತ್ರೆಯಾಗಲಿ ಇಲ್ಲಿ ನಮಗೆ ಅಪ್ರಕೃತ. ಆದ್ದರಿಂದ ಬಹು ಸ್ಥೂಲವಾಗಿ ಆತನ ಕಥೆಯನ್ನು ಪರಿಚಯ ಮಾಡಿಕೊಂಡರೆ ಸಾಕು. [2]

ಅತಿಬಲನೆಂಬ ಖಗೇಂದ್ರ ಅಲಕಾಪಟ್ಟಣದ ಅರಸು. 'ಮನೋಹರಾ' ಎಂಬ ಸುದತಿ ಇವನ ಮನೋಹರೆ. ಇವರ ವಂಶವಲ್ಲರಿಯ ದಾಂಗುಡಿ ಮಹಾಬಲ. ಈತನು ಪ್ರಬುದ್ಧನಾಗಿ ಸ್ವಯಂಬುದ್ಧನೆಂಬ ಮಂತ್ರಿಯ ಆದೇಶದಂತೆ ಧರ್ಮದಿಂದ ರಾಜ್ಯವಾಳಿ ಜೈನಧರ್ಮ ಪ್ರವರ್ತಕನಾಗಿದ್ದ. ಒಮ್ಮೆ ಸ್ವಯಂಬುದ್ಧ ಜಿನ ಪೂಜೆಗಾಗಿ ಮೇರುಪರ್ವತಕ್ಕೆ ಹೋದಾಗ ಅಲ್ಲಿ ಚಾರಣರ ದರ್ಶನವಾಯಿತು. ಅಂದಿನಿಂದ ಹತ್ತನೆಯ ಜನ್ಮದಲ್ಲಿ ತನ್ನ ರಾಜನು ತೀರ್ಥಂಕರನಾಗುವನೆಂದು ಅವರಿಂದ ತಿಳಿದುಕೊಂಡ. ಇದನ್ನರಿತ ಮಹಾಬಲನು ರಾಜ್ಯವನ್ನು ತನ್ನ ಮಗ ಅತಿಬಲನಿಗೆ ವಹಿಸಿ, ಸಿದ್ಧಕುಲಕ್ಕೆ ಹೋಗಿ ಸಿದ್ಧರನ್ನು ಪೂಜಿಸಿ, ಅರಾಧನಾ ನಾವೆಯನ್ನೇರಿ ಸಂಸಾರ ಸಾಗರವನ್ನು ದಾಟಿ ಶ್ರೀ ಪ್ರಭ ವಿಮಾನದಲ್ಲಿ ಲಲಿತಾಂಗನೆಂಬ ದೇವರಾಗಿ ಹುಟ್ಟಿದ. ಪುಣ್ಯದ ರಾಶಿ ಕರಗುವವರೆಗೆ ದೇವ ವಿಮಾನದ ಸುಖಗಳನ್ನು ಅನುಭವಿಸಿ ಅನಂತರ ವಜ್ರಜಂಘೆನೆಂಬ ದೊರೆಯಾಗಿ ಹುಟ್ಟಿದ. ಸ್ವಯಂಪ್ರಭೆಯೂ ಸ್ವರ್ಗಚ್ಯುತಳಾಗಿ ಶ್ರೀಮತಿಯೆಂಬ ಹೆಸರಿನಿಂದ ರಾಜಕುಮಾರಿಯಾಗಿ ಹುಟ್ಟಿದಳು. ಇಬ್ಬರ ಆತ್ಮಗಳೂ ಊರ್ಧ್ವ ಗಮನದಲ್ಲಿರುವುದರಿಂದ ಮಾನವರಾಗಿ ಹುಟ್ಟಿ

2. ಈ ಕಥೆಯಲ್ಲಿಯೂ ದಿಗಂಬರ ಶ್ವೇತಾಂಬರರಿಗೆ ಸ್ವಲ್ಪವಷ್ಟಿಗೆ ವೃತ್ಯಾಸವಿದೆ.

ದಂದೂ ಅವರಿಗೆ ಜನ್ಮಾಂತರಗಳ ಜ್ಞಾನವುಂಟು. ಆದುದರಿಂದ ಇಬ್ಬರೂ ಪರಸ್ಪರರನ್ನರಸಿ ವಿವಾಹವಾಗಿ ಹಿಂದಿನ ಪ್ರೇಮಪ್ರವಾಹವನ್ನು ಮುಂದುವರಿಸುವರು. ಹಲವು ಕಾಲ ಭೂಲೋಕದಲ್ಲಿಯೇ ಸ್ವರ್ಗಸುಖವನ್ನನುಭವಿಸಿ ಚಾರಣರಿಂದ ಜಿನದೀಕ್ಷೆ ವಹಿಸಿ ಅದರ ಫಲದಿಂದ ಈಶಾನಕಲ್ಪದಲ್ಲಿ ಶ್ರೀಧರ ಶ್ರೀಮತಿಯರೆಂಬ ದಂಪತಿಗಳಾದರು. 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ತಾನೆ? ಶ್ರೀಧರ ಸಕಲ ಸುಖಗಳನ್ನೂ ಸಾಕಷ್ಟು ಅನುಭವಿಸಿ ಸುವಿಧಿಯೆಂಬ ಹೆಸರಿನಿಂದ ಪುನಃ ಭೂಚರನಾಗಿ ಹುಟ್ಟಿದ. ಪ್ರಾಣಾಂತ್ಯದಲ್ಲಿ ಜಿನದೀಕ್ಷೆ ವಹಿಸಿ, ಮುಡುಪಿದನಂತರ ಅಚ್ಯುತೇಂದ್ರನಾಗಿ ಹುಟ್ಟಿದ. ಅದು ಕಳೆದ ಮೇಲೆ ವಜ್ರನಾಭಿಯೆಂಬ ರಾಜಕುಮಾರನಾಗಿ ಹುಟ್ಟಿದರೂ ಬೇಗನೆ ಎಚ್ಚತ್ತು ಮಗನಿಗೆ ರಾಜ್ಯ ಕೊಟ್ಟು ವಿರಾಗದಿಂದ ತಪಸ್ಸು ಮಾಡಿ ದೇಹವನ್ನು ತವಿಸಿದುದರ ಫಲವಾಗಿ ಅಹಮಿಂದ್ರ ಪದವಿಯನ್ನು ಪಡೆದ. ಮುಂದಿನ ಜನ್ಮವೇ ಕಡೆಯ ಜನ್ಮ. ನಾಭಿ ಮರುದೇವಿಯರ ಮಗನಾಗಿ. ವೃಷಭನಾಥನೆಂಬ ಹೆಸರಿನಿಂದ ಜನಿಸಿದ. ಗರ್ಭ ಪ್ರವೇಶ ಮಾಡುವಂದು ಮರುದೇವಿಗೆ ಷೋಡಶ ಸ್ವಪ್ನಗಳಾದುವು. ಹ್ರೀ, ಶ್ರೀ, ಕೀರ್ತಿದೇವತೆಯರು ಆಕೆಯ ಗರ್ಭವನ್ನು ಶೋಧಿಸಿದರು; ಅನಂತರ ಗರ್ಭಧಾರಣೆಯಾಯಿತು ಆದರೂ ಗರ್ಭವಿಕಾರಗಳೊಂದೂ ಇಲ್ಲ. ಚೈತ್ರ ಕೃಷ್ಣ ನವಮಿ ಸೂರ್ಯೋದಯ ಕಾಲ ಬ್ರಹ್ಮಯೋಗದಲ್ಲಿ ಪೂರ್ವದಿಕ್ಕು ಸೂರ್ಯನನ್ನು ಪ್ರಸವಿಸುವಂತೆ ಮರುದೇವಿ ಪ್ರಭಾವಯುತನಾದ ಮಗನನ್ನು ಹೆತ್ತಳು. ನಾಭಿಯೆಂಬ ಉದಯ ಪರ್ವತದಲ್ಲಿ ಜಿನಬಿಂಬಾರ್ಕ ಉದಯಿಸಿದ. ಒಡನೆಯೇ ತಮೋನಾಶವಾಯಿತು, ತ್ರಿಬೋಧ ಕಿರಣೋದಯದಿಂದ; ದೇವಸ್ತ್ರೀರೂಪದ ಕಮಲಗಳರಳಿದುವು; ಆನಂದ ಬಾಷ್ಪದ ಮಕರಂದ ಸುರಿದು ಹರಿಯಿತು; ಜಿನಾಭಿಧಾನದ ತ್ರಿಭುವನ ದೀಪ ತೊಳಗಿ ಬೆಳಗಿತು; ಷಡ್ರಸಗಳ ಪುಷ್ಪಗಳೂ ಅರಳಿದುವು ನೀರು ತಿಳಿಯಿತು; ಸೂರ್ಯಕಿರಣ ತಂಪಾಯಿತು.

ಜಿನೋದಯವಾದೊಡನೆಯೆ ಇಂದ್ರನ ಆಸನ ಕಂಪಿಸಿತು. ಅದರ ಅರ್ಥವನ್ನರಿತ ಇಂದ್ರನು ಮೇಲಕ್ಕೆದ್ದು ಕಂಪನವಾದ ದಿಕ್ಕಿನಲ್ಲಿ ಏಳು ಹೆಜ್ಜೆ ಹೋಗಿ ನಮಸ್ಕರಿಸಿದನು. ಜಿನಕುಮಾರನ ಜನ್ಮಾಭಿಷವಣಕ್ಕಾಗಿ ಒಡನೆಯೇ

ಪ್ರಸ್ಥಾನ ಭೇರಿಯನ್ನು ಹೊಡಸಿದನು. ಶಚೀದೇವಿಯು ಜಿನಬಾಲನನ್ನು ತಂದು ಇಂದ್ರನ ಕೈಗೆ ಕೊಟ್ಟಳು, ಪ್ರಾಚೀದಿಗಂಗನೆ ಬಾಲಸೂರ್ಯನನ್ನು ಪೂರ್ವಗಿರಿಗೆ ಕೊಡುವಂತೆ. ಇಂದ್ರನು ಆತನನ್ನು ಐರಾವತದ ಮೇಲೇರಿಸಿಕೊಂಡು ಮೇರು ಪರ್ವತದ ಉತ್ತರದಲ್ಲಿದ್ದ ಮಹಾಶಿಲೆಯನ್ನು ಸೇರಿದನು. ಅಲ್ಲಿ ಮಗುವನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಈಶಾನೇಂದ್ರ ಸೌಧರ್ಮೇಂದ್ರರು ಶಾತ ಕುಂಭದಲ್ಲಿ ತುಂಬಿಕೊಟ್ಟ ಕ್ಷೀರದಿಂದ ನೀರೆರೆದ ಮೇಲೆ ಪರಿಮಳೋದಕದಿಂದ ನೀರೆರೆದು ಮರಳಿ ತಾಯ ಮಡಲಿನಲ್ಲಿ ಕೂಸನ್ನಿಟ್ಟು ಪೂಜಿಸಿದರು. ಜಾತ ಕರ್ಮಾದಿಗಳು ವೈಭವದಿಂದ ನೆರವೇರಿದುವು. ವೃಷಭನೆಂಬ ನಾಮಕರಣ ವಾಯಿತು. ಮಗುವು ಬಾಲಲೀಲೆಗಳ ಬೆಳುದಿಂಗಳನ್ನು ಚೆಲ್ಲುತ್ತಾ ವೃದ್ಧಿಯಾ ಯಿತು. ಮಾತು ಕಲಿಯಿತು; ಅಂಬೆಗಾಲಿಟ್ಟು ಬಾಲ್ಯವನ್ನು ಕಳೆಯಿತು. ಕೌಮಾರದಲ್ಲಿಯೇ ಸಕಲ ಶಾಸ್ತ್ರಗಳನ್ನೂ ಸ್ವಾಧೀನ ಮಾಡಿಕೊಂಡು ಯೌವ ನದ ಹೊಸ್ತಿಲಿನವರೆಗೆ ಬಂದುದಾಯಿತು.

ಪ್ರಾಪ್ತವಯಸ್ಕನಾದ ಮಗನಿಗೆ ಮದುವೆ ಮಾಡಬೇಕೆಂಬ ಯೋಚನೆ ನಾಭಿರಾಜನಿಗೆ. ಕಾಂಚನವಲ್ಲೀ ಸದೃಶರಾದ ಯಶಸ್ವತೀ ಸುನಂದೆಯರೆಂಬ ಸುಕುಮಾರಿಯರು ಈ ವೃಷಭರೂಪೀ ಕಲ್ಪವೃಕ್ಷವನ್ನು ಆಶ್ರಯಿಸಿದರು. ತಾರುಣ್ಯದ ಬಿಸಿಯಲ್ಲಿ ಕಾಣದಂತೆಯೇ ಬಹುಕಾಲ ಕರಗಿಹೋಯಿತು. ಯಶಸ್ವತೀದೇವಿ ಗರ್ಭವತಿಯಾಗಿ ಕೃತಕೃತ್ಯಳಾದೆನೆಂದುಕೊಂಡಳು. ಅವಳ ಅಪ್ರಾಕೃತವಾದ ಬಯಕೆಗಳು ಅಚ್ಚರಿಯನ್ನು ಹುಟ್ಟಿಸುವಂತಿದ್ದುವು. ಗರ್ಭ ವತಿಯಾದ ಆಕೆ ವಿಜಯಾರ್ಧ ಪರ್ವತ, ಹಿಮಪರ್ವತಗಳ ಶೃಂಗಗಳಲ್ಲಿ, ಲೀಲಾಗೃಹೋಪವನದ ಕೃತಕ ಪರ್ವತಗಳಲ್ಲಿ ಸಂಚರಿಸುವಂತೆ, ಸಂಚರಿಸು ವಳು. ಮಲಯ ಪರ್ವತದ ಚಂದನ ವೃಕ್ಷ ಪಂಕ್ತಿಗಳೇ ಆಕೆಯ ವಿಲಾಸ ಮಂದಿರದ ಲತಾಗೃಹ. ನಾಲಗೆಯ ಚಪಲ ಷಟ್ಪಂಡ ಮೃತ್ತಿಕಾಸೇವನೆ. ಸಮರಾಟೋಪಯೋದ್ಧರ ಪಟುತರ ಕತೆಗಳು ಆಕೆಯ ಕುತೋಹಲವನ್ನು ಕೆರಳಿಸುವುವು. ಮಣಿಖಚಿತ ಕನ್ನಡಿ ಬೇಡ ಆಕೆಗೆ ಮುಖ ನೋಡಿಕೊಳ್ಳಲು; ಸಾಣೆ ಹಿಡಿದ ಕತ್ತಿ ಬೇಕು. ವೀಣಾಗಾನ ರುಚಿಸದು, ಚಾಪಠಂಕಾರಕ್ಕೆ ಕಿವಿ ಆರಳುವುದು. ನವಮಾಸ ತುಂಬುವವರೆಗೆ ಈ ಬಯಕೆಗಳನ್ನು ಹೀರಿ ಬೆಳೆ

ದಿದ್ದ ಆಕೆಯ ಗರ್ಭದಲ್ಲಿ ಉದಯವಾದ ಫಲ ಹೇಗಿರಬೇಕು ? ಆ ಮಗು ಭಾವೀ ಭಾರತದ ಸಕಲರನ್ನೂ ಭರಿಸತಕ್ಕವನೆಂಬ ಭರತನೆಂಬ ಅನ್ವರ್ಥನಾಮವನ್ನು ಹೊಂದಿ, ಬಂಧುಗಳ ಕರಕಮಲದಲ್ಲಿ ವಿಹರಿಸುವ ಬಾಲಹಂಸನಾಗಿ ಬೆಳೆದನು. ತಾಯಿಯ ಬಯಕೆಗೆ ತಕ್ಕ ಮಗನ ಬಾಲಲೀಲೆಗಳು. ಮದ್ದಾನೆಯನ್ನು ಹತ್ತಿ, ತರ್ಜನೀ ಬೆರಳನ್ನೇ ಅಂಕುಶ ಮಾಡಿಕೊಂಡು ಅದನ್ನು ನಡಸುತ್ತಾ ಪ್ರಮದವನಕ್ಕೆ ಹೋಗಿ ಆಳವಾದ ನೀರಿನಲ್ಲಿ ಅದನ್ನು ಮುಳುಗಿಸುವುದೇ ಅವನ ಹುಡುಗಾಟ. ಸುವರ್ಣಕ್ಕೆ ಸುಗಂಧ ಬಂದಂತೆ ಈ ಮಹನೀಯನಿಗೆ ತಾರುಣ್ಯ ಪ್ರಾಪ್ತವಾಯ್ತು. ಇಷ್ಟರಲ್ಲಿ ಭರತನಿಗೆ ತೊಂಬತ್ತೊಂಬತ್ತು ತಮ್ಮಂದಿರೂ ಒಬ್ಬ ತಂಗಿಯೂ ಹುಟ್ಟಿದರು. ಸುನಂದೆಯ ಹೊಟ್ಟೆಯಲ್ಲಿಯೂ ಬಾಹುಬಲನೆಂಬ ಸುಕುಮಾರನೂ ಸುಂದರಿಯೆಂಬ ಮಗಳೂ ಹುಟ್ಟಿದರು. ಮಕ್ಕಳೆಲ್ಲರೂ ವನದ್ವಿಪಗಳಂತೆ ಬೆಳೆದು ಸಕಲ ವಿದ್ಯಾಪಾರಂಗತರಾದರು. ಈ ಮಕ್ಕಳು, ಈ ಹೆಂಡಿರು, ಈ ರಾಜ್ಯವೈಭವ ಇವುಗಳಲ್ಲಿ ಬಹುಕಾಲ ಕಳೆದು ಹೋಯಿತು.

ಇಷ್ಟಾಗುವುದರೊಳಗೆ ಪರಿನಿಷ್ಕ್ರಮಣ ಕಲ್ಯಾಣದ ಕಾಲ ಸಮೀಪಿಸಿತೆಂದು ಎಚ್ಚರಿಸುವುದಕ್ಕಾಗಿ ಇಂದ್ರ ನೀಲಾಂಜನೆಯೆಂಬ ದೇವನರ್ತಕಿಯ ಗಾನ ನೃತ್ಯಗಳಿಗೆ ಏರ್ಪಾಟು ಮಾಡಿದ, ವೃಷಭನ ಒಡ್ಡೋಲಗದಲ್ಲಿ. ಗಂಧರ್ವ ಗಾನದ ಸೋನೆ ಸುರಿಯುತ್ತಿರಲು ಸುರಸುಂದರಿ ನೀಲಾಂಜನೆ 'ಕರ್ಬಿನ ಬಿಲ್ಲಂ ಮಸೆದ ಮದನನಲರ್ಗಣೆ ಬರ್ದುಕಿತ್ತೆನಿಸುತ್ತೆ' ಸಭಾಂತರಾಳವನ್ನು ಹೊಕ್ಕಳು. ಜವನಿಕೆಯ ಮರೆಯಲ್ಲಿ ಮಡುಗಟ್ಟಿ ನಿಂತ ಕಲಾರಸವು, ಜವನಿಕೆ ಓಸರಿಸಿದೊಡನೆಯೇ ತಾನೇ ತಾನಾಗಿ ಹರಿಯಿತು. ನೋಟಕರ ಚಿತ್ತವೆಲ್ಲ ಸೂರೆಹೋಯಿತು. ಕುಣಿ ಕುಣಿಯುತ್ತಿದ್ದಂತೆಯೇ ನೀಲಾಂಜನೆಯ ಆಯಸ್ಸು ತುಂಬಿ ಬಂದಿತು. ಇನ್ನೇನು ಕರಗಿಹೋಗುವಳೆಂದಿರುವಾಗ, ಇಂದ್ರನು ರಸಾಭಾಸದ ಹೆದರಿಕೆಯಿಂದ ಅವಳಿಗೆ ಸರ್ವವಿಧದಲ್ಲಿಯೂ ಸಮಾನವಾದ ಆಕೃತಿಯನ್ನು ಎವೆಯಿಕ್ಕುವುದರೊಳಗಾಗಿ ನಿರ್ಮಿಸಿ ಅವಳ ಸ್ಥಾನದಲ್ಲಿ ನಿಲ್ಲಿಸಿದ. ಪ್ರೇಕ್ಷಕರೊಬ್ಬರಿಗೂ ನರ್ತಕಿ ಬಯಲಾಗಿ ಮಾಯಾಕೃತಿ ಬಂದುದು ಗೊತ್ತಾಗಲಿಲ್ಲ. ಆದರೆ ವೃಷಭನ ಕಣ್ಣಿಗೆ ಅಗೋಚರವಾಗುವುದು ಸಾಧ್ಯವೆ ? ಆತನಿಗೆ

ಗೊತ್ತಾಯಿತು. ಒಡನೆಯೆ ದೇಹಾನಿತ್ಯತೆಯ ಭಾವನೆಯ ಮೇಲೆ ವೈರಾಗ್ಯದ ಸಸಿಯಂಕುರಿಸಿ ನಿಮಿಷ ಮಾತ್ರದಲ್ಲಿ ಮಹೋನ್ನತ ವೃಕ್ಷವಾಯಿತು. "ತನು ರೂಪ ವಿಭವ ಯೌವನ ಧನ ಸೌಭಾಗ್ಯಾಯುಷ್ಯಾದಿಗಳು ಇಂದ್ರನ ಬಿಲ್ಲಿನಂತೆ, ಮುಗಿಲ ನೆರಳಿನಂತೆ, ಜೊಬ್ಬಳಿಕೆಯುರ್ಬಿನಂತೆ" ಅಸ್ಥಿರವೆಂದು ಒಡನೆಯೇ ರಾಜ್ಯವನ್ನು ಭರತನಿಗೆ ವಹಿಸಿ ಬಾಹುಬಲಿಯನ್ನು ಯುವರಾಜ ಪಟ್ಟದಲ್ಲಿ ನಿಲ್ಲಿಸಿ ಜಿನದೀಕ್ಷಾ ವಿಧಿಯೊಡನೆ ರಜತಾಚಲಕ್ಕೆ ಹೋಗಿ ತಪೋನಿಷ್ಠನಾದನು. ಭರತರಾಜನು ಅಯೋಧ್ಯೆಯಲ್ಲಿಯೂ, ಬಾಹುಬಲಿ ಪೌದನಪುರದಲ್ಲಿಯೂ ನೆಲಸಿದರು. ವೃಷಭದೇವನು ಉತ್ತರೋತ್ತರ ಕರ್ಮವೆಲ್ಲವನ್ನು ಸವೆಸಿ ಜೀವನ್ಮುಕ್ತನಾದ, ಜಿನನಾದ.

ಜನ್ಮಾಂತರಗಳನ್ನು ನಂಬುವ ಜೈನರಿಗೆ ತಮ್ಮ ಮಹಾಪುರುಷರ ಜೀವನವು ಉನ್ನತೋನ್ನತೆಯನ್ನೈದುತ್ತ ಹೋದ ಬಗೆಯನ್ನು ವಿವರವಾಗಿ ವರ್ಣಿಸಿ ತೋರಿಸುವುದು ಅಗತ್ಯವೆಂದು ತೋರಿತು. ಉತ್ತಮ ಕರ್ಮದಿಂದ ಉನ್ನತಿ, ಅಧರ್ಮ ಕರ್ಮದಿಂದ ಅಧಃಪತನ ಅನಿವಾರ್ಯವೆಂದು ಕರ್ಮದ ಶಕ್ತಿಯನ್ನು ಜನದ ಮನಸ್ಸಿನಲ್ಲಿ ನಟ್ಟು ಅವರನ್ನು ಸನ್ಮಾರ್ಗಕ್ಕೆ ತರುವ ಕಾರ್ಯವೂ ಇದರಿಂದ ಸಾಧಿತವಾದಂತಾಗುತ್ತದೆ. ಹೀಗಾಗಿ ತೀರ್ಥಂಕರರ ಭವಾವಳಿಗಳನ್ನು ಬೇಕಾದಷ್ಟು ಹುಲುಸಾಗಿ ಬೆಳಸಿದ್ದಾರೆ ತಮ್ಮ ಮಹಾ ಪುರಾಣಗಳಲ್ಲಿ. ಆದರೆ ಪ್ರಥಮ ತೀರ್ಥಂಕರನ ಜೀವನ ಚರಿತ್ರೆಯನ್ನು ದೀರ್ಘವಾಗಿ ಬರೆದು ಉಳಿದ ತೀರ್ಥಂದಷ್ಟು ಕರರ ಜೀವನ ಚರಿತ್ರೆಯಲ್ಲಿ ಹ್ರಸ್ವಾದೇಶವನ್ನು ತರುತ್ತಾರೆ. ಆತನ ಜೀವನ ಚರಿತ್ರೆಯಂತೆಯೇ ಉಳಿದವರ ಚರಿತ್ರೆಯೂ ಇರುವುದು, ಹೀಗೆ ಮಾಡುವುದರ ಕಾರಣವೆಂದು ತೋರುತ್ತದೆ. ಹೀಗೆಯೇ ಎಲ್ಲಾ ಮಹಾಪುರಾಣಗಳಲ್ಲಿಯೂ ಪ್ರಥಮ ಚಕ್ರೇಯ ಜೀವನವನ್ನು ವಿಸ್ತಾರವಾಗಿಯೂ, ಉಳಿದ ಚಕ್ರೇಗಳಜೀವನವನ್ನು ಮೊಟಕಾಗಿಯೂ ವರ್ಣಿಸುವುದು ವಾಡಿಕೆ. ಈತನ ಜೀವನ ಉಳಿದವರ ಜೀವನಕ್ಕೆ ಮಾದರಿಯಾಗಿರುತ್ತದೆ, ಪ್ರಥಮ ತೀರ್ಥಂಕರನ ಭವಾವಳಿಯನ್ನು ಹೇಳುವಂದು ಅದಕ್ಕೆ ಅಂಗವಾಗಿ ಭರತನ ಭವಾವಳಿಯೂ ಬರುತ್ತದೆ. ಈತನ ಜೀವನವಲ್ಲಿ ಹಲವು ಜನ್ಮಗಳಿಂದ ಆ ಮಹೋನ್ನತ ತರುವನ್ನು ಆಶ್ರಯಿಸಿಕೊಂಡೇ ಇರುತ್ತದೆ. ನಾರಿನಿಂದ ಹೂವು ಸ್ವರ್ಗಕ್ಕೇರುವಂತೆ

ಆತನ ಆತ್ಮೋದ್ಧಾರದೊಡನೆ ಈತನ ಆತ್ಮವೂ ಉನ್ನತೋನ್ನತಿಯನ್ನೈದುತ್ತ ಹೋದಂತೆ ಕಂಡು ಬರುತ್ತದೆ.

ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತಿ ವಿಷಯದಲ್ಲಿ ಪ್ರಭಾವತಿಯೆಂಬ ಪಟ್ಟಣ. ಅತಿಗೃದ್ಧನೆಂಬ ಜಿಪುಣಾಗ್ರೇಸರ ಚಕ್ರವರ್ತಿ ಅದರ ದೊರೆ. ಆತನು ಬಹು ದ್ರವ್ಯವನ್ನು ಗಳಿಸಿ ಅದನ್ನು ತನ್ನ ರಾಜಧಾನಿಯ ಸಮೀಪದ ಬೆಟ್ಟದ ದರಿಯಲ್ಲಿ ಭೂಸ್ಥಾಪನೆ ಮಾಡಿ ಬಹು ವಿಷಯಾಸಕ್ತನಾಗಿದ್ದುದರಿಂದ ಸತ್ತ ಮೇಲೆ ನಾರಕಿಯಾಗಿ ಹುಟ್ಟಿದನು. ಎಪ್ಪತ್ತು ಸಾಗರೋಪಮಕಾಲ ಈ ಜನ್ಮದಲ್ಲಿ ಅತಿ ಕಷ್ಟಗಳನ್ನನುಭವಿಸಿದ ಮೇಲೆ ತಾನು ಧನವನ್ನು ಭೂಸ್ಥಾಪನೆ ಮಾಡಿದ್ದ ಬೆಟ್ಟದ ಬಳಿಯಲ್ಲಿ ಹೆಬ್ಬುಲಿಯೊಂದರ ಹೊಟ್ಟೆಯಲ್ಲಿ ಹುಟ್ಟ ನಿಕ್ಷೇಪರಕ್ಷಣೆಯಲ್ಲಿ ತತ್ಪರನಾಗಿದ್ದ. ಹೀಗಿರಲು ಆಗ ಪ್ರಭಾವತಿಯ ಅರಸನಾಗಿದ್ದ ಪ್ರೀತಿವರ್ಧನನು ಜೈತ್ರಯಾತ್ರೆಯಿಂದ ಶತ್ರುಗಳನ್ನು ನಿರ್ಮೂಲಮಾಡಿ ಹಿಂತಿರುಗಿ ಬರುತ್ತಾ ಈ ಬೆಟ್ಟದ ತಪ್ಪಲಿಗೆ ಬಂದನು. ಅಲ್ಲಿ ಇದ್ದಕ್ಕಿದ್ದಂತೆಯೇ ಕೆಲವು ಶುಭಶಕುನಗಳಾದುವು. ರಾಜನು ಸಂತೋಷಚಿತ್ತನಾಗಿ ಪಿಹಿತಾಸ್ರವರೆಂಬ ಮಾಸೋಪವಾಸಿಗಳಿಗೆ ಪಡ್ರಸೋಪೇತವಾದ ಆಹಾರವನ್ನಿತ್ತ. ಇದನ್ನು ಕಂಡ ದೇವತೆಗಳು ಹೂಮಳೆಗರೆದರು; ದೇವದುಂದುಭಿ ಮೊಳಗಿತು. ಇದನ್ನು ಕಂಡ ಹುಲಿಗೆ ಪೂರ್ವಜನ್ಮ ಸ್ಮರಣೆಯಾಯಿತು. ಕೃತಕಾರ್ಯ ಪಶ್ಚಾತ್ತಾಪದಿಂದ ಅದು ನಿರಶನ ವ್ರತವನ್ನು ಕೈಗೊಂಡಿತು. ಅವಧಿ ಜ್ಞಾನದಿಂದ ಇದನ್ನರಿತ ಪಿಹಿತಾಸ್ರವರು ಪ್ರೀತಿವರ್ಧನನಿಗೆ ಅದರ ಕಥೆಯನ್ನೆಲ್ಲಾ ಅರುಹಿ, ಭೂಗತವಾಗಿದ್ದ ಧನವನ್ನು ಹೊರಕ್ಕೆ ತೆಗಿಸಿ ಅಲ್ಲಿಯೇ ಸಮೀಪದಲ್ಲಿ ವಸುವಾಸರವನ್ನು ನಡಸಿದರು. ಅದರಲ್ಲಿ ನೆಟ್ಟ ಮನದಿಂದ ಮುಡುಪಿದ ಪುಲಿ ಈಶಾನಕಲ್ಪದ ದಿನಕರಪ್ರಭ ವಿಮಾನದಲ್ಲಿ ದಿವಾಕರಪ್ರಭನೆಂಬ ದೇವನಾಗಿ ಹುಟ್ಟಿತು. ಆಗ ಆದಿನಾಥನು ಅದೇ ವಿಮಾನದಲ್ಲಿ ಲಲಿತಾಂಗದೇವನಾಗಿದ್ದ. ದಿವಾಕರಪ್ರಭನು ಆತನ ಪರಿವಾರಕ್ಕೆ ಸೇರಿದವನಾದ. ಆತನನ್ನು ಸೇವಿಸಿದುದರ ಫಲವಾಗಿ ಆತನು ವಜ್ರಜಂಘೆಚರನಾದಂದು ತಾನೂ ಆತನ ಬಳಿಯಲ್ಲೇ ಜನ್ಮತಾಳಿ ಆತನ ಮಂತ್ರಿಯಾದ. ಅನಂತರ ಅಧೋಗ್ರೈವೇಯಕ ವಿಮಾನದಲ್ಲಿ ಅಹಮಿಂದ್ರನಾಗಿದ್ದು ವೃಷಭ

ನಾಥನು ವಜ್ರನಾಭಿಚರನಾದಂದು ಆತನ ತಮ್ಮಂದಿರಲ್ಲಿ ಒಬ್ಬನಾದ ಸುಬಾಹು ವಾಗಿ ಜನಿಸಿದ. ಅಣ್ಣನ ಸುಖಜೀವನಕ್ಕೆ ಸಾಧಕನಾಗಿರುತ್ತಾ ಜನ್ಮಸಾಫಲ್ಯತೆ ಯನ್ನು ಪಡೆದು, ಆತನೊಡನೆಯೇ ದೀಕ್ಷೆ ವಹಿಸಿ, ಏಕಾಗ್ರಚಿತ್ತದಿಂದ ಜಿನ ನನ್ನು ಸ್ಮರಿಸುತ್ತಾ ದೇಹವನ್ನು ತ್ಯಜಿಸಿ ಸರ್ವಾರ್ಥಸಿದ್ಧಿಕಲ್ಪದಲ್ಲಿ ಅಹಮಿಂದ್ರ ನಾಗಿ ಜನಿಸಿದ. ಅಲ್ಲಿ ಮೂವತ್ತುಮೂರು ಸಾಗರೋಪಮಕಾಲ ಸುಖ ವಾಗಿದ್ದು ಆತನಿಗಿಂತಲೂ ಮೊದಲೇ ಅಲ್ಲಿಂದ ಭೂಮಿಗೆ ಬಂದಿದ್ದ ವೃಷಭ ನಾಥನ ಮಗನಾಗಿ, ಭರತನೆಂಬ ಹೆಸರಿನಿಂದ ಹುಟ್ಟಿದನು. ಅದೇ ಕಲ್ಪ ದಲ್ಲಿಯೇ ಅಹಮಿಂದ್ರನಾಗಿದ್ದ ಮಹಾಬಾಹುಚರನು ಭರತೇಶ್ವರನ ತಮ್ಮ ನಾದ ಬಾಹುಬಲಿಯಾಗಿ ಹುಟ್ಟಿದನು.

ಜಿನಸೇನನು ಭರತೇಶನ ಚರಿತ್ರೆಯನ್ನು ವಿಸ್ತಾರವಾಗಿಯೇ ಪ್ರತಿಪಾದಿ ಸಿದ್ದಾನೆ. ವೃಷಭನಾಥನು ತನ್ನ ರಾಜ್ಯಾಡಳಿತದ ಅನಂತರ ತನ್ನ ನೂರ್ವರು ಮಕ್ಕಳಿಗೆ ರಾಜ್ಯವನ್ನು ಹಂಚಿ ಕೊಡುತ್ತಾನೆ. ಹಿರಿಯನಾದ ಭರತೇಶ್ವರನು ಅಯೋಧ್ಯೆಯಲ್ಲೂ, ಎರಡನೆಯವನಾದ ಬಾಹುಬಲಿಯು ಪೌದನಪುರ ದಲ್ಲಿಯೂ ರಾಜ್ಯವಾಳುತ್ತಿರುತ್ತಾರೆ. ಭರತನು ಚಕ್ರವರ್ತಿ ಪದವಿಯ ಸೌಖ್ಯಗಳನ್ನೆಲ್ಲಾ ಅನುಭವಿಸುತ್ತಿದ್ದು ಪ್ರಥಮ ಚಕ್ರಿಯೆಂಬ ತನ್ನ ಹೆಸರು ಸಾರ್ಥಕವಾಗುವಂತೆ ಜಗತ್ತನ್ನೆಲ್ಲಾ ಜಯಿಸಿ, ತಮ್ಮಂದಿರು ಮಾತ್ರ ಪ್ರತಿ ಭಟಿಸಲು ಅವರನ್ನು ಉಪಾಯದಿಂದ ಗೆದ್ದು, ರಾಜ್ಯವಾಳುತ್ತಾ, ತಂದೆಯ ಮೋಕ್ಷ ಕಲ್ಯಾಣಾನಂತರ ಕನ್ನಡಿಯಲ್ಲಿ ಪ್ರತಿಬಿಂಬಿಸಿದ ತನ್ನ ನೆರೆಗೂದಲನ್ನು ಕಂಡು ವೈರಾಗ್ಯದಿಂದ ತಪಸ್ಸಿಗೆ ಹೊರಟು ಹೋಗುತ್ತಾನೆ.

ಕವಿ ಭರತನ ದಿಗ್ವಿಜಯ ಪ್ರಕರಣವನ್ನು ಬಹು ವಿಸ್ತಾರವಾಗಿ ಪ್ರತಿ ಪಾದಿಸಿರುವನಾದರೂ ಆತನ ಭೋಗ ಜೀವನದ ಕಡೆ ಹೆಚ್ಚುಗಮನ ಕೊಟ್ಟಲ್ಲ. ಚಕ್ರವರ್ತಿಯಾಗುವುದಕ್ಕೆ ಮೊದಲಾಗಲೀ, ಚಕ್ರವರ್ತಿಯಾದ ಮೇಲಾಗಲೀ ಆತನು ತನ್ನ ನಿತ್ಯಜೀವನದಲ್ಲಿ ಪಟ್ಟ ಸುಖಗಳನ್ನು, ಭೋಗ ವಿಲಾಸಗಳನ್ನು ಅಷ್ಟಾಗಿ ವರ್ಣಿಸಿಲ್ಲ. ಜೈನ ಪುರಾಣ ಕರ್ತೃವಾದ ಆತನಿಗೆ ಇದರ ಔಚಿತ್ಯ ಆವಶ್ಯಕತೆಗಳು ಹೆಚ್ಚಾಗಿ ಕಾಣಬರಲಿಲ್ಲವೆಂದು ತೋರುತ್ತದೆ. ಅದ್ಭುತ

ಕವಿಯಾದ ಆತನಿಗೆ ಇದು ಅಂತಹ ಅಶಕ್ಯವಾದ ಕಾರ್ಯವೇನೂ ಆಗಿರಲಿಲ್ಲ; ತನ್ನ ಕಾವ್ಯವಾಹಿನಿಯ ಹಲವೆಡೆಗಳಲ್ಲಿ ಶೃಂಗಾರ ರಸದ ಮಡುಗಳನ್ನೇ ಸೃಷ್ಟಿಸಿದ್ದಾನೆ. ಭರತನ ಜೀವನದಲ್ಲಿಯೂ ಅಲ್ಲಲ್ಲಿ ಶೃಂಗಾರ ರಸದ ಸುಂದರ ಚಿತ್ರಗಳನ್ನು ಸೂಚಿಸಿದ್ದಾನೆ. ರಸಿಕನಾದ ಭರತ ಚಕ್ರವರ್ತಿ ದಿಗ್ವಿಜಯ ಪ್ರಯಾಣ ಕಾಲದಲ್ಲಿ, ದಾರಿಯಲ್ಲಿ ಅನೇಕ ಸುಂದರಿಯರಾದ ಪ್ರಾಕೃತ ಕನ್ಯೆಯರನ್ನು ಕುತೂಹಲದಿಂದ ನೋಡಿದನಂತೆ. ಅನೇಕ ಸಾಮಂತ ರಾಜರು ಕಪ್ಪಕಾಣಿಕೆಗಳ ಜೊತೆಗೆ ಕನ್ಯಾರತ್ನಗಳನ್ನು ಸಮರ್ಪಿಸುತ್ತಾರೆ. ಅಂಗ ವಂಗ ಕಳಿಂಗಾದಿ ರಾಜ್ಯಗಳನ್ನು ಗೆಲ್ಲುತ್ತಾ ಭರತನು ಕರ್ಣಾಟಕಕ್ಕೂ ಬರುತ್ತಾನೆ. ಅವರನ್ನು ಕುರಿತು ಕನ್ನಡಿಗನಾದ ಕವಿ (ಜಿನಸೇನ ನೃಪತುಂಗನ ಗುರು) ಕರ್ಣಾಟಕರನ್ನು ಕುರಿತು ಹೆಮ್ಮೆಯಿಂದ

ಕರ್ಣಾಟಕಾನ್ ಸ್ಫುಟಾಟೋಪ ವಿಕಟೋದ್ಭಟ ವೇಷಕಾನ್
ಹರಿದ್ರಾಂಜನ ತಾಂಬೂಲಪ್ರಿಯಾನ್ ಪ್ರಾಯೋ ಯಶೋಧನಾನ್

ಎಂದು ಕರ್ಣಾಟಕರಿಗೊಂದು ಕಿರುಗಾಣಿಕೆಯನ್ನು ಸಲ್ಲಿಸಿದ್ದಾನೆ. ಭರತನಿಗೆ ಅರ್ಪಿತರಾದ ಸ್ತ್ರೀಯರ ಸೌಂದರ್ಯ ವಿಲಾಸಗಳನ್ನು ಸ್ವಲ್ಪ ಮಟ್ಟಿಗೆ ಸೂಚಿಸಿದ್ದಾನೆ. ಆದರೂ ಜಿನಸೇನನ ಹೆಗ್ಗುರಿ

ತ ಏವ ಕವಯೋ ಲೋಕೇ ತ ಏವಚ ವಿಚಕ್ಷಣಃ |
ಯೇಷಾಂ ಧರ್ಮಕಥಾಂಗತ್ವಂ ಭಾರತೀ ಪ್ರತಿಪದ್ಯತೇ ||

ಧರ್ಮಾನುಬಂಧಿನೀ ಯಾ ಸ್ಯಾತ್ ಕವಿತಾ ಸೈವ ಶಸ್ಯತೇ |
ಶೇಷಾಪಾಪಾಸ್ರವಾ ಯೈವ ಸುಪ್ರಯುಕ್ತಾಪಿ ಜಾಯತೇ ||

ಎಂಬ ಆತನ ನುಡಿಯಂತೆ ಧರ್ಮ ಬೋಧನೆಯೇ ಹೊರತು ಬರಿಯ ಜನ ಮನೋರಂಜನೆಯಲ್ಲ. ಆತನ ದೃಷ್ಟಿಯಲ್ಲಿ ತ್ಯಾಗಶೀಲನಾದ ಬಾಹುಬಲಿ ಗಿರುವಷ್ಟು ಪೂಜ್ಯತೆ ಭರತನಿಗಿಲ್ಲ. ಕೇವಲಿಯಾದ ಬಾಹುಬಲಿ ತೀರ್ಥಂಕರನ ಜೀವಿತ ಕಾಲದಲ್ಲಿಯೇ ಮುಕ್ತನಾದವನು. ಆತನ ಉಚ್ಚವಾದ ಭವ್ಯ ವ್ಯಕ್ತಿತ್ವದ ಮುಂದೆ ಭರತನ ವ್ಯಕ್ತಿತ್ವ ಅಷ್ಟು ಕಳೆ ಕಟ್ಟುವಂತಿಲ್ಲ.

ಸುಮಾರು ಕ್ರಿ. ಶ. ೫೫೦ ರಲ್ಲಿ ಇದ್ದವನೆಂದು ಊಹಿಸಲ್ಪಟ್ಟಿರುವ ಕವಿ ಪರಮೇಷ್ಠಿಯ ಗ್ರಂಥದ ಆಧಾರದ ಮೇಲೆ ಜಿನಸೇನಾಚಾರ್ಯನು ತನ್ನ ಮಹಾಪುರಾಣವನ್ನು ರಚಿಸಿರುವನೆಂದು ಕನ್ನಡ 'ತ್ರಿಷಷ್ಟಿ ಶಲಾಕಾ ಪುರುಷ ಚರಿತೆ' ಯ ಕರ್ತೃವಾದ ಚಾವುಂಡರಾಯನ ಹೇಳಿಕೆ. ಜಿನಸೇನನು ತನ್ನ ಗ್ರಂಥಾರಂಭದಲ್ಲಿ ಆತನನ್ನು ಸ್ಮರಿಸುತ್ತಾ

ಸ ಪೂಜ್ಯಃ ಕವಿಭಿರ್ಧೀಕೇ ಕವೀನಾಂ ಪರಮೇಶ್ವರಃ ।
ವಾಗರ್ಥ ಸಂಗ್ರಹಂ ಕೃತ್ಸ್ನಂ ಪುರಾಣಂ ಯಃ ಸಮಗ್ರಹೀತ್ ॥

ಎಂದು ತಾನು ಆತನಿಗೆ ಋಣಿಯೆಂಬುದನ್ನು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಜಿನಸೇನನು ಬರೆದುಬಿಟ್ಟ ಮಹಾ ಪುರಾಣದ ಉಳಿದ ಭಾಗವನ್ನು ಪೂರ್ಣ ಗೊಳಿಸಿದ ಗುಣಭದ್ರಕವಿ ಗ್ರಂಥಾರಂಭದಲ್ಲಿ "ಕವಿ ಪರಮೇಶ್ವರ ನಿಗದಿತ ಗದ್ಯಕಥಾಮಾತೃಕಂ ಪುರೋಶ್ಚರಿತಂ" ಎಂದು ಹೇಳಿ, ಕವಿ ಪರಮೇಷ್ಠಿ ತನ್ನ ಕಾವ್ಯವನ್ನು ಗದ್ಯದಲ್ಲಿ ಬರೆದಿದ್ದನೆಂದು ಸೂಚಿಸುತ್ತಾನೆ. ಆದಿಪಂಪ, ಚಾವುಂಡರಾಯ, ನೇಮಿಚಂದ್ರ, ಪಾರ್ಶ್ವಪಂಡಿತ, ನಯಸೇನ, ಗುಣವರ್ಮ, ಮೊದಲಾದ ಕವಿಗಳೆಲ್ಲರೂ ಈತನನ್ನು ಮುಕ್ತಕಂಠರಾಗಿ ಹೊಗಳಿರುವ ರಾದರೂ ಇದುವರೆಗೆ ಈತನ ಗ್ರಂಥವಾವುದೂ ಉಪಲಬ್ಧವಾಗಿಲ್ಲ. ದೊರೆ ತಿರುವ ಪುರಾಣಗಳಲ್ಲಿ ಜಿನಸೇನಾಚಾರ್ಯನದೇ ಅತ್ಯಂತ ಪುರಾತನವಾದುದು. ಅಲ್ಲದೆ ಇದರ ಬೃಹತ್ತಿಗೆ ತಕ್ಕ ಮಹತ್ತೂ ಇದರಲ್ಲಿದೆ. ಆದುದರಿಂದ ಈತನಿಂದ ಮುಂದೆ ಬಂದ ಜೈನ ಕವಿಗಳೆಲ್ಲರೂ ಸಾಮಾನ್ಯವಾಗಿ ಈತನನ್ನೇ ಅನುಸರಿಸಿದರು.

ಜಿನಸೇನಾಚಾರ್ಯನ ಅನಂತರ ಹಲವರು ಪುರಾಣ ಕರ್ತೃಗಳು ಆಗಿ ಹೋಗಿದ್ದಾರೆ. ಅವರಲ್ಲಿ ಮುಖ್ಯರಾದ ಕೆಲವರ ಹೆಸರನ್ನು ಇಲ್ಲಿ ಸ್ಮರಿಸಬಹುದೆಂದು ತೋರುತ್ತದೆ.

1. ಶೀಲಾಚಾರ್ಯ. ಈತನ ಕಾಲ ಸುಮಾರು ೮೭೮. ಗ್ರಂಥದ ಹೆಸರು 'ಚೌಪನ್ನ ಮಹಾ ಪುರಿಸಚರಿಯ'; ಪಾಕೃತದಲ್ಲಿದೆ; ಶ್ವೇತಾಂಬರ

ಪಂಗಡಕ್ಕೆ ಸೇರಿದವನು. ಕಥೆಯ ಸ್ಥೂಲ ರೇಖೆಗಳು ಜಿನಸೇನಾಚಾರ್ಯನವೇ ಆದರೂ ವಿವರಣೆಗಳಲ್ಲಿ ಬೇಕಾದಷ್ಟು ಬದಲಾವಣೆಗಳು ಕಂಡುಬರುತ್ತವೆ. ಶ್ವೇತಾಂಬರ ಪಂಥದ ಮಹಾಪುರಾಣಗಳಲ್ಲಿ ಇದೇ ಮೊದಲನೆಯದು.

2. ಅಮರಸೂರಿ.—ಈತನ ಗ್ರಂಥಕ್ಕೂ 'ಮಹಾಪುರಿಸಚರಿಯ'ವೆಂದೇ ಹೆಸರು. ಇದೂ ಪ್ರಾಕೃತದಲ್ಲಿಯೇ ಇದೆ. **ಬೃಹಟ್ಟಿಪ್ಪಣಿ**ಕದ ಆಧಾರದ ಮೇಲೆ ಬರೆದುದು.

3. ಮೇರುತುಂಗನ ಮಹಾಪುರುಷ ಚರಿತ್ರೆ. ಸಂಸ್ಕೃತದಲ್ಲಿದೆ.

4. ಪುಷ್ಪದಂತನ 'ಮಹಾಪುರಾಣ'. ಇದು ಪ್ರಾಕೃತದಲ್ಲಿದೆ. ರಾಷ್ಟ್ರಕೂಟ ಮಂತ್ರಿ ಭರತನ ಆಶ್ರಯದಲ್ಲಿದ್ದ. ಲೋಕ ಕಲ್ಯಾಣಕ್ಕಾಗಿ ಮಹಾ ಪುರಾಣವನ್ನು ಬರೆಯ ಹೊರಟು ೯೫೯ ರಲ್ಲಿ ಆದಿ ಪುರಾಣವನ್ನು ರಚಿಸಿದ. ಅಲ್ಲಿಗೇ ಗ್ರಂಥವನ್ನು ನಿಲ್ಲಿಸಿರಲು ಒಂದು ದಿನ ಸರಸ್ವತಿ ಕನಸಿನಲ್ಲಿ ಕಾಣಿಸಿಕೊಂಡು ಗ್ರಂಥವನ್ನು ಮುಂದುವರಿಸುವಂತೆ ಅಪ್ಪಣೆ ಮಾಡಿದಳಂತೆ. ಅದರಂತೆ ಮುಂದುವರಿಸಿ ೯೬೫ ರಲ್ಲಿ ಗ್ರಂಥವನ್ನು ಪೂರೈಸಿದ. ಮುಗಿದ ಗ್ರಂಥವನ್ನು ನೋಡಿಕೊಂಡಾಗ ಬಹು ತೃಪ್ತಿಕರವಾಗುವಂತೆ ಕಾಣಿಸಿತೇನೋ! ಭಾರತ ಮುಗಿದ ಮೇಲೆ ವ್ಯಾಸಮಹರ್ಷಿ " ಯದಿಹಾಸ್ತಿ ತದನ್ಯತ್ರ, ಯನ್ನೇಹಾಸ್ತಿ ನತತ್ಕ್ವಚಿತ್ " ಎಂದು ಹೇಳಿಕೊಂಡಂತೆ ಇವನೂ.

ಅತ್ರ ಪ್ರಾಕೃತಲಕ್ಷಣಾನಿ ಸಕಲಾ ನೀತಿಸ್ಥಿತಿಶ್ಛಂದಸಾ ।
ಮರ್ಥಾಲಂಕೃತಯೋ ರಸಾಶ್ಚ ವಿವಿಧಾಸ್ತತ್ಪಾರ್ಥ ನಿರ್ದೇತಯಃ ।
ಕಿಂಚಾನ್ಯದ್ಯದಿಹಾಸ್ತಿ ಜೈನಚರಿತೇ ನಾನ್ಯತ್ರತದ್ವಿದ್ಯತೇ ।
ದ್ವಾವೇತೌ ಭರತೇಶ ಪುಷ್ಪದಶಸೌ ಸಿದ್ಧಂ ಯಯೋರೀದೃಶಮ್ ॥

ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಕವಿಯು ಮಹಾ ಪುರಾಣವಲ್ಲದೆ 'ನಾಯ ಕುಮಾರ ಚರಿ ಉ' 'ಜಸಹರ ಚರಿ ಉ' ಎಂಬ ಎರಡು ಪ್ರಾಕೃತ ಗ್ರಂಥಗಳನ್ನು ಬರೆದಿದ್ದಾನೆ.

5. ಹೇಮಚಂದ್ರ—'ಶ್ವೇತಾಂಬರ ಪಂಗಡಕ್ಕೆ ಸೇರಿದವನು ; ತ್ರಿಷಷ್ಟಿ ಶಲಾಕಾ ಪುರುಷಚರಿತೆ' ಈತನ ಗ್ರಂಥ, ಇತರ ಮಹಾ ಪುರಾಣಗಳಂತೆ ಇದಾದರೂ ಮಹಾಬೃಹದ್ಗ್ರಂಥ. ಮೂವತ್ತುನಾಲ್ಕುಸಾವಿರ ಶ್ಲೋಕಗಳನ್ನೊಳಗೊಂಡ ಹತ್ತು ಪರ್ವಗಳಿವೆ. ಶೀಲಾಚಾರ್ಯನ 'ಚೌಪನ್ನ ಮಹಾಪುರಿಸ ಚರಿಯ' ವನ್ನು ಅನುಸರಿಸಿ ಹೇಮಚಂದ್ರನು ತನ್ನ ಗ್ರಂಥವನ್ನು ರಚಿಸಿರುವನಾದರೂ ಆತನಿಗೇನೂ ಹೆಚ್ಚು ಋಣಿಯಾಗಿಲ್ಲ. ತ್ರಿಷಷ್ಟಿ ಶಲಾಕಾ ಪುರುಷ ಚರಿತೆಯು ಉತ್ತಮವಾದ ಅಲಂಕಾರಗಳಿಂದ ತುಂಬಿ ಕಾವ್ಯಮಯವಾಗಿದೆ; ಅರ್ಥ ಗರ್ಭಿತವಾಗಿದೆ; ಮನೋಜ್ಞವಾಗಿದೆ. ಹೇಮಚಂದ್ರನು ಬಹು ದೊಡ್ಡ ಕವಿ. " ಕಲಿಕಾಲ ಸರ್ವಜ್ಞ " ನೆಂಬ ತನ್ನ ಬಿರುದು ಸಾರ್ಥಕವಾಗುವಂತೆ ವ್ಯಾಕರಣ, ಶಬ್ದಕೋಶ, ಛಂದಶ್ಶಾಸ್ತ್ರ, ಯೋಗಶಾಸ್ತ್ರ ಇತ್ಯಾದಿ ಹಲವು ಶಾಸ್ತ್ರ ಗ್ರಂಥಗಳ, ಸಾಹಿತ್ಯ ಗ್ರಂಥಗಳ ಕರ್ತೃ ಈತ. ಕಥೆಯ ವಿಸ್ತರತೆ ವಿವರಣೆಗಳಲ್ಲಿ ಈತನು ಜಿನಸೇನನಿಂದ ಸ್ವಲ್ಪಮಟ್ಟಿಗೆ ಭಿನ್ನನಾಗಿದ್ದರೂ ಕಥೆಯ ಮೂಲ ರೇಖೆಗಳು ಜಿನಸೇನನವೇ.

'ಮಹಾಪುರಾಣ'ವೆಂಬುದು ಜೈನನುತದ ಒಂದು ಸಾರಿಭಾಷಿಕ ಶಬ್ದ. ಇದಕ್ಕೆ ಅರ್ಥ ಪುರಾತನ ಜೈನ ಮಹನೀಯರ ವಿಸ್ತಾರ ಚರಿತ್ರೆ ಎಂದು. ಜೈನ ಪುರಾಣಗಳಲ್ಲಿ ಮಹಾ ಪುರುಷನೊಬ್ಬನ ಜೀವನ ಚರಿತ್ರೆಯನ್ನು ಪ್ರತಿಪಾದಿಸಿರುತ್ತದೆ. ಮಹಾ ಪುರಾಣವಾದರೋ ಅರವತ್ತು ಮೂವರು ಪುರಾತನರ ಚರಿತ್ರೆಗಳನ್ನು ವಿವರಿಸುತ್ತದೆ. ಜಿನಸೇನಾಚಾರ್ಯನು ಮಹಾಪುರಾಣವೆಂಬ ಪದವನ್ನು ತ್ರಿಷಷ್ಟಿಲಕ್ಷಣವೆಂಬ ಪದಕ್ಕೆ ಸಮಾನವಾದುದಾಗಿ ಬಳಸಿದ್ದಾನೆ. ಇದನ್ನೇ ಹೇಮಚಂದ್ರನು ತ್ರಿಷಷ್ಟಿ ಶಲಾಕಾ ಪುರುಷ ಚರಿತೆ ಎಂದು ಕರೆದಿದ್ದಾನೆ. ಪುಷ್ಪದಂತ ತ್ರಿಸಟ್ಠಿ ಮಹಾಪುರಿಸ ಗುಣಾಲಂಕಾರ (ಎಂದರೆ ಅರವತ್ತು ಮೂವರು ಮಹಾಪುರುಷರ ಗುಣಗಳ ಗೌರವ) ಎಂಬ ಮಾತನ್ನೂ ಮಹಾ ಪುರಾಣವೆಂಬ ಮಾತನ್ನೂ ಸಮನಾರ್ಥದಲ್ಲಿ ಬಳಸಿದ್ದಾನೆ.

ಹಿಂದೂ ಸಾಹಿತ್ಯದಲ್ಲಿ ಪುರಾಣವೆಂಬ ಮಾತಿಗೆ ಈ ಸೂತ್ರವಿದೆ:—

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ |
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಮ್ ||

ಈ ಸೂತ್ರದಿಂದ ಬಹಳ ಭಿನ್ನವಾಗಿಲ್ಲ ಜೈನಪುರಾಣಗಳಾದರೂ. ಜಿನ ಸೇನನು ಮಹಾಪುರಾಣವನ್ನು ಬರೆಯುತ್ತಾ

ತೀರ್ಥೇಶಾಮಪಿ ಚಕ್ರೇಶಾಂ ಹಲಿನಾಮರ್ಧಚಕ್ರಿಣಾಮ್ ।
ತ್ರಿಷಷ್ಟಿಲಕ್ಷಣಂ ವಕ್ಷ್ಯೇ ಪುರಾಣಂ ತದ್ವಿಷಾಮಪಿ ॥
ಪುರಾತನಂ ಪುರಾಣಂ ಸ್ಯಾತ್ ತನ್ಮಹನ್ಮಹದಾಶ್ರಯಾತ್ ।
ಮಹದ್ಭಿರುಪ ದಿಷ್ಟತ್ವಾನ್ಮಹಾ ಶ್ರೇಯೋನುಶಾಸನಾತ್ ॥
ಕವಿಂ ಪುರಾಣಮಾಶ್ರಿತ್ಯ ಪ್ರಸ್ತುತತ್ವಾತ್ಪುರಾಣತಾ ।
ಮಹತ್ವಂ ಸ್ವಮಹಿಮ್ನೈವ ತಸ್ಯೇತ್ಯನ್ಯೈರ್ನಿರುಚ್ಯತೇ ॥
ಮಹಾಪುರುಷ ಸಂಬಂಧಿ ಮಹಾಭ್ಯುದಯ ಶಾಸನಮ್ ।
ಮಹಾಪುರುಷ ಮಾಮ್ನಾತ ಮತ ಏತನ್ಮಹರ್ಷಿಭಿಃ ॥

ನಾನು ಅರವತ್ತ್ಮೂವರು ಪುರಾತನರ ಚರಿತ್ರೆಯನ್ನು ಹೇಳುತ್ತೇನೆ. ಗ್ರಂಥಕ್ಕೆ ಪುರಾಣವೆಂದು ಹೆಸರು. ಏಕೆಂದರೆ—ಇದು ಪುರಾತನರ ಚರಿತ್ರೆ. ಇದನ್ನು ಮಹಾಪುರಾಣವೆಂದು ಕರೆಯುವುದು ಇದು ಮಹನೀಯರ ಚರಿತ್ರೆ ಅಥವಾ ಮಹರ್ಷಿಗಳು ಹೇಳಿರುವುದು ಅಥವಾ ಮಹಾ—ನಿರ್ವಾಣವನ್ನು ಬೋಧಿಸುವುದರಿಂದ ಇತಿಹಾಸ ಒಬ್ಬರ ಕಥೆ ; ಮಹಾಪುರಾಣ ಅರವತ್ತು ಮೂವರ ಕಥೆ.

ಹಿಂದುಗಳಿಗೆ ರಾಮಾಯಣ ಮಹಾಭಾರತಗಳು ಹೇಗೋ ಜೈನರಿಗೆ ಮಹಾಪುರಾಣಗಳು ಹಾಗೆ. ಆದರೆ ಮಹಾಭಾರತ ರಾಮಾಯಣದಲ್ಲಿ ಕಂಡು ಬರುವ ಐಕ್ಯ ಇಲ್ಲಿ ಕಂಡುಬರುವುದಿಲ್ಲವಾದುದರಿಂದ ಇದನ್ನು 'ಎಪಿಕ್' ಎಂಬ ಅರ್ಥದಲ್ಲಿ ಕರೆಯಲಾಗುವುದಿಲ್ಲ.

ಅರವತ್ತು ಮೂವರು ಪುರಾತನರ ಕಥೆಗಳನ್ನೊಳಗೊಂಡ ಮಹಾ ಪುರಾಣಗಳಲ್ಲದೆ ಆದಿಜಿನನ ಕಥೆಯನ್ನು ಮಾತ್ರವೇ ಒಳಗೊಂಡ ಅನೇಕ

ಗ್ರಂಥಗಳು ಸಂಸ್ಕೃತದಲ್ಲೂ ಕನ್ನಡ ಮೊದಲಾದ ಪ್ರಾಂತಭಾಷೆಗಳಲ್ಲೂ ಹುಟ್ಟಿಕೊಂಡಿವೆ. ಇವುಗಳಲ್ಲಿ ಅರ್ಹದ್ದಾಸ ಕೃತ "ಪುರುದೇವ ಚಂಪೂ" ಎಂಬ ಸಂಸ್ಕೃತ ಗ್ರಂಥವು ಬಹು ಪ್ರೌಢವಾದುದು. ಅರ್ಹದ್ದಾಸನು ಸಂಸ್ಕೃತ ಸಾಹಿತ್ಯವು ಶಬ್ದಾಡಂಬರದ ಕೇಳುಮಟ್ಟಕ್ಕಿಳಿದ ಕಾಲದವನು. ಆದ್ದರಿಂದ ಶಬ್ದಾಲಂಕಾರಗಳ ಉರುಬು ಹೆಚ್ಚು. ಚರ್ವಿತ ಚರ್ವಣವಾದ ವಿಷಯ; ಪಾಂಡಿತ್ಯದ ಕತ್ತರಿಯಲ್ಲಿ ಸಿಕ್ಕಿ ತತ್ತರಿಸುತ್ತಿದೆ ಪ್ರತಿಭೆ. ಇದಲ್ಲದೆ ಕ್ರಿ. ಶ. ೧೪೩೨ ರಲ್ಲಿದ್ದ ಶುಭಶೀಲಗಣಿಯೆಂಬ ಸಂಸ್ಕೃತ ಕವಿ "ಭರತಾದಿ ಕಥಾ" ಎಂಬ ಗ್ರಂಥವನ್ನು ಬರೆದಿರುವಂತೆ ತಿಳಿದುಬರುತ್ತದೆ. ಇದರಲ್ಲಿ ಬಹುಶಃ ಭರತನ ಕಥೆಯನ್ನು ವಿಸ್ತಾರವಾಗಿ ಪ್ರತಿಪಾದಿಸಿರಬಹುದೋ ಏನೋ. ಹಾಗಿದ್ದಲ್ಲಿ ಭರತನ ಕಥೆಯನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಮೊದಲು ಬರೆದ ಕೀರ್ತಿ ಈತನಿಗೆ ಸಲ್ಲಬೇಕಾಗುವುದು. ಆದಿಜಿನನ ಕಥೆಯನ್ನು ಒಳಕೊಂಡ ಶ್ರೀ ಪುರಾಣವೆಂಬ ಗ್ರಂಥವೊಂದು ತಮಿಳಿನಲ್ಲಿರುವಂತೆ ತಿಳಿದು ಬರುತ್ತದೆ.

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಮಹಾ ಪುರಾಣದ ಪ್ರವೇಶವಾಗಿಲ್ಲವಾದರೂ ಹಲವು ತೀರ್ಥಂಕರರ ಮತ್ತು ಇತರ ಮಹನೀಯರ ಜೀವನ ಚರಿತ್ರೆಗಳು ಹುಲುಸಾಗಿಯೇ ಬೆಳೆದುಕೊಂಡಿವೆಯೆಂದು ಹೇಳಬಹುದು. ಇವುಗಳಲ್ಲಿ ಆದಿಕವಿ ಪಂಪನ 'ಆದಿಪುರಾಣ'ವು ಅಗ್ರಪೂಜಾರ್ಹವಾದುದು. ಆದರೆ ಕವಿ ಇಲ್ಲಿ ಬಹುಮಟ್ಟಿಗೆ ಸಂಗ್ರಹಕಾರನಾಗಿಬಿಟ್ಟಿದ್ದಾನೆ. ಜಿನಸೇನ ಕವಿಯ ಆದಿಪುರಾಣವನ್ನು ಹಿತಮಿತವಾಗಿ ಸಂಗ್ರಹಿಸಿದ್ದಾನೆ. ಪುರಾಣಗ್ರಂಥವಾದುದರಿಂದ ಬದಲಾವಣೆಗಳಿಗೆ ಕೈಹಾಕಲು ಹಿಂಜರಿದಿರುವಂತೆ ತೋರುತ್ತದೆ. ಪ್ರತಿಪಾದನಾ ರೀತಿ ಸುಂದರವಾಗಿದ್ದರೂ ಅನೇಕ ವೇಳೆ ಜಿನಸೇನ ಕವಿಯು ಭಾವಗಳನ್ನು, ಮಾತುಗಳನ್ನು, ಹಾಗೆಯೇ ಆನಾಮತ್ತಾಗಿ ಕನ್ನಡಕ್ಕೆ ಭಾಷಾಂತರಿಸುತ್ತಾನೆ.

ಈತನ ತರುವಾಯ ಇದೇ ವಿಷಯವನ್ನು ಕುರಿತು ಬರೆದವನೆಂದರೆ ಚಾವುಂಡರಾಯ. ಈತನ ವೈಶಿಷ್ಟ್ಯವೆಂದರೆ ಕಾವ್ಯವನ್ನು ಗದ್ಯದಲ್ಲಿ ಬರೆದಿರು

ವುದು. ಪುರಾತನರ ಗದ್ಯಕಾವ್ಯಗಳಲ್ಲಿ ಇದಕ್ಕೊಂದು ಹಿರಿಯಸ್ಥಾನವಿದೆ. ಈತನೂ ಜಿನಸೇನನ ಆದಿಪುರಾಣವನ್ನು ಸಂಗ್ರಹಿಸಿದ್ದಾನೆ. ಆದರೆ ಪಂಪನ ಜಾಣ್ಮೆ ಈತನಲ್ಲಿಲ್ಲ. ಧರ್ಮದ ಕಡೆ ಬಾಗಿರುವ ಈತನ ದೃಷ್ಟಿಯಲ್ಲಿ ಭರತನ ಅರವತ್ತು ಸಹಸ್ರ ವರ್ಷಗಳ ದಿಗ್ವಿಜಯಕ್ಕೆ ಎರಡು ಪುಟಗಳು ಸಾಕು. ಸಮವಸರಣಮಂಟಪದ ವರ್ಣನೆಗೆ ಮಾತ್ರ ಎಂಟು ಪುಟಗಳು ಬೇಕು. ಕಾವ್ಯಮಯವಾಗಿ ಅತ್ಯಂತ ನಾಟಕೀಯವಾಗಿರುವ ಭರತ–ಬಾಹುಬಲಿಗಳ ಪ್ರಕರಣವನ್ನು ಪ್ರತಿಪಾದಿಸಲು ಒಂದು ಪುಟವನ್ನು ಕೂಡ ವೆಚ್ಚಮಾಡಲಾರ.

'ಆದಿ ತೀರ್ಥಂಕರನ ಭವಾವಳಿ' ಎಂಬ ಅನಿರ್ದಿಷ್ಟ ಕರ್ತೃಕವಾದ ಕೈಬರೆಹದ ಪ್ರತಿಯೊಂದು ನನ್ನ ವಿದ್ಯಾ ಗುರುಗಳಾದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್, ಎಂ.ಎ. ಇವರ ಬಳಿ ಇದೆ. ಇದು ಪಂಪ ಮಹಾಕವಿಯ 'ಆದಿ ಪುರಾಣ' ಗ್ರಂಥದ ಗದ್ಯಾನುವಾದವಷ್ಟೆ. ಆದರ ಶೈಲಿಯಿಂದ ಅಷ್ಟೇನೂ ಪ್ರಾಚೀನಗ್ರಂಥವಿರಲಾರದೆಂದು ಊಹಿಸಬಹುದು. ಇತ್ತೀಚೆಗೆ ಹಾಸನದ ಕಡೆಯ ಬೊಮ್ಮಣ್ಣಕವಿಯೆಂಬುವರೊಬ್ಬರು ಆದಿ ಪುರಾಣದ ಕಥೆಯನ್ನು ಯಕ್ಷಗಾನರೂಪದಲ್ಲಿ ಬರೆದಿದ್ದಾರೆ.

ಇದನ್ನೆಲ್ಲ ನೋಡಿದರೆ ಆದಿಜಿನನ ಮತ್ತು ಭರತನ ಕಥೆ ಎಷ್ಟು ಜನಾದರಣೀಯವಾಗಿದ್ದಿತೆಂಬುದು ಕಂಡು ಬರಲಾರದೆ ಇರದು. ಜನರಿಗೆ ಅಷ್ಟು ಅಭಿರುಚಿಯಿದ್ದುದನ್ನು ಕಂಡೇ ರತ್ನಾಕರ ಕವಿಯು ಹತ್ತು ಸಹಸ್ರ ಪದ್ಯಗಳ ತನ್ನ ಬೃಹದ್ಗ್ರಂಥವನ್ನು ಸಾಂಗತ್ಯದಲ್ಲಿ ಬರೆಯಲು ಧೈರ್ಯಮಾಡಿರಬೇಕು.

ಜೈನರ ಮೇಲಿನ ಕಾವ್ಯಗಳಲ್ಲಿ ಕಂಡುಬರುವ ಆದಿ ತೀರ್ಥಂಕರ ವೃಷಭನಾಥನ ಜೀವನ ಚರಿತ್ರೆಗೂ ಸಂಸ್ಕೃತ ಭಾಗವತದ ಪಂಚಮಸ್ಕಂಧದ ದ್ವಿತೀಯಾಧ್ಯಾಯದಲ್ಲಿ ಕಂಡುಬರುವ ಋಷಭದೇವನ ಕಥೆಗೂ ಏನಾದರೂ ಸ್ವಲ್ಪ ಸಂಬಂಧವಿರಬಹುದೇ? ಆದಿ ತೀರ್ಥಂಕರ ವೃಷಭನಾಥನು ನಾಭಿ–ಮರುದೇವಿಯರ ಮಗನಾದರೆ ಭಾಗವತದ ಋಷಭನು ನಾಭಿ–ಮೇರುದೇವಿಯರ ಮಗ. ಇಬ್ಬರಿಗೂ ಅನೇಕ ಮಂದಿ ಮಕ್ಕಳಾಗುತ್ತಾರೆ. ಇಬ್ಬರ ಹಿರಿಯ ಮಗನೂ ಭರತ. ಇಬ್ಬರೂ ಸ್ವಯಂ ಜ್ಞಾನಿಗಳಾಗಿ ಹಿರಿಯ ಮಗನಿಗೆ ಪಟ್ಟ

ಕಟ್ಟಿ ದಿಗಂಬರರಾಗಿ ದೇಶಸಂಚಾರ ಮಾಡುತ್ತಾ ಚಿರಕಾಲ ತಪಸ್ಸಿನಿಂದ ಮುಕ್ತಿಮಾರ್ಗವನ್ನು ಸಾಧಿಸುತ್ತಾರೆ. ವೃಷಭನ ಮತಕ್ಕೆ ಪಾಷಂಡಿಯೊಬ್ಬನು ಪ್ರತಿದ್ವಂದ್ವಿಯಾಗಿ ಹುಟ್ಟಿಕೊಂಡಂತೆ ಋಷಭನ ಮತಕ್ಕೂ ಅರ್ಹನೆಂಬ ದಕ್ಷಿಣ ಕರ್ನಾಟಕದ ರಾಜನೊಬ್ಬನು ಪ್ರತಿಕಕ್ಷಿಯಾಗಿ ನಿಂತು ಪಾಷಂಡಮತವನ್ನು ಹರಡುತ್ತಾನೆ. ಎರಡು ಕಡೆಯೂ ಭರತನ ಪಾತ್ರವು ಆದರ್ಶನೀಯವಾದುದು. ಭಾಗವತದ ಪ್ರಕಾರ ಭರತನು ಹತ್ತು ಸಹಸ್ರ ವರ್ಷಗಳ ಕಾಲ ರಾಜ್ಯವಾಳಿ ಅನಂತರ ಪಿತೃದತ್ತ ರಾಜ್ಯವನ್ನು ಮಕ್ಕಳಿಗೆ ಹಂಚಿಕೊಟ್ಟು ವೈರಾಗ್ಯಶೀಲನಾಗಿ ತಪಸ್ಸು ಮಾಡುತ್ತಿರುತ್ತಾನೆ. ಹೀಗಿರುವಾಗ ಒಮ್ಮೆ ಈತನ ಆಶ್ರಮದ ಪಕ್ಕದಲ್ಲಿ ಸಿಂಹದ ಗರ್ಜನೆಯಿಂದ ಹಳ್ಳವನ್ನು ದಾಟಿದ ಗರ್ಭದ ಜಿಂಕೆಯೊಂದು ನೀರಿನೊಳಗೆ ಮರಿಯನ್ನು ಪ್ರಸವಿಸುತ್ತದೆ. ಹಾರಿದ ಜಿಂಕೆ ದರಿಕಂದರದಲ್ಲಿ ಬಿದ್ದು ಸತ್ತುಹೋಗುತ್ತದೆ. ನೀರಿನಲ್ಲಿ ತೇಲುತ್ತ ಹೋಗುತ್ತಿದ್ದ ಹರಿಣ ಶಿಶುವನ್ನು ಕಂಡು ಭರತನು ಕರುಣೆಯಿಂದ ಅದನ್ನೆತ್ತಿ ಸಾಕಲು ಆರಂಭಿಸುತ್ತಾನೆ. ಅನಂತರ ಭರತನ ಅನುಷ್ಠಾನಾದಿಗಳು ಹ್ರಸ್ವವಾಗುತ್ತಾ ಬರುತ್ತವೆ. " ಸಾಧವಃ ಉಪಶಮಶೀಲಾಃ ಕೃಪಣ ಸುಹೃದಃ ಏವಂ ವಿಧಾರ್ಥಂ ಸ್ವಾರ್ಥಾನಪಿ ಗುರುತರಾಂ ಉಪೇಕ್ಷಂತೇ." ಹೀಗೆ ನಿಶ್ಚಯಿಸಿದ ಭರತನಿಗೆ ಸ್ನಾನ, ಧ್ಯಾನ, ಜಪ, ತಪಗಳೆಲ್ಲವೂ ಜಿಂಕೆಯಾಗಿ ಹೋಗುತ್ತದೆ. ಕೊನೆಗೆ ಮರಣ ಕಾಲದಲ್ಲಿ ಜಿಂಕೆಯ ವಿಷಯವನ್ನೇ ಚಿಂತಿಸುತ್ತಾ, ಕಣ್ಣೀರಿಡುತ್ತಿರುವ ಅದನ್ನೇ ನೋಡುತ್ತಾ ಸತ್ತು, ಮರುಜನ್ಮದಲ್ಲಿ ಜಿಂಕೆಯಾಗಿ ಜನ್ಮಿಸುತ್ತಾನೆ. ಆದರೆ ಪೂರ್ವಜನ್ಮದ ತಪಃ ಪ್ರಭಾವದಿಂದ ಜನ್ಮಾಂತರಜ್ಞಾನವನ್ನು ಪಡೆದು ಪಶ್ಚಾತ್ತಾಪಯುಕ್ತನಾಗಿ " ಅಹೋ ಕಷ್ಟಂ ಭ್ರಷ್ಟೋಽಹಂ " ಎಂದುಕೊಂಡು ಪೂರ್ವಜನ್ಮದ ತನ್ನ ಕ್ಷೇತ್ರಕ್ಕೆ ಹೋಗಿ ಆತ್ಮ ಸಹಚರನಾಗಿದ್ದು ದೇಹಾನಂತರ ಬ್ರಾಹ್ಮಣನೊಬ್ಬನ ಹೊಟ್ಟೆಯಲ್ಲಿ ಬ್ರಾಹ್ಮಣ ಬ್ರುವನಾಗಿ ಹುಟ್ಟುತ್ತಾನೆ. ಇದು ಅವನ ಚರಮಾಂಗ. ಜಗತ್ತಿಗೆ ಉನ್ಮತ್ತನಾದ ಜರ ಠಾಂಧಬಧಿರನಾಗಿ ಕಾಣಿಸಿಕೊಳ್ಳುತ್ತಾ ಇರಲು ಅವನ ಸೋದರರು ಅವನನ್ನು ಒಂದು ದ್ವಿಪಾದಪಶುವೆಂದು ಭಾವಿಸಿ ಕಡೆಯಗೂಟಕ್ಕೆ ಕಟ್ಟಿಹಾಕುತ್ತಾರೆ. ಈ ಜಡಭರತ ಒಳಗೆ ಬ್ರಹ್ಮಾನಂದವನ್ನು ಅನುಭವಿಸುತ್ತಿದ್ದರೂ ತೋರಿಕೆಗೆ ಎಕರನಾಗಿ ಹೊಲಕಾಯುತ್ತಾ ಇರುತ್ತಾನೆ. ಹೀಗಿರಲು ಒಂದು ದಿನ ಇವನಿದ್ದ

ಮಾರ್ಗವಾಗಿ ಹೋಗುತ್ತಿದ್ದ ವೃಷಲಪತಿ ಎಂಬ ಕಳ್ಳರ ಯಜಮಾನ ಪುತ್ರ ಕಾಮನಾಗಿ ಕಾಳಿಕಾದೇವಿಗೆ ನರಬಲಿಯನ್ನು ಕೊಡಲು ಮೃಗವನ್ನು ಹುಡು ಕುತ್ತಾ ಕೈಗೆ ಸಿಕ್ಕಿದ ಈ ಶಂಭಣ್ಣನನ್ನು ಎಳೆದೊಯ್ದು ಕಾಳಿಯ ಎದುರಿಗೆ ನಿಲ್ಲಿಸಿದ. ಆದರೆ ಕೊಲ್ಲಲು ಕತ್ತಿಯನ್ನು ಮೇಲಕ್ಕೆತ್ತಿದಾಗ ಕಾಳಿಯ ದೇಹಾ ದ್ಯಂತವೂ ಪಂಚಾಗ್ನಿಯ ಮಧ್ಯದಲ್ಲಿ ತಪ್ತಗೊಂಡಂತಾಯಿತು, ಈ ಬ್ರಹ್ಮ ಭೂತನಾದ ಬ್ರಾಹ್ಮಣ ಕುಮಾರನ ಮಹಾತ್ಮೆಯಿಂದ. ಆಗ ಚಂಡಿ ಭೀತಳಾಗಿ ಎದ್ದು ಬಂದು ಕೊಲೆಪಾತಕರ ತಲೆಗಳನ್ನು ಕಿತ್ತು ರಕ್ತಪಾನ ಮಾಡಿ ರುಂಡ ಗಳನ್ನು ಚೆಂಡಾಡಿದಳು. ದೇಹಾತ್ಮಭಾವಾತೀತನಾದ ಭರತ ಕೂದಲು ಕೊಂಕದೆ, ಚಲವಿಚಲಿತನಾಗದೆ ಹಿಂದಿರುಗಿ ಬಂದು ಹೊಲದಲ್ಲಿ ಕುಳಿತನು.

ಹೀಗಿರಲು ಒಂದು ದಿನ ಸವ್ವೀರಪತಿ ರಹೋಗಣನು ಕಪಿಲಾಶ್ರಮಕ್ಕೆ ಹೋಗುತ್ತಾ ದಾರಿಯಲ್ಲಿ ಒಬ್ಬ ಬೋವಿಯು ಸಾಲದಾಗಿರಲು ಒಬ್ಬನನ್ನು ಹುಡುಕಿ ತರುವಂತೆ ಚರರನ್ನಟ್ಟಿದನು. ದೈವವಶಾತ್ ತೋರಿಕೆಯ ಈ ಮಂಕಣ್ಣ ಅವರ ಕೈಗೆ ಸಿಕ್ಕಿಬಿದ್ದ. ಅವನ ಹೆಗಲ ಮೇಲೆ ಪಲ್ಲಕ್ಕಿಯ ಭಾರ ಏರಿ ಕುಳಿತಿತು. ಅದರ ಕಡೆ ಲಕ್ಷ್ಯವಿಲ್ಲದೆ ಮುಂದುವರಿಯುತ್ತಿದ್ದ ಜಡಭರ ತನ ಅಜಾಗರೂಕತೆಯಿಂದ ಪಲ್ಲಕ್ಕಿಯು ಜೋಲಿ ಹೊಡೆಯುತ್ತಾ ಇರಲು ತಮಸಾವೃತನಾದ ರಾಜ ಕುಪಿತನಾಗಿ ನಿಷ್ಠುರವಾಕ್ಯಗಳನ್ನಾಡುತ್ತಾನೆ. ಪುನಃ ಪುನಃ ಆತನ ತರ್ಜನೆಗರ್ಜನೆಗಳಿಗೆ ಒಳಗಾದ ಜಡಭರತ ಬಾಯ್ಬಿಟ್ಟು ಸೂಕ್ತಿ ಮುಕ್ತಾಫಲಗಳಿಂದ ಅವನ ಅಹಂಕಾರತಮಸ್ಸನ್ನಿಳಿಸಿ ಕಣ್ಣು ತೆರೆಯುವಂತೆ ಮಾಡುತ್ತಾನೆ. ಜ್ಞಾನಸಂಪಾದನೆಗೆಂದು ಹೋಗುತ್ತಿದ್ದ ರಾಜ ತನ್ನ ಉದ್ದಿಷ್ಟ ಕಾರ್ಯವು ದಾರಿಯಲ್ಲೇ ಸಫಲವಾಗಲು ಭರತನಿಂದಲೇ ಉಪದೇಶ ಪಡೆಯುತ್ತಾನೆ.

ಮೇಲಿನ ಕಥೆಯಲ್ಲಿ ಕಂಡು ಬರುವ ಭರತನ ಎರಡು ಜನ್ಮಗಳ ಅನು ಕ್ರಮವಾದ ಭೋಗ ಯೋಗಗಳಿಗೂ, ಜೈನ ಪುರಾಣಗಳಲ್ಲಿ ಕಂಡುಬರುವ ಭರತನ ಭೋಗಯೋಗ ಸಮನ್ವಯಕ್ಕೂ ಏನಾದರೂ ಸಂಬಂಧವಿರಬಹುದೇ? ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮೇಲೆಯೇ ತೋರಿಸಿರುವಂತೆ ಜೈನ ಪುರಾಣಗಳು ಬಹು ಪುರಾತನವಾದವುಗಳು. ಭಾಗವತವು ಈಚಿನ ಗ್ರಂಥ.

ಆದರೆ ಭಾಗವತ ಕಥೆಗಳು ಇತರ ಪುರಾತನ ಪುರಾಣಗಳಲ್ಲಿ ಕಂಡುಬರ ಬಹುದೋ ಏನೋ? ಅಲ್ಲದೆ ಜನರಲ್ಲಿ ಜನಜನಿತವಾಗಿ ಹರಡಿದ್ದ ಜನಪದ ಸಾಹಿತ್ಯವು ಎರಡಕ್ಕೂ ಮೂಲವಸ್ತುವಾಗಿರಬಹುದೋ ಏನೋ? ಈ ವಿಷಯದಲ್ಲಿ "ಇದಮಿತ್ಥಂ" ಎಂದು ನಿರ್ಧರವಾಗಿ ಹೇಳುವುದು ನಮಗೆ ಬಹು ಸಾಹಸದ ಮಾತಾಗಿ ಕಾಣುತ್ತದೆ.

ರತ್ನಾಕರವರ್ಣಿಯ ಒಂದು ಹಿರಿಮೆ ಅಥವಾ ವೈಶಿಷ್ಟ್ಯ ಭರತನನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡು ವಿಸ್ತಾರವಾಗಿ ಪ್ರತಿಪಾದಿಸಿರುವುದು. ಆದಿ ಕವಿ ಪಂಪ ತನ್ನ ಆದಿ ಪುರಾಣದ ದಿಗ್ವಿಜಯ ಪ್ರಕರಣದಲ್ಲಿ ಭರತ—ಬಾಹುಬಲಿಗಳ ಆಖ್ಯಾನವನ್ನು ಸುಂದರವಾಗಿ ಚಿತ್ರಿಸಿದ್ದನು. ಅದನ್ನು ವಿಸ್ತರಿಸಿ ಭರತನಲ್ಲಿ ಕಥಾನಾಯಕನ ಉದಾತ್ತತೆಯನ್ನು ಅಳವಡಿಸಿ, ಆರೋಪಿಸಿ ಪ್ರತಿಪಾದಿಸಿದ್ದಾನೆ, ನಮ್ಮ ಕವಿ.

ಕಥಾವಸ್ತುವಿನಲ್ಲಿ ಕವಿಯು ಮಾಡಿಕೊಂಡಿರುವ ಮಾರ್ಪಾಟುಗಳು

ಈಗ ಉಪಲಬ್ಧವಿರುವ ಜೈನ ಮಹಾಪುರಾಣಗಳಲ್ಲಿ ಜಿನಸೇನನ ಮಹಾಪುರಾಣವೇ ಅತ್ಯಂತ ಪ್ರಾಚೀನವಾದುದು. ಅದರಲ್ಲಿ ಭರತನನ್ನು ಕುರಿತ ಕಥೆಯ ಮೂಲ ರೇಖೆಗಳು ಇಷ್ಟು ಮಾತ್ರ—

ಆದಿತೀರ್ಥಂಕರ ವೃಷಭನಾಥನು ನೀಲಾಂಜನೆಯ ನೃತ್ಯದಿಂದ ನಿರ್ವೇಗಗೊಂಡು ತನ್ನ ಮಕ್ಕಳಿಗೆ ರಾಜ್ಯವನ್ನು ಹಂಚಿಕೊಟ್ಟು ತಾನು ತಪಸ್ಸಾಧನೆಯಿಂದ ಮುಮುಕ್ಷುವಾಗಿರುತ್ತಾನೆ. ಆತನ ಹಿರಿಯಮಗನಾದ ಭರತನು ಅಯೋಧ್ಯೆಯಲ್ಲಿಯೂ, ಕಿರಿಯ ಹೆಂಡತಿಯ ಮಗನಾದ ಬಾಹುಬಲಿ ಪೌದನಪುರದಲ್ಲಿಯೂ ರಾಜ್ಯವಾಳುತ್ತಿರುತ್ತಾರೆ. ಕೆಲವು ಕಾಲಾನಂತರ ಭರತನ ಆಯುಧಾಗಾರದಲ್ಲಿ ಚಕ್ರರತ್ನವೊಂದು ಉದಯಿಸುತ್ತದೆ. ಚಕ್ರವರ್ತಿ ಸೂಚಕವಾದ ಅದನ್ನು ಮುಂದಿಟ್ಟುಕೊಂಡು, ಆತನು ಜಗತ್ತನ್ನೆಲ್ಲಾ ಜಯಿಸಿ 'ಪ್ರಥಮ ಚಕ್ರಿ' ಯಾಗುತ್ತಾನೆ. ಅಪ್ರತಿಹತವಾದ ಆತನ ಶೌರ್ಯಕ್ಕೆ ಮಾರ್ಮಲೆತ ಇದಿರಾಳುಗಳೆ ಇಲ್ಲ. ಇನ್ನೇನು, ಊರಸ್ಸು ಪ್ರವೇಶಿಸಿದೊಡನೆಯೇ ಚಕ್ರವರ್ತಿಪಟ್ಟವನ್ನು ವಹಿಸಬೇಕು; ಅಷ್ಟರಲ್ಲಿ ಮುಂದೋಡುತ್ತಿದ್ದ ಚಕ್ರ ಹಟಾತ್ತಾಗಿ ನಿಂತು ಹೋಗುತ್ತದೆ; ಬಾಹುಬಲಿ ಪ್ರತಿಭಟಿಸಿ ನಿಂತು ನುಂಗಲಾರದ ತುತ್ತಾಗುತ್ತಾನೆ. ಈ ಚರಮಾಂಗರಿಬ್ಬರ ಘೋರಸಂಗ್ರಾಮದಿಂದ ಅಕಾಲಪ್ರಳಯವಾಗುವುದನ್ನು ತಪ್ಪಿಸುವುದಕ್ಕಾಗಿ ದೇವತೆಗಳು ನಡುವೆ ಪ್ರವೇಶಿಸಿ ಅವರನ್ನು ಬಾಹುಯುದ್ಧ, ಜಲಯುದ್ಧ, ದೃಷ್ಟಿಯುದ್ಧಗಳಲ್ಲಿ ನಿಯೋಗಿಸುತ್ತಾರೆ. ಇಟ್ಟ ಸ್ಪರ್ಧೆಗಳಲ್ಲೆಲ್ಲಾ ಸೋತು ಅಪಮಾನಿತನಾದ ಭರತನು ಅವಿವೇಕದಿಂದ ಅಧರ್ಮಕ್ಕೆ ಕೈಹಾಕುತ್ತಾನೆ—ನಿರಾಯುಧನಾದ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗಿಸುತ್ತಾನೆ. ಕೋಪದಿಂದ ದುರ್ಗತಿಗಿಳಿದ ಅಣ್ಣ

ನನ್ನು ಕಂಡು ಬಾಹುಬಲಿ ನಿರ್ವೇಗಗೊಳ್ಳುತ್ತಾನೆ; ಸನ್ಯಸನಸ್ವೀಕಾರದಿಂದ ಮೋಕ್ಷಮಾರ್ಗಾವಲಂಬಿಯಾಗುತ್ತಾನೆ. ಭರತನು ನಿಷ್ಕಂಟಕವಾದ ರಾಜ್ಯವನ್ನು ಹಲವು ಕಾಲ ಸುಖವಾಗಿ ಆಳುತ್ತಿದ್ದು, ಒಮ್ಮೆ ಕನ್ನಡಿಯಲ್ಲಿ ಪ್ರತಿಬಿಂಬಿಸಿದ ನೆರೆಗೂದಲನ್ನು ಕಂಡು, ವೈರಾಗ್ಯಗೊಂಡು, ತಪಸ್ಸಿನಿಂದ ಮೋಕ್ಷ ಮಾರ್ಗಾವಲಂಬಿಯಾಗುತ್ತಾನೆ.

ಈ ಕಥೆಯ ಮೂಲ ರೇಖೆಗಳನ್ನು ರತ್ನಾಕರನು ಬಳಸಿಕೊಂಡಿರುವ ನಾದರೂ ಅವುಗಳಲ್ಲಿ ಅಲ್ಲಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡಿದ್ದಾನೆ. ಅವುಗಳಿಗೆ ತನ್ನದೇ ಆದ ಬಣ್ಣಗಳನ್ನು ತುಂಬಿ ರಂಗುರಂಗಾಗಿ ಚಿತ್ರಿಸಿದ್ದಾನೆ. ಜಿನಸೇನನೇ ಆದಿಯಾಗಿ ಎಲ್ಲ ಮಹಾಪುರಾಣ ಕರ್ತೃಗಳೂ ಭರತನ ಕಥೆಯನ್ನು ಆದಿಜಿನನ ಕಥೆಗೆ ಅಂಗವಾಗಿ ತರುತ್ತಾರೆ. ಭರತನ ಕಥೆಯನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು ಪ್ರತಿಪಾದಿಸುವ ಗೋಜಿಗೆ ಪೂರ್ವದ ಮತ್ತಾವ ಕವಿಯೂ (ಶುಭಶೀಲಗಣಿಯ ಭರತಾದಿಕಥಾ ?) ಕೈ ಹಾಕಿರಲಿಲ್ಲ. ಆ ಕೀರ್ತಿ ರತ್ನಾಕರನಿಗೆ ಸೇರಿದುದು.

ಕವಿಯು ಮೂಲದಿಂದ ಮಾಡಿಕೊಂಡಿರುವ ಬದಲಾವಣೆಗಳು ಮುಖ್ಯವಾಗಿ ಎರಡು ತೆರನಾದುವು—ಗ್ರಂಥದಲ್ಲಿ ಇದ್ದ ಭಾಗಗಳ ವಿವರಣೆಗಳಲ್ಲಿಯೇ ಮಾಡಿಕೊಂಡಿರುವ ಬದಲಾವಣೆಗಳು; ಹೊಸದಾಗಿ ಸೃಷ್ಟಿಸಿ ಗ್ರಂಥಕ್ಕೆ ಸೇರಿಸಿರುವ ಭಾಗಗಳು. ಮೊದಲ ಜಾತಿಗೆ ಸೇರಿದ ಬದಲಾವಣೆಗಳು ಮುಖ್ಯವಾಗಿ ಕಥಾನಾಯಕನ ಹಿರಿಮೆಯನ್ನು ಹೆಚ್ಚುಗೊಳಿಸಲು ಉಪಯುಕ್ತವಾಗಿವೆ. ಗ್ರಂಥ ವಿಭಾಗದಲ್ಲಿಯೇ ಕವಿ ತನ್ನ ಕಥಾನಾಯಕನಿಗೆ ಹಿರಿದೊಂದು ಸ್ಥಾನವನ್ನು ಗಳಿಸಿಕೊಡಲು ಹೊರಟಿರುವಂತೆ ತೋರುತ್ತದೆ. ಜೈನ ಕವಿಗಳು ಸಾಮಾನ್ಯವಾಗಿ ತೀರ್ಥಂಕರರ ಜೀವನ ಚರಿತ್ರೆಯನ್ನು 'ಗರ್ಭಾವತರಣ' ಇತ್ಯಾದಿ ಪಂಚಕಲ್ಯಾಣಗಳಾಗಿ ವಿಭಾಗಿಸಿಕೊಂಡು ಬರೆವ ಪದ್ಧತಿ. ಭರತನು ಜಿನನಲ್ಲ; ಸಂಪ್ರದಾಯದ ಪಂಚಕಲ್ಯಾಣಗಳನ್ನು ಇಲ್ಲಿ ತರುವಂತಿಲ್ಲ. ಆದರೇನು ? ಭರತನು ಸಿದ್ಧ ಜೀವಿ; ಮೋಕ್ಷವನ್ನು ಸೂರೆಗೊಂಡವನು, ಪಂಚಕಲ್ಯಾಣಗಳಿಗೆ ಅರ್ಹ. ಆದ್ದರಿಂದ ತನ್ನ ಕಥಾನಾಯಕನಿಗೇ ಪ್ರತ್ಯೇಕವಾದ ಪಂಚಕಲ್ಯಾಣಗಳನ್ನು ಸಾಧಿಸಿಕೊಡಹೊರಟಿರುವಂತೆ ಕಾಣುತ್ತದೆ,

ನಮ್ಮ ಕವಿ. ಇದಕ್ಕಾಗಿ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿ ವಿಜಯ, ಮೋಕ್ಷ ವಿಜಯ—ಎಂಬ ಐದು ವಿಜಯಗಳಲ್ಲಿ ಭರತನ ಕಥೆಯನ್ನು ಬೆಳಸಿದ್ದಾನೆ.

'ಭೋಗವಿಜಯ' ವು ಭರತಚಕ್ರೇಶ್ವರನ ಭೋಗಸಾಮ್ರಾಜ್ಯದ ವಿಸ್ತೃತ ವ್ಯವಹರಣೆಯನ್ನು ದಿಗ್ದರ್ಶನ ಮಾಡಿಸುವ ಭಾಗ. ಜಿನ ಜೀವನದ 'ಗರ್ಭಾವತರಣ' ನಿರೂಪಣೆಯಲ್ಲಿ ಆತನ ಜನ್ಮಾಂತರಗಳ ಸುಖಭೋಗ ಗಳನ್ನು ಪ್ರತಿಪಾದಿಸಿರುತ್ತಾರೆ, ಅವುಗಳ ಕ್ಷಣಭಂಗುರತೆಯನ್ನು ಎತ್ತಿ ತೋರುವುದಕ್ಕಾಗಿ. ಈ ಸುಖ ಭೋಗವಿಜಯದಲ್ಲಿ ಭರತನಿಗೆ ಸ್ವಾಧೀನ ವಾಗಿದೆ. ವ್ಯತ್ಯಾಸವಿಷ್ಟೆ-ತೀರ್ಥಂಕರ ಭೋಗಿಸುವುದು ಸ್ವರ್ಗದಲ್ಲಿ, ಭರತ ಭೋಗಿಸುವುದು ಭೂಲೋಕದಲ್ಲಿ. ಸುಖಗಳಲ್ಲಿ ಹೆಚ್ಚು ವ್ಯತ್ಯಾಸವೇನೂ ಇಲ್ಲ. ಭೂಲೋಕದ ಸೌಖ್ಯ ಸ್ವರ್ಗಸುಖದ ನೆತ್ತಿಯಮೇಲೆ ಮೆಟ್ಟಿದಂತಿದೆ. ಭರತನ ಜನನ, ಕೌಮಾರ, ಬಾಲ್ಯಗಳ ವಿಚಾರದಲ್ಲಿ ಪೂರ್ವಗ್ರಂಥಗಳು ಸಾಕಷ್ಟು ವಿವೇಚಿಸಿರುವುದರಿಂದ ಅವುಗಳನ್ನು ಪುನಃ ವಿವರಿಸುವ ಅಗತ್ಯ ಕವಿಗೆ ಕಂಡುಬರಲಿಲ್ಲ. ಇದನ್ನು ಖಚಿತವಾಗಿ ತಿಳಿಸುವ ತಾಳ್ಮೆಯೂ ಇಲ್ಲ. ನೇರವಾಗಿ ಭರತನ ಭೋಗ ಸಾಮ್ರಾಜ್ಯಕ್ಕೇ ಧುಮ್ಮಿಕ್ಕುತ್ತಾನೆ.

ಎರಡನೆಯದಾದ 'ದಿಗ್ವಿಜಯಪರ್ವ'ವು ಮುನಿಮಾರ್ಗೋಕ್ತವಾದುದು; ಕವಿಯ ಸ್ವಂತಕಲ್ಪನೆಯಲ್ಲ. ಅಲ್ಲಲ್ಲಿ ಕೆಲವು ಚಿಕ್ಕ ಪುಟ್ಟ ಮಾರ್ಪಾಟು ಗಳನ್ನು ಮಾತ್ರ ಮಾಡಿಕೊಂಡಿದ್ದಾನೆ ನಮ್ಮ ಕವಿ. ಪುರಾಣೋಕ್ತನಾದ ಭರತ ತನ್ನ ಭುಜದಂಡ ಪ್ರಹಾರಗಳಿಂದ ಶೌರ್ಯಮದಗ್ರಹಗ್ರಸ್ತರಾದ ಹಲವು ರಾಜರ ನೆತ್ತಿಗೆ ಏರಿರುವ ಪಿತ್ತವನ್ನು ಇಳಿಸುತ್ತಾನೆ; ಅವರನ್ನು ಸದೆದು ಅವರ ಐಶ್ವರ್ಯವನ್ನು ಸೂರೆಗೊಂಡು, ಕಾಲ್ಗೆರಗಿಸಿಕೊಳ್ಳುತ್ತಾನೆ. "ಅಂಬರ ದಿಂದುಳ್ಕುವ ಉಳ್ಕುವಂಪೋಲ್ದ" ಶರಗಳಿಂದ ಪೊಡವಿಯನ್ನು ನಡುಗಿಸಿ ತನ್ನ ಪರಾಕ್ರಮವನ್ನು ಮೆರೆಯುತ್ತಾನೆ. ಆತನು ವಜ್ರಕಾಂಡವೆಂಬ ತನ್ನ ವಿಜಯ ಕಾರ್ಮುಕಕ್ಕೆ 'ಸುರಕರಿಕರಾನುಕಾರಿಯಪ್ಪ ನಿಜಭುಜದಂಡಮಂ ನೀಡಿಲ್ಲದೇರಿಸಿ, ನೀವಿ, ಜೇವೊಡೆದಾಗ

ಲವಣಾಂಭೋರಾಶಿ ತೂಳ್ದು ಚ್ಚಳಿಸಲೊಡರಿಸಿತ್ತೀ ಧರಾಭಾಗಮಂ ಪ।
ತ್ತುವಿಡಲ್ ಭೂಭೃತ್ಕುಳಂಗಳ್ ಬಗೆದವು ಜಳಧಿ ದ್ವೀಪ ಮಧ್ಯಸ್ಥ ನಾನಾ।
ದಿವಿಜಾವಾಸಂಗಳಭ್ರಕ್ಕೊಗೆದುವು ಭರದೊಳ್ ಕೂಡೆ ದಿಕ್ಪಾಲಲೀಲಾ।
ಭವನಂಗಳ್ ಬಿರ್ದುವಿಂತಾಯ್ತು ಖಿಳ ಮಹಿತಳಕ್ಷೋಭಮಾ ಚಕ್ರಿಯಿಂದಂ ॥

ಹೀಗೆ ಮಹೀತಳವನ್ನೆಲ್ಲಾ ಕ್ಷೋಭೆಗೊಳಿಸುತ್ತಾ, ರಾಜರುಗಳನ್ನೆಲ್ಲಾ ಬಾಯ್ಕೇಳಿಸುತ್ತಾ, ಆಸನುದ್ರಾಂತವಾದ ಭೂಮಂಡಲವನ್ನು ಗೆದ್ದು ತನ್ನ ರಾಜಧಾನಿಗೆ ಹಿಂದಿರುಗುತ್ತಾನೆ. ಅದುವರೆಗೆ ಮಾರ್ಗಸೂಚಕವಾಗಿದ್ದ ಚಕ್ರ ಮುಂದೆ ಹೋಗದೆ ನಿಂತುದನ್ನು ಕಂಡು ಚಕ್ರಿಯ ಅನುಯಾಯಿಗಳು

ಆವಂಗೆ ಕಾಲಚಕ್ರಮ
ನೋವದೆ ಮಾಡಲ್ಕೆ ಚಕ್ರಮಿದು ಬಗೆದುದೊ ಶೌ ॥
ರ್ಯಾವಿರ್ಭೂತ ದವಾನಳ
ನಾವನ ಚತುರಂಗಬಲಮನಿಂ ಸುಟ್ಟಪುದೋ ॥

ಎಂದು ಉತ್ಸಾಹಿತರಾಗಿ ಮಸಗುತ್ತಾರೆ. ಭರತನ ಕೋಪವೂ ಉಕ್ಕಿತು, ತನಗೂ ಶತ್ರುಗಳಿರುವರೆಂಬ ಚಕ್ರದ ಮೂದಲಿಕೆಯನ್ನು ಕಂಡು. 'ವೀರ ರಸೋದಾರ ಗಂಭೀರ ವಚನ ರಚನೆಗಳ'ಂದ ಅಂತಕನ ಮುಖದಲ್ಲಿ ಎಡೆಯನ್ನು ಬಯಸುವ ಮೂಢನಾರಿರಬಹುದೆಂದು ವಿಚಾರಿಸಿದ. ತನ್ನ ತಮ್ಮಂದಿರೇ ತನ್ನ ವೈರಿಗಳು; ಅದರಲ್ಲಿಯೂ ಬಾಹುಬಲಿ ಮುಂದಾಳು—ಎಂಬ ಪುರೋಹಿತ ವಚನದಿಂದ ಕಿಡಿಗೊಂಡ ಭರತನ ಕಣ್ಣ ಕೆಂಪು ದಿಕ್ಕುಗಳಿಗೆಲ್ಲಾ ಕೆಂಪೆರಚಿತಂತೆ! ಮನದಲ್ಲಿ ಬೆಳೆದ ಮುನಿಸು ದಿಗ್ವನಿತೆಯರಿಗೆ ರಕ್ತಬಲಿಯನ್ನು ಚಲ್ಲುವಂತೆ ಕಾಣಿಸಿಕೊಂಡಿತಂತೆ! ಅವಡುಗಚ್ಚಿ ಬದ್ಧಭೃಕುಟಿತನಾಗಿ 'ಅಕಾಲ ಯಮರಾಜ ಲೀಲೆಯಂ ಕೈಕೊಂಡಂ'. ತನ್ನ ಪಾದಕ್ಕೆರಗಿ ಸುಖವನ್ನನುಭವಿಸುವಂತಿದ್ದರೆ ಅನುಭವಿಸಲಿ, ಇಲ್ಲದಿದ್ದರೆ ಪುರುಪರಮೇಶ್ವರನ ಪಾದಕ್ಕೆರಗಿ ತಪವನ್ನನುಭವಿಸಬೇಕಾದೀತು ಎಂಬ ಶಾಸನವನ್ನು ಹೊತ್ತ ದೂತರನ್ನು ಸಹೋದರರ ಬಳಿಗೆ ಕಳುಹಿಸಿದ. "ಈ ಶಾಸನಮಂ ನೆತ್ತಿಯೊಳಾಂತು ಬನ್ನಿಂ; ಎರಗಿಂ ಚಕ್ರೇಶ ಪದಾಬ್ಜದೊಳ್" ಎಂಬ ದೂತರ ಧೂರ್ತನುಡಿಗಳಿಂದ

ಮನನೊಂದ ತಮ್ಮಂದಿರೆಲ್ಲರೂ ಸಮವಸರಣಮಂಟಪಕೆ ಹೋಗಿ ದೀಕ್ಷಾ ವಿಧಿಯಿಂದ ಧನ್ಯರಾದರು. ಬಾಹುಬಲಿಯೊಬ್ಬನು ಮಾತ್ರ ಕ್ಷಾತ್ರಧರ್ಮ ವನ್ನು ಕೈಕೊಂಡು ಇದಿರು ನಿಂತ. ಭರತನ ದಿಗ್ವಿಜಯ ಪ್ರಪಂಚದಲ್ಲಿ ಖಾಡಾಖಾಡಿ ಯುದ್ಧ ನಡೆಯುವ ಸನ್ನಿವೇಶ ಸಂಪ್ರಾಪ್ತವಾಯಿತು. ಆದರೆ ಮಂತ್ರಿಗಳ ಚಾತುರ್ಯದಿಂದ ಇದು ನಿವಾರಿತವಾಗಿ ಧರ್ಮಯುದ್ಧ ನಡೆ ಯಿತು. ಬಾಹುಬಲಿ ಭರತನಿಗಿಂತಲೂ ಎಷ್ಟೋ ಪಟ್ಟು ಹೆಚ್ಚು ಸತ್ವಶಾಲಿ; ಭರತನು ಸೋತುಹೋಗುತ್ತಾನೆ. ಬಾಹುಬಲಿಯ ಸತ್ವಪ್ರಭೆಯಲ್ಲಿ ಈತನು ತೇಜೋಹೀನನಾಗಿ ಹೋಗುತ್ತಾನೆ. ಇಷ್ಟೇ ಅಲ್ಲ; ಅಧರ್ಮಕ್ಕೂ ಕೈಯಿಕ್ಕಿ ವಿಫಲನಾಗಿ ಸಿಗ್ಗಿನಿಂದ ತಲೆ ತಗ್ಗಿಸಿಕೊಳ್ಳುತ್ತಾನೆ; ತನ್ನ ಉದ್ಧಟತನ ಮುಂ ಗೋಪಗಳಿಂದ ಪ್ರೇಕ್ಷಕರ ಸಹಾನುಭೂತಿಯನ್ನು ಕಳೆದುಕೊಳ್ಳುತ್ತಾನೆ.

ಆದರೆ, ರತ್ನಾಕರನ ಕೈಯ್ಯಲ್ಲಿ ಭರತನ ಪಾತ್ರ ಮುಗಿಲನ್ನು ಮುಟ್ಟಿದೆ. ಲೌಕಿಕದಲ್ಲಿ ಅಂಕುರಿಸಿದ ಆ ಪಾತ್ರ ಅಲೌಕಿಕತೆಯಲ್ಲಿ ಅರಳಿದೆ. ತ್ರಿಷಷ್ಟಿ ಶಲಾಕಾಪುರುಷರಲ್ಲಿ ಒರ್ವನಾಗಿ ಚರಮತನುವಾಗಿರುವ ತನ್ನ ನಾಯಕ ಉದ್ಧತನಂತೆ ವರ್ತಿಸುವುದು ನಮ್ಮ ಕವಿಗೆ ಸರಿಹೋಗಲಿಲ್ಲ. ಭರತನ ಬಾಯಲ್ಲಿ ಭೂಮಿತೂಕದ ಮಾತುಗಳನ್ನಿಟ್ಟು ಆತನನ್ನು ಮಹಾನುಭಾವನ ನ್ನಾಗಿ ಮಾಡಿದ್ದಾನೆ. ಭರತನು ಸಾಮೋಪಾಯದಿಂದ ತಮ್ಮಂದಿರನ್ನು ದಾರಿಗೆ ತರಲು ಪ್ರಯತ್ನಿಸುತ್ತಾನೆ. ಆದರೆ ತಮ್ಮಂದಿರೇ ಔದ್ಧತ್ಯವನ್ನು ಕೈಕೊಂಡು 'ತಂದೆ ಕೊಟ್ಟ ಉಂಬಳಿಯೊಳಗಿರುವ ತಾವು ಇವನಿಗೇಕೆ ಆನತರಾಗಿ ಬಾಳ ಬೇಕು?' ಎಂಬ ಈರ್ಷೆಯನ್ನು ಕೈಕೊಂಡು ತಪೋನಿರತರಾಗುತ್ತಾರೆ. ಇದನ್ನು ಕೇಳಿ ಅತ್ಯಂತ ವ್ಯಥಿತಾಂತಃಕರಣನಾದ ಭರತಚಕ್ರಿಯು ಉಳಿದೊಬ್ಬ ಬಾಹುಬಲಿಯನ್ನು ಒಲಿಸಲೆಂದು ವಚನಚತುರನಾದ ದಕ್ಷಿಣನನ್ನು ಆತನ ಬಳಿಗೆ ಕಳುಹಿಸುತ್ತಾನೆ. ಭರತನ ಸ್ನೇಹಿತನಾದ ಆತನ ಮಾತುಗಳಾದರೊ, ಬಹು ಸ್ನಿಗ್ಧ ಸ್ನೇಹಪೂರ್ಣವಾದುವು. 'ಚಕ್ರವರ್ತಿಯಾದ ಭರತನಿಗೆ ತನ್ನ ತಮ್ಮನನ್ನು ಕಣ್ತುಂಬ ನೋಡುವ ಅರ್ತಿಯಾಗಿದೆ ಚರಮತನುಗಳಾದ ನೀವಿರ್ವರೂ ಒಂದೆಡೆ ಸೇರಿದುದನ್ನು ಕಾಣಲು ಪಡೆಯೆಲ್ಲವೂ ಉತ್ಸಾಹ ಪಡುತ್ತಿದೆ. ನಿನ್ನ ಬಾಗಿಲ ಬಳಿಯೇ ನಿಂತಿರುವ ಚಕ್ರಿಯ ಬಳಿಗೆ ಬಾ'

ಎಂದು ಆತ ಕರೆಯುತ್ತಾನೆ. ಆದರೆ ಕಲಿಯುಗ ಮದನನಾದ ಬಾಹುಬಲಿ ಕಕ್ಕಸ ಕದನಕ್ಕೇ ಕೈಯಿಕ್ಕುತ್ತಾನೆ. ತಾಯಿಯ ಹಿತವಚನಗಳಿಗೆ ಕಿವುಡಾಗುತ್ತಾನೆ; ಹಿತವರ ನುಡಿಗಳನ್ನು ಹುಂಕಾರದಿಂದ ಪರಿಹರಿಸುತ್ತಾನೆ; ನಲ್ಮೆಯ ಹೆಂಡಿರ ಸೂನೃತ ವಚನಗಳಿಂದ ಕೆಂಗೆಂಡವಾಗಿ ಅವರನ್ನು ಚಾವಟಿಯಿಂದ ಹೊಡೆಯುತ್ತಾನೆ, ನಿಷ್ಕರುಣಿಯಾಗಿ. ಆತನ ಖಂಡತುಂಡಾದ ಮಾತುಗಳನ್ನು ಕೇಳಿ ಭರತನು ಮಿಡುಕುತ್ತಾನೆ. ಆತನೇನೂ ಶಕ್ತಿಹೀನನಲ್ಲ. ಆತನ ಅಲೌಕಿಕ ಪರಾಕ್ರಮಕ್ಕೆ ಪಡೆಯೆಲ್ಲವನ್ನೂ ಕಿರುಬೆರಳಿನಲ್ಲಿ ತೂಗಾಡಿಸಿದುದೇ ಸಾಕ್ಷಿ. ಆದರೂ ತನ್ನ ತೋಳ್ಬೀಟೆಯನ್ನು ತೀರಿಸಿಕೊಳ್ಳುವುದು ತಮ್ಮನ ಮೇಲಲ್ಲ. ಯುದ್ಧ ಅನಿವಾರ್ಯವಾಗಿ ತೋರಿದಾಗಲೂ ಚಕ್ರಿ ಸಾಮೋಪಾಯಕ್ಕೇ ಶರಣು ಹೋಗುತ್ತಾನೆ—ತನ್ನ ನುಡಿಜಾಣ್ಮೆಯಿಂದ ತಮ್ಮನನ್ನು ಹಾದಿಗೆ ತರುತ್ತಾನೆ; ಯುದ್ಧವನ್ನು ನಿವಾರಿಸುತ್ತಾನೆ. ತನ್ನ ಉದ್ಧಟತನಕ್ಕಾಗಿ ಬಾಹುಬಲಿ ನಾಚಿ ಅಣ್ಣನಲ್ಲಿ ದಯಾಭಿಕ್ಷೆಯನ್ನು ಬೇಡುತ್ತಾನೆ; ತಪವನ್ನು ಕೈಕೊಳ್ಳುತ್ತಾನೆ. ಇದನ್ನು ಕಂಡು ಅಣ್ಣನಿಗೆ ಅಪಾರ ಸಂಕಟವಾಗುತ್ತದೆ. ತನ್ನಂತೆಯೇ ಸಂಕಟಪಡುತ್ತಿರುವ ಬಾಹುಬಲಿಯ ತಾಯಿಯನ್ನೂ ಸಮಾಧಾನಗೊಳಿಸಿ ಸೈ ಎನ್ನಿಸಿಕೊಳ್ಳುತ್ತಾನೆ. ಬಾಹುಬಲಿಗೆ ಘೋರತಪಸ್ಸಿನಿಂದಲೂ ದಿವ್ಯಜ್ಞಾನದರ್ಶನವಾಗದಿರುವುದನ್ನು ಕಂಡು ಮರುಗಿ ದಿವ್ಯಜ್ಞಾನೋಪದೇಶದಿಂದ ಆತನಿಗೆ ಆತ್ಮಶುದ್ಧಿಯನ್ನು ದೊರಕಿಸಿಕೊಡುತ್ತಾನೆ.

ಮೇಲಿನ ಸಂದರ್ಭವಿವರಣೆಯಲ್ಲಿ ರತ್ನಾಕರ ಕವಿಯು ಶ್ವೇತಾಂಬರ ಪಂಥಕ್ಕೆ[1] ಸೇರಿದ ಹೇಮಚಂದ್ರನನ್ನು ಸ್ವಲ್ಪಮಟ್ಟಿಗೆ ಅನುಸರಿಸುತ್ತಿದ್ದಂತೆ

1. ಶ್ವೇತಾಂಬರ ಪಂಥದವರು ಈ ಸಹೋದರ ಯುದ್ಧವನ್ನು ಸಂಪ್ರದಾಯವಾಗಿ ಹೇಳುವಂತವರೂ, ಅಷ್ಟಾಗಿ ಮೆಚ್ಚುವುದಿಲ್ಲವೆಂದು ತೋರುತ್ತದೆ. "ಅಭಿಧಾನರಾಜೇಂದ್ರ"ದಲ್ಲಿ ಭರತನ ದಿಗ್ವಿಜಯ, ಆತನಿಗೆ ಬೇರೆ ಬೇರೆ ರತ್ನಗಳು ವಶವಾದುದು—ಇದನ್ನೆಲ್ಲಾ ವಿಸ್ತಾರವಾಗಿ ವರ್ಣಿಸಿದ್ದರೂ, ಭರತ ಬಾಹುಬಲಿಗಳ ದ್ವಂದ್ವಯುದ್ಧಪ್ರಸಕ್ತಿ ಬಂದಿಲ್ಲ. ಭಾಷ್ಯಕಾರನು ಮಾತ್ರ "ಅತ್ರ ಚ ಬಾಹುಬಲ್ಯಾದಿ ನವನವತಿ ಭ್ರಾತೃರಾಜ್ಯಾನಾಮಾತ್ಮಸಾತ್ ಕರಣಪೂರ್ವಕಂ ಚಕ್ರರತ್ನಸ್ಯಾಯುಧಶಾಲಾಯಾಂ ಪ್ರವೇಶನಮನ್ಯತ್ರ ಪ್ರಸಿದ್ಧಮಪಿ ಸೂತ್ರಕಾರೇಣ ನೋಕ್ತಮಿತಿನೋಚ್ಯತೇ ಇತಿ।

ಕಂಡುಬರುತ್ತದೆ. ಆತನ 'ತ್ರಿಷಷ್ಟಿ ಶಲಾಕಾಪುರುಷ ಚರಿತ್ರ' ದಲ್ಲಿ ಬರುವ ಭರತನ ಪಾತ್ರ ಪ್ರಥಮಾನುಯೋಗದ ಭರತನ ಪಾತ್ರದಿಂದ ಸ್ವಲ್ಪಮಟ್ಟಿಗೆ ಭಿನ್ನವಾಗಿದೆ. ತಾನು ಅಟ್ಟಿದ ಓಲೆಗೆ ಬಾಹುಬಲಿ ಕೋಪಗೊಂಡುದನ್ನು ಕೇಳಿ ಭರತನು ಸಂತೋಷದಿಂದ ಆತನ ಧೈರ್ಯ ಶೌರ್ಯಾದಿಗಳನ್ನು ಪ್ರಶಂಸಿಸುತ್ತಾನೆ. ಮಂತ್ರಿಗಳ ಪ್ರೇರಣೆ ಪ್ರೋತ್ಸಾಹಗಳಿಲ್ಲದಿದ್ದರೆ ಆತನು ಆ ವಿಷಯವನ್ನು ಅಲ್ಲಿಗೇ ನಿಲ್ಲಿಸಿ ತಮ್ಮನ ಮೇಲಿನ ತನ್ನ ಅಪಾರ ಪ್ರೇಮವನ್ನು ಮೆರೆಯುತ್ತಿದ್ದನೇನೊ! ಬಾಹುಬಲಿ ಕಾಲ್ಕೆದರಿ ಯುದ್ಧಕ್ಕೆ ನಿಂತುದನ್ನು ಕಂಡು, ಯುದ್ಧವನ್ನು ನಿವಾರಿಸುವುದಕ್ಕಾಗಿ ಗಗನಚರರು ಪಂಚಾಯತಿ ನಡೆಸುತ್ತಾರೆ. ಭರತನಲ್ಲಿ ಅವರಿಗೆ ಅಪಾರ ನಂಬಿಕೆ; ಆತನನ್ನೇ ಮೊದಲು ಬೇಡಿಕೊಳ್ಳುತ್ತಾರೆ. ಆತನು ಬಹು ಅನುನಯವಾಗಿ ಉತ್ತರ ಹೇಳುತ್ತಾನೆ.—'ನನಗೆ ತಮ್ಮನಮೇಲೆ ದ್ವೇಷವಿಲ್ಲ. ಚಕ್ರ ಪುರಪ್ರವೇಶ ಮಾಡಲೊಲ್ಲದು. ತಮ್ಮ ನನಗೆ ವಿಧೇಯನಾಗದಿದ್ದರೆ ಅಷ್ಟೆ ಹೋಯಿತು; ನಮ್ಮೂರಿಗೆ ಒಮ್ಮೆ ಬರಲಿ. ಚಕ್ರ ಒಳಕ್ಕೆ ಬಂದಮೇಲೆ ಅವನ ರಾಜ್ಯಕ್ಕೆ ಮತ್ತಷ್ಟು ನನ್ನ ರಾಜ್ಯವನ್ನು ಸೇರಿಸಿಕೊಡುತ್ತೇನೆ.' ಇದಕ್ಕೆ ಬಾಹುಬಲಿ ಕೊಡುವ ಉತ್ತರ ಬಿರುಸಾಗಿದೆ—'ಅಣ್ಣ ಯುದ್ಧಕ್ಕೆ ಬಂದರೆ ನಾನೇನೂ ಹಣ್ಣುತಿನ್ನುತ್ತಾ ಕೂತಿರುವುದಿಲ್ಲ. ನಾನಾಗಿ ಕಾಲ್ಕೆದರಿ ಯುದ್ಧಕ್ಕೇನೂ ಹೋಗುವುದಿಲ್ಲ.' ಕಡೆಗೆ ದೇವತೆಗಳ ನಿಶ್ಚಯದಂತೆ ದೃಷ್ಟಿ ಜಲ ಬಾಹು ಯುದ್ಧಗಳು (ಹೇಮಚಂದ್ರನು ಇನ್ನೂ ಹಲವು ವಿಧದ ಯುದ್ಧಗಳನ್ನು ಅಣ್ಣತಮ್ಮಂದಿರಲ್ಲಿ ತಂದು ಒಡ್ಡಿದ್ದಾನೆ) ನಡೆದು ಭರತನ ಚಕ್ರಪ್ರಯೋಗ, ಬಾಹುಬಲಿಯ ವಿರಾಗಗಳಲ್ಲಿ ಕೊನೆಯಾಗುತ್ತವೆ. ಹೀಗೆ ಹೇಮಚಂದ್ರನ ಅಭಿಮಾನ ಬಾಹುಬಲಿಗಿಂತಲೂ ಭರತನ ಮೇಲೆ ಅಧಿಕವಾಗಿರುವಂತೆ ತೋರಿಬರುತ್ತದೆ.

ರತ್ನಾಕರಕವಿಗೆ ಭರತನ ಯುದ್ಧಪ್ರಸಕ್ತಿಯೇ ಅಸಹ್ಯಕರವೆಂದು ತೋರಿತು. 'ಅಹಿಂಸಾ ಪರಮೋಧರ್ಮಃ' ಎಂದು ಘೋಷಿಸುವ ಜಿನಮತದ ತ್ರಿಷಷ್ಟಿಶಲಾಕಾ ಪುರುಷರಲ್ಲಿ ಒರ್ವನಾದ ಭರತನು ಹಿಂಸೆಗೆ ಕೈನೀಡಿ ಒರಟು ತನದಿಂದ ವ್ಯವಹರಿಸುವುದು ಆತನಿಗೆ ಸರಿದೋರಲಿಲ್ಲ. ಆದುದರಿಂದ ಯುದ್ಧ

ವನ್ನು ನಿವಾರಿಸಿಯೇ ಬಿಟ್ಟದ್ದಾನೆ. ಹೀಗೆ ಮಾಡಿದುದಕ್ಕೆ ಆತನೇ ಕೊಡುವ ಕಾರಣಗಳನ್ನು ನೋಡಿ—

ಜಲದೃಷ್ಟಿ ಮುಷ್ಟಿ ಯುದ್ಧದಿ ಚಕ್ರಿ ತಮ್ಮಗೆ ।
ಗೆಲದೋರಿ ನುಡಿದರಂತದನು ।
ಕೆಲರು ಕಾದಿಯೆ ಗೆಲ್ದನೆಂಬರು ; ಚಕ್ರಿಯ ।
ಗೆಲ ಸಮರ್ಥನೆ ಪುಷ್ಪಬಾಣ ? ।

ಅಭಿನವ ಮದನನಾದ ಬಾಹುಬಲಿ ತನ್ನ ಮೋಹಶಕ್ತಿಯಿಂದ ಜಗತ್ತನ್ನೇ ಗೆಲ್ಲಬಹುದು. ಆದರೆ ಚಕ್ರಿ ಮೋಹದ ಸಂಕಲೆಗೆ ಸಿಕ್ಕುವವನಲ್ಲ. ‘ಹಗಲಂತೆ ಬೆಳದಿಂಗಳಹುದೆನೆ ಸೂರ್ಯ ರ । ಶ್ಮಿಗಳ ನೂಂಕುವ ಶಕ್ತಿಯುಂಟೆ ?’ ಭರತನು ತಮ್ಮನ ಮೇಲೆ ಚಕ್ರವನ್ನು ಪ್ರಯೋಗಿಸಿದನೆಂಬ ಮಾತಾದರೂ ಕೇವಲ ಪಾಪಿಗಳ ಕೀಳ್ನುಡಿ. ‘ರಣಭಂಗವಾಗಬಾರದು ತಮ್ಮಗೆಂದು ಸ । ದ್ಗುಣ ವಚನದಿ ಜಯಿಸಿದನು ॥ ಕ್ಷಣದಿ ಮುಕ್ತಿಯಕೊಂಬ ಮೃದುಹೃದಯಗೆ ಕ್ರೂರ ಗುಣವುಂಟೆ ?.....’ ಇನ್ನು ಭರತನು ಪ್ರಯೋಗಿಸಿದ ಚಕ್ರ ಬಾಹುಬಲಿಗೆ ಬಲವಂದು ಆತನ ಆಜ್ಞಾನುಸಾರಿಯಾಗಿ ವರ್ತಿಸಿತೆಂಬ ಮಾತೂ ಸುಳ್ಳಿನ ಕಂತೆ. ಭರತ ಚಕ್ರಿ ; ಬಾಹುಬಲಿ ಅರ್ಧಚಕ್ರಿ. ಅರ್ಧಚಕ್ರಿ ಚಕ್ರಿಯ ಮೇಲೆ ಚಕ್ರವನ್ನು ಪ್ರಯೋಗಿಸಿದರೆ ಅದು ಪ್ರಯೋಗಿಸಿದವನನ್ನೇ ಸಂಹಾರ ಮಾಡುತ್ತದೆ. ಚಕ್ರಿ ಪ್ರಯೋಗಿಸಿದರೆ ಇದಿರಾಳಿಯನ್ನು ನಿಮಿಷಾರ್ಧದಲ್ಲಿ ಸಂಹರಿಸುತ್ತದೆ. ಮತ್ತೊಬ್ಬರ ಮಾತೇಕೆ ? ಬಾಹುಬಲಿಯೇ ಹೇಳುವುದನ್ನು ಕೇಳಿ. ‘ದೇವರು ಕ್ಷಮಿಸುವುದೆನ್ನದು ತಪ್ಪೆಂದು । ಭಾವ ಶುದ್ಧದೊಳು ಕೈ ಮುಗಿದಾಗ’ ‘.....ದೂಷಣವನು ತೊಡಗಿದೆ ನಾನು, ದೇವರು । ಭೂಷಣಗೈದಿರಿ ನನ್ನ ॥ ದೋಷವೆನ್ನನೆ ಪುದಿದಲೆವುದು.....’

ಹೀಗೆ ಸಂಪ್ರದಾಯಬದ್ಧವಾದ ಪುರಾಣಕಥೆಯಲ್ಲಿ ತನಗೆ ಸೂಕ್ತದೋರಿದಂತೆ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದರೆ ಕವಿಯ ಆತ್ಮಪ್ರತ್ಯಯ

ಅಪಾರವಾದುದಾಗಿರಬೇಕು. ತನ್ನ ದರ್ಶನದಲ್ಲಿ ತನಗೆ ನಿಷ್ಕೃಷ್ಟವಾದ ನಂಬಿಕೆ ಇದ್ದಿರಬೇಕು. ನಿಜವಾಗಿ ರತ್ನಾಕರ 'ಎಂಟೆದೆ'ಯವನು. ಪಂಪ ನಂತಹ—ಭಾರತವನ್ನು ಬೇಕಾದಂತೆ ಬದಲಾಯಿಸಿ ನಿರಂಕುಶಮತಿಯನ್ನು ಮೆರೆದ—ಮಹಾಕವಿಕೂಡ ಜೈನಪುರಾಣಕ್ಕೆ ಕೈಹಾಕಿದಾಗ ಬರಿಯ ಸಂಗ್ರಹ ಕಾರನಾಗಿದ್ದಾನೆ; ಅನೇಕ ವೇಳೆ ಭಾಷಾಂತರಕಾರನಾಗಿ ಹೋಗಿದ್ದಾನೆ. ಆದರೆ ರತ್ನಾಕರ ಧೈರ್ಯದಿಂದ ತನಗೆ ತೋರಿದ ಬದಲಾವಣೆಗಳನ್ನು ಮಾಡಿಯೇ ತೀರಿದ. ಬಹುಶಃ ಇದರ ಫಲವಾಗಿ ಏಳುನೂರು ಶ್ರಾವಕರಲ್ಲಿ ಭಿಕ್ಷೆ ತಪ್ಪಿಹೋಗಿರಬಹುದು; ವಿಜಯಣ್ಣನ ದ್ವಾದಶಾನುಪ್ರೇಕ್ಷೆಗೆ ದೊರೆತ ಪುರ ಸ್ಕಾರ ಭರತೇಶ ವೈಭವಕ್ಕೆ ದಕ್ಕದೆ ಹೋಗಿರಬಹುದು. ಆದರೇನು? ಆ ತ್ಯಾಗವೇ ಇಂದು ಕವಿಯ ಮಹೋನ್ನತಿಗೆ ಮಾರ್ಗ ಮಾಡಿಕೊಟ್ಟಿದೆ.

ಮೂರನೆಯ ಕಲ್ಯಾಣವೆಂದು ಕವಿಯು ಬಹುಶಃ ಭಾವಿಸಿರುವುದು 'ಯೋಗ ವಿಜಯ'. ದಿಗ್ವಿಜಯವಾದ ಮೇಲೆ ಭರತನು ಜೈನ ಶಾಸ್ತ್ರಗಳ ಅಭ್ಯಾಸದಿಂದ ತನ್ನ ಆತ್ಮೋನ್ನತಿಯನ್ನು ಮಾಡಿಕೊಳ್ಳಲು ಪ್ರಯತ್ನಿಸು ತ್ತಾನೆ. ಕ್ಲಿಷ್ಟವೂ ಕಷ್ಟಸಾಧ್ಯವೂ ಆದ ಈ ಭಾಗವನ್ನು ಸುಲಿದ ಬಾಳೆಯ ಹಣ್ಣಿನಂತೆ ಮಾಡಿಟ್ಟಿರುವ ರತ್ನಾಕರನ ಕೈವಾಡವು ಇಲ್ಲಿ ಸ್ಫುಟವಾಗಿ ಕಂಡು ಬರುತ್ತದೆ.

ನಾಲ್ಕನೆಯದು 'ಅರ್ಕಕೀರ್ತಿ ವಿಜಯ.' ಪಂಚಕಲ್ಯಾಣಗಳನ್ನು ಬರೆಯಬೇಕೆಂಬ ಉದ್ದೇಶವೊಂದನ್ನು ಬಿಟ್ಟರೆ ಇದನ್ನು ಭರತೇಶ ವೈಭವದಲ್ಲಿ ಸೇರಿಸಿದುದರ ಔಚಿತ್ಯಕ್ಕೆ ಸ್ವಲ್ಪವೂ ಎಡೆಯಿಲ್ಲವೆಂದು ತೋರುತ್ತದೆ. ಆದಿ ಜಿನನ ಜೀವನ ಚರಿತ್ರೆಯಲ್ಲಿ ಭರತನ ಕಥೆಯನ್ನು ಅಂಗವಾಗಿ ತಂದಂತೆ ಭರತೇಶನ ಜೀವನ ಚರಿತ್ರೆಯಲ್ಲಿ ಅರ್ಕಕೀರ್ತಿಯ ಕಥೆಯನ್ನು ಕವಿ ತಂದಿರು ವನೋ ಏನೋ! ಜಿನಸೇನನ ಆದಿಪುರಾಣದಲ್ಲಿ ಅರ್ಕಕೀರ್ತಿಯ ಕಥೆ ಬಂದಿದೆಯಾದರೂ ಅಲ್ಲಿ ಅದಕ್ಕೆ ಅಷ್ಟು ಪ್ರಾಮುಖ್ಯತೆಯಿಲ್ಲ. ರತ್ನಾಕರನು ಈ ಭಾಗಕ್ಕೆ ಕೊಟ್ಟಿರುವ ಪ್ರಾಮುಖ್ಯತೆ ಅನುಚಿತವೆಂದು ಹೇಳಬಹುದು. ಅರ್ಕಕೀರ್ತಿಯ ಮದುವೆ, ಸುಖಭೋಗಗಳು, ರಸಿಕತೆ, ಯುದ್ಧ—ಇತ್ಯಾದಿ ಇತ್ಯಾದಿ ಹಲವು ವಿಷಯಗಳು ಇದರಲ್ಲಿ ಸೇರಿಕೊಂಡಿವೆ.

ಕಡೆಯ ಭಾಗ ಮೋಕ್ಷ ವಿಜಯ. ಮುಕುರದಲ್ಲಿ ಪಲಿತವನ್ನು ಕಂಡ [1] ಭರತಚಕ್ರೇಶ್ವರನು ತನ್ನ ಮಕ್ಕಳು ದೀಕ್ಷೆ ವಹಿಸಿದುದನ್ನು ಕೇಳಿ ವೈರಾಗ್ಯ ಪರನಾಗುತ್ತಾನೆ. ತಂದೆಯಿಂದ ದೀಕ್ಷೆಪಡೆದು ಮೋಕ್ಷವನ್ನು ಪಡೆಯುತ್ತಾನೆ.

---

1. ಶ್ವೇತಾಂಬರ ಗ್ರಂಥಗಳಲ್ಲಿ ಈ ಭಾಗವು ಸ್ವಲ್ಪಮಟ್ಟಿಗೆ ಭಿನ್ನವಾಗಿದೆ. 'ಅಭಿಧಾನ ರಾಜೇಂದ್ರ' ದಲ್ಲಿ 'ಭರಹ (ಭರತ)' ಎಂಬ ಶಿರೋನಾಮೆಯ ಕೆಳಗೆ ಭರತನ ವೈರಾಗ್ಯಕ್ಕೆ ಕಾರಣವನ್ನು ಹೀಗೆ ಕೊಟ್ಟಿದೆ.—

'ಸರ್ವಾಲಂಕಾರವಿಭೂಷಿತಃ ಸ ಭರತಚಕ್ರವರ್ತೀ ಆದರ್ಶಭವನೇ ಗತಃ। ತತ್ರ ಸ್ವದೇಹಂ ಪ್ರೇಕ್ಷಮಾಣಸ್ಯ ಅಂಗುಲೀಯಕಂ ಪತಿತಂ, ತಚ್ಚ ಕೇನ ನಜ್ಞಾತಂ, ಆದರ್ಶಭಿತ್ತ್ಯಾ ಸ್ವದೇಹಂ ಪಶ್ಯತಾ ತೇನ ಪತಿತ ಮುದ್ರಿಕಾ ಸ್ವಕರಾಂಗುಲೀ ಅಶೋಭಮಾನಾ ದೃಷ್ಟಾ। ತತೋ ದ್ವಿತೀಯಾಂಗುಲೀ ತೋಪಿ ಮುದ್ರಿಕಾ ಅಪನೀತಾ; ಸಾಪ್ಯಶೋಭಮಾನಾ ದೃಷ್ಟಾ। ತತಃ ಕ್ರಮಾತ್ ಸರ್ವಾಭರಣಾನಿ ಉತ್ತರಿತಾನಿ. ತದಾ ಸ್ವಶರೀರಮಶೀವಾ ಶೋಭಮಾನಂ ನಿರೀಕ್ಷ್ಯ ಸಂವೇಗಮಾಪನ್ನಶ್ಚಕ್ರೀ ಏವಂ ಚಿಂತಿತುಂ ಪ್ರವೃತ್ತಃ— ಅಹೋ ಅಗುಂತಕ ದ್ರವ್ಯೈರೇವೇದಂ ಶರೀರಂ ಶೋಭತೆ, ನಸ್ವಭಾವ ಸುಂದರಂ। ಅಪಿ ಚ ಏತಚ್ಛರೀರ ಸಂಗೇನ ಸುಂದರಮಪಿ ವಸ್ತು ವಿನಶ್ಯತಿ' ಇತ್ಯಾದಿ. ಆಗ ಆತನಿಗೆ ಕೇವಲ ಜ್ಞಾನಬೋಧೆಯಾಗುತ್ತದೆ.

ರತ್ನಾಕರನ ಶೃಂಗಾರ ಚಿತ್ರಗಳು

ಇನ್ನು ಕವಿಯ ಸ್ವಂತಸೃಷ್ಟಿಯ ಕಡೆ ಸ್ವಲ್ಪ ನೋಡೋಣ. ಮಹಾ ಪುರಾಣ ಕರ್ತೃಗಳಾಗಲಿ ಅವರನ್ನು ಅನುಸರಿಸಿ ಕಾವ್ಯವನ್ನು ಕಟ್ಟಿರುವ ಇತರ ಕವಿಗಳಾಗಲಿ ಭರತಚಕ್ರಿಯ ಗೃಹಜೀವನವನ್ನು ಚಿತ್ರಿಸಲು ಪ್ರಯತ್ನಪಟ್ಟಿಲ್ಲ. ಚಕ್ರವರ್ತಿಯಾಗುವವರೆಗೆ ಆತನ ಜೀವನವು ಹೇಗೆ ರಸಮಯವಾಗಿತ್ತೆಂಬುದನ್ನು ಹೇಳಿಲ್ಲ. ಇತರರು ಹೇಳದೆ ಬಿಟ್ಟ ಈ ಭಾಗವನ್ನು ತೆಗೆದುಕೊಂಡು ರತ್ನಾಕರನು ರಸಮಯವಾದ ಕಾವ್ಯವನ್ನು ಸೃಷ್ಟಿಸಿದ್ದಾನೆ.

ಕವಿ 'ಶೃಂಗಾರಕವಿ ಹಂಸರಾಜ.' ಆತನ ಕಥಾನಾಯಕ 'ಗಣನೆಯಿಲ್ಲದ ಸುಖದೊಳೋಲಾಡಿ' ದವನು. ಆದುದರಿಂದ ರತ್ನಾಕರನ ಸೃಷ್ಟಿಶಕ್ತಿಯೆಲ್ಲವೂ ಭರತನ ಶೃಂಗಾರ ಜೀವನವನ್ನು ಸೃಷ್ಟಿಸುವುದರಲ್ಲಿ ಕೇಂದ್ರೀಕೃತವಾಗಿದೆ. ಆತನ 'ಭೋಗಸಂಧಿ' ಒಂದು ಶೃಂಗಾರರಸದ ಸಾಗರ. ಅಲ್ಲಿನ ಒಂದೊಂದು ಚಿತ್ರವೂ ಒಂದೊಂದು ಸರಸಸಲ್ಲಾಪದ ಕಲ್ಲೋಲಮಾಲೆ. ಇದರ ಮೇಲೆ ತೇಲಿಹೋಗುತ್ತಿರುವ ಓದುಗರು ಲಾವಣ್ಯರಸಾನುಭೂತಿಯ ಚರಮಸೀಮೆಯನ್ನು ಸಂದರ್ಶಿಸಿ ಧನ್ಯರಾಗುತ್ತಾರೆ. ಅಲ್ಲಿ ನಿಂತು ಭರತನ ಶೃಂಗಾರ ಜೀವನದ ಹರಹನ್ನೂ ಆತನ ಅನುಭವದ ಆಳವನ್ನೂ ನೆನೆದು ಹರ್ಷಪುಳಕಿತರಾಗುತ್ತಾರೆ.

ಭರತನ ಸಂಸಾರ ಬಹು ದೊಡ್ಡದು; ತೊಂಬತ್ತಾರು ಸಹಸ್ರ ಹೆಂಡಿರು. ಈ ರಾಣಿಯರ ಮಾಲೆಯಲ್ಲಿ ಮಧ್ಯದ ಮುತ್ತು ಕುಸುಮಾಜ. ತನ್ನ ರೂಪದಿಂದ, ಕಲೆಯಿಂದ, ಜಾಣ್ಮೆಯಿಂದ, ಸೌಜನ್ಯದಿಂದ ಆತನ ಮನಸ್ಸಿನಲ್ಲಿ ಏಕಚ್ಛತ್ರಾಧಿಪತ್ಯವನ್ನು ಸ್ಥಾಪಿಸಿಕೊಂಡಿದ್ದಾಳೆ. ಒಮ್ಮೆ ಆ ಕಲಾಸುಂದರಿ ತನ್ನ ಇನಿಯನ ಮೇಲೆ ಒಂದು ಕಾವ್ಯವನ್ನು ಕಟ್ಟಿದಳು. ಭರತನ ಅಂತಃ

ಪುರದ ಒಡ್ಡೋಲಗದಲ್ಲಿ ಇದರ ದಿಗ್ದರ್ಶನವಾಗಬೇಕು. ತಾನು ಕಟ್ಟಿದ ಕಾವ್ಯವನ್ನು ತಾನೇ ಓದಲು ಕುಸುಮಾಜಿಗೆ ನಾಚಿಕೆ. ಸುಮನಾಜಿ ಅಮರಾಜಿಯರೆಂಬ ರಾಣಿಯರಿಬ್ಬರು ತಮ್ಮ ಕೋಕಿಲಕಂಠದಿಂದ ಅದನ್ನು ಹಾಡಿದರು. ಗಾನಸುಧೆಯನ್ನು ಸವಿದು ಮತ್ತನಾದ ಚಕ್ರಿ ಅವರನ್ನು ಬಲ್ಲಂತೆ ಬಹುಮಾನಿಸಬೇಕೆಂದು ಬಗೆದ. ಬಹುಮಾನವೇನೆಂಬುದನ್ನು ಬಲ್ಲ ಆ ಜಾಣೆಯರು ಅಲ್ಪ ಸ್ವಲ್ಪಕ್ಕೆ ಆತನ ಬುಟ್ಟಿಗೆ ಬೀಳುವಂತಿಲ್ಲ. ಆದರೆ ಭರತನೇನು ಸಾಮಾನ್ಯನೆ? ರಸಿಕಾಗ್ರೇಸರ ಚಕ್ರವರ್ತಿ; ಕಾವ್ಯವನ್ನು ಬರೆದ ಕುಸುಮಾಜಿಯನ್ನು ಗೇಲಿ ಮಾಡುವವನಂತೆ ನಟಿಸುತ್ತಾ ಒಂದು ಗುಟ್ಟನ್ನು ಕವಿಯಲ್ಲಿ ಹೇಳುವೆನೆಂದು ಅವರಿಬ್ಬರನ್ನೂ ತನ್ನ ಬಳಿಗೆ ಕರೆದ. ಇಬ್ಬರೂ ಬಂದು ಎರಡು ಪಾರ್ಶ್ವಗಳಲ್ಲಿ ನಿಂತುಕೊಂಡರು. ಇಬ್ಬರನ್ನೂ ಒಮ್ಮೆಯೇ ಅಪ್ಪಿಕೊಂಡು ಆಲಂಗಿಸಿದ. ಒಳಗೆ ಸಂತೋಷದ ಬುಗ್ಗೆ ಚಿಮ್ಮಿ ಹರಿಯುತ್ತಿದ್ದರೂ ಸ್ತ್ರೀಭಾವದ ಬಿಂಕವನ್ನು ಬೀರುತ್ತಿರುವ ಅವರನ್ನು ಕಂಡು ರಮಣೀ ರಮ್ಯೋದ್ಯಾನವೆಲ್ಲವೂ ಕಿಲಿಕಿಲಿ ನಗುವಿನ ಹೂಮುಳಿಯನ್ನು ಕರೆಯಿತು. ಲಜ್ಜಾಶೀಲೆಯಾದ ಕುಸುಮಾಜಿ ಅದುವರೆಗೆ ಕಂಭದ ಮರೆಯಲ್ಲಿ ಅವಿತು ಕುಳಿತಿದ್ದವಳು ಮೆಲ್ಲನೆ ಕಾಣಿಸಿಕೊಂಡು 'ನಾನು ಕೋಣೆಯಲ್ಲಿ ಆಡಿಕೊಂಡ ಮಾತನ್ನು ಬಯಲಿಗೆಳೆದು ಹಗರಣ ಮಾಡಿದವರಿಗೆ ಹೀಗೇ ಆಗಬೇಕು' ಎಂದು ಹಾಸ್ಯಮಾಡಿದಳು. ತನ್ನ ಕಾವ್ಯಕ್ಕೆ ದೊರೆತ ಪುರಸ್ಕಾರವನ್ನು ಕಂಡು ಅವಳ ಹರ್ಷ ಮುಗಿಲನ್ನು ಮುಟ್ಟಿದೆ. ಅವಳ ಉತ್ಸಾಹವೇ ಉತ್ಸಾಹ. ಮುಖಕ್ಕೆ ಬಟ್ಟೆ ಮುಚ್ಚಿಕೊಂಡು ನಗುತ್ತಾಳೆ; ಕಂಭದ ಮರೆಗೆ ಅವಿತುಕೊಳ್ಳುತ್ತಾಳೆ, ಹಾಗೆಯೇ ಕಾಣಿಸಿಕೊಳ್ಳುತ್ತಾಳೆ. ಕದ್ದು ಕದ್ದು ಗಂಡನ ಮುಖವನ್ನು ನೋಡುತ್ತಾ ಮುಗುಳ್ನಗೆಯನ್ನು ಚಲ್ಲುತ್ತಿದ್ದಾಳೆ. ಇವಳ ಹೊಯ್ಮಾಲೆತನವನ್ನು ಕಂಡು ಬಹುಮಾನಿತರಿಬ್ಬರೂ ತಮ್ಮ ಬಿಂಕಕ್ಕೆ ತಕ್ಕ ಕೊಂಕು ಮಾತಿನಲ್ಲಿ 'ನೋಡೆ ತಂಗಿ! ನಿನ್ನನ್ನು ಸ್ತುತಿ ಮಾಡಿದುದಕ್ಕೆ ನಮಗೆ ತಕ್ಕ ಶಾಸ್ತಿಯಾಯಿತು' ಎಂದರು. ಕುಸುಮಾಜಿಯ ಜೀವವೂ ಅದೇ ಬಹುಮಾನವನ್ನೇ, ಅಥವಾ ಅದಕ್ಕೂ ಮಿಗಿಲಾದ ಬಹುಮಾನವನ್ನು ಬೇಡುತ್ತಿದೆ. 'ಅಯ್ಯೋ ನಾನಾವ ಗುಣಸಂಪನ್ನೆ, ನೀವೇಕೆ ನನ್ನನ್ನು ಸ್ತುತಿಸಬೇಕು?' ಎಂದು ಕಪಟಕೋಪವನ್ನು ನಟಿಸಿದಳು. ರಾಜನಿಗೆ ಆ ಮಾತುಗಳ ಹಿಂದಿರುವ ಕಾತರತೆ ಅರ್ಥ

ವಾಯಿತು. ಅವನಿಗೂ ಒಂದು ದಿನ ಆ ಜಾಣೆಯೊಡನೆ ಸುಖಸಂಕಥಾ ವಿನೋದದಲ್ಲಿ ಕಾಲವನ್ನು ಕಳೆಯಬೇಕೆಂದೆನಿಸಿತು. ತಾನೇ ಅದನ್ನು ಹೇಳಿದರೆ ಇತರ ರಾಣಿಯರಿಗೆ ಅಸೂಯೆ ಹುಟ್ಟಬಹುದು. ತನ್ನ ಪಂಡಿತೆಯ ನೆರವನ್ನು ಪಡೆದು ಆ ದಿನ ಅವಳ ಮನೆಗೆ ಊಟಕ್ಕೆ ಬರುವೆನೆಂದು ಹೇಳುತ್ತಾನೆ. ಸಂತೃಪ್ತಿಗೊಂಡ ಕುಸುಮಾಜಿ ಸಕಲ ಸಂಭಾರಗಳನ್ನು ಸಿದ್ಧಗೊಳಿಸುವುದ ಕ್ಕಾಗಿ ಆಣ್ಮನಿಂದ ಅಪ್ಪಣೆ ಪಡೆದು ಹೊರಟುಹೋಗುತ್ತಾಳೆ. ಉಳಿದ ರಮಣಿಯರನ್ನು ಬೀಳ್ಕೊಟ್ಟು ಭರತನು ಅರಮನೆಗೆ ಹಿಂದಿರುಗುತ್ತಾನೆ.

* * * * *

ಸ್ವಲ್ಪ ಹೊತ್ತಿನಮೇಲೆ ಕುಸುಮಾಜಿಯ ತಂಗಿ ಮಕರಂದಾಜಿ ರಾಜ ನನ್ನು ಭೋಜನಕ್ಕೆ ಆಹ್ವಾನಿಸಲು ಬರುತ್ತಾಳೆ. ಹೊಂದಟ್ಟೆಯಲ್ಲಿ ಇಟ್ಟು ಕೊಂಡು ಬಂದಿದ್ದ ಮಲಯಜವೀಟಿಕಾಕ್ಷತೆಯನ್ನು ತೂಗುಮಂಚದಮೇಲೆ ಮಂಡಿಸಿರುವ ಮಹಾರಾಜನ ಮುಂದಿಟ್ಟು ' ಅನುಕೂಲವಾದುದಾರೋಗಣೆ ಗಿನ್ನೆಮ್ಮ ಮನೆಗೇಳು ಭಾವಾಜಿ ' ಎಂದು ಕರೆದಳು. ಮಕರಂದಾಜಿ ಇನ್ನೇನು ವರ್ಷ ಆರುತಿಂಗಳೆಂಬ ಹೊತ್ತಿಗೆ ಪ್ರಾಯದ ಹೊಸ್ತಿಲನ್ನು ಮೆಟ್ಟತಕ್ಕ ಸುಂದರ ಳಾದ ಹುಡುಗಿ. ರಸಜೀವಿಯಾದ ಭರತನಿಗೆ ಅವಳೊಡನೆ ಸ್ವಲ್ಪ ಸರಸವಾಡ ಬೇಕೆಂಬ ಚಪಲ. ' ಎಮ್ಮ ' ಮನೆಗೆ ಎಂದು ಹೇಳಿದುದನ್ನೇ ನೆಪಮಾಡಿ ಕೊಂಡು " ಇಂದಾನು ನಿನ್ನ ಮನೆಗೆ ಬಹುದುಚಿತವೆ? ಒಂದರೆ ವರುಷದ ಮೇಲೆ ಬಂದು ನೀನೆನ್ನ ಕರೆದರಾನು ಬಹೆನು" ಎಂದು ಸ್ವಲ್ಪ ಹಾಸ್ಯಮಾಡಿದ. ಷಟ್ಖಂಡದ ಚಕ್ರವರ್ತಿಯೆಂಬ ಗೌರವದಿಂದ ಅವಳು ಅದಕ್ಕೆ ತಕ್ಕ ಪ್ರತ್ಯುತ್ತರ ಕೊಡದೆ ' ಅಕ್ಕಾಜಿಯರಮನೆಗೇಳಿಂದೆ ' ಎಂದು ಮಾತ್ರ ಉತ್ತರ ಹೇಳಿದಳು. ಅವಳು ಅತ್ಯಂತ ಚದುರೆಯೆಂಬುದು ರಾಜನಿಗೆ ಗೊತ್ತು. ಆದ್ದರಿಂದ ಅಷ್ಟಕ್ಕೆ ಬಿಡದೆ ಸ್ವಲ್ಪ ಕೆಣಕಿ ಕೆರಳಿಸಿದ. ' ಠಕ್ಕುಕಾತಿಯೆ ನಿನ್ನ ಮನೆಗೆಂದೆಯ್ಯೆಸೆ ; ನಿನ್ನಕ್ಕನ ಹೆಸರ ಹೇಳಿದೆಯ? ' ಇಷ್ಟು ಸಾಕು ಮಕರಂದಾಜಿಯನ್ನು ಮಾತಿನ ಯುದ್ಧಕ್ಕೆ ಎಬ್ಬಿಸಲು.

ಮಕರಂದಾಜಿ—

" ಅಕ್ಕನ ಹೆಸರ ಹೇಳುವರಾಕೆ ಪಡೆದರೆ | ಮಕ್ಕಳು ಪೇಳ್ವುವು ಮುಂದೆ |
ದಿಕ್ಕಿನೊಳೆನಗೇನು ಸಂಬಂಧ ಸಾಕೇಳು | ಸಿಕ್ಕಿನ ಮಾತನಾಡದಿರು ||

ಭರತ—

" ಸಾಕೇಳು ಸಲಹೇಳು ನೀನೆಂದು ತಾನೆನ್ನ | ನಾಕರುಷಣ ಮಾಡುತಹಳೆ |
ಈಕೆ ತಾನೇನು ಕಾತರೆಯೊ ! .....

ಮಕರಂದಾಜಿ—

" ಕಾತರ ಗೀತರವನು ನೀವು ನಿಮ್ಮಂಬು | ಜಾತಾಕ್ಷಿಯರು ಬಲ್ಲಿರ್ಕೆಸೆ |
ಆ ತಳ್ಕಿಬಳ್ಕಿಯ ನಾವೇನ ಬಲ್ಲೆವು | ಮಾತು ಸಾಕೆನ್ನೇಳು ಭಾವ ॥ "

ರಾಜನು ತನ್ನ ದಸ್ತರವನ್ನು ಕೊಡವಿ ಕಟ್ಟಿಡಬೇಕಾದುದೇ ! ಎದ್ದು ಅವಳನ್ನು ಹಿಂಬಾಲಿಸುವನು. ಅರಸಿಯ ಮನೆಯನ್ನು ಪ್ರವೇಶಿಸುತ್ತಲೇ 'ಅಮೃತವಾಚಾಂಕ' ನೆಂಬ ಗಿಳಿ ಅವನಿಗೆ ಸುಖಾಗಮನವನ್ನು ಬಯಸಿತು.

" ಕ್ಷೇಮವೆ ಭಾವಾಜಿ ಮತ್ತು ನಿಮಗೆ ಪರಿ | ಣಾಮವೆ ಹೇಳು ಭಾವಾಜಿ |
ಈ ಮನೆಯತ್ತಲೇಕಡಿಗಡಿಗೈತರೆ ?
ಧರೆಯನಾಳಿದನೆಂಬ ಗರ್ವವೊ ನಮ್ಮಕ್ಕ | ನರಮನೆಗಡಿಗಡಿಗೇಕೆ |
ಬರಲೊಲ್ಲೆ ಬಂದಿನ್ನು ಪೋಪೆಯ ನಿನ್ನ ಕಾ | ಲ್ಗುರುಳ ನಿಕ್ಕುವೆ..... |
ಸುಳಿಗುರುಳೆಂಬುರುಲುಂಟು ನಿಮ್ಮಕ್ಕನ | ನಳತೋಳ ಪಾಶಗಳುಂಟು |
ಹೊಳೆದಿನ್ನು ಹೋಹ ಭಾವನ ಕಾಣ್ಬೆ.....
ಸೊಂಕಿ ನಮ್ಮಕ್ಕನೊತ್ತಿನೊಳಿದ್ದರಿರು ಮಿಾರಿ | ಭೋಂಕನೆ ಪೋಪೆನೆಂಬಾಗ |
ಪಂಕಜಾಕ್ಷಿಯ ಕಡೆಗಣ್ಣಕಾಂತಿಯ ಬೆಳ್ಳಿ | ಸಂಕಲೆಗಳನಿಕ್ಕಿಸುವೆನು ॥ "

ಅಮೃತವಾಚಾಂಕನ ಅಮೃತವಾಣಿಗೆ ಶಿಕ್ವಾಗುರು ಮಕರಂದಾಜಿ. ಆಕೆಗೆ ರಾಜನಿಂದ ತಕ್ಕ ಸನ್ಮಾನ ದೊರೆಯಿತು. ಆತನು ಅವಳನ್ನು ಬಿಗಿಯಪ್ಪಿ ಮುತ್ತಿಕ್ಕುವನು. ಮಾತಿಗೆ ಮಾತನ್ನು ಪೋಣಿಸುವ ವೈಯಾರಿ ಮಕರಂದೆ ಅದರಿಂದ ಕೋಪಿಸಿದವಳಂತೆ ನಟಿಸಿ ತನ್ನ ಭಾವೀಪತಿಯಾದ ಭರತನೊಡನೆ ಬೇಕಾವಷ್ಟು ಮಾತಿನ ಮಲ್ಲಗಾಳಗವನ್ನು ನಡೆಸಿ ಆತನನ್ನು ಮೆಚ್ಚಿಸುವಳು. ಈ ಭಾಗವು ಅತ್ಯಂತ ಸರಸವಾದುದು. ಸರಸ ಸಂಧಿಯೆಂದು ಈ ಭಾಗಕ್ಕಿಟ್ಟಿರುವ ಹೆಸರು ಸಾರ್ಥಕವಾಗಿದೆ.

* * * * *

ರಾಜನು ಕುಸುಮಾಜಿಗೆ ಸನ್ಮಾನಮಾಡುವುದೂ ಅತ್ಯಂತ ಸುಂದರವಾದ ಶೃಂಗಾರಮಯ ಚಿತ್ರ. ಗಂಡಹೆಂಡಿರಿಬ್ಬರೇ ಇರುವಾಗ ತನ್ನ ಹೆಂಡತಿಯನ್ನು ಎಷ್ಟು ವಿಧವಾಗಿ ಕರೆದರೂ ತೃಪ್ತಿಯಿಲ್ಲ. ಕಸುಮಾಜಿಯೆಂಬ ಹೆಸರೇ ಮುದ್ದಾದುದು. ಮುದ್ದಾದ ಹೆಸರನ್ನು ಮತ್ತಷ್ಟು ಮುದ್ದಾಗಿ ಮಾಡಿ ಅವಳ ಮನೆಯ ಅಚ್ಚುಕಟ್ಟನ್ನೆಲ್ಲಾ ಮೆಚ್ಚುವ ಸೋಗಿನಿಂದ ಅವಳನ್ನು ಹೆಸರಿಸುತ್ತಾನೆ.

' ಸಾರಣೆ ಚನ್ನಾಯ್ತು ಕುಸುಮೆ ; ಕುಂಕುಮದೊಂದು |
ಕಾರಣೆ ಚನ್ನಾಯ್ತು ಕುಸುಮಿ |
ತೋರಣ ಚನ್ನಾಯ್ತು ಕುಸುಮು.....

' ಜೆಳಯಗೊಟ್ಟುದು ಲೇಸು ಕುಸುಮಾಜಿ ಹೊಸರಂಗು |
ವಲಿಲೇಸು ಕುಸುಮಾಂಗಿ ನಿನ್ನ |
ನಿಳಯದ ಸಿಂಗಾರ ಸೊಗಸಾಯ್ತು ಕುಸುಮಕೋ | ಮಲೆ.....

ಹೀಗೆ ಕುಸುಮು, ಕುಸುಮಿ, ಕುಸುಮಾಜಿ, ಕುಸುಮೆ, ಕುಸುಮಾಂಗಿ, ಕುಸುಮಾಲೆ, ಕುಸುಮಿತಿ, ಕುಸುಮಿನಿ—ಎಂದು ಅವಳ ಹಿಂದೆ ಹಿಂದೆಯೇ ಓಡಾಡುತ್ತಿರುವನೋ ಎನ್ನಿಸುವುದು. ತೊಂಬತ್ತಾರು ಸಹಸ್ರ ಹೆಂಡಿರೊಡನಾಡಿ ನುರಿತ ಭರತನಿಗೆ ಅವರನ್ನು ವಶಪಡಿಸಿಕೊಳ್ಳುವ ಜಾಣ್ಮೆ ಕರತಲಾಮಲಕವಾಗಿದೆ. ಕುಸುಮಾಜಿಯ ತೌರುಮನೆಯವರನ್ನೆಲ್ಲಾ ಹೆಸರಿಸಿ ಹೊಗಳುತ್ತಾ ಆಕೆಯನ್ನು ಸಂತೋಷಗೊಳಿಸುವನು—ಅಹಹ! ಈ ಝಾಲರಿ ಬಟ್ಟೆ ಎಷ್ಟು ಸೊಗಸಾಗಿದೆ? ಎಲ್ಲಿಂದ ಬಂತು ಇದು? ಮಾವಾಜಿಯವರು ಕಳುಹಿದರೋ? ಓಹೋ! ಈ ಮುತ್ತಿನ ಲಂಬಣ ಏನು ಸೊಬಗನ್ನು ಬೀರುತ್ತಿದೆ! ಬಹುಶಃ ನಮ್ಮ ಅತ್ತೆಯವರು ಕಳುಹಿಸಿರಬೇಕು, ಇತ್ಯಾದಿ ಇತ್ಯಾದಿ. 'ದೊಡ್ಡ ಜಾಣೆ' ಯಾದ ಕುಸುಮಾಜಿ ಈ ಮಾತುಗಳಿಂದ ' ಜಿಡ್ಡುಬ್ಬಿ ಮಂಡೆಗೇರುವಳಲ್ಲ.' ' ಮನೆಯ ಶೃಂಗಾರ ಹಾಗಿರಲಿ ; ತಾವು ನನ್ನ ಮನೆಗೆ ಬಂದಿರುವುದೇ ದೊಡ್ಡ ಶೃಂಗಾರ ಮೊದಲು ಊಟಕ್ಕೇಳೋಣವಾಗಲಿ' ಎಂದು ಹೇಳಿ ಆತನನ್ನು ಕೈಹಿಡಿದು ಭೋಜನ ಗೃಹಕ್ಕೆ ಕರೆದೊಯ್ದಳು. ಅಲ್ಲಿ ತಾನೇ ತನ್ನ ಕಯ್ಯಾರೆ ತನ್ನ ಆಣ್ಮನಿಗೆ ಊಟಮಾಡಿಸಿದಳು. ಊಟಮಾಡಿ

ಸುವ ಮುನ್ನ ಮನೆಯ ಬಾಗಿಲುಗಳನ್ನೆಲ್ಲಾ ಭದ್ರಪಡಿಸಿ ತನ್ನ ಅರಮನೆಯ ಒಳಗುಟ್ಟು—ಓಪರಾಡಿಕೊಳ್ಳುವ ಮಾತು—ಹೊರಸೋರದಂತೆ ತಕ್ಕ ವ್ಯವಸ್ಥೆ ಮಾಡುತ್ತಾಳೆ. ಆ ತಂಗಿ, ಅವಳ ಶಿಷ್ಯನಾದ ಅಮೃತವಾಚಾಂಕ—ಇವರಿರುವಲ್ಲಿ ಇದು ಅನಿವಾರ್ಯವೆಂದು ತೋರಿತು ಆಕೆಗೆ. ಹಿಂದೊಮ್ಮೆ, ತನಗೆ ತಾನು ಹೇಳಿಕೊಂಡ ' ರಾಜ ಲಾವಣ್ಯ ' ಕಾವ್ಯವು ಬಯಲಿಗೆ ಬಿದ್ದು ರಾಣೀ ವಾಸದಲ್ಲೆಲ್ಲಾ ಜನಜನಿತವಾದುದು ಅಮೃತವಾಚಾಂಕನಿಂದಲೇ. ಅದಕ್ಕೇ ಅಷ್ಟು ಎಚ್ಚರಿಕೆ.

ಊಟಮಾಡಿಸುವಂದು ಮೈ ಛಳಿಬಿಟ್ಟು ರಾಜನೊಡನೆ ಸರಸವಿನೋದಗಳನ್ನಾಡುತ್ತಾ ಆತನನ್ನು ಸ್ವರ್ಗಸದೃಶವಾದ ಷಡ್ರಸೋಪೇತ ಮೃಷ್ಟಾನ್ನದಿಂದ ತಣಿಸುವಳು. ಅವಳ ಆದರೋಪಚಾರಗಳಿಂದ, ಆಹಾರವಸ್ತುಗಳ ವೈವಿಧ್ಯದಿಂದ, ಅವುಗಳ ರುಚಿಕಟ್ಟಿಂದ ರಾಜನು ಪರಮಸಂತುಷ್ಟನಾದನು. ನಂತರ ಕುಸುಮಾಜಿ ಆತನ ಕೈತೊಳೆದು ಮೇಲಕ್ಕೆಬ್ಬಿಸಿ, ಹೂವಿನುಪ್ಪರಿಗೆಗೆ ಕೈಹಿಡಿದು ಕರೆದುಕೊಂಡು ಹೋದಳು. ಉಪ್ಪರಿಗೆಯಲ್ಲಿ ಒಂದು ಗೂಢ ಗೃಹ. ಶೃಂಗಾರರಸ ಮಡುಗಟ್ಟಿ ನಿಂತಿರುವಂತೆ ಶೋಭಿಸುತ್ತಿರುವ ಆ ಗೃಹದಲ್ಲಿ ಒಂದು ಶಕುನಿಮಂಚ. ರಾಜನು ಕೃತಕೃತ್ಯನಾದವನಂತೆ ಹಾಯಾಗಿ ಅದರಮೇಲೆ ಮಲಗಿದನು. ರಾಜನಿಗೆ ವೀಳೆಯವಿತ್ತು ಪನ್ನೀರನ್ನು ಚುಮುಕಿಸಿ, ಕಣ್ಣುಗಳಿಗೆ ಕರ್ಪೂರವನ್ನು ಹಚ್ಚಿ, ಮೈಗೆ ಸುಗಂಧವನ್ನು ಲೇಪಿಸಿ, ಗಾಳಿಹಾಕಿ, ಪಾದವನ್ನು ಒತ್ತುತ್ತಾ ಕುಳಿತಳು ಕುಸುಮಾಜಿ. ಅದರೆ ರಾಜನ ಆಗ್ರಹದಮೇಲೆ ಊಟಮಾಡಿಕೊಂಡು ಬರಲು ಹೋದಳು. ಗಂಡನು ಊಟ ಮಾಡಿದ ತಟ್ಟೆಯಲ್ಲೇ ಕುಳಿತು ಬೇಗ ಬೇಗ ಊಟದ ಶಾಸ್ತ್ರವನ್ನು ಪೂರೈಸಿದಳು. ಅಲಂಕಾರ ಗೃಹಕ್ಕೆ ಹೋಗಿ, ಕನ್ನಡಿಯ ಮುಂದೆ ನಿಂತು, ಕುಟಿಲ ಕುಂತಲಗಳನ್ನು ಬಾಚಿ ಬಾಚಿ ಹೆರಳುಹಾಕಿಕೊಂಡಳು. ತಿಲಕವನ್ನು ತಿದ್ದಿಕೊಂಡಳು. ತನ್ನ ರೂಪಕ್ಕೆ ತಾನೇ ಮನಸೋತು ನಕ್ಕಳು. ಆಭರಣಾದಿಗಳನ್ನೆಲ್ಲಾ ಸರಿಮಾಡಿಕೊಂಡಳು. ಕಸ್ತೂರಿ ಪುನುಗು ಜವಾಜಿಗಳನ್ನು ಲೇಪಿಸಿಕೊಂಡಳು. ಎಡಗೈಲಿ ಸಜ್ಜುಗೊಳಿಸಿದ ವೀಳೆಯವನ್ನು ಹಿಡಿದು ಗಂಡನೆಡೆಗೆ ಹೊರಟಳು. ಮನದನ್ನನ ನಿದ್ರಾಭಂಗವಾಗಬಾರದೆಂದು ಆಭರಣ

ಗಳ ಉಲುಹನ್ನು ಮಾಣಿಸುವಂತೆ ಮೆಲ್ಲಗೆ ನಡೆತಂದು ಬಾಗಿಲ ಮರೆಯಲ್ಲಿ ನಿಂತಳು. ರಾಜನು ಇವಳನ್ನು ಕಂಡು "ಪ್ರಚಂಡೆ! ಬಾ" ಎಂದು ಕರೆದ ನಂತೆ! ಕುಸುಮಾಜಿ ಕೆಂಡವನ್ನು ಗುಳುತ್ತಿರುವ ಕೆಂಪಿನ ತುಟಿಗಳಿಂದ ನಸುನಗುವನ್ನು ಇಂಡೆಯಾಡುತ್ತಾ ಒಳಗೆ ಬಂದಳು; ವಲ್ಲಭನಿಗೆ ಬಾಯ್ಮುಕ್ಕುಳಿಸಲು ಪನ್ನೀರನ್ನು ಕೊಟ್ಟು, ಕೂರುಗುರಿಂದ ಸೀಳಿದ ವೀಳೆಯವನ್ನು ಮಡಿಸಿ ಬಾಯಿಗಿಟ್ಟಳು. ರಸಿಕನಾದ ಭರತನಿಗೆ ಅವಳೊಡನೆ ಒಂದೆರಡು 'ಜೂಟಿನ ನುಡಿ' ಯನ್ನಾಡಬೇಕೆನ್ನಿಸಿತು. ಮುಸುಕಿಕ್ಕಿ ಮಲಗಿ

"ಕುಸುಮಿ ತಾನೇಕೆ ಬಂದಳು" ಎಂದು ಪ್ರಶ್ನಿಸಿದ.

"ಏಕೆ ಬಂದಳೊ! ದೇವರೇ ಬಲ್ಲರು ಅವಳಿಚ್ಛೆಯೇನೆಂದು"

"ಅವಳ ಮುಖ ನೋಡಿದರೆ, ಏನೊ, ನಮ್ಮೊಡನೆ ಜಗಳಕ್ಕೆ ಬಂದಿರುವಂತೆ ಕಾಣುತ್ತದೆಯಲ್ಲ!"

"ಜಗಳಕ್ಕಲ್ಲವಂತೆ; ಏನೋ ಗೂಢಾರ್ಥವಿದೆಯಂತೆ. ಆಳ್ದನಕೂಡೆ ಆಲೋಚಿಸಲು ಬಂದಿದ್ದಾಳಂತೆ"

"ಗೂಢಾರ್ಥವೇನಂತೆ?"

"ಅದನ್ನು ಮೂಢರಿಗಾದರೆ ಬಾಯ್ಬಿಟ್ಟು ಹೇಳಬೇಕು. ಪ್ರೌಢರಾದವರಿಗೆ ಬಂದೊಡನೆಯೇ ಅರಿವಾಗುತ್ತದೆ."

ರಾಜನ ಪುಂಗಿ ಬಂದಾಯಿತು. ಮಾತನಾಡಲು ಮಾರ್ಗವಿಲ್ಲದೆ ಸುಪ್ರೀತನಾಗಿ ಅವಳನ್ನು ಪಾದದಿಂದ ಅಪ್ಪಿಕೊಂಡ. ಕುಸುಮಾಜಿ ಮೊನಚಾದ ಮತ್ತೊಂದು ಹೂ ಬಾಣವನ್ನು ಪ್ರಯೋಗಿಸಿದಳು—"ಆದುದೊಡೆಯ! ಮೆಚ್ಚಿ ಕಾಲೊಳೊದೆದನೆಂಬ ಗಾದೆ ಇಂದೆನಗೆ."

ರಾಜನು ನಗುತ್ತಾ ಮೇಲಕ್ಕೆದ್ದು ಆ ಮೋಹನಾಂಗಿಯನ್ನು ಬರಸೆಳೆದು ಬಿಗಿಯಪ್ಪಿದ.

ಸರಸವಿನೋದಗಳಿಂದಲೂ ಭೋಗಭಾಗ್ಯಗಳಿಂದಲೂ ತಣಿದಮೇಲೆ ಕುಸುಮಾಜಿ ತನ್ನ ಗಾನಸುಧೆಯಿಂದ ರಾಜನನ್ನು ತಣಿಸುವಳು. ಅದನ್ನು

ಕೇಳಿದಷ್ಟೂ ಕೇಳಬೇಕೆಂಬಾಸೆ ರಾಜನಿಗೆ. ಅವನು ಹೊಗಳಿದಷ್ಟೂ ರಾಗರಸಕ್ಕೆ ಕಳೆಯೇರುತ್ತಿದೆ. ರಾಗರಸ ಕಳೆಯೇರಿದಷ್ಟೂ ರಾಜನ ಉತ್ಸಾಹ ಹೆಚ್ಚುತ್ತಿದೆ. ಒಡನೆಯೇ ಅವಳನ್ನು ತಬ್ಬಿಕೊಂಡು ತನ್ನ ಮನಸ್ಸನ್ನು ತೃಪ್ತಿಪಡಿಸ ಬೇಕೆಂಬಾಸೆ. ಮೆಲ್ಲನೆ ವೀಣೆಯನ್ನು ಸ್ವಲ್ಪ ಸರಿಸುವನು. ಆದರೂ ಗಾನರಸಕ್ಕೆ ಮನಸೋತು ' ಇರಲಿ, ಹಾಡು' ಎಂಬ ಭಾವದಿಂದ ಹಿಂದಕ್ಕೆ ಸರಿಯುವನು. ನಡುನಡುವೆ ಒಮ್ಮೊಮ್ಮೆ ' ಮಡದಿ ಹಾಡುವುದೊಂದು ಗಮಕಕೆ ಗಾನದ | ಕಡುಸವಿಗೆದೆಯೊಳು ಹಿಗ್ಗಿ ॥ ಎಡದ ತೋಳಿಂದ ಕೊರಳನಪ್ಪಿ ಚಂದುಟಿ | ವಿಡಿದು ಚುಂಬಿಸಿ ನಕ್ಕುಬಿಡುವಾ ॥

* * * * *

ಕುಸುಮಾಜಿ ಸಾಹಿತ್ಯ ಸಂಗೀತಗಳ ಸರಸ್ವತಿ. ಅವಳ ಕಲೆ ಅವಳಿಗೆ ದೊರಕಿಸಿಕೊಟ್ಟ ಬಹುಮಾನವನ್ನು ಕಂಡು ಹಲವು ರಾಣಿಯರ ಬಾಯಲ್ಲಿ ನೀರು ಸುರಿಯಿತು. ಅವರಲ್ಲಿ ಕೆಲವರು ನಟನವಿದ್ಯಾವಿಶಾರದರು. ತಮ್ಮ ನಟನವಿದ್ಯೆಯಿಂದ ರಾಜನನ್ನು ಮೆಚ್ಚಿಸಬೇಕೆಂದು ನಿಶ್ಚಯಿಸಿ ಕುಸುಮಾ ಜಿಯ ಸಹಾಯದಿಂದ ರಾಜನನ್ನು ಅದಕ್ಕೆ ಒಪ್ಪಿಸಿದರು. ಆದಿನ ರಾತ್ರಿ ನಾಟಕ. ನಯನ ಮನೋಹರವಾದ ಅವರ ನಾಟಕಶಾಲೆಯನ್ನು ಅಂತಿಂತೆಂದು ವರ್ಣಿಸುವುದಕ್ಕೆ ಆಗುವುದಿಲ್ಲ. ರತ್ನಗಳ ಪ್ರಭೆಯಿಂದ ಹಗಲೂ ರಾತ್ರಿಯೂ ತಂಪಿನ ಬಿಸಿಲು ತುಂಬಿಕೊಂಡಿರುವುದು. ಚಂದ್ರಲೋಕವನ್ನೇ ತಂದು ಬಿತ್ತಿರುವರೆಂಬ ಭ್ರಾಂತಿಯನ್ನು ಹುಟ್ಟಿಸುವಂತೆ ಎಲ್ಲೆಲ್ಲಿಯೂ ಚಕಚಕಿಸು ತ್ತಿರುವ ರನ್ನ ಗನ್ನಡಿಗಳು; ಪುಷ್ಪಾಸ್ತ್ರನೇ ಪ್ರತ್ಯಕ್ಷನಾಗಿ ನಾಟಕವಾಡುವಂತೆ ಕಾಣುವ ಪುಷ್ಪೋಪಹಾರಗಳು; ಶ್ರೀಗಂಧ, ಕುಂಕುಮಕೇಸರಿ, ಪುನುಗು, ಜವ್ವಾಜಿಗಳ ಕಂಪು ತುಂಬಿಕೊಂಡು ನಾಟಕಶಾಲೆಯೆಲ್ಲವೂ ದೊಡ್ಡದೊಂದು ಹೊನ್ನ ಕರಡಿಗೆಯಂತೆ ಭಾಸವಾಗುವುದು; ಮಿಸುನಿಗಂಭಗಳಲ್ಲಿ ಖಚಿತವಾ ಗಿರುವ ಮಣಿಪ್ರತಿಮೆಗಳು, ಗೋಡೆಗಳಮೇಲೆ ಮೋಹನಸರಸವನ್ನು ಚಲ್ಲಿದಂತೆ ಕಾಣುತ್ತಿರುವ ಪೆಣ್ಣಂಡುಗಳ ರೂಪಗಳು, ಇವುಗಳ ಮಧ್ಯೆ ಪ್ರಕಾಶಿಸುತ್ತಿರುವ ಆದಿಜಿನನ ಭವ್ಯಚಿತ್ರ—ಇಂತಹ ಮನೋಜ್ಞವಾದ ನಾಟಕಶಾಲೆಯಲ್ಲಿ ರಾಜನು ಓಲಗಗೊಟ್ಟನು. ರಾಜಕುಮಾರರು, ಮಂತ್ರಿಗಳು, ಕುಟಿಲ ಶಠ ದಕ್ಷಿಣಾದಿ ರಾಜಪರಿವಾರದವರೂ ರಾಜನ ಹಿಂದೆ ಸಾಲಾಗಿ ಕುಳಿತರು.

ನಾಟಕ ಆರಂಭವಾಯ್ತು. ತಾಳ, ಮದ್ದಳೆ, ಮುಖವೀಣೆ, ವೇಣು, ವೀಣಾದಿ ವಾಧ್ಯಧ್ವನಿಗಳೊಡನೆ ಸುಸ್ವರವಾದ ಸಂಗೀತ ಬೆರೆತು ಚಂದ್ರಿಕೆಗೆ ಸವಿಬಂದಂತಾಯ್ತು. ಮೊದಲು ನೇತ್ರ ಮೋಹಿನಿ, ಚಿತ್ತ ಮೋಹಿನಿಯರೆಂಬ ನಟಿಯರು ತಮ್ಮ ನಾಟ್ಯದಿಂದ ಸಭೆಯನ್ನು ದಂಗುಬಡಿಸಿದರು. ಈ ಮೋಹಿನಿಯರ ನೃತ್ಯದಿಂದ ನೇತ್ರ ಮನಗಳು ಮೋಹಗೊಳ್ಳುವುದಿರಲಿ, "ನೋಟದೊಳಗೆ ಕೊಂದರೊಮ್ಮೆ ನೋಟಕರನು | ನಾಟಿಸಿ ನಸುನಗೆಯಿಂದ | ಲೂಟಮಾಡಿದರು, ಮೈಯೊಲೆದಾಟದಿಂದೆದೆ | ಗೋಟೆಯ ಕೊಂಡರೇನೆಂಬೆ ॥" ಸಂತುಷ್ಟನಾದ ರಾಜನು ಮೇಳದವರಿಗೆ ಹೊರುವಷ್ಟು ಮನ್ನಣೆಗಳನ್ನು ತರಿಸಿಕೊಟ್ಟ. ಆದರೆ ಅವರಿಗೆ ಬೇಕಿದ್ದುದು ಅದಲ್ಲ; ರಾಜನ ಅಂಗಸಂಗ. ಆದರೆ ತಾವೆಲ್ಲಿ, ರಾಜನೆಲ್ಲಿ? "ಧರೆಯನೇಲಣ ಹುಲ್ಲೆ ಚಂದ್ರಮಂಡಲದೊಳಿ | ರ್ದೆರಳೆಯ ಕಾಮಿಸಿದಂತೆ" ಆಗಿತ್ತು ಅವರ ಸ್ಥಿತಿ. ಅವರ ಕಾತರತೆಯನ್ನರಿತ ರಾಜ ಉಪಾಯದಿಂದ ಅವರನ್ನು ತೃಪ್ತಿಪಡಿಸಿದ.

* * * * *

ನೇತ್ರಮೋಹಿನಿ ಚಿತ್ತಮೋಹಿನಿಯರ ನೃತ್ಯ ಬರಿಯ ಪೀಠಿಕೆ ಅವರ ನೃತ್ಯವಾದಮೇಲೆ ರಾಣಿಯರು ಹದಿನಾರುಮಂದಿ ಸ್ವತಃ ನಾಟಕರಂಗವನ್ನು ಪ್ರವೇಶಿಸಿ ನಾಟ್ಯವಾಡುವರು. ಅನುಪಮವಾದ ಅವರ ನಾಟ್ಯವಿದ್ಯಾಕೌಶಲ್ಯದಿಂದ ಸಭಿಕರು ಚಿತ್ರಪ್ರತಿಮೆಗಳಾದರು. ಅವರ ಹಾವಭಾವ ವಿಲಾಸ ವಿಭ್ರಮಗಳಿಂದ ಕಲಾ ಪರಿಣತನಾದ ರಾಜನು ಕೂಡ ಮಾರುಹೋದನು. ಅವರ 'ದಿಕ್ಕಸ್ನಿಕಾ', 'ಜಲಕಸ್ನಿಕಾ' ನಾಟ್ಯಗಳಿಂದಲೂ, ಸಂಗೀತದ ತಾನ ವೈಖರಿಗಳಿಂದಲೂ ರಾಜನು ತಣಿದುಹೋದನು. ಸಭೆಯೆಲ್ಲವೂ ಮುಕ್ತಕಂಠವಾಗಿ ಹೊಗಳಿತು. ರಾಜನು ನಟವರ್ಗಕ್ಕೆಲ್ಲಾ ಮನ್ನಣೆಯಿತ್ತು ಸಭೆಯನ್ನು ಉಚಿತ ಸತ್ಕಾರಗಳೊಡನೆ ಸಮಾಪ್ತಿಗೊಳಿಸಿದನು. ಅಷ್ಟು ಹೊತ್ತಿಗೆ ರಾತ್ರಿ ಹನ್ನೆರಡು ಘಳಿಗೆಯಾದುದನ್ನು ಅರಮನೆಯ ಜಯಘಂಟೆ ಸೂಚಿಸಿತು. ಜನರೆಲ್ಲರೂ ತೂರಿಹೋಗಿ ರಾಜನೊಬ್ಬನು ಮಾತ್ರ ಉಳಿದುದನ್ನು ಕಂಡು ರಾಣಿಯರು ತೆರೆಮರೆಯಿಂದ ಈಚೆಗೆ ಬಂದರು. ಅವರನ್ನು ತಕ್ಕಂತೆ ಸತ್ಕರಿಸಿ ಪಾತ್ರಕಾಂತೆಯರೆಲ್ಲಾ ಒಟ್ಟಾಗಿ ತನ್ನ ಬಳಿಗೆ ಬರುವಂತೆ ಕರೆದ. ಅವರೆಲ್ಲರೂ ಆನಂದದಿಂದ ತಮ್ಮ ಮನದನ್ನನ ಸುತ್ತಲೂ ನೆರೆದರು. ಪ್ರಸನ್ನಚಿತ್ತನಾದ

ಭರತಚಕ್ರಿ ಬೇಕಾದ ವರವನ್ನು ಬೇಡುವಂತೆ ಅವರನ್ನು ಪ್ರೋತ್ಸಾಹಿಸಿದ. ಅವರಿಗೇನುಬೇಕು? ರಾಜನೊಡನೆ ನಲಿಯುವ ಸುಖದಮುಂದೆ ಮತ್ತಾವ ಸ್ವರ್ಗಸುಖ ಸಮನಾಗಬಲ್ಲದು? ಆದರೂ ಸ್ತ್ರೀ ಸ್ವಭಾವಕ್ಕನುಸಾರವಾಗಿ "ಇವಳನ್ನು ಕೇಳು, ಅವಳನ್ನು ಕೇಳು" ಎಂದು ಹೊಯ್ಮಾಲೆತನದಿಂದ ಗುಜು ಗುಟ್ಟಿದರು. ತಮ್ಮ ಗುಂಪಿನಲ್ಲಿ ಪದ್ಮಿನಿ ರೂಪಾಣಿಯರಿಲ್ಲದಿರುವುದನ್ನು ಕಂಡು ಅವರೆಲ್ಲಿ ಹೋದರೆಂದು ಅತ್ತಿತ್ತ ನೋಡಿದರು. ದೂರದ ಕಂಭದ ಮರೆಯಲ್ಲಿ ಅವರಿಬ್ಬರೂ ನಿಂತಿದ್ದರು. ಮುನಿಸು ಮುಖದಮೇಲೆ ಎದ್ದು ಕಾಣುತ್ತಿತ್ತು. ಏಕೆ? ಅವರು ನರ್ತನಮಾಡುವಾಗ ರಾಜ ಒಮ್ಮೊಮ್ಮೆ ವೀಳೆಯದ ನೆಪದಿಂದ ಹೆಮ್ಮಕ್ಕಳ ಕಡೆಗೂ, ಒಮ್ಮೊಮ್ಮೆ ಮಂತ್ರಿಯಕಡೆಗೂ ನೋಡುತ್ತಿದ್ದನಂತೆ. ರಾಜ ಇದನ್ನರಿಯ; ಅವರನ್ನು ಕರೆತರುವಂತೆ ಸೇವಕಿಯರನ್ನು ಅಟ್ಟಿದ.

"ನಮ್ಮ ನರ್ತನ ರಾಜರಿಗೆ ನಯನಮನೋಹರವಾಗಲಿಲ್ಲ. ಹೆಡ್ಡ ಹೆಂಗಸರ ನೃತ್ಯವೇನೆಂದು ಮಂತ್ರಿಯ ಗಡ್ಡವನ್ನೇ ನೋಡುತ್ತಿದ್ದ. ಈಗ ಬಣ್ಣದ ಮಾತುಗಳಾಡಿದರೆ ನಮಗೆ ಬಂದ ಭಾಗ್ಯವೇನು? ಇಷ್ಟಕ್ಕೂ ಊಳಿಗದ ಹೆಂಗಸರಾದ ನಿಮ್ಮ ಮುಂದೆ ನಮ್ಮ ಗೋಳು ಹೇಳಿಕೊಂಡು ಏನು ಸುಖ? ನಾವು ಬರುವುದಿಲ್ಲ ಹೋಗಿ....." ಅವರ ಸಿಡುಕಿನ ಮಾತು ರಾಜನ ಕಿವಿಗೆ ಬಿತ್ತು.

"ರೂಪಾಣಿ ಬಾರೆ! ಪದ್ಮಿನಿ ಬಾರೆ! ನಿಮ್ಮ ಮನಸ್ಸಿನ ನೋವು ಏನಿದ್ದರೂ ಹೋಗಲಾಡಿಸುತ್ತೇನೆ. ಬನ್ನಿ ಇಲ್ಲಿ."

"ದೇವರು ನಮ್ಮನ್ನು ಕರಯಬೇಕಾದುದಿಲ್ಲ. ಕಣ್ಣಿಚ್ಚಿಯಾದರೆ ಮನ ಕಿಚ್ಚಿಯಾಯಿತು. ಕಣ್ಣಿಗೇ ಇಚ್ಚೆಯಾಗಲೊಲ್ಲದ ನಮ್ಮನ್ನು ಕೇವಲ ಬಣ್ಣಗಾರಿಕೆಗಾಗಿ ಏಕೆ ಕರೆಯುವುದು?" ರಾಜನು ತಾನು ತಪ್ಪಿತಸ್ಥನಲ್ಲವೆಂದೂ ನಿಸ್ಪೃಹನೆಂದು ಬೇಕಾದಷ್ಟು ಅಂಗಲಾಚಿದ. ಏನೂ ಪ್ರಯೋಜನವಾಗಲಿಲ್ಲ. "ಚಂದನವತಿ ಹೋಗು. ಮಂಗಲವತಿ ಹೋಗು, ನೊಂದ ಪೆಂಗಳ ಕರೆತನ್ನಿ"

ಎಂದು ರಾಣಿಯರ ಮಧ್ಯಸ್ಥಿಕೆ ಮಾಡಿ ನೋಡಿದ. ಸುತ್ರಾಣಿ, ಪುಷ್ಪಾಣಿ, ಕಟ್ಟಾಣಿ—ಇತ್ಯಾದಿ ಎಲ್ಲ ರಾಣಿಯರೂ ಹೋಗಿ ಚತುರೋಪಾಯಗಳನ್ನೂ ವೆಚ್ಚಮಾಡಿ ನೋಡಿದರು. ರೂಪಾಣಿಯೇನೋ ಹಾದಿಗೆ ಬಂದಳು. ಪದ್ಮಿನಿ ಮಾತ್ರ ಸ್ವಲ್ಪವೂ ಸಗ್ಗಲಿಲ್ಲ. ರಾಜನ ಪರವಾಗಿ ನಿಂತು ಬಿರುನುಡಿ ಗಳನ್ನಾಡುತ್ತಿರುವ ರಾಣಿಯರನ್ನು ಕಂಡು ಕೇವಲ ಕಸಿವಿಸಿಯಿಂದ—'ಅರಸನು ಉದಾಸೀನನಾದರೂ ಒತ್ತಿನ ತರುಣಿಯರು ನನ್ನವರು ಎಂದು ನಂಬಿದ್ದೆ. ಅಕ್ಕಂದಿರು ಚನ್ನಾಗಿ ಮಾಡಿದಿರಿ.'

ಕಡಲನೊತ್ತದೆ ಕಡಲುದುಕವ ತುಂಬುವ | ಕೊಡನನೊತ್ತುವರಂತೆ ನೀವು |
ಕಡುದೊಡ್ಡ ನೃಪನನೊತ್ತದೆ ನನ್ನನೊತ್ತುವ | ಬೆಡಗು ಲೇಸೆಂದಳಾ ಜಾಣೆ ||

ರಾಣಿಯರು ನಾಚಿ ತಲೆ ಬಗ್ಗಿಸಿರಬೇಕು! ಭರತಚಕ್ರಿಗೂ ಗೊತ್ತಾಯಿತು—ಅವಳಿಗೆ ಪ್ರಣಯ ಕಲಹವನ್ನು ಇನ್ನಷ್ಟು ಮುಂದುವರಿಸುವ ಆಸೆ ಇದೆಯೆಂದು. ಎದ್ದು ಅವಳ ಬಳಿಗೆ ಹೋಗಿ ಇದಿರು ಮೋಡಿ ಹಾಕಿ ನಿಂತ.

"ಎಲಗೆ ಪದ್ಮಿನಿ! ನಿಮ್ಮಿಬ್ಬರಲ್ಲಿ ಒಬ್ಬಳು ಒಳಗಾದಮೇಲೆ ನೀನಿನ್ನು ಛಲಮಾಡಿ ಏನು ಪ್ರಯೋಜನ? ಬೇಡ ಕಣೆ. ನಿನ್ನ ಪಂಥ ನನ್ನ ಬಳಿ ಸಾಗುವುದಿಲ್ಲ."

"ಅಳ್ಳೆದೆಯ ರೂಪಾಣಿ ಲಜ್ಜೆಯಿಲ್ಲದೆ ನಿನಗೆರಗಿಪರೆ, ಭಾಪು! ಈ ಪದ್ಮಿನಿ ಡಿಳ್ಳು ಹೋಗುವವಳಲ್ಲ. ಕಟ್ಟಿದ ಕಾಸಿ ಇನ್ನೂ ಬಿಚ್ಚಲ್ಲ ರಾಣಿವಾಸ ಸಾಕ್ಷಿಯಾಗಿ ನೋಡುತ್ತಿರಲಿ. ನೀನೂ ನೋಡುತ್ತಿರು."

"ನಿನಗೆ ಅಷ್ಟೊಂದು ಮನೋಧೈರ್ಯವಿದೆಯೆ?

"ಓಹೋ!

"ಹಾಗಾದರೆ ಮುಖಕೊಟ್ಟು ಮಾತನಾಡು. ಭ್ರಷ್ಟರಂತೆ ಅಡ್ಡಮೋರೆ ಇಟ್ಟುಕೊಂಡು ಏಕೆ ಮಾತನಾಡುತ್ತಿ?

"ಮುಖ ನೋಡಿದರೆ ತಾನೆ ಏನು ಮಹಾ!"—ಮುಖವೆತ್ತಿ ರಾಜನ ಕಡೆ ಒಮ್ಮೆ ನೋಡಿದಳು. ಕೋಪ ಮಾಯವಾಯ್ತು. ನಸುನಗೆ ಮೊಳೆಯಿತು. ತಲೆ ಬಾಗಿದಳು.

" ಅಲ್ಲಿಂದಲೇ ವಂದಿಸಿದರೆ ಆಗದು. ಬಂದು ಕಾಲಿಗೆ ಅಡ್ಡ ಬೀಳಬೇಕು. "

" ಈಗ ಬಂದು ಈಗ ನಮಸ್ಕಾರ ಮಾಡಿದವರಾರು ? "—ತಲೆಯೆತ್ತಿ ನೋಡಿದಳು ರಾಜನ ಕಡೆ. ಪುನಃ ಕೋಪ ಪಲಾಯನವಾಯ್ತು, ಹಸನು ಹುಟ್ಟಿಕೊಂಡಿತು.

" ನಿನ್ನ ಪಂಥ ಇನ್ನೂ ಇದೆಯೆ ಪದ್ಮಿನಿ ? "

ಪದ್ಮಿನಿ ದಿಕ್ಕುತೋಚದವಳಾಗಿ ತಲೆಯೆತ್ತಿ ಗಟ್ಟಿಯಾಗಿ ನಗುತ್ತಾ—

" ನೀನೊಬ್ಬ ಮಾಯಗಾರ. ಮುಖ ನೋಡಿದೊಡನೆ ನಗೆ ಉಕ್ಕುತ್ತದೆ."

ಪದ್ಮಿನಿ ಇನ್ನೂ ದೂರವಾಗಿಯೇ ನಿಂತಿದ್ದಳು. " ನಿಂದೆಯಾದರೆ ಪದ್ಮಿನನ್ನಾಣೆ " ಎಂದ ರಾಜ. ಪದ್ಮಿ ಹತ್ತು ಹೆಜ್ಜೆ ಮುಂದಕ್ಕೆ ನಡೆದು

" ಜಾಣೆಂದ ಜಯಿಸಲಾರದೆ ಆಣೆಯಿಡುತ್ತಾರೆ " ಎಂದಳು. ಆದರೂ ಭರತನ ಬುಟ್ಟಿಯಲ್ಲಿ ಬಿದ್ದುಹೋಗುತ್ತಾಳೆ. ಇತರ ರಾಣಿಯರ ಬಲವಂತಕ್ಕೆಂಬಂತೆ ಬಂದು ರಾಜನ ಪಾವಗಳನ್ನು ಮುಟ್ಟಿ ನಮಸ್ಕರಿಸುತ್ತಾಳೆ. ಇನ್ನು ರಾಜನ ಸರದಿ. ಆತನು ಮುಸುಕಿಟ್ಟು ಮೌನವಾಗಿ ಕುಳಿತ. ರಾಣಿಯೆರೆಲ್ಲರೂ ಆತನ ಸುತ್ತಲೂ ನೆರೆದು ಹಲವು ವಿಧದಿಂದ ರಮಿಸುವರು. ಸ್ವತಃ ಪದ್ಮಿನಿಯೇ ಆತನನ್ನು ವಿಧವಿಧವಾಗಿ ಆದರೋಪಚಾರಗಳಿಂದ ಸತ್ಕರಿಸುವಳು. ಕಷ್ಟಕ್ಕೆ ತಕ್ಕ ಫಲ. ರಾಜನು ಸುಪ್ರಸನ್ನನಾಗಿ ಹಲವು ರೂಪಗಳನ್ನು ತಾಳಿ ಎಲ್ಲ ರಾಣಿಯರೊಡನೆಯೂ ಪ್ರತ್ಯೇಕ ಪ್ರತ್ಯೇಕವಾಗಿ ವಿಹರಿಸಿ ಆನಂದಗೊಳಿಸುತ್ತಾನೆ.

* * * * *

ಇಂತಹ ಸಿರ್ದುಷ್ಟವೂ ಸುಪುಷ್ಟವೂ ಆದ ಶೃಂಗಾರ ಚಿತ್ರಗಳು ಕನ್ನಡ ಕಾವ್ಯಪ್ರಪಂಚದಲ್ಲಿ ಹೇಳಿಕೊಳ್ಳುವಷ್ಟು ಹೆಚ್ಚಾಗಿ ಇಲ್ಲ. ರತ್ನಾಕರನ ಕಲಾಭವನದಲ್ಲಿ ಇವುಗಳು ತಂಡತಂಡವಾಗಿ ಕಂಡುಬರುತ್ತವೆ. ಬೇಲೂರಿನ ದೇವಾಲಯದಂತೆ ಕಲಾಮಯವಾಗಿರುವ ಈ ಶಬ್ದಚಿತ್ರಗಳನ್ನು—ಮಾತಿನ ಪ್ರತಿಮೆಗಳನ್ನು—ಪದರಪದರವಾಗಿ ಬಿಡಿಸಿ ನೋಡುವ ತಾಳ್ಮೆ ಬೇಕು, ನೋಡಿ ಆನಂದಿಸುವ ಹೃದಯ ಬೇಕು.

ಕವಿ ಕಾವ್ಯದೃಷ್ಟಿ

'ಗಣನೆಯಿಲ್ಲದ ಸುಖದೊಳೋಲಾಡಿ' ದವನು ಕಥಾನಾಯಕ, ಎಂಬು ದನ್ನಿಟ್ಟುಕೊಂಡು ಕವಿಯು ಭೋಗವರ್ಣನೆಯನ್ನು ಬೇಕಾದಷ್ಟು ಮಾಡಿ ದ್ದಾನೆ. ಈ ವರ್ಣನೆಯ ಬೆಳವಣಿಗೆಗೆ ಬೇಕಾದ ಬಿತ್ತು ಆದಿಪುರಾಣದಲ್ಲಿದೆ. ಭರತನಿಗೆ ತೊಂಭತ್ತಾರು ಸಹಸ್ರ ಹೆಂಡಿರಿದ್ದರೆಂಬ ವಿಚಾರ ಅಲ್ಲಿಯೇ ಬಂದಿದೆ; ಹೆಸರುಗಳನ್ನು ಹೇಳಿಲ್ಲ. ಜಲಕೇಳಿ ಕೌಮುದೀ ವಿಹಾರಗಳೂ ಅಲ್ಲಿವೆ. ಆ ಸುಖಭೋಗಗಳ ವರ್ಣನೆಯನ್ನು ನಮ್ಮ ಕವಿ ಹೆಚ್ಚು ವಿಸ್ತಾರವಾಗಿ, ರಸವ ತ್ತಾಗಿ, ಪ್ರತಿಭಾಯುತವಾಗಿ ಪ್ರತಿಪಾದಿಸಿದ್ದಾನೆ. ಮೂಲಕವಿಯಂತೆ ರತ್ನಾ ಕರನಾದರೂ ಧಾರ್ಮಿಕದೃಷ್ಟಿಯಿಂದಲೇ ಪ್ರಚೋದಿತನಾದವನು; ಈತನ ಆಶಯವೂ ಧರ್ಮತತ್ವದ ಬೋಧನೆಯೇ; ಧರ್ಮದ ಆವರಣಕ್ಕೆ ಭರತಚಕ್ರ ವರ್ತಿಯನ್ನು ಆಧಾರಭೂತವಾಗಿ ಮಾಡಿಕೊಂಡು ತತ್ವಬೋಧನೆಯನ್ನು ಕಾವ್ಯರೂಪದಲ್ಲಿ ಮಾಡಿದ್ದಾನೆ. ಆದ್ದರಿಂದ ನಾವು ಭರತೇಶ ವೈಭವವನ್ನು ಓದುವಾಗ, ಅದನ್ನು ಕುರಿತು ಚರ್ಚಿಸುವಾಗ ಈ ಧರ್ಮದೃಷ್ಟಿಯು ನಮ್ಮ ದೃಕ್ಪಥದಿಂದ ದೂರವಾಗದಂತೆ ನೋಡಿಕೊಳ್ಳಬೇಕಾದುದು ಅತ್ಯಾವಶ್ಯಕ. ಕವಿಯು 'ಕೀರ್ತಿಯ ಬಯಸಿ' ಕಾವ್ಯವನ್ನು ಉಸಿರಿದವನಲ್ಲ; 'ಧ್ಯಾನಕೆ ಬೇಸರಾದಾಗ ನನ್ನಾತ್ಮ ಲೀಲಾನುವೃದ್ಧಿಗೆ ಪೇಳ್ದೆನೈಸೆ' ಎಂದು ತನ್ನ ಕೃತಿ ನಿರ್ಮಾಣಕ್ಕೆ ಕಾರಣವನ್ನು ಹೇಳಿಕೊಂಡಿದ್ದಾನೆ. ತನ್ನ ಕಾವ್ಯವನ್ನು ಎಲ್ಲರೂ ಓದಲೇಬೇಕೆಂಬ ಆಗ್ರಹವು ಸಹ ಕವಿಗಿಲ್ಲ. 'ಬೇಕಾದರಾಲಿಸುವುದು, ಬೇಡವಾಗೆ ಪರಾಕುಮಾಡುವುದೆನಗಲ್ಲಿ | ವ್ಯಾಕುಲವಿಲ್ಲ ಸಂತಸವಿಲ್ಲ ನಾನು ನಿರಾಕಾಂಕ್ಷಿ' ಎಂದು ಘಂಟಾಘೋಷವಾಗಿ ಹೇಳಿಬಿಟ್ಟಿದ್ದಾನೆ. ಭರತನ ಆತ್ಮವು ಹೇಗೆ ವೃದ್ಧಿಹೊಂದಿ ವಿಕಸಿತವಾಯಿತೆಂಬುದನ್ನು ಹೇಳುವಾಗ ಅದು ತನ್ನ ಆತ್ಮದಲ್ಲಿಯೂ ತಕ್ಕಮಟ್ಟಿಗೆ ಪ್ರತಿಬಿಂಬಿತವಾದರೆ ಸಾಕು, ಎಂಬುದೆ ಕವಿಯ ಹೆಬ್ಬಯಕೆ.

ಭರತನು ಧರ್ಮವೀರ. ಅವನಲ್ಲಿ ಕವಿಗೆ ತುಂಬಾ ಭಕ್ತಿಯಿದೆ, ಗೌರವವಿದೆ. ಆತನು ಜೈನರಿಗೆಲ್ಲಾ ಆದರ್ಶಪ್ರಾಯನೆಂದು ಆತನ ಭಾವನೆ. ತನ್ನ ಮತಾನುಯಾಯಿಗಳೆಲ್ಲರೂ ಹಾಗೆಯೇ ಭಾವಿಸಬೇಕೆಂದು ಆತನ ಆಶಯ. ಅದಕ್ಕಾಗಿಯೇ ಭರತನ ಚರಿತ್ರೆಯನ್ನು ಜೈನಪುರಾಣವನ್ನನುಸರಿಸಿ ಬರೆದಿದ್ದಾನೆ. 'ಶೃಂಗಾರಕಾಗಿ ಕಷ್ಟರ ಕಥೆಗೇಳ್ದು ಜನಂಗಳು' ಕೆಟ್ಟುಹೋಗುತ್ತಾರೆ. ಹಾಗಾಗದಿರುವುದಕ್ಕಾಗಿ 'ಅಂಗಸುಖಿಯ, ಮೋಕ್ಷಸುಖಿಯ ಕಾವ್ಯವನಿಷ್ಟು ಶೃಂಗಾರಕಟ್ಟಿ' ಹೇಳುತ್ತಿದ್ದಾನೆ.

ದುರುಳರ ಪಾದರಿಯರ ನೀಚಸತಿಯರ | ವಿರಚಿಸಿತಿಲ್ಲ ಸಿಂಗರಕೆ |
ಭರತಚಕ್ರಿಯ ಪೇಳ್ದಿನವರ ಪೆಂಡಿರಪೇಳ್ದೆ | ಸ್ಮರಿಸಿದರೆಲ್ಲರ್ಗೆ ಪುಣ್ಯ ||

ಶುಷ್ಕ ವೇದಾಂತವು ಫಲಕಾರಿಯಾಗದೆಂದು ಬಗೆದು ಇಹಲೋಕದ ಭೋಗೋಪಭೋಗಗಳ ಅಡಿಗಲ್ಲಿನಮೇಲೆ ತನ್ನ ಆಧ್ಯಾತ್ಮಿಕ ಕಟ್ಟಡವನ್ನು ಭವ್ಯವಾಗಿ ನಿರ್ಮಿಸಿದ್ದಾನೆ. ಕಾವ್ಯಧರ್ಮ ಧರ್ಮಗಳನ್ನು ಸಮನ್ವಯಗೊಳಿಸಿದ್ದಾನೆ. ತನ್ನ ಸೃಷ್ಟಿಯಿಂದ ಹೊರಚಿಮ್ಮಿರುವುದು ಉದಾತ್ತ ವ್ಯಕ್ತಿಯ ಸತ್ಪ್ರೇದ್ರೇಕದಿಂದ ಕೂಡಿದ ಸುಂದರವಾದ ಶೃಂಗಾರರಸ. ಶೃಂಗಾರ ಪೂರಿತವಾದ ಸನ್ನಿವೇಶಗಳಿಂದ ಕಾವ್ಯವು ರಸಮಯವಾಗಿದ್ದರೂ ಔಚಿತ್ಯವನ್ನು ಮೀರಿದುದಲ್ಲ. ತಾನೇನೂ ಸಂಪ್ರದಾಯಕ್ಕೆ ಬಲಿಬಿದ್ದು ಸೂಳೆಗೇರಿಯ ವರ್ಣನೆ ಇತ್ಯಾದಿ ಲಘುಶೃಂಗಾರಕ್ಕೆ ಕೈಹಾಕಿಲ್ಲ. ಇದರಿಂದ 'ಪೋಕರು ನಾಲ್ಕೈಂಟುಮಂದಿ ಚಿತ್ತದೊಳತಿ ವ್ಯಾಕುಲಬಟ್ಟ'ರೂ ಬಡಲಿ. ಅಳಿದೊಡಂ ಉಳಿದೊಡಂ ಬಟ್ಟಿದೋರಿಪ ರಸಭರಿತಂ ಚರಿತವೈಸೆ—ಎನ್ನುವಂತಿರಬೇಕು ತನ್ನ ಕಾವ್ಯರತ್ನ.

ಕವಿಯ ಮತದಲ್ಲಿ ವೈರಾಗ್ಯವೆಂದು ಹೆಂಬಲಿಸಿ ಇಹಸೌಖ್ಯವನ್ನು ತ್ಯಜಿಸುವುದು ಮೂಢತನ, ಹೇಡಿತನ. 'ಈಸಬೇಕು, ಇದ್ದು ಜೈಸಬೇಕು.' ಅದೂಷ್ಯವಾಗಿ ದೊರೆತುದನ್ನು ಅನುಭವಿಸಬೇಕು. ಅನುಭವಿಸುವಾಗ ಉದಾತ್ತದೃಷ್ಟಿ ಕಣ್ಮರೆಯಾಗಬಾರದು. ಲೌಕಿಕ ಸುಖವನ್ನು ಸಂಪೂರ್ಣವಾಗಿ ತ್ಯಾಗಮಾಡುವುದು ಅನುಚಿತ; ಅನಾವಶ್ಯಕ. ಇದನ್ನು ಅನುಭವಿಸ

ದಿದ್ದರೆ ಮನಸ್ಸು ಅವುಗಳ ಪ್ರಲೋಭನೆಗೆ ಒಳಗಾಗಬಹುದು. ।ಜಗತ್ತಿನ ನಶ್ವರತೆಯನ್ನು ಅನುಭವದಿಂದ ಸಿದ್ಧಾಂತಗೊಳಿಸುವುದು ಹೆಚ್ಚು ಸ್ವಾಭಾವಿಕ ವಾದುದೇ ಹೊರತು, ಬರಿಯ ಜ್ಞಾನದಿಂದ ವೈರಾಗ್ಯವನ್ನು ಗಳಿಸಹೊರಡು ವುದು ಶುದ್ಧ ಕೃತಕ.। 'ಜ್ಞಾನವಿಡಿದ ಭೋಗಿ ಯೋಗಿ.' ಇಹದ ಅಧ್ರುವವೂ ಅಪ್ರಯೋಜಕವಲ್ಲ; ಮಿತಿಯಾದ ಈ ಸುಖವನ್ನು ಗಳಿಸಬೇಕು. 'ಜೀವನಕ್ಕೆ ಭೋಗ ಯೋಗಗಳೆರಡೂ ಆವಶ್ಯಕ.' ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೇ ನಮ್ಮ ಹೆಗ್ಗುರಿಯಾದರೂ ಉಳಿದ ಮೂರೂ ಅದಕ್ಕೆ ಪರಿಪೋಷಕಗಳಾಗಿ ಬೇಕೇ ಬೇಕು. ಆ ಮೂರೂ ಭೋಗ ಭಾಗ್ಯಗಳೇ. ।ಯೋಗವಿಲ್ಲದ ಭೋಗವೂ, ಭೋಗವಿಲ್ಲದ ಯೋಗವೂ ಅಪ್ರ ಯೋಜಕ. ಇವುಗಳ ಪರಸ್ಪರ ಸಾಮರಸ್ಯವೇ ಹೆಚ್ಚು ಆಕರ್ಷಕವೂ, ರಮ ಣೀಯವೂ ಆದ ಪ್ರಯೋಜನವನ್ನು ಕೊಡತಕ್ಕುದು.—ಇದೇ ರತ್ನಾಕರನ ತತ್ವಸಿರೂಪಣೆ.। ಭೋಗಮೂಲವಾದ ಶೃಂಗಾರವನ್ನೂ ಯೋಗಮೂಲವಾದ ತ್ಯಾಗವನ್ನೂ ಪರಸ್ಪರ ವಿರುದ್ಧವಾಗದಂತೆ ಪ್ರದರ್ಶಿಸುವುದೇ ರತ್ನಾಕರನ ಉದ್ದೇಶ.। ಭೋಗವು ಯೋಗಕ್ಕೆ ವಿರುದ್ಧವೆಂದು ಜನರು ತಿಳಿದುಕೊಂಡಿರ ಬಹುದು. ಆದರೆ, ರತ್ನಾಕರನ ದೃಷ್ಟಿಯಲ್ಲಿ ಭೋಗವು ಯೋಗದ ಮೊದಲ ಮೆಟ್ಟಲು. ಭೋಗದ ಅರಿವಿಲ್ಲದೆ ಯೋಗಕ್ಕೆ ಕೈಯಿಕ್ಕಿದರೆ 'ಅರಿಯದ ಬ್ರಾಹ್ಮಣ ಯಜ್ಞಮಾಡಿ ಗಡ್ಡ ಸುಟ್ಟುಕೊಂಡಂತಾಗುತ್ತದೆ. ಅಂತಹವನ ಮನಸ್ಸಿನಲ್ಲಿ ಭೋಗದ ಬಯಕೆ ಸಾಯದೆ ಸಮಯಬಂದಾಗ ಕಟ್ಟುಹರಿದ ಪಂಜಾಗುತ್ತದೆ. ಭೋಗದ ಅಲ್ಪತೆ ಅನುಭವವೇದ್ಯವಾದರೆ ಮಾತ್ರ ಯೋಗ ಭ್ರಷ್ಟನಾಗುವ ಭಯವಿರುವುದಿಲ್ಲ. ಒಟ್ಟನಲ್ಲಿ ರತ್ನಾಕರನ ಸಿದ್ಧಾಂತ—।ಭೋಗ ದಲ್ಲಿ ಬೇರನ್ನು ಬಿಟ್ಟು, ಮೇಲಕ್ಕೆ ಚಿಮ್ಮಿ, ಯೋಗದಲ್ಲಿ ಹೂವಾಗುವ ಬೆಳ ವಣಿಗೆಯೇ ಅತ್ಯಂತ ಯೋಗ್ಯವಾದುದು, ಶ್ರೇಷ್ಠವಾದುದು.।

ರತ್ನಾಕರನು ತನ್ನ ಮನಸ್ಸಿನಲ್ಲಿ ಉಂಟಾದ ಒಂದು ಸಿದ್ಧಾಂತವನ್ನು ಪ್ರತಿ ಪಾದಿಸುವುದಕ್ಕಾಗಿ ಅನುಸರಿಸಿರುವ ಮಾರ್ಗವಾವುದು? ಇಹಲೋಕದ ಭೋಗಾ ನುಭವದಿಂದ ಆತನು ಕಾವ್ಯವನ್ನು ಆರಂಭಿಸುತ್ತಾನೆ. ಇಹಲೋಕ ಭೋಗ ಗಳಿಗೆ ಪ್ರಥಮ ಸೋಪಾನ ಐಶ್ವರ್ಯ. ಆಗರ್ಭ ಶ್ರೀಮಂತನಾದ ಭರತನಿಗೆ

ಅದು ಬೇಕಾದಷ್ಟಿದೆ. ಷಟ್ಖಂಡಗಳ ಭಂಡಾರಕ್ಕೂ ಆತನು ಒಡೆಯ. ನವ ನಿಧಿಗಳೂ ನವರತ್ನ ಗಳೂ ಆತನ ಹಸ್ತಗತವಾಗಿವೆ. ಇನ್ನು ಎರಡನೆಯ ಭೋಗ ಸಾಧನ ಕಾಮಿನಿ. ಅದಕ್ಕೇನೂ ಕೊರತೆಯಿಲ್ಲ. ತೊಂಭತ್ತಾರುಸಾವಿರ ಜನ ಮಾನಿನೀಮಣಿಯರಿದ್ದಾರೆ. ಆತನು ಬಯಸಿದುದೆಲ್ಲವೂ ಹಸ್ತಗತವಾಗಿದೆ. ಆತನ ಇಂದ್ರಿಯಗಳು ಕುಡಿಕುಡಿದು ತುಂಬಿ ತೇಗುವಷ್ಟು ಪರಿಕರಗಳು ಸದಾ ಸಿದ್ಧವಾಗಿವೆ. ಇವುಗಳೂ ನಿರ್ದುಷ್ಟವಾದ, ಧರ್ಮಬದ್ಧವಾದ ಪರಿಕರಗಳು. ಮನುಷ್ಯನು ಅರ್ಥ, ಕಾಮಗಳ ಪ್ರಲೋಭನದಿಂದ ಮತ್ತೊಬ್ಬನ ವಸ್ತುವನ್ನು ಅನುಭವಿಸಯತ್ನಿಸುವುದು ನ್ಯಾಯವಲ್ಲ. ಅದು ಅಧರ್ಮ. ಹಾಗೆ ಮಾಡಿದಲ್ಲಿ ಸಮಾಜದಲ್ಲಿ ಕ್ರಾಂತಿ ವಿಪ್ಲವಗಳುಂಟಾಗುತ್ತವೆ. ಇದನ್ನು ನಿವಾರಿಸುವ, ನಿವಾರಿಸಬಲ್ಲ ಮಹಾಶಕ್ತಿ ಧರ್ಮಬಲವೊಂದೇ. ಅದಕ್ಕಾಗಿ ಕವಿ ಧರ್ಮಕ್ಕೆ ಪ್ರಥಮಸ್ಥಾನವನ್ನು ಕೊಟ್ಟಿದ್ದಾನೆ. ಅರ್ಥ, ಕಾಮಗಳು ಭರತಸಾಮ್ರಾಟನ ಅಡಿಯಾಳುಗಳಾಗಿದ್ದರೂ ಜೀವದಯೆಯ ಮಹಾಧರ್ಮವನ್ನೂ ಪಂಚಾಣು ವ್ರತಗಳನ್ನೂ[1] ನಡೆಸುತ್ತಿರುವ ಕಥಾನಾಯಕನು ಲೋಕದ ಕೋಲಾಹಲಕ್ಕೆ ಒಳಗಾಗಿಲ್ಲ. ಆತನ ಜೀವನದ ವಾತಾವರಣದಲ್ಲಿ ಧರ್ಮಕ್ಕೆ ಬೇಕಾದಷ್ಟು ಅವಕಾಶವಿದೆ. ಕವಿಯು ಆ ಅವಕಾಶಗಳ ಸದುಪಯೋಗದಿಂದ ಭರತನಿಗೆ ಹಿಂಸಾಕರವಲ್ಲದ ಸಕಲ ಸುಖಗಳನ್ನೂ ಒದಗಿಸಿಕೊಟ್ಟಿದ್ದಾನೆ. ಜೈನಧರ್ಮಾನುಸಾರವಾಗಿ ರಾಜನು ಅನುಭವಿಸಬಹುದಾದ ಇಪ್ಪತ್ತುಬಗೆಯ ಸೌಖ್ಯಗಳೂ[2] ಭರತನಿಗೆ ಕರಗತವಾಗಿವೆ.

ರತ್ನಾಕರನಿಗೆ ಭರತೇಶನಲ್ಲಿ ಗೌರವವಿರುವುದು ಆತನು 'ರಾಜರ್ಷಿ' ಎಂಬ ಭಾವನೆಯಿಂದ. ತನ್ನ ಸಮಕಾಲೀನರಾದ ಹಲವು ರಾಜರ ಜೀವನವು

---

1 ಅಹಿಂಸೆ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ಸತ್ಯ.

2 ಗೃಹೋಪಭೋಗ, ಸ್ನಾನೋಪಭೋಗ, ಪಾನಕೋಪಭೋಗ, ತಾಂಬೂಲೋಪಭೋಗ, ವಿಲೇಪನೋಪಭೋಗ, ವಸ್ತ್ರೋಪಭೋಗ, ಮಾಲ್ಯೋಪಭೋಗ, ಭೂಷೋಪಭೋಗ, ಆಸನೋಪಭೋಗ, ಚಾಮರೋಪಭೋಗ, ಆಸ್ಥಾನೋಪಭೋಗ, ಪುತ್ರೋಪಭೋಗ, ಆನ್ನೋಪಭೋಗ, ಪಾನೀಯೋಪಭೋಗ, ಪಾದಾಭ್ಯಂಗೋಪಭೋಗ, ಯಾನೋಪಭೋಗ, ಛತ್ರೋಪಭೋಗ, ಶಯ್ಯೋಪಭೋಗ, ಧೂಪೋಪಭೋಗ. ಯೋಷಿದುಪಭೋಗ ಈ ಇಪ್ಪತ್ತು ಜೈನಪ್ರಣೀತವಾದ ರಾಜೋಪಭೋಗಗಳು.

ತನಗೆ ಸರಿಬೀಳದೆ ಆದರ್ಶರಾಜನೊಬ್ಬನ ಜೀವನ ಚರಿತವನ್ನು ಜನರ ಕಣ್ಣಿದುರಿಗೆ ಕಟ್ಟಬೇಕೆಂಬ ಉದ್ದೇಶದಿಂದ ಭರತನ ಪಾತ್ರಪ್ರತಿಪಾದನೆಗೆ ಕೈ ಹಾಕಿರಬಹುದೋ ಏನೋ! ರತ್ನಾಕರನ ಅಭಿಪ್ರಾಯದಲ್ಲಿ ರಾಜನೆಂದರೆ ಹೀಗಿರಬೇಕು—

ರಾಜಶ್ರೀಯೊಳನೇಕ ಕಾಮಿನಿಯರುಂಟಾಳಾಪ ನೃತ್ಯಂಗಳುಂ ।
ಟಾ ಜಿಹ್ವಾರುಚಿಯುಂಟು ಕಾಮಿಸಿದುವೆಲ್ಲಾವುಂಟು ಉಂಟಾದೊಡಂ ।
ರಾಜೀವಂ ಕೆಸರಲ್ದಿಯಳ್ದದವೊಲಿದ್ದೂರ್ಧ್ವಕ್ಕೆ ಕಣ್ಣಿಟ್ಟೊಡಾ ।
ರಾಜಂ ರಾಜನೆ ತಾನೆ ರಾಜಋಷಿಯೈ ರತ್ನಾಕರಾಧೀಶ್ವರಾ ॥
[ರತ್ನಾಕರಾಧೀಶ್ವರ ಶತಕ]

ಇಂತಹ ಆದರ್ಶ ರಾಜನ ಜೀವನವನ್ನು ಭರತೇಶನ ಜೀವನದಲ್ಲಿ ಮೈ ಮೂಡಿಸಲು ಹೊರಟಿದ್ದಾನೆ, ಕೃತಕೃತ್ಯನಾಗಿದ್ದಾನೆ ಕವಿ.

।ಶೃಂಗಾರವೂ, ವೈರಾಗ್ಯವೂ ಎಣ್ಣೆ ಸೀಗೆಕಾಯಿಗಳಂತೆ ಒಂದಿದ್ದೆಡೆ ಮತ್ತೊಂದಕ್ಕೆ ಪ್ರವೇಶವಿಲ್ಲ. ಈ ರಾತ್ರಿ ಹಗಲುಗಳೆರಡನ್ನೂ ಕಟ್ಟಿ ಒಂದೆಡೆ ಇಟ್ಟಿರುವ ಕೀರ್ತಿ ರತ್ನಾಕರನದು. ಭರತನು ಶೃಂಗಾರದ ಸರಸ್ಸಿನಲ್ಲಿಯೇ ತೇಲಾಡುತ್ತಿರುವ ಕಮಲ. ಶೃಂಗಾರ ಭೋಗ ಪರಿಕರಗಳು ಸುತ್ತುಮುತ್ತಲೂ ಕೋಟೆ ಕಟ್ಟಿಕೊಂಡಿವೆ. ಭರತನೂ ಅವುಗಳ ಸ್ವರ್ಣಶೃಂಖಲೆಯಲ್ಲಿ ಬದ್ಧನಾಗಿರುವನೇನೋ ಎಂಬಂತೆ ಕಾಣಿಸಿಕೊಳ್ಳುತ್ತಾನೆ. ಆದರೆ ಯಾವ ನಿಮಿಷದಲ್ಲಿಯೋ ಶೃಂಖಲಾತೀತನಾಗಿ, ಯೋಗಪರವಶನಾಗಿ ಬ್ರಹ್ಮಾನಂದದಲ್ಲಿ ತಲ್ಲೀನನಾಗುತ್ತಾನೆ. ಜಗತ್ತಿನ ತೋರಿಕೆಯ ಆಟದಲ್ಲಿ ಚಾಚೂ ತಪ್ಪುತ್ತಿಲ್ಲವಾದರೂ ಇದು ನಶ್ವರವೆಂಬ ಭಾವನೆ ಸದಾ ಸ್ಮರಣೆಯಲ್ಲಿರುತ್ತದೆ. ಈ ನಿಮಿಷದಲ್ಲಿ ಮಡದಿಯೊಡನೆ ಸುಖಭೋಜನಮಾಡಿ ವೀಳೆಯವನ್ನು ಸವಿಯುತ್ತಾ, ಸಂಗೀತವನ್ನು ಕೇಳುತ್ತಾ, ಭೋಗದಲ್ಲಿ ತಲ್ಲೀನನಾಗಿರುವಂತೆ ತೋರಿದರೆ ಮರುನಿಮಿಷದಲ್ಲಿ ಕಣ್ಮುಚ್ಚಿ ಚಿನ್ಮಯರೂಪವನ್ನು ಒಳಗಣ್ಣಿನಿಂದ ಕಾಣುತ್ತಾ ಯೋಗಿಯಾಗಿರುತ್ತಾನೆ. ಇವನ ಆಳವನ್ನು ಅರಿಯುವುದೇ ಯಾರಿಗೂ ಅಸಾಧ್ಯ. ಶ್ರೀಕೃಷ್ಣನಂತೆ ಭರತನೂ ಪದ್ಮಪತ್ರಮಿವಾಂಭಸ.

ಓದುವವರಿಗೆ ಶೃಂಗಾರಪೂರಿತವಾಗಿದ್ದರೂ ಕವಿಯ ದೃಷ್ಟಿಯಿಂದ ಇಲ್ಲಿ ಹೆಚ್ಚು ಶೃಂಗಾರವಿಲ್ಲ. ಕವಿ ಹೇಳುವಂತೆ ಭರತ ' ಉಂಡುಪವಾಸಿ, ಬಳಸಿ ಬಹ್ಮಚಾರಿ, ಭೂಮಂಡಲವಿದ್ದು ನಿಸ್ಸೀಮ.'

ಸಂಸಾರವಂದಿಗನಾದವನು ಯಾವ ಯಾವ ಸೌಖ್ಯಗಳನ್ನು ಅನುಭವಿಸ ಬಹುದೋ ಆ ಸೌಖ್ಯಗಳಾವುದರಿಂದಲೂ ಭರತನು ವಂಚಿತನಾಗಿಲ್ಲ. ಶ್ರೀಮಂತ ನಾದ ಸಂಸಾರಸುಖಿ ಆತ. ಹಲವು ಜನರಿಂದ ಪರಿವೃತನಾದ ಸಂಸಾರಿಯ ಜೀವನವು ಹೀಗೆ ಸುಖಮಯವಾಗಬೇಕಾದರೆ ಆತನನ್ನು ಅವಲಂಬಿಸಿರುವ ವರು ಚಂದ್ರನನ್ನು ಸುತ್ತುವರಿದ ನಕ್ಷತ್ರಗಳಂತಿರಬೇಕು. ಪರಸ್ಪರ ದ್ವೇಷಾ ಸೂಯೆಗಳಿಂದ ದೂರವಾಗಿರುವುದಷ್ಟೇ ಅಲ್ಲ, ತಮ್ಮ ವ್ಯಕ್ತಿತ್ವವನ್ನೇ ಬದಿ ಗೊತ್ತಿ ಒಡೆಯನ ಸೇವೆಯಲ್ಲಿ ತಮ್ಮ ಜನ್ಮಸಾರ್ಥಕತೆಯನ್ನು, ಜನ್ಮ ಸಾಫಲ್ಯವನ್ನು ಕಂಡುಕೊಳ್ಳುವಂತಿರಬೇಕು. ಭರತನ ಹಲವು ಹೆಂಡಿರು, ಭಾವಮೈದುನರು, ಅತ್ತೆಮಾವಂದಿರು—ಇತ್ಯಾದಿ ಗಣನಾತೀತರಾದ ಬಂಧು ಬಾಂಧವರು ಭರತನ ಸೌಖ್ಯವನ್ನು ಹೆಚ್ಚಿಸಲು ಸಹಾಯಕರಾಗಿದ್ದಾರೆ; ಎಲ್ಲರೂ ಹೊಂದಿಕೊಂಡು ಹೋಗುತ್ತಾರೆ. ಕವಿಯ ಕೌಶಲ್ಯ ಭರತನಿಗೆ ಸುಖ ಸಂಪತ್ತುಗಳ ಭಂಡಾರವನ್ನು ದೊರಕಿಸಿಕೊಟ್ಟಿದೆ.

ಭರತನ ಸಂಸಾರಚಿತ್ರ

ಕವಿ ತನ್ನ ಸುತ್ತುಮುತ್ತಿನ ಜನಜೀವನದಿಂದಲೂ, ತನ್ನ ಸ್ವಂತ ಅನುಭವದಿಂದಲೂ ಸಂಸಾರಸೌಖ್ಯದ ಸಾರವೇನೆಂಬುದನ್ನು ಅರಿತುಕೊಂಡಿದ್ದಾನೆ. ಮನುಷ್ಯಕೃತವಾದುದು ಯಾವಾಗಲೂ ಅಸಂಪೂರ್ಣ; ಅರಕೆಯೇ ಮಾನವತೆಯ ಹಿರಿಯ ಕುರುಹು. ಇಂತಹ ಅಸಂಪೂರ್ಣವಾದ—ಕುಂದುಕೊರತೆಗಳಿಂದ ಕೂಡಿದ—ಸಂಸಾರ ಚಿತ್ರದಲ್ಲಿ ಈ ಕೊರತೆ ಕುಂದುಗಳ ಅಂಕುಡೊಂಕುಗಳನ್ನು ಯಾಚೆ ಕೋಚೆಗಳನ್ನು ಕೆತ್ತಿ ನೇರಮಾಡಿ ನಯಗೊಳಿಸಿದ ಸುಂದರವಾದ ಸಂಸಾರಚಿತ್ರವನ್ನು ಕವಿಯು ಭರತನಲ್ಲಿ ಆರೋಪಿಸಿ ನಮ್ಮ ಕಣ್ಣೆದುರು ಕುಣಿಸುತ್ತಾನೆ. ಕವಿಯ ಅನುಭವದ ಪರಿಪೂರ್ಣೀಕರಣವೇ ಒಂದು ಆದರ್ಶಸತ್ಯವನ್ನು ಸೃಷ್ಟಿಸಿಕೊಳ್ಳುವಂತೆ ಮಾಡಿ ಭರತನ ಸಂಸಾರ ಚಿತ್ರವನ್ನು ಸೃಷ್ಟಿಸಿದೆ. ಅವನು ರಾಜನಾಗಿ ನಡೆಯುತ್ತಿದ್ದುದೇ ಒಂದು ರೀತಿ, ಮನೆಯ ಜನಗಳೊಡನೆ ಕಲೆತು ನಡೆಯುತ್ತಿದ್ದುದೇ ಬೇರೊಂದು ರೀತಿ. ಸಂಸಾರದ ನಡವಳಿಕೆಗಳಲ್ಲಿ ಭರತನು ಸಾಮಾನ್ಯ ಜನರಂತೆ ಹೇಗೆ ನಡೆದುಕೊಳ್ಳುತ್ತಿದ್ದನೆಂಬುದು ನಮಗೆ ಕಂಡುಬರುತ್ತದೆ. ಈ ಭಾಗದಲ್ಲಿ ರತ್ನಾಕರನ ಕವಿತೆ ಕಾಲದೇಶಗಳ ಎಲ್ಲೆಯನ್ನು ದಾಟಿ ಎಲ್ಲ ಜನರ ಬದುಕು ಸೌಖ್ಯಗಳಿಗೆ ಅನ್ವಯಿಸಿಕೊಳ್ಳಲು ಯೋಗ್ಯವಾದುದಾಗಿ ಕವಿಗೆ ಮಹತ್ತನ್ನು ಕೊಟ್ಟಿದೆ.

ಒಬ್ಬ ಸಂಸಾರಿಯ ಸ್ಥಾನವೇನು? ಮನುಷ್ಯನ ಜೀವನಕ್ಕೆ ನಿಕಟ ಸಂಬಂಧವುಳ್ಳ ಜನಸಂಖ್ಯೆ ಬಹು ಅಲ್ಪ. ಈ ಪರಿಮಿತಿಯಳ್ಳ ಜನಸಮುದಾಯವೇ ಸಂಸಾರ. ಒಬ್ಬನೇ ಮನೆಗೆ ಯಜಮಾನನಾಗಿ, ತಮ್ಮನಿಗೆ ಅಣ್ಣನಾಗಿ, ಮಗನಿಗೆ ತಂದೆಯಾಗಿ, ಹೆಂಡತಿಗೆ ಗಂಡನಾಗಿ, ಸೇವಕನಿಗೆ ಯಜಮಾನನಾಗಿ—ಹೀಗೆಯೇ ಅನೇಕ ಸಂಬಂಧವಿಶೇಷಗಳಿಗೆ ಕೇಂದ್ರಸ್ವರೂಪನಾಗಿ ಇರುವುದು ಸಂಸಾರಿಯ ಸ್ವರೂಪ. ಈ ಸಂಬಂಧ ವಿಶೇಷವು ಸ್ವಲ್ಪ ಹೆಚ್ಚು

ಕಡಮೆ ಪ್ರಪಂಚದ ಪ್ರತಿ ಸಂಸಾರಿಗೂ ಉಂಟು. ಸಂಸಾರದ ಯಜಮಾನನೆಂದರೆ ತುರಾಯಿಯೊಳಗಣ ಹೂವಿನಂತೆ. ಉಳಿದ ಹೂಗಳೊಡನೆ ಸಾಮರಸ್ಯವಿಲ್ಲದಿದ್ದರೆ ತುರಾಯಿ ಸುಂದರವಾಗಲಾರದು. ಭರತನಿಗೆ ತನ್ನ ಸಂಬಂಧದ ಆವರಣದಲ್ಲಿ ಸಂಪೂರ್ಣ ಸಾಮರಸ್ಯವಿದ್ದಿತೆಂದೂ ಅದರ ಆದರ್ಶ ಸೌಖ್ಯವನ್ನು ಆತನು ಮನಸಾರ ಸವಿಯುತ್ತಿದ್ದನೆಂದೂ ಕಾವ್ಯದಿಂದ ನಮಗೆ ಕಾಣಬರುತ್ತದೆ. ಬಾಹುಬಲಿಯು ಇದಿರುಬಿದ್ದಾಗ ಭರತನ ಸೌಖ್ಯವೂ ಕದಡಿಹೋಗುವಂಥ ಒಂದು ಸನ್ನಿವೇಶ ಒದಗುತ್ತದೆ. ಆದರೆ ಸ್ವಲ್ಪದರಲ್ಲೇ ಅದು ನಿವಾರಣೆಯಾಗುತ್ತದೆ. ಕವಿ ಸಾರುತ್ತಿರುವುದು ಮನಸ್ಸಿಗೆ ಶಾಂತಿಯಿರಬೇಕೆಂದು—'ಶಾಂತಮು ಲೇಕ ಸೌಖ್ಯಮು ಲೇದು.'

ಸಂಸಾರಿಯಾದ ಭರತ ಒಂದು ಸಂಗಮಸ್ಥಾನವಿದ್ದಹಾಗೆ. ಅನೇಕ ಆಹ್ಲಾದದ ತೊರೆಗಳು ಬಂದು ಇಲ್ಲಿ ಸೇರುತ್ತವೆ. ಇವುಗಳಲ್ಲಿ ಅತ್ಯಂತ ಮುಖ್ಯವಾದುದು ದಾಂಪತ್ಯಜೀವನದ ಹಿರಿತೊರೆ. ಯಾವ ದೃಷ್ಟಿಯಿಂದ ಇಬ್ಬರಿಗೂ ಪರಮಸುಖವುಟಾಗುವುದೋ ಅದನ್ನು ಸತಿಪತಿಗಳಿಬ್ಬರೂ ಪರಸ್ಪರ ಒದಗಿಸಬೇಕು. ಭರತನ ದಾಂಪತ್ಯಜೀವನದಲ್ಲಿ ಇದು ಯಥೇಚ್ಛವಾಗಿದೆ. ನ್ಯಾಯವಾಗಿ ನೋಡಿದರೆ ಈತನಿಗಿರುವ ಸಮಸ್ಯೆಗಳು ಪ್ರಪಂಚದಲ್ಲಿ ಇನ್ನಾರಿಗೂ ಇರುವುದಿಲ್ಲ. ಸಾಮಾನ್ಯವಾಗಿ ಒಬ್ಬ ಗೃಹಸ್ಥನಿಗೆ ಒಬ್ಬ ಹೆಂಡತಿಯಿರುತ್ತಾಳೆ. ಇಬ್ಬರಿದ್ದರೆ ಆಗಲೆ 'ಕಬ್ಬಕ್ಕೆ ಕಾಟ'. ಬಹು ಕಾಂತೆಯರಿದ್ದರಂತೂ ಸವತಿಮಾತ್ಸರ್ಯದ ದಳ್ಳುರಿ ಅನಿವಾರ್ಯವಾಗಿಬಿಡುತ್ತದೆ. ಗಂಡನಾದವನು ಎಲ್ಲ ಹೆಂಡಿರನ್ನೂ ಸಮಾನತೆಯಿಂದ ನೋಡಬೇಕು; ಬಹು ದಾಕ್ಷಿಣ್ಯಪರನಾಗಿರಬೇಕು; ಯಾವ ನಿಮಿಷಕ್ಕೆ ಎಲ್ಲಿ ಯಾರ ಮನಸ್ಸು ನೊಂದೀತೋ ಎಂದು ಮೈಯೆಲ್ಲಾ ಕಣ್ಣಾಗಿ ವರ್ತಿಸಬೇಕು. ಇಂತಹುದರಲ್ಲಿ ಭರತನಿಗೆ ತೊಂಭತ್ತಾರುಸಹಸ್ರ ಹೆಂಡಿರು. ಆದರೂ ಭರತನು ಬಹು ಸಮರ್ಥತೆಯಿಂದ ಸಂಸಾರವನ್ನು ನಿರ್ವಹಿಸುತ್ತಾನೆ. ವ್ಯಕ್ತಿಗತವಾದ ರಾಗದ್ವೇಷಗಳಿಂದ ಪರಸ್ಪರ ಸವತಿಮತ್ಸರ ಹುಟ್ಟಲು ಭರತನ ಸಂಸಾರದಲ್ಲಿ ಸಾಧ್ಯವಿಲ್ಲ. ಅವನ ಹೆಂಡಿರು ಸವತಿಯರಲ್ಲ; ಅಕ್ಕತಂಗಿಯರು—ಅಷ್ಟು ಅಕ್ಕರೆ ಒಬ್ಬರಿಗೊಬ್ಬರಿಗೆ. ಭರತನು ಹಲವು ಹೆಂಡಿರನ್ನೂ ಏಕಕಾಲದಲ್ಲಿ ಸಂತೋಷಗೊಳಿಸಿ

'ತವರೂರ ಮರೆಯಿಸಿ, ನಿದ್ರೆಯ ತೊರೆಯಿಸಿ. ಸವಿಗಳನರಿಯಿಸಿ...., ದಿವ ರಾತ್ರಿಯೆನ್ನದೆ ಸುಖದೊಳ್ಮೋಲಾಡಿಸಿ' ಬಿಡತಕ್ಕ ಪ್ರಭಾವವುಳ್ಳವನು.

\ಭರತನ ರಾಣಿಯರು ಅವನಿಗೆ ತಕ್ಕವರು. ಇಲ್ಲದಿದ್ದರೆ ಎತ್ತು ಎರೆ, ಕೋಣ ಕೆರೆಯಾಗಿ ಸಂಸಾರದ ರಥ ಒಗ್ಗಾಲಿಗೆ ಬಿದ್ದುಹೋಗುತ್ತಿತ್ತು. ಭರತನು ಪುರುಷರತ್ನನಾದರೆ ಅವನ ಸ್ತ್ರೀಯರು 'ಸುರುಚಿರ ರತ್ನ'ಗಳು. 'ಪತಿಲೇಸು' ಎಂದು ಹೇಳುವುದಾದರೆ ಸತಿಯರು 'ಲೇಸು ಲೇಸು.' 'ಸೂಜಿಯ ಬಳಿಯ ನೂಲಂತೆ' ಪತಿಮಾರ್ಗವನ್ನು ಎಡೆಬಿಡದೆ ಅನುಸರಿಸುತ್ತಿರುವ ಭರತನ ರಾಣಿಯರು ಅವನ ಜೀವನವನ್ನು ಸುಖಮಯವಾಗಿ ಮಾಡಿದ್ದಾರೆ.\ಅವರ ಹೆಸರುಗಳೇ ಸಾಕು; ಬಹು ಮುದ್ದಿನ ಹೆಸರುಗಳು—ಕನ್ನಾಜಿ, ಕಮಲಾಜಿ, ವಿಮಲಾಜಿ, ಸುಮನಾಜಿ, ಹೊನ್ನಾಜಿ, ಮಧುರಾಜಿ, ರತ್ನಾಜಿ, ಚಿನ್ನಾಜಿ, ಚೆನ್ನಾಜಿ, ಕಾಂತಾಜಿ, ಮುಕುರಾಜಿ, ಕುಸುಮಾಜಿ, ಕುಸುಮ ಗಂಧಾಜಿ, ವಸಂತಾಜಿ, ಮಧುಮಾಧವಾಜಿ, ಅಂತರಂಗಾಜಿ, ಸುಖಾಜಿ, ಶಾಂತಾಜಿ, ಭೃಂಗಲೋಚನೆ, ನೀಲಲೋಚನೆ, ಕುರಂಗಲೋಚನೆ, ಪುಷ್ಪ ಮಾಲೆ, ಶೃಂಗಾರವತಿ, ಗುಣವತಿ, ಚಂದ್ರಮತಿ, ಸಾರಂಗಲೋಚನೆ, ವೀಣಾ ದೇವಿ, ವಿದ್ಯಾದೇವಿ, ಸುರದೇವಿ, ವಾಣೀದೇವಿ, ಶ್ರೀದೇವಿ, ಬಾಣಾದೇವಿ, ಭದ್ರಾದೇವಿ, ಕಲ್ಯಾಣಿದೇವಿ, ಅಂಜನಾದೇವಿ, ಕುಂಕುಮದೇವಿ, ಮಲ್ಲಿಕಾ ದೇವಿ, ಸುದೇವಿ, ಉತ್ಸಾಹದೇವಿ, ಚಿತ್ರವತಿ, ಚಿತ್ರಲೇಖೆ, ಪದ್ಮಾವತಿ, ನೇತ್ರಾವತಿ, ಚಂದ್ರಲೇಖೆ, ಮಿತ್ರಾವತಿ, ಪದ್ಮಲತೆ ಲಲಿತಾಂಗಿ, ವಿಚಿತ್ರಾಂಗಿ, ಕನಕಲತೆ. ಕುಂದಲತೆ, ಕನಕಮಾಲೆ, ಜಿನಮತಿ, ಸಿದ್ಧಮತಿ, ರತ್ನಮಾಲೆ, ಮಣಿಮಾಲೆ, ಕಾಂತಿಮಾಲೆ, ಇತ್ಯಾದಿ ಇತ್ಯಾದಿ.—ಭರತನು ಬಹುಶಃ ಇವರ ಹೆಸರುಗಳನ್ನೆಲ್ಲಾ ಅಮರಕೋಶವನ್ನು ಗಟ್ಟಮಾಡುವಂತೆ ಗಟ್ಟಮಾಡಿದ್ದನೋ ಏನೋ! (ಹೆಣ್ಣು ಮಕ್ಕಳಿಗೆ ಹೆಸರಿಡಲು ಹುಡುಕಾಡುವವರು ಭರತೇಶವೈಭವವನ್ನು ಒಮ್ಮೆ ಓದಬಹುದು.) \ಎಲ್ಲರೂ ಪರಸ್ಪರ ಮೈತ್ರಿಯಿಂದ ಇರುತ್ತಾ ತಮ್ಮ ಮನದನ್ನನ ಮನಸ್ಸು ಎಲ್ಲಿ ನೊಂದಿತೋ ಎಂದು ಬಹು ಜಾಗರೂಕತೆಯಿಂದ ವರ್ತಿಸುತ್ತಾರೆ.\

"ಎರಡು ಕರಿಯ ತಲೆಗಳು ಸೇರಿದರೆ ಸಂಸಾರ ಪ್ರಳಯ" ಎಂದು ಹೇಳುತ್ತಾರೆ. ಆದರೆ ಭರತನ ರಾಣಿಯರು ಪರಸ್ಪರ ಹೊಂದಿಕೊಂಡು ಹೋಗುವ ಸುಂದರ ಚಿತ್ರದ ಕಡೆ ಸ್ವಲ್ಪ ನೋಡೋಣ —ಭರತರಾಜನು ಚಂದ್ರಗತಿ ಆದಿತ್ಯಗತಿಗಳೆಂಬ ಯೋಗೀಶ್ವರರ ಚರಿಗೆಯನ್ನು ತೀರಿಸಿ, ಕಾಲಾತೀತವಾಗಿದ್ದುದರಿಂದ ತನ್ನ ಮೋಹದ ಮಡದಿಯರನ್ನೂ ತನ್ನ ಜೊತೆಯಲ್ಲಿಯೇ ಊಟಕ್ಕೆ ಕುಳಿತುಕೊಳ್ಳುವಂತೆ ಬಲವಂತಪಡಿಸುತ್ತಾನೆ. ಹಿಗ್ಗಿ, ಕೊಸರಿ ಅವರು ಒಪ್ಪಿಕೊಂಡರು. ಆದರೂ ರಾಜನು ಊಟಕ್ಕೆ ಕುಳಿತ ಮೇಲೆ ಆತನ ತಳಿಗೆಯಿಂದ ಒಂದು ತುತ್ತನ್ನು ತೆಗೆದುಕೊಂಡು ಎಲ್ಲರಿಗೂ ಪ್ರಸಾದವಾಗಿ ಹಂಚಿದ ಮೇಲೆಯೇ ಅವರು ತುತ್ತೆತ್ತುವುದು. ಬಡಿಸುವ ರಾಣಿಯರಿಗೆ ಇತರ ರಾಣಿಯರನ್ನು ಕಂಡು 'ಇವಳು ಗಂಡನ ಪಂತಿಯೊಳು ಕುಳಿತುಂಬುವಳಿವಳಿಗಾನಿಕ್ಕುವಳೆಂಬ || ಸವತಿ ಮತ್ಸರವಿಲ್ಲ. ತಾವೆಂದರವರೆಂಬ ಸುವಿನಯ ಮಿಗೆ ಬಡಿಸಿದರು.' 'ಎಡಮಾಡಲನುವಾಗಿ ಸುಳಿದಾಡುತಿರ್ದ ರತಿಯೊಳು' ಊಟ ಮಾಡುತ್ತಿದ್ದವರಾದರೂ ಗರ್ವದಿಂದ ಬೀಗಿದರೆ? ಇಲ್ಲ ಇಲ್ಲ. ಕೈ ತೊಳೆದುದೇ ತಡ, "ಕುಳ್ಳಿರಿರಕ್ಕ ನೀವೆಲ್ಲ ಬಳಲ್ದಿರೆಂದೊಳ್ಕಿತ ನುಡಿದು ಭಾವೆಯರು | ಎಲ್ಲರಿಗುಣಬಡಿಸಿದರರವರಂದ | ದಲ್ಲಿಯೆ ಸವಿದರನ್ನವನು."

ಒಂದು ದಿನ ರಾಜನು ತನ್ನ ಉಪ್ಪರಿಗೆಯ ಮೇಲೆ ರಾಣಿವಾಸದ ಓಲಗ ಗೊಟ್ಟನು. ರಾಣಿಯರೆಲ್ಲರೂ ಕೈಗಾಣಿಕೆಗಳೊಡನೆ ಆತನನ್ನು ಕಾಣಲು ಬರುತ್ತಿದ್ದಾರೆ. ಆಗ ಅವರು ಪರಸ್ಪರ ಮಾಡುತ್ತಿರುವ ಸರಸವಿನೋದಗಳು ಮನೋಜ್ಞವಾಗಿವೆ. ಬಾಲೆಯೊಬ್ಬಳು ಎಲ್ಲರಿಗೂ ಮುಂದೆ ಹೋಗುತ್ತಿದ್ದಾಳೆ. ಅವಳನ್ನು ಕಂಡು ಪ್ರೌಢಸಿತಂಬಿನಿಯೊಬ್ಬಳು 'ಓಡು ಓಡು! ನಿನ್ನರಸ ದೊಡ್ಡಮೆಚ್ಚುಕೊಡಲು ನಿನಗಾಗಿ ಕಾದಿದ್ದಾನೆ! ಪಾಪ! ಪಾಪ! ಎಷ್ಟು ದಿನದಿಂದ ಪತಿಯನ್ನು ಕಾಣಳೊ!' ಎಂದು ಅಣಕವಾಡಿದಳು. ಆಗ ಆ ಮುಗ್ಧೆಯು 'ಅವ್ವ! ನೀವೇನನಾಡಿರಿ ಚಕ್ರವರ್ತಿಯ ಸುವ್ವಲಾಲೆಯನಾಡಿಸುವರು?' ಎಂದು ಪ್ರತಿಹಾಸ್ಯ ಮಾಡುತ್ತಾಳೆ. ಮುಂದೆ ಹೋದರೆ ಹಾಸ್ಯ ಮಾಡುವರೆಂದು ಹಿಂದೆ ಬೀಳುವುದಕ್ಕುಂಟೆ? ಹಿಂದೆ ಬರುತ್ತಿರುವವಳನ್ನು

ಕುರಿತು "ಬರಲಾರಳವಳಿಗೆ ಕೈಗೊಡಿರದೆಯಲ್ಲಿ ಹಿರಿಯ ಹೊರೆಯ ಹೊತ್ತಳವಳು. ಭರತ ಚಕ್ರೇಶಗೆ ಕೃಪೆಯಿಲ್ಲ ಮಾಡಕೆ ಬರಹೇಳಬಹುದೆ? ನೋಡಿ ವಳಾ!" ಎಂದು ಅವಳನ್ನು ಗೇಲಿಗೆ ಹಚ್ಚಿದ್ದಾರೆ. ಮತ್ತೊಬ್ಬ ಮುಗ್ಧೆ ಮಾತನಾಡಿದರೆ ಏನು ಫಜೀತಿಯೋ ಎಂದು ಮೌನದಿಂದಿದ್ದರೆ ಉಳಿದವರು ಅವಳನ್ನು ಸುಮ್ಮನಿರಗೊಡುವರೆ? 'ಮೌನವೀಕೆಗೆ ತನ್ನ ಗಂಡನಂತಾತ್ಮನ ಜಾನಿಸುತ್ತೈದುವ ಪರಿಯೊ! ಎಂದು ಅವಳನ್ನು ಕೆಣಕುವರು. ಆಗ ಅವಳು ಮೌನವನ್ನು ಮೂಲೆಗೊತ್ತಿ 'ಧ್ಯಾನಗೀನವ ನೀವು ನಿಮ್ಮರಸನು ಬಲ್ಲಿರಾ ನೇನ ಬಲ್ಲೆನಾ ಗುಸುಟ? ಈ ನಿಮ್ಮ ಸರಸ ಸಲ್ಲಾಪಕೆ ಮನದಲ್ಲಿ ಆನಂದಿಸುತ ಬಂದೆನಕ್ಕ' ಎಂದು ನುಡಿಯುವಳು. ಹೀಗೆ ಸರಸವನ್ನಾಡುತ್ತ ಹೋಗುತ್ತಿರುವಾಗ ಒಬ್ಬಳು ಮತ್ತೊಬ್ಬಳ ಕಾಲಮೇಲೆ ಸ್ವಲ್ಪ ಮಸಿ ಮೆತ್ತಿರುವುದನ್ನು ಕಂಡು ಕೈಮುಟ್ಟಿ ಒರಸುತ್ತಾಳೆ. ಒಡನೆಯೇ ಆಕೆಯು ಝುಂಕಿಸಿ 'ಕಾಲ ಮೇಲದೆ ಕಪ್ಪು ತೊಡೆದುಕೊಳ್ಳಿಂದೊಲ್ದು ಹೇಳದೆ ತೊಡೆವರೆ ತಂಗಿ?' ಎಂದು ಮಿಡುಕುವಳು. ತಾನು ಮಾಡಿದುದು ಅಷ್ಟೇನೂ ಉಸಚಾರೋಕ್ತಿಗೆ ತಕ್ಕುದಲ್ಲವೆಂಬ ಭಾವನೆಯಿಂದ ಕಿರಿಯಳು 'ಓಲಗ ಮುಟ್ಟಲಾದುದು ಸುಮ್ಮನೈದಕ್ಕ, ಕೇಳಬಹುದು ನಮ್ಮ ಮಾತು' ಎಂದು ಅವಳನ್ನು ಸುಮ್ಮನೆ ಮಾಡುವಳು.

\ಈ ಸತಿಯರ ಪರಸ್ಪರ ಮೈತ್ರಿಯು ಅಸದೃಶವಾದುದು.\ ಕುಸುಮಾಜಿಯ 'ರಾಜಲಾವಣ್ಯ!' ವನ್ನು ಕೇಳಿದ ರಾಜನು ಅವಳಲ್ಲಿ ಅನುರಕ್ತನಾಗಿ ಆ ದಿನವೆಲ್ಲಾ ಅವಳ ಮನೆಯಲ್ಲಿ ಕಳೆಯುವಂತೆ ತಕ್ಕ ಸನ್ನಿವೇಶವನ್ನು ಉಪಾಯದಿಂದ ಕಲ್ಪಿಸಿಕೊಳ್ಳುತ್ತಾನೆಯಷ್ಟೆ. ಆಗ ಅವಳಿಗೆ ದೊರೆತ ಗೌರವಕ್ಕಾಗಲಿ, ಅವಳಿಗಾದ ಅಮೂಲ್ಯ ಸನ್ಮಾನ ಭಾಗ್ಯಕ್ಕಾಗಲಿ ಸವತಿಯರಾರಿಗೂ ಸ್ವಲ್ಪವೂ ಕಸಿವಿಸಿಯಿಲ್ಲ. ತನಗಾದ ಸನ್ಮಾನಕ್ಕಾಗಿ ನಾಚುತ್ತಾ ಗೆಳತಿಯರೆದುರು ನಿಂತಿರುವ ಅವಳನ್ನು ಕುರಿತು ಬಾಯ್ತುಂಬ 'ತಂಗಿ ಹೋಗಕ್ಕ ಹೋಗಾಣ್ಮನಾರೋಗಣೆಗಂಗನೆಗೆಡೆಮಾಳ್ಪ | ಭಾಗ್ಯ ಸಂಗಡಿಸಿತು ನಿನಗದು ನಮ್ಮ ಭಾಗ್ಯವೆಂ | ದಿಂಗಿತಮಿಗೆ ಕಳುಹಿದರು' ನಾಚಿಕೆಯಿಂದ ತಲೆಬಾಗಿ ನಿಂತಿರುವ ಆ ಮುಗ್ಧೆಯ ಸುತ್ತಲೂ ನೆರೆದು ಅವಳ ತಲೆಯನ್ನು

ನೇವರಿಸುತ್ತಾ ಉಪಚಾರೋಕ್ತಿಗಳಿಂದ ಬೀಳ್ಕೊಡುತ್ತಿರುವುದನ್ನು ಕಂಡು ಸಹೃದಯರ ಮನಸ್ಸು ಸಂತೋಷದಿಂದ ನಲಿಯುತ್ತದೆ; ಈ ಅಲೌಕಿಕ ಪ್ರೇಮದರ್ಶನದಿಂದ ಧನ್ಯವಾಗುತ್ತದೆ.

। ಗಂಡನಲ್ಲಿ ಅಪಾರವಾದ ಭಕ್ತಿ, ತಮ್ಮನಲ್ಲಿ ಪರಸ್ಪರ ಸೋದರೀ ವಾತ್ಸಲ್ಯ —ಈ ಸದ್ಗುಣಗಳ ಸುವರ್ಣಕ್ಕೆ ಬಂಧುಪ್ರೇಮದ ಸುವಾಸನೆಯೂ ಸೇರಿದೆ. ಭರತನ ರಾಣಿಯರು ತಮ್ಮ ಅತ್ತೆಯಲ್ಲಿಟ್ಟಿದ್ದ ಭಕ್ತಿ ವಿಶ್ವಾಸಗಳು ಆದರ್ಶಪೂರ್ಣವಾದುವು. ಯಶೋಮತೀದೇವಿಯೂ ಅಷ್ಟೆ. ಆದರ್ಶ ಮೂರ್ತಿಯಾದ ಅತ್ತೆ; ತನ್ನ ಮಗನ ಮೇಲೆ ಎಷ್ಟು ಮಮತೆ ಅಭಿಮಾನ ಗಳುಂಟೋ ಸೊಸೆಯರಲ್ಲಿಯೂ ಅಷ್ಟೇ ಅಭಿಮಾನ ಮಮತೆಗಳು. ಭರತಚಕ್ರಿ ದಿಗ್ವಿಜಯಕ್ಕಾಗಿ ಹೋಗುವ ಮುನ್ನ ತಾಯಿಯ ಅಡಿದಾವರೆಗಳಲ್ಲಿ ಮುಡಿ ಯಿಟ್ಟು ಹರಕೆಗೊಳ್ಳುವನು. ಅವನ ರಾಣಿಯರೂ ಒಬ್ಬೊಬ್ಬರಾಗಿ ಬಂದು ನಮಸ್ಕರಿಸುತ್ತಿರುವರು. ಆಗ ಅತ್ತೆ ' ಬನ್ನವೆಂಬುದ ನಿಮ್ಮ ಕನಸಿನೊಳಗೆ ಕಾಣದೆನ್ನನುಜನ ಸುತೆಯರಿರ। ನನ್ನಣುಗನ ಕೂಡೆ ಲೀಲೆಯೊಳೋಲಾಡಿ ಬನ್ನಿ 'ರೆಂದು ಹರಸುವಳು. ಹೊರಡುವ ಕಾಲದಲ್ಲಿ ಹಿರಿಯರ ಆಶೀರ್ವಾದ ವೊಂದೇ ಸಾಲದು ಈ ಸೊಸೆಯರಿಗೆ. ' ಬುದ್ಧಿಯೇನತ್ತೆಮ್ಮ ನಮಗೆ ?' ಎಂದು ಕೇಳುತ್ತಾರೆ. ಅಸಾಮಾನ್ಯ ಪುರುಷನಾದ ತನ್ನ ಮಗನೊತ್ತಿ ನಲ್ಲಿರುವ ಆ ವನಿತೆಯರಿಗೆ ಬುದ್ಧಿ ಹೇಳುವುದಿನ್ನೇನು ? ಆದರೂ ಗೌರವ ಕೊಟ್ಟು ಕೇಳಿದಾಗ ವಿಶ್ವಾಸವಿಟ್ಟು ಹೇಳಬೇಕಲ್ಲವೆ ? ನಿಮ್ಮ ಪತಿವೇಳ್ದ ಸೊಮ್ಮಿನೊಳಿಹುದದೆ ಬುದ್ಧಿ ' ಎಂದು ಆದೇಶ ಕೊಡುತ್ತಾಳೆ. ಆಗ ಸೊಸೆಯರೆಲ್ಲಾ ಒಟ್ಟಿಗೆ ಕಲೆತು ಪುನಃ ತಮ್ಮ ಅತ್ತೆಯ ಅಡಿದಾವರೆಗಳನ್ನು ಕಾಣುವ ತನಕ ಒಂದು ವ್ರತವನ್ನು ನಡೆಸಬೇಕೆಂದು ಸರ್ವಾನುಮತದಿಂದ ನಿಶ್ಚಯಿಸುತ್ತಾರೆ. ಪರರಾಜ್ಯಕ್ಕೆಯ್ದುವ ಆ ಪೆಣ್ಗಳು ಸಂಚರವ್ರತವನ್ನು ಕೈಕೊಳ್ಳುವುದು ಅನಾವಶ್ಯಕ, ಬೇಡ—ಎಂದು ಅತ್ತೆ, ಸೊಸೆಯರ ಮೇಲಿನ ಮೋಹದಿಂದ, ಮಾತನಾಡಿದರೂ ಸೊಸೆಯರು ' ಎಲ್ಲಿ ಹೋದರೂ ಅದು ಭರ ತೋರ್ವಿಯೆ, ನಮ್ಮ ರಾಜ್ಯವೇ ' ಎಂದು ಹೇಳಿ ಪುನಃ ಅತ್ತೆಯ ಪಾದಪದ್ಮ ಗಳನ್ನು ಕಾಣುವವರೆಗೆ ' ಮಲ್ಲಿಗೆಯನು ಸೂಡೆನೆಂದಳಿರ್ವಳು.' ' ಜಾಜಿ

ಯೊಲ್ಲೆನೆಂದೊರ್ವಳಾಡಿದಳು.' ಮತ್ತೊರ್ವಳು 'ಅತ್ತೆಮ್ಮನ ಮೆಲ್ಲಡಿಗಳ ಕಾಣ್ಬತನಕ ಮೊಲ್ಲೆ ಬೇಡೆನಗೆಂದಳು. ಚಿಲುಪಾಲು ವ್ರತವೆಂದಳೋರ್ವಳು. ಫೇಣಿಯ ಮೆಲಲೊಲ್ಲೆನೆಂದಳೊರ್ವಳು. ಎಳೆಯೆಲೆ ವ್ರತವೆಂದಳೊರ್ವಳ ತ್ಯಮ್ಮನ ತಳಿರಡಿಗಳ ಕಾಣ್ಬತನಕ' ಹೀಗೆಯೇ ಒಬ್ಬಳು ಗೋಚೋಚನವನ್ನೂ ಮತ್ತೊಬ್ಬಳು ಕಸ್ತೂರಿಯನ್ನೂ ಇನ್ನೊಬ್ಬಳು ಪಟ್ಟಿ ವಸ್ತ್ರವನ್ನೂ, ಮಗ ದೊಬ್ಬಳು ಹೊಸಸೀರೆಯನ್ನೂ ತೊರೆದಳು. \ಒಬ್ಬರಲ್ಲ ಇಬ್ಬರಲ್ಲ, ತೊಂಬ ತ್ತಾರು ಸಾವಿರ ಸ್ತ್ರೀಯರು ಹೀಗೆ ಅತ್ತೆಯಲ್ಲಿ ಅನುರಕ್ತರಾಗಿದ್ದುದೂ ಇಷ್ಟು ಜನರನ್ನೂ ಅತ್ತೆ ಹೊಟ್ಟೆಯ ಮಕ್ಕಳಂತೆ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದುದೂ ರತ್ನಾಕರನ ಭವ್ಯಕಾವ್ಯದ ಸುಂದರ ಆದರ್ಶಚಿತ್ರದಲ್ಲಿ ಮಾತ್ರ ಕಂಡುಬರಲು ಸಾಧ್ಯ.\

[ನಮ್ಮ ಸಮಾಜದ ಸಂಸಾರಗಳಲ್ಲಿ ತೋರಿಬರುವ ಹಲವು ಹೃದಯ ವಿದ್ರಾವಕವಾದ ಭೀಷಣಚಿತ್ರಗಳಲ್ಲಿ ಅತ್ತಿಗೆ—ನಾದಿನಿಯರದೂ ಒಂದು. ಇಬ್ಬರಲ್ಲಿ ಒಬ್ಬರು ತಮ್ಮ ಪ್ರಾಶಸ್ತ್ಯವನ್ನು ಹೆಚ್ಚಿಸಿಕೊಂಡು ಮತ್ತೊಬ್ಬರ ಬಾಳನ್ನು ಗೋಳಿನಲ್ಲಿ ಮುಳುಗಿಸುತ್ತಾರೆ. ಅನೇಕ ವೇಳೆ ಸುಖಮಯವಾದ ಸಂಸಾರವನ್ನು ಸುಟ್ಟುಹಾಕುವ ಕೊಳ್ಳಿಗಳಾಗುತ್ತಾರೆ. ಭರತನ ರಾಣಿಯರೂ ಸೋದರಿಯರೂ ಹಾಗಿಲ್ಲ.\ ತಾವು ಷಟ್ಖಂಡ ಚಕ್ರೇಶ್ವರನ ಸೋದರಿಯರೆಂಬ ಒಣಜಂಭವಾಗಲಿ, ತಾವು ಲೋಕೇಶ್ವರನ ಕೂರ್ತಮಡದಿಯರೆಂಬ ಗಂಡಗರ್ವವಾಗಲಿ ಇವರನ್ನು ಸೋಂಕದು. ಭರತನ ಸೋದರಿಯರಾದ (ಇದು ರತ್ನಾಕರನ ಸ್ವಂತ ಸೃಷ್ಟಿ) ಗಂಗಾದೇವಿ ಸಿಂಧುದೇವಿಯರು ಪಟ್ಟದ ರಾಣಿ ಸುಭದ್ರೆಯ ಲಗ್ನಕ್ಕಾಗಿ ಬಂದಿದ್ದಾರೆ. ಮದುವೆಗಾಗಿ ಸಿಂಗಾರವಾಗಿರುವ ಹೆಣ್ಣನ್ನು ನೋಡಬೇಕೆಂಬ ಚಪಲ; ಅಣ್ಣನ ಅಪ್ಪಣೆಯನ್ನು ಬೇಡಿದರು. ಚದುರನಾದ ಅಣ್ಣ ಅವರ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ 'ಸ್ವೀಕಾರಬಟ್ಟು ಕರೆಸಿಕೊಂಡು ಹೋಗದೆ, ನೂಕಿ ಬಂಧುಗಳೆಯ್ದಲವರು | ಏಕವರ್ಬಂದರೊ ಕರೆದೆವೆಯೆಂಬರು. ತೂಕ ತಗ್ಗುವುದಕ್ಕಾ.... ....' ಎಂದ. ಆದರೆ ಆ ಬಗೆಯ ಹೆಚ್ಚು ಕುಂದನ್ನು ಗಮನಿಸುವುದಕ್ಕೆ ಅವರೇನು ನಾಡಾಡಿಯ ಹೆಂಗಸರೆ? "ನಾವೆಯ್ದೆ ಪರಿಭವವೇನಣ್ಣ ನಮಗೆ? ಏನ ಮಾಡುವರಣ್ಣ ಪರರೆಮಗವರ ಸನ್ಮಾನವೇನೊಲಿದಿಟ್ಟುದೇನು?" ಎಂದು

ಬಲವಂತದಿಂದ ಅಪ್ಪಣೆಯನ್ನು ಪಡೆದು ಸುಭದ್ರೆಯ ಬಳಿಗೆ ಹೋಗುತ್ತಾರೆ. ಅತ್ತಿಗೆ ನಾದಿನಿಯರಿಗೆ ಅದೇ ಪ್ರಥಮದರ್ಶನ. ಆದರೂ ಅತ್ತಿಗೆಯರು ತಮ್ಮ ಬಿಗುಮಾನವನ್ನೆಲ್ಲಾ ಬದಿಗೊತ್ತಿ ನಾದಿನಿಯನ್ನು ಮಾತನಾಡಿಸಲು—ಸರಸವಾಡಲು—ಪ್ರಯತ್ನಿಸುತ್ತಾರೆ. ಅವರು ಮಾತನಾಡಿಸುವ ಚದುರನ್ನು ನೋಡಿ–' ಈ ತಿಲಕವೆ ಚಕ್ರಧರನ ಸೋಲಿಪುದು ? ಪೇಳೀತುರುಬೆ ? ಮತ್ತೀ ಪೂವೆ ? ಮಾತಾಡು ಹೆಣ್ಣೆ . . . ' ಎಷ್ಟೊ ದಿನಗಳು ಚಿರಪರಿಚಿತರಾದವರೂ ಇಷ್ಟು ಸಲಿಗೆಯಿಂದ ಇರರು. ಸುಭದ್ರೆ ಇನ್ನೂ ಬಾಲೆ ; ಮದುವೆಯ ಕನ್ಯೆ. ಅವರ ಉತ್ತರಕ್ಕೆ ಪ್ರತ್ಯುತ್ತರ ಕೊಡಲು ನಾಚಿಕೆ ಬಿಗುಮಾನಗಳು ಅಡ್ಡವಾಗಿ ಕುಳಿತಿವೆ. ಅವಳ ಬಾಯಿ ಬಿಡಿಸಬೇಕೆಂದು ಅತ್ತಿಗೆಯರ ಆಗ್ರಹ. ಸ್ವಲ್ಪ ಛೂಡಾಯಿಸಿ ನೋಡುತ್ತಾರೆ. ' ಸರಸಗುಣಗಳೆಲ್ಲದಿವಳ ರೂಪೇನು ಕಾಸರಕನ ಹಣ್ಣಿನಂತೆಂದು ? ಕೆರಳಿಸಿ ನುಡಿವರು, ಮಾತಾಡಬೇಕೆಂದು' ಆದರೆ ಇವರ ಮಾತಿಗೆಲ್ಲಾ ಒಂದೇ ಮಂತ್ರ—'ಶಿರಬಾಗಿ ನಗುತಿಹುದು,' ಆಗ ಮಧುವಾಣಿಯೆಂಬ ಅವಳ ಸಖಿ ಮಾತನಾಡುತ್ತಿರುವವರನ್ನು ಕುರಿತು 'ನಿಮ್ಮ ಪಾಡೇನು. ನಿಮ್ಮಣ್ಣನ ನುಡಿಗಳನೊಮ್ಮೊಮ್ಮೆ ಕಟ್ಟಿ ನಿಲ್ಲಿಪಳು. ನಮ್ಮ ದೇವಿಯ ಮುಂದೆ ಪರರಿಗೆ ಜಾಣ್ಮೆಯೆ ?' ಎಂದು ಎಪುರು ಮೋಡಿ ಹಾಕುವಳು. ' ಅಲ್ಲವೆ ಪೇಳೀಕೆಗುರೆ ತನ್ನ ಪತಿಯೊಡನಲ್ಲದೆ ನುಡಿಯದ ಛಲವೆ !' ಎಂದು ಇನ್ನು ಸ್ವಲ್ಪ ಕಾಲ ವಿನೋದದಿಂದಿದ್ದು ಅಣ್ಣನ ಬಳಿಗೆ ಹಿಂದಿರುಗಿ ಬರುತ್ತಾರೆ. 'ಕಂಡೆವಾ ಮದುವೆಯ ಪೆಣ್ಣನಣ್ಣಾಜಿ. ಆಕೆಯ ಶೃಂಗಾರವಾಕೆಯ ಗಾಂಭೀರ್ಯ ಸಾಕು. ಮತ್ತಾಕೆ ನೋಡಿದರೆ ಯೋಕದಂಗನೆಯೆ ? ಪೆಣ್ಣಿನಲ್ಲೊಂದು ರತ್ನಶಲಾಕೆ ಹುಟ್ಟಿದುದೆಂದರೊಡನೆ,' ಅಣ್ಣನನ್ನು ಕುರಿತು.

ಭರತೇಶ್ವರ ಸುಭದ್ರೆಯರ ಕಲ್ಯಾಣ ಮಹೋತ್ಸವವು ಮುಗಿದ ಮರುದಿನ ಸೋದರಿಯರಿಬ್ಬರೂ ಮತ್ತೊಮ್ಮೆ ಸುಭದ್ರೆಯ ಬಳಿಗೆ ಬರುತ್ತಾರೆ. ಈಗ ಆಗಲೆ ಅವಳ ಮೈಛಳಿ ಬಿಟ್ಟು ಹೋಗಿದೆ. ತನ್ನ ಸಖಿ ಅವರಿಗೆ ಹೇಳಿದ್ದ ಮಾತನ್ನು ಅನುಭವಕ್ಕೆ ತಂದು ಕೊಡುವಂತೆ 'ರೋಡಾಡಿ ಹೋದಿರಿ ನಿನ್ನೆ, ನೀವಿಂದೇನ ಮಾಡಬೇಕೆಂದೆಣಿಸಿದಿರಿ ? ನೋಡ ಬಂದಿರೊ ? ಕಾಡಬಂದಿರೊ? ಹೇಳಿ" ಎಂದಳು. ಆದಕ್ಕೆ ಅವರ ಉತ್ತರ—" ಕಾಡ ಬಂದವರಲ್ಲ ; ನೋಡ

ಬಂದವರೆ." ಆದರೆ ನಿನ್ನ ಕೊರಳಿಗಿಷ್ಟೇಕೆ ಚಂದನಲೇಪ? ಮುತ್ತಿನ ಸರ ಬಂದಿ ಮರೆಸವೆ ನೀರೆ? ಕರಗಳೊಳ್ನಿನ್ನ ಬಳೆಗಳಿಂದಿಲ್ಲೀಗ ನೆರೆದವೆ ಹೊಸ ಬಳೆ ಏಕೆ?" ಸುಭದ್ರೆ ಮಾತಿನ ಬಂಗಾರಕ್ಕೆ ಚಾತುರ್ಯದ ಕುಂದಣವಿಕ್ಕಿ 'ಹಳೆಯ ಬಳೆಯ ಬಿಟ್ಟು ಹೊಸಬಳೆ ತೊಟ್ಟರೇ | ಸಿಳೆಯೊಳು ಕೊರತೆಯೆ? ಅಹಹಾ! ಬಳೆಗಳ ಕುರುಹು ಕಂಡುದು ಚಿತ್ರ. ನೀವೇನು ಬಳೆಗಾತಿಯರೊ!' ಎಂದು ಒಲೆದಾಡುತ್ತ ಕೇಳಿದಳು. ಈ ಸರಸದ ಸರಸಿಯಲ್ಲಿ, ನಗುವಿನ ತರಂಗ ಗಳ ನಡುವೆ ನಲಿಯುತ್ತಾ, ಅತ್ತಿಗೆ ನಾದಿನಿಯರು ಸಂಸಾರವನ್ನು ಸುಖ ಮಯವಾಗಿ ಮಾಡಿರುವರು.

ಇನ್ನು ಭರತನ ಪುತ್ರಸುಖವನ್ನು ಸ್ವಲ್ಪ ನೋಡೋಣ. ಸ್ತ್ರೀಯರಿಗೆ ಮಕ್ಕಳಿಂದಾಗುವ ಸಂತೋಷಕ್ಕೆ ಪಾರವಿಲ್ಲ. ಪ್ರಾಪಂಚಿಕ ವ್ಯವಹಾರಗಳಲ್ಲಿ ಪರಿಮಿತ ವ್ಯಾಪ್ತಿಯುಳ್ಳ ಆಕೆಗೆ ಸಂಸಾರವೇ ಸರ್ವಸ್ವ. ಆ ಸಂಸಾರದ ಸಾರಸರ್ವಸ್ವಫಲವೇ ಸಂತಾನ. ಆ ಪ್ರೇಮಫಲದ ಉದಯದೊಡನೆ ದಂಪತಿ ಗಳ ಪ್ರೇಮ ಕವಲೊಡೆದು ದ್ವಿಮುಖವಾಗುತ್ತದೆ; ಹಂಚಿಹೋಗುತ್ತದೆ. ದಿಗ್ವಿಜಯಕ್ಕೆ ಹೋದ ಭರತನು ಮಕ್ಕಳಾದ ಮೇಲೆ ಮಕ್ಕಳಾಟಿಕೆಯಲ್ಲಿ ಮಗ್ನನಾಗಿ ಮೈಮರೆವ ದೃಶ್ಯ ಮನೋಜ್ಞವಾಗಿದೆ. ಆತನ ಶೃಂಗಾರ ಜೀವನ ತೆಳ್ಳೆಯಾಗುತ್ತದೆ. ಚ್ಯುತಿಯಿಲ್ಲದ, ಕಳಂಕವಿಲ್ಲದ ಸಂತೋಷಸಾಗರಕ್ಕೆ ಆತನು ಅಧಿಪತಿಯಾಗುತ್ತಾನೆ.

ಒಂದು ದಿನ ರಾಜನು ಒಡ್ಡೋಲಗವನ್ನು ನೆರಹಿ, ಸಂಗೀತವನ್ನು ಕೇಳುತ್ತಾ, ಅದನ್ನು ಮೆಚ್ಚಿ ಮನ್ನಣೆ ಕೊಡುತ್ತಾ ಕುಳಿತಿದ್ದಾನೆ. ಮಂದಾ ಕಿನಿಯೆಂಬ ದಾದಿ ಸಭಾಮಂಡಲಕ್ಕೆ ರಾಜಕುಮಾರನನ್ನು ಎತ್ತಿ ಕರೆತಂದು "ಚಂಡಿ ಮಾಡಿದನು ಸಣ್ಣರಸು. ದೇವರ ಸಭಾ ಮಂಡಲವನ್ನು ನೋಡ ಬೇಕಂತೆ" ಎಂದು ಹೇಳಿ ಅಲ್ಲಿ ಬಿಟ್ಟು ಹೋದಳು. ಮುದ್ದಿನ ಮುದ್ದಿ ಯಂತಿದ್ದ ಮಗುವನ್ನು ತೊಡೆಯ ಮೇಲೆ ಕೂಡಿಸಿಕೊಂಡು ಹಲವು ವಿಧ ದಿಂದ ಮುದ್ದಿಸುತ್ತಾ, ಆ ಮುದ್ದುಮಾತುಗಳಿಂದ ಮನಸಾರ ನಕ್ಕು ನಲಿ ಯುತ್ತಾನೆ ಭರತೇಶ್ವರ. 'ಆದಿ ತೀರ್ಥಂಕರ' ಎಂದು ಹೇಳಿಕೊಟ್ಟರೆ ಆ ಮಗು 'ಆದಿಂಕರ' ಎನ್ನುತ್ತಾನೆ 'ಚಿದಂಬರ ಪುರುಷ' ಎಂದು ಪಾಠ ಹೇಳಿಕೊಟ್ಟರೆ 'ಚಿಂಬರಪೂಸ, ಎಂದು ಹೇಳುತ್ತಾನೆ. ಹಾಗೆಯೇ

'ಗುರು ನಿರಂಜನ ಸಿದ್ಧ' ಎಂದು ತಂದೆ ಹೇಳಿಕೊಟ್ಟರೆ ಮಗ 'ನಿಂಜಸಿದ್ದ' ಎನ್ನುತ್ತಾನೆ. ಆಗ ತಾನೆ ಮಾತು ಕಲಿಯುತ್ತಿರುವ ಆ ಮಗುವಿನ ಬಾಲಭಾಷೆಯಿಂದ ತಂದೆಗೆ ಸ್ವರ್ಗ ಎರಡು ಬೆರಳು ಬಿಟ್ಟಿದೆ. ಎದುರಿಗೆ ಕುಳಿತಿರುವ ರಾಜರುಗಳನ್ನು ತೋರಿಸಿ 'ನೋಡಣ್ಣಾ ಮುಂದಿದ್ದವರಾರೆಂದು' ಕೇಳುತ್ತಾನೆ' ಚಕ್ರವರ್ತಿ. ಆತನ ತೊಡೆಯ ಮೇಲಿರುವ ಸಿಂಹಕಿಶೋರ 'ಎಡಗಾಲ ನೀಡಿ ತೋರುವುದು ಭೂಭುಜರಾ' ಜೋಹುಕುಮಿನ ದೊರೆಗಳೆಲ್ಲಾ ಅದರಿಂದ ತಮಗೆಷ್ಟೋ ಗೌರವವಾದಂತೆ ಭಾವಿಸುವರು. ಹೀಗೆಯೇ ವಿನೋದವಾಗಿ ಸ್ವಲ್ಪ ಕಾಲ ಕಳೆದ ಮೇಲೆ ಮಗನನ್ನು ರಾಣೀವಾಸಕ್ಕೆ ಕಳುಹಿಸುತ್ತಾನೆ.

ದಿನವೊಂದು ಹೆರಿಗೆಯಾಗುತ್ತಿರುವ ಭರತನ ಹುಲುಸು ಸಂಸಾರದಲ್ಲಿ ತೊಟ್ಟಿಲ ಮಗುವಿನಿಂದ ಹಿಡಿದು ಕತ್ತಿ ಕಠಾರಿಗಳನ್ನು ಹಿರಿಯಬಲ್ಲ ತರುಣನವರೆಗೆ ಬೇರೆ ಬೇರೆ ವಯಸ್ಸಿನ ಹಲವಾರು ಮಕ್ಕಳಿದ್ದಾರೆ. ವಿಧೇಯರಾಗಿ, ವಿನಯಪರರಾಗಿ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ನಡೆಯುತ್ತಿರುವ ತನ್ನ ಮಕ್ಕಳನ್ನು ಕಂಡು ಭರತನು ಧನ್ಯನಾಗುತ್ತಾನೆ.

ಒಟ್ಟಿನಲ್ಲಿ ಭರತನ ಜೀವನ ರಸವತ್ತಾದ ಜೀವನ. ವಿರಸಗಳು ಬಂದರೂ ಅವುಗಳನ್ನು ಸರಸಕ್ಕೆ ತಿರುಗಿಸಿಕೊಳ್ಳಬಲ್ಲ ಜಾಣ್ಮೆಯಿದೆ ಈತನಿಗೆ. ಒರಟು ಮೊರಟುಗಳನ್ನು ತಿದ್ದಿ ಹದಕ್ಕೆ ತಂದುಕೊಳ್ಳುವ ತಾಳ್ಮೆ ಇದೆ. ಇವನ ಭಾವಮೈದುನ ವಿನಮಿ ಕ್ಷಾತ್ರ ತೇಜಸ್ಸನ್ನು ಅವಲಂಬಿಸಿ ಭೂಮಿಗೂ ಆಕಾಶಕ್ಕೂ ಏಕವಾಗಿ ರೊಚ್ಚಿಬ್ಬಿಸಿದವನು ಭರತನ ಮಹಿಮೆಯಿಂದ ಹಲ್ಲುಕಿತ್ತ ಹಾವಾಗುತ್ತಾನೆ; ತನ್ನ ತಂಗಿಯನ್ನು ಆತನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ಬೆಳಸುತ್ತಾನೆ. ಭರತನ ತಮ್ಮನಾದ ಬಾಹುಬಲಿಯೂ ಅಷ್ಟೆ. ತನ್ನ ಪರಾಕ್ರಮದ ಕೊಬ್ಬಿನಿಂದ ಅಣ್ಣನ ಮೇಲೆ ಇದಿರು ಬಿದ್ದರೂ ಆತನ ಸೂನೃತವಚನ ಮಂತ್ರದ ಮಹಿಮೆಯಿಂದ ಕಣ್ಣೆರೆದು, ತನ್ನ ಕೋಪಮೋಹಗಳನ್ನು ಕೊಚ್ಚಿ ಮುಕ್ತಿ ಮಾರ್ಗವನ್ನು ಹಿಡಿಯುತ್ತಾನೆ. ಕಾವ್ಯದಲ್ಲಿ ಸುಳಿದುಹೋಗುವ ಇತರ ವ್ಯಕ್ತಿಗಳೆಲ್ಲರೂ ಭರತ ಚಕ್ರವರ್ತಿಯ ಆಜ್ಞಾನುವರ್ತಿಗಳಾಗಿ, ಆತನ ಸುಖವನ್ನು ಹೆಚ್ಚಿಸುವುದರಲ್ಲಿಯೇ ತಮ್ಮ ಜೀವನದ ಸಾರ್ಥಕ್ಯವನ್ನು ಪಡೆಯುತ್ತಿದ್ದವರು. ಎಲ್ಲರೂ ನಾಯಕನ ಔನ್ನತ್ಯವನ್ನು ಚಿತ್ರಿಸಲು ಸಹಾಯಕವಾದ ಹಿನ್ನೆಲೆಯಾಗಿದ್ದಾರೆ.

ಪಾತ್ರ ಪರಿಚಯ

ನಮ್ಮ ಕವಿ ಪಾತ್ರಗಳನ್ನು ಸೃಷ್ಟಿಸಲು ಉಪಯೋಗಿಸಿರುವ ಹಿನ್ನೆಲೆ ಬಹು ದೊಡ್ಡದು ; ಷಟ್ಖಂಡಗಳಷ್ಟು ವಿಸ್ತಾರವಾದುದು. ಇದರ ಮೇಲೆ ಚಿತ್ರಿತವಾಗಿರುವ ಪಾತ್ರಗಳೂ ಅಸಂಖ್ಯಾತ. ಆದುದರಿಂದ ಪಾತ್ರ ಪರಿಚಯಕ್ಕೆ ಕೈಹಾಕಿದಾಗ ಕೇವಲ ದಿಗ್ದರ್ಶನ ಮಾತ್ರ ಸಾಧ್ಯ.

ಭರತ–ರತ್ನಾಕರನು ತನ್ನ ಪಾತ್ರಗಳನ್ನು ರಚಿಸುವುದರಲ್ಲಿ ಅಸಾಧಾರಣವಾದ ಜಾಣ್ಮೆಯನ್ನು ತೋರಿದ್ದಾನೆ. ಮೊದಲನೆಯದಾಗಿ ಕಥಾನಾಯಕನಾದ ಭರತನ ಪಾತ್ರವನ್ನೇ ತೆಗೆದುಕೊಂಡು ವಿವೇಚಿಸೋಣ :—'ಕಾವ್ಯಪತಿ ಚಕ್ರಿ ಸಾಮಾನ್ಯನಲ್ಲ' ಜೈನ ಪುರಾಣದ ಪ್ರಕಾರ ಚಕ್ರವರ್ತಿಜನ್ಮ ಬಹು ಪುಣ್ಯದ ಫಲ. ಅದರಲ್ಲಿಯೂ ಭರತ ಅಸಾಮಾನ್ಯ ಗುಣಗಳುಳ್ಳ ಷಟ್ಖಂಡಗಳ ಚಕ್ರವರ್ತಿ. 'ಪುರುಪರಮೇಶನ ಹಿರಿಯ ಕುಮಾರ ;' ನರಲೋಕಕ್ಕೆಲ್ಲಾ ಏಕಚ್ಛತ್ರಾಧಿಪತಿ ;' ಎಲ್ಲಕ್ಕೂ ಹೆಚ್ಚಾಗಿ 'ಮುರಿದು ಕಣ್ಣಿಟ್ಟರೆ ಕ್ಷಣಕೆ ಮುಕ್ತಿಯ ಕಾಂಬ ತೇಜಸ್ವಿ. ಹದಿನಾರನೆಯ ಮನುವೂ ಪ್ರಥಮ ಚಕ್ರಿಯೂ ಆದ ಆತನ ಹಿರಿಮೆಯನ್ನು ಸೂತ್ರರೂಪದಲ್ಲಿ ಹೇಳುವುದಾದರೆ 'ಆ ಕ್ಷತ್ರಿಯ ಕುಲರತ್ನ ಗಾಹಾರವುಂಟು ; ಮಲ್ಲವಿಲ್ಲ, ಮೂತ್ರವಿಲ್ಲ.' ಎಂದ ಮೇಲೆ 'ಈ ಲೋಕದ ಬಳಕೆಗಾರರ ಪೇಳ್ವ ತೆರನೆ ?' ಭರತ ತನ್ನ ಸಾಧನೆಯಿಂದ ಪರಿಪಕ್ವ ಚೇತನನಾಗಿದ್ದಾನೆ; ವೀತರಾಗನಾದ ಚಿದಂಬರ ಪುರುಷನಾಗಿದ್ದಾನೆ. ಅಂತಹ ಮಹಿಮನು ಲೋಕದ ನಡವಳಿಕೆಯಲ್ಲಿ ಚಾಚೂ ತಪ್ಪದೆ—ಲೋಕ ಸಂಗ್ರಹಕ್ಕಾಗಿ ಇದು ಅಗತ್ಯ—ಮೋಕ್ಷ ಮಾರ್ಗದಲ್ಲಿ ಹೇಗೆ ನಡೆಯಬಹುದೆಂಬುದನ್ನು ಭರತನು ತನ್ನ ಆದರ್ಶ ಜೀವನದಿಂದ ತೋರಿಸುತ್ತಾನೆ. ತ್ಯಾಗದ ಕಾಲ ಬರುವವರೆಗೆ ತ್ಯಾಗಿಯಾಗಬೇಕೆಂಬ ತವಕವಿಲ್ಲ, ಆಶೆಯಿಲ್ಲ. ತ್ಯಾಗವು ಸನ್ನಿಹಿತವಾದಾಗ ಭೋಗವಿರಹದ ಕಾತರತೆಯಿಲ್ಲ, ಕೊರಗಿಲ್ಲ. ಭೋಗಿಸುತ್ತಿದ್ದರೂ

ಭೋಗಿಯಲ್ಲ. ಆಯುಸ್ಸು ಮುಗಿವುದಕ್ಕೆ ಬಹುಮುಂಚೆಯೇ ಆತ್ಮಸಾಕ್ಷಾತ್ಕಾರ ಸನ್ನಿಹಿತವಾಗಿದ್ದರೂ, ಸಂಸಾರವನ್ನು ತೊರೆಯುವುದಿಲ್ಲ. ಕಾರಣ ವೇನೆಂದರೆ, ಆತನು ಚಕ್ರವರ್ತಿಯಾಗಿ ಪ್ರಜಾಪಾಲನ ಕಾರ್ಯವನ್ನು ಸಾಂಗವಾಗಿ ನೆರವೇರಿಸುತ್ತಾ ತನ್ನ ದೊಡ್ಡ ಆಯುಷ್ಯದಲ್ಲಿ ಬಹುಭಾಗವನ್ನು ಕಳೆಯಬೇಕಾಗಿದೆ. ಈ ಸನ್ನಿವೇಶವು ಸಂಸಾರ ತ್ಯಾಗಕ್ಕೆ ಬಹು ದೊಡ್ಡ ಪ್ರತಿಬಂಧಕವಾದುದರಿಂದ ರಾಜನಾಗಿಯೇ ವಿರಕ್ತನಾಗಬೇಕಾಗಿದೆ. ಮಗನಾದ ಅರ್ಕಕೀರ್ತಿಯು ದೊಡ್ಡವನಾಗಿ ರಾಜನಾಗುವವರೆಗೂ ಈ ಬಹಿರಾಡಂಬರದ ದೊಂಬರಾಟವನ್ನಾಡದೆ ಗತ್ಯಂತರವಿಲ್ಲ.

ಭರತನು ಮೇಲ್ನೋಟಕ್ಕೆ ಉಪಭೋಗಿಯಾಗಿದ್ದರೂ, ಪದ್ಮಪತ್ರದ ಮೇಲಿನ ಜಲದಂತೆ—ಕೆಸರಿನಲ್ಲಿ ಹುಟ್ಟಿದರೂ ಕಮಲವು ಊರ್ಧ್ವಮುಖವಾಗಿರುವಂತೆ—ಅಂಟಿಯೂ ಅಂಟದ ರಾಜಯೋಗಿಯಾಗಿರುತ್ತಾನೆ. ಬುವಿಯಲ್ಲಿ ಬೇರು ಬಿಟ್ಟಿದ್ದರೂ ಅಂಬರದಲ್ಲಿ ಅರಳಿರುವ ಮಹೋನ್ನತ ವೃಕ್ಷ ಈತ. ಭೋಗೋಪಭೋಗಗಳು ಆತನ ಮನಸ್ಸನ್ನು ಸೆರೆ ಹಿಡಿಯಲಾರವು; ಅವುಗಳನ್ನು ಮೆಟ್ಟಿ ಊರ್ಧ್ವದೃಷ್ಟಿಯನ್ನು ಪಡೆದಿದ್ದಾನೆ ಈತ. ಇದಕ್ಕೆ ಅನುಗುಣವಾದ ಈತನ ವ್ಯಕ್ತಿತ್ವವನ್ನು ನೋಡೋಣ.

ಭರತನಿಗೆ ಅನಾವಶ್ಯಕವಾದ ಉಪಭೋಗಗಳ ವರ್ಣನೆ ಇಲ್ಲಿ ಯಥೇಷ್ಟವಾಗಿ ಬರುವುದಾದರೂ, ಆ ವರ್ಣನೆ ಲೋಕೋದ್ಧಾರದ ದೃಷ್ಟಿಯಿಂದ ಆವಶ್ಯಕವೆಂದು ಕವಿಯ ಸಮಾಧಾನ. ತನ್ನ ಕಥಾನಾಯಕನು ಸಂಸಾರಿಗಳಿಗೆಲ್ಲಾ ಆದರ್ಶ ಪುರುಷನೆಂದು ಅವನ ಭಾವನೆ. ಶೃಂಗಾರಕ್ಕೆ ಗುರಿಯಿರಬೇಕೆಂದೂ, ಅದು ಮನುಷ್ಯನನ್ನು ಊರ್ಧ್ವಮುಖಕ್ಕೆ ಒಯ್ಯಬೇಕೆಂದೂ ಕವಿಯ ಇಷ್ಟ. ಆದುದರಿಂದ ಹಲವು ಸಲ ಸುಪುಷ್ಟವಾಗಿ, ಸುಂದರವಾಗಿ ಶೃಂಗಾರ ವರ್ಣನೆ ಬಂದರೂ, ಮರುನಿಮಿಷದಲ್ಲಿಯೇ ಚಿದಂಬರ ಧ್ಯಾನವು ಅದರ ಸ್ಥಾನವನ್ನು ಆಕ್ರಮಿಸುತ್ತದೆ. ಅಲೆಯಾಡೊಡನೆಯೇ ಜೇರೊಂದಲೆಯು ಬರಿದಾದ ಸ್ಥಾನವನ್ನು ಆಕ್ರಮಿಸುವಂತೆ ಶೃಂಗಾರ ಚಿದಂಬರ ಧ್ಯಾನಗಳು ಕಾವ್ಯದಲ್ಲಿ 'ಮುಟ್ಟಿಸಾಟ'ವಾಡುತ್ತಿವೆ. ಭರತನ ಜೀವನದಲ್ಲೆಲ್ಲಾ ಈ ಭೋಗ ಯೋಗಗಳ ಸಮತೂಕ ಸ್ಪಷ್ಟವಾಗಿ ಕಂಡುಬರುತ್ತದೆ.

ಭರತನ ಜೀವನಚಿತ್ರ ಶ್ರೀ ಕೃಷ್ಣನ ಜೀವನಚಿತ್ರವನ್ನು ಬಹು ಮಟ್ಟಿಗೆ ಹೊಲುತ್ತದೆ. ಒಂದು ಮತ್ತೊಂದಕ್ಕೆ ಸ್ಫೂರ್ತಿದಾಯಕವೆಂಬಂತಿದೆ– ಕವಿಯ ಆವೇಶಕ್ಕೆ ಉಗಮಸ್ಥಾನವು ಕೃಷ್ಣನ ಮಹತ್ತಾದ, ಅದ್ಭುತವಾದ, ಅಸಾಮಾನ್ಯವಾದ ಜೀವನ ಚಿತ್ರವೇ ಇರಬೇಕು ಎನ್ನಿಸುತ್ತದೆ. ಇಬ್ಬರ ಜೀವನದ ಸಾರತತ್ವವೂ ಒಂದೇ. ಅವರ ವ್ಯಾಪ್ತಿ ಬೇರೆ ಬೇರೆ ಕಾರ್ಯರಂಗಗಳಲ್ಲಿ ವ್ಯಾಪ್ತವಾಗಿರಬಹುದಾದರೂ ಮನೋವೃತ್ತಿ ಒಂದೇ. ಇಬ್ಬರೂ ' ಪದ್ಮಪತ್ರ ಮಿವಾಂಭಸ 'ರಾದ ಜೀವಿಗಳು. ಕೃಷ್ಣನು ಹದಿನಾರು ಸಾವಿರ ಗೋಪಿಕಾ ಸ್ತ್ರೀಯರಿಂದ ಪರಿವೃತನಾಗಿ ಲೋಲುಪ್ತಿಯಲ್ಲಿರುವಂತೆ ಕಂಡುಬಂದರೂ ಆತನು ಯೋಗಿ. ತೊಂಬತ್ತಾರು ಸಹಸ್ರ ರಾಣಿಯರಿಂದ ಸಂಸೇವ್ಯನಾಗಿ ಕೇವಲ ರಾಗರಸದಲ್ಲಿ ಮುಳುಗಿದಂತೆ ತೋರುತ್ತಿದ್ದರೂ ಭರತನು ಮಹಾ ಯೋಗಿ. ಹದಿನಾರು ಸಾವಿರ ಸ್ತ್ರೀಯರೊಡನೆ ಹದಿನಾರು ಸಾವಿರ ರೂಪ ಗಳಿಂದ ಸಂತೋಷಪಡಿಸಬಲ್ಲವನು ಶ್ರೀ ಕೃಷ್ಣ. ಭರತನೂ ಕಡಮೆಯಲ್ಲ ; ತೊಂಬತ್ತಾರು ಸಾವಿರ ಭರತರ ರೂಪಿಂದ ತನ್ನ ಸತಿಯರನ್ನು ತಣಿಸಿ ಕುಣಿಸ ಬಲ್ಲ. ಗೀತೋಕ್ತ ಜೀವನವನ್ನು ನಡೆಸುತ್ತಿದ್ದ ಕೃಷ್ಣನಂತೆ ಭರತನೂ ಅಧ್ಯಾತ್ಮ ಯೋಗಿ ; ಅಂತರ್ಮುಖಿ ; ಮುಮುಕ್ಷು. ಕೃಷ್ಣನ ಭುವನೈಕಮೋಹನ ರೂಪದಂತೆ ಭರತನ ರೂಪವೂ ಎಣೆಯಿಲ್ಲದುದು. " ನಸುನಗೆಯಿಂದ ಹೆಂಗಳ ನೋಡೆ ಜುಮ್ಮೆನಲೊಸರಿಸುವನು ಕರಣಗಳಾ. " ' ನಿಟ್ಟಿಸಿದರೆ ಮುತ್ತ ಮುದು ಕಿಗಾದರು ಜುಂಮು | ದಟ್ಟಿಸುತಿಹುದು ರೂಪವನಾ. "

ಕಾವ್ಯವು ಇಂತಹುದೆಂದು ಹೇಳದೆ, ಕೆಳಗಿನ ಪದ್ಯಗಳನ್ನು ಓದಿದಾಗ, ಕೇಳಿದವರು ಇದನ್ನು ಕೃಷ್ಣನ ಕಾವ್ಯವೆಂದೇ ಭ್ರಮಿಸಿಯಾರು!

ಸುಳಿದ ಮಾತ್ರದೊಳು ಮಾನಿನಿಯರ ಹೃದಯದ |
ಸುಳುಹುಗಾಣ್ಬನು ಭಾವಿತಾತ್ಮ |
ಸುಳಿಗುರುಳಿನ ಸೊಬಗೆಯರ ತನ್ನಯ ಸುತ್ತ |
ಸುಳಿದಾಡಿಸುವನು ಸೋಲದೊಳು ||

ಒಬ್ಬಳಮೇಲೆ ತನಗೆ ಸೋಲವಿದ್ದರೂ |
ದುಬ್ಬುಗಾಣಿಸನದ ನುಡಿದು |

ಒಬ್ಬ ಪುರುಷನೊಬ್ಬ ಸತಿಯೊಳಿಪ್ಪಂತಿಹ ।
ನುಬ್ಬಸವಿಲ್ಲದೆಲ್ಲರೊಳು ॥
ಮಾರ್ಗವಲ್ಲೆಂಬಂತೆ ತೋರ್ಪುದನ್ಯರಿಗೆ ಸ ।
ನ್ಮಾರ್ಗದೊಳವನಿರುತಿಹನು ।
ಆರ್ಗೆ ತಿಳಿಯಬಹುದಾತ್ಮವಿಜ್ಞಾನಿಯಂ ।
ತರ್ಗತವನು ಜಿನ ಬಲ್ಲಾ ॥

ಕಟಕಿ ನುಡಿಗಳಿಂದ ಕೃಷ್ಣನನ್ನು ಸ್ತುತಿಸಿ ಮೈಯುಂಡವರಿಗೆ " ಸಿಕ್ಕಿದಂತಿಹನು, ಸಿಕ್ಕನು. ರತಿಸುಖದಲ್ಲಿ ಸೊಕ್ಕಿದಂತಿಹನಲ್ಲಿ ಸೊಕ್ಕ. ", " ಠಕ್ಕರಂತಿಹನದು ಠಕ್ಕಲ್ಲ. ನಿಜವ ಕಣ್ಣಿಕ್ಕಿ ಕಂಡವನ ಲೀಲೆಯದು " ಎಂಬುದನ್ನು ಕೇಳಿದೊಡನೆಯೇ ಕೃಷ್ಣನ ಮೂರ್ತಿ ಕಣ್ಣೆದುರಿಗೆ ನರ್ತನವಾಡುತ್ತದೆ. ಇಂತಹ ಆದರ್ಶ ಪುರುಷನಾದ ಭರತನ ಹೆಸರೇ ಭರತಖಂಡವೆಂಬ ಹೆಸರಿಗೆ ಮೂಲವೆಂಬುದನ್ನು ಕೇಳಿ ಸಂತೋಷಪಡೋಣ.

ಬಾಹುಬಲಿ–ಭರತನ ತಮ್ಮನಾದ ಭುಜಬಲಿ, ಕಲಿಯುಗ ಮದನ. ಪುರಾಣ (ವೈದಿಕ) ಪುರುಷನಾದ ಮದನನಿಗಿರುವ ಶೃಂಗಾರ ಸಾಧನಗಳೂ ಭೋಗ ಪರಿಕರಗಳೂ ಚಾಚೂ ತಪ್ಪದೆ ಭುಜಬಲಿಯ ಕರಗತವಾಗಿವೆ. ಇಷ್ಟೇ ಅಲ್ಲ. ಮನ್ಮಥನ ಪರ್ಯಾಯನಾಮಗಳೂ ಬಾಹುಬಲಿಗೆ ಅರ್ಪಿತವಾಗಿವೆ. ಸಮಸ್ತ ವಿಚಾರಗಳಲ್ಲಿಯೂ ಈತನು ಪುರಾಣೋಕ್ತ ಮಾರನೇ. ಆದರೆ ಒಂದು ವ್ಯತ್ಯಾಸವಿದೆ. ಪುರಾಣೋಕ್ತ ಮಾರನು ಮಾನವರನ್ನು ಮೋಹಪಾಶದಲ್ಲಿ ಸಿಲುಕಿಸಿ ಗೋರಿಗೊಳಿಸುವುದರಲ್ಲಿ ಮಾತ್ರ ಪ್ರವೃತ್ತನಾಗಿದ್ದಾನೆ; ಅಭಿನವ ಮದನನಾದ ಭುಜಬಲಿ ತನ್ನ ಹೆಸರಿಂತಂತೆ ಅದ್ವಿತೀಯ ಬಾಹುಬಲ ಸಮನ್ವಿತನಾಗಿದ್ದಾನೆ. ಪೌದನಪುರವು ಆತನಾಳುವ ನಾಡಿಗೆ ರಾಜಧಾನಿ. ಈತನು ಸೋಲದ ಹೊರತು ಭರತನಿಗೆ ಚಕ್ರವರ್ತಿಯೆಂಬ ಬಿರುದು ಸಲ್ಲದು. ಅದಕ್ಕಾಗಿಯೇ ಪೌದನಪುರವು ಸಮೀಪಿಸಿದೊಡನೆಯೇ ಚಕ್ರರತ್ನವು ಮುಂದೆ ಸಾಗದೆ ನಿಂತುಬಿಡುತ್ತದೆ. (ಇತರ ಜೈನ ಕವಿಗಳ ದೃಷ್ಟಿಯಲ್ಲಿ ಬಾಹುಬಲಿಯೇ ಭರತನಿಗಿಂತಲೂ ಹೆಚ್ಚು ಸತ್ವಶಾಲಿ; ಭರತನೊಡನೆ ಜಲಯುದ್ಧ ದೃಷ್ಟಿಯುದ್ಧಗಳನ್ನು ನಡಸಿ ಜಯಶೀಲನಾಗುತ್ತಾನೆ ಆದರೆ ರತ್ನಾಕರನು ಧೀರೋದಾತ್ತ

ನಾದ ತನ್ನ ಕಥಾನಾಯಕನಿಗೆ ಹೆಚ್ಚು ಮಹತ್ತನ್ನು ಕಲ್ಪಿಸುವುದಕ್ಕಾಗಿ ಬಾಹುಬಲಿಯ ಪ್ರಭೆಯನ್ನು ತಗ್ಗಿಸಿದ್ದಾನೆ.) ಬಾಹುಬಲಿಗೆ ತನ್ನ ಅಣ್ಣನಲ್ಲಿ ಗೌರವವಿಲ್ಲದೆ ಇಲ್ಲ; ಆದರೆ ಅಣ್ಣನೆಂದು ಕ್ಷತ್ರಿಯ ಜಾತಿಗೆ ಅಪಮಾನ ತರುವುದಕ್ಕಾಗುತ್ತದೆಯೆ? ಯುದ್ಧದಲ್ಲಿ ಸೋದರಮಾವನೆ? "ಗುಣಕೆರಗುವೆ ನಹುದಣ್ಣನೆಂದೊಮ್ಮೆ ಝುಂಕಣಿಗೆರಗುವೆನೆ? ತಾನೀಗ ಅಣಿದೋರಿ ನಿಂದು, ಬಣ್ಣಕೆ ನಿನ್ನ ಕಳುಹಿ, ಪ್ರೇರಣಿಸುತಿದ್ದನು ಭಾವು ನೋಡ!" ಎಂದು ತನ್ನಲ್ಲಿ ಸಂಧಾನಕ್ಕಾಗಿ ಬಂದ ದಕ್ಷಿಣಾಂಕನ ಮುಂದೆ ಹೇಳುತ್ತಾನೆ. ತನ್ನ ಅಣ್ಣನು ಈಗ ಬಂದಿರುವುದು ಚಕ್ರವರ್ತಿಯಾಗಿಯೇ ಹೊರತು ಅಣ್ಣನಾಗಿ ಅಲ್ಲ. ಇಲ್ಲದಿದ್ದರೆ ದೂದಟ್ಟುವ ಪ್ರಮೇಯವೇಸಿದೆ? ನೇರವಾಗಿ ಬಂದು ತನ್ನ ಅರಮನೆಯಲ್ಲಿಯೇ ಇಳಿದುಕೊಳ್ಳಬಹುದಾಗಿತ್ತಲ್ಲ! ಹಾಗೆ ಮಾಡಿದ್ದರೆ ತನ್ನ ರಾಜ್ಯವೆಲ್ಲಾ ಆತನದೆಂದೇ ಭಾವಿಸಿ ಗೌರವಿಸಬಹುದಾಗಿತ್ತು. ಹಾಗಲ್ಲದೆ "ಉತ್ತವು ರಾಣಿಯ ಮಗನೊಬ್ಬನೆನ್ನನು ತೊತ್ತಿರ ಮಗನ ಕಾಂಬಂತೆ" ಕಾಣುತ್ತಿರುವನಲ್ಲ! "ಕೇಳಿಬ್ಬರರಸಿಯರುಂಟೈಸೆ ದೊರೆ ಪಾಟ ಊಳಗ ವೆಣ್ಣಿಲ್ಲ ಪಿತಗೆ!"

ರಾಜಧರ್ಮವನ್ನು ಪಾಲಿಸಹೊರಟಿರುವ ಬಾಹುಬಲಿ ಯುದ್ಧಕ್ಕೆ ಸಿದ್ಧನಾಗಿ ಹೊರಟುದು ನಿಜ. ಆದರೆ ಅಣ್ಣನ ಇದಿರಿನಲ್ಲಿ ಬಹಳ ವಿನಯದಿಂದ ನಡೆದುಕೊಳ್ಳುತ್ತಾನೆ. ಅಣ್ಣನ ಮೃದು ನುಡಿಗಳ ಕಾವಿನಲ್ಲಿ ಬೆಣ್ಣೆಯಂತೆ ಕರಗಿಹೋಗುತ್ತಾನೆ. ಮೃದು ನುಡಿಗಳ ಕಶಾಹತಿಯು ಹೃದಯದಮೇಲೆ ಒಂದೇ ಸಮನೆ ಬೀಳುತ್ತಿದ್ದರೂ ಬುದ್ಧಿ ಕ್ರೋಧದ ಕಡೆ ತಿರುಗುವುದಿಲ್ಲ. ಅಣ್ಣನ ಮಾತುಗಳಿಗೆ ಪ್ರತಿ ನುಡಿಯುವುದಿರಲಿ, ತಾನು ಮಾಡಿದುದು ನ್ಯಾಯವೆಂದು ಸಾಧಿಸುವ ಸಾಹಸಕ್ಕೆ ಸಹ ಕೈಯಿಕ್ಕುವುದಿಲ್ಲ. ಮೌನದಿಂದ, ಸಹನೆಯಿಂದ ಅಣ್ಣನಾಡುವ ನುಡಿಗಳನ್ನೆಲ್ಲಾ ತಲೆ ತಗ್ಗಿಸಿಕೊಂಡು ಕೇಳಿ ಕೃತ ಕಾರ್ಯ ಪಶ್ಚಾತ್ತಾಪದಿಂದ ದಗ್ಧನಾಗಿ, ಆ ಅನುತಾಪದ ಸಿಗ್ಗಿನ ದಾವಾನಲದಲ್ಲಿ ತನ್ನ ಮೋಹ ಜಾಲಗಳನ್ನೆಲ್ಲಾ ಸುಟ್ಟು ಯೋಗಿಯಾಗುತ್ತಾನೆ. ಸ್ವಯಂ ಮನ್ಮಥನು ಯೋಗಿಯಾಗುವುದೆಂದರೆ ನೀರಿಗೆ ಬೆಂಕಿ ಬಿದ್ದಂತೆ. ಇಂತಹ ಅಸಾಧ್ಯವಾದುದನ್ನು ಸಾಧ್ಯವಾಗುವಂತೆ ಮಾಡಿದುದರಿಂದಲೇ ಆತನ ಕೀರ್ತಿ ಆಚಂದ್ರಾರ್ಕಸ್ಥಾಯಿಯಾಗಿ ನಿಂತಿರುವುದು. ಆತನ ಪುಣ್ಯಮೂರ್ತಿಯು

ಇಂದಿಗೂ ಗೊಮ್ಮಟೇಶ್ವರನೆಂಬ ಹೆಸರಿನಿಂದ ದಿಗಂತ ವಿಶ್ರಾಂತವಾಗಿ ಜನರ ಆದರ ಗೌರವಗಳಿಗೆ ಪಾತ್ರವಾಗಿದೆ; ಜೈನರೆಲ್ಲರ ಪೂಜಾಮೂರ್ತಿಯಾಗಿದೆ.

ಪಂಡಿತೆ—ಸ್ತ್ರೀ ವ್ಯಕ್ತಿಗಳನ್ನು ಚಿತ್ರಿಸುವುದರಲ್ಲಿ ಕವಿ ಅಪ್ರತಿಮವಾದ ಕುಶಲತೆಯನ್ನು ತೋರಿದ್ದಾನೆ. ತೊಂಬತ್ತಾರು ಸಹಸ್ರ ಸ್ತ್ರೀಯರನ್ನು ರಂಗ ದಲ್ಲಿ ತಂದಿರುವ ಈತನಿಗೆ ಸ್ತ್ರೀ ಪಾತ್ರಗಳ ಕಡೆಗೆ ಒಲವು ಹೆಚ್ಚು. ಭರತನ ಸಂಸಾರ ಚಿತ್ರದಲ್ಲಿ, ಆತನ ಶೃಂಗಾರ ಜೀವನ ನಿರೂಪಣೆಯಲ್ಲಿ ಇದು ತಕ್ಕ ಮಟ್ಟಿಗೆ ಈಗಾಗಲೇ ಕಾಣಿಸಿದೆ. ಸದ್ಯಕ್ಕೆ ಸ್ತ್ರೀ ಸಮೂಹದ ದಿಗ್ದರ್ಶಿಕೆಯಂತೆ ತೋರುವ ಪಂಡಿತೆಯನ್ನು ಕುರಿತು ನಾಲ್ಕು ಮಾತುಗಳಾಡುತ್ತೇವೆ. ಇದರಿಂದ ಕವಿಯು ಚಿಕ್ಕ ಚಿಕ್ಕ ಪಾತ್ರಗಳನ್ನು ಕೂಡ ಎಷ್ಟು ರಸವತ್ತಾಗಿ ವರ್ಣಿಸುವ ನೆಂಬುದು ವ್ಯಕ್ತವಾಗುತ್ತದೆ. ಚಿಕ್ಕದು ದೊಡ್ಡದೆಂಬ ತಾರತಮ್ಯವಿಲ್ಲದೆ ಕುಸುರಿಗೆಲಸವನ್ನು ಮಾಡಿರುವ ಜಾಣ್ಮೆಯು ಎದ್ದುಕಾಣುತ್ತದೆ.

ಪಂಡಿತೆಯು ದಾದಿಯಾದರೂ ಪ್ರಥಮಚಕ್ರಿಯ ಪಟ್ಟದ ರಾಣಿಯರಿಗೆ ಪಾಠ ಹೇಳಿಕೊಟ್ಟರುವ—ಕಾವ್ಯಾಲಂಕಾರ ಶಾಸ್ತ್ರಗಳಲ್ಲಿ ಪಾರಂಗತರನ್ನಾಗಿ ಮಾಡಿರುವ—ದಾದಿ. ದಾದಿಯಾದರೂ ತನ್ನ ಜಾಣ್ಮೆಯಿಂದ, ವಿದ್ವತ್ತಿನಿಂದ ರಾಜನ ಮತ್ತು ಆತನ ಪರಿವಾರದವರ ಆದರ ಗೌರವಗಳಿಗೆ ಪಾತ್ರಳಾಗಿರುವ ವಳು. ಸಮಯ ಬಂದಾಗ ರಾಜನನ್ನಾಗಲಿ, ರಾಣಿಯರನ್ನಾಗಲಿ ಝಂಕಿಸಿ ನುಡಿದು ಬುದ್ಧಿಗಲಿಸುವಷ್ಟು ಸ್ವತಂತ್ರವಿದೆ ಆಕೆಗೆ. ರಾಜನ ಚಿತ್ತವೃತ್ತಿಯನ್ನ ನುಸರಿಸಿ ತನ್ನ ಜಾಣ್ಮುಡಿಗಳಿಂದ ಆತನ ಶೃಂಗಾರ ಜೀವನವನ್ನು ಮುಂದು ವರಿಸುತ್ತಾಳೆ. ಆಕೆಯ ಮಾತಿನ ಮೋಡಿ ಎಲ್ಲರನ್ನೂ ಮೋಹಗೊಳಿಸುವಂತ ಹುದು. ರಾಜನು ಉಪ್ಪರಿಗೆಯಲ್ಲಿ ಓಲಗವನ್ನು ನೆರಹಿದ್ದಾನೆ. ರಾಣಿಯ ರೆಲ್ಲರೂ ಬಂದು ಕಪ್ಪಕಾಣಿಕೆಗಳನ್ನು ಒಪ್ಪಿಸುತ್ತಿದ್ದಾರೆ. ಒಬ್ಬಳು ಕಾಣಿಕೆ ಯಾಗಿ ಪಾದರಿಯ ಅಲರೊಂದನ್ನು ಅರ್ಪಿಸುತ್ತಿರುವಾಗ ಅದು ಜಾರಿ ಭರತನ ಪಾದಗಳ ಬಳಿ ಬಿತ್ತು. ಆತನು ಅದನ್ನು ಸ್ವಾಭಾವಿಕವಾಗಿ ಕಾಲಿನಿಂದ ಅತ್ತ ನೂಕಿದ. ಒಡನೆಯೇ ಸಭೆಯಲ್ಲಿ ಕುಳಿತಿರುವ ಪಂಡಿತೆ 'ಪರದಾರ ಸೋದರ ನೊತ್ತಿಗೆ ಪಾದರಿ ಬರಬಹುದೆ ಭರತೇಶ! ಚರಣದಿಂದೊದೆದುದದಾಯ್ತು' ಎಂದು ಶ್ಲೇಷೆಯಿಂದ ರಾಜನನ್ನು ಹೊಗಳಿ ಆತನನ್ನು ಗೌರವಿಸಿದಳು. ಆದರೆ

ಇತ್ತ ಪಾದರಿಪುಷ್ಪವನ್ನು ಅರ್ಪಿಸಿದ ಸುಕುಮಾರಿಗೆ ಮನನೋಯುವುದಿಲ್ಲವೆ? ಇದನ್ನು ಮನದಂದು ಪಂಡಿತೆ "ಕಡುಶೀಲವತಿಯರು ನಿನ್ನ ಪೆಂಡಿರು, ತಮ್ಮ ಕಡೆಗೊಬ್ಬ ಪಾದರಿ ಬರಲು, ಪಿಡಿತಂದು ನಿನಗೊಪ್ಪಿಸಿದರು. ನೀನೊದೆದುದು ಬೆಡಗಾಯ್ತು ಶೀಲನಿಧಾನ." ಎಂದು ಹೇಳುತ್ತಾಳೆ. ರಾಜನನ್ನು ಶ್ಲಾಘಿಸುವುದರ ಜೊತೆಗೆ ರಾಣಿಯ ಖೇದವನ್ನೂ ಹೋಗಲಾಡಿಸುತ್ತಾಳೆ. ಮತ್ತೊಬ್ಬ ರಾಣಿ ಮುತ್ತೊಂದನ್ನು ತಂದು ಭರತನಲ್ಲಿ ಕಾಣಿಕೆಯಿತ್ತಳು. ಅದನ್ನು ಕಂಡು ಪಂಡಿತೆಯ ಸಮಯಸ್ಫೂರ್ತಿ ಜಾಗ್ರತವಾಗುತ್ತದೆ. 'ವದನ ವದನ ಸೊಂಕಿ ಮುತ್ತ ಕೊಡುವುದು ಲೋಕದೊಳುಂಟು ಭರತಚಕ್ರೇಶ. ಇದು ಚಿತ್ರ, ಕರಯುಗ ಸೋಂಕಿ ಮುತ್ತೀವುದೆಂ'ದು ಹೇಳಿ ಎಲ್ಲರನ್ನೂ ಹರ್ಷಗೊಳಿಸಿದಳು.

ಭರತಚಕ್ರೇಶ್ವರನು ತನ್ನ ಮೋಹದ ಮಡದಿ ಕುಸುಮಾಜಿಯು ರಚಿಸಿದ್ದ 'ರಾಜಲಾವಣ್ಯ' ಕಾವ್ಯವನ್ನು ಕೇಳಿ, ಅದನ್ನು ಬರೆದು ಓದಿದ ಅಮರಾಜಿ ಸುಮನಾಜಿಯರಿಗೆ ಮೆಚ್ಚೀಯಲು ಯತ್ನಿಸಿದಾಗ, ಅದು ಅಗತ್ಯವಿಲ್ಲವೆಂದು ರಾಣಿಯರೆಲ್ಲರೂ ಕಾಲ್ಕೆರಗುವರು. ರಾಣಿಯರಲ್ಲಿರುವ ಪರಸ್ಪರ ಅಭೇದಭಾವವನ್ನು ಅರಿತಿದ್ದರೂ ರಾಜನು ಅದರ ಅರ್ಥವನ್ನು ಅರಿಯದವನಂತೆ ನಟಿಸಲು, ಪಂಡಿತೆ 'ಒರ್ವರೊರ್ವರಿಗೆರವಿಲ್ಲ, ತಮ್ಮೊಳು ಸ್ನೇಹ ಪರ್ವಿಯೊಂದಾಗಿಹರರಸ.' ಎಂದು ಆತನಿಗೆ ಸಮಾಧಾನ ಹೇಳುತ್ತಾಳೆ. ಚುರುಕು ಬುದ್ಧಿಯ ಆ ಮುದುಕಿಗೆ ರಾಜನ ನಟನೆ ಅರ್ಥವಾಗದೆ ಹೋಗಿಲ್ಲ. 'ಅರಿಯೆಯಾ ನೀನಿದ ನಗೆಕಾರ! ಬಗೆಕಾರ! ಮರೆಕಾರ! ಬಲುಟೊಳ್ಳಕಾರ!' ಎಂದು ಆತನ ಹುರುಳನ್ನು ಬಯಲಿಗೆಳೆಯುತ್ತಾಳೆ. 'ಸಾಕೆಮ್ಮ ದೇವಿಯರೆರಗಿ ಹೊತ್ತಾಯ್ತು. ಪರಾಕು ಬೇಡೇಳರೆಂದೆನ್ನ.' ಎಂದು ಝಂಕಿಸಿ ನುಡಿಯುತ್ತಾಳೆ. ಆಗ ರಾಜನು ಆಕೆಯ ಅಪ್ಪಣೆಯಂತೆ ಎಲ್ಲರನ್ನೂ ಏಳಹೇಳಿ ಅಮರಾಜಿ ಸುಮನಾಜಿಯರಿಗೆ ಆಲಿಂಗನದ ಮೆಚ್ಚಿತ್ತು ಸನ್ಮಾನ ಮಾಡುತ್ತಾನೆ. ಆದರೆ ಕುಸುಮಾಜಿ ಇದಕ್ಕೂ ಹೆಚ್ಚಿನ ಆದರಕ್ಕೆ, ಗೌರವಕ್ಕೆ ಅರ್ಹಳು. ಆದುದರಿಂದ ಆದಿನವನ್ನೆಲ್ಲಾ ಅವಳ ಮನೆಯಲ್ಲಿಯೇ—ಅವಳ ಸಹವಾಸದಲ್ಲಿಯೇ—ಕಳೆಯಬೇಕೆಂಬ ಆಸೆ. ತಾನೇ ಆ ನುಡಿಯನ್ನು ಬಾಯ್ಬಿಟ್ಟು ಹೇಳಲು ಸ್ವಲ್ಪ ಸಂಕೋಚ. ಅದಕ್ಕಾಗಿ ಪಂಡಿತೆಯನ್ನು

ಕುರಿತು ' ಪಂಡಿತೆ ! ನಾವೆಮ್ಮ ಮನೆಯೊಳಿದ್ದನ್ನವ ಕೊಂಡರೊಳ್ಳಿತೊ ? ಭುಕ್ತಿಗೆಮ್ಮ ಪೆಂಡಿರೊಳೊರ್ವಳ ಮನೆಗೆ ಹೋಹುದು ಲೇಸೊ ? ' ಎಂದು ಕೇಳಿದ. ಇಂಗಿತಜ್ಞಳಾದ ಪಂಡಿತೆ ಆಲೋಚಿಸಿ ಹೇಳುವವಳಂತೆ ನಟಿಸಿ ' ಒಡೆಯ ! ಬಿನ್ನಹವಿಂದು ಕುಸುಮಾಜಿಯರಮನೆಗಡಿಯಿಟ್ಟರುತ್ತಮ ವೆಂದು ' ಹೇಳಿದಳು. ಆದರೆ ಕುಸುಮಾಜಿಯ ಮನೆಗೇ ಏಕೆ? ಪ್ರಶ್ನೆ ಯೇಳಲು ಪಂಡಿತೆ ಅವಕಾಶವನ್ನೇ ಕೊಡುವುದಿಲ್ಲ. ' ಹೊಸ ಕಾವ್ಯ ಮೂವರಿಂ ದಾದುದಿಬ್ಬರನೆ ಮನ್ನಿಸಿದೆಯಿನ್ನೊಬ್ಬಳಿಗಿಲ್ಲ. ಅಸಿಯಳ ಮನೆಗೆಯ್ದಿ ಮನ್ನಿ ಪುದುಚಿತ. ' ರಾಯನ ರೊಟ್ಟಿಯನ್ನು ಜಾರಿಸಿ ತುಪ್ಪದಲ್ಲೇ ಹಾಕಿದಳು ಆ ಜಾಣೆ. ರಾಜನು ಈ ಮಾತುಗಳನ್ನು ಕೇಳಿ ' ಎದೆಯೊಳಾನಂದ, ಮುಖ ದೊಳಿಷ್ಟು ಮಾಂದ್ಯಭಾವದೊಳೊಡಬಟ್ಟ. ' ಇವರ ಸಂಭಾಷಣೆಯ ಕಾಲದಲ್ಲಿ ಕುಸುಮಾಜಿ ನಾಚಿಕೆಯೊಡನೆ ಸಂತೋಷವನ್ನು ಬೆರಸಿ ಸವಿಯುತ್ತಾ, ತಲೆ ಬಾಗಿ ನಿಂತಿದ್ದಾಳೆ. ಪಂಡಿತೆ ಅವಳ ಮನಸ್ಥಿತಿಯನ್ನರಿತು ' ಅಮ್ಮ ! ರಾಯ ನಿಗಿಂದು ನಿನ್ನರಮನೆಯಲ್ಲಿ ಸಮ್ಮಾನ. ಮುಂದೆ ನೀನೆಯ್ದಿ, ಜಮ್ಮನೆ ಜೋಕೆ ಮಾಡೆಂದಳು. '

ಪಂಡಿತೆಯ ಪಾತ್ರ ಒಳ್ಳೆಯ ಭಕ್ಷ್ಯಭೋಜ್ಯದ ನಡುವೆ ಉಪ್ಪಿನ ಕಾಯಿ ಇದ್ದ ಹಾಗೆ. ಸುಂದರವಾದ ಶೃಂಗಾರಮಯ ಸನ್ನಿವೇಶಗಳಲ್ಲಿ ಅವ ಳಾಡುವ ಒಂದೊಂದು ನುಡಿಯೂ ಎಷ್ಟೋ ಅಚ್ಚುಮೆಚ್ಚಾಗಿದೆ.

। ರತ್ನಾಕರನ ಸೃಷ್ಟಿಯಲ್ಲಿನ ಪಾತ್ರಗಳೆಲ್ಲವೂ ಸುಂದರವಾಗಿವೆ ; ಸಜೀವ ವಾಗಿವೆ. ಆತನ ಮಂತ್ರಶಕ್ತಿಗೆ ಒಳಗಾಗಿ ನಗುತ್ತವೆ, ಕುಣಿಯುತ್ತವೆ, ಕೆರಳು ತ್ತವೆ. ಅಸದೃಶವಾದ ಆತನ ಅನುಭವಶಕ್ತಿಯಿಂದ ಕಳೆಗೊಂಡು ಕಳ ಕಳಿಸುತ್ತವೆ. ।

ಕಾವ್ಯದಲ್ಲಿ ಅಂತರ್ಗತವಾಗಿರುವ ಸಾಮಾಜಿಕ ಚಿತ್ರ

'ಸಾಹಿತ್ಯ ಜೀವನದ ಪ್ರತಿಬಿಂಬ.' ಕವಿಯು ತಾನು ಕಂಡು ಅನುಭವಿಸಿದ ಸುಂದರ ಸನ್ನಿವೇಶಗಳನ್ನು ಮನಸ್ಸಿನ ಮೂಲೆಯಲ್ಲಿ ರಾಶಿ ಹಾಕಿಕೊಂಡು, ತನಗೆ ಬೇಕಾದಾಗ ಬೇಕಾದುದನ್ನು ಆ ಉಗ್ರಾಣದಿಂದ ಬೈಲಿಗೆ ತರುತ್ತಾನೆ. ಹಾಗೆ ತರುವುದಕ್ಕೆ ಮುಂಚೆ ಅವುಗಳನ್ನು ತನ್ನ ಪ್ರತಿಭೆಯಿಂದ ಉಜ್ಜಿ ಉಜ್ವಲಗೊಳಿಸುತ್ತಾನೆ; ತನ್ನ ವಿದ್ವತ್ತಿನ ಅಡಿಗಲ್ಲಮೇಲೆ ಅವುಗಳ ಅಂಕುಡೊಂಕುಗಳನ್ನು ಸವರಿ ನೇರಮಾಡುತ್ತಾನೆ; ಆದರ್ಶದ ಮೆರಗು ಹಾಕುತ್ತಾನೆ. ಆಗ ಅದು ಉತ್ತಮ ಕಾವ್ಯವಾಗುತ್ತದೆ. ರತ್ನಾಕರನು ತನ್ನ ಕಾವ್ಯರತ್ನದಲ್ಲಿ ತಂದಿರುವ ಹಲವು ಸುಂದರ ಸನ್ನಿವೇಶಗಳಿಗೆ, ಅವನು ಕಂಡು ಅನುಭವಿಸಿದ ಸಮಾಜ ಚಿತ್ರಗಳು ಪ್ರೇರಕವಾಗಿರಬೇಕು; ಬಗೆಗಣ್ಣಿನಿದುರು ಕುಣಿಯುತ್ತಿದ್ದ ಆ ಚಿತ್ರಗಳನ್ನು ತನ್ನ ಕಾವ್ಯದಲ್ಲಿ ಚಿತ್ರಿಸಿರಬೇಕು. ತಾನು ಸ್ವತಃ ರಾಜನ ಮಗ. ಆತನು ಯಾವುದಾದರೊಂದು ಚಿಕ್ಕ ಸಂಸ್ಥಾನಕ್ಕೆ ರಾಜನಾಗಿದ್ದರೂ ಇದ್ದಿರಬಹುದು. ರಾಜಾಸ್ಥಾನದ ಹಲವು ಆಗುಹೋಗುಗಳನ್ನು ಆತನು ಕಣ್ಣಾರ ಕಂಡಿರುವನೆಂಬುದಂತೂ ನಿರ್ವಿವಾದ. ಅಲ್ಲಿಯ ಸಂಪತ್ತು, ಶೃಂಗಾರ, ವೈಭವ, ವೈಖರಿಗಳೆಲ್ಲವೂ ಆತನ ಕಾವ್ಯದಲ್ಲಿ ಹೆಪ್ಪುಗಟ್ಟಿ ಕುಳಿತಿವೆ. ಅವ್ಯಾಹತವಾದ ಅಸದೃಶ ಸಂಪತ್ತಿನಿಂದ ಕೂಡಿ, ಕನ್ನಡ ನಾಡಿನ ಕೀರ್ತಿ ಧ್ವಜವನ್ನು ಮುಗಿಲು ಮುಟ್ಟಿಸಿದ್ದ ವಿಜಯನಗರ ಸಾಮ್ರಾಜ್ಯದ ಭವ್ಯಚಿತ್ರವು ಕವಿಯ ಕಣ್ಣೆದುರಿಗಿರುವಂತೆ ತೋರುತ್ತದೆ ಆತನು ಕಾವ್ಯಕರ್ಮಕ್ಕೆ ಕೈಹಾಕಿರುವಾಗ. ಆ ರಾಜ್ಯದ ಜನರ ರಸಿಕತೆಗೆ ಕೊನೆಮೊದಲುಂಟೆ? ಅವರ ಭೋಗ ವೈಭವಕ್ಕೆ ಕೊರತೆಯುಂಟೆ? ಅವರ ಐಶ್ವರ್ಯಕ್ಕೆ ಎಲ್ಲೆಯುಂಟೆ? ಇದನ್ನು ಕಣ್ಣಾರ ಕಂಡು, ಮನಸಾರ ಸವಿದು, ಹೊನಲಾಗಿ ಉಕ್ಕಿಸಿರುವುದೇ 'ಭರತೇಶ ವೈಭವ'ವೆಂದು ತೋರುತ್ತದೆ.

ವಿಜಯನಗರಸಾಮ್ರಾಜ್ಯದ ವೈಭವವನ್ನು, ರಸಿಕತೆಯನ್ನು—ಹಲವು ಚರಿತ್ರಕಾರರು ಮುಕ್ತಕಂಠರಾಗಿ ಹೊಗಳಿದ್ದಾರೆ. ಅವರ ಭೋಗ ಸಾಮಗ್ರಿ

ಗಳ ವರ್ಣನೆ ಚರಿತ್ರೆಯಾದರೂ ಕಾಲಿಲ್ಲದ ಕಥೆಯಂತೆ ಭಾಸವಾಗುತ್ತದೆ. ರಾಜನ ಅಂತಃಪುರವೆಂದರೆ ಗಂಡುನೊಣ ಕೂಡ ನುಸುಳಲಸಾಧ್ಯವಾದ ಪ್ರಮೀಳಾ ಸಾಮ್ರಾಜ್ಯ. ಅರಮನೆಯ ಹೊರಗೆ ರಾಜನ ರಾಜ್ಯಾಡಳಿತವಿರುವಂತೆ ಅರಮನೆಯ ಒಳಗೆ ಸ್ತ್ರೀ ಸಾಮ್ರಾಜ್ಯ. ರಾಜನಿಗಿರುವಂತೆ ರಾಣಿಗೂ ಸಚಿವರು ಸೇವಕರು ಅಸಂಖ್ಯಾತರಾಗಿರುತ್ತಾರೆ. ರಾಜನು ಹಲವು ಸಾಮಂತರಿಗೆ ಅಧಿಪತಿಯಾಗಿರುವಂತೆ ಪಟ್ಟದರಾಣಿ ಹಲವು ರಾಣಿಯರಿಗೆ ಹಿರಿಯಳು. ರಾಣಿಯೊಬ್ಬಳು ತನ್ನ ಮಹಲಿನಿಂದ ಹೊರಗೆ ಕಾಲಿಟ್ಟಳೆಂದರೆ ಇಪ್ಪತ್ತೈದು ಮೂವತ್ತು ಜನ ವೇತ್ರಧಾರಿಣಿಯರು ಭುಜಗಳ ಮೇಲೆ ಚಾವಟಿಗಳನ್ನು ಹಾಕಿಕೊಂಡು ಹೊರಗೆ ಬರಬೇಕು. ಅವರ ಹಿಂದೆ ಮಂಗಳ ವಾದ್ಯಗಳನ್ನು ಬಾರಿಸುತ್ತಾ ಹಲವು ಮಂಗಳಾಂಗಿಯರು ; ಅವರನ್ನು ಅನುಸರಿಸಿ ಸುಮಾರು ಇಪ್ಪತ್ತು ಜನ ರಜತವೇತ್ರಧಾರಿಣಿಯರಾದ ಸ್ತ್ರೀ ಭಟರು, ಅವರ ಕಾಪಿನಲ್ಲಿ ರತ್ನಖಚಿತವಾದ ಬಂಗಾರದ ಕಳಶಗಳನ್ನು ಹೊತ್ತು ಸುರಸುಂದರಿಯರಾದ ಅರವತ್ತು ಜನ ಚೇಟಿಯರು ಬರುವರು. ಎಲ್ಲಕ್ಕೂ ಹಿಂದೆ ರಾಣಿಯ ಸವಾರಿ. ಇಂತಹ ರಾಣಿಯರು ಐನೂರು ಆರುನೂರು ಜನ. ಈ ರಾಣಿಯರಲ್ಲದೆ ರಾಜನ ಪ್ರೇಮಕ್ಕೆ, ಕಾಮಸಂತೃಪ್ತಿಗೆ ಮೀಸಲಾದ ಹಲವು ವಿಲಾಸವತಿಯರು. ಒಟ್ಟು ಅರಮನೆಯ ಜನಗಣತಿ ಹನ್ನೆರಡು ಸಹಸ್ರ. ಇದರಲ್ಲಿ ಪುರುಷ ವ್ಯಕ್ತಿ ರಾಜನೊಬ್ಬನೇ ! ಅಸಂಖ್ಯಾತ ತಾರೆಗಳ ಮಧ್ಯದ ಉಡುರಾಜ. ರತ್ನಾಕರನ ಸೃಷ್ಟಿಯಲ್ಲಿ ಕಂಡುಬರುವ ಎಲ್ಲ ಬಗೆಯ ಪ್ರಮದೆಯರೂ ಇವರಲ್ಲಿ ಉಂಟು. ಸಂಗೀತ ನರ್ತನಗಳಿಂದ ಹಿಡಿದು ಕತ್ತಿ ಗುರಾಣಿಗಳನ್ನು ಧರಿಸಿ ಕುಸ್ತಿ ಮಾಡುವವರವರೆಗೆ—ಜ್ಯೋತಿಷಿಯರು, ಭವಿಷ್ಯವಾದಿಗಳು, ಕರಣಿಕರು, ಪಹರೆಯವರು, ಮಂತ್ರಾಲೋಚಕರು, ವೈದ್ಯರು, ವಿದುಷಿಯರು, ನ್ಯಾಯಾಧಿಪತಿಗಳು—ಎಲ್ಲರೂ ಸ್ತ್ರೀಯರೇ.

ಕುಸುಮಾಜಿ ಭರತನಿಗೆ ಊಟ ಮಾಡಿಸುವ ದೃಶ್ಯ ವಿಜಯನಗರದ ಸಾಮ್ರಾಜನ ಭೋಜನ ಸಮಾರಂಭದ ಮಾರ್ಪೊಳಪೇ. ರಾಜನು ಊಟ ಮಾಡುವಾಗ ಎಲ್ಲರೂ ಹೊರಟು ಹೋಗಬೇಕು. ಆ ದಿನದ ಅಚ್ಚುಮೆಚ್ಚಿನ ರಾಣಿಯೊಡನೆ ಒಬ್ಬರಿಬ್ಬರು ಸಖಿಯರಿದ್ದರೆ ಸಾಕು. ಮೂರು ಕಾಲಿನ

ಬಂಗಾರದ ಒಂದು ಅಡ್ಡಣಿಗೆ; ಅದರ ಮೇಲೆ ರತ್ನಖಚಿತವಾದ ಬಂಗಾರದ ತಾಟು; ಅಡಿಗೆಯ ಸಾಮಾನುಗಳೆಲ್ಲಾ ಬಂಗಾರದವೇ; ವ್ಯಂಜನ ವಸ್ತು ಗಳಿಗೆ ರತ್ನಖಚಿತವಾದ ಬಂಗಾರದ ಪಾತ್ರೆಗಳು. ರಾಣಿಯೇ ಸ್ವತಃ ಕೈಮುಟ್ಟಿ ರಾಜನಿಗೆ ಊಟ ಮಾಡಿಸಬೇಕು. ಊಟವಾದನಂತರ ಕೈತೊಳೆದು, ಮೇಲ ಕ್ಕೆಬ್ಬಿಸಿ ಶಯನಾಗಾರಕ್ಕೆ ಕೈಹಿಡಿದು ಕರೆದೊಯ್ಯಬೇಕು. ಹೀಗೆಯೇ ರತ್ನಾ ಕರನ ಕಾವ್ಯ ಪ್ರಪಂಚದಲ್ಲಿ ಕಾಣಬರುವ ರಾಜನ ಅಂತಃಪುರದ ಒಡ್ಡೋಲ ಗವೂ ವಿದ್ಯಾನಗರದ ಅಂತಃಪುರಕ್ಕೆ ಸೇರಿದುದೇ.

ವಿಜಯನಗರದ ರಾಜ್ಞಿಯರು ಸಾಹಿತ್ಯಾಕಾಶದ ಧ್ರುವತಾರೆಗಳಾಗಿ ಬೆಳ ಗಿದವರು. 'ರಾಜ ಲಾವಣ್ಯ' ಕಾವ್ಯವನ್ನು ಕುಸುಮಾಜಿ ಕಾವ್ಯಪ್ರಪಂಚ ದಲ್ಲಿ ರಚಿಸಿದ್ದರೆ, ರಾಮಭದ್ರಾಂಬೆ ತನ್ನ ಇನಿಯನಾದ ರಘುನಾಥನ ಹೆಸರಿ ನಲ್ಲಿ 'ರಘುನಾಥಾಭ್ಯುದಯ' ವನ್ನು ಬರೆದಳು. ತಂಜಾವೂರಿನ ರಾಜನಾದ ಈ ರಘುನಾಥರಾಯ ತನ್ನ ರಾಜಧಾನಿಯಲ್ಲಿ ಆಸ್ಥಾನದ ವಿದುಷಿಯರನ್ನೆಲ್ಲಾ ಕರೆಸಿ ಒಂದು ಪರೀಕ್ಷೆ ನಡೆಸಿದನಂತೆ! ಚಿತ್ರ, ಬಂಧ, ಗರ್ಭ, ಆಶುಕವಿತೆ ಗಳಲ್ಲಿ ನಿಷ್ಣಾತರಾದ ಹಲವು ರಮಣೀ ರತ್ನಗಳು ಇದರಲ್ಲಿ ಭಾಗವಹಿಸಿದ್ದರಂತೆ. ಘಂಟೆಗೆ ನೂರು ಪದ್ಯಗಳನ್ನು ನಿರ್ಮಿಸಬಲ್ಲ ಶತಲೇಖನೀವಿದ್ಯಾ ನಿಪುಣೆ ಯರೂ, ಅಷ್ಟಭಾಷಾ ಪ್ರವೀಣೆಯರೂ ಆದ ಅವರನ್ನು ಕಂಡೇ ರತ್ನಾಕರನ ಕಾವ್ಯಕರ್ಮ ಅಷ್ಟು ಕಳೆಗೊಂಡಿರುವುದು. ರಘುನಾಥ ರಾಜನ ಕೊಡುಗೈಯ ಫಲವಾಗಿ ಲಲಿತಕಲೆಗಳು ದಾಂಗುಡಿಯಿಟ್ಟು ಹಬ್ಬಿ ಹರಡಿಹೋದವು. ಗಾನ ಕುಶಲರನ್ನೂ, ವೀಣೆ ರಾವಣಹಸ್ತಾದಿ ತಂತ್ರೀವಾದ್ಯ ವಾದಕರನ್ನೂ ಆತ ಪರೀಕ್ಷಿಸಿ ಅರ್ಹರಾದವರಿಗೆ ಕನಕಾಭಿಷೇಕದಿಂದ ಗೌರವಿಸಿದನಂತೆ! ಸಂಗೀತ ಮಾತ್ರವಲ್ಲದೆ ನರ್ತನದಲ್ಲಿಯೂ ಆತನಿಗೆ ಅತಿಶಯವಾದ ಅಭಿರುಚಿಯಿತ್ತು. ಸುಸಂಸ್ಕೃತರಾದ ಸ್ತ್ರೀಯರ ನರ್ತನಗಳನ್ನು ಆಗಾಗ ಏರ್ಪಡಿಸಿ ಪ್ರೋತ್ಸಾಹಿ ಸುತ್ತಿದ್ದ ಆತನನ್ನು, ನರ್ತನದ ಒಂದು ರೂಪಕ್ಕೆ 'ರಘುನಾಥ ವಿಲಾಸ'ವೆಂದು ಹೆಸರಿಟ್ಟು, ಗೌರವಿಸಿದರಂತೆ!

ರತ್ನಾಕರನ ಕಾವ್ಯದಲ್ಲಿ ಬರುವ ನಾಟ್ಯಾಂಗನೆಯರಾದರೂ ವಿಜಯ ನಗರದ ವೇಶ್ಯೆಯರೇ! ವೇಶ್ಯೆಯರ ಸುದ್ದಿ ಬರದೆ ವಿಜಯನಗರದ ಸ್ತ್ರೀಯರ

ಚರಿತ್ರೆ ಸಂಪೂರ್ಣವಾಗದು. ಬಂಗಾರದ ಹೊಗೆಯಾಡುತ್ತಿದ್ದ ಆ ನಗರಕ್ಕೆ ಅದು ಅವಶ್ಯವಾಗಿತ್ತೊ ಏನೊ! ಅಬ್ದುಲ್ ರಜಾಕ್ ಎಂಬ ಚರಿತ್ರಕಾರನು ಹೇಳುವಂತೆ ಹನ್ನೆರಡು ಸಹಸ್ರ ಪೋಲೀಸಿನವರಿಗೆ ಸಂಬಳ ಕೊಡುವಷ್ಟು ಹಣ ವೇಶ್ಯೆಯರ ತಲೆಗಂದಾಯದಿಂದ ವಸೂಲಾಗುತ್ತಿತ್ತಂತೆ! ಇದರಿಂದ ಅವರ ಬಾಹುಳ್ಯದ ಜೊತೆಗೆ ಅವರ ಐಶ್ವರ್ಯವೂ ವ್ಯಕ್ತವಾಗುತ್ತದೆ. ಮುನ್ನೂರು ಗಜ ಉದ್ದವೂ ಇನ್ನೂರು ಗಜ ಅಗಲವೂ ಉಳ್ಳ ಒಂದು ದೊಡ್ಡ ರಸ್ತೆ. ಅದರ ಇಕ್ಕೆಲಗಳಲ್ಲಿಯೂ ಗಗನಚುಂಬಿತಗಳಾದ ಸೌಧಗಳು. ರಸ್ತೆಯ ಎರಡು ಕೊನೆಯಲ್ಲಿಯೂ ದ್ವಾರದಲ್ಲಿ ಸಿಂಹ, ಹುಲಿ, ಚಿರತೆಗಳ ಬೊಂಬೆಗಳು–ಜೀವಸಹಿತವಾದವುಗಳೋ ಎಂಬ ಭ್ರಾಂತಿಯನ್ನು ಹುಟ್ಟಿಸುವಂತೆ ಸುಂದರವಾಗಿ ಬಣ್ಣ ಹಾಕಿದವುಗಳು. ರಸ್ತೆಗೆಲ್ಲಾ ಪನ್ನೀರು ಚೆಲ್ಲಿದೆ. ಪ್ರತಿಯೊಂದು ಸೌಧದ ಮುಂದುಗಡೆಯೂ ಸಂಗಮವರೀ ಕಲ್ಲಿನಿಂದ ಮಾಡಿದ ಆಸನಗಳು. ಈ ಮನೆಗಳ ಬಾಗಿಲುಗಳಲ್ಲಿ ಪರಿಪರಿಯಾಗಿ ಅಲಂಕೃತವಾದ ಕುರ್ಚಿಗಳ ಮೇಲೆ ವೇಶ್ಯೆಯರು ಕುಳಿತಿರುವರು. ಪ್ರತಿಯೊಬ್ಬರೂ ಕೈತೊಳೆದು ಮುಟ್ಟಬೇಕಾದಂತಹ ತರುಣಿಯರಾದ ಸುರಸುಂದರಿಯರು. ಒಬ್ಬೊಬ್ಬಳೂ ಮುತ್ತು, ರತ್ನಗಳ ಅಮೂಲ್ಯ ಆಭರಣಗಳಿಂದ ಅಲಂಕೃತಳಾಗಿರುವಳು. ಒಬ್ಬೊಬ್ಬಳ ಬಳಿಯಲ್ಲಿಯೂ ಒಬ್ಬರಿಬ್ಬರು ಸುಂದರವಾಗಿ ಅಲಂಕೃತರಾದ ಸೇವಕಿಯರು—ಬಂದವರನ್ನು ಆಹ್ವಾನಿಸಲು ಮತ್ತು ಉಲ್ಲಾಸಗೊಳಿಸಲು. ಈ ವೇಶ್ಯೆಯರೆಲ್ಲರೂ ಹಬ್ಬ ಹರಿದಿನಗಳಲ್ಲಿ ಸಕಲಾಭರಣಭೂಷಿತೆಯರಾಗಿ ರಾಜನೆದುರು ನರ್ತನ ಮಾಡುವರು. ಆಗ ರಾಜನೆದುರು ತಾಂಬೂಲವನ್ನು ಸವಿಯಬಹುದು ಸಹ. ಅದರಲ್ಲಿಯೂ ಮಹಾನವಮಿಯ ಹಬ್ಬವೆಂದರೆ ಆದಿನ ರಸಿಕತೆಯ ಸೂರೆಯಾಗಿಹೋಗುತ್ತಿತ್ತು.

ರತ್ನಾಕರ ಕವಿ ತನ್ನ ಕಾವ್ಯದಲ್ಲಿ ಅಮರವಾಗಿ ಮಾಡಿರುವ ಮಹಾನವಮಿಯ ಹಬ್ಬ ವಿಜಯನಗರದ ವೈಭವದ ವರ್ಣನೆಯೇ ಆಗಿದೆ. ಅದು ಒಂದು ಮತಸಂಬಂಧವಾದ ಹಬ್ಬವಾಪರೂ ಅದಕ್ಕೆ ರಾಜಕೀಯದ ಕಳೆ ಬಂದಿತ್ತು. ದೇಶದೇಶದ ಸಾಮಂತರಾಜರೆಲ್ಲರೂ ಕರ್ಣಾಟಕ ಸಿಂಹಾಸನಾಧಿಪತಿಗೆ ಕಪ್ಪಕಾಣಿಕೆಗಳನ್ನು ತಂದೊಪ್ಪಿಸುತ್ತಿದ್ದರು. ಉಪ್ಪರಿಗೆಯಲ್ಲಿ ರತ್ನ

ಸಿಂಹಾಸನದಮೇಲೆ ವಿರಾಜಿತನಾಗಿರುವ ಅಧಿರಾಜನ ಸುತ್ತಲೂ ಹಲವು ಚಿಕ್ಕಪುಟ್ಟ ರಾಜರು ಸಂದಣಿಸಿ ಕುಳಿತಿರುವರು. ರಾಜನ ಇದಿರಿಗೆ ಯೋಧರ ಪ್ರದರ್ಶನ, ಕುಸ್ತಿ ಕಾಳಗಗಳು—ನಡೆಯುವುವು. ಕಥೆಗಾರರು, ಸಂಗೀತಗಾರರು, ತಮ್ಮ ಕೌಶಲ್ಯದಿಂದ ರಾಜನನ್ನು ರಮಿಸುವರು. ಸಂಗೀತ ನರ್ತನಗಳಿಗಿದ್ದ ಗೌರವವಂತೂ 'ನಭೂತೋ ನಭವಿಷ್ಯತಿ.' ಎಳೆವರೆಯದ ಸುರಸುಂದರಿಯರು ನರ್ತಕಿಯರು. ಅವರ ಇದಿರಿಗೆ ತೆಳುವಾದೊಂದು ಪರದೆ. ಪರದೆ ಹಾರಿದೊಡನೆಯೇ ನಯ ನುಣುಪುಗಳಿಂದ ಹೆಜ್ಜೆಯಿಕ್ಕುತ್ತಾ ಹಾವಭಾವ ವಿಲಾಸ ವಿಭ್ರಮಗಳಿಂದ ನೋಡುಗರ ಬುದ್ಧಿಯನ್ನು ಸೂರೆಗೊಳ್ಳುವ ನರ್ತಕಿಯರು. 'ಸಂಜೆಗೆಂಪೊಲೆವಂತೆ ತೆರೆ ತೊಲಗಿತು ಕಣ್ಗೆ ಕಂಜಾಕ್ಷಿಯರು ಕಾಣಿಸಿದರು.' ಎಂಬ ಕವಿಯ ಮಾತನ್ನು ಸಾರ್ಥಕಗೊಳಿಸುವರು. ಸಂಗೀತ ನರ್ತನಗಳ ಆತನ ಅಲೌಕಿಕ ವರ್ಣನೆಗೆ ಉಗಮಸ್ಥಾನ ಇದೇ.

ಕವಿಯು ಸಮಾಜವನ್ನು ಪ್ರತಿಬಿಂಬಿಸುವುದರ ಜೊತೆಗೆ ಸಮಾಜವನ್ನು ರೂಪುಗೊಳಿಸುವ ಕೆಲಸವನ್ನೂ ತಕ್ಕಮಟ್ಟಿಗೆ ನಡೆಸುತ್ತಾನೆ. ಜನರ ಆಸೆ ಅಭಿರುಚಿಗಳನ್ನು ತಕ್ಕಮಟ್ಟಿಗೆ ನೇರ್ಪುಗೊಳಿಸುತ್ತಾನೆ. ರತ್ನಾಕರನು ತನ್ನ ಕಾವ್ಯದಲ್ಲಿ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿ ಸಮಾಜದಲ್ಲಿ, ಸಂಸಾರದಲ್ಲಿ ಅವರ ಸ್ಥಾನಮಾನಗಳೇನೆಂಬುದನ್ನು ಜನರಿಗೆ ತೋರಿಸಹೊರಟಿದ್ದಾನೆ. " ನ ಸ್ತ್ರೀ ಸ್ವಾತಂತ್ರ್ಯಮರ್ಹತಿ " ಎಂಬ ಮನುವಿನ ಮೂಲಮಂತ್ರದಿಂದ ಹಿಡಿದು 'ಸ್ತ್ರೀ ಶೂದ್ರಯೋಃ' ಎಂಬ ಶಾಂತಿ ಮಂತ್ರದವರೆಗೆ ಸ್ತ್ರೀ ಯೆಂಬುದೊಂದು 'ಹಾಸ್ಯುಂಡು ಬೀಸಿ ಒಗೆವ ಬಾಳೆಯೆಲೆ' ಯೆಂಬ ಭಾವನೆ ನಮ್ಮ ಜನತೆಯಲ್ಲಿ ಬೆಳೆದು, ಬಲಿತು, ಬೇರೂರಿ ಹೋಗಿತ್ತೆಂದು ತೋರುತ್ತದೆ. ಸ್ತ್ರೀಯ ಸೃಷ್ಟಿ ತಾಯಿಯಾಗುವುದಕ್ಕೆ—ಎಂಬುದಕ್ಕಿಂತ ಹೆಚ್ಚು ಉದಾತ್ತ ದೃಷ್ಟಿ ನಮ್ಮ ಕವಿಗಳಿಗೆ, ಜನಕ್ಕೆ ಬಂದಂತೆ ತೋರುವುದಿಲ್ಲ. ರತ್ನಾಕರ ಕವಿ ಸ್ತ್ರೀಯರ ವಿಚಾರದಲ್ಲಿ ಹೆಚ್ಚು ಉದಾತ್ತ ದೃಷ್ಟಿಯುಳ್ಳವನಾಗಿದ್ದಾನೆ; ಹೆಚ್ಚು ಸಹಾನುಭೂತಿಯುತನಾಗಿದ್ದಾನೆ. ಸ್ತ್ರೀಯು ಬರಿಯ ಉಪಭೋಗವಸ್ತುವಷ್ಟೇ ಅಲ್ಲ. ಆಕೆಗೂ ಒಂದು ಆತ್ಮವಿದೆ. ಆ ಆತ್ಮವನ್ನು ಸಂತೋಷಗೊಳಿಸುವುದು ಪುರುಷನ ಧರ್ಮ. ಹೆಂಗಸು ಕಲಾಜೀವಿಯಾದರೆ ಗಂಡನನ್ನು

ಸಂತೋಷಪಡಿಸುತ್ತಾಳೆ. ಪುರುಷನು ಆಕೆಗೆ ತಕ್ಕ ಪರಿಕರಗಳನ್ನೂ ಆನುಕೂಲ್ಯಗಳನ್ನೂ ಒದಗಿಸಿ ಆಕೆಯ ಜೀವನವನ್ನು ಪರಿಪೂರ್ಣವಾಗಿ ಮಾಡಬೇಕು. ಭರತ ಚಕ್ರಿಯು ಇಂತಹ ಆನುಕೂಲ್ಯಗಳನ್ನೆಲ್ಲಾ ತನ್ನ ಹೆಂಡಿರಿಗೆ ಒದಗಿಸಿದ್ದನು. / ಅವನ ಹೆಂಡಿರೆಲ್ಲರೂ ಪಂಡಿತೆಯ ಸಹಾಯದಿಂದ ಕಾವ್ಯಾಲಂಕಾರಗಳನ್ನು ಅರಿತು, ಹಲವು ಕಲೆಗಳಲ್ಲಿ ಪ್ರತ್ಯುತ್ಪನ್ನಮತಿಗಳಾಗಿರುವವರು. ಕುಸುಮಾಜಿಯ ಕಾವ್ಯಕಲೆಯೂ ವೀಣಾವಾದನವೂ ಸಂಗೀತವೂ ಆಕೆಯ ಅಸಾಮಾನ್ಯ ಕುಶಲಮತಿಯನ್ನು ಪ್ರದರ್ಶಿಸುತ್ತವೆ. ಸಂಗೀತಕ್ಕೆ ಆಕೆಯಿಂದ ಆಕೆಗೆ ಸಂಗೀತದಿಂದ ಪ್ರಾಶಸ್ತ್ಯ ಬೆಳೆದಿರುವಂತೆ ತೋರುತ್ತದೆ. ಪದ್ಮಿನಿಯೇ ಮೊದಲಾದ ಹಲವು ಸ್ತ್ರೀಯರು ನಾಟ್ಯವಿದ್ಯೆಯಲ್ಲಿಯೂ ಅಭಿನಯ ಚಾತುರ್ಯದಲ್ಲಿಯೂ ಅದ್ವಿತೀಯ ಕಲಾಭಿಜ್ಞೆಯರಾಗಿದ್ದಾರೆ. ಸಂಗೀತ, ನಾಟ್ಯ, ಅಭಿನಯಗಳು ಆತನ ರಾಣಿಯರಿಗೆ ಕರತಲಾಮಲಕವಾಗಿವೆ. ಇದರಿಂದ ಆತನ ಜೀವನ ತುಂಬುಜೀವನವಾಗಿ ಸುಖಭರಿತವಾಗಿದೆ.

ಮಾನವನ ಮೋಕ್ಷ ಮಾರ್ಗದಲ್ಲಿ ಅಡ್ಡವಾಗಿರುವ ಒಂದು ದೊಡ್ಡ ಮುಳ್ಳುಬೇಲಿಯೇ ಸ್ತ್ರೀ; ಮಾನವನನ್ನು ಅಧೋಗತಿಯ ಹೆದ್ದಾರಿಯಲ್ಲಿ ನಾಗಾಲೋಟದಿಂದ ಸೆಳೆದೊಯ್ಯುವ, ನರಕದ ಅಗಾಧ ಮಡುವಿನಲ್ಲಿ ಎತ್ತಿ ಹಾಕುವ ಕುಟಿಲಗಾಮಿ ಆಕೆ; —ಎಂಬ ಸಂಪ್ರದಾಯಬದ್ಧವಾದ ಭಾವನೆಗಳ ಬುಡಕ್ಕೆ ಕೊಡಲಿ ಹಾಕಿದ್ದಾನೆ ರತ್ನಾಕರ.

ಚಕ್ರಿಯ ಸ್ತ್ರೀರತ್ನ ನರಕಕೊಯ್ವಳು ಎಂದು
ವಕ್ರದೊಳ್ಕಿಲಬರಾಡುವರು |
ಅಕ್ರಮವಾ ಮಾತು ಪರಸಿದ್ಧಾಂತ ವಾ |
ಕ್ಯಕ್ರಮವೊಂದುಂಟು ಕೇಳಿ ||

ಗಂಡ ಪಾಪಿಯಾದರೆ ಹೆಂಡತಿ ಪಾಪಿಯಾಗುತ್ತಾಳೆ.—
ದುರ್ಗತಿಗೆಯ್ದುವ ಚಕ್ರಿಯ ಸ್ತ್ರೀರತ್ನ |
ದುರ್ಗತಿಗೆಯ್ದುವಳ್ಪಹಜ |

ಆದರೆ—

ಸ್ವರ್ಗಕೆ ಮುಕ್ತಿಗೈದುವರ ಸ್ತ್ರೀರತ್ನ ಕೆ |
ಸ್ವರ್ಗವಂತಿದು ಸುಸಿದ್ಧಾಂತ ||

ಗಂಡಸಿನಂತೆ ಹೆಂಗಸಿಗಾದರೂ ಸದ್ಗತಿ ಸಾಧ್ಯ.

ಪುರುಷರ ಪರಿಣಾಮಕನುಸಾರಿಯಾದೊಂದು |
ಪರಿಣಾಮ ಸ್ತ್ರೀ ರತ್ನ ಕುಂಟು |
ಪುರುಷನೈದಿದಗತಿಯತ್ಯಲ್ಪ ದೂರ ಸಾ |
ರಿರುತಿಹಳವಳದರಿಂದ ||

'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ.' ಎಂಬ ಜಾತಿಗೆ ಸೇರಿದ ವ್ಯಕ್ತಿ ರತ್ನಾಕರ.

ರತ್ನಾಕರನ ವ್ಯಕ್ತಿತ್ವ

ರತ್ನಾಕರನ ಕವಿತಾ ಶಕ್ತಿಯನ್ನು ನೋಡಬೇಕಾದರೆ ಆತನು ಜಿನ ಸೇನಾದಿ ಇತರ ಕವಿಗಳ ಮಾರ್ಗವನ್ನು ಬಿಟ್ಟು ತಾನೇ ಪ್ರತ್ಯೇಕವಾಗಿ, ಸ್ವತಂತ್ರವಾಗಿ ಮಾಡಿಕೊಂಡಿರುವ ಮಾರ್ಪಾಟುಗಳನ್ನು ಗಮನಿಸಬೇಕು. ಇದು ಮುಖ್ಯವಾಗಿ ಭೋಗಸಂಧಿ. ಇದಲ್ಲದೆ ಕಾವ್ಯದಲ್ಲಿ ಬರುವ ಹಲವು ವರ್ಣನೆಗಳು ನಾವು ನೋಡಲು ಯೋಗ್ಯವಾದವುಗಳು. ಅವು ಮೂಲದ ಪಡಿಯಚ್ಚಲ್ಲ; ರತ್ನಾಕರನ ಸ್ವಂತ ಆಸ್ತಿ.

ನಮ್ಮ ಹಿಂದಿನ ಸಾಹಿತ್ಯದ ಬಹುಭಾಗ ಚರ್ವಿತಚರ್ವಣ—"ಹಾಡಿದ್ದೇ ಹಾಡುವ ಕಿಸುಬಾಯಿದಾಸನಂತೆ." ಸಂಪ್ರದಾಯದ ಕಲ್ಲುಕಟ್ಟಿಗೆ ಸಿಕ್ಕಿ ಸಾಹಿತ್ಯದ ಹೊಳೆ ನಿಂತ ನೀರಾಗಿದೆ. ನಡುವೆ ಹುಲುಸಾಗಿ ಬೆಳೆದುಕೊಂಡಿರುವ ಕವಿಸಮಯದ ಕುದರೆಯ ಗೊರಚಿ, ಮಲೆತ ನೀರಿನಲ್ಲಿ ಕೊಳಕು ನಾರುತ್ತದೆ. ಮಹಾಕಾವ್ಯದಲ್ಲಿ ಅಷ್ಟಾದಶಪುರಾಣಗಳಿರಬೇಕೆಂಬ ಸ್ವರ್ಣ ಶೃಂಖಲೆಗೆ ಪಂಪನಂತಹ ಪ್ರತಿಭಾವಂತನಾದ ಮಹಾಕವಿಯೂ ಒಳಗಾಗಿದ್ದಾನೆ; ಜಿನಸೇನನ ಮಹಾಪುರಾಣದಲ್ಲಿ ಇಲ್ಲದಿದ್ದರೂ, ತನ್ನ ಗ್ರಂಥದಲ್ಲಿ (ಆದಿಪುರಾಣ) ಯದ್ಭೋದ್ಯೋಗಕ್ಕೆ ಮುಂಚೆ ಜಲಕೇಳಿ, ವನವಿಹಾರಾದಿ ವರ್ಣನೆಗಳನ್ನು ಎಳತಂದಿದ್ದಾನೆ. ಕೆಲವು ವೇಳೆ ಇವುಗಳಿಗೆ ಔಚಿತ್ಯವನ್ನು ಕಲ್ಪಿಸುವುದು ಕೂಡ ಅಸಾಧ್ಯವಾಗುತ್ತದೆ. ರತ್ನಾಕರಕವಿಯ ಮನಸ್ಸಿಗೆ ಈ ಔಚಿತ್ಯದ ಕೊಲೆ ಹಿಡಿಸಲಿಲ್ಲವೆಂದು ತೋರುತ್ತದೆ. 'ಪ್ರಚುರದಿ ಪದಿನೆಂಟು ರಚನೆಯ ವಾಕ್ಯಕೆ | ರಚಿಸುವರಾನಂತು ಪೇಳಿ | ಉಚಿತಕೆ ತಕ್ಕಷ್ಟು ಪೇಳ್ವಿನಧ್ಯಾತ್ಮವೆ | ನಿಚಿತ ಪ್ರಯೋಜನವೆನಗೆ' ಎಂದು ಘಂಟಾಘೋಷವಾಗಿ ಹೇಳುತ್ತಾನೆ. ತನ್ನ ಗ್ರಂಥದಲ್ಲಿ ವರ್ಣನೆಗಳೇ ಇಲ್ಲವೆಂದಲ್ಲ. ಆದರೆ ಅವುಗಳಿಗೆ ಬಲವಂತ ಮಾಫೆಸ್ನಾನದ ದುರ್ದೆಶೆಯೇನೊ ಬಂದಿಲ್ಲ; ಸ್ವಾಭಾ

ವಿಕವಾಗಿವೆ. ಕಾವ್ಯವೆಂದೊಡನೆಯೇ ಸಮುದ್ರ ನಗರಗಳ ವರ್ಣನೆಯಿಂದ ಆರಂಭವಾದುದಾಗಿರಬೇಕೆಂಬ ಆವಶ್ಯಕತೆ ಈತನಿಗೆ ಅನಿವಾರ್ಯವೆಂದು ತೋರಲಿಲ್ಲ.

ಕವಿಯು ಗ್ರಂಥವನ್ನು ಬರೆಯುತ್ತಿರುವುದು ಜನರು ಅವುಗಳನ್ನು ಓದಿ, ರಸಾಸ್ವಾದನದಿಂದ ಸಂತೋಷಪಡಲೆಂದೇ ಹೊರತು ವಿದ್ವಜ್ಜನಗೋಷ್ಠಿಯಲ್ಲಿ ಬಿರುದುಬಾವಲಿಗಳನ್ನು ಸಂಪಾದಿಸುವುದಕ್ಕಲ್ಲ. ಮನಸ್ಸುಮಾಡಿದರೆ ತಾನೂ 'ಓದುಗಬ್ಬ' ವನ್ನು ಬರೆಯಬಲ್ಲ; ಇತರರಿಗಿಂತ ಪ್ರೌಢಿಮೆಯಲ್ಲಿ ತಾನೇನೂ ಕೀಳಲ್ಲ. ಬೇಕಾದರೆ ತನ್ನ ಕಾವ್ಯವನ್ನು ಹೆಪ್ಪುಗಟ್ಟಿದ ಪಾಂಡಿತ್ಯವಾಗಿ ಮಾಡಿ ಇರಿಸಬಲ್ಲ. ಅದರೆ ತನ್ನ ಗ್ರಂಥ ಕಬ್ಬಿನಂತಿರಬೇಕೇ ಹೊರತು ಬಿದಿರಂತೆ ಆಗ ಬಾರದು. ಅದಕ್ಕಾಗಿ 'ಹಾಡುಗಬ್ಬ' ವನ್ನು ರಚಿಸುತ್ತಿದ್ದಾನೆ. ತನ್ನ ಗ್ರಂಥವನ್ನು ಓದಿದರೆ 'ಅಯ್ಯಯ್ಯ! ಚೆನ್ನಾದುದು' ಎಂದು ಕನ್ನಡಿಗರು ಹೇಳುವುದಷ್ಟೇ ಅಲ್ಲ; ಅದನ್ನು ಅರ್ಥಮಾಡಿಕೊಂಡು ತೆಲುಗರು 'ರಯ್ಯಾ, ಮಂಚಿದಿ' ಎಂದೂ, ತುಳುವರು 'ಅಯ್ಯಯ್ಯ! ಎಂಚಪೋಲ್ದಾಂಡೆಂ' ದೂ ಹೇಳುವಷ್ಟು ಸುಲಭವಾಗಿರಬೇಕು, ಸುಲಲಿತವಾಗಿರಬೇಕು. ಅದಕ್ಕಾಗಿ 'ರಳ, ಕುಳ, ಶಿಥಿಲ, ಸಮಾಸ, ಮುಂತಾದ ವ್ಯಾಕರಣ ಪ್ರಕ್ರಿಯೆಗಳ 'ಕೋಟಲೆಯು' ತನ್ನ ಗ್ರಂಥದಲ್ಲಿಲ್ಲವೆಂದೂ, ಸಕಲ ಲಕ್ಷಣಗಳನ್ನು ತನ್ನ ಗ್ರಂಥದಲ್ಲಿ ತರಬೇಕೆಂಬ ಬಿರುದಿಗೆ ಬಿದ್ದು ಅದನ್ನು 'ಪುಸ್ತಕದ ಬದನೆಕಾಯಿ' ಮಾಡಲು ತನಗೆ ಇಷ್ಟವಿಲ್ಲವೆಂದೂ ಹೇಳಿಕೊಂಡಿದ್ದಾನೆ.

ರತ್ನಾಕರನ ಶೃಂಗಾರರಸ ನಿರೂಪಣೆಯೂ, ಸ್ತ್ರೀ ಪಾತ್ರ ಸೃಷ್ಟಿಯೂ ನೂತನ ರೀತಿಯದು. ಶೃಂಗಾರರಸ ನಿರೂಪಣೆಯಲ್ಲಿ ತನ್ನದೇ ಆದ ಒಂದು ಹೊಸ ಜೀವನ ತತ್ವವನ್ನೇ ಬೋಧಿಸ ಹೊರಟಿದ್ದಾನೆ; ಕವಿಯು ತತ್ವಜ್ಞನೂ ಆಗಿದ್ದಾನೆ. ಇತರ ಜೈನಕವಿಗಳು ಸಾಂಪ್ರದಾಯಿಕವಾಗಿ ಹೇಳುವಂತೆ ಈ ಪ್ರಪಂಚದ ಕ್ಷಣಭಂಗುರತೆಯನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕಾದರೂ, ದೂರದ ಫಲಗಳನ್ನು ನೆನೆದು ಕೈಲಿರುವುದನ್ನು ಎಸೆಯುವುದು ಮೂಢತನ; ಇಲ್ಲಿನ ಸುಖವನ್ನು ನಿರ್ದುಷ್ಟ ರೀತಿಯಲ್ಲಿ ಸಾಧ್ಯವಾದಷ್ಟು ಸವಿದು ಪರಮ ಸುಖದ ಕಡೆಗೆ ಕೈನಿಡೋಣ—ಎಂಬುದು ಈತನ ತತ್ವ.

ತನು ರೂಪು ವಿಭವ ಯೌವನ |
ಧನ ಸೌಭಾಗ್ಯಯುರಾದಿಗಳ್ಗಿಣೆ ಕುಡು ಮಿಂ |
ಚಿನ ಪೊಳೆಪು ಮುಗಿಲ ನೆಳಲಿಂ |
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ ||

ಎಂಬ ನಿರಾಶಾವಾದವನ್ನು ಖಂಡಿಸಿ ಯೋಗಭೋಗಗಳ ಸಾಮರಸ್ಯ ಸಿದ್ಧಾಂತವನ್ನು ಧೈರ್ಯದಿಂದ ಓದುಗರ ಮುಂದಿಡುತ್ತಾನೆ, ರತ್ನಾಕರವರ್ಣಿ. ಹಾಗೆಯೇ ಸ್ತ್ರೀಯರು ಮಾನವನನ್ನು ಸಂಸಾರದ ಸಾಗರದಲ್ಲಿ ಮೇಲಕ್ಕೇಳ ದಂತೆ ಮುಳುಗಿಸುವ ಹಿರಿಯ ಗುಂಡುಗಳೆಂಬ ಹೇಳಿಕೆಯನ್ನು ತಳ್ಳಿಹಾಕು ತ್ತಾನೆ. ಈತನಮಾತುಗಳು ಬರಿಯ ಗಿಳಿಯ ಮಾತುಗಳಲ್ಲ. ಆತನಿಗೆ ಜೀವನವು ಬರಿಯ ತಮಾಷೆಯಲ್ಲ. ಪರೀಕ್ಷೆಯಿಂದ, ದೀರ್ಘಾಲೋಚನೆಯಿಂದ ಅದರ ಯೋಗ್ಯತೆಯನ್ನು ಕಂಡುಹಿಡಿದು, ಅದನ್ನು ತನ್ನ ಕಥೆಯ ಮೂಲಕ ಲೋಕದಲ್ಲಿ ಹರಡಿ ಲೋಕಕಲ್ಯಾಣವನ್ನು ಸಾಧಿಸಬೇಕೆಂಬ ಉದಾತ್ತಧ್ಯೇಯವಿದೆ ಕವಿಗೆ. ಈ ಉದಾತ್ತಧ್ಯೇಯವನ್ನು ಧೈರ್ಯದಿಂದ ಹೊರಕ್ಕೆ ತಂದು ತನ್ನ ಮಹ ತ್ತನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದಾನೆ.

ಹೀಗೆ ರತ್ನಾಕರನು ನಿರಂಕುಶಮತಿ; ಸ್ವತಂತ್ರ ಮಾರ್ಗಾವಲಂಬಿ. ತತ್ವ ನಿರೂಪಣೆಯಲ್ಲಿ ' ಇದಮಿತ್ಥಂ ' ಎಂದು ಇದುವರೆಗೆ ಯಾರೂ ಕೊನೆಯ ಮಾತು ಹೇಳಿಲ್ಲ. ಹಾಗೆಯೇ ರತ್ನಾಕರನ ಮಾತಾದರೂ ಕೊನೆಯ ಮಾತಲ್ಲದೆ ಹೋಗಬಹುದು. ಆದರೆ ಆತನು ಒಬ್ಬ ನೂತನ ಮಾರ್ಗದರ್ಶಕನೆಂಬುದಂತೂ ನಿರ್ವಿವಾದ. ಆತನೊಬ್ಬ ಔಚಿತ್ಯ ನಿಯಮಪಾಲಕ; ಇತರ ನಿಯಮಗಳ ಕಟ್ಟುಪಾಡುಗಳಿಂದ ಸ್ವತಂತ್ರವಾಗಿರತಕ್ಕವನು. ಕಾವ್ಯದ ಆರಂಭದಲ್ಲಿಯೇ ಈತನದೊಂದು ಹೊಸ ಮಾರ್ಗವಿದೆ. ಈತನ ವರ್ಣನಾ ವಿಧಾನವೂ ನೂತನ ವಾದುದೇ. ವರ್ಣನೆಗಾಗಿ ವರ್ಣನೆಯಲ್ಲ; ಕಥೆಗಾಗಿ ವರ್ಣನೆ. ವರ್ಣನೆ ಯಿಂದ ಕಥೆ ಮುಂದುವರಿಯುತ್ತದೆ.

ರತ್ನಾಕರನ ಶೈಲಿ

'The style expresses the man' ಎಂದು ಇಂದು ಪಾಶ್ಚಾತ್ಯರು ಹೇಳುವ ಮಾತನ್ನು ನಮ್ಮವರು ಎಂದೋ ಹೇಳಿದರು 'ಶೀಲಸ್ಯ ಇಯಂ ಶೈಲೀ' ಎಂದು. ಕವಿಯ ಶೈಲಿಯಿಂದ ಆತನ ಮನೋಧರ್ಮವೇ ನೆಂಬುದನ್ನು ನಾವು ಸುಲಭವಾಗಿ ಗ್ರಹಿಸಬಹುದು. ದೀರ್ಘಾಲೋಚನೆಯ ಫಲವಾಗಿ ಭಾವೋದಯವಾಗುತ್ತದೆ. ಆ ಭಾವವು ಹೊರದೋರಿದಾಗ ಅದನ್ನು ಶೈಲಿ ಎಂದು ಕರೆಯುತ್ತೇವೆ. ಭಾವವು ಬದಲಾದರೆ ಶೈಲಿಯೂ ಬದಲಾಯಿಸುತ್ತದೆ. ಈ ಶೈಲಿಯನ್ನು, ಅದರ ಹಿಮ್ಮುಖವಾದ ಭಾವವನ್ನು ಹಿಡಿದು ರತ್ನಾಕರನ ಮನೋಧರ್ಮವನ್ನು ನಾವು ಒಹುಮಟ್ಟಿಗೆ ನಿರ್ಧರಿಸಬಹುದು.

ಕವಿಯು ತನ್ನ ಕಾವ್ಯವನ್ನು ಪಂಡಿತರಂಜನೆಗಾಗಿ ಬರೆದಿಲ್ಲ; ಸ್ತ್ರೀಯರು ಮನೆಯಲ್ಲಿ ಹಾಡಿಕೊಳ್ಳಲು ಅನುಕೂಲವಾಗುವಂತೆ ಸಾಂಗತ್ಯದಲ್ಲಿ ಬರೆದಿದ್ದಾನೆ, ಹೊನ್ನಮ್ಮನು ಹದಿಬದೆಯ ಧರ್ಮವನ್ನು ಬರೆದಿರುವಂತೆ. ಸಾಂಗತ್ಯದ ಧಾಟಿ ಸ್ತ್ರೀಯರಿಗೆ ಬಹು ಸಹಜವಾದುದು. ಗರತಿಯರಿಗೆ ಸಂಬಂಧಿಸಿದ ಜನಪದ ಸಾಹಿತ್ಯದಲ್ಲಿ ಬಹುಭಾಗವು ಸಾಂಗತ್ಯದ ಛಂದಸ್ಸಿನಲ್ಲೇ ರಚಿತವಾದುದು. ಹೀಗೆ ಉದ್ದಿಶ್ಯ ವ್ಯಾಪ್ತಿಗಳಲ್ಲಿ ಹೆಚ್ಚು ಆಡಂಬರವಿಲ್ಲದ ನಮ್ಮ ಕವಿಯ ಬರವಣಿಗೆ ಲಲಿತಮನೋಹರವಾಗಿದೆ. ಕಣ್ಣಿಗೆ ಕಾಣುವ ವಸ್ತುವನ್ನು ವರ್ಣಿಸಲು ಹೆಚ್ಚು ಕಲ್ಪನಾಶಕ್ತಿ ಬೇಕಿಲ್ಲ. ಅದರ ಅನುಭವ ವೇದ್ಯವಾಗುವುದಕ್ಕಾದರೂ ಹೆಚ್ಚು ಕಷ್ಟವಾಗುವುದಿಲ್ಲ. ಇದರಿಂದ ರತ್ನಾಕರನ ಶೈಲಿ ಸುಲಭವಾಗಿದೆ; ಸ್ವಾಭಾವಿಕವಾಗಿದೆ. ಇರುವ ವಸ್ತುವನ್ನು ಅದು ಇರುವಹಾಗೆ ವರ್ಣಿಸುವ ಚಾತುರ್ಯ ನಮ್ಮ ಕವಿಗೆ ಬೇಕಾದಷ್ಟಿದೆ. ಜನರ ಅನುಭವದಲ್ಲಿರುವ ಹೋಲಿಕೆಗಳನ್ನು ತರುವುದರ ಮೂಲಕ ಈ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿದ್ದಾನೆ. ಕುಂಭದ್ರೋಣದಂತೆ ಸುರಿಯುತ್ತಿರುವ ಮಳೆಯನ್ನು

ವರ್ಣಿಸುವಾಗ " ಕಿರುಧಾರೆಯಲ್ಲ ; ತೆಂಗಿನ ಮರಗಳ ತೋರ । ದುರುವ ಧಾರೆಯೊಳಿಡೆ ಬಿಡದೆ " ಬರುತ್ತಿತ್ತೆಂದು ವರ್ಣಿಸಿದ್ದಾನೆ. ಹಾಗೆಯೇ " ಅಗ ಣಿತ ದೈವಗಳೊಂದು ಹಬ್ಬವ ಮಾಡ । ಲಗಲದೊಳ್ನಿರೆದೊತ್ತಲಾಗಿ । ಗಗನ ವೆಂದೆಂಬ ಸೇವಗೆಯೊರಳಿಂದ ಸೇವಗೆಯಿಳಿವೊಲು ಮಳೆಯಾಯ್ತು." ಗುಡು ಗನ್ನು ವರ್ಣಿಸುವಾಗ—

" ಕೊಡದ ಸಾಲಿಂದದ ಮುಗಿಲ, ಕಾಮನಬಿಲ್ಲ । ಬಡಿಗೆಯಿಂ ಬಡಿಯೆ ದೈವಗಳು ।
ಒಡೆದಂತೆ ಗುಡುಗಾದುದೊಳಗಿದ್ದ ನೀರು ತೊ । ಟ್ಟಡುವಂತೆ ಕರೆದುದು ವೃಷ್ಟಿ ॥ "

ತನ್ನ ಅನುಭವವನ್ನು ಮಾತ್ರವೇ ಉಪಯೋಗಿಸಿಕೊಂಡು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲ ಕೌಶಲವಿದೆ.

ಕಣ್ಣಿಗೆ ಕಾಣಿಸದ, ಶ್ರವ್ಯೇಂದ್ರಿಯಕ್ಕೆ ಮಾತ್ರ ಗೋಚರವಾಗಬಲ್ಲ ವಿಷ ಯಗಳನ್ನು ವರ್ಣಿಸುವುದರಲ್ಲಿಯೂ ಕವಿಯು ಅಸಾಮಾನ್ಯವಾದ ಜಾಣ್ಮೆ ಯನ್ನು ತೋರಿದ್ದಾನೆ. ಇವನ ಸಂಗೀತವರ್ಣನೆ ಅನ್ಯಾದೃಶವಾದುದು. ಅಲ್ಲಿ ಪಾರಿಭಾಷಿಕಶಬ್ದಗಳ ಗೊಂದಲವಿಲ್ಲ ; ಸಂಗೀತ ಶಾಸ್ತ್ರದ ಗಂಧವಿಲ್ಲದವನಿಗೂ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಕವಿಯು ತಾನು ಅನುಭವಿಸಿ ಆನಂದಪಟ್ಟಿದ್ದಾನೆ. ಆ ಆನಂದವನ್ನು ನಿರ್ವಂಚನೆಯಿಂದ ಓದುಗರ ಪಾಲು ಮಾಡುತ್ತಾನೆ. ಅಲ್ಲಿಯ ಉಪಮಾನಗಳಂತೂ ಜೀವನದಿಂದ ತಾವಾಗಿಯೇ ಎದ್ದು ಬಂದಿರು ವಂತೆ ಕಾಣುತ್ತವೆ.

ಒಳಗುಣ್ಮಿದಾನಂದ ರಸ ತನ್ನ ತನು ತುಂಬಿ । ತುಳುಕಿ ಹೊರಗೆ ಸೂಸುವಂತೆ ।
ತೆಳುವಸುರಿಂದ ಬಾಯ್ದೆರೆಯೊಳು ಸುಸ್ವರ । ಹೊಳೆದು ಮೋಹಿಸುತಿದ್ದುದಾಗ ॥
ಸುಳಿನಾಭಿಯೊಳು ಹುಟ್ಟಿ ಮೆಲ್ಲಿದೆಯೊಳು ಬೆಳೆ । ದೊಳಗೊರಲೊಳು ಪ್ರಾಯವಡೆದು ।
ಎಳೆಯಳ ಬ್ರಂಹರಂಧ್ರವನೇರಿ ಬಾಯ್ದೆರೆ । ಗಿಳಿದು ಮೋಹಿಸಿದುದಾಳಾಪ ॥

ಬೆಳಗಿನೊಳೋಲಾಡುವಂತೆ ಸಂಗೀತದ । ಸುಳಿಯೊಳು ತೇಲಾಡುವಂತೆ ।
ತೆಳುಗಾಳಿಯೇರಿ ವೈಹಾಳಿಯ ಮಾಡುವಂ । ತೆಳವೆಂಗಳರಸಿ ಹಾಡಿದಳು ॥
ಕೆಂಬಾಯ ನಸುದೆರೆದಾಮೆಯಿಂದು ರಾಗವ । ನಂಬುಜಾನನೆ ತುಡುಕಿದಳು ॥
ವೀಣೆಯ ನುಡಿಸುತ ಪಾಡಿದರವಳೀಗ । ವೀಣೆಗಳೆರಡನೊಂದಾಗಿ ।
ಹೂಣಿ ನುಡಿಸುತಿದ್ದಳೆಂಬೊಲಿಹುದು ಮಝ । ರಾಣಿಯ ದನಿಯ ಚೆಲ್ವಿಕೆಯೆ॥

ಸಂಗೀತದ ದೃಶ್ಯ ಕಣ್ಣಿಗೆ ಕಟ್ಟದಂತಿದೆ. ಇಷ್ಟನ್ನೇ ತೆಗೆದುಕೊಂಡು ತುಲನೆ ಮಾಡಿದಾಗ ಜಗತ್ತಿನ ಯಾವ ಸಂಗೀತದ ಭಾವಗೀತಕ್ಕೆ ತಾನೇ ಇದು ಕಡಮೆಯಾದೀತು? ಆದರೂ ನಿರಾಭರಣ ಸುಂದರಿ! ಕಲ್ಪನಾ ಚಾತುರ್ಯಕ್ಕಿಂತಲೂ ಕವಿಯ ರಸಾನುಭನವು ಹೆಚ್ಚು ಬೆಲೆ ಬಾಳಬಲ್ಲದು.

ಕವಿಯು ಮಾಡಿರುವ ನರ್ತನ ವರ್ಣನೆಯೂ ಮನೋಹರವಾಗಿದೆ—

ನೋಟದೊಳಗೆ ಕೊಂದರೊಮ್ಮೆ ನೋಟಕರನು । ನಾಟಿಸಿ ನಸುನಗೆಯಿಂದ ।
ಲೂಟ ಮಾಡಿದರು ಮೈಯೊಲೆದಾಟದಿಂದೆದೆ । ಗೋಟಿಯ ಕೊಂಡರೇನೆಂಬೆ ॥
ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ । ಜಳಧಿಯ ಸುಳಿಯೊ
ಎಂಬಂತೆ ।
ಬಲಕೆಡಕೊಲೆದು ಹರಿವಳೆಳವಿಸಿಲಲ್ಲಿ । ಎಳನಾಗ ಹರಿವಂತೆ ಮುರಿದು ॥

ಅತ್ಯಂತ ಗಹನವಾದ ವೇದಾಂತ ವಿಚಾರಗಳೂ ರತ್ನಾಕರನ ಕೈಯಲ್ಲಿ ಸುಲಿದ ಬಾಳೆಯ ಹಣ್ಣಿನಂತೆ ಸುಲಭವಾಗಿಬಿಡುತ್ತವೆ.

ದೊರೆಯೆದ್ದು ಹೋಗೆನೆ ಹೋಗಿ, ಬಾರೆಂದರೆ । ಬರುತಿಹ ಸೇವಕರಂತೆ ।
ಕರಣ ನಾಲ್ಕೀಂದ್ರಿಯವೈದವನುಸುರಿದಂ । ತಿರುತಿಹವೇನ ಬಣ್ಣಿಪೆನು ॥
ಬೇಕಾದರಾಡಿಸಿ ಗಾಳಿಪಟವನರ್ತಿ । ಸಾಕಾಗೆ ಸುರುಳುವನಂತೆ ।
ನೂಕಿಚಿತ್ತವ ಹೊರಗಾಡಿಸುವನು ತನ್ನೊ । ಳೇಕವಾಗಿರಿಸುವನೊಮ್ಮೆ ॥
ಹೆಣ್ಣು ಸೊಂಕದ ಮುನ್ನ ಪುಟವೇರುತಿಹುದದು । ಹೆಣ್ಣ ತೋಳ್ವಲೆಗೆ ಬಿದ್ದಾಗ ।
ಪೊಣ್ಣಪೊಣ್ಣನೆ ಹಾರುವೆರಳೆ ಮೋಸದಿ ಕಾಲು । ಕಣ್ಣಿಗೆ ಸಿಲುಕಿದಂತಿಹುದು ।
ಹೆಣ್ಣ ಹಿಡಿದಮೇಲೆ ಮಣ್ಣ ಹಿಡಿಯಬೇಕು । ಹೊನ್ನ ಹಿಡಿಯಬೇಕು ಸಹಜ ।
ಹೆಣ್ಣು ಹೊನ್ನು ಮಣ್ಣು ಪಿಡಿದಾತ್ಮರೆಲ್ಲರು । ಮಣ್ಣು ಹಿಡಿದ ಲೋಹದಂತೆ ॥

ಹೀಗೆ ಕವಿಯು ಮನಸ್ಸಿಗೆ ಮಾತ್ರ ವೇದ್ಯವಾಗಬಲ್ಲ ವಿಷಯಗಳನ್ನು ಸಹ ಸುಂದರವಾಗಿ, ಸಹಜವಾಗಿ ಚಿತ್ರಿಸಬಲ್ಲ ಕಲೆಗಾರನಾಗಿದ್ದಾನೆ.

ರತ್ನಾಕರನಲ್ಲಿ, ಅವನ ಶೈಲಿಯಲ್ಲಿ ಕುಸುರಿಗೆಲಸ ಹೆಚ್ಚು. ವರ್ಣನೀಯ ವಸ್ತುವಿನ ಪ್ರತಿಯೊಂದು ಪದರವನ್ನೂ ಜಕಣಾಚಾರಿಯಂತೆ ಬಿಚ್ಚಿ ತೋರಿಸುವ ಸ್ವಭಾವ. ಇದರಿಂದ ಒಂದೇ ಭಾವವು ಎರಡೆರಡು ಸಲ ಮೂರು ಮೂರು ಸಲ ಬರಬೇಕಾಗುತ್ತದೆ—ಹೇಳಿದ್ದನ್ನೇ ಬೇರೊಂದು ವಿಧದಲ್ಲಿ ಹೇಳಬೇಕಾಗುತ್ತದೆ. ಓದುಗರ ಊಹೆಗೆ ಹೆಚ್ಚು ಅವಕಾಶವನ್ನೇ ಕೊಡುವುದಿಲ್ಲ ಕವಿ. ತಾನು ಹಿಡಿದ ಕೆಲಸದಲ್ಲಿ ಮತ್ತೊಬ್ಬರೇಕೆ ಕೈಹಾಕಬೇಕೆಂದು ಕೇಳುವ ಮನೋಧರ್ಮ. ಅವನ ಶೈಲಿಯಲ್ಲಿ ಉದ್ದಕ್ಕೂ ಇದು ಕಂಡುಬರುತ್ತದೆ.

ರತ್ನಾಕರನು ಆಯ್ದುಕೊಂಡಿರುವ ಕಥಾವಸ್ತುವಿನಲ್ಲಿ ಹಲವು ಬಗೆಯ ಭಾವಾವೇಗಗಳು ಬರಲು ಆಸ್ಪದವಿಲ್ಲ. ಉಗ್ರಭಾವಗಳಿಗೆ ಇಲ್ಲಿ ಎಡೆಯಿಲ್ಲ. ಇದರಿಂದ ಈತನ ಶೈಲಿಯಲ್ಲಿ ಒಂದು ಸತ್ವವು ಕಡಮೆಯಾಗಿರುವಂತೆ ತೋರಿಬರುತ್ತದೆ. ನಾಗಚಂದ್ರಕವಿಯಂತೆ ಇವನಲ್ಲಯೂ ಭಾವಕ್ಕನುಗುಣವಾದ ಪದಸಮೂಹವು ಕಂಡುಬರುವುದಿಲ್ಲ. ಕವಿಯ ಮನೋಭಾವ ಬಹು ಕೋಮಲವಾದುದು. ಮನಸ್ಸನ್ನು ಕೆರಳಿಸಬಲ್ಲ—ಕೆಚ್ಚಿನ ಕಿಚ್ಚನ್ನು ಹೆಚ್ಚಿಸಬಲ್ಲ—ಉಗ್ರಭಾವಗಳು ಆತನಲ್ಲಿ ಕಡಮೆ. ಅವನ ದೃಷ್ಟಿಯೆಲ್ಲವೂ ಸುಂದರವಾದ, ಕೋಮಲವಾದ, ಕಳಕಳಿಸುವ ಲಲಿತಕಲೆಯ ಕಡೆಗೇ. ಆತನು ಕೊಡುವ ಉಪಮೆಗಳಲ್ಲಿ ಮನಸ್ಸನ್ನು ಉದ್ರೇಕಗೊಳಿಸುವಷ್ಟು ಕಾವಿಲ್ಲ. ಹೇಳುವುದನ್ನು ಮನದಟ್ಟಾಗುವಂತೆ ಹೇಳಲು ಮಾತ್ರ ಸಹಕಾರಿಗಳಾಗುತ್ತವೆ. ಪಾಠಕರ ಮನಸ್ಸಿನಲ್ಲಿ ಅಚ್ಚೊತ್ತುವುದಕ್ಕಾಗಿ ಒಂದೇ ಬಾರಿ ಮೂರು ನಾಲ್ಕು ಉದಾಹರಣೆಗಳನ್ನು ಕೊಡುವುದಕ್ಕೂ ಕವಿ ಹಿಂಜರಿಯುವುದಿಲ್ಲ. ಎಂದ ಮಾತ್ರಕ್ಕೆ ಅವನ ಉಪಮೆಗಳು ಅಯೋಗ್ಯವೆಂದು ಹೇಳುವಂತಿಲ್ಲ. ಜನ ಸಾಮಾನ್ಯರ ಅನುಭವದಲ್ಲಿನ ಉಪಮೆಗಳನ್ನೇ ಆರಿಸಿ ತೆಗೆದು ಅವರ ಮುಂದಿಡಬೇಕೆಂಬುದು ಅವನ ಉದ್ದೇಶ. ಸಮಯ ಬಂದಾಗ ಉತ್ತಮವಾದ ಉಪಮೆಗಳನ್ನೂ ಕೊಡಬಲ್ಲ. ನಾಟಕರಂಗದಲ್ಲಿ ತೆರೆ ಓರೆಯಾದುದನ್ನು " ಸಂಜೆಗೆಂಪೊಲೆವಂತೆ ತೆರೆ ತೊಲಗಿತು. ಕಣ್ಗೆ ಕಂಜಾಕ್ಷಿಯರು ಕಾಣಿಸಿದರು " ಎಂಬ

ಸುಂದರ ಉಪಮಾನದಿಂದ ತೋರುತ್ತಾನೆ. ಎಷ್ಟು ಸುಂದರವಾದ ಭಾವ! ಪ್ರಕೃತಿಯಲ್ಲಿ ನಡೆವ ವ್ಯಾಪಾರವನ್ನು ಕವಿ ಕಣ್ಣಿಟ್ಟು ನೋಡುವ ಶಕ್ತಿಯುಳ್ಳವನಾಗಿದ್ದಾನೆ. ನೈಸರ್ಗಿಕವಾದ ಇಂತಹ ಉಪಮೆಗಳು ಅಲ್ಲೊಂದು ಇಲ್ಲೊಂದು ಕಾವ್ಯದಲ್ಲಿ ಕಾಣಬರುತ್ತವೆಯಾದರೂ ಅತ್ಯುತ್ತಮ ಕಾವ್ಯ ಲಕ್ಷಣವುಳ್ಳ ಉಪಮೆಗಳು ಅಲ್ಪಸಂಖ್ಯೆಯೆಂದೇ ಹೇಳಬೇಕು.

ಈತನ ಶೈಲಿಯಲ್ಲಿ ಮೇಲೆಯೇ ಹೇಳಿರುವಂತೆ ಆಡಂಬರವಿಲ್ಲ. ಯಾವುದನ್ನು ಹೇಳಬೇಕಾದರೂ ಉದ್ದಿಷ್ಟ ಪರಿಣಾಮವನ್ನು ಮನಸ್ಸಿನಲ್ಲಿಟ್ಟುಕೊಂಡೇ ಹೇಳುವುದು. ಒಂದು ದೃಷ್ಟಿಯಿಂದ ಮಿತಿಯೆಂಬುದು ಇವನ ಮನೆದೇವತೆ. ಆಯಾ ಸಂದರ್ಭದಲ್ಲಿ ಎಷ್ಟು ಪ್ರಕೃತವೋ ಅಷ್ಟುಮಾತ್ರ ಹೇಳುತ್ತಾನೆ. ಸಂಗೀತದ ವಿಚಾರವನ್ನು ಎತ್ತಿದರೆ ಅದರಿಂದ ಬರುವ ಸಂತೋಷದ ವಿಚಾರವೆಷ್ಟೊ ಅಷ್ಟೆ ಹೊರತು ಒಂದು ಹೆಜ್ಜೆ ಆಚೆ ಈಚೆ ಇಡುವುದಿಲ್ಲ. ಅದೊಂದನ್ನೇ ಬೇರ್ಪಡಿಸಿದಾಗ ಅದು ಸ್ವಸಂಪೂರ್ಣವಾಗಿರುವಂತೆ ತೋರುತ್ತದೆ. " ಉಚಿತಕ್ಕೆ ತಕ್ಕಷ್ಟು ಪೇಳ್ವೆನ್ " ಎಂಬ ಈತನ ಸತ್ಯಸಂಕಲ್ಪ ಈಡೇರಿದೆ.

———————

ಸಾಹಿತ್ಯದಲ್ಲಿ ರತ್ನಾಕರನ ಸ್ಥಾನ

ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ ರತ್ನಾಕರನ ಸ್ಥಾನವಾವುದು ? ಈ ಪ್ರಶ್ನೆಗೆ ಒಂದೇ ಮಾತಿನಲ್ಲಿ ಉತ್ತರ ಕೊಡುವುದಾದರೆ ಹೀಗೆ ಹೇಳಬಹುದು. ಭಾಮಿನಿಷಟ್ಪದಿಗೆ ಕುಮಾರವ್ಯಾಸನು ಹೇಗೋ, ರಗಳೆಗಳಿಗೆ ಹರಿಹರನು ಹೇಗೋ ಸಾಂಗತ್ಯಕ್ಕೆ ರತ್ನಾಕರ ಹಾಗೆ. ಆಯಾ ಛಂದಸ್ಸಿಗೆ ಅವರವರು ಸಾಮ್ರಾಟರು. ಕನ್ನಡಸಾಹಿತ್ಯಸಾಮ್ರಾಜ್ಯದ ಆಧಾರಸ್ತಂಭಗಳಂತಿರುವ ಉತ್ತಮ ಕವಿಗಳ ಸಾಲಿನಲ್ಲಿ ಅವರ ಭುಜಕ್ಕೆ ಭುಜವಾನಿಸಿ ಕುಳಿತುಕೊಳ್ಳವ ಯೋಗ್ಯತೆಯುಳ್ಳವನು ನಮ್ಮ ಕವಿ. ಕಾವ್ಯ-ಧರ್ಮಗಳ ಸಮನ್ವಯ ರೂಪವಾದ ತನ್ನ ಕಾವ್ಯರತ್ನದಿಂದ ಅಜರಾಮರವಾದ ಕೀರ್ತಿಯನ್ನುಗಳಿಸಿರುವವನು.

ಜಗದೊಳ್ ಸನ್ನಿದಮಾದ ನಾಳ್ನುಡಿಗಳಂ ಛಂದಕ್ಕೆ ಬರ್ಪಂತೆ ನೆ।
ಟ್ಟಗೆ ಮಾತಾಡುವ ಬಲ್ಮೆ, ಚಿತ್ತದೊಳೊರಲ್ದಿರ್ದರ್ಥಮುಂ ಕೂಡೆ ನಾ।
ಲಗೆಯಿಂ ರಂಜಿಸುವೊಂದು ಬಿನ್ನಣಮದಿನ್ನಾವಂಗೆ ಪುಣ್ಮೈಕ ಭಾ।
ಗಿಗೆ ಸೈಪಿಂ ದೊರೆಕೊಳ್ಗು ಮಾತನೆ ಸಲಂ ಶೃಂಗಾರ ರತ್ನಾಕರಂ ॥

—ಕವಿಕಾಮ

ಗ್ರಂಥಪಾಠ

———

'ಭರತೇಶ ವೈಭವ'ದ ಗ್ರಂಥಪಾಠವನ್ನು ಮೂರು ಓಲೆ ಪ್ರತಿಗಳು, ಎರಡು ಕಾಗದದ ಪ್ರತಿಗಳು ಮತ್ತು ಒಂದು ಅಚ್ಚಿನ ಪ್ರತಿ—ಇವುಗಳ ಸಹಾಯದಿಂದ ಸಿದ್ಧಗೊಳಿಸಿದೆ. ದೊರೆತ ಮೂರು ಓಲೆಯ ಪ್ರತಿಗಳೂ ಅಸಮಗ್ರವಾದುವು ಅವುಗಳಲ್ಲಿ ಎರಡು ಓರಿಯಂಟಲ್ ಲೈಬ್ರರಿಗೆ ಸೇರಿದುವು. ಮತ್ತೊಂದು ಮಹಾರಾಜಾ ಕಾಲೇಜಿನ ಕನ್ನಡ ಸಹಾಯಕಾಧ್ಯಾಪಕರಾದ ಶ್ರೀಮಾನ್ ವಿ. ಸೀತಾರಾಮಯ್ಯ ಎಂ.ಎ., ಅವರ ಕೃಪೆಯಿಂದ ದೊರೆತುದು. ಇವುಗಳಲ್ಲಿ ಕ್ರಮವಾಗಿ ಮೊದಲ ೭೧ ಸಂಧಿಗಳು (ಓಲೇ ಪ್ರತಿ ನಂ. ೨೭೪), ಸಂಧಿ ೨೨ ರಿಂದ ೮೦ ರವರೆಗೆ (ಓಲೇ ಪ್ರತಿ ನಂ. ೨೭೫), ಮೊದಲ ಐವತ್ತು ಸಂಧಿಗಳು ಇವೆ. ಇವುಗಳನ್ನು ಚ, ಛ, ಜ—ಎಂದು ನಿರ್ದೇಶಿಸಿದೆ. ಶ್ರೀಮಾನ್ ಉಗ್ರಾಣದ ವಂಗೇಶರಾಯರು ಸಂಪಾದಿಸಿ ಪ್ರಕಟಿಸಿರುವ ಅಚ್ಚಿನ ಪ್ರತಿಯನ್ನು 'ಗ' ಎಂದು ನಿರ್ದೇಶಿಸಿದೆ. ಓರಿಯಂಟಲ್ ಲೈಬ್ರರಿಯ ಕಾಗದದ ಪ್ರತಿಗಳೆರಡನ್ನು (A ೨೪೨ ಮೊದಲ ೧೫ ಸಂಧಿಗಳು, A ೨೪೩-೧೬ ರಿಂದ ೩೧ ನೇ ಸಂಧಿ, A ೨೪೪-೩೨ ರಿಂದ ೪೬ ನೆಯ ಸಂಧಿ, A ೨೪೫-೪೭ ರಿಂದ ೬೪ ನೆಯ ಸಂಧಿ, A ೨೪೬-೬೫ ರಿಂದ ೮೦ ನೆಯ ಸಂಧಿ,—ಮತ್ತು, B ೧೨೬-ಸಂಧಿ ೧ ರಿಂದ ೨೭, B ೧೫೪-ಸಂಧಿ ೨೭-೫೪, B ೧೫೫ ಸಂಧಿ ೫೪-೮೦.) ಕ, ಖ, ಎಂದು ನಿರ್ದೇಶಿಸಿದೆ. ಅಚ್ಚಿನ ಪ್ರತಿಯು ಬಹುಮಟ್ಟಿಗೆ ಶುದ್ಧವಾಗಿಯೇ ಇರುವುದರಿಂದ ಪಾಠಾಂತರಗಳು ಹುಲುಸಾಗಿರಬೇಕಾದುದರ ಆವಶ್ಯಕತೆ ಅಷ್ಟಾಗಿ ಕಂಡುಬರಲಿಲ್ಲ. ಅರ್ಥವ್ಯತ್ಯಾಸವೋ ಸಂದೇಹವೋ ಬಂದಕಡೆ ಮಾತ್ರ ಪಾಠಾಂತರಗಳನ್ನು ಕೊಟ್ಟಿದೆ.

ಓರಿಯಂಟಲ್ ಲೈಬ್ರರಿಯ ಗ್ರಂಥಪ್ರತಿಗಳನ್ನು ದೊರಕಿಸಿಕೊಟ್ಟ ನನ್ನ ಪೂಜ್ಯಗುರುಗಳಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳಿಗೂ, ಲೈಬ್ರರಿಯ ಅಧಿಕಾರ ವರ್ಗದವರಿಗೂ, 'ಜ' ಓಲೇ ಪ್ರತಿಯನ್ನು ದೊರಕಿಸಿ ಕೊಟ್ಟ ಶ್ರೀಮಾನ್ ವಿ. ಸೀತಾರಾಮಯ್ಯ ಎಂ.ಎ., ಅವರಿಗೂ ನನ್ನ ಅನಂತ ವಂದನೆಗಳು.

ಆಸ್ಥಾನ ಸಂಧಿ

ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶ
ಸುರರ ಮಕುಟಮಣಿ ರಂಜಿತ ಚರಣಾಬ್ಜ
ಶರಣಾಗು ಪ್ರಥಮ ಜಿನೇಶ ॥ ೧ ॥

ಬಿನ್ನಹ ಗುರುವೆ ಧ್ಯಾನಕೆ ಬೇಸರಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆಕಂಡ ನನ್ನೊಡೆಯಾ ॥ ೨ ॥

ಕಬ್ಬಿಗರೋದುಗಬ್ಬವ ಹಾಡುಗಬ್ಬವ
ಕಬ್ಬದೊಳೊರೆವರಿವೆರಡು
ಕಬ್ಬನಂತಿರಬೇಕು ಬಿದಿರಂತೆ ರಚಿಸಲೇ
ಕಬ್ಬೆ ಹೇಳಿಲೆ ಸರಸ್ವತಿಯೆ ॥ ೩ ॥

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆ ತೆಲುಗಾ
ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು
ಮೆಯ್ಯುಬ್ಬಿ ಕೇಳಬೇಕಣ್ಣಾ. ॥ ೪ ॥

ರಳ ಕುಳ ಶಿಥಿಲ ಸಮಾಸ ಮುಂತಾದವ
ರೊಳಗಿಲ್ಲಿ ಕೆಲವುಳ್ಳರುಂಟು
ಕೆಲವಿಲ್ಲಾದರುವಿಲ್ಲವೇಕೆಂದರವರ ಕೋ
ಟಲೆಯೇಕೆ ಹಾಡುಗಬ್ಬದೊಳು ॥ ೫ ॥

ಸಕಲ ಲಕ್ಷಣವು ವಸ್ತುಕಕ್ಕೆ, ವರ್ಣಕಕಿಷ್ಟು
ವಿಕಳವಾದರು ದೋಷವಿಲ್ಲ.
ಸಕಲ ಲಕ್ಷಣಕಾಗಿ ಬಿರಸು ಮಾಡಿದರೆ ಪು
ಸ್ತಕದ ಬದನೆಕಾಯಹುದು ॥ ೬ ॥

ಚಂದಿರನೊಳಗೆ ಕಪ್ಪುಂಟು ಬೆಳ್ದಿಂಗಳು
ಕಂದಿ ಕುಂದಿಹುದೋ ನಿರ್ಮಲವೊ
ಸಂಧಿಸಿ ಶಬ್ದದೋಷಗಳೊಮ್ಮೆ ಸುಕಥೆಗೆ
ಬಂದರೆ ಧರ್ಮ ಮಾಸುವುದೇ ॥ ೭ ॥

ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾ
ರಿಣಿ ಮೆಚ್ಚಿ ಜಿನಯೋಗಿಯಾಗಿ
ಕ್ಷಣಕೆ ಕರ್ಮವ ಸುಟ್ಟು ಜಿನನಾದ ಭೂಭುಜಾ
ಗ್ರಣಿಯ ವೈಭವವ ಲಾಲಿಸಿರೊ ॥ ೮ ॥

ಆಗಮವಧ್ಯಾತ್ಮವಳವಟ್ಟು ಶೃಂಗಾರ
ತ್ಯಾಗ ಭೋಗದ ಮೋಡಿ ಮೆರೆಯೆ
ಭೋಗಿ ಯೋಗಿಗಳಿದೆ ಜುಮ್ಮು ಜುಮ್ಮೆನೆ ನೇಮ
ದಾಗಿ ಸೊಲ್ಲಿಸುವೆನಾಲಿಸಿರೊ ॥ ೯ ॥

ಪ್ರಚುರದಿ ಪದಿನೆಂಟು ರಚನೆಯ ವಾಕ್ಯಕೆ
ರಚಿಸುವರಾನಂತು ಪೇಳೆ
ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ
ನಿಚಿತ ಪ್ರಯೋಜನವೆನಗೆ ॥ ೧೦ ॥

ಭರತಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗಳೆ
ಭರತ ಚಕ್ರೇಶ್ವರ ಸುಖಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು ॥ ೧೧ ॥

ಪುರು ಪರಮೇಶನ ಹಿರಿಯ ಕುಮಾರನು
ನರಲೋಕಕೊಬ್ಬನೆ ರಾಯ
ಮುರಿದು ಕಣ್ಣಿಟ್ಟರೆ ಕ್ಷಣಕೆ ಮುಕ್ತಿಯ ಕಾಂಬ
ಭರತ ಚಕ್ರಿಯ ಹೇಳಲಳವೇ ॥ ೧೨ ॥

ಹದಿನಾರನೆಯ ಮನು ಪ್ರಥಮಚಕ್ರೇಶ್ವರ
ಸುದತಿಜನಕೆ ರಾಜಮದನ
ಚದುರರ ತಲೆವಣಿ ತದ್ಭವಮೋಕ್ಷ ಸಂ
ಪದನ ಬಣ್ಣಿಸಲೆನ್ನ ಹವಣೆ ॥ ೧೩ ॥

ಧರೆಯೊಳಿಲ್ಲವ ಸುಟ್ಟರುಂಟಲ್ಲಿ ಭಸ್ಮಕ
ರ್ಪುರವ ಸುಟ್ಟರೆ ಭಸ್ಮವುಂಟೆ
ನರತತಿಗಾಹಾರ ನಿಹಾರವುಂಟೆಮ್ಮ
ಭರತೇಶಗಿಲ್ಲ ನಿಹಾರಾ ॥ ೧೪ ॥

ಕೋಮಲಾಂಗನು ಹೇಮವರ್ಣನು ಜಗವೆಲ್ಲ
ಕಾಮಿಸತಕ್ಕ ಚೆನ್ನಿಗನು
ಆಮೋದವುಕ್ಕುವ ಜವ್ವನಿಗನು ಸರ್ವ
ಭೂಮೀಶರೊಡೆಯನಾ ಚಕ್ರಿ ॥ ೧೫ ॥

ಆ ವಿಭುವೊಂದಿನದುದಯದೊಳೆದ್ದು
ದೇವತಾರ್ಚನೆಯನು ಮಾಡಿ
ಚಾವಡಿಗೈದಿ ತಾನೋಲಗವಾದೊಂದು
ಶ್ರೀ ವಿಲಾಸವನೇನನೆಂಬೆ ॥ ೧೬ ॥

ನವರತ್ನ ಹೇಮನಿರ್ಮಿತವೆನಿಪಾಸ್ಥಾನ
ಭವನದೊಳಾ ರಾಜರತ್ನ
ಛವಿವಡೆದೆಸೆದನು ರತ್ನ ಪುಷ್ಪಕದೊಳು
ದಿವಿಜೇಂದ್ರನೊಪ್ಪುವಂದದೊಳು ॥ ೧೭ ॥

ತನುಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ
ಕನಕಸಿಂಹಾಸನವೆಂಬ
ಕನಕಾಂಬುಜದ ಮೇಲಾ ರಾಜ (ಹಂಸ) ನಿ
ದ್ದನು ರಾಜ ಹಂಸನೆಂಬಂತೆ ॥ ೧೮ ॥

ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮು
ತ್ತಿದಿರಾದ ಪ್ರತಿಸೂರ್ಯನಂತೆ
ಪದುಳದುತ್ತುಂಗ ಸಿಂಹಾಸನವೇರಿ ದೇ
ಹದ ಕಾಂತಿ ಮೆರೆಯೆ ಮೆರೆದನು. ॥ ೧೯ ॥

ಆವ ಬಿಂಕವೊ ಎಡಗಾಲ ಗದ್ದುಗೆಯ ಮೇ
ಲೋವಿ ಮಡಿದು ಮತ್ತೆ ಕೆಳಗೆ
ಹಾವುಗೆಯೊಳು ಪೆಂಡೆಯದ ಬಲಗಾಲೂರಿ
ಠೀವಿಯೊಳಿಸೆದನಾ ರಾಯಾ ॥ ೨೦ ॥

ಬಲಗೈಯೊಳಾಂತ ಹೊನ್ನೊರೆಯ ಕಠಾರಿಯ
ಕೆಲಕೂರಿ ಮತ್ತೆಡಗೈಯಾ
ಮಲಗಿನ ಮೇಲೂರಿ ಬೀರಸಿರಿಯನಾಳ್ದ
ಕಲಿಗಳ ದೇವನೊಪ್ಪಿದನು ॥ ೨೧ ॥

ನರುಸುಯ್ಯಗಾಳಿಗೆ ತೇಲ್ವ ದುಕೂಲದ
ಸೆರಗು ಸೇರುವೆ ದೊರೆ ಹೊದೆದು
ತರಪಿನೆದೆಯ ಹೊನ್ನ ಜನ್ನಿವಾರದ ರೇಖೆ
ಮೆರೆಯೆ ರಾಜೇಂದ್ರ ಮೆರೆದನು ॥ ೨೨ ॥

ಮಿರುಪ ಕಿರೀಟವುಂಟದನಂದು ಧರಿಸಿತಿ
ಲ್ಲುರೆ ಮನದೊಂದು ಲೀಲೆಯೊಳು
ತುರುಬು ಜುಂಗೆಸೆಯೆ ಚಿಮ್ಮುರಿಸುತ್ತಿ ಸೊಬಗನೆ
ಕರೆವುತಿದ್ದನು ನೋಡುವರಿಗೆ ॥ ೨೩ ॥

ಜೋಕೆವಿಡಿದು ನೀಡುವೆಳೆಯ ಘಳಿಗೆಯ ಪ
ರಾಕಿನೊಳಗೆ ಕೈಕೊಳುತ
ಏಕೆ ನುಡಿಯನೋ ಇನ್ನೊ ನ್ಮೈಯೆಂಬಂತೊಂದು
ತೂಕದೊಳಿಸೆದನಾ ರಾಯಾ ॥ ೨೪ ॥

ಉಬ್ಬಿ ಬೆಳೆದು ಬಾಗಿತಿಲ್ಲ ರೇಖೆಗೆ ಬಂದು
ಹುಬ್ಬಿನಂತೆಸೆವೆಳೆ ಮೀಸೆ
ಹುಬ್ಬು ಮೀಸೆಯ ನೋಡಿ ನಲಿವ ಬವರಿಕಣ್ಣ
ಹಬ್ಬವ ಮಾಳ್ಪನೆಲ್ಲರಿಗೆ ॥ ೨೫ ॥

ಕುಂಡಲಗಳಕಾಂತಿ, ಕಂಗಳಪ್ರಭೆ, ಗಂಡ
ಮಂಡಲ ದೊಳಗಾಡಲವನಾ
ಮುಂಡೆಯೊಲೆದರೆ ಹೆಂಗಳಿಗೆ ಮನ್ಮಥನದೊ
ಖಂಡೆಯವಲುಗಿದಂತಿಹುದು. ॥ ೨೬ ॥

ಪದಕ ಕಡಗ ಕಂಠಮಾಲೆಯ ನವರತ್ನ
ದುದಿತಾಂಶು ದೇಹಕಾಂತಿಯೊಳು
ಪುದಿದು ಪೊಳೆಯೆ ಕಣ್ಗೆ ತೋರಿದನಿಂದ್ರಚಾ
ಪದೊಳು ಮಾಡಿದ ನೃಪನಂತೆ ॥ ೨೭ ॥

ಶಾಲಿಯ ತೆರೆಯ ತಟ್ಟುಚ್ಚಿ ದೀಪದ ಕಾಂತಿ
ಢಾಳಿಸುವಂತೆ ಲೋಕದೊಳು
ಆ ಲಲಿತಾಂಗನ ತನುಕಾಂತಿ ಪೊದೆದ ದು
ಕೂಲದ ಹೊರಗೆ ರಂಜಿಸಿತು ॥ ೨೮ ॥

ಬಳಸಿನ ನುಡಿಗಳೇನೋಲಗದೆಳೆವೆಂಗ
ಳೊಲಿದುಟ್ಟ ಬಿಳಿಯ ಶೀರೆಗಳೊ
ಚೆಲುವನ ತನುಕಾಂತಿ ಸೋಂಕಿದ ರಂಗು ಮಾ
ದಲವಣ್ಣವೆನಲೆಸೆದಿಹುದು ॥ ೨೯ ॥

ಹೆಂಗಳ ರೂಪು ಗಂಡರಿಗೆ ಗಂಡರ ರೂಪು
ಹೆಂಗಳ ಸೋಲಿಪುದೆಂಬ
ಪಾಂಗಲ್ಲವನವನ ಚೆಲ್ವಿಕೆ ಗಂಡುಪೆಣ್ಗಳ
ಕಂಗಳ ಸೆರೆವಿಡಿದಿಹುದು ॥ ೩೦ ॥

ತರತರ ವಿಡಿದು ಢಾಳಿಸುತಿಹ ದೀರ್ಘ ಚಾ
ಮರಗಳ ಸಾಲೊಳೆಸೆದನು
ಹರಿವ ಬೆಳ್ಮುಗಿಲೊಳು ತೋರಿ ಮರಸುವ ಚಂ
ದಿರನೋ ಭಾಸ್ಕರನೋಯೆಂಬಂತೆ ॥ ೩೧ ॥

ಬಲದೊಳು ಭೂಭುಜರೆಡದಲ್ಲಿ ಗಣಿಕೆಯ
ರೊಲುಮೆಯ ಕವಿಗಳು ಮುಂದೆ
ನಿಲೆ ಹಿಂದೆ ಹಿತವರು ಬಳಸಿದೆಕ್ಕಡಿಗರ
ಬಲು ಬಜಾವಣೆಯೊಳೊಪ್ಪಿದನು ॥ ೩೨ ॥

ವಾರನಾರಿಯರು ತಾವಾರನಾರಿಯರೊ ಶೃಂ
ಗಾರಕೆ ಸೋತು ಭೂವರನಾ
ಹಾರುತ್ತಿದ್ದರು ಸುರಪಶುವ ಗೋದಾನಕ್ಕೆ
ಹಾರುವ ಹಾರುವನಂತೆ ॥ ೩೩ ॥

ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ
ಲಾಂಬುಜ ನೋಳ್ಪಂತೆ ಶಶಿಯಾ
ತುಂಬಿದ ಸಭೆಯೆಲ್ಲ ನೃಪನ ನೋಡುತ ಮಿಕ್ಕ
ಹಂಬಲ ಮರೆದುದಲ್ಲಲ್ಲಿ ॥ ೩೪ ॥

ರೋಮಾಂಚನಸಿದ್ಧ ಜುಂಜುಂಮಾಲಪ, ಗಾ
ನಾಮೋದ ಚುಂಚುಮಾಲಾದ್ಯ
ಶ್ರೀಮಂತ್ರಗಾಂಧಾರ ರಾಗವರ್ತಕರೆಂಬ
ರಾಮಹೀಪತಿಯ ಗಾಯಕರು ॥ ೩೫ ॥

ಬಳ್ಳಬಾಯ್ದೆರೆಯದೆ ಭ್ರಾಂತುಗೊಂಡಂತೆ ಮೈ
ಯೆಲ್ಲ ತೂಗಾಡದೊಂದಿನಿಸು
ಅಲ್ಲಾಟವುಂಟೋಜೆವಿಡಿದು ಬಾಯ್ದೆರೆಯುಂಟು
ಸಲ್ಲಲಿತದೊಳು ಹಾಡಿದರು ॥ ೩೬ ॥

ಜೋಡು ಜೋಡಾಗಿ ತಾವರೆಯಿದಿರೊಳು ಸ್ಫರ
ಮಾಡುವ ತುಂಬಿಗಳಂತೆ
ನೋಡುತ ಭರತರಾಜನ ಮುಖಪದ್ಮವ
ಮಾಡಿದರಾಳಾಪಗಳನು ॥ ೩೭ ॥

ಭರತರಾಜನ ಮುಖಚಂದ್ರನ ಕಂಡ ಜಾ
ಣರಿಗೆ ಮಹಾಳಾಪವುಕ್ಕಿ
ಬರುತಿದ್ದುವಿಂದುವ ಕಂಡ ಸಮುದ್ರದ
ಭರತದಂತೇನ ಬಣ್ಣಿಪೆನು ॥ ೩೮ ॥

ವೀಣೆಯ ದನಿಯಾವುದದರೊಳು ಪಾಡುವ
ಗಾನದ ಧ್ವನಿಯಾವುದೆಂದು
ಕಾಣಿಸಿಕೊಳ್ಳದೆ ಜಿನಸಿದ್ಧಮಹಿಮೆಯ
ಕಾಣಿಸಿ ಪಾಡಿದರೊಲ್ದು ॥ ೩೯ ॥

ರನ್ನ ಮೂರರ ಗುಣವನು ಮುಖವೀಣೆಯ
ಸನ್ನಾಹದಿಂದ ಹಾಡಿದರು
ಚೆನ್ನಾಯ್ತು ಸೊಬಗಾಯ್ತು ಸೊಗಸಾಯ್ತು ಲೇಸು ಲೇ
ಸಿನ್ನೊಮ್ಮೆಯೆಂದು ಕೇಳ್ವಂತೆ ॥ ೪೦ ॥

ದನಿ ಲೇಸು ಮೇಳದ ಜೋಕೆ ಲೇಸಾಳಾಪ
ವನುಭವಲೇಸು ಮತ್ತಲ್ಲಿ
ಜಿನನಾಮ ಕೂಡಿತು ಲೇಸು ಲೇಸೆಂದು ರಾ
ಯನ ಮುಂದೆ ನುಡಿದರಚ್ಚಿಗರು ॥ ೪೧ ॥

ತುಂಬಿಯ ಗಾನವಂತಿರಲಿ ಕೋಕಿಲನಾದ
ವೆಂಬರ ಮಾತದಂತಿರಲಿ
ತುಂಬುರ ನಾರದರಿನ್ನೇಕೆ ಹೋಪುರೆ
ಯೆಂಬಂತೆ ಸೊಗಸಿ ಹಾಡಿದರು ॥ ೪೨ ॥

ಸಮವಸರಣದೊಳು ವಿಮಲಕಿರಣದೊಳ
ಗಮಲ ಮುನಿಗಳ ವೃಂದದೊಳು
ಕಮಲಕರ್ಣಿಕೆಗೆ ಸೋಂಕದೆ ನಿಂದ ದೇವನ
ಗಮಕವನೊಲ್ದು ಪಾಡಿದರು ॥ ೪೩ ॥

ಜಿನನ ಪೊಗಳಿ ಕೂಡೆ ಸಿದ್ಧರ ಕೀರ್ತಿಸಿ
ಮುನಿಗಳ ವಂದಿಸಿ ಮತ್ತೆ
ತನುವಿನೊಳಿದ್ದಾತ್ಮತತ್ವವಿಚಾರವ
ಜನಪತಿ ಮೆಚ್ಚಿ ಹಾಡಿದರು ॥ ೪೪ ॥

ನರುಗಬ್ಬಿನೊಳಗಣ ರಸವ ಕಾಣದೆ ಪಶು
ಹೊರಗಣೆಲೆಯ ಸವಿವಂತೆ
ಅರಿದೊಳಗಾತ್ಮಸುಖವನುಣಲರಿಯದೆ
ಹೊರಗೆಳಸುವರಂಗಸುಖಕೆ ॥ ೪೫ ॥

ತಿಳಿವೆ ಶರೀರ ತಿಳಿವೆ ರೂಪು ಬೆಳಗೆ ಮೈ
ಬೆಳಗೆ ತಾನಾಗಿರುತಿಹುದು
ತಿಳಿವು ಬೆಳಗುಗಳೆ ಹಂಸನ ಕುರುಹೆಂದು
ತಿಳಿದು ನೋಳ್ಪವನೀಗ ಧನ್ಯಾ ॥ ೪೬ ॥

ನಾಲಗೆ ಕುಡುಹು ಶರೀರವೆ ವಾದ್ಯ ನಿ
ರಾಳಾತ್ಮನೇ ವಾದ್ಯಕಾರ
ತಾಳನುಡಿಸುತಿರ್ದು ಬಿಟ್ಟುಹೋದರೆ ದೇಹ
ಡೋಳಿನಂದದೊಳು ಬಿದ್ದಿಹುದು ॥ ೪೭ ॥

ವಾದ್ಯಗಳಾರಾರು ಪಿಡಿದು ಬಾಜಿಸಿದರೆ
ವೇದ್ಯವೆನಿಸಿ ದನಿಯಹವು
ಚೋದ್ಯವೀ ತನುವಾದ್ಯ ತಾಳ್ದೀರ್ವಗಲ್ಲದೆ
ಭೇದ್ಯವಾಗದು ಧ್ವನಿಗೊಡದು ॥ ೪೮ ॥

ಲೋಹವ ಹೊಕ್ಕಗ್ನಿ ಹೊಯ್ಲಿಗಿಡುವುದಾ
ಲೋಹವನಗಲೆ ಹೊಯ್ಲುಂಟೆ
ದೇಹವ ಹೊಕ್ಕಿದ್ದರಾತ್ಮಗೆ ಬಾಧೆಯು
ದೇಹವಳಿಯೆ ಬಾಧೆಯುಂಟೆ ॥ ೪೯ ॥

ಪೊತ್ತ ದೇಹವ ಬರುಮರಣದೊಳ್ಬಿಟ್ಟಿತಿ
ಮತ್ತೊಂದು ದೇಹ ಮುಂದಹುದು
ಹೊತ್ತದೇಹವ ಬಿಟ್ಟು ಮತ್ತೊಂದು ದೇಹವ
ಪತ್ತದೆ ನಿಲ್ವುದು ಮುಕ್ತಿ ॥ ೫೦ ॥

ಹಿಡಿದ ದೇಹವ ಬಿಟ್ಟು ಮತ್ತೊಂದು ದೇಹವ
ಪಿಡಿಯದೆ ನಿಲ್ವುದೆಂತೆನಲು
ಬಿಡದೆ ಸುಜ್ಞಾನಾಗ್ನಿಯಿಂದ ಕರ್ಮದ ಬೇರ
ಸುಡುವುದೊಂದೆಂದು ಪಾಡಿದರು ॥ ೫೧ ॥

ಹುಟ್ಟಿತಾಗಳೆ ನಸುನಗೆ ಮೊಗದೊಳು ಮನ
ದಟ್ಟಿತಾ ನುಡಿಯದೆ ಚಕ್ರಿ
ಇಟ್ಟನವರ ಮೇಲೆ ತನ್ನ ಕೋಮಲಹಸ್ತ
ಮುಟ್ಟಿ ದೇವಾಂಗ ವಸ್ತ್ರವನು ॥ ೫೨ ॥

ಗಾನ ನಿಂದುದು ಗಾಯಕರ ಮೆಚ್ಚುಮಿಗೆ ಬಂದು
ದಾನಂದ ಸಂದುದು ಸಭೆಗೆ
ಭೂನಾಥನಾಸ್ಥಾನದೊಳಗಿದ್ದ ನಿಲ್ಲಿಗಾ
ಸಾನದ ಸಂಧಿ ಸುಗಂಧಿ ॥ ೫೩ ॥

ಕವಿನಾಕ್ಯ ಸಂಧಿ

ಸಂಗೀತಗೋಷ್ಠಿ ನಿಂದುದು ಸಾಹಿತ್ಯಸು
ಸಂಗತಿಗೆಳಸಿ ನೃಪೇಂದ್ರ
ತುಂಗ ವಿದ್ವಾಂಸರ ನೆರನಿಗೊಯ್ಯನೆ ತನ್ನ
ಕಂಗಳ ಕಾಂತಿದೋರಿದನು ॥ ೧ ॥

ಕವಿಗಳು ಹಲಬರುಂಟವರ ಮಧ್ಯದಳೊಬ್ಬ
ದಿವಿಜಕಲಾಧರನೆಂಬ
ಕವಿಯಿದ್ದನವನ ಮೊಗವ ನೋಡಲೊಡನಾ
ಕವಿನುಡಿದನು ಭಾವರಿದು ॥ ೨ ॥

ಶ್ರೀ ಜಿನಚರಣಾಬ್ಜ ಸುರಭಿಮಧುವ್ರತ
ರಾಜಾಧಿರಾಜಾಗ್ರಗಣ್ಯ
ರಾಜಿತ ಹಂಸಕಲಾನಂದ ನಿನಗೆ ಮ
ಹಾಜಯ ಸಿದ್ಧಿರಸ್ತೆಂದಾ ॥ ೩ ॥

ಜಯಸಿದ್ಧಿಯೆಂಬುದು ವೈರಿಭೂಪರನೊತ್ತಿ
ಜಯಿಸಿದರದು ಲೌಕಿಕಾರ್ಥ
ಭಯಬಡಿಸುವ ಕಾಲಕರ್ಮವನೊತ್ತಿ
ಜಯಿಸಿದರದು ಪರಮಾರ್ಥ ॥ ೪ ॥

ಲೌಕಿಕ ಜಯವಂತರುಂಟು ಪಲಂಬರಾ
ಲೌಕಿಕ ಪರಮಾರ್ಥವೆರಡಾ
ಭೂಕಾಂತರಲ್ಲಿ ಪಡೆವುದು ದುರ್ಲಭ ಸುವಿ
ವೇಕ ಬೇಕದಕೆ ಚಕ್ರೇಶ ॥ ೫ ॥

ಭೋಗವಿಚಾರವು ಬೇಕು ನೃಪತಿಗಾತ್ಮ
ಯೋಗವಿಚಾರವು ಬೇಕು
ರಾಗರಸಿಕನಾಗಬೇಕು ಭಾವಿಸೆ ವೀತ
ರಾಗರಸಿಕನಾಗಬೇಕು ॥ ೬ ॥

ಕೊಡಬೇಕು ಕೊಡುವಲ್ಲಿ ಪಾತ್ರವರಿಯಬೇಕು
ನುಡಿಬೇಕು ಮೌನವೂ ಬೇಕು
ಬಡವರಂತಿರಬೇಕು ಪ್ರಭುವಿನಂತಿರಬೇಕು
ನಡೆಯಿದು ಜಾತಿಕ್ಷತ್ರಿಯರ ॥ ೭ ॥

ಪ್ರಜೆ ಪರಿವಾರಕ್ಕೆ ಹಿತನಂತೆ ವೈರಿಭೂ
ಭುಜರಿಗೆ ಭುಜಗೇಂದ್ರನಂತೆ
ನಿಜಗುರುವಿಗೆ ಭೃತ್ಯನಂತೆ ಧಾರ್ಮಿಕರಿಗೆ
ನಿಜಬಂಧುವಾಗಿರಬೇಕು ॥ ೮ ॥

ಪರವೆಂಗಳಿಗೆ ಹೇಡಿ ಕದನಕ್ಕೆ ಕಡುಗಲಿ
ಪರಮತಕ್ಕೊಡಂಬಡೆ ಮೂರ್ಖ
ಅರುಹನಾಗಮದೊಳರ್ತಿಗನಾತ್ಮ ಕಲೆಯೊಳು
ಸರಸನಾಗಿರಬೇಕು ನೃಪತಿ ॥ ೯ ॥

ಹವಣಿಸಿಕೊಳ್ಳಬೇಕಿಂದ್ರಿಯವರ್ಗವ
ನವಿಚಳನಾಗಿರಬೇಕು
ಭುವನಕಿಂದಿನ ರಾಯ ಸ್ವರ್ಗಕೆ ನಾಳಿನ
ದಿವಿಜೇಂದ್ರನೆನಿಸಿರಬೇಕು ॥ ೧೦ ॥

ಎರಳೆ ಮೀನಾನೆ ಪತಂಗ ತುಂಬಿಗಳು ಕಾ
ತರಿಸಿ ಯೊಂದೊಂದಿಂದ್ರಿಯದೊಳು
ಪರಿಭವವಡೆದವಿನ್ನೈದಿಂದ್ರಿಯಕೆ ಸಿಕ್ಕಿ
ದರಸು ಕೆಡುವುದಾವ ಚೋದ್ಯ ॥ ೧೧ ॥

ಜ್ಞಾನಶೂನ್ಯನ ಪಂಚೇಂದ್ರಿಯ ಪಂಚಾಗ್ನಿ
ಜ್ಞಾನಿಯಿಂದ್ರಿಯ ಪಂಚರತ್ನ
ಜ್ಞಾನವಿಲ್ಲದೆ ಭೋಗಿಸುವ ಭೋಗಿ ಭವರೋಗಿ
ಜ್ಞಾನವಿಡಿದ ಭೋಗಿ ಯೋಗಿ ॥ ೧೨ ॥

ಜ್ಞಾನಿಯ ಮುಟ್ಟಲಮ್ಮದು ಕರ್ಮವೆನ್ನಲಾ
ಜ್ಞಾನ ತಾನಾವುದೆಂದೆನಲು
ಜ್ಞಾನವೆ ನಾನು ಶರೀರ ನಾನಲ್ಲೆಂಬ
ಮಾನಸದನುಭವವಲ್ತೆ ॥ ೧೩ ॥

ಆಗಾಗ ದೇಹ ಬೇರಾತ್ಮ ಬೇರೆಂದು ವಿ
ಭಾಗಿಸಿ ತನ್ನ ತಾ ನೆಮ್ಮಿ
ಭೋಗಿಸಿದರೆ ಕರ್ಮಬಂಧವಿಲ್ಲಾಗಿಯಾ
ಭೋಗಿ ತಾನೇ ಯೋಗಿಯಲ್ತೆ ॥ ೧೪ ॥

ಭೂಮಿಯೊಳಗೆ ಹೂಳ್ವ ಲೋಹಮಣ್ಬಿಡಿವುದು
ಹೇನು ಮಣ್ಬಿಡಿವುದೇ ನೃಪತಿ
ಕಾಮಿಸಿ ಭೋಗಿಸುವಗೆ ಕರ್ಮಬಂಧ, ನಿ
ಷ್ಕಾಮಭೋಗಿಗೆ ಬಂಧವುಂಟೆ ॥ ೧೫ ॥

ನಿನ್ನ ವರ್ತನವಿದು ಪರಮರಹಸ್ಯವಿಂ
ದಿನ್ನೊಬ್ಬರೊಳು ಕಾಣ್ಬೊಡಿಲ್ಲ
ನಿನ್ನ ನಡೆಯ ನಿನ್ನ ನುಡಿಯ ನಿನ್ನೊಳೆ ಕಂಡು
ನಿನ್ನ ಮುಂದೋದಿದೆನರಸ ॥ ೧೬ ॥

ಹೊರಗೆಲ್ಲವ ತೊರೆದೊಳಗೆ ನಿರ್ಮಲವಾಗಿ
ಮೆರೆವವರುಂಟು ಲೋಕದೊಳು
ಹೊರಗೆಲ್ಲವಿದ್ದೊಳಗೇನುವಿಲ್ಲೆನೆ ಬಚ್ಚ
ಬರಿದಾದರಾರು ನಿನ್ನಂತೆ ॥ ೧೭ ॥

ಇವನನವನ ಗೆಲ್ವರಾವುದುಪಾಯವೆಂ
ದವನಿಯೊಳಿಣಿಸುವರುಂಟು
ಜವನ ಜಯಿಸುವರುಪಾಯವೇನೆಂದೆಂಬ
ಭುವನೇಶರುಂಟೆ ನಿನ್ನಂತೆ ॥ ೧೮ ॥

ಗಾನ ಮದ್ದಳೆ ತಾಳ ಲಯಕೆ ನರ್ತಿಪ ಮಂದ
ಯಾನೆಗೆ ಶಿರದ ಕುಂಭದೊಳು
ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿಸಂ
ಧಾನದೊಳಗೆ ನಿನ್ನ ನೆನಹು ॥ ೧೯ ॥

ಪಟಗಾರನುರೆ ಸೂತ್ರವಿಡಿದಿದ್ದರಾ ಗಾಳಿ
ಪಟ ಗಗನದೊಳಾಡುವಂತೆ
ಕುಟಿಲವಲ್ಲಾತ್ಮ ನಿನ್ನಂಗದೊಳಿರ್ದು ಸಂ
ಘಟಿಸಿ ಮುಕ್ತಿಯೊಳದೆ ಬುದ್ಧಿ ॥ ೨೦ ॥

ಮೊಲೆ ಮುಡಿ ಮುಖ ನಖ ಕಟ ತುಟಿಯೆಂದರೆ
ಒಲಿದೀವರುಂಟು ಲೋಕದೊಳು
ಒಳಹೊರಗಾತ್ಮ ಶರೀರವೆಂಬೀ ನುಡಿ
ಗೊಲಿದೀವರಾರು ನಿನ್ನಂತೆ. ॥ ೨೧ ॥

ಗದ್ದುಗೆಯೇರಿ ದುಷ್ಕಥೆಗೇಳಿ ಹಲಬರು
ಬಿದ್ದುಹೋಗುವರಧೋಗತಿಗೆ
ಗದ್ದುಗೆಯೇರಿ ಸತ್ಕಥೆಗೇಳಿ ಮುಕ್ತಿಯ
ಹೊದ್ದುವರಾರು ನಿನ್ನಂತೆ ೨೨ ॥

ಒಳಗಿದ್ದ ದೇವನ ಕಾಣದೆ ಹೊರಗೆ ದೇ
ಗುಲವ ಪೂಜಿಸುವೆಗ್ಗನಂತೆ
ಒಳಗಣಾತ್ಮನ ಬಿಟ್ಟು ಮೈಯನೆ ತಾನೆಂದು
ಸಲೆ ಹೊಗಳಿಸಿಕೊಳುತಿಹರು ॥ ೨೩ ॥

ಇಂದ್ರನಂತಿನನಂತೆ ಚಂದ್ರನಂತೆಂದು ನ
ರೇಂದ್ರರು ಹೊಗಳೆ ಮೆಚ್ಚುವರು
ಇಂದ್ರಾದಿಗಳು ಲಯಕೊಳಗಾದರಾತ್ಮ ಜಿ
ನೇಂದ್ರನೆಂದೆನಲೊಲ್ಪೆ ನೀನು ॥ ೨೪ ॥

ನೃತ್ಯಕೇಳಿಯೊಳು ಸಂಗೀತಕೇಳಿಯೊಳು ಸಾ
ಹಿತ್ಯಕೇಳಿಯೊಳಾತ್ಮಕಲೆಯ
ಅತ್ಯಂತ ಮಮತೆಯೊಳಾದರಿಸುವ ಕೃತ
ಕೃತ್ಯರಾರರಸ ನಿನ್ನಂತೆ ॥ ೨೫ ॥

ಭೋಗವಿಲ್ಲದೆ ಭೋಗಿಯಹುದು ನಿನ್ನೊಳಗಾತ್ಮ
ಯೋಗವಿಲ್ಲದೆ ಯೋಗಿಯಹುದು
ಭೋಗದೊಳಿದ್ದು ಯೋಗವ ಮಾಡಿ ಭವಮುಕ್ತ
ರಾಗುವರಾರು ನಿನ್ನಂತೆ ॥ ೨೬ ॥

ತನು ಜಿನಗೃಹವೆಂದು ಮನ ಸಿಂಹಪೀಠವೆಂ
ದನುಪಮಾತ್ಮನೆ ಜಿನನೆಂದು
ನೆನಹನೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ
ಜಿನನಾಥ ತೋರುವನೊಳಗೆ ॥ ೨೭ ॥

ಕಲಿತು ಮರೆದುದೊಂದು ಪದ್ಯವ ನೆನೆದುದ
ನೊಳಗೊಳಗಾಲೋಚಿಪಂತೆ
ತಿಳಿವು ಬೆಳಗು ನನ್ನ ರೂಪೆಂದು ನೆನಹು ಮೈ
ಯೊಳಗಾಡಲಾತ್ಮ ತೋರುವನು ॥ ೨೮ ॥

ಸುರುಚಿರ ಛಾಯಾಪ್ರತಿಮೆಗೆ ಛಾಯಾ
ಪುರುಷಗೆ ಸದೃಶನನೆಂದು
ಸ್ಮರಿಸುತ ಕಣ್ಮುಚ್ಚಿ ನೋಡಿದರವರಂತೆ
ಪರಮಾತ್ಮ ತೋರುವನೊಳಗೆ ॥ ೨೯ ॥

ಭೊಗ್ಗನೊಂದೇ ದಿನದೊಳು ತೋರನಾತ್ಮನು
ಬಗ್ಗಿದಾಗಳೆ ಬಾಗಿಲಹುದೆ
ನುಗ್ಗೆಯ ಮರನಲ್ಲ ಕರ್ಮವೆಂಬುದು ಕರ್ಮ
ಜಗ್ಗಲೊಯ್ಯನೆ ತೋರುತಿಹನು ॥ ೩೦ ॥

ಎಳೆಮಿಂಚಿನಂದದ ಬೊಂಬೆಯೊ ತಿಂಗಳ
ತಿಳಿವೆಳಗಿನೊಳಾದ ರೂಪೋ
ಪಳಕಿನ ಪುತ್ತಳಿಯೋಯೆನೆ ಕ್ರಮದಿಂದ
ಹೊಳೆವುದೊಳಗೆ ತನ್ನ ರೂಪು ॥ ೩೧ ॥

ನುಡಿಯಿಲ್ಲ ನಡೆಯಿಲ್ಲ ತನುವಿಲ್ಲ ಮನವಿಲ್ಲ
ಕಡೆಗೆ ಪಂಚೇಂದ್ರಿಯವಿಲ್ಲ
ಕಡೆಸುಖ ಸುಜ್ಞಾನ ಕಾಂತಿಯೆ ರೂಪಾಗಿ
ವೊಡಲು ತುಂಬಿಹುದಾತ್ಮರೂಪು ॥ ೩೨ ॥

ದೇವ ನೀನಧ್ಯಾತ್ಮಸೂರ್ಯ ನಿನ್ನಿದಿರಲ್ಲಿ
ನಾವೆಲ್ಲರಧ್ಯಾತ್ಮರಸವ
ಈ ವಿಧವೆಂಬುದು ರವಿಗೆ ಪ್ರಕಾಶವ
ದೀವಿಗೆಗಳು ತೋರ್ಪ ರೀತಿ ॥ ೩೩ ॥

ಬಾವನ್ನ ವೃಕ್ಷದೊತ್ತಿನೊಳಿರ್ದ ಮರಗಳು
ತಾವೆಲ್ಲ ಕಮ್ಮನಪ್ಪಂತೆ
ದೇವ ನಿನ್ನೊಡನಾಡಿ ನಾವೆಲ್ಲರರಿದೆವು
ಜೀವಶುದ್ಧಿಯ ತುದಿಮೊದಲ ॥ ೩೪ ॥

ದಿವಿಜಕಲಾಧರ ಕವಿಯಂತು ರಚಿಸಿದ
ನವಸುಪ್ರಸಂಗ ರಾಯನಿಗೆ
ಕವಿಹೊಕ್ಕುದೆದೆದಟ್ಟಿತಧ್ಯಾತ್ಮವೆಂಬಾಗ
ಲವಲವಿಸುವನಾ ನೃಪತಿ ॥ ೩೫ ॥

ತನ್ನಂತರಂಗಾನುಭವವನೆಲ್ಲವನೀತ
ಮುನ್ನ ಕಂಡಂತೆ ಪೇಳ್ದಪನು
ಬಿನ್ನಣೆಯಹುದೆಂದು ಬಾಯ್ದೆರೆದುಸುರದೆ
ತನ್ನೆದೆಯೊಳು ಮೆಚ್ಚಿ ನೆನೆದ ॥ ೩೬ ॥

ತರ್ಕಶಾಸ್ತ್ರದೊಳೊಡ್ಡಿ ತಗರು ತಗರಿನಂತೆ
ಮಾರ್ಕೊಂಡು ಹೊಡೆದಾಡಬಹುದು
ಅರ್ಕನಂತೆಸವಾತ್ಮಯೋಗವಿಂತಿಹುದೆಂದು
ಬೇರ್ಕೈದು ವಚನಿಸಲರಿದು ॥ ೩೭ ॥

ಆಗಮ ಕಾವ್ಯ ನಾಟಕದೊಳೆಲ್ಲರ ತಲೆ
ದೂಗಿಸಿ ಮಲಗಿಸಬಹುದು
ಮೂಗರು ಕಂಡ ಕನಸಿನಂತೆ ಮೆರೆವಾತ್ಮ
ಯೋಗವನಾರಾಡಬಹುದು ॥ ೩೮ ॥

ಉಂಡವ ತೇಗುವಂತಾತ್ಮನ ಭಾವಿಸಿ
ಕಂಡವನದ ಪೇಳಬೇಕು
ಕಂಡು ಪೇಳಿದರು ನಿರ್ಭವ್ಯರೊಪ್ಪರು ಭವ್ಯ
ಪುಂಡರೀಕರು ಮೆಚ್ಚಬೇಕು ॥ ೩೯ ॥

ಈ ಕವಿಯಾಸನ್ನ ಭವ್ಯನಹುದು ಸಿದ್ಧ
ಲೋಕಪಥಿಕನಹುದೆಂದು
ವಾಕುದೋರದೆ ಮುನ್ನ ನೆನೆದು ಮತ್ತೊಯ್ಯನೆ
ವಾಕುತೋರಿದನಾ ಚಕ್ರಿ ॥ ೪೦ ॥

ಬಾರೈ ದಿವಿಜಕಲಾಧರ ಸುಕವಿಯೆಂ
ದಾರಾಯನೊತ್ತಿಗೆ ಕರೆದು
ತೋರಹಸ್ತದಲುಡುಗೊರೆಯನಿತ್ತನು ಕಲ್ಪ
ಭೂರುಹ ಕೈನೀಡಿದಂತೆ ॥ ೪೧ ॥

ಬಳಿಕಿಷ್ಟು ನಗೆಗೂಡಿ ಚೆನ್ನಾಯ್ತು ನಿನ್ನಾತ್ಮ
ನೊಳಗೆ ಕಂಡೈ ಲೇಸನುಡಿದೈ
ಬಳಲಿದೆ ಕುಳ್ಳಿರೆಂದಿಂತಯ್ದು ನುಡಿಯಿಂದ
ಕಳುಹಿದನವನನು ರಾಯ ॥ ೪೨ ॥

ಕವಿಯ ಜ್ಞಾನಕೆ ರಾಯ ರಾಯನುದಾರ ಗೌ
ರವಕೆಲ್ಲರರ್ತಿಸುವಾಗ
ಧವಲ ಶಂಖಧ್ವನಿ ಘಳಿಯಾರದಲ್ಲಿ ಭುಂ
ಭುವ ಭುಂಮೆನೆ ಕೇಳಲಾಯ್ತು ॥ ೪೩ ॥

ಆರೋಗಣೆವೇಳೆಗೆ ಸನ್ನೆಯಾಯ್ತೆಂದು
ಆ ರಾಜಸಭೆ ಭೋಂಕನೆದ್ದು
ಆ ರಾಯಗೆರಗಿ ಬೀಳ್ಕೊಂಡುದು ಕಡಲ ಮು
ಹಾರವಮೆನೆ ಧ್ವನಿ ಮಸಗೆ ॥ ೪೪ ॥

ಓಲಗ ಹರಿದುದೊಯ್ಯನೆ ಯೆದ್ದು ಆ ನರ
ಪಾಲಕ ಜಿನಶರಣೆಂದು
ಕಾಲತೊಡವು ಝಣಝಣರೆನಲೆದ್ದನೊ
ಡ್ಡೋಲಗದಿಂದ ಜೀಯೆನಲು ॥ ೪೫ ॥

ನಿತ್ಯದಾನವನೀಯದಾರೋಗಿಸೆನೆಂಬ
ಸತ್ಯಾಂಗಮುಂಟಾ ನೃಪಗೆ
ನಿತ್ಯದಾನಕೆ ಮುನಿಗಳ ತರಬೇಕೆಂಬ
ಕೃತ್ಯ ಸನ್ನದ್ಧನಾದ ॥ ೪೬ ॥

ಕವಿ ತನ್ನ ಹೃದಯವನರಿದುದ ಮೆಚ್ಚುತ
ಭುವನೇಶನೆದ್ದ ಯೋಗಿಗಳ
ಭವನಕೆ ತರಲನುವಾದನೆಂಬಲ್ಲಿಗೆ
ಕವಿವಾಕ್ಯ ಸಂಧಿ ಸುಗಂಧಿ ॥ ೪೭ ॥

ಆರೋಗಣೆ ಸಂಧಿ

ರಾಜರ ದೇವ ರಾಜಾದಿತ್ಯ ರಾಜಾಧಿ
ರಾಜರ ರಾಜನಾ ಚಕ್ರಿ
ರಾಜಮುಂದಿರಕೋಜೆಯಿಂದಡಿಯಿಟ್ಟನು
ರಾಜವಿಡಾಯ ಬಿಮ್ಮೈನಲು ॥ ೧ ॥

ಕರೆದೊಬ್ಬ ಹಿತವನನೀ ಹೊನ್ನರಾಶಿಯ
ಪುರದೊಳಿಹ ಬಡವರಿಗೆ
ತಿರಿಕರಿಗೆರೆವರ್ಗೆ ವೆಚ್ಚಿಸು ಹೋಗೆಂದು
ದೊರೆ ಹೊಕ್ಕನೊಡನರಮನೆಯ ॥ ೨ ॥

ಯತಿಗಳ ಗುಣವ ಬಣ್ಣಿಸುತ ದಾನೊದಳಾದ
ಅತಿಶಯಕಾನಂದ ಬಡುತ
ಪತಿ ಬಹದಾರಿಯ ನೋಡುತಲಾ ಪತಿ
ವ್ರತೆಯರಿದ್ದರು ಗೆಲುವಿನೊಳು ॥ ೩ ॥

ಕಂಡರು ಮುಖಕಾಂತಿ ಥಳಥಳಿಸುತ ಬಹ
ಗಂಡನ ತಮ್ಮಿದಿರಿನೊಳು
ತಂಡ ತಂಡದೊಳೆಲ್ಲರಿದಿರಾಗಿ ಬಂದು ಮುಂ
ಕೊಂಡು ನುಡಿದರೊಳಗರಿದು ॥ ೪ ॥

ದೇವರ ಪರಿಯೆಂದಿನಂದವಲ್ಲಿಂದೊಂದು
ಭಾವವಾಗೆಮಗೆ ತೋರುತಿದೆ
ಭಾವಿಸುವಾಗೊಂದು ಪರಮಲಾಭವ ಪೆತ್ತ
ಠೀವಿಯೊಳಿದೆಯೆಂದರೊಸೆದು ॥ ೫ ॥

ರಾಜನ ಮುಂದೆ ಭೃತ್ಯಗೆ ಗುರುವಿನ ಮುಂದೆ
ರಾಜಗೆ ಹಮ್ಮು ಸಲ್ಲೆಂಬ
ರಾಜನೀತಿಯನರಿದಾ ರಾಜ ನಡೆದನು
ರಾಜವಿಡಾಯವ ಬಿಟ್ಟು ॥ ೬ ॥

ಕೂಡಿದ್ದರೆಲ್ಲರ ನಿಲಿಸಿ ಏಕಾಕಿತ್ವ
ಗೂಡಿ ನಡೆದನಹುದಾಗ
ಬೇಡವೆಂದರು ಬಿಟ್ಟುದಿಲ್ಲ ಮೈಗಂಪಿಗೆ
ಪಾಡುತೈದಿದುವು ತುಂಬಿಗಳು ॥ ೭ ॥

ಬೇಡವೆಂದರು ಬೇಡ ಕಳುವುದ ಬಿಡುವನೆ
ಬೇಡವಣ್ಣದ ತುಂಬಿವಿಂಡು
ಬೇಡವೆಂದರು ಬರುತಿರ್ದುದು ತ್ಯಾಗಿಯ
ಬೇಡುವ ಯಾಚಕರಂತೆ ॥ ೮ ॥

ಹಾವುಗೆ ಮೆಟ್ಟದೆ ಕನ್ನಡಿ ನೆಲದಲ್ಲಿ
ಭೂವರನಡಿಯಿಡುವಾಗ
ಮಾವಿನ ಕೆಂದಳಿರ್ಗೆದರಿದಂತೆಸೆದುದು
ಹಾವುಗೆ ಹಜ್ಜೆಯ ಕೆಂಪು ॥ ೯ ॥

ಎಡಬಲನತ್ತಿತ್ತ ನೋಡದೆ ಮುಂಬಜ್ಜೆ
ವಿಡಿದು ನಿಟ್ಟಿಸುತೊಯ್ಯನೈದಿ
ಕಡೆಯ ಚಾವಡಿಯ ಮುಂಗಡೆಯ ಬಾಗಿಲ್ವಾಡ
ದೆಡೆಯ ಮುಸುಕದಲ್ಲಿ ನಿಂದ ॥ ೧೦ ॥

ಬಳಿಕ ಹಸ್ತದ ಗಿಂಡಿ ಬಟ್ಟಲನಲ್ಲಿ ಹೊಂ
ಬಲಿಗೆಯ ಮೇಲೊಯ್ಯನಿರಿಸಿ
ಹೊಳೆವ ಸುವರ್ಣದ ಕಂಭವ ನೆಮ್ಮಿ ದಿ
ಗ್ವಲಯವ ನೋಡುತ ನಿಂದ ॥ ೧೧ ॥

ನಿಲಿಸಿ ನಾಸಾಗ್ರದೊಳಿಡಗೈಯ ಬೆರಳೊಂದ
ಬಲಗೈಯ ಜಾನುವಿಗಿಟ್ಟು
ಚಿಲುವನೆಸೆದನು ಕಂಭವ ನೆಮ್ಮಿ ತಾನಿಂದ
ನಿಲುಗಡೆ ಜಗವ ಸೋಲಿಸುತ ॥ ೧೨ ॥

ಇನನ ಬರವನಾಶೆ ಮಾಡುವ ರಾತ್ರಿಯ
ವನಜದಂತಾ ಚಕ್ರವರ್ತಿ
ಮುನಿಗಳ ಬರವ ನಿ[1]ಚ್ಛೈಸುತ[1]ತಾನೊಬ್ಬ
ಮುನಿಯಂತೆ ಜಾನಿಸುತಿದ್ದ ॥ ೧೩ ॥

ಮುನಿಗಳು ಬಪ್ಪ ಬಟ್ಟೆಯ ಚರ್ಮದೃಷ್ಟಿಯೊ
ಳನುಮಿಸಿ ನೋಡುವನೊಮ್ಮೆ
ತನುವಿನೊಳಿದ್ದಾತ್ಮರೂಪ ಸುಜ್ಞಾನಲೋ
ಚನದಿಂದ ನೋಡುವನೊಮ್ಮೆ ॥ ೧೪ ॥

ಕೆಲಬಲದೊಳಗತಿ ಸನ್ನಿಧಿಯಲ್ಲದೆ
ಕೆಲಬರೂಳಿಗದವರಾಗ
ಗಲಭೆ ಮಾಡದೆ ತಲೆಮರಸಿಕೊಂಡೊಡೆಯನ
ಬಳಸಿನೊಳಿದ್ದರೀಕ್ಷಿಸುತ ॥ ೧೫ ॥

ಲೋಕವೆಲ್ಲೆನ್ನನೋಲೈಸುತಿರ್ದರು ನಾನು
ಲೋಕವ ಬೆರಸೆನೆಂಬುದನು
ಲೋಕವರಿಕೆ ಮಾಡಲೆಂದು ನಿಂದಂತೆ ತಾ
ನೇಕಾಕಿಯಾಗಿರ್ದನಾಗ ॥ ೧೬ ॥

ಸಾರದಾನವನೀವೆನೆಂದು ಯೋಗೀಂದ್ರರ
ಹಾರುವುದೊಂದಲ್ಲದಾಗ
ಆರೋಗಿಪೆನೆಂಬ ನೆನಹಿಲ್ಲದಾ ದಾನ
ಶೂರನಿದ್ದನು ಸುಚಿತ್ತದೊಳು ॥ ೧೭ ॥

---

1 ಶ್ಚೈಸುತ್ತ (ಕ), ಶ್ಚೈಸುತ್ತಾ (ಖ) ಶ್ಚೈಸುತ (ಛ)

ಭಾವರಿಗೊಟ್ಟ ಯೋಗೀಂದ್ರರನಲ್ಲಲ್ಲಿ
ಶ್ರಾವಕರೆಲ್ಲ ನಿಲ್ಲಿಸಲು
ಭೂವರಾಗ್ರಣಿಯರ ಮನೆಯತ್ತ ಹೊಳದುದಿ
ಲ್ಲಾ ವೇಳೆಯೊಳು ಯೋಗಿರೂಪು ॥ ೧೮ ॥

ಬಲದ ಬೀದಿಯ ನೋಳ್ಪನೆಡದ ಬೀದಿಯ ನೋಳ್ಪ
ನೊಲಿದಿದಿರ್ವೀದಿಯ ನೋಳ್ಪ
ಬಲಗೈಯ ಪೆಗಲಿಕ್ಕೆ ಬಪ್ಪ ಯೋಗೀಂದ್ರರ
ಸುಳುಹುಗಾಣದೆ ಚಿಂತೆಮಾಳ್ಪ ॥ ೧೯ ॥

ಇಂದೇನು ಪರ್ವೋಪವಾಸವೊ ಮುನಿಗಳಿ
ಗೆಂದಾಗ ತಿಥಿಯನಾರೈವ
ಇಂದಿದು ಪರ್ವವಲ್ಲೀಕೆ ಚಿತ್ತೈಸಿತಿ
ಲ್ಲೆಂದೆದೆಯೊಳು ಮರುಗುವನು ॥ ೨೦ ॥

ದಿನ ಬಂಜೆಯಾಗದೆ ಪರಮಾತ್ಮರತರಾದ
ಮುನಿಗಳಿಗನ್ನದಾನವನು
ಮನಮುಟ್ಟಿ ಮಾಡುವ ಭಾಗ್ಯವೆಂಬುದನಾವ
ಮನುಜ ಪಡೆಯಬಹುದೆಂಬ ॥ ೨೧ ॥

ಹಡಗು ದ್ವೀಪಕೆ ಹೋಗುತಿರಲಲ್ಲಿ ವಸ್ತುವ
ಗಡಣಿಸಿ ಕಳುಹುವನಂತೆ
ಬಿಡದೆ ಮುಕ್ತಿಗೆ ಹೋಹ ಮುನಿಯ ಕೈಗನ್ನವ
ನಿಡಬೇಡವೆ ಎಂದು ನೆನೆವ ॥ ೨೨ ॥

ಉಣಲರಿಯದ ಜಿನಪ್ರತಿಮೆಯ ಪೂಜೆಯಿಂ
ದುಣಿಸುವುದುಪಚಾರಭಕ್ತಿ
ಉಣಬಲ್ಲ ಮುನಿಯೆಂಬ ಜಿನಗನ್ನ ವೀವ ಸಂ
ದಣೆ ಮುಖ್ಯಭಕ್ತಿಯೆಂದೆಂಬ ॥ ೨೩ ॥

ಏಕೆಂದು ಮುನಿಗಳೀ ದೆಸೆಗೈದುತಿಲ್ಲೆಂದು
ಭೂಕಾಂತ ಚಿಂತಿಸುವಾಗ
ಆಕಾಶದೊಳಗೊಂದು ವಿಸ್ಮಯವಾದ ನು
ಹಾಕಾಂತಿಯೊಡ್ಡು ಕಾಣಿಸಿತು ॥ ೨೪ ॥

ಅತ್ತಿತ್ತ ನೋಳ್ಪುದ ಮಾಣ್ದೊಡನಾಕಾಶ
ದತ್ತ ಕಣ್ಣಿಟ್ಟು ನೋಡಿದನು
ಹತ್ತಿರವಲ್ಲ ದೂರದೊಳಾ ಪ್ರಭೆಯೊಡ್ಡು
ಇತ್ತುದಾ ನೃಪಗೆ ಕೌತುಕವ ॥ ೨೫ ॥

ಏನೆನ್ನ ಬಹುದೀ ಪ್ರಭೆ ನೋಡೆ ಬೇರೊಂದು
ಭಾನುವಿನಂತೆ ತೋರುತಿದೆ
ಶ್ರೀ ನಿರಂಜನಸಿದ್ಧ ಎನುತ ನೋಳ್ಪಾಗದು
ತಾನೆರಡಾಗಿ ಕಾಣಿಸಿತು ॥ ೨೬ ॥

ಜಿನ ಜಿನ ಒಂದಾದುದೊಡನೆರಡಾದುದು
ಇನನಂತೆ ಚಂದ್ರನಂತೆಂದು
ಜನಪ ನೋಳ್ಪಾಗಳಾ ಪ್ರಭೆಗಳು ಮುಟ್ಟಿ ಮು
ಟ್ಟಿನೆ ಬರುತಿರ್ದುವು ತನಗೆ ॥ ೨೭ ॥

ಆಹಾ ಪ್ರಭೆಯಿದು ಚಾರಣ ಮುನಿಗಳ
ರೂಹಾಗಬೇಕಹುದೆಂದು
ಊಹಿಸುತಿದ್ದವ ನೋಡುತಿದ್ದಾ ಮುನಿ
ರೂಹವ ಕಂಡ ಬಾನದೊಳು ॥ ೨೮ ॥

ಹರಿದುದು ಚಿಂತೆ ಸಂತಸವಾಯ್ತು ರೋಮಾಂಚ
ನೆರೆದುದಾಗಳೆ ದೇಹ ತುಂಬಿ
ಭರತನ ಪುಣ್ಯವೆ ಬಾಪೆಂದು ಕೆಲದೊಳ
ಗಿರಿಸಿದರ್ಚನೆಯ ಕೈಗಾಂತ ॥ ೨೯ ॥

ಗಿಂಡಿ ಬಟ್ಟಲನೆತ್ತಿ ಕೊಳುವನಿತರೊಳಿಂದು
ಮಂಡಲ ರವಿಮಂಡಲಗಳು
ಮಂಡಿತ ಮುನಿಗಳಾದಂತಿರ್ವರಾಗ ಭೂ
ಮಂಡಲಕಿಳಿತಂದರೊಡನೆ ॥ ೩೦ ॥

ಬಡವ ನಿಧಾನವ ಕಂಡಂತೆ ನಲಿವುತ
ನಡೆದನಾ ನೃಪನಿದಿರಾಗಿ
ಒಡನೆ ನಿಲಿಸಿದನು ಮುನಿಗಳಿರ್ವರನು ಮೈ
ಗೊಡೆ ತಿಷ್ಠ ತಿಷ್ಠ ಯೆಂದಾಗ ॥ ೩೧ ॥

ಭರದಿ ಗಂಧಾಕ್ಷತ ಪುಷ್ಪಗಳಿಂದ
ದರುಶನಾಂಜಲಿ ಮಾಡಿ ಕೂಡೆ
ಹಿರಿಯ ಗಿಂಡಿಯನೆತ್ತಿ ಜಲಶುದ್ಧಿಯಿತ್ತನಾ
ದರ ಮಿಗೆ ಭಾವಶುದ್ಧಿಯೊಳು ॥ ೩೨ ॥

ಬಲಗೊಂಡನುರೆ ಮೂರು ಬಾರಿ ತನ್ನೊಳು ತಾನು
ಗೆಲವೇರಿ ಮುನಿಗಳಿರ್ವರಿಗೆ
ನಲಿದೆರಗಿದನು ನಿಧಾನದೆಡೆಗೆ ದೀಪ
ಕಳಿಕೆ ತಾನೆರಗುವಂದದೊಳು ॥ ೩೩ ॥

ಮುನಿಗಳಿಗೊಲ್ದು ನಿವಾಳಿಯನಿಟ್ಟಿನ್ನ
ಮನೆಗೆ ಚಿತ್ತೈಸಬೇಕೆಂದು
ಮನುಜೇಶ ವೈಯಿಕ್ಕಿ ನಡೆದನು ಮುಂದೆ ಬೆ
ನ್ನ ನೆ ಗಮಿಸಿದರು ಯೋಗಿಗಳು ॥ ೩೪ ॥

ನಿಧಿಯನರಸುತಿದ್ದ ಕಂಡವನೊಯ್ಯನಾ
ನಿಧಿಯನೊಯ್ವಂತಾತ್ಮಗೃಹಕೆ
ನಿಧಿಗಧಿನಾಥನು ಕೊಂಡೊಯ್ದನಾ ಗುಣ
ನಿಧಿಗಳ ತನ್ನ ರಮನೆಗೆ ॥ ೩೫ ॥

ಹೊನ್ನ ಬಾಗಿಲುಗಳ ರನ್ನ ದೋರಣಗಳ
ಪನ್ನೀರು ಸಾದಿನಿಂದೆಸೆವ
ಕನ್ನಡಿನೆಲದರಮನೆಯೊಳು ಹೊಕ್ಕು ನಿ
ರ್ಭಿನ್ನಾಂತರಂಗರೈದಿದರು ॥ ೩೬ ॥

ಕಿರಿದೆಡೆಗೈದಿ ಸೇವಕರು ನಿಂದರು ಮತ್ತೆ
ಕಿರಿದೆಡೆಗಿದಿರಾಗಿ ಬಂದು
ಕಿರುನಡುವೆಸೆಯೆ ಊಳಿಗವೆಂಗಳೂಳಿಗ
ವರಿದೆಸಗಲು ರಾಯ ನಡೆದ ॥ ೩೭ ॥

ತಗ್ಗು ಸೋಪಾನದೊಳಿಳಿವಾಗ ಮುನಿಗಳ್ಗೆ
ಬೊಗ್ಗನೆ ಕೈಲಾಗುಗೊಡುವ
ಉಗ್ಗಡದೇರು ಸೋಪಾನದೊಳವರ ಕೈ
ಯೊಗ್ಗಿ ಹಿಡಿದು ಮೇಲೆ ನೆಗೆವ ॥ ೩೮ ॥

ಸ್ವಾಮಿ ಶ್ರೀಪಾದವೆಚ್ಚರಿಕೆಯೆಂಬನು ಕೂಡೆ
ಆ ಮಾತನುಪಚಾರವೆಂಬ
ವ್ಯೋಮದೊಳೆಯ್ದುವ ನಿಮಗೆ ಪೈಸರವುಂಟು
ಶ್ರೀಮುನಿತಿಲಕರಿಗೆಂಬ ॥ ೩೯ ॥

ಅದಕಲ್ಲ ಸ್ವಾಮಿಗಳಿರ ನೋಡಿ ನಾವಿಪ್ಪ
ಸದನವೆಲ್ಲವು ಡೊಂಕು ನಮ್ಮ
ಹೃದಯವಿನ್ನೆಷ್ಟು ಡೊಂಕೋ ನೀವು ಬಲ್ಲಿರೆಂ
ದೆದೆಗಿಂಪುದೋರಿ ನುಡಿದನು ॥ ೪೦ ॥

ಮನೆ ಡೊಂಕು ಮನಸು ಡೊಂಕಾದರು ನಿಮ್ಮ ಶಿ
ಷ್ಯನ ಮೇಲಣತಿ ಪ್ರೀತಿಯಿಂದ
ಜಿನಕಲ್ಪರಿರ ಬಿಜಯಂಗೈದಿರಿನ್ನೆನ್ನ
ಮನೆ ಮನಗಳು ನೇರವೆಂದ ॥ ೪೧ ॥

ಆಡುವ ನೃಪನ ಮಾತಿಗೆ ನಸುನಗುತಿಪ್ಪ
ನೋಡುವರಾ ಮುನಿವರರು
ಕೂಡೊಂದು ಮಾತ ನುಡಿಯರಿಬ್ಬರುಪಶಾಂತಿ
ಗೂಡಿ ನಡೆದರು ಮೌನದೊಳು ॥ ೪೨ ॥

ನುಡಿಯಬೇಕೆಂಬಿಚ್ಛೆಯುಂಟು ಭಿಕ್ಷೆಗೆ ಮುನ್ನ
ನುಡಿಯೆವೆಂಬುದೆ ವ್ರತ ತಮಗೆ
ಒಡಲೊಳಾತನ ಭಕ್ತಿರಸಕೆ ಮೆಚ್ಚುತ ಮುಂದೆ
ನಡೆದರು ನಡೆಜಿನರುಗಳು ॥ ೪೩ ॥

ಭಂಗು ಭಕ್ತಿ ವಿನಯದಿಂದಾ ರಾಯ ರಾಜಾ
ಲಯಕೆ ಯೋಗಿಗಳನೊಯ್ವಾಗ
ಜಯ ಮಹಾಲಕ್ಷ್ಮಿಯರಿದಿರುಗೊಂಬಂತೆ ರಾ
ಣಿಯರು ಬಂದರು ಚಕ್ರಧರನ ॥ ೪೪ ॥

ನವರತ್ನದಾಭರಣದ ಕಾಂತಿ ದೇಹ
ಚ್ಛವಿಯೊಳು ಬೆರಸಿ ಬಿಂಬಿಸಲು
ಭವನದ ನೆಳಲನೊತ್ತರಿಸುತ ಬಂದರು
ದಿವಿಜಲತಾಂಗಿಯರಂತೆ ॥ ೪೫ ॥

ಆರತಿಯೆತ್ತಿ ನಿವಾಳಿಯನಿಟ್ಟು ಗಂ
ಭೀರ ಗಮಕದೋಜೆಯಿಂದ
ಚಾರಣ ಯೋಗೀಂದ್ರರಡಿಗಳಿಗಾ ನೃಪ
ನಾರಿಯರೊಲ್ದಿರಗಿದರು ॥ ೪೬ ॥

ಕ್ರಮದಿಂದ ಬಿಜಯಂಗೈಸಿದಂತಾ ಯೋಗಿ
ಕ್ರಮಕಮಲಂಗಳ ತೊಳೆದು
ದ್ಯುಮಣಿ ಹುಟ್ಟಿದ ಮನೆಯೋ ಎನೆ ಬೆಳಗು
ಳ್ಳಮೃತಗೃಹವನ್ಯೈದಿಸಿದನು ॥ ೪೭ ॥

ಉನ್ನತಾಸನವಿತ್ತು ಪಾದಪೂಜೆಯ ಮಾಡಿ
ಹೊನ್ನುಪಕರಣವ ಹರಹಿ
ತನ್ನ ಬಲಿಯರು ತಾನೆಚ್ಚತ್ತು ಮುನಿಗಳಿ
ಗನ್ನದಾನವನಿತ್ತರೊಸೆದು ॥ ೪೮ ॥

ದಾತೃಗಳೊಳಗವನೀಶನುತ್ತಮನು ಸು
ಪಾತ್ರದೊಳುತ್ತಮರವರು
ದಾತೃವಿತ್ತನು ಪಾತ್ರವಾಂತುದು ಸಿದ್ಧಾಂತ
ಸೂತ್ರದೊಳಿಂತು ಪೇಳ್ದಂತೆ ॥ ೪೯ ॥

ಬಡಿಸುವ ಸ್ತ್ರೀಯರ ಯುಕ್ತಿ ಹಸ್ತಕೆ ತುತ್ತ
ಗೊಡುವ ರಾಯನದೊಂದು ಯುಕ್ತಿ
ಬಡವಿಲ್ಲದೆಸೆವ ಸ್ತ್ರೀಪುರುಷರ ಭಕ್ತಿ ಹೋ
ತಡೆಯದಿನ್ನವರಿಗೆ ಮುಕ್ತಿ ॥ ೫೦ ॥

ಭಿನ್ನರುಚಿಗೆ ಹಿಗ್ಗದೊಂದು ವಸ್ತುವ ಬೇಡಿ
ಸನ್ನೆದೋರದೆ ಮುನಿವರರು
ತನ್ನ ಕೈಮುಟ್ಟಿ ಚಕ್ರೇಶ್ವರನಿತ್ತ ದಿ
ವ್ಯಾನ್ನವ ಕೊಂಡು ದಣಿದರು ॥ ೫೧ ॥

ಬದ್ಧಪಲ್ಯಂಕಾಸನದೊಳೊಡನೆ ಮುಖ
ಶುದ್ಧಿಯ ಕೊಂಡು ಕೈದೊಳೆದು
ಸಿದ್ಧರ ಜಪಿಸಿ ಕಣ್ಮುಚ್ಚಿ ನಿರಂಜನ
ಸಿದ್ಧನ ನೋಡಿದರೊಳಗೆ ॥ ೫೨ ॥

ಲೆಪ್ಪದ ಪುತ್ತಲಿವೊಲು ಕುಳಿತತ್ತಿತ್ತ
ಲೊಪ್ಪಚ್ಚಿ ದೇಹ ಕಂಪಿಸದೆ
ನೆಪ್ಪರಿದಾತ್ಮನ ನೋಡಿ ಸಿದ್ಧಾಂತದೊ
ಳಿಪ್ಪ ಮಂತ್ರವ ಜಪಿಸಿದರು ॥ ೫೩ ॥

ಕೂಡೆ ಕಣ್ದೆರೆದಿದಿರೊಳಗಿರ್ದ ರಾಯನ
ನೋಡಿದರಾನಂದದಿಂದ
ಆಡಲರಿಯೆನವನುತ್ಸಾಹವನು ಭಕ್ತಿ
ಗೂಡಿ ನಮೋಸ್ತು ಮಾಡಿದನು ॥ ೫೪ ॥

ಸಲೆ ಚಂದ್ರಗತಿಯೆಂಬ ಮುನಿ ಅಕ್ಷಯಂ ದಾನ
ಫಲಮಸ್ತು ತೇ ಎಂದನೊಡನೆ
ನಲವಿನೊಳಾದಿತ್ಯಗತಿಯೆಂಬ ಯೋಗಿ ನಿ
ರ್ಮಲಿನಾತ್ಮಸಿದ್ಧಿರಸ್ತೆಂದ ॥ ೫೫ ॥

ಹಂಸನಾಥನೆ ಬಲ್ಲ ಭರತೇಶನಾ ಮುನಿ
ಹಂಸರಾಶೀರ್ವಾದಗೇಳ್ದು
ಸಂಸಿದ್ಧಿವಡೆದಂತೆ ನಲಿದನು ಸತ್ಪಾತ್ರ
ತಾಂ ಸಿಕ್ಕೆ ನಲಿಯದರಾರು ॥ ೫೬ ॥

ರಾಣಿಯರೆಲ್ಲರೊಲ್ದಿರಗಿದರಾಗ ನೇ
ರಾಣಿಯ ಬೊಂಬೆಗಳಂತೆ
ಕಾಣುತೆಲ್ಲರ ಹರಸಿದರು ಯೋಗಿಗಳು ಗೀ
ರ್ವಾಣ ಭಾಷೆಯೊಳವರರಿಯೆ ॥ ೫೭ ॥

ಸುರವಾಕ್ಯ ಸುರಭೇರಿ ಹೂಮಳೆ ಹೊಂಮಳೆ
ಸುರಭೀರವವೆಂದಿಂತು
ಸುರಕೃತ ಪಂಚವೈಭವಗಳಾದುವು ಮಱು
ಭರತೇಶದಾನವೈಭವವೆ ॥ ೫೮ ॥

ಮುನಿಗಳೆದ್ದರು ಜಿನ ಶರಣೆಂದು ನೃಪನರ
ಮನೆಯಿಂದ ಶಾಂತಭಾವದೊಳು
ನನಗೆ ನೀವೇ ಶರಣೆನುತೆದ್ದನಾ ರಾಯ
ಮುನಿಗಳ ಪಿಂದೆ ರಾಗದೊಳು ॥ ೫೯ ॥

ನಿಲ್ಲಿಲೆ ಭವ್ಯಯೆಂಬರು ಯೋಗಿಗಳು ದೇವ
ರೊಲ್ಲಗೆ ಚಿತ್ತೈಸಿಯೆನುತ
ಮೆಲ್ಲಗೆರಡುರೂಪ ಕೈಕೊಂಡು ಕೈಲಾಗಿ
ನಲ್ಲಿ ನಡಸಿದನಿರ್ವರನು ॥ ೬೦ ॥

ನಾಕೆಂಟು ಮಾರು ನಡೆದು ಮುನಿಗಳು ಕೂಡೆ
ಸಾಕು ನಿಲ್ಲೆಂಬರು ನೃಪನ
ಸಾಕಾಗದಿದೆ ನಿಮ್ಮ ಸೇವೆಯಿನ್ನೊಪ್ಪಪ್ಪೆ
ಬೇಕು ಚಿತ್ತೈಸಿಯೆಂದೆಂಬ ॥ ೬೧ ॥

ಮತ್ತೆಕರಿದುದೂರ ನಡೆವರು ಮುನಿಗಳಿ
ನ್ನಿತ್ತ ಬಾರದಿರೆಂಬರೊಡನೆ
ಇತ್ತ ಬಾರೆಂದೆನ್ನನುದ್ಧರಿಸದೆ ದೇವ
ರೊತ್ತರಿಪರೆ ಎಂದು ನುಡಿವ ॥ ೬೨ ॥

ಮನದಲ್ಲಿ ಹಿಗ್ಗುತಿಹರು ಯೋಗಿನಾಥರು
ಮನುವಿನ ವಿನಯವ ಕಂಡು
ಜಿನನ ಕುಮಾರನಲ್ಲವೆ ಎಂದು ನುಡಿಯದೆ
ನೆನೆವುತ ನಡೆದರೋಜೆಯೊಳು ॥ ೬೩ ॥

ಕಡೆಯ ಬಾಗಿಲುಮುಟ್ಟ ಬಿಡದೆ ಬಂದನು ಮತ್ತು
ಬಿಡುವಿಚ್ಛೆಯಾದುದಿಲ್ಲವರ
ಬಿಡದೆ ಹಂಸರ ಕಾಣ್ಬ ಯೋಗಿರತ್ನರ ಕಂಡು
ಬಿಡುವರೆ ಮೋಕ್ಷಗಾಮಿಗಳು ॥ ೬೪ ॥

ಆದೀಶನಾಣೆ ನೀಸಿನ್ನು ನಿಲ್ಲೆಂದವ
ರಾದರಮಿಗೆ ನಿಲಿಸಿದರು
ಪಾದಕೆರಗಿದನಿರ್ವರಿಗೊಡನೊಂದೆ ರೂ
ಪಾದನಾ ವಿಸ್ಮಯರೂಪ ॥ ೬೫ ॥

ನಡೆನೋಡಿ ನಲವಿಂದ ಹರಸಿದರವರು ಮ
ತ್ತೊಡನೆ ಲಂಘಿಸಿದರಂಬರಕೆ
ಕುಡಿಮಿಂಚಿನಂತೆ ಹೊಳೆದು ಹೋಹ ಯಗಳ
ಬೆಡಗ ಕಣ್ಣಿಟ್ಟು ನೋಡಿದನು ॥ ೬೬ ॥

ದಿಟ್ಟಗೆ ತೋರುವನಿತು ಹೊತ್ತು ಮುನಿಗಳ
ನಿಟ್ಟಿಸಿ ಮಿಗೆ ಹಾಯ್ದ ಮೇಲೆ
ತೊಟ್ಟನೆ ತನ್ನ ರಮನೆಯತ್ತ ಲೊಲಿದನು
ಪಟ್ಟವರ್ಧನ ಸಾರ್ವಭೌಮ ॥ ೬೭ ॥

ಕನಕ ರತ್ನದ ಹಾವುಗೆಯ ಮೆಟ್ಟಿ ಬೀಸುವ
ಕನಕ ಚಾಮರಗಳೊಗ್ಗಿನೊಳು
ಮನುಜೇಶನರಮನೆಗಡಿಯಿಟ್ಟನಲ್ಲಿಗೆ
ಮುನಿಭುಕ್ತಿಸಂಧಿ ಸುಗಂಧಿ ॥ ೬೮ ॥

ಮುನಿಭುಕ್ತಿ ಸಂಧಿ

ಜಿನನೊಬ್ಬ ಬಲ್ಲನಾ ಭರತಚಕ್ರೇಶನ
ಮನದನುಭವವದಿನ್ನೆಂತೊ
ಮುನಿಗಳ ಚರಿಗೆಯ ಕಾಲವನರಿದರ
ಮನೆಯ ಬಾಗಿಲಿಗೆ ನಡೆದನು ॥ ೧ ॥

ಛತ್ರ ಚಾಮರ ಖಡ್ಗ ಹಾವುಗೆ ಮುಂತಾದ
ಧಾತ್ರೀಶಚಿಹ್ನವನಿರಿಸಿ
ಪಾತ್ರದಾ[1]ನದ[1]ಪೇಕ್ಷೆಯಿಂದೊಬ್ಬ ಶ್ರಾವಕ
ನಾತ್ರವೆಂದೆನೆ ನಡೆತಂದ ॥ ೨ ॥

ಒಡನಿದ್ದ ಸೇವಕರೆಲ್ಲರ ತೊಲಗಿಸಿ
[2]ಮ[2]ಡಿಮುಟ್ಟ ಧೋತ್ರವನುಟ್ಟು
ಬೆಡಗು ಬಿನ್ನಣ ಬೀರೆ ಹೊದೆದ ದುಕೂಲವ
ಉ[3]ಡಿ[3]ಸುತ್ತಿ ನಡೆದನಾ ರಾಯ ॥ ೩ ॥

ಬಲಿ ಪುಷ್ಪದಿಂದ ಪೂಜಿಸಿ ನಿಧಿಯನು ತರ
ಲೊಲಿದು ದ್ರವ್ಯಾರ್ಥಿ ಪೋಪಂತೆ
ಚೆಲುವರರಸನರ್ಚನಾದ್ರವ್ಯವೆರಸಿ ನಿ
ರ್ಮಲಯೋಗಿ ಪಥಕೈದಿದನು ॥ ೪ ॥

ತೊಟ್ಟ ಮೋಹನನಾಟ್ಯದೊಳು ಮನ್ಮಥ ಬಾಳು
ಬಟ್ಟಲನಾಂತು ಬಹಂತೆ
ಬಟ್ಟಲು ಗಿಂಡಿವಿಡಿದು ಗರುವಿಕೆಯೊಡ
ಬಟ್ಟು ಬಹರಸನೊಪ್ಪಿದನು ॥ ೫ ॥

---

1 ನಾ (ಕ. ಖ. ಚ. ಛ.) 2 ಮಿ (ಕ. ಖ. ಚ. ಛ.) 3 ಡೆ (ಕ. ಖ. ಚ. ಛ)

ಅಕ್ಕಾಜಿ ನೀ ನೋಡು ತಾ ನೋಡು ತಂಗಿ ನೋ
ಡಕ್ಕರಿಂದರಸನ ಮೊಗವ
ಠಕ್ಕೊ ಸತ್ಯವೊ ನಮ್ಮ ಮಾತೆಂದು ಕೇಳ್ದರು
ನಕ್ಕಾಡಿ ತಾವು ತಮ್ಮೊಳಗೆ ॥ ೬ ॥

ನಮ್ಮೊಳು ನಾವು ಕೆಲರು ಕೆಲಬರ ಕೇಳಿ
ನಮ್ಮ ನಾವಹುದಹುದೆಂದು
ಸುಮ್ಮಾನವಡೆದರೇಕಹುದೆಂದು ಸ್ವಾಮಿಯ
ನೊಮ್ಮೆ ಕೇಳುವೆನೆಂದರೊಡನೆ ॥ ೭ ॥

ಅಹುದೊ ಅಲ್ಲವೊ ನಾವು ಕಂಡ ಕಾಣ್ಕೆಯು ದೇವ
ಸಹಜದಿಂದುಸಿರಬೇಕೆಂದು
ಮಹಿಳೆಯರೆಲ್ಲರು ನಗುತ ಕೇಳಲು ರಾಯ
ನಹುದಹುದಹುದೆಂದನಾಗ ॥ ೮ ॥

ಚೆನ್ನಾಗಿ ಕಂಡಿರಿ ನಿಮ್ಮಂತೆ ಕಾಣ್ಬವ
ರಿನ್ನುಂಟೆ ನನ್ನೆದೆಯೊಳಗ
ಬನ್ನಿ ನಾವೆಲ್ಲವಿನ್ನಾರೋಗಿಸುವುದೆಂದು
ಮನ್ನಿಸಿ ಕರೆವುತ ನಡೆದ ॥ ೯ ॥

ಪಾದವ ತೊಳೆದಂಗದಟ್ಟವನಿಕ್ಕಿದ
ರಾದರದಿಂದೊಳ ಹೊಕ್ಕು
ಮೇದಿನೀಪತಿ ಕಂಡು ತನಗೊಬ್ಬಗೆಂದು ಸಂ
ಬೋಧಿಸಿದಂದು ಕುಳ್ಳಿರನು ॥ ೧೦ ॥

ಮುಂದಕೆ ನಡೆಯದೆ ನಿಂದನಲ್ಲಿಯೆ ಪೆಂಡಿ
ರೆಂದೆಂದು ತನಗಾದ ಮೇಲೆ
ಸಂದಣಿಗೊಂಡುಂಬರಾ ಪರಿಗೆಂದು ತಾ
ವಿಂದು ಯೋಚಿಸಿದರೆಂದರಿದ ॥ ೧೧ ॥

ಸ್ವಾಮಿಗಾರೋಗಣೆಯಾದ ಬಳಿಕಲುಂಬ
ನೇಮವುಂಟೆಮಗದರಿಂದ
ಸ್ವಾಮಿ ಭೋಜನಕೆ ಚಿತ್ತೈಸಬೇಕೆಂದೆಲ್ಲ
ಕೈಮುಗಿದರು ಭಕ್ತಿಯಿಂದ ॥ ೧೨ ॥

ಎಂದಿನ ಕ್ರಮವಿಂದು ಬೇಡಿ ನೀವೆಲ್ಲ ನಾ
ವಂದುದ ಕೇಳಿ ನೀವಿಂದು
ಒಂದಾಗಿ ಪಂತಿಯೊಳುಣಬೇಕು ಬನ್ನಿರೌ
ಎಂದು ಕರೆದನಬಲೆಯರ ॥ ೧೩ ॥

ಒಬ್ಬರ ಮೊಗವನೊಬ್ಬರು ನೋಡಿ ತಮ್ಮೊಳು
ಸಿಬ್ಬಿದಿಗೊಂಡು ಚಿಂತಿಪರು
ಒಬ್ಬರ ಪರಿಣತಿಯೊಬ್ಬರಿಗಿಲ್ಲದೊ
ಬ್ಬೊಬ್ಬರಿಂತಾಡಿದರಾಗ ॥ ೧೪ ॥

ಪುರುಷಗನ್ನವನಿತ್ತು ಶೇಷಾನ್ನವನುಂಬ
ತರುಣಿಯವಳೆ ಸ್ವರ್ಗಸರಣಿ
ಸರಿಪಂತಿಯೊಳಗುಂಬ ಬಾಲೆ ತರುಣಿ ಕಾಡ
ಬೆರಣಿಯೆಂದೊರ್ವಳಾಡಿದಳು ॥ ೧೫ ॥

ತಾನು ಬೆರೆತುಕೊಂಡು ಪತಿಯ ಪಂತಿಯೊಳುಂಬ
ಳಾನಾರಿ ದುರುಳೆ ತನ್ನ ರಸ
ತಾನೆ ಕರೆದರುಂಡರೇನೆಂದು ಮತ್ತೊರ್ವ
ಮಾನಿನಿ ಕವಿಯೊಳಾಡಿದಳು ॥ ೧೬ ॥

ಪತಿಗುತ್ತರವ ಕೊಡಬಾರದು ಕೈಕೊಂಡ
ವ್ರತವ ಕೆಡಿಸಬಾರದಿದಕೆ
ಗತಿಯಾವುದತಿ ವೇಳೆಯಾಯ್ತೆಂದು ಕೆಲವರು
ಮತಿವಂತೆಯರು ಚಿಂತಿಸಿದರು ॥ ೧೭ ॥

ಏಕಾಂತ ಕೆಲರೊಳು ಯೋಚನೆ ಕೆಲರೊಳು
ಮೂಕತೆ ಕೆಲರೊಳಿಂದೆರಡು
ವಾಕು ಕೆಲರೊಳಿರೆ ಮನದೊಳಗರಿದಾ
ಭೂಕಾಂತ ನುಡಿದನಿಂತೆಂದು ॥ ೧೮ ॥

ಬನ್ನಿರೌ ನಿಮಗೆ ವ್ರತವ ಕೊಟ್ಟ ಗುರುವಾರು
ನನ್ನ ಕೇಳದೆ ವ್ರತವುಂಟೆ
ನನ್ನ ಕೇಳದೆ ಕೊಂಡರುರೆ ಕೇಳಿರದಕೇನು
ನನ್ನಾಣೆ ಸತ್ಯವೊ ಸಟೆಯೊ ॥ ೧೯ ॥

ಗುರುಸಾಕ್ಷಿ ದೇವಸಾಕ್ಷಿಕವಾಗಿ ನೇಮವ
ಧರಿಸಿತಿಲ್ಲರಸ ನಿನ್ನಾಣೆ
ಸರಸಕೊಂದೇಳೆಂಟು ದಿನ ನಡಿಸಿದೆವದು
ಬರುತಿರ್ದುದೆಮಗರ್ತಿಯಾಗಿ ॥ ೨೦ ॥

ತರುಣಿಗಳಿರ ಬನ್ನಿ ತಪಸಿಗಳಗ್ರಗ
ಣ್ಯರ ಪಾನೀಯಾಮೃತಮುಂಬ
ಬರಲೊಲ್ಲದೆಮ್ಮನೇತಕೆ ನೋಯಿಸುವಿರಿ ನಿ
ಷ್ಕರುಣಿಯರಿರ ಬನ್ನಿರೆಂದ ॥ ೨೧ ॥

ಗಂಡನ ನುಡಿಗೇಳ್ದರಹುದೆಂದರೊಡಬಟ್ಟು
ಗಂಡ ಪೇಳ್ದಂತೆ ಕೇಳಿದರು
ಪೆಂಡಿರು ಕೇಳ್ವುದೇನವನ ವಾಕ್ಯವನು ಷ
ಟ್ಪಂಡದೊಳಾರು ಮಿಾರುವರು ॥ ೨೨ ॥

ಹೊಂಗಿಂಡಿಯುದಕುವ ತನ್ನ ಕೈವಿಡಿದೆತ್ತಿ
ಹೆಂಗಳ ಕರೆದು ಕೈವಿಡಿದು
ಅಂಗಾಲ ತೊಳೆದೊಳಗೈತನ್ನಿರೆಂದೀವ
ನಂಗಜರೂಪನರ್ತಿಯೊಳು ॥ ೨೩ ॥

ಮಡದಿಯೊರ್ವಳಿಗೆ ಗಿಂಡಿಯ ತನ್ನ ಕೈಮುಟ್ಟಿ
ಕೊಡುವಾಗ ಜಗುಳಿತಾ ಗಿಂಡಿ
ಒಡನೊರ್ವಳಾಗಳೆ ಜಿನಸಿದ್ಧ ಸಿದ್ಧಯೆಂ
ದೆಡೆಯೊಳಾಂತಳು ರಾಯ ಮೆಚ್ಚಿ ॥ ೨೪ ॥

ಬಾಡಿತವಳ ಮೊಗ ಬಳಲಿತವಳ ನೋಟ
ನೋಡವಳಧರವಾರಿದುದು
ಬೇಡವೆಂದರೆ ಕೇಳಿರಕಟ ನೀವೇ ಜೋಲಿ
ಮಾಡಿದಿರೆನ್ನಲ್ಲಿ ತಪ್ಪೆ ॥ ೨೫ ॥

ಈಕೆ ಕಂಭವನೆಮ್ಮಿ ನಿಂದಳಯ್ಯಯ್ಯೊ ನೋ
ಡಾಕೆ ಗೋಡೆಯನೊರಗಿದಳು
ಹಾ ಕಷ್ಟ ಭರತನ ಭಾಗ್ಯವೇತರದೆಂಬ
ನಾ ಕಾಂತೆಯರ ಚಿತ್ತ ಕರಗೆ ॥ ೨೬ ॥

ತಲೆಯ ತಡಹುವನು ಗಲ್ಲವ ಪಿಡಿದೊಯ್ಯ
ನಲಗುತ ನಗುತ ನೋಡುವನು
ಬಳಲಿದಿರೆಲ್ಲರು ಹೊತ್ತಾಯ್ತು ಬನ್ನಿರೆಂ
ದೊಳಗೃಹಕೊಡನೆ ನಡೆದನು ॥ ೨೭ ॥

ಮಂಗಳ ಮೃದುತರಾಸನದಲ್ಲಿ ಚೌಕ ಸು
ಧಾಂಗವಾಗಿರೆ ನೃಪ ಕುಳಿತ
ಜಂಗಮಲತೆಗಳಂದದಿ ಬಂದು ಕುಳಿತರಾ
ಹೆಂಗಳೆಲ್ಲರು ಪಂತಿಯಾಗಿ ॥ ೨೮ ॥

ಸ್ತ್ರೀಯರು ತನ್ನೆಡ ಬಲದಲ್ಲಿ ಸಾಲಾಗಿ
ವೈಯಾರದಿಂದ ಕುಳ್ಳಿರಲು
ರಾಯನಿದ್ದನು ರತ್ನ ಹಾರದ ನಡುವಣ
ನಾಯಕರತ್ನದಂದದೊಳು ॥ ೨೯ ॥

ಹಲಬರು ರಾಯನ ಪಂತಿಯೊಳೂಟಕೆ
ಕುಳಿತರು ಮತ್ತವರಲ್ಲಿ
ಕೆಲಬರಾರೋಗಣೆಗೆಡೆಮಾಡಲನುವಾಗಿ
ಸುಳಿದಾಡುತಿರ್ದರರ್ತಿಯೊಳು ॥ ೩೦॥

ಕಾಂಚನದಿಂದ ರತ್ನಗಳಿಂದ ಬೆಳ್ಳಿಯಿಂ
ಸಂಚಿಸಿದುಪಕರಣಗಳ
ಚಂಚಲಾಕ್ಷಿಯರಾಂತು ಸುಳಿದರಾಗತ್ತಿತ್ತ
ಮಿಂಚಿನ ಲತೆಗಳೆಂಬಂತೆ ॥ ೩೧ ॥

ಲಾವಣ್ಯ ಧಗಧಗಿಸುವ ನರಪತಿಯ ಮುಂ
ದೋವಿಟ್ಟ ಹೊಂಬರಿವಾಣ
ಭಾವಿಸಲೊಪ್ಪಿತು ರವಿಯ ಸನ್ನಿಧಿಯ ಹೊಂ
ದಾವರೆಯಂತೆ ಜೆಲ್ವಿನೊಳು ॥ ೩೨ ॥

ಬಟ್ಟ ಹೊಂಬರಿವಾಣದಂಚಿನೊಳಗೆ ಸಾಲು
ಬಟ್ಟಲು ಕೆಲವು ಬಟ್ಟಲೊಳು
ಇಟ್ಟ ಮಾಣಿಕದ ಸೋಟಿಗಗಳೆಸೆಯೆ ತಿಟ್ಟ
ವಟ್ಟು ತಿಂತಿಣಿಯೊಳೊಪ್ಪಿದನು ॥ ೩೩ ॥

ಆರೋಗಣೆಗೆ ಕುಳಿತಾ ರಾಯನೊತ್ತಿನ
ನಾರಿಯರೆಸೆದರೆಂತೆನಲು
ದೇವಾಮೃತವನುಂಬಮರೇಂದ್ರ ನೊತ್ತಿನ
ದೇವಾಂಗನೆಯರೆಂಬಂತೆ ॥ ೩೪ ॥

ತಂದೆಡೆ ಮಾಡುತಿದ್ದರು ವನಿತೆಯರೊಲ
ವಿಂದ ದಿವ್ಯಾನ್ನ ಪಾನಗಳ
ಅಂದುಗೆಗಳ ಗೆಜ್ಜೆಗಳ ದನಿ ಝುಲಿಝುಲಿ
ರೆಂದೆನೆ ಪಂತಿ ಪಂತಿಯೊಳು ॥ ೩೫ ॥

ತೊಟ್ಟರವಕೆ ಜಡೆ ಕಾಸೆಯಂದದೊಳಿಳಿ |
ವಿಟ್ಟು ಸಿಕ್ಕಿದ ಮೇಲು ಸೆರಗು
ಬಟ್ಟವೆಂಗಳು ಕೆಲಬರು ಸುಳಿದರು ಹೊನ್ನ
ಚಟ್ಟ ಸಟ್ಟುಗಗಳನಾಂತು ॥ ೩೬ ॥

ಹೊಂಗೆಲಸದ ಭಾಜನದೊಳಿದ್ದಮೃತಸಾ
ರಂಗಳ ಸಕಲ ಭಕ್ಷ್ಯಗಳ
ತಂಗಿಗಕ್ಕಗೆ ಸ್ವಾಮಿಗಕ್ಕಾಜಿಗೆಂದು ಬೆ
ಡಂಗಿಯರುಣಬಡಿಸುವರು ॥ ೩೭ ॥

ಇವಳು ಗಂಡನ ಪಂತಿಯೊಳು ಕುಳಿತುಂಬುವ
ಳಿವಳಿಗಾನಿಕ್ಕುವಳೆಂಬ
ಸವತಿ ಮತ್ಸರವಿಲ್ಲ ತಾವೆಂದರವರೆಂಬ
ಸುವಿನಯ ಮಿಗೆ ಬಡಿಸಿದರು ॥ ೩೮ ॥

ಸಾರವಸ್ತುಗಳ ತಂದಗಲೆಲ್ಲ ತುಂಬುವಂ
ತಾರಯ್ದು ಬಡಿಸಿದ ಮೇಲೆ
ಆ ರತಿ ಪ್ರತಿಯಲ್ಲವೆಂಬ ಪೆಂಗಳು ಪತಿ
ಗಾರತಿಯೆತ್ತಿದರೊಸೆದು ॥ ೩೯ ॥

ಕುಸುಮಾಂಜಲಿ ಮಾಡಿ ಕೈಮುಗಿದೊಡನೊಂದು
ದೆಸೆಗೆ ಸಾರಿದರಬಲೆಯರು
ನಸುನಕ್ಕನಾ ರಾಯನಾ ಸತಿಯರದೊಂದು
ಹೊಸಬಗೆ ಭಕ್ತಿಯ ಕಂಡು ॥ ೪೦ ॥

ಕಡುಕು ಚಿಮ್ಮುರಿ ಬೊಟ್ಟು ಯಜ್ಞೋಪವೀತ ವೊ
ನ್ನುಡಿದಾರ ಜೋತ್ರವೆಂಬಿಷ್ಟು
ಗಡಣಿಸಿ ಮೈಯಮೇಲಿದ್ದುವು ಮತ್ತೊಂದು
ತೊಡಕಿಲ್ಲದೊಡನೊಪ್ಪವಡೆದ ॥ ೪೧ ॥

ಹಸ್ತಪ್ರಕ್ಷಾಲನ ಕೈಗಟ್ಟು ಮೊದಲಾದ
ಪ್ರಸ್ತುತಕ್ರಿಯೆಗಳ ಮಾಡಿ
ವಿಸ್ತೀರ್ಣತಲ್ಪದಮೇಲೆ ಬಲಿದನು ಪ್ರ
ಶಸ್ತ ಪಲ್ಯಂಕಾಸನವ ॥ ೪೨ ॥

ಎಡದ ಗುಲ್ಫದ ಮೇಲೆ ಬಲದಗುಲ್ಫವನಿಟ್ಟು
ತೊಡೆ ಬಿಡಗೆಸೆಯೆ ಕುಳ್ಳಿರ್ದು
ಎಡದ ಹಸ್ತದ ಮೇಲೆ ಬಲದ ಹಸ್ತವನು ಸಂ
ಘೆಡಿಸಿಟ್ಟನಂಘ್ರಿಯಮೇಲೆ ॥ ೪೩ ॥

ಶಾಂತಭಾವದೊಳು ಕಣ್ಮುಚ್ಚಿ ನೆನಹು ಲೋ
ಕಾಂತಕೆ ನಡಸಿ ಸಿದ್ಧರನು
ಅಂತರಂಗಕೆ ತಂದು ಪೂಜಿಸಿ ಬೀಳ್ಕೊಟ್ಟು
ಕಂತು ಸನ್ನಿಭನು ಕಣ್ದೆರೆದ ॥ ೪೪ ॥

ಬಟ್ಟನಮೇಲೆಡಗೈಯೂರಿ ಬಲಗೈಯ್ಯ
ನಿಟ್ಟನು ಹರಿವಾಣದಲ್ಲಿ
ಕೊಟ್ಟನು ತನುವಿಗೆ ಹಂಸನಾಥಗೆ ಮುನ್ನ
ಕೊಟ್ಟ ದಿವ್ಯಾನ್ನ ಪಾನಗಳ ॥ ೪೫ ॥

ಜ್ಞಾನಾನ್ನವನಾತ್ಮಗರ್ಪಿಸುತಿಹನನ್ನ
ಪಾನವ ಮೈಗೀವುತಿಹನು
ಜ್ಞಾನಿಗಳಲ್ಲದೆ ಭರತೇಶನೆದೆಯ ಸಂ
ಧಾನವ ಬಲ್ಲವರಾರು ॥ ೪೬ ॥

ದುಷ್ಪರಾಜನ ಮಾತನವನ ರಾಜ್ಯದೊಳಿರು
ವಷ್ಟು ದಿವಸ ಕೇಳ್ವರಂತೆ
ಅಷ್ಟಕರ್ಮದೊಳು ತಾನಿರ್ದುದನರಿದಾತ್ಮ
ದೃಷ್ಟಿಯುಂಡನು ಕಾಲವರಿದು ॥ ೪೭ ॥

ಅರಸನಾಸ್ಥಾನಗಿಸುತ್ತಿದ್ದು ಕಿಕ್ಕಣ್ಣಿಂದ
ಅರಸಿಯರುಗಳ ನೋಡಿದನು
ಕರವ ಹಿಡಿದುಕೊಂಡು ಸುಮ್ಮನೆ ಕುಳಿತಿದ್ದ
ಪರಿಗಂಡು ವಿಸ್ಮಯನಾದ ॥ ೪೮ ॥

ಏಕೆ ತುತ್ತಿಡರೆಂದು ಕೈಸನ್ನೆಯಿಂದವ
ಲೋಕಿಸಿದನು ನರನಾಥ
ಆ ಕುಶಲೆಯರೆಡೆಮಾಡುವವರ ಕರೆ
ದೇಕಾಂತದೊಳು ಪೇಳ್ದರೊಂದ ॥ ೪೯ ॥

ಎಡೆಮಾಡುವಬಲೆಯರೆಯ್ತಂದು ರಾಯ ತು
ತ್ತಿಡುವನ್ನದೊಳಗೊಂದು ತುತ್ತ
ತುಡುಕಿ ತೆಗೆದುಕೊಂಡು ಪೋಗಿ ಪೆಂಗಳಿಗೆಲ್ಲ
ಎಡೆಮಾಡಿದರು ಹವಣರಿದು ॥ ೫೦ ॥

ಎಲ್ಲರು ತುತ್ತಿಟ್ಟರವಕೆ ರಾಯನು ತಲೆ
ಯಲ್ಲಾಡಿ ತಣಿದನೆದೆಯೊಳು
ಅಲ್ಲವೆ ಮತ್ತೇನು ಪತಿಭಕ್ತಿ ಮನೆಮನೆ
ಗೆಲ್ಲಕೆ ಬಹುದೇ ಲೋಕದೊಳು ॥ ೫೧ ॥

ಪುರುಷನಿಧಾನನ ಶೇಷಾನ್ನ ತಾವುಂಬ
ಹರಿವಾಣಕೈಯ್ತರಲೊಡನೆ
ಪುರುಷನಾಥನೆ ಬಲ್ಲಸವರ ಮನಸಿನೊಂದು
ಹರುಷವನುಂಡರರ್ತಿಯೊಳು ॥ ೫೨ ॥

ಜೀವಬಲವ ದೇಹಬಲವ ಹೆಚ್ಚಿಸುವ ಸಂ
ಜೀವನರಸಪಿಂಡವೆನಿಪ
ಮೂವತ್ತೆರಡು ತುತ್ತುಗಳಿಂದ ತಣಿದನು
ಭೂವರನಾ ಸಮಯದೊಳು ॥ ೫೩ ॥

ರಾಜ ಕೈತೊಳೆದನು ಸತಿಯರು ಕೈದೊಳೆ
ದೋಜೆಯಿಂದಿದಿರೊಳು ನಿಲಲು
ಆ ಜನಪತಿ ಯೆಡೆಮಾಡಿದ ಸತಿಯರು
ಭೋಜಿಸಲೆಂದು ಸೂಚಿಸಿದ ॥ ೫೪

ನಮಗಿನ್ನು ಭೋಜನಾಂತದ ಕ್ರಿಯೆ ಕಿರಿದುಂಟು
ಅವರಿಗೆ ಬಡಿಸಿ ನೀವೆಂದು
ಯುವತಿಯರಿಗೆ ಸನ್ನೆಮಾಡಿ ಕಣ್ಮುಚ್ಚಿ ಮಾ
ನವಪತಿಯೋಗದೊಳಿದ್ದ ॥ ೫೫ ॥

ಕುಳ್ಳಿರಕ್ಕ ನೀವೆಲ್ಲ ಬಳಲ್ದಿರೆಂ
ದೊಳ್ಳಿತ ನುಡಿದು ಭಾವೆಯರು
ಎಲ್ಲರಿಗುಣಬಡಿಸಿದರವರವರಂದ
ದಲ್ಲಿಯೆ ಸವಿದರನ್ನವನು ॥ ೫೬ ॥

ಸ್ಮರಿಸಿ ಸಿದ್ಧಾಂತಮಂತ್ರವನು ಚಿದಂಬರ
ಪುರುಷನ ನೋಡಿ ಬೀಳ್ಕೊಂಡು
ಭರತೇಶ ಕಣ್ದೆರೆದ್ದನು ಜಿನಸಿದ್ಧ
ಶರಣೆಂದು ಪರಮಲೀಲೆಯೊಳು ॥ ೫೭ ॥

ಹಚ್ಚಡವನು ಹೊದೆವುತ ಹಾವುಗೆಯ ಮೆಟ್ಟಿ
ಸಚ್ಚಿದಾನಂದ ರೂಪವನು
ಮೆಚ್ಚಿ ಭಾವಿಸುತ ಬಂದನು ಚಂದ್ರಶಾಲೆಗೆ
ಹೆಚ್ಚು ಕುಂದಿಲ್ಲದ ಚಂದ್ರ ॥ ೫೮ ॥

ತೂಗುಮಂಚದ ಮೇಲೆ ವೊರಗುಮೂಡೆಗೆ ವಾವು
ಭಾಗವನಿಟ್ಟು ಕುಳಿತನು
ಆಗಳೆ ಬಂದರು ಧುಳಧುಳನಬಲೆಯ
ರಾ ಗಾಡಿಕಾರನಿದ್ದೆಡೆಗೆ ॥ ೫೯ ॥

ಪರಿಮಳದೊಡೆವುತ ಪನ್ನೀರ ಚಿಮ್ಮುತ
ತಿರುಹುತ ಬೀಸಣಿಗೆಗಳ
ಚರಣವನೊತ್ತುತ ವೀಳೆಯಗೊಡುತ ಸೌಂ
ದರಿಯರಿದ್ದರು ಬಳಸಿನೊಳು ॥ ೬೦ ॥

ನಿಂದೋಲಗ ಸಾಕು ಕುಳ್ಳಿರಿಯೆಂದೊಲ
ವಿಂದವನೀಶ ನುಡಿದನು
ಮಂದಗಮನೆಯರು ಮೃದುತಲ್ಪದೊಳಗೋಜೆ
ಯಿಂದೆಲ್ಲರೊಲ್ಪು ಕುಳಿತರು ॥ ೬೧ ॥

ವಾರಿಜಾಕ್ಷಿಯರೊಳು ಸರಸಸಲ್ಲಾಪ ಗಂ
ಭೀರ ಪ್ರಸಂಗ ಕೇಳಿಯೊಳು
ಆ ರಾಜಯೋಗೀಂದ್ರನಿರುತಿದ್ದ ಸಿಲ್ಲಿಗೆ
ಆರೋಗಣೆಯ ಸುಸಂಧಿ ॥ ೬೨ ॥

ಉಪ್ಪರಿಗೆ ಸಂಧಿ

ಮತ್ತೊಂದು ದಿನದುದಯದೊಳೆದ್ದು ಜಿನಸಿದ್ಧ
ರುತ್ತಮಾರಾಧನೆಗೈದು
ಚಿತ್ತಜರೂಪನುಪ್ಪರಿಗೆಯೊಳೋಲಗ
ವಿತ್ತನದೇನ ಬಣ್ಣಿಪೆನು ॥ ೧ ॥

ಕುಂದಣದುಪ್ಪರಿಗೆಯಮೇಲೆ ನವರತ್ನ
ದಿಂದಾದ ಮಂಟಪದಲ್ಲಿ
ಪೊಂದಾವರೆಯಂತೆ ಹೊಳೆವ ಗದ್ದುಗೆಯಲ್ಲಿ
ಬಂದು ಕುಳಿತನು ರಾಜೇಂದ್ರ ॥ ೨ ॥

ತನುಕಾಂತಿ ಭೂಷಣಕಾಂತಿಯಾ ಮಂಟಪ
ದನುಪಮಕಾಂತಿ ಮೇಳೈಸೆ
ಜನಪತಿ ತಾನೊಬ್ಬ ದಿನಪತಿಯಂತಿರ್ದ
ದಿನಪತಿಯುದಯ ಕಾಲದೊಳು ॥ ೩ ॥

ಕಾಳಂಜಿ ಹಡಪ ಚಾಮರ ಗಿಂಡಿ ಮೊದಲಾದ
ಊಳಿಗದಂಬುಜಾಕ್ಷಿಯರು
ಸಾಲಭಂಜಿಕೆಗಳಂತೆಡಬಲದಲ್ಲಿ ನಿಂ
ದೋಲೈಸುತಿದ್ದರೋಜೆಯೊಳು ॥ ೪ ॥

ಮಂಡಿತಾಲಂಕಾರ ಕಾವ್ಯವ ರಾಯನ
ಪೆಂಡಿರಿಗೋದಿಸಿದವಳು
ಪಂಡಿತೆಯೆಂದೆಂಬ ದಾದಿ ಬಂದರಸನ
ಕಂಡು ಕೈಮುಗಿದಳರ್ತಿಯೊಳು ॥ ೫ ॥

ರಾಣಿಯರೆಲ್ಲ ಸಿಂಗರಿಸಿ ಲೀಲೆಯೊಳು ಕೈ
ಗಾಣಿಕೆಗಳ ಕೈವಿಡಿದು
ಪ್ರಾಣನಾಥನ ಕಾಣಲುಪ್ಪರಿಗೆಯನು ಬಿ
ನ್ನಾಣದಿಂದಡರಿದರಾಗ ॥ ೬ ॥

ಮದನನರ್ತಿಗೆ ಮೇರುಗಿರಿಯನೇರಲು ತನ್ನ
ಸುದತಿಯರರಸಿ ಬಹಂತೆ
ಚದುರೆಯರೇರುತಿದ್ದರು ಮೇರುಸೌಧ ನಾ
ಮದ ಹಿರಿದುಪ್ಪರಿಗೆಯನು ॥ ೭ ॥

ನೋಡಿ ಬಾ ತಂಗಿ ಯೆಚ್ಚರಿಕೆಯಕ್ಕಾಜಿ ಕೈ
ನೀಡಕ್ಕ ಕೋ ಹಿಡಿ ತಾಯಿ
ಓಡದಿರಕ್ಕಾ ಬಾ ಬಾ ತಂಗಿಯೆಂದು ಮಾ
ತಾಡುತೇರಿದರೊಲವಿನೊಳು ॥ ೮ ॥

ಹರಿವುತಿದ್ದಪಳಿಗೆ ಹರಿ ಹರಿ ಮುಂದೆ ನಿ
ನ್ನರಸನೀವನು ದೊಡ್ಡ ಮೆಚ್ಚ
ಬರಲಾರದವರೇನನಾಡರೆನುತ ತಾವು
ಸರಸವಾಡುತ ಪತ್ತು ತಿಹರು ॥ ೯ ॥

ತವಕಿಸಿ ನಡೆ ನಡೆಯೆನುತಿಪ್ಪಳಿವಳಿಷ್ಟು
ದಿವಸದಿಂ ಕಾಣಳೊ ಪತಿಯ
ನಿವಗೆ ಹಿತವ ಪೇಳ್ದುದೆನ್ನದು ತಪ್ಪು ಮೌ
ನವ ಮಾಳ್ಪೆನೆನುತೇರುತಿಹಳು ॥ ೧೦ ॥

ಜವ್ವನ ಸೊಕ್ಕಿವರಿಗೆ ನೋಡು ಮಾಡವ
ಕವ್ವರೆಗೊಂಡೇರುತಹರೆ
ಅವ್ವ ನೀವೇನನಾಡಿರಿ ಚಕ್ರವರ್ತಿಯ
ಸುವ್ವಲಾಲೆಯನಾಡಿಸುವರು ॥ ೧೧ ॥

ಮೌನವೀಕೆಗೆ ತನ್ನಗಂಡನಂತಾತ್ಮನ
ಜಾನಿಸುತ್ತೈದುವ ಪರಿಯೊ
ಏನೆಂದು ತಿಳಿಯಬಾರದು ಹೇಳು ನಿನಗೆ ಸು
ಧ್ಯಾನವ ಕಲಿಸಿದನಾರೆ ॥೧೨॥

ಧ್ಯಾನಗೀನವ ನೀವು ನಿಮ್ಮರಸನು ಬಲ್ಲಿ
ರಾನೇನ ಬಲ್ಲೆನಾ ಗುಸುಟ
ಈ ನಿಮ್ಮ ಸರಸಸಲ್ಲಾಪಕೆ ಮನದಲ್ಲಿ
ಆನಂದಿಸುತ ಬಂದೆನಕ್ಕ ॥ ೧೩ ॥

ಹಿಂದುಳಿದರೆ ಮುಂದೆ ನಡೆದರೆ ಸುಮ್ಮನೆ
ಬಂದರೆ ಮಾತನಾಡಿದರೆ
ಒಂದೊಂದ ಕಲ್ಪಿಸುವಿರಿ ನಿಮ್ಮನುರೆ ಗೆಲು
ವಂದವನಾ ಚಕ್ರಿ ಬಲ್ಲ ॥ ೧೪ ॥

ಬಿನದ ಸಾಕಿನ್ನು ಸುಮ್ಮನೆ ಬನ್ನಿ ಮಂಟಪ
ಸನಿಹವಾದುದು ಹೆಣ್ಣುಗಳಿರ
ತನುವನೋಸರಿಸಿ ಕಂಡೋಜೆಯೊಳೈತನ್ನಿ
ರೆನುತೇರುತಿಹರಲ್ಲಿ ಕೆಲರು ॥ ೧೫ ॥

ನಡೆವಾಗ ಸವತಿಯ ಕಾಲಮೇಲೊಂದು ಕ
ಪ್ಪಿಡಿದರೆ ಕಂಡೊರ್ವಳದನು
ತೊಡೆದಳು ಕೈಮುಟ್ಟಿ ತಂಗಿ ಹಾ ಹಾಯೆಂದು
ಒಡನಾಕೆ ಝುಂಕಿಸಿ ಹೋಗೆ ॥ ೧೬ ॥

ಕಾಲಮೇಲದೆ ಕಪ್ಪು ತೊಡೆದುಕೊಳ್ಳಿಂದೊಲ್ದು
ಹೇಳದೆ ತೊಡೆವರೆ ತಂಗಿ
ಓಲಗ ಮುಟ್ಟಲಾದುದು ಸುಮ್ಮನೈದಕ್ಕ
ಕೇಳಬಹುದು ನಮ್ಮ ಮಾತು ॥ ೧೭ ॥

ಇಂತು ವಿನೋದ ವಿನಯದಿಂದ ಭೂಪನ
ಕಾಂತೆಯರೆಲ್ಲರೋಜೆಯೊಳು
ಅಂತರಿಸದೆ ನಡೆದರು ಮುಟ್ಟಮುಟ್ಟಲೆಂ
ಬಂತಾಗಲೋಲಗಸಾಲೆ ॥ ೧೮ ॥

ಅರಸಿಯರಾನಂದದಿಂದ ಮಾಡವನೇರಿ
ಬರುತಿಪ್ಪರೆಂಬ ವಾರ್ತೆಯನು
ಚರಣದಂದುಗೆ ಕಟಿಸೂತ್ರದ ದನಿಮುಂದೆ
ಹರಿದು ಹೇಳಿದುವರಸನಿಗೆ ॥ ೧೯ ॥

ಅಳುಕುತೋಸರಿಸಿಕೊಳ್ಳುತ ಮೆಲ್ಲನರಸನ
ಬಳಿಗೆ ನಡೆದು ಮುಂದೆ ನಿಂದು
ನಳಿತೋಳ ನೀಡಿ ಕಾಣಿಕೆಗೊಟ್ಟು ಕೈಮುಗಿ
ದೊಳಸಾರಿ ನಿಂದರೋಜೆಯೊಳು ॥ ೨೦ ॥

ನೀಲಾಂಗಿಯೊರ್ವಳು ಬಂದು ಕಾಣಿಕೆಗೊಂದು
ನೀಲಾಂಬುಜವ ತಂದಿತ್ತು
ಮೇಲೆ ಕೈಮುಗಿದು ನಿಂದಳು ಕೆಲದೊಳಗಿಂದ್ರ
ನೀಲದ ಪುತ್ತಳಿಯಂತೆ ॥ ೨೧ ॥

ರಾಣಿಯೊರ್ವಳು ಬಂದು ಹೊಂದಾವರೆಯ ಕೈ
ಗಾಣಿಕೆಯಿತ್ತು ಕೈಮುಗಿದು
ಕ್ಷೋಣೀಶನೆಡೆದ ಭಾಗವ ಸಾರಿ ನಿಂದಳು
ಮಾಣಿಕಬೊಂಬೆಯೆಂಬಂತೆ ॥ ೨೨ ॥

ಕೆಂಪಿಯೊರ್ವಳು ಬಂದು ರಾಯನ ಹಸ್ತಕೆ
ಸಂಪಗೆ ಹೂಗಳ ನೀಡಿ
ಪೆಂಪಿಂದ ಕೈಮುಗಿದಬಲೆಯರೆಲ್ಲರ
ಗುಂಪಿನೊಳಗೆ ನಿಂದಳೊಡನೆ ॥ ೨೩ ॥

ಕರಿಯಳೊಬ್ಬಳು ಬಂದು ಚಕ್ರವರ್ತಿಗೆ ತನ್ನ
ಕರಕುಶಲದೊಳು ರಚಿಸಿದ
ಸುರಗಿಯ ಮಾಲೆಯನಿತ್ತಳು ರತಿದೇವಿ
ಸುರಗಿಯ ಮದನಗೀವಂತೆ ॥ ೨೪ ॥

ಅಂಗಜವೀರಗೆ ಪೂವಿನ ಖಡ್ಗವ
ಸಂಗಡಿಸುವ ರತಿಯಂತೆ
ಹೊಂಗೇದಗೆಯ ಕಠಾರಿಯನೊರ್ವ ಲ
ತಾಂಗಿ ತಂದಿತ್ತಳು ನೃಪಗೆ ॥ ೨೫ ॥

ಬಟ್ಟಜವ್ವನೆಯೊರ್ವಳಡಿಯಿಟ್ಟು ಕಾಣ್ಕೆಗೆ
ಬೆಟ್ಟದಾವರೆಯ ತಂದಿತ್ತು
ನಿಟ್ಟಿಸಿ ಕೈಮುಗಿದರಸನ ಗದ್ದುಗೆ
ಮುಟ್ಟಿ ನಿಂದಳು ವಿಭವದೊಳು ॥ ೨೬ ॥

ಮೈಯೊಡ್ಡಿ ಸಂಮುಖದೊಳು ನಿಲ್ಲದೆಲ್ಲರ
ಮೈಯ ಮರೆಗೆ ಸಾರುವವಳ
ಕೈಯಹಿಡಿದು ಕರಿತಂದೊರ್ವಳರಸಗೆ
ಕೈಯಕಾಣ್ಕೆಯ ಕೊಡಿಸಿದಳು ॥ ೨೭ ॥

ಅಂಜುಂತಂಜುತ ಬಾಲೆ ಬಂದೊರ್ವಳರಸಗೆ
ಕೆಂಜಾಜಿ ಸರಗೊಡುವಾಗ
ಕೆಂಜಾಜಿ ಜಗುಳಿತು ಕಾಣಿಕೆಯಲ್ಲ ಪು
ಷ್ಪಾಂಜಲಿ ಯೆಂದರಾಳಿಯರು ॥ ೨೮ ॥

ಎಲ್ಲರ ಮುಂದೊರ್ವ ಮುಗ್ಧೆ ನಾಚುತ ಬಂದು
ಮಲ್ಲಿಗೆ ಸರಗೊಡುವಾಗ
ಮಲ್ಲಿಗೆ ಜಾರಿತು ಜಾರಿದರೇನದೆ
ಮ್ಮಲ್ಲಿಗೆ ಯೆಂದನು ನೃಪತಿ ॥ ೨೯ ॥

ಪಾದರಿಯಲರನೊರ್ವಳು ಕೊಡುತಿರೆ ಜಾರಿ
ಪಾದದೆಡೆಗೆ ಬಿದ್ದುದವನ
ಪಾದದಿಂದೊದೆದನು ಸೋತು ಕಾಲ್ಗೆರಗಿದ
ಪಾದರಿಯನು ನೂಕುವಂತೆ ॥ ೩೦ ॥

ಪರದಾರಸೋದರನೊತ್ತಿಗೆ ಪಾದರಿ
ಬರಬಹುದೇ ಭರತೇಶ
ಚರಣದಿಂದೊದೆದುದದಾಯ್ತೆಂದು ಪಂಡಿತೆ
ಅರಸನ ನಸುನಗಿಸಿದಳು ॥ ೩೧ ॥

ಕಡುಶೀಲವತಿಯರು ನಿನ್ನ ಪೆಂಡಿರು ತಮ್ಮ
ಕಡೆಗೊಬ್ಬ ಪಾದರಿ ಬರಲು
ಪಿಡಿತಂದು ನಿನಗೊಪ್ಪಿಸಿದರು ನೀನೊದೆದುದು
ಬೆಡಗಾಯ್ತು ಶೀಲನಿಧಾನ ॥ ೩೨ ॥

ಕಡೆಗಣ್ಣ ಪ್ರಭೆಯಿತ್ತಲತ್ತಲೊಲೆದು ನೋಡೆ
ಕುಡಿಮಿಂಚಿನಂತಾಡುತಿರಲು
ನಡೆತಂದು ರಮಣಿಯೊರ್ವಳು ರಾಯಗಿತ್ತಳು
ಮುಡಿವಾಳದೊಂದು ಝಲ್ಲಿಯನು ॥ ೩೩ ॥

ಭಾವೆ ಭಾವಗೆ ಕಾಣ್ಕೆಯಿಕ್ಕೆಂದು ಕವಿಯಲ್ಲಿ
ಭಾವಕಿಯರು ಪೇಳೆ ನಗುತ
ಮಾವಿನ ತಳಿರ ತಂದಿತ್ತೊರ್ವಳು ತನ್ನ
ಮಾವನ ಮಗನ ಹಸ್ತದೊಳು ॥ ೩೪ ॥

ಓಲಗದೊಳಗೆಲ್ಲರಚ್ಚರಿವಡೆ ಮಲ್ಲಿ
ಕಾಲತೆ ನಡೆದು ಬಹಂತೆ
ಸಾಲು ಮುತ್ತಿನ ತೊಡಿಗೆಯ ತೊಟ್ಟು ಬಂದೊರ್ವ
ಲೋಲಾಕ್ಷಿ ಕಂಡಳಾ ನೃಪನ ॥ ೩೫ ॥

ಜ್ಯೋತಿಯಂದದ ರತ್ನ ಭೂಷಣ ವೈತುಂಬಿ
ಜೋತೊಲೆದಾಡಲೊರ್ವಬಲೆ
ಜ್ಯೋತಿರ್ಲೋಕದ ಪೆಣ್ಣೊಯೆಂದೆನೆ ಬಂದು
ಭೂತಳ ಪತಿಯ ಸಾರಿದಳು ॥ ೩೬ ॥

ಸೇರಿಸಿ ಮುತ್ತುಮಾಣಿಕದೊಟ್ಟು ಕರಿಯಳು
ಸಾರಿ ಕಂಡಳು ರವಿಗಳುಕಿ
ತಾರಗೆ ಮೀಂಬುಳು ಸಹವಾಗಿ ಮರೆಹೊಕ್ಕ
ಕಾರಿರುಳಂಗನೆಯಂತೆ ॥ ೩೭ ॥

ಗಂಡ ಪೆಂಡಿರು ತಾವು ನಿರ್ದೋಷರೆಂದೆಡೆ
ಗೊಂಡು ದಿಬ್ಬಿಗೆ ಕೈಯನಿಕ್ಕಿ
ಕೆಂಡವ ಪಿಡಿದು ತಂದೀವಂತೆ ಕೊಟ್ಟಳು
ಗಂಡಗೊರ್ವಳು ಮಾಣಿಕವನು ॥ ೩೮ ॥

ಮುತ್ತಿನ ಮಣಿಯನೊರ್ವಳು ತಂದು ನೃಪನ ಕೈ
ಗಿತ್ತು ಕೈಮುಗಿದಳಂತದನು
ಒತ್ತಿನೊಳಿದ್ದ ಪಂಡಿತೆ ಕಂಡು ನುಡಿದಳು
ಮತ್ತೊಂದು ಬಿನದದ ಮಾತ ॥ ೩೯ ॥

ವದನ ವದನ ಸೋಂಕಿ ಮುತ್ತ ಕೊಡುವುದು ಲೋ
ಕದೊಳುಂಟು ಭರತಚಕ್ರೇಶ
ಇದು ಚಿತ್ರ ಕರಯುಗ ಸೋಕಿ ಮುತ್ತೀವುದೆಂ
ದೆದೆಯೊಳಿನಿಸು ನಗಿಸಿದಳು ॥ ೪೦ ॥

ಎಲ್ಲರನೀಕ್ಷಿಸಿ ಕಿರಿದು ಹೊತ್ತಿನಮೇಲೆ
ಮೆಲ್ಲನೆ ಕೈಸನ್ನೆಯಿಂದ
ಕುಳ್ಳಿರವೇಳ್ದನು ಭೂಪಾಲನಾ ಹೆಂಗ
ಳೆಲ್ಲರು ಕುಳಿತರೊಪ್ಪದೊಳು ॥ ೪೧ ॥

ರಾಯ ನೋಡಿದನು ಗಾಯಕಿಯರ ಮೊಗವನಾ
ಗಾಯಕಿಯರು ನೋಟವರಿದು
ಠಾಯಿ ಬಜಾವಣೆ ಗಮಕವೆಸೆಯೆ ಪಾಡ
ಲಾಯತವಾದರು ಕೂಡೆ ॥ ೪೨ ॥

ಆರೆದೆರೆವಬ್ಜದೊಳಿರುತಿದ್ದ ಮರಿದುಂಬಿ
ಸ್ವರಮಾಡಿ ಪೊರಮಡುವಂತೆ
ಗರಗರಿಕೆಯೊಳು ಕೆಂಬಾಯ್ದೆರೆದಾಳಾಪ
ವಿರಚನೆಮಾಡಿದರೊಸೆದು ॥ ೪೩ ॥

ನೋಟ ರಾಯನಮೇಲೆ ನೆನಹು ರಾಗದಮೇಲೆ
ನೀಟತಂತಿಯಮೇಲೆ ಬೆರಳು
ಚಾಟುಕಾತಿಯರು ಚಾಂದಸಿಕೆಯ ನೂಂಕಿ ಸ
ಘಾಟಕೆಯಿಂದ ಪಾಡಿದರು ॥ ೪೪ ॥

ರಾಗಿಸಿದರು ಮೊದಲುದಯರಾಗವನನು
ರಾಗಿಸುವಂತೆ ಚಕ್ರೇಶ
ಆಗ ಮೇಲಮರೇಂದ್ರ ಸುಳಿದನಾದರೆ ಮುಂದೆ
ಹೋಗದಲ್ಲಿಯೆ ನಿಲುವಂತೆ ॥ ೪೫ ॥

ನಲಿದು ಸಂಗೀತಸಮುದ್ರವ ಹೊಕ್ಕು ಮು
ಕ್ಕುಳಿಸಿ ಮುತ್ತುಗುಳುವಂದದೊಳು
ಗಳತುಂಬಿ ಗಾನವ ತೆಗೆದು ಬಾಯ್ದೆರೆಯೊಳು
ಸುಳುವುಗಾಣಿಸಿದರೋಜೆಯೊಳು ॥ ೪೬ ॥

ಉಕ್ಕಂದವಾಗಿ ತುಂಬಿದ ಗಾನರಸವನು
ದಿಕ್ಕುದಿಕ್ಕಿಗೆ ಚಿಮ್ಮುವಂತೆ
ಚೊಕ್ಕ ಚೊಕ್ಕನೆ ತಾನಗಳ ತಂದು ಕೊರಳಲ್ಲಿ
ಜಕ್ಕುಲಿಸಿದರು ಜಾಣೆಯರು ॥ ೪೭ ॥

ಸಿಕ್ಕಿದ ನಲ್ಲಳು ಮುನಿದ ನಲ್ಲನ ಮುಂದೆ
ಬಿಕ್ಕಳಿಸುತ ನುಡಿವಂತೆ
ಲೆಕ್ಕ ಟವಣೆಯಾಗಿ ಕೊರಳು ಕುಣಿದು ದನಿ
ಯಿಕ್ಕುವ ರಾಗ ರಂಜಿಸಿತು ॥ ೪೮ ॥

ನಾಭಿಯಿಂದೇಳಿಸಿ ಯೆದೆಯೊಳೋಲಾಡಿಸಿ
ಶೋಭೆಯಮಾಡಿ ಕಂಠದೊಳು
ಈ ಭೂಪ ಮೆಚ್ಚೆ ರಾಗಿಸಿದರು ಶ್ರೀದೇವಿ
ಶೋಭನವನು ಪಾಡುವಂತೆ ॥ ೪೯ ॥

ಉದಯಭಾಸ್ಕರ ವೀಟಿಕಾಧರಬಿಂಬೆಯ
ರುದಯಭಾಸ್ಕರನ ಕಾಲದೊಳು
ಉದಯರಾಗದೊಳರುಹನ ಪಾಡಿದರು ಜ್ಞಾನ
ಉದಯವಹಂತೆ ಕೇಳ್ವರಿಗೆ ॥ ೫೦ ॥

ನೆರವಾಗು ಗಾನಕೇಳೇಳೆಂದು ಮಲಗಿದ್ದ
ಸರಸತಿಯನು ಜಾಣೆ ತನ್ನ
ಬೆರಳಿಂದ ಮಿಡಿವಂತೆ ಭಾರಿದಂಡಿಗೆಗೊರ್ವ
ತರಳಾಕ್ಷಿ ಮಿಡಿದಳಂಗುಲಿಯ ॥ ೫೧ ॥

ನೆರೆದು ನಿದ್ರೆಯೊಳಿದ್ದ ನಲ್ಲನ ಮುದ್ರಿಸಿ
ಕರೆವುತಂಗುಲಿಯಿಂದ ಮಿಡಿದು
ಸರಸಕೆ ನಲ್ಲಳೇಳಿಸುವಂತೆ ಪಾಡುತ
ತರುಣಿ ಮಿಡಿದಳು ದಂಡಿಗೆಯ ॥ ೫೨ ॥

ನಿರಸವೀ ಸಂಸಾರವೆಂದು ನೆನದು ಹೇಸಿ
ಬೆರಳ ಮಿಡಿವಳೋ ಯೆಂಬಂತೆ
ನರನಾಥನೆದೆಗೆ ಕಾಣಿಸಿತಾಕೆ ತಂತಿಯ
ಬೆರಳಿಂದ ಮಿಡಿದ ಬಿನ್ನಾಣ ॥ ೫೩ ॥

ಕೆನ್ನರಿ ಕೆನ್ನರಿ ವಿದ್ಯಾಧರಿ ದರಿ
ಯಿನ್ನವರ್ಗಾರೆಣೆಯೆನಲು
ಭಿನ್ನಾಬಿನ್ನ ಭಕ್ತಿಗಳ ಕಿನ್ನರಿಯಿಂದ
ಬಿನ್ನಾಣವರಿದು ಪಾಡಿದರು ॥ ೫೪ ॥

ಹೊಂಗೊರಳದರೊಳು ಭರತರಾಜನ ಶಿಕ್ಷೆ
ಹೆಂಗಳವರು ಚೆಲುವೆಯರು
ಸಂಗೀತ ಮೋಹಿಸುತಿದ್ದಿತು ಕೇಳ್ವರಿ
ಗಿಂಗಡಲೊಳಗೆ ಹೊಕ್ಕಂತೆ ॥ ೫೫ ॥

ಅರುಹಂತದೇವನ ಸಿದ್ಧರ ಮುನಿಗಳ
ಸ್ಮರಿಸಿ ಚಕ್ರೇಶನ ಮನದ
ಪರಿಯನರಿದು ಭೋಗಯೋಗಗಳಿರಡನು
ಬೆರಸಿ ಹಾಡಿದರು ನೀರೆಯರು ॥ ೫೬ ॥

ಸುಳಿವ ಮಾತ್ರದೊಳು ಮಾನಿನಿಯರ ಹೃದಯದ
ಸುಳುಹ ಕಾಣ್ಬನು ಭಾವಿತಾತ್ಮ
ಸುಳಿಗುರುಳಿನ ಸೊಬಗೆಯರ ತನ್ನಯ ಸುತ್ತ
ಸುಳಿದಾಡಿಸುವನು ಸೋಲದೊಳು ॥ ೫೭ ॥

ನಸುನಗೆಯಿಂದ ಹೆಂಗಳ ನೋಡಿ ಜುಮ್ಮೆನ
ಲೊಸರಿಸುವನು ಕರಣಗಳ
ಬೆಸುಗೆಯಾದಂತಿದ್ದು ಬೇರುಪಟ್ಟಿಹನಾತ್ಮ
ರಸಿಕನೊಳಗ ಬಲ್ಲರಾರು ॥ ೫೮ ॥

ಸರಸವನಾಡನಾಡಿದನಾದರದರಲ್ಲಿ
ವಿರಸವ ಮೊಳೆದೋರಲೀಸ
ಪರವಶಗೊಳಿಸುವನಂಗನೆಯರ ತನ್ನ
ಪರಿಣತಿಯೆಚ್ಚರಾಗಿಹುದು ॥ ೫೯ ॥

ಮುನಿಯನು ಮುನಿಯಲೀಸನು ಸಟೆಗೊಂದಿಷ್ಟು
ಮುನಿದನಾದರೆ ಕೂಡೆ ತಿಳಿವಾ
ತನಿವಾಲ ಕಾಸಿದಂತಿಹುದಾತ್ಮರಸಿಕನ
ಅನುಭವ ಕುಲ ಸತಿಯರೊಳು ॥ ೬೦ ॥

ಒಬ್ಬಳ ಮೇಲೆ ತನಗೆ ಸೋಲವಿದ್ದರು
ದುಬ್ಬಗಾಣಿಸನದ ನುಡಿದು
ಒಬ್ಬ ಪುರುಷನೊಬ್ಬ ಸತಿಯೊಳಿಪ್ಪಂತಿಹ
ನುಬ್ಬಸವಿಲ್ಲದೆಲ್ಲರೊಳು ॥ ೬೧ ॥

ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ
ಸೊಕ್ಕಿದಂತಿಹನಲ್ಲಿ ಸೊಕ್ಕಾ
ಠಕ್ಕರಂತಿಹನದು ಠಕ್ಕಲ್ಲ ನಿಜವ ಕ
ಣ್ಣಿಕ್ಕಿ ಕಂಡವನ ಲೀಲೆಯದು ॥ ೬೨ ॥

ಗೂಳಿ ನಡೆವ ಹಜ್ಜೆ ತೋರುವುದಲ್ಲದೆ
ಗಾಳಿಯ ಹಜ್ಜೆ ತೋರುವುವೆ
ಜಾಳುಗಳೊಳಗುಗಾಣಿಸುವುದಲ್ಲದೆ ತತ್ವ
ಶೀಲನೊಳಗ ಕಾಣ್ಬರಾರು ॥ ೬೩ ॥

ಇದು ನಮ್ಮ ಭರತ ಚಕ್ರೇಶನ ನಡೆಯಲ್ಲ
ದಿದರೊಳಿಲನ್ನರಸಿದರಿಲ್ಲ
ಅದು ತಾನು ಪೂರ್ವದೊಳಾತ್ಮಭಾವನೆಯ ಮಾ
ಡಿದ ಫಲವೆಂದು ಹಾಡಿದರು ॥ ೬೪ ॥

ಕೊಟ್ಟನವರ ಕರೆದುಡುಗೊರೆಗಳನೆದೆ
ದಟ್ಟಿ ಹಾಡಿದಿರಿ ಲೇಸೆಂದಾ
ಪಟ್ಟವರ್ಧನನ ಕಾಲ್ಗೆರಗಿ ಬೀಳ್ಕೊಂಡವ
ರೊಟ್ಟೋಜೆಯಾಗಿ ಕುಳಿತರು ॥ ೬೫ ॥

ಸರಸಿಜಗಳು ಬಳಸಿರೆ ನಟ್ಟನಡುವೆ ತೋ
ರ್ಪರಸಂಚೆಯಂತೆ ರಾಜೇಂದ್ರ
ಅರಸಿಯರೋಲಗದೊಳಗಿದ್ದ ನಿಲ್ಲಿಗು
ಪ್ಪರಿಗೆಯ ಸಂಧಿ ಸುಗಂಧಿ ॥ ೬೬ ॥

ರಾಜಲಾವಣ್ಯ ಸಂಧಿ

ಪೆಂಡಿರೋಲಗದೊಳಗಭಿನವ ಕುಸುಮಕೋ
ದಂಡನಾ ನೃಪನೊಪ್ಪುವಾಗ
ಪಂಡಿತೆಯೊಡನೊರ್ವ ಗಾಯಕಿ ಕವಿಗಚ್ಚಿ
ಕೊಂಡು ನುಡಿದಳೊಂದು ಮಾತ ॥ ೧ ॥

ಗರಗರನೆದ್ದಳು ಪಂಡಿತೆ ಕೈಮುಗಿ
ದರಸ ಬಿನ್ನಹವೆಂದು ನಗುತ
ಸರಸಲೀಲೆಯದೊಂದು ಹೊಸಕಾವ್ಯವುಂಟವ
ಧರಿಸಬೇಕೆಂದಳುಬ್ಬಿನೊಳು ॥ ೨ ॥

ಆರು ಪೇಳಿದರದನಾರ ವರ್ಣನೆಯದು
ಆರು ಮತ್ತಾ ಹೊಸಕೃತಿಯ
ಆರಯ್ದು ತಿದ್ದಿದರೆಂದು ಕೇಳಿದನು ವಿ
ಚಾರಸಂಮುಖ ಕಾರ್ಯಕುಶಲ ॥ ೩ ॥

ಪರರುಸುರಿದುದಲ್ಲ ಪರರ ವರ್ಣನೆಯಲ್ಲ
ಪರರು ತಿದ್ದುವ ದಕ್ಷರಿಲ್ಲ
ಅರಸ ನಿನ್ನ ರಮನೆಯೊಳಗಾದ ಕೃತಿ ನಿನ್ನ
ಚರಿತ ನೀನೇ ತಿದ್ದಬೇಕು ॥ ೪ ॥

ಅರಮನೆಯೊಳಗಾದುದೆಂದರಾರೆಂದು ನಿ
ರ್ಧರಿಸಬಹುದು ಹೊಸ ಕೃತಿಯ
ವಿರಚಿಸಿದಾಕೆಯ ಹೆಸರ ಹೇಳಿಂದನು
ದರಹಾಸದಿಂದ ಭೂವರನು ॥ ೫ ॥

ಅರಗಿಳಿಯೊಡನೊಲ್ದು ಕುಸುಮಾಜಿಯರು ನಿನ್ನೆ
ಸರಸದಿ ನುಡಿದಾಡಲದನು
ನೆರಮನೆಯೊಳಗಿದ್ದ ಸುಮನಾಜಿಯರು ಕೇಳ್ದು
ಚರಿತೆ ಮಾಡಿದರವನೀಶ ॥ ೬ ॥

ಸುಮನಾಜಿಯರ ನಿಳಯಕೆ ನಿನ್ನೆ ಬಿನದಕೆಂ
ದಮರಾಜಿಯರು ನಡೆತಂದು
ಅಮೃತವಾಚಕನೆಂಬ ಗಿಳಿಯೊಡನಾಕೆ ಸಂ
ಕ್ರಮಿಸಿ ನುಡಿವುದ ಕೇಳಿದರು ॥ ೭ ॥

ಕುಸುಮಾಜಿ ನುಡಿದಂದ ಚೆನ್ನಾಯ್ತು ಸುಮನಾಜಿ
ಪೊಸಕೃತಿ ಮಾಡು ನೀನದನು
ಒಸೆದಾನು ಬರೆವೆನೆಂದಮರಾಜಿ ಬರೆದು ಪೇ
ಳಿಸಿದ ಕಾವ್ಯವ ಕೇಳು ರಾಯ ॥ ೮ ॥

ಆದರಾಗಲಿ ನೀನು ಕುಳ್ಳಿರು ಕಾವ್ಯವ
ಓದಿಸೆಂದನು ನರನಾಥ
ಓದಲುಜ್ಜಗಿಸಿ ಪುಸ್ತಕವನಾಂತೊರ್ವ ತ
ರೋದರಿ ಕುಳಿತಳದಿರೊಳು ॥ ೯ ॥

ದಿಗಿಲನೆದ್ದಳು ಕುಸುಮಾಜಿ ಕೈಮುಗಿದಿಂದು
ಹಗಲೊಂದು ನೋಪಿಯುಂಟಿನಗೆ
ಸುಗತನಿವಾಸಕೆ ಪೋಪೆನೆಂದಳು ರಾಯ
ನಗುತ ನುಡಿದನಾಕೆಗಿಂತು ॥ ೧೦ ॥

ಲೇಸಾಯ್ತು ಹೋಗು ಕಂಕಣ ಬೇಡವೇ ನೋಂಪಿ
ಗೀಸುವರ್ಣದ ಕಂಕಣವನು
ಕೋ ಸುಮ್ಮನೇಕೆ ಹೋದಪೆ ಪಿಡಿಯೆಂದು ವಿ
ಲಾಸದಿ ಕೈಯ ನೀಡಿದನು ॥ ೧೧ ॥

ನಿಜವೆಂದು ರಾಯನ ಕರದ ಕಂಕಣಕೆ ವಾ
ರಿಜಮುಖಿ ಕೈಯ ನೀಡಿದಳು
ಗಜ ತನ್ನ ಕರಿಣಿಯ ಕರಪಿಡಿವಂತೆ ಭೂ
ಭುಜ ಪಿಡಿದನು ಕೈಯನವಳ ॥ ೧೨ ॥

ಆರ ಚಾಳ್ಯಿಸುವೌ ನಿನಗೆ ನಾನರಿಯದಂ
ತಾರಿತ್ತರಿಂದು ನೋಂಪಿಯನು
ಸಾರೆಕುಳ್ಳಿರು ಸಾಕು ನನ್ನಾಣೆಯೆಂದೊತ್ತಿ
ಗಾ ರಾಯನೊಯ್ದನಾಕೆಯನು ॥ ೧೩ ॥

ನೀನರ್ತಿಗೆಂದರಗಿಳಿಯನೋದಿಸಲದು
ಮಾನಿನಿಯರಿಗರ್ತಿಯಾಯ್ತು
ನಾನದ ಕೇಳ್ದರ್ತಿ ಮಾಡಬೇಡವೆ ಸುಖ
ಗಾನದೊಳೇಳ್ವರೆ ಮುಗ್ಧೆ ॥ ೧೪ ॥

ಬಲ್ಲೆನು ನೀನೆದ್ದ ಬಗೆಯ ನೀನೇಕಾಂತ
ದಲ್ಲಿ ಗಿಳಿಯೊಳಾಡಿದುದನು
ಎಲ್ಲರಮುಂದೆ ರಚ್ಚೆಗೆ ತಂದರೆಂದೆದ್ದೆ
ಯಲ್ಲವೆ ಕಮಲದಳಾಕ್ಷಿ ॥ ೧೫ ॥

ಅನ್ಯರಿಗೊಳಗುದೋರದೆ ನಡೆವುದು ಕುಲ
ಕನ್ಯಾಂಗ ಲಕ್ಷಣವಹುದು
ಅನ್ಯರಾರಿವರೆಲ್ಲರೆನ್ನ ವರಲ್ಲವೆ
ಶೂನ್ಯಮಧ್ಯೆಯೆ ಕುಳ್ಳಿರೆಂದಾ ॥ ೧೬ ॥

ಕಂಡೆಯೆ ಪಂಡಿತೆ ಕುಸುಮಾಜಿ ಕುಸುಮದ
ಚೆಂಡಿನಂತೆದ್ದ ಲಂಘನವ
ಕಂಡೆನಹುದು ಸ್ವಾಮಿ ಕಾಂತೆಯರೊಳಗನು
ಕಂಡವರಾರು ನಿನ್ನಂತೆ ॥ ೧೭ ॥

ಲಜ್ಜೆಯಾದುದು ದೇವ ತನ್ನೆದೆಯಾಟದ
ಹಜ್ಜೆ ತೋರಿತು ಪರಗೆಂದು
ಸಜ್ಜನಸತಿಯರ ಗುಣವದು ನೀನಾಕೆ
ಗುಜ್ಜುಗಿಸಿದ ಬೋಧೆಯಾಯ್ತು ॥ ೧೮ ॥

ಬಿಡಗಾಯ್ತು ದೇವರು ಕುಸುಮಾಜಿಯರ ಹಸ್ತ
ವಿಡಿದು ನಿಲ್ಲಿಸಿದುದಿನ್ನಾಕೆ
ಒಡೆಯ ನಿನ್ನೊತ್ತಿನೊಳಿರಲು ನಾಣ್ಚುವಳು ತ
ನ್ನೊಡಹುಟ್ಟಿದವರೊತ್ತಿಲಿರಲಿ ॥ ೧೯ ॥

ಅಹುದೆಯಾದರೆ ಹೋಗು ಕುಸುಮಾಜಿ ನೀನೆಲ್ಲ
ಮಹಿಳೆಯರೊಡನೆಂದಿನಂತೆ
ಸಹಜದಿ ಕುಳ್ಳಿರೆಂದರಸ ಬೀಳ್ಕೊಡಲಾಕೆ
ವಹಿಲದಿಂದೈದಿ ಕುಳಿತಳು ॥ ೨೦ ॥

ಇನ್ನೊಂದು ಕಾವ್ಯವನೆಂದನಾ ಪಾಡುವ
ಕನ್ನೆಯಾ ಹೊತ್ತಗೆವಿಡಿದು
ಕನ್ನೆಗೋಗಿಲೆ ತಾನೆ ಬಾಯ್ದೆರೆದುದೊಯೆಂಬ
ಬಿನ್ನಣವೆಸೆಯಲೋದಿದಳು ॥ ೨೧ ॥

ಪಡಲಿಗೆಗಿಟ್ಟು ಹೊತ್ತಗೆಯ ದಾರವನೊತ್ತಿ
ಸಡಿಲಿಸಿ ಕಿರಿದೋಲೆಗಳನು
ಎಡಗೈಯೊಳಾಂತೋದಿದಳು ಬಲಗೈಯಿಂದ
ಮಿಡುವುತ ಭಾರಿ ದಂಡಿಗೆಯ ॥ ೨೨ ॥

ಹೂವಸೋಕದೆ ಗಗನದೊಳೊಪ್ಪುವೆಮ್ಮಯ
ಮಾವಾಜಿಯಡಿಗಳ ನೆನೆದು
ಭಾವಾಜಿಗೆಮ್ಮಕ್ಕನಮರಾಜಿಯಾಜ್ಞೆಯಿಂ
ದೋವಿ ಪೇಳುವೆನೊಂದು ಕೃತಿಯ ॥ ೨೩ ॥

ಶೃಂಗಾರ ಹಾರನ ಸೊಬಗನ ನುಡಿಯ ಬೆ
ಡಂಗನ ಗಿಳಿಯೊಡನೆನ್ನ
ತಂಗಿಯೊಲಿದು ಕುಸುಮಾಜಿ ಬಣ್ಣಿಸಿದುದ
ಸಂಗತಿಮಾಡಿ ಪೇಳುವೆನು ॥ ೨೪ ॥

ಅಮೃತವಾಚಕ ಕೇಳು ಭರತ ಚಕ್ರೇಶ್ವರ
ರಮಣಿಯರೆಲ್ಲರ ಮನವ
ಭ್ರಮೆಗೊಳಿಸುವ ರೂಪನಾವ ನೋಂಪಿಯ ಮುನ್ನ
ಕ್ರಮದಲ್ಲಿ ನೋಂತು ಪಡೆದನೊ ॥ ೨೫ ॥

ರೂಪ ಪಡೆಯಲಿ ರೂಪಿಗೆ ತಕ್ಕ ಶೃಂಗಾರ
ಚಾಪಲ ವಿನಯ ವಿಡಾಯ
ಭೂಪತಿಗೇತರಿಂದಾದವಿಂತಿವರ ಸ್ವ
ರೂಪ ಹೇಳೆನಗರಗಿಳಿಯೆ ॥ ೨೬ ॥

ಅಂಬರದೊಳಗಿದ್ದ ಸೂರ್ಯನೊಬ್ಬನು ಜಲ
ತುಂಬಿದ ಹಲವು ಕುಂಭದೊಳು
ಬಿಂಬಿಸುವಂತೆಲ್ಲ ಪೆಂಗಳೆದೆಯೊಳೀತ
ನಿಂಬುಗೊಂಡಿಹ ಪರಿಯೇನು ॥ ೨೭ ॥

ಸಾರತಾಪಸನಿದ್ದ ವನದಲ್ಲಿ ಹುಲಿ ಹುಲ್ಲೆ
ವೈರವಿಲ್ಲದೆ ಸುಳಿವಂತೆ
ನಾರಿಯರೆಲ್ಲರು ಸವತಿಮತ್ಸರವಿಲ್ಲ
ದೀ ರಾಯಗೊಲಿದಂದವೇನು ೨೮ ॥

ತವರೂರು ಮರೆಯಿಸಿ ನಿದ್ರೆಯ ತೊರೆಯಿಸಿ
ಸವಿಗಳನರಿಯಿಸಿ ನಮ್ಮ
ದಿವರಾತ್ರಿಯೆನ್ನದೆ ಸುಖದೊಳೋಲಾಡಿಸು
ವವಗಡ ಯಾತರಿಂದಾಯ್ತು ॥ ೨೯ ॥

ಭರೆಯೊಳೊಬ್ಬರನೊಮ್ಮೆ ಕಂಡು ಮತ್ತೊಮ್ಮೆ ಕಂ
ಡರೆ ಮೊದಲನಿತೊಪ್ಪವಿಲ್ಲ
ಭರತೇಶ ದಿನ ದಿನಕೆಮ್ಮ ನೋಟಕೆ ಹೊಸ
ಪುರುಷನಾಗಿಹ ಪರಿಯೇನು ॥ ೩೦ ॥

ನಗೆಯ ಚೆಲ್ವಿಕೆಯ ಮೋಹನಕಾಂತಿ ರಸವನು
ಮೊಗವೆತ್ತಲಲಿದುದತ್ತತ್ತ
ಮೊಗೆದು ಮೊಗೆದು ಚೆಲ್ಲುವಂತೆ ರಾಯನ ಮುದ್ದು
ಮೊಗವೊಪ್ಪುತಿಹುದರಗಿಳಿಯೆ ॥ ೩೧ ॥

ಪೆರೆಸೊಸಲಹುದಾದರಾ ಪೆರೆಯೊಳಗಣ
ಕರೆಯಸ್ತವ್ಯಸ್ತವೆಂದದನು
ಜರೆವಂತೆ ಕಸ್ತೂರಿ ತಿಲಕವೊಪ್ಪದೊಳಿಸೆ
ವೆರೆಯನ ಪಣೆಗೆಲ್ದುದೆನ್ನಾ ॥ ೩೨ ॥

ಕಬ್ಬುವಿಲ್ಲಗೆ ಕಣೆದೊಟ್ಟು ಹೆಂಗಳನೆಸು
ವುಬ್ಬಸವೇಕೆಂದು ಕರೆದು
ಕಬ್ಬುವಿಲ್ಲಗೆ ಹೇಳು ಭರತರಾಜನ ನಿಡು
ಹುಬ್ಬನೋಲೈಸೆಂದು ಗಿಳಿಯೆ ॥ ೩೩ ॥

ತಿಂಗಳ ಬೆಳಗು ಸೋಂಕಲು ಕೂಡೆ ಶಶಿಕಾಂತ
ರಂಗಿಸುವಂತೆಮ್ಮ ನೃಪನ
ಕಂಗಳ ಪ್ರಭೆತಾಗಲೊಡನೆ ಕಾಂತೆಯರಂತ
ರಂಗವೊಸರುವುದು ಪಕ್ಕಿ ॥ ೩೪ ॥

ಕಂಪಿನುಸುರಿಗೆ ಕವಿದ ತುಂಬಿಗಳ ಸುಖ
ದಿಂಪಾದ ನೃಪನ ನಾಸಿಕಕೆ
ಕಂಪಿಗೆ ಸೋತೆರಗಿದ ಭೃಂಗಗಳ ಕೊಲ್ವ
ಸಂಪಗೆ ಪಾಟಯೆ ಕೀರಾ ॥ ೩೫ ॥

ಮಿರುಗುವ ಕನ್ನಡಿಯೊಳು ಹರಹಿದ ಸಣ್ಣ
ಹರುವೆಯ ಬಿತ್ತುಗಳಂತೆ
ತುರುಗಿದ ಬವರಿಯಿಂದೆಸೆವ ಗಲ್ಲಗಳೊಂದು
ಮೆರಹು ಸಾಲದೆ ಚಕ್ರಧರನ ॥ ೩೬ ॥

ಚಿತ್ತದಿಚ್ಛೆಯ ಕರ್ಣದೊಳು ಪೆಂಗಳೊರೆವಾಗ
ಪತ್ತಿದ ಬೆಳುನಗೆಯಂತೆ
ಚಿತ್ತಜರೂಪನ ಕಿವಿಗಳೊಳೆಸೆವುವು
ಮುತ್ತಿನ ಚೌಕುಳಿ ಗಿಳಿಯೆ ॥ ೩೭ ॥

ಮಕರಂದ ತುಂಬಿದ ತಾವರೆ ರವಿಯುದ
ಯಕೆ ಮೆಲ್ಲನರೆದೆರೆವಂತೆ
ಶುಕರಾಜ ಸೊಗಯಿಪುದಲ್ತೆ ಕರ್ಪೂರವೀ
ಟಿಕೆಯ ಕೆಂಬಾಯ್ದೆರೆ ದೊರೆಯ ॥ ೩೮ ॥

ಮುತ್ತಿನಮಣಿಗಲತೆಗೆ ಮೂಡಿ ಕುಂಬಳ
ಬಿತ್ತಿನಂದದಿ ಕೊರೆಕೊರೆದು
ತೆತ್ತಿಸಿದಂತೆಸೆವವನ ಕೆಂಬಲ್ಗಳ
ಬಿತ್ತರವಾರ ಸೋಲಿಸದು ॥ ೩೯ ॥

ಮರಿಗಿಳಿ ಕೇಳೆಮ್ಮ ನೃಪನೊಮ್ಮೆ ನುಡಿಗೆ ಬಾ
ಯ್ದೆರೆಯೆ ಚೆಂದುಟಜಿಹ್ವೆಯಾಟ
ನೆರೆಕಲ್ಪವೃಕ್ಷದ ತಳಿರು ನೇರಿಲಹಣ್ಣ
ಮರೆಯೊಳಿಹಂತದೆ ಚಿತ್ರ ॥ ೪೦ ॥

ಬಿಂಗದ ಕುಪ್ಪಿಗೆಗಿಳಿವ ಕುಂಕುಮದ ನಿ
ರಂಗದಿ ತಾಂಬೂಲರಸವ
ನುಂಗುವಾಗಿದಿರಿಗೆ ತೋರುವುದರಸನ
ನುಂಗೊರಳೀನ ಬಣ್ಣಿಪೆನು ॥ ೪೧ ॥

ಮೋಹಿನಿಯರ ಮೋಹಪಾಶ ಹೊಂಬಣ್ಣದ
ರಾಹುಗಳೆನೆ ವೈರಿಶಶಿಗೆ
ರೂಹಿಸಿ ಶೃಂಗಾರ ವೀರದೊಳಾಜಾನು
ಬಾಹುಗಳೆಸೆದುವಾ ನೃಪನ ॥ ೪೨ ॥

ಆರಲಂಬಗರಸನಿಮ್ಮಡಿ ಚೆಲ್ವನವನೈದು
ಸರಲನಾಂತೊಡೆ ಹತ್ತು ಸರಲಾ
ದೊರೆ ಪಿಡಿವುದು ಮೋಡಿಯನೆ ಕರಗಳ ಹತ್ತು
ಬೆರಳೆಸೆದುವು ಸರಲದೊಳು ॥ ೪೩ ॥

ಕರತಲಗಳ ಕೆಂಪು ನಖಗಳ ಛಾಳವುಂ
ಗುರಗಳ ರಶ್ಮಿ ಬಿಂಬಿಸಲು
ಬೆರಕೆ ವರ್ಣದ ತಾವರೆಯ ನಾಳಗ್ಗಳಂತೆ
ದೊರೆಯ ಭುಜಗಳೊಪ್ಪುತಿಹವು ॥ ೪೪ ॥

ಭೂವರನಿಕ್ಕಿದ ಹಾರಪದಕದ ರ
ತ್ನಾವಳಿ ನೆರೆದ ಪೇರುರವು
ಲಾವಣ್ಯಜಲಧಿಯ ನಡುವಿದ್ದ ರತ್ನದ
ದೀವಿಯೊ ಯೆನಲೊಪ್ಪುತಿಹುದು ॥ ೪೫ ॥

ಮರೆಯೇಕೆ ಕೇಳೊಮ್ಮೆ ನೃಪನ ತೆಳ್ಪಸಿರಿನ
ಕಿರುರೋಮರಾಜಿಯ ಕಂಡು
ಇರುಹಿನ ಸಾಲೆಂದು ತೊಡೆದೆನದಕೆ ರಾಯ
ನುರೆನಕ್ಕ ನಾನು ನಾಚ್ಚಿದೆನು ॥ ೪೬ ॥

ನೋಟ ಬೇಟದ ನಗೆ ನುಡಿ ಸಿಂಗರದ ಸ
ಘಾಟಿಯೊಳಗೆಮ್ಮ ನೃಪಗೆ
ಸಾಟಿಯೆ ಅಮೃತವಾಚಕ ಹೇಳು ಹೇಳ್ನಮ್ಮ
ಮೋಟುಗಬ್ಬಿನ ಬಿಲ್ಲಿನವನು ॥ ೪೭ ॥

ಅಂಗಜನಲಗುದೋರುವನೆಮ್ಮ ರಾಯ ತ
ನ್ನಂಗಕಾಂತಿಯ ತೋರಿ ಗೆಲುವ
ಇಂಗಿತ ಕುಶಲನಾರವನೋ ನಮ್ಮರಸೋ ವಿ
ಹಂಗ ಹೇಳೆನಗಿದ ನೀನು ॥ ೪೮ ॥

ಅಂಗಸೌಂದರದಿಂದ ಹೆಂಗಳ ಗೆಲಬೇಕು
ಸಂಗರದೊಳು ಖಡ್ಗ ಬೇಕು
ಹೆಂಗಳ ಸಮರಕೆ ಖಡ್ಗವೆ ಹೂವಿನ
ಭಂಗಾರಕಗ್ನಿಯ ಕಾಹೆ ॥ ೪೯ ॥

ಮೈಯೊಳು ಚುಂಬನಕಧರವೆ ಸಿಹಿಯೆಂಬ
ಹುಯ್ಯಲಂತಿರಲಿ ಕೇಳವನ
ಮೈಯೆಲ್ಲ ಸಿಹಿಯೆಂದರೇನ ಹೇಳಲಿ ನನ್ನ
ಬೈಯದಿರೆಲೆ ಪಚ್ಚೆವರ್ಣ ॥ ೫೦ ॥

ಪೃಥಿವೀಪತಿಯ ಕಂಡು ಹೆಬ್ಬೆಬ್ಬಗೊಂಡಿಂತು
ಕಥಿಸಿದಳೆನದಿರು ಖಗವೆ
ಪ್ರಥಮ ತೀರ್ಥೇಶನ ಹಿರಿಯಕುಮಾರನ
ಕಥನವ ಪೇಳ್ವಳ್ಕುನಾನೆ ॥ ೫೧ ॥

ಅವನ ಗುಣವನವನೊಪ್ಪುವ ಕಡೆಗಂಡು
ವಿವರಿಸಲೆನ್ನಳವಲ್ಲ
ಇವು ಸೂಚನಾರ್ಥ ವರ್ಣನೆಗಳೆಂದರಿದು ನೀ
ನವಧರಿಸಮೃತ ವಾಚಕಾಂಕ ॥ ೫೨ ॥

ನಿನ್ನೊಳಗಿರಲಿ ನಾ ನುಡಿದನುಡಿಗಳಿವ
ನನ್ನಿಗರಿಗೆ ಹೇಳಬೇಡ
ನನ್ನವನೆಂದು ನಿನ್ನೊಡನೆ ಹೇಳದೆನಲ್ಲ
ದಿನ್ನೊಬ್ಬರಿಗೆ ಹೇಳ್ವಳಲ್ಲ ॥ ೫೩ ॥

ಅಹುದಲ್ಲವೆನ್ನದೆ ಸುಮ್ಮನಿರ್ದಪೆಯಲೆ
ವಿಹಗಪೇಳ್ನಿನ್ನಯ ಮನಕೆ
ಬಹವೊ ಬಾರವೊ ನನ್ನ ನುಡಿಗಳೆಂದಸಿಯಳಾ
ಗ್ರಹಿಸಿ ಕೇಳಿದಳದರೊಡನೆ ॥ ೫೪ ॥

ಅಕ್ಕ ನಿನ್ನೀ ನುಡಿ ನನ್ನ ಚಿತ್ತಕೆ ಬಾರ
ದಕ್ಕಟ ಬಂದರುಸುರೆನೆ
ಪಕ್ಕಿಗೇತಕೆ ಬಹುದೀ ಜಾಣ್ಮೆಯೆಂದುದು
ಚೊಕ್ಕಮಾತಿನ ರಾಜಕೀರ ॥ ೫೫ ॥

ಅದರಿಂದ ಸುಮ್ಮನಾಲಿಸುತಿದ್ದೆನಕ್ಕ ನೀ
ನೊದವಿಪೇಳೆಂದ ಮೇಲೆನ್ನ
ಎದೆಯರಿದನಿತ ಸೊಲ್ಲಿಪೆನು ಕೇಳೆಂದುದಿಂ
ತಿದು ರಾಜಲಾವಣ್ಯಸಂಧಿ ॥ ೫೬ ॥

ಅರಗಿಳಿಯೂಳಾಪ ಸಂಧಿ

ಕೇಳಕ್ಕ ಕುಸುಮಾಜಿ ನಿನ್ನ ಮುಂದಿಂತೆಂದು
ಹೇಳುವ ದಕ್ಷನಾನಲ್ಲ
ಹೇಳೆಂದು ನೀನೆಂದಮೇಲೆ ನಿನ್ನಾ ಜ್ಞೆಯ
ತಾಳಿ ನುಡಿವೆನು ಬಲ್ಲನಿತ ॥ ೧ ॥

ಅಕ್ಕ ನೀನಾಡಿದ ನುಡಿಯೆಲ್ಲ ನೃಪತಿಗೆ
ತಕ್ಕವಲ್ಲದೆ ಟೊಳಿಯುಂಟೆ
ಮುಕ್ಕೊಡೆಯೊಡೆಯನ ಹಿರಿಯ ಪುತ್ರಗೆ ದಶ
ದಿಕ್ಕಿನೊಳೆಣೆಯಹರಾರು ॥ ೨ ॥

ಅವನಿಗೆ ರಾಜನಾದವನಿಗೆ ಸಾಟಿಯಿ
ಲ್ಲವನಿಗೆ ರಾಣಿಯರಾದ
ನಿವಗೆಣೆಯಿಲ್ಲ ನಿಮ್ಮೊಡನಾಡಿ ಪಾಡಿದ
ನವಗಾರು ಸರಿಯೆಂದುದೊಡನೆ ॥ ೩ ॥

ಭೂವಳಯಾಂಬಿಕೆಯಲ್ತೆ ಯಶಸ್ವತಿ
ದೇವಿ ಪಡೆದಳಾ ನೃಪನ
ನೀವೆಲ್ಲರಾವ ನೋಂಪಿಯ ಫಲದಿಂದ ಮಾ
ದೇವಿಯರಾದಿರೆಂದರಿಯೆ ॥ ೪ ॥

ರಾಜಪುರುಷನೊಳು ರಾಜೀವ ವದನದ
ರಾಜಾಂಗನೆಯರೊಪ್ಪಿರಲು
ಜಾಜಿಯ ಲತೆಗಳು ವನದೊಳಶೋಕೆಯ
ಭೂಜವನಪ್ಪಿದಂತಿಹುದು ॥ ೫ ॥

ಪುರುಷರೊಳವರತ್ನ ಸ್ತ್ರೀಯರೊಳಗೆ ನೀವು
ಸುರುಚಿರ ರತ್ನಗಳಕ್ಕ
ಬೆರಸಿದ ಬಗೆಯಿದು ರತ್ನ ರತ್ನವ ಕೂಡಿ
ಸರ ಮಾಡಿದಂತೆ ತೋರುತಿದೆ ॥ ೬ ॥

ಪತಿ ಹೊಲ್ಲ ಸತಿ ಲೇಸು ಸತಿ ಹೊಲ್ಲ ಪತಿ ಲೇಸೆಂ
ಬತಿ ವಿಕೃತಿಗಳುಂಟು ಪರಗೆ
ಪತಿ ಲೇಸು ಸತಿಯರು ಲೇಸುಲೇಸೆಂಬಂತೆ
ನುತಿವೆತ್ತರಾರು ನಿಮ್ಮಂತೆ ॥ ೭ ॥

ಜಾಣೆ ಜಾಣನು ಕೂಡಲದು ತಂತಿಗೂಡಿದ
ವೀಣೆಯ ನುಡಿಸಿದಂತಿಹುದು
ಜಾಣೆ ಹೆಡ್ಡನು ಕೂಡಲಿಹುದದು ವೀಣೆಗೆ
ನೇಣುಬಿಗಿದು ಮಿಡಿದಂತೆ ॥ ೮ ॥

ಸಮರೂಪ ಸಮಪ್ರಾಯ ಸಮಗುಣಗಣ ನಿಮ್ಮ
ರಮಣಗು ನಿಮಗು ಜೆನ್ನಾಗಿ
ಸಮನಿಸಿತದರಿಂದ ನಿಮಗನ್ಯೋನ್ಯ ಸಂ
ಭ್ರಮ ಮೋಹ ದೊರೆಕೊಂಡುದಕ್ಕ ॥ ೯ ॥

ಮನಮೆಚ್ಚಿದೆಡೆಯಲ್ಲಿ ತನುಮೆಚ್ಚುವುದು ನುಡಿ
ಯನುಕೂಲವಹುದದರಿಂದ
ಮನದಿಚ್ಛೆಯರಸನ ಪೊಗಳಿದೆ ಲೇಸು ಸ
ಜ್ಜನಸತಿಯರ ತಲೆವಣಿಯೆ ॥ ೧೦ ॥

ನೀನೇನ ನುಡಿವೆ ನಿನ್ನಿನಿಯನ ಲಾಲನೆ
ತಾನೇ ನುಡಿಸಿತಕ್ಕ ನಿನ್ನ
ಆನಂದರಸವ ತನ್ನೆದೆಗಿತ್ತ ಪುರುಷನ
ಮಾನಿನಿ ಬಣ್ಣಿಸದಿಹಳೆ ॥ ೧೧ ॥

ಕೇಳುತಿದ್ದಳು ಕುಸುಮಾಜಿಯಾ ಗಿಳಿಯ ವಾ
ಗ್ಜಾಲದ ಮರ್ಮಕಲೆಗಳಾ
ಈ ಲೇಸು ಹೊಸತಿದು ಗಿಳಿಯಲ್ಲವೆಂದಾಗ
ಳಾಲೋಚನೆಯ ಮಾಡಿದಳು ॥ ೧೨ ॥

ಕಲಿಸಿದಷ್ಟನೆ ನುಡಿವುದು ಪಕ್ಕಿಗುಳ್ಳುದೀ
ಗಿಳಿ ಹೊಸ ಕಲೆಯ ತಾನೆನಗೆ
ಕಲಿಸುತಿದ್ದಪುದಿದು ಗಿಳಿಯಲ್ಲವೆಂದು ತ
ನ್ನೊಳಗೆ ತಾ ನೆನೆದಳಾ ಜಾಣೆ ॥ ೧೩ ॥

ವ್ಯಂತರನಾಗಲಿ ಸುರನಾಗಲಿದರ ದೇ
ಹಾಂತರಾಳದೊಳಿಡೆಗೊಂಡು
ಇಂತು ನುಡಿವನಾಗಬೇಕೆಂದು ನೆನೆದಳಾ
ಕಾಂತೆ ತಾನೇನು ಕೋವಿದೆಯೊ ॥ ೧೪ ॥

ಅವರೊಳು ಪುರುಷರ ನುಡಿಯಲ್ಲವೀ ನುಡಿ
ಯುವತಿಯ ನುಡಿಯದರಿಂದ
ಇವಳಾವಳೆಂಬುದನರಿವೆ ನಾನೆಂದಾಕೆ
ಸವಿನುಡಿಯಿಂದ ಕೇಳಿದಳು ॥ ೧೫ ॥

ಪಕ್ಕಿ ನಿನ್ನೀ ನುಡಿ ಸತ್ಯ ನಿನ್ನಯ ವೇಷ
ಠಕ್ಕಾಗಿ ನನಗೆ ತೋರುತಿದೆ
ಚಿಕ್ಕ ವೇಷವ ಬಿಟ್ಟು ದೊಡ್ಡ ವೇಷವ ತೋರಿ
ಚಕ್ಕನೆನ್ನೊಡನೆ ಮಾತಾಡು ॥ ೧೬ ॥

ಚದುರರ ಕೂಡತಿ ಚಾತುರ್ಯ ಸಲ್ಲದು
ಸುದತಿಯಲ್ಲವೆ ನೀನು ನಿನ್ನ
ಸದಮಲಾಕಾರವ ತೋರೆಂದು ನುಡಿದಳಾ
ಚದುರರ ದೇವನರ್ಧಾಂಗಿ ॥ ೧೭ ॥

ಭೋಂಕನೆ ಗಿಳಿಯ ಕೆಲದೊಳನುಪಮರತ್ನ
ಸಂಕುಲಭೂಷಣವೆಸೆಯೆ
ಕುಂಕುಮವರ್ಣದ ಕೋರಿಜವ್ವನದೊರ್ವ
ಪಂಕಜಾನನೆ ನಿಂದಳಾಗ ॥ ೧೮ ॥

ಅಬಲೆ ನೀನಾರಿಲ್ಲಿಗೇತಕೆ ಬಂದೆಯೆಂ
ದಬುಜಾಕ್ಷಿ ಬೆಸಗೊಂಡಳವಳ
ಸೊಬಗೆ ಕೇಳಾನು ವ್ಯಂತರಕನ್ನೆ ಗಿರಿವನ
ಶಿಬಿರದೊಳಿಹೆನೆಂದಳಾಕೆ ॥ ೧೯ ॥

ಲೀಲಾರ್ಥ ಗಗನದೊಳಗೆ ಹೋಗುತಿರ್ದೆನು
ಬಾಲೆ ನೀನೀ ಗಿಳಿಯೊಡನೆ
ಸೂಳುನುಡಿವುತಿರೆ ಬಂದೆನಾ ನುಡಿಗಳ
ಕೇಳಲೆನಗೆ ಪ್ರೀತಿಯಾಗಿ ॥ ೨೦ ॥

ಕನ್ನಡಹಕ್ಕಿಯಂಗವ ಹೊಕ್ಕು ನಿಜರೂಪ
ನನ್ನಲ್ಲಿ ಕುಸುಮಾಜಿ ಮಾಜಿ
ನಿನ್ನೊಡನುಸುರುತಿದ್ದೆನು ನೀನು ತಿಳಿದುದು
ಚೆನ್ನಾಯ್ತು ಜಾಣನರ್ಧಾಂಗಿ ॥ ೨೧ ॥

ರೂಪು ಯೌವನ ಜಾಣ್ಮೆ ಸಿರಿಯ ಪಡೆಯಬಹು
ದೀ ಪತಿಭಕ್ತಿಸಂಪದವ
ಆ ಪುರುಷೋತ್ತಮನರ್ಧಾಂಗಿಯೆರಿರ ನೀ
ವೇ ಪಡೆದಿರಿ ಪರಗ್ರುಂಟೆ ॥ ೨೨ ॥

ಆ ರಾಯ ನವಗೆರವಲ್ಲವೆಂತೆನೆ ಪರ
ನಾರಿಸಹೋದರನೆಂಬ
ವಾರತೆಯುಂಟದರಿಂದೆಮಗಣ್ಣನು
ನಾರಿ ಕೇಳೆಂದಳಾ ದಿವಿಜೆ ॥ ೨೩ ॥

ಅಕ್ಕ ಕೇಳಿಂದಿಷ್ಟು ಹೊತ್ತು ಗಿಳಿಯ ಮೈಯ
ಹೊಕ್ಕು ಪೇಳ್ದುದು ಗಿಳಿಗಿರಲಿ
ಚೊಕ್ಕ ನೀನತ್ತಿಗೆ ನಾದುನಿಯೆಂದೆಂಬ
ಲೆಕ್ಕವಿರಲಿ ನಿನಗೆನಗೆ ॥ ೨೪ ॥

ಅತ್ತಿಗೆ ಕೇಳು ನನ್ನಣ್ಣಾಜಿಯೊಳು ನೀನು
ಚಿತ್ತವಿತ್ತುದ ಕಂಡು ನನ್ನ
ಚಿತ್ತ ಮೆಚ್ಚಿತು ಮೆಚ್ಚಿ ನಿನಗೆ ನಾನೀವುದೇ
ನುತ್ತಮಗುಣಭೂಷಣಾಂಗಿ ॥ ೨೫ ॥

ಉಡಿಗೆ ತೊಡಿಗೆಯೊಂದ ಕೊಡುವೆನಿಡುವೆನೆಂಬ
ನುಡಿ ಸಾಕು ನಿನಗೊಂದು ಚಿಂತೆ
ಎಡೆಗೊಂಡ ವೇಳೆಯೊಳೆನ್ನ ನೆನೆವುದೆಂದು
ನುಡಿದಳು ಬಯಲಾದಳೊಡನೆ ॥ ೨೬ ॥

ಬೆಕ್ಕಸಬಟ್ಟಳು ಕುಸುಮಾಜಿ ಕೆಲಬಲ
ದಿಕ್ಕ ನೋಡಿದಳು ಮತ್ತಿನಿಸು
ನಕ್ಕಳು ಜಿನಸಿದ್ಧಯೆಂದಳಷ್ಟರೊಳು ಹೆ
ಮ್ಮಕ್ಕಳಾಟಕೆ ಬಂದರೊಸೆದು ॥ ೨೭ ॥

ಬಂದಕ್ಕ ತಂಗಿಯರಿಗೆ ವಿನಯವ ಮಾಡಿ
ಹಿಂದಾದ ಚೋದ್ಯವಾರ್ತೆಯನು
ಒಂದು ನುಡಿಯದೆ ಕುಸುಮಾಜಿ ಮಾಜಿಕೊಂ
ಡೆಂದಿನಂತಿದ್ದಳಾಟದೊಳು ॥ ೨೮ ॥

ತಪ್ಪುಳ್ಳರೀ ಕೃತಿಯೊಳು ತಪ್ಪ ತಿದ್ದುವು
ದೊಪ್ಪವಾದರೆ ಕೇಳ್ವುದೆಮಗೆ
ತಪ್ಪಿಲ್ಲ ತಾಗಿಲ್ಲ ಜಿನಶರಣೀ ಕಾವ್ಯ
ವೊಪ್ಪುತಿರಲಿ ಸರ್ವಕಾಲ ॥ ೨೯ ॥

ಎಂದು ನಾಂದಿಯನೋದಿ ಮುಗಿದು ಗಾಯಕಿ ನಲ
ವಿಂದ ಹೊತ್ತಗೆಯ ಕಟ್ಟಿದಳು
ಮುಂದಸ್ಮಿತಮುಖನಾಗಿ ರಾಜೇಂದ್ರನಾ
ನಂದಿಸುತಿದ್ದನೇನೆಂಬೆ ॥ ೩೦ ॥

ಮುನ್ನಣೆ ಸಂಧಿ

ತನ್ನೆದೆಯೊಳಗೆ ತಾನಾ ಕಾವ್ಯರಚನೆಯ
ಮುನ್ನ ಭಾವಿಸಿ ನೋಡಿ ಮೆಚ್ಚಿ
ಚೆನ್ನಾದುದೀ ಕೃತಿಯಿದಕೆ ವಿಚಾರವುಂ
ಟೆನ್ನೆಂದು ನುಡಿದನಾ ರಾಯ ॥ ೧ ॥

ಇದು ಸುಮನಾಜಿಯ ಕವಿತೆಯಲ್ಲಮರಾಜಿ
ಪದೆದು ಪೇಳಿದ ಕೃತಿಯೆಂದ
ಅದ ಕೇಳುತಿರ್ದರು ನಕ್ಕರೊಬ್ಬೊಬ್ಬರ
ವದನವ ನೋಡಿ ತಮ್ಮೊಳಗೆ ॥ ೨ ॥

ಆಗಳೆ ಪೇಳ್ದಿ ನಾನಕ್ಕ ನೀನೆನ್ನ ಮೇ
ಲೀ ಗುಟ್ಟು ಹೊರಿಸದಿರೆಂದು
ಈಗಳಾದುದೆಯೆಂದು ಸುಮನಾಜಿ ನಗುತೊಡ
ನಾಗಹುದಹುದೆಂದಳುಬ್ಬಿ ॥ ೩ ॥

ಜಾಣರನಾರು ಚಾಳಿಸಬಹುದದು ತಾನೆ
ಕಾಣಿಸಿತಲ್ಲ ಕಣ್ಣಾರೆ
ಹೂಣಿದ ಹೊರೆ ಜಾರಿದಂತಾದುದೆನಗೆಂದು
ಜಾಣೆ ನುಡಿದಳರ್ತಿಯಿಂದ ॥ ೪ ॥

ಮೊದಲರ್ಧವವಳ ಕವಿತ್ವವಾ ಕಡೆಯರ್ಧ
ವದು ನಿನ್ನ ಸುಕವಿತ್ವವೆಂದ
ಅದು ತಪ್ಪದಹುದಹುದೆಂದಳಂದಮರಾಜಿ
ಮುದದಿಂದ ನಗುತ ರಾಯನೊಳು ॥ ೫ ॥

ಎಂತು ಜಯಿಸಬಹುದಕ್ಕ ನೋಡರಸನೆ
ಮ್ಮಂತರಂಗದ ಸುಕ್ಕು ಸುಳುಹ
ಅಂತರಿಸದೆ ಹೇಳುತಿದ್ದಪನೆಂದೆಲ್ಲ
ಕಾಂತೆಯರೊಳಗೆ ನಲಿದರು ॥ ೬ ॥

ಲೇಸಾದುದೀ ಕೃತಿ ನಿಮ್ಮ ಕವಿತ್ವದ
ಭ್ಯಾಸವೊಳ್ಳಿತು ಸತಿಯರಿರ
ಈ ಸುಕಥೆಗೆ ಮೆಚ್ಚಿದೆನು ಬೇಡಿ ನೀವೆಂದು
ದೀ ಸಮಯದೊಳೀಯಬೇಕು ॥ ೭ ॥

ಭೂಷಣಾವಳಿಯೀಗ ಕಡಮೆಯಿಲ್ಲೆಮಗೆ ವಿ
ಶೇಷವಾಗಿದ್ದವಿನ್ನ ವರ
ಘೋಷಣೆಯಂತಿರಲೆಂದಾತ್ಮಪತಿಗೆ ಸಂ
ತೋಷವ ತೋರಿ ನುಡಿದರು ॥ ೮ ॥

ಮುನ್ನುಳ್ಳ ಭೂಷಣವಿರಲದಕೇನೀಗ
ನನ್ನ ಭೂಷಣವನಿತ್ತಪೆನು
ಬನ್ನಿಯೆಂದವರ ಕರೆವುತ ಭೂಷಣಕಾಗ
ತನ್ನ ಕೈಯಿಕ್ಕಿದನರಸ ॥ ೯ ॥

ಬೇಡವೆಂದರು ರಾಯ ಕೊಡುತಿದ್ದನಿದಕೆ ನಾ
ಮಾಡುವೆವೆನುತಿಬ್ಬರೆದ್ದು
ಕೂಡಣ ಸತಿಯರ್ಗೆ ಸೂಚಿಸಿ ಸಾಷ್ಟಾಂಗ
ಗೂಡಿ ತಾವೆಲ್ಲಿರಗಿದರು ॥ ೧೦ ॥

ಬಲುಘಾಳಿ ಬೀಸಲು ಮರದಿಂದ ನೆಲಕೆ ಬಿ
ದ್ದೆಳಲತೆಗಳೊಯೆಂಬ ತೆರದಿ
ಲಲಿತಾಂಗ ನಿಮಿರ್ದು ಸಾಷ್ಟಾಂಗವೆರಗಿದ ಕೋ
ಮಲೆಯರ ಭಾವ ರಂಜಿಸಿತು ॥ ೧೧ ॥

ಕಂಡನರಸನಿವರೆಲ್ಲರೀತಕೆ ಸಾಲು
ಗೊಂಡೆರಗಿದರೆಂದು ನಗುತ
ಪಂಡಿತೆಯಾಸ್ಯವ ನೋಡಿದನವಳಿದೆ
ಗೊಂಡು ನುಡಿದಳಿದೆಯರಿದು ॥ ೧೨ ॥

ಕ್ಷಿತಿಪ ನೀನಾಭರಣವನೀವೆನೆನಲದು
ಸತಿಯರ್ಗೆ ರುಚಿಯಾದುದಿಲ್ಲ
ಪತಿಯಲಂಕಾರವ ಪಾಳ್ಮಾಡಿ ನೋಡರು
ಪತಿಭಕ್ತೆಯರ ಚರಿತವದು ॥ ೧೩ ॥

ಒಲ್ಲೆವೆಂದರು ಬೇಡವೆಂದರವರು ನೀನು
ಬಲ್ಲಿತುಮಿಗೆ ಕರೆವಾಗ
ವಲ್ಲಭಗಿದಿರುತ್ತರವ ಕೊಡಲಾಗದೆಂ
ದೆಲ್ಲರೆರಗಿದರು ನೃಪತಿ ॥ ೧೪ ॥

ಇರ್ವರಿಗೀವೆನೆಂದಾನು ಕರೆದರೇಕೆ
ಸರ್ವರೆರಗಿದರಂತಿವರು
ಒರ್ವರೊರ್ವರಿಗೆರವಿಲ್ಲ ತಮ್ಮೊಳು ಸ್ನೇಹ
ಪರ್ವಿಯೊಂದಾಗಿಹರರಸ ॥ ೧೫ ॥

ಅರಿಯೆಯ ನೀನಿದ ನಗೆಕಾರ ಬಗೆಕಾರ
ಮರೆಕಾರ ಬಲು ಟೊಳಕಾರ
ಅರಿಯದಂದದೊಳೆನ್ನ ಕೇಳ್ವಿಯೆಂದವಳೊಳ
ಗರಿದೊತ್ತಿ ನುಡಿದಳು ನೃಪನ ॥ ೧೬ ॥

ಸಾಕೆಮ್ಮ ದೇವಿಯೆರೆರಗಿ ಹೊತ್ತಾಯ್ತು ಪ
ರಾಕು ಬೇಡೇಳಿರೆಂದಿನ್ನು
ವಾಕುದೋರೆಂದು ಝಂಕಿಸಿದಳಾ ಪಂಡಿತೆ
ಭೂಕಾಂತ ನಸುನಕ್ಕನದಕೆ ॥ ೧೭ ॥

ಏಳಿರೌ ಬಳಲಿದಿರೆಂದು ನುಡಿದನು ಭೂ
ಪಾಲನದಕೆ ನಸುನಗುತ
ಬಾಲೆಯರೆದ್ದು ನಿಂದರು ಹೇಳಲಳವೆ ತ
ತ್ಕಾಲದೊಂದಧಿಕ ಲೀಲೆಯನು ॥ ೧೮ ॥

ಮುಟ್ಟಿತವರ ಮೇಲೆ ನನಗರ್ತಿನಾನೊಂದ
ಕೊಟ್ಟಪೆನೆನಲೊಲ್ಲರಿವರು
ಕೊಟ್ಟಲ್ಲದೆನ್ನುಬ್ಬು ನಿಲ್ಲದಿನ್ನಿದಕೇನು
ತಿಟ್ಟವೆಂದೆದೆಯೊಳು ನೆನೆದ ॥ ೧೯ ॥

ಭಂಗಾರವನೊಲ್ಲದಿರೆ ಮಾಣಲಿವರನಾ
ಲಿಂಗಿಸಿಯಾದರು ಬಿಡುವಾ
ಪಾಂಗಾವುದೊತ್ತಿಗೆ ಬಾರರೆಂದೆಣಿಸಿ ತಂ
ತ್ಯಾಗವನೊಡನೊಂದ ಕಂಡ ॥ ೨೦ ॥

ಅಮರೆ ಬಾ ಸುಮನೆ ಬಾ ಕುಸುಮಾಜಿ ಚಿತ್ತವಿ
ಭ್ರಮದೊಳಿದ್ದ ಪಳದಕೊಂದು
ಕ್ರಮವನೇಕಾಂತದೊಳಗೆ ಪೇಳ್ವೆನೆಂದು ಭೂ
ರಮಣ ತನ್ನೊತ್ತಿಗೆ ಕರೆದ ॥ ೨೧ ॥

ನಡೆದು ಸಮೀಪಕೆ ಬಂದ ಪೆಂಗಳನೆಡ
ಗಡೆ ಬಲಗಡೆಯೊಳು ನಿಲಿಸಿ
ನುಡಿವಂತೆ ಕಿವಿಗೆ ಮೋರೆಯ ತೋರುತಿಬ್ಬರ
ನೊಡನಪ್ಪಿಕೊಂಡನಾ ನೃಪತಿ ॥ ೨೨ ॥

ಘೊಳ್ಳನೆ ಸತಿಯರೆಲ್ಲರು ನಕ್ಕರದಕೆ ಭೂ
ವಲ್ಲಭ ತಾ ನಸುನಕ್ಕ
ಒಳ್ಳಿತಂತಾಯ್ತಾಗಬೇಕೆಂದು ಕುಸುಮಾಜಿ
ಗೆಲ್ಲವಡೆದು ನಕ್ಕಳೊಡನೆ ॥ ೨೩ ॥

ಕೋಣೆಯೊಳಾನೊಂದ ನುಡಿದಾಡಲದ ತೆಂದು
ಕ್ಷೋಣೀಶಗರಿಕೆ ಮಾಡಿದಿರಿ
ಕಾಣದೆ ದೈವವಿಲ್ಲವೆ ನಿವಗಾ ಫಲ
ಕಾಣಿಸಿತಿಂತು ಕರ್ಣ್ಣಾರೆ ॥ ೨೪ ॥

ಸೆರಗ ಮೊಗಕೆ ಸಾರ್ಚಿ ನಗುವಳು ಕಂಭದ
ಮರೆಗೆ ಹೋಹಳು ಕೂಡೆ ಬಹಳು
ಎರೆಯನಿದಿರೊಳಿಷ್ಟು ನಾಣ್ಚುತ ನಗುತ ಹೊಂ
ಮಿರಿದಾಡುತಿರ್ದಳಾ ತರುಣಿ ॥ ೨೫ ॥

ಅರಸ ಕಿಕ್ಕಣ್ಣಿಂದ ನೋಡುವನಾಕೆಯ
ಸರಸ ಲೀಲೆಗೆ ಹಿಗ್ಗಿ ನಗುವ
ತಿರಬಾಗಿಕೊಂಡಿದ್ದ ಳೀಗಳುಬ್ಬಿದಳೆಂದು
ಹರುಷವೈದಿದನೆದೆಯೊಳಗೆ ॥ ೨೬ ॥

ಅಮರಾಜಿ ಸುಮನಾಜಿಯರು ಮುಂದೆ ನಿಂದಿಷ್ಟು
ನಮಿತಮುಖಾಬ್ಜೆಯರಾಗಿ
ವಿಮಲಕಟಾಕ್ಷದಿ ನೋಡಿ ಲಜ್ಜೆಯೊಳಾತ್ಮ
ರಮಣನೊಳಿಂತು ನುಡಿದರು ॥ ೨೭ ॥

ಜನದಗೋಷ್ಠಿಯೊಳಿದ ನೆನೆಯಬಹುದೆ ದೇವ
ರೆನುತ ತಾವಿರ್ವರು ತಮ್ಮ
ನದೊಳು ಸಂತಸ ಮಾತಿನೊಳಿನಿಸು ರಂ
ಜನೆಯನಾಡಿದರು ಗಾಡಿಯೊಳು ॥ ೨೮ ॥

ಅರಿವರೊಳಗನ್ಯರಿವರೆನ್ನ ಸೇವೆಯ
ನಾರಿಯರೆನ್ನ ರಾಣಿಯರು
ನಾರಿಯರೆಲ್ಲರು ನಾನೊಬ್ಬ ಪುರುಷ ನೀ
ವೋರಂತೆ ನಾಣ್ಚಲೇಕೆಂದ ॥ ೨೯ ॥

ಕುಸುಮಾಜಿಗೊಂದು ತಂತ್ರವ ಪೇಳ್ವೆನೆಂದೆಮ್ಮ
ಹುಸಿಗಿಂತು ಕರೆಯಲದೇಕೆ
ಕುಸುಮಾಜಿ ನಕ್ಕಳಲ್ಲವೆ ತಂತ್ರವದು ತಾನೆ
ಹುಸಿಯಾವುದೆನ್ನೊಳಗೆಂದ ॥ ೩೦ ॥

ಗೆಲಲರಿದಕ್ಕ ನಾವರಸನನೆಂದು ತ
ಮ್ಮೊಳಗೆ ತಾವಿರ್ವರು ನುಡಿದು
ಒಳಸರಿದೊಯ್ಯನೆ ಗದ್ದುಗೆಯೊತ್ತಿಂದ
ತೊಲಗಿ ಪೆಂಗಳು ಸಾರ್ದರತ್ತ ॥ ೩೧ ॥

ನೋಡಿದರಾ ಕುಸುಮಾಜಿಯ ತಂಗಿ ನೀ
ನಾಡಿದ ನುಡಿ ಹಸನಾಯ್ತು
ನೋಡು ನಿನ್ನನು ನಾವು ಸ್ತುತಿಮಾಡಲಾ ಫಲ
ಕೂಡೆ ಕಾಣಿಸಿತೆಂದರವರು ॥ ೩೨ ॥

ಅಹುದು ನಾನಾವ ಗುಣಜ್ಞೆ ನೀವೆನ್ನನು
ತ್ಸಹದಿಂದ ಕೀರ್ತಿಸಲೇಕೆ
ಬಹುಗುಣಿಗಳು ಸ್ವಲ್ಪಗುಣಿಗಳ ಕೊಂಡಾಡ
ಬಹುದೇ ಎಂದಳು ಶಶಿವದನೆ ॥ ೩೩ ॥

ನಾನೊಮ್ಮೆ ಕಿರಿಯಳು ನಿಮ್ಮ ಕೀರ್ತಿಸಬಹು
ದೀ ನುತ ಕೃತಿ ನನಗೇಕೆ
ಹೀನಾಧಿಕವೆಂಬ ಹೆಚ್ಚು ಕುಂದಿಲ್ಲವೆ
ಏನಕ್ಕ ನೀವರಿಯದುದೆ ॥ ೩೪ ॥

ಬಿನದಕೆಂದೆವು ತಂಗಿ ನೋಯದಿರೆಂದರೆ
ವನಿತೆಯರಾರು ನಿಮ್ಮಂತೆ
ಬಿನದಕಾಡಿದೆನಕ್ಕ ಯೆಂದಳದಕೆ ರಾಯ
ಮನವುಬ್ಬಿ ನಗುತಿದ್ದನೊಳಗೆ ॥ ೩೫ ॥

ತಳತಳಿಸುವ ಮೊಗದಿಂದ ಲೀಲೆಯೊಳಿದ್ದ
ಲಲನೆಯರೆಲ್ಲರ ನೋಡಿ
ಬಳಿಕೊಂದು ಮಾತನಾಡಿದನು ಸುಜಾಣರ
ತಿಲಕನಾ ಪಂಡಿತೆಯೊಡನೆ ॥ ೩೬ ॥

ಪಂಡಿತೆ ನಾವೆಮ್ಮ ಮನೆಯೊಳಿದ್ದನ್ನವ
ಕೊಂಡರೊಳ್ಳಿತೊ ಭುಕ್ತಿಗೆಮ್ಮ
ಪೆಂಡಿರೊಳೊರ್ವಳ ಮನೆಗೆ ಹೋಹುದು ಲೇಸೊ
ಕಂಡುದನುಸುರು ನೀನೆಂದ ॥ ೩೭ ॥

ಅರಿದಳಾಗಳೆ ಚಿತ್ತ ಕುಸುಮಾಜಿಯೊಳು ತನ
ಗೆರಕವಾಯ್ತಾಕೆಯ ಮನೆಗೆ
ಒರಗಲ್ಕೆಯ್ದುವೆನೆಂಬ ಗೊನೆಹವಿದೆಂದದ
ಮರಸಿಕೊಂಡಿಂತು ನುಡಿದಳು ॥ ೩೮ ॥

ಇಂದಿಗಾರೋಗಣೆ ದೇವರ ಗೃಹದಲ್ಲಿ
ಚಂದವಲ್ಲೊರ್ವಳ ಮನೆಗೆ
ಸಂದರುತ್ತಮವೆಂದಳರಸಿಗೆ ಮನಸಿನ
ಗಂದೆಯ ತುರಿಸಿದಂತಾಯ್ತು ॥ ೩೯ ॥

ಹೇಳಾದರಾವಳ ಮನೆಗೆಯ್ದಬಹುದೆಂದು
ಕೇಳಿದನೊಡನೆ ಪಂಡಿತೆಯ
ಆಲೋಚಿಸಿಕೊಂಡು ಬಿನ್ನವಿಸುವೆನೆಂದು
ಕೌಳಿಕಮೌನವಡೆದಳು ॥ ೪೦ ॥

ಮೂಗಿನ ಮೇಲೆ ಬೆರಳನಿಟ್ಟು ಕಣ್ಮುಚ್ಚಿ
ತೂಗಾಡಿ ತಲೆಯನೊಂದಿನಿಸು
ಯೋಗಿಗಳಂತಿಷ್ಟು ಜಾನಿಸಿ ಕಣ್ದೆರೆ
ದಾಗಳೆ ನುಡಿದಳಾ ಕುಟಲೆ ॥ ೪೧ ॥

ಒಡೆಯ ಬಿನ್ನಹವಿಂದು ಕುಸುಮಾಜಿಯರಮನೆ
ಗಡಿಯಿಟ್ಟರುತ್ತಮವೆಂದು
ನುಡಿದಳಿಂತುತ್ತಮವಾಯ್ತೆಂದು ಹೇಳೆಂದು
ನುಡಿಸಿದನವಳ ಬಾಯಿಂದ ॥ ೪೨ ॥

ಹೊಸಕಾವ್ಯ ಮೂವರಿಂದಾದುದಿಬ್ಬರನೆ ಮ
ನ್ನಿಸಿದೆಯಿನ್ನೊಬ್ಬಳಿಗಿಲ್ಲ
ಅಸಿಯಳ ಮನೆಗೆಯ್ದಿ ಮನ್ನಿಪುದುಚಿತವೆಂ
ದುಸುರಿದೆನೆಂದಳಾ ಜಾಣೆ ॥ ೪೩ ॥

ಅಮ್ಮ ರಾಯನಿಗಿಂದು ನಿನ್ನರಮನೆಯಲ್ಲಿ
ಸುಮ್ಮಾನ ಮುಂದೆ ನೀನೆಯ್ದಿ
ಜುಮ್ಮನೆ ಜೋಕೆಮಾಡೆಂದಳು ಪಂಡಿತೆ
ಹೆಮ್ಮಕ್ಕಳೆಲ್ಲರ ಮುಂದೆ ॥ ೪೪ ॥

ಸವತಿಯರೆಡೆಯೊಳು ಸತಿ ನಾಣ್ಚುತಿದ್ದಳಾ
ಸವತಿಯರೇನು ಜಾಣೆಯರೊ
ಅವರ ತಂತ್ರವ ಬಲ್ಲರಹುದದ ಹಿಕ್ಕದೆ
ಸುವಿನಯ ಮಿಗೆ ಕಳುಹಿದರು ॥ ೪೫ ॥

ತಂಗಿ ಹೋಗಕ್ಕ ಹೋಗಾಣ್ಮನಾರೋಗಣೆ
ಗಂಗನೆಗೆಡೆಮಾಳ್ಪ ಭಾಗ್ಯ
ಸಂಗಡಿಸಿತು ನಿನಗದು ನಮ್ಮ ಭಾಗ್ಯವೆಂ
ದಿಂಗಿತ ಮಿಗೆ ಕಳುಹಿದರು ॥ ೪೬ ॥

ದಾರಿದೆಗೆದು ಕುಸುಮಾಜಿ ನಿಂದಳು ವೇತ್ರ
ಧಾರಿಣಿಯರು ವೇಳೆಯರಿದು
ಮಾರನೊಡೆಯ ರತಿದೇವಿಯೊಡತಿಯ ಕ
ಣ್ಣಾರೆ ಚಿತ್ತವಿಸೆಂದರೊಡನೆ ॥ ೪೭ ॥

ನುಡಿಯ ಜೆಲ್ವಿಕೆಯಿಂದ ಗಗನದೊಳಗೆ ಹೋಹ
ಮುಡದಿಯ ತಿರುಗಿಸಿ ತನ್ನ
ನುಡಿವಕ್ಕಿಯೊಳಗಡಗಿಸಿ ನುಡಿಸಿದ ಸವಿ
ನುಡಿಯ ಲತಾಂಗಿಯನೋಡು ॥ ೪೮ ॥

ಸ್ಪರಮಾತ್ರದಿಂದ ಗಿಳಿಯ ವೈಯೊಳಡಗಿರ್ದ
ಸುರಸುದತಿಯ ನೆಲೆಯರಿದು
ದರಹಾಸದಿಂದ ಕಾಣಿಸಿಕೊಂಡ ಜಾಣೆವೆಂ
ಡಿರ ತಲೆವಣಿಯ ಚಿತ್ತೈಸು ॥ ೪೯ ॥

ಪೆಣ್ಣ ಕಳುಹು ಶೃಂಗಾರವೃಕ್ಷದ ತನಿ
ವಣ್ಣ ಕಳುಹು ಮುಂದೆ ಮನೆಗೆ
ಹಣ್ಣಿನೆಡೆಗೆ ಹಕ್ಕಿ ಹೋಹಂತೆ ಹೋಗಿ ನೀ
ನುಣ್ಣಾಕೆಯರಮನೆಯಲ್ಲಿ ॥ ೫೦ ॥

ನಲವಿಂದ ಕುಸುಮಾಜಿ ಕೈಮುಗಿದಳು ರಾಯ
ನೊಳುನೋಟದಿಂದ ಬೀಳ್ಕೊಟ್ಟ
ಗೆಲು ಹೆಂಗಳರಸಿಯೆಂದೊಡನೆ ಕಟ್ಟಗೆವೆಂಗ
ಳುಲಿವುತಿದ್ದರು ಹೋದಳಾಕೆ ॥ ೫೧ ॥

ಬಲ್ಲಳು ಪತಿಯ ಪಂಡಿತೆಯ ಹೃದಯತಂತ್ರ
ವೆಲ್ಲವ ಕುಸುಮಾಜಿ ಮಾಜಿ
ಸೊಲ್ಲಿಸದೆದೆಯೊಳು ನಲಿವುತ ಹೋದಳ
ದಲ್ಲವೆ ಕುಲಸತಿಯಂಗ ॥ ೫೨ ॥

ಮಡದಿಯರೆಲ್ಲರ ಕಳುಹು ಚಿತ್ತೈಸೆಂದ
ಳೊಡನೆ ಪಂಡಿತೆ ರಾಯನದಕೆ
ನುಡಿಯದೆ ನೋಡುತಿದ್ದನು ಹೋಗುತಿದ್ದರು
ಕಡುಸೊಬಗೆಯರು ಕೈಮುಗಿದು ॥ ೫೩ ॥

ಇವಳ ನೋಡವಳ ನೋಡಿಂದಿನ ಕಾವ್ಯದ
ಕವಿಗಳಿಬ್ಬರನು ನೋಡೆನಲು
ಅವನೀಶ ನಸುನಕ್ಕನಮರಾಜಿ ಸುಮನಾಜಿ
ಯವರು ನಗುತ ತೆರಳಿದರು ॥ ೫೪ ॥

ನಗೆಯಲ್ಲವೆ ನಿಮಗಿಂದು ರಾಯನ ತೋಳ
ದುಗುಲದ ಮನ್ನಣೆಗೊಂಡು
ನಗುತ ಹೋಗುವಿರೆಂದು ನಗಿಸಿದರೊಡನೆ ಕೈ
ಮುಗಿದು ಕಟ್ಟಿಗೆವೆಂಗಳವರ ॥ ೫೫ ॥

ಪಂಡಿತೆ ಕಳುಹಿಸಿಕೊಂಡಳಾಕೆಯ ಬಳಿ
ಗೊಂಡು ಗಾಯಕಿಯರೆಯ್ದಿದರು
ದಂಡಧಾರಿಣಿಯರು ತಾವೊಂದು ಮರೆಯೊಳ
ಗಂಡುಗೊಂಡರು ವೇಳೆಯರಿದು ॥ ೫೬ ॥

ಊಳಿಗವೆಂಗಳು ಕಡೆಸಾರ್ದರರಸನಾ
ಜೋಲಿಯೆಲ್ಲವು ನಿಂದಮೇಲೆ
ಕಾಲೋಚಿತದಾತ್ಮಯೋಗವನೆಸಗಿದ
ನಾ ಲೇಸನೇನ ಬಣ್ಣಿಪೆನು ॥ ೫೭ ॥

ಪಲ್ಯಂಕಾಸನದೊಳಗೆ ಗದ್ದುಗೆಯೊಳು
ಶಲ್ಯವರ್ಜಿತನು ಕುಳ್ಳಿರ್ದು
ಕಲ್ಯಾಣಮೂರ್ತಿ ಕಣ್ಮುಚ್ಚಿ ತನ್ನೊಳಗೆ ಧಾ
ವಲ್ಯಯೋಗವ ಕಂಡನೊಡನೆ ॥ ೫೮ ॥

ಎತ್ತಹೋದುದೊ ಹೆಂಗಳೊಡನುಬ್ಬಿನಿಂದಿಷ್ಟು
ಹೊತ್ತು ತಾನಾಡಿದ ಲೀಲೆ
ಹತ್ತುಸಾವಿರಕಾಲ ತಪಸು ಮಾಡಿದ ಮುನಿ
ವೋತ್ತಮನಂತಿರ್ದನಾಗ ॥ ೫೯ ॥

ದೊರೆಯಿದ್ದುಹೋಗೆನೆ ಹೋಗಿ ಬಾರೆಂದರೆ
ಬರುತಿಹ ಸೇವಕರಂತೆ
ಕರಣನಾಲ್ಕಿಂದ್ರಿಯ ವೈದವನುಸಿರಿದಂ
ತಿರುತಿಹವೇನ ಬಣ್ಣಿಪೆನು ॥ ೬೦ ॥

ಬೇಕಾದರಾಡಿಸಿ ಗಾಳಿಪಟವನರ್ತಿ
ಸಾಕಾಗೆ ಸುರುಳುವನಂತೆ
ನೂಕಿ ಚಿತ್ತವ ಹೊರಗಾಡಿಸುವನು ತನ್ನೊ
ಳೇಕವಾಗಿರಿಸುವನೊಮ್ಮೆ ॥ ೬೧ ॥

ಉಂಡುಪವಾಸಿ ಬಳಸಿ ಬ್ರಹ್ಮಚಾರಿ ಭೂ
ಮಂಡಲವಿದ್ದುನಿಸ್ಸಂಗ
ಮುಂಡೆಬೆಳೆದು ಮನಬೋಳಾದ ತಪಸಿಯ
ಕೊಂಡಾಡಲಳವೆ ಚಕ್ರಿಯನು ॥ ೬೨ ॥

ಜಿನ ಜಿನ ಕಣ್ಮುಚ್ಚಿ ತನ್ನ ಮೈಯೊಳಗೆ ತ
ನ್ನನೆ ತಾನೆ ಕಂಡನಾಕ್ಷಣವೆ
ಜಿನ ಜಿನ ಕಂಡನು ಸಿದ್ಧನನಲ್ಲಿಯೆ
ಅನುಭವಿಸಿದನಾತ್ಮಸುಖವ ॥ ೬೩ ॥

ಕತ್ತಲೆಯಹುದೊಮ್ಮೆ ಬೆಳಗಹುದದು ಮಾಸಿ
ಮತ್ತೊಂದು ತಂಪಿನ ಸೊಡರ
ಹೊತ್ತಿಸಿದಂತಿಹುದಾ ಭರತೇಶನ
ಚಿತ್ತದೊಳಾತ್ಮಯೋಗವದು ॥ ೬೪ ॥

ಒಳಗೆ ತನ್ನಾತ್ಮನ ತಾ ನೋಡೆ ಹೊಸತೊಂದು
ಬೆಳಗು ತೋರ್ಪುದು ತೋರಲೊಡನೆ
ಮಳಲಂತೆ ಜರಿವುತಿಹುದು ಕರ್ಮ ನಿಜಸುಖ
ಹೊಳೆಯಂತೆ ಹೊಳೆದೇಳುತಿಹುದು ॥ ೬೫ ॥

ಸರಸ ಸಂಧಿ

ಧ್ಯಾನತತ್ಪರನಾಗಿ ಹೊರಗ ಮುರೆದು ತನ್ನ
ತಾನೆ ತನ್ನೊಳು ಲೀನನಾಗಿ
ಆ ನರಪತಿಯಿರೆ ಘಳಿಯಾರದೊಳು ಶಂಖ
ಧ್ವಾನ ಘೂರ್ಣಿಸಿತು ಹೊತ್ತರಿದು ॥ ೧ ॥

ನರನಾಥ ಕೇಳ್ದನಾ ಶಂಖನಿನಾದವ
ಗುರು ಹಂಸನಾಥಗಾಕ್ಷಣವೆ
ಪರಮಭಾವದೊಳಷ್ಟವಿಧದರ್ಚನೆಯ ಮಾಡಿ
ಸ್ಮರಿಸಿ ಬೀಳ್ಕೊಟ್ಟು ಕಣ್ದೆರೆದ ॥ ೨ ॥

ಮುನಿಭುಕ್ತಿವೇಳೆಯಾದುದು ಸ್ವಾಮಿಯೆಂದು ಮೆ
ಲ್ಲನೆ ಸೇವಕಿಯರು ಬಿನ್ನವಿಸೆ
ಜಿನಸಿದ್ಧ ಶರಣು ನಿರಂಜನ ಸಿದ್ಧಯೆಂ
ದೆನುತೆದ್ದನಾ ಸಾರ್ವಭೌಮ ॥ ೩ ॥

ಉಪ್ಪರಿಗೆಯನಿಳಿದೆಂದಿನಂದದ ಕ್ರಮ
ತಪ್ಪದೆ ನಡೆದು ಯೋಗಿಗಳು
ಬಪ್ಪ ಬಟ್ಟೆಯ ಕಾದು ಕಂಡನಾಗಳೆ ಮರ್ಚು
ವೊಪ್ಪುವಧ್ಯಾತ್ಮಯೋಗಿಗಳ ॥ ೪ ॥

ಮುನಿಗಳ ನಿಲಿಸಿ ತನ್ನರಮನೆಗೆಯ್ದಿಸಿ
ತನಗೆ ಮಾಡಿದ ಪರಿಕರದ
ಅನುಪಮಾನ್ನವನಿತ್ತು ತಣಿಪಿ ಬೀಳ್ಕೊಟ್ಟರ
ಮನೆಯೊಳಿದ್ದನು ರಾಯನಿರಲು ॥ ೫ ॥

ಬಂದಳು ಕುಸುಮಾಜಿಯೊಡವುಟ್ಟಿದಳು ಮಕ
ರಂದಾಜಿ ಯೆಂಬೊರ್ವ ನೀರೆ
ಒಂದರೆವರುಷಕೆ ಪ್ರಾಯಕೆ ಯಿಹಳಿವ
ಳೆಂದೆಂಬ ಪಾಟಯ ಕನ್ನೆ ॥ ೬ ॥

ಚಲುವೆಯಹುದು ಜಾಣೆಯಹುದು ಶೃಂಗಾರಮಂ
ಗಲೆಯಾಗಿ ಸಖಿಯರುಗೂಡಿ
ಲಲಿತಾಂಗಿ ಬಂದು ಕಂಡಳು ತೂಗುಮಂಚದೊ
ಳೊಲೆದಾಡುತಿರ್ದ ಭಾವನನು ॥ ೭ ॥

ಕೆಳದಿಯ ಕೈಯ ಹೊಂದಟ್ಟಿಯ ತಾನೊಯ್ದು
ಮಲಯಜವೀಟಕಾಪ್ತತೆಯ
ನಳಿತೋಳ ನೀಡಿ ಭಾವಗೆ ಕೊಟ್ಟಳರಸನಾ
ಗಳಿ ಕೈಕೊಂಡನರ್ತಿಯೊಳು ॥ ೮ ॥

ಅನುಕೂಲವಾದುದಾರೋಗಣೆಗಿನ್ನೆ ಮ್ಮ
ಮನೆಗೇಳು ಭಾವಾಜಿಯೆಂದು
ತನುಮಧ್ಯೆ ನುಡಿದಳದಕೆ ರಾಯ ನಗುತ ನಾ
ದುನಿಯೊಳು ನುಡಿದ ನಿಂತೆಂದು ॥ ೯ ॥

ಇಂದಾನು ನಿನ್ನ ಮನೆಗೆ ಬಹುದುಚಿತವೆ
ಒಂದರೆ ವರುಷದ ಮೇಲೆ
ಬಂದು ನೀನೆನ್ನ ಕರೆದರಾನುಬಹೆನು ಹೋ
ಗೆಂದನು ನೃಪತಿ ನಾದುನಿಯ ॥ ೧೦ ॥

ಅಕ್ಕಾಜಿಯರ ಮನೆಗೇಳೆಂದೆ ನೀನಿಂತು
ಠಕ್ಕಿನ ಮಾತನಾಡಿದೆಯ
ಠಕ್ಕುಕಾತಿಯೆ ನಿನ್ನ ಮನೆಗೆಂದೆಯೈಸೆ ನಿ
ನ್ನಕ್ಕನ ಹೆಸರ ಹೇಳಿದೆಯ ॥ ೧೧ ॥

ಅಕ್ಕನ ಹೆಸರ ಹೇಳುವರಾಕೆ ಪಡೆದರೆ
ಮಕ್ಕಳು ಪೇಳ್ವವು ಮುಂದೆ
ದಿಕ್ಕಿನೊಳಿನಗೇನು ಸಂಬಂಧ ಸಾಕೇಳು
ಸಿಕ್ಕಿನ ಮಾತನಾಡದಿರು ॥ ೧೨ ॥

ಸಾಕೇಳು ಸಲಹೇಳು ನೀನೆಂದು ತಾನೆನ್ನ
ನಾಕರುಷಣ ಮಾಡುತಹಳೆ
ಈಕೆ ತಾನೇನು ಕಾತರೆಯೊ ಯೆಂದನು ರಾಯ
ನಾ ಕಾಂತೆ ತಲೆವಾಗಿ ನಗಲು ॥ ೧೩ ॥

ಕಾತರ ಗೀತರವನು ನೀವು ನಿಮ್ಮಂಬು
ಜಾತಾಕ್ಷಿಯರು ಬಲ್ಲಿರೈಸೆ
ಆ ತಳ್ಳಿಬಳ್ಳಿಯ ನಾವೇನ ಬಲ್ಲೆವು
ಮಾತು ಸಾಕಿನ್ನೇಳು ಭಾವ ॥ ೧೪ ॥

ಎನಲತಿ ಸರಸಗಳಾಗದೆಂಬುದ ನೆನೆ
ದನಿತರೊಳಿದ್ದನಾ ರಾಯ
ಮಿನುಗುವ ಹಾವುಗೆಗಳ ಮೆಟ್ಟಿ ನಡೆದನಂ
ಗನೆಯ ಮನೆಗೆ ನಲ್ಮೆಯಿಂದ ॥ ೧೫ ॥

ಕುಸುಮವಿದ್ದೆಡೆಗೆ ಮಧುವ್ರತ ಹೋಹಂತೆ
ಕುಸುಮಾಜಿಯರಮನೆಗಾಗಿ
ಕುಸುಮಾಯುಧಜಿತಲಾವಣ್ಯ ನಡೆದನು
ಲ್ಲಸದಿಂದ ನಾದುನಿಯೊಡನೆ ॥ ೧೬ ॥

ದೇವನೆಯ್ತರುತಿಪ್ಪನೆಂದು ಹರಿದು ಹೋಗಿ
ಸೇವಕಿಯರು ಹೇಳಲೊಡನೆ
ಭಾವೆ ಬಂದಳು ಕುಸುಮಾಜಿ ತಾನಿದಿರಾಗಿ
ಭಾವಕಿಯರ ಬಳಸಿನೊಳು ॥ ೧೭ ॥

ಅಳವಟ್ಟ ನೂತನ ಶೃಂಗಾರ ಕರತಲ
ದೊಳು ರತ್ನ ದಾರತಿ ಸಹಿತ
ಲಲನೆ ಬಂದರಸಗಾರತಿಯೆತ್ತಿದಳು ತಳ
ತಳಿಸುವ ಮುಖಕಾಂತಿಯೆಸೆಯೆ ॥ ೧೮ ॥

ದುಗುಲ ನಿವಾಳಿಯ ನಿಟ್ಟಂಘ್ರಿಗೆರಗಲೆಂ
ದೊಗುಮಿಗೆ ತಲೆವಾಗುವಾಗ
ನಗುತ ಹಾ ಹಾ ಯೆಂದು ನಡುವ ಮಂಡೆಯನೆತ್ತಿ
ತೆಗೆದು ಕೈವಿಡಿದನಾ ರಾಯ ॥ ೧೯ ॥

ಮುಟ್ಟಿ ಮುಂದೇಳೆಂಟು ಮಾರೈದೆ ತನ್ನ ಕೈ
ಮುಟ್ಟಿ ತೊಳೆದಳು ಪಾದಗಳ
ಉಟ್ಟ ದುಕೂಲದ ಸೆರಗಿಂದ ಪತಿಗಂಗ
ದಟ್ಟವಿಕ್ಕಿದಳು ಭಕ್ತಿಯೊಳು ॥ ೨೦ ॥

ಆವಾಸದೊಳಹೊಕ್ಕನಾ ರಾಯನಕ್ಕಕ್ಕ
ಭಾವ ಬಂದನು ನಮ್ಮ ಮನೆಗೆ
ದೇವಿ ಗದ್ದುಗೆಯಿಕ್ಕು ಮನ್ನಿಸೆಂದೊರೆದುದಂ
ದಾ ವೇಳೆಯೊಳು ರಾಜಕೀರಾ ॥ ೨೧ ॥

ಇವನೆ ಅಮೃತವಾಚಕನು ಕುಸುಮಾಜಿಯೆಂ
ದವನೀಶ ನುಡಿವುತಾಕೆಯೊಳು
ಭವನದೊಳಿಟ್ಟ ಗದ್ದುಗೆಯಲ್ಲಿ ಕುಳಿತನು
ರವಿ ಪೂರ್ವಗಿರಿಯೇರುವಂತೆ ॥ ೨೨ ॥

ಬಂದೆಯ ಭಾವ ಬಂದೆಯ ಸುಪ್ರಭಾವ ಅ
ಯ್ತಂದೆಯ ಸುಗುಣಸ್ವಭಾವ
ಬಂದುದು ಲೇಸು ಮಹಾನುಭಾವಾಯೆಂದು
ದಂದು ಮುದ್ದಿನ ರಾಜಕೀರ ॥ ೨೩ ॥

ಕ್ಷೇಮವೆ ಭಾವಾಜಿ ಮತ್ತು ನಿಮಗೆ ಪರಿ
ಣಾಮವೆ ಹೇಳು ಭಾವಾಜಿ
ಈ ಮನೆಯತ್ತಲೀಕಡಿಗಡಿಗೆಯ್ತರೆ
ಭೂಮೀಶ ಎಂದುದಾ ಪಕ್ಕಿ ॥ ೨೪ ॥

ಧರೆಯನಾಳಿದನೆಂಬ ಗರ್ವವೊ ನಮ್ಮಕ್ಕ
ನರಮನೆಗಡಿಗಡಿಗೇಕೆ
ಬರಲೊಲ್ಲೆ ಬುದಿನ್ನು ಪೋಪೆಯ ನಿನ್ನ ಕಾ
ಲ್ಗುರುಳನಿಕ್ಕುವೆನೆಂದುದಾಗ ॥ ೨೫ ॥

ನಕ್ಕನದಕೆ ರಾಯ ನಗೆಯಲ್ತಿ ನಿನಗೆ ನ
ಮ್ಮಕ್ಕನಸುವ ಸೂರೆಗೊಂಡು
ಪಕ್ಕೆಗೆಯ್ದೆ ದೂರದೊಳಗಿದ್ದೆ ನೀನಿಂದು
ಸಿಕ್ಕಿದ್ಯೆ ಲೇಸಾಮದೆಮಗೆ ॥ ೨೬ ॥

ಸುಳಿಗುರುಳೆಂಬುರುಲುಂಟು ನಮ್ಮಕ್ಕನ
ನಳತೋಳ ಪಾಶಗಳುಂಟು
ಹೊಳೆದಿನ್ನು ಹೋಹ ಭಾವನ ಕಾಣ್ಬೆನೆಂದರ
ಗಿಳಿ ನುಡಿದುದು ಸರಸದೊಳು ॥ ೨೭ ॥

ಸೋಂಕಿ ನಮ್ಮಕ್ಕನೊತ್ತಿನೊಳಿದ್ದರಿರು ಮೀರಿ
ಭೋಂಕನೆ ಪೋಪೆನೆಂಬಾಗ
ಪಂಕಜಾಕ್ಷಿಯ ಕಡೆಗಣ್ಣ ಕಾಂತಿಯ ಬೆಳ್ಳಿ
ಸಂಕಲೆಗಳನಿಕ್ಕಿಸುವೆನು ॥ ೨೮ ॥

ಪಂಜರ ಳಗಿದ ನಿನಗಿಷ್ಟೆಯೆನದಿರು
ಮಾಂಜಿ ನೀನಗಲ್ವಾಗ ನಿನ್ನ
ಹೊಂಜೆಳೆವೈಯಳ ದಂತಕಾಂತಿಯ ಹೊನ್ನ
ಪಂಜರದೊಳು ಕೂಡಿಸುವೆನು ॥ ೨೯ ॥

ಇಷ್ಟೇಕೆ ಕೋಪ ನಿಮ್ಮಕ್ಕಗಾನೆಸಗಿದ
ಕಷ್ಟವೇನಮೃತ ವಾಚಾಂಕ
ಶಿಷ್ಟರೆಂದೆಯ್ತುಂದೆವಕಟ ನೀವಿಬ್ಬರು
ದುಷ್ಟರಲ್ಲವೆಯೆಂದನೊಡನೆ ॥ ೩೦ ॥

ನೋವಾಯ್ತೆ ಭಾವಾಜಿ ನಮ್ಮಕ್ಕನಧರಸಂ
ಜೀವನಾಮೃತವ ನೀನುಂಡು
ಜೀವಸಿದ್ಧಿಯ ಪಡೆದಿರು ನಮ್ಮ ಮನೆಯೊಳಿ
ನ್ನೀ ವಾಕ್ಯ ಲೇಸಲೆ ನಿನಗೆ ॥ ೩೧ ॥

ನನಗೆ ನೇರಿಲಹಣ್ಣು ವನದೊಳುಂಟಕ್ಕನಾ
ನನದೊಳು ನೇರಿಲಹಣ್ಣು
ನಿನಗುಂಟು ಸುಖಿಸಿಕೊಂಡಿರು ನಾನು ನೀನಿಂತು
ಬಿನದದೊಳಿರುತಿಹೆವಿಲ್ಲಿ ॥ ೩೨ ॥

ನಡು ತಾನೆ ಸಿಂಗಳದೇಶ ಕುಂತಳದೇಶ
ಮುಡಿ ಕರ್ಣ ಕರ್ಣಾಟದೇಶ
ಕಡುಗಂಪು ಕಾಶ್ಮೀರದೇಶವಕ್ಕನ ಮೈಯ
ಪೊಡವಿಯ ನಾಳಿತ್ತ ಪೋಪೆ ॥ ೩೩ ॥

ಅಸಿಯಳ ಯೌವನವನವುಂಟು ಲಾವಣ್ಯ
ರಸದ ತಣ್ಪೊಳಿಯುಂಟು ಭಾವ
ಒಸೆದು ವನಕ್ರೀಡೆ ವಾರಿಕ್ರೀಡೆಯನಾಡಿ
ಬಿಸಿಲನಾರಿಸಿಕೊ ಕಾತರದ ॥ ೩೪ ॥

ಈ ನುಡಿಗಳು ನಿನಗುಚಿತಗಳಹುದಿನ್ನು
ಮಾನಿನಿಯಾಸ್ಯದೊಳೊಂದು
ಜೇನೆಯ್ಯ ಕೊಡನುಂಟು ನಿನಗದೆಂತಹುದದು
ಜೈನನಲ್ಲವೆ ಭಾವ ನೀನು ॥ ೩೫ ॥

ಎನೆ ನಕ್ಕನರಸನೀ ನುಡಿಗಳು ಗಿಳಿಯ ಯೋ
ಚನೆಯಲ್ಲ ಸತಿಯೊರ್ವಳಿದಕೆ
ಬಿನದಕೆ ಕಲಿಸಿದಳಾವಳೆಂದಿಣಿಸಿ ನಾ
ದುನಿ ಕಲಿಸಿದಳೆಂದೆ ತಿಳಿದ ॥ ೩೬ ॥

ಚಂದದಿ ನುಡಿವುತಿದ್ದುದು ಗಿಳಿಯನು ಮಕ
ರಂದಾಜಿ ಕೊಂಡು ಬಾರೆಂದ
ತಂದು ಗಿಳಿಯ ಕೊಡುವಾಗ ನಾದುನಿಯನಾ
ನಂದದೊಳಮರ್ದಪ್ಪಿಕೊಂಡ ॥ ೩೭ ॥

ಅತ್ತಿತ್ತ ಮೈಯನೊಲೆದಳಾಕೆ ಮಿಸುಕದಂ
ತೆತ್ತಿ ತಾನಮರ್ದಪ್ಪಿಕೊಂಡ
ಮುತ್ತಕೊಟ್ಟನು ಕೊರಳಿಗೆ ಕಂಠಮಾಲೆಯ
ಸುತ್ತಿ ಮೆಚ್ಚಿದೆನೆಂದು ಬಿಟ್ಟ ॥ ೩೮ ॥

ದೇವರವಳಿಗೇನ ಕಂಡು ಮೆಚ್ಚಿದಿರೆಂದು
ಭಾವಕಿ ಕುಸುಮಾಜಿ ನಗುತ
ಭಾವಿಸಿ ಕೇಳಲು ನಿಮ್ಮ ತಂತ್ರವನಿಷ್ಟು
ನಾವು ಬಲ್ಲೆವು ಕಾಣೆಯೆಂದ ॥ ೩೯ ॥

ಆದುದೆ ತಂಗಿ ನಾನಾಗಳೆ ಬೇಡವೆಂ
ದೋದಿದೆ ನೀನೊಪ್ಪದಾದೆ
ಹೋದ ಗಾಳಿಯ ಹಜ್ಜೆಗಾಣ್ಬವರೊಡನೆಂತು
ವಾದಮಾಡುವೆಯೆಂದಳಾಗ ॥ ೪೦ ॥

ನಾನಾಗ ಮಾಡದಿಂದಿಲ್ಲಿಗೈತರಲಾಗಿ
ಯಾ ನಮ್ಮವಾರ್ತೆಯ ಕೇಳ್ದು
ತಾನು ಗಿಳಿಗೆ ಹೊಸ ನುಡಿವೇಳುತಿದ್ದಳಿ
ದೇನ ಹೇಳುವೆ ತಂಗಿಯೆಂದೆ ॥ ೪೧ ॥

ಅಕ್ಕ ಭಾವಾಜಿಯಿಂದೆಮ್ಮ ಮನೆಗೆ ಬಂದು
ಹೊಕ್ಕಾಗ ಗಿಳಿಯಿಂದ ನಾನು
ಮಿಕ್ಕು ಸರಸವಾಡಿಸುವೆನೀಗ ಜಾಣ್ನುಡಿ
ಲೆಕ್ಕದೋರುವೆನೆಂದಳದಕೆ ॥ ೪೨ ॥

ಜಯಿಸಲರಿದು ತಂಗಿ ನಿನ್ನ ಭಾವನು ಬಟ್ಟ
ಬಯಲೊಳು ರೂಪ ಬರೆವನು
ಬಯಲಿಗೆ ಪ್ರಯಾಸಗೊಳಬೇಡವೆಂದೆನೆ
ನ್ನಯ ಮಾತ ಮೀರಿದಳಾಗ ॥ ೪೩ ॥

ಬೇಡವೆಂದೆನು ಕೇಳಳರಗಿಳಿಯನು ನಾನು
ಬೇಡಿದೆ ಕೊಂಡೆದ್ದಳದನು
ಕೂಡೆ ಸಖಿಯರ ಬಿಟ್ಟುರೆ ಹಿಡಿಯೆಂದೆನು
ವೋಡಿದಳೆಮ್ಮ ಹಿತ್ತಲಿಗೆ ॥ ೪೪ ॥

ಇವಳೊಡನಾಟದ ವೇಳೆಯಲ್ಲೆಂದೆನ್ನ
ಭವನ ಕೃತ್ಯದೊಳಿದ್ದೆ ನಾನು
ಅವಳರಗಿಳಿಯನೋದಿಸಿಕೊಂಡು ಬಂದಳು
ತ್ಸವದಿಂದ ಮತ್ತೆ ಮಂದಿರಕೆ ॥ ೪೫ ॥

ಮುನ್ನ ನಾನೀ ನುಡಿಗಳ ಕೇಳ್ದೆನಾದರು
ನಿನ್ನಮೇಲಾಣೆ ಕೇಳರಸ
ಕನ್ನೆಯೆ ಯಿವಳು ಕೌಟಲಕಾತಿಯೆಂದಳು
ಚೆನ್ನೆ ರಾಯನೊಳು ತಂಗಿಯನು ॥ ೪೬ ॥

ಏನ ಮಾಡಿದೆನಕ್ಕ ನಿನಗು ನಿನ್ನ ರಸಗು
ನಾನಿಲ್ಲಿ ಕುಟಲತಂತ್ರವನು
ಮಾನಿನಿ ಗಿಳಿಯ ತಾರೆಂದು ಚೇಷ್ಟೆಯಮಾಡು
ವೀ ನಿನ್ನ ಪತಿಯೀಗ ಕುಟಿಲ ॥ ೪೭ ॥

ಮುಚ್ಚು ಮುಚ್ಚತಿ ಧೂರ್ತೆ ನಿನ್ನ ಬಾಯನು ಸ್ವಾಮಿ
ಮೆಚ್ಚನಿತ್ತರೆ ಚೇಷ್ಟೆಯೆಂಬ?
ಮೆಚ್ಚದು ನಿನಗಿರಲಾನೀತನರಸಿಯೆ
ಬೆಚ್ಚಂತೆ ಬಿಗಿದಪ್ಪುವಾಗ ॥ ೪೮ ॥

ಅಕ್ಕನ ನೋಡುವೆನೆಂದು ನಿನ್ನಯ ಬೀಡ
ಹೊಕ್ಕರೆ ಫಲತೋರಿತೆನಗೆ
ಚಿಕ್ಕನೆವನ್ಮೂರಿಗೆಯ್ದುವೆನಿನ್ನು ನಿನ್ನೂರ
ದಿಕ್ಕ ನೋಡಿದರಾನು ಹೆಣ್ಣೆ ॥ ೪೯ ॥

ಮಾನಿಯ ಮುಂದಕೆ ತಂದಂತೆ ನೋಡೆಮ್ಮ
ಮಾನಭಂಗವ ಮಾಳ್ಪನೀತ
ಆನೆಯಂತೊಯ್ದ ಮರ್ದಪ್ಪುತಿದ್ದನು ದೊಡ್ಡ
ಭೂನಾಥನೆಂಬ ಹೆಮ್ಮೆಯೊಳು ॥ ೫೦ ॥

ಅಳುವಂತೆ ಮೊಗವ ಕಿರಿದು ಮಾಡಿಕೊಂಡಾಗ
ತಲೆನಾಗಿ ಕಣ್ಣನೊಸೆವಳು
ಒಳಗೆ ಸಂತಸವುಂಟು ಕಣ್ಣನೀರಿಲ್ಲ ಬಿ
ಕ್ಕಳಿಸುತ ನುಡಿವಳು ಸಟೆಗೆ ॥ ೫೧ ॥

ನೋಡುವಳೊಡನೋರೆಗಣ್ಣಿಂದ ಭಾವನ
ಕೂಡಡ್ಡ ಮೋರೆದೆಗೆವಳು
ನೋಡುವಾಗಿಷ್ಟು ಚಿಂತೆಯ ತೋರಿ ಮೊಗವಡ್ಡ
ಮಾಡಿಕೊಂಡುರೆ ನಗುತಿಹಳು ॥ ೫೨ ॥

ಶಿರದೂಗುವನು ಮುಗುಳ್ನಗುವನು ಕುಸುಮಾಜಿ
ಗರಸ ಕಣ್ಸನ್ನೆ ದೋರುವನು
ತರಳೆಯ ಠಕ್ಕಿನಳ್ಕಿಯೆಯೆಂದು ನೆನೆವ ತ
ನ್ನರಸಿಯು ಬೆರಗಾಗುತಿಹಳು ॥ ೫೩ ॥

ವಿಕಿಷ್ಟು ವ್ಯಾಕುಲ ಮಕರಂದೆ ನಿನಗೆಂದೆ
ಳಾಕೆ ಹೋಗಕ್ಕ ನಿನ್ನಿಂದ
ಸಾಕಾದೆ ನಾನೆಂದಳಕ್ಕಟಕ್ಕಟ ತಂಗಿ
ಗೀ ಕೊರತೆಯೆಯೆಂದಳಾಕೆ ॥ ೫೪ ॥

ಜಾತಿ ಕ್ಷತ್ರಿಯಪುತ್ರಿಯಿಂತಾಡುವಳೆ ವೈಶ್ಯ
ಜಾತಿಯೊ ನೀನು ಶೂದ್ರಿ[1]ಕೆ[1]ಯೊ
ಓತನ್ಯರಪ್ಪಲು ಸಾವಲ್ತಿ ಕೊರತೆಯ
ಮಾತಾವುದೆಂದಳಾ ತಂಗಿ ॥ ೫೫ ॥

ಕೋವಿದನಿದಿರೊಳು ಕೃತಕ ಸಲ್ಲದು ನಿನ್ನ
ಭಾವಾಜಿ ಭಾವಜ್ಞನರಿಯೆ
ತೀವಿದ ನಿನ್ನ ಕಂಗಳನೀರ ಕಂಡೆದೆ
ನೋವುತಿದ್ದನು ಸಾಕು ತಂಗಿ ॥ ೫೬ ॥

ಎನಲೊಡನರಿದಾಗಳೆ ಕಣ್ಣತಿಕ್ಕುತೊ
ಯ್ಯನೆಯೆವೆ ವೊಂದೆರಳ್ಮುರಿಯೆ
ಅನಿತರೊಳಗೆ ಕಣ್ಣ ನೀರೊಕ್ಕುವುದ ಕಂಡು
ಜನನಾಥ ಭಾಪೆಂದ ನಗುತ ॥ ೫೭ ॥

ನಮ್ಮರಸನ ಮುಂದೆ ದುಃಖದ ಕಣ್ಣೀರು
ಹೆಮ್ಮಕ್ಕಳಿಗೆ ಬಾರವಲಗೆ
ಸುಮ್ಮಾನದಿಂದ ಕಣ್ಬನಿಯುಂಟು ನಿನಗೀಗ
ಳುಮ್ಮಿದಶ್ರುಗಳು ಲೇಸಲ್ತೆ ॥ ೫೮ ॥

ಗಂಡನ ನೀನು ಬಣ್ಣಿಪೆ ನನಗಾತನ
ಕಂಡರೆ ಸೇರುವುದಿಲ್ಲ
ಕಂಡುದಿಲ್ಲವೆ ನಿನ್ನ ಗಂಡನಾಟವ ನಮ್ಮ
ಭಂಡುಮಾಡುವ ಬವಣೆಯನು ॥ ೫೯ ॥

---

1 ತೆ (ಕ) (ಚ) ತಿ (ಏ) (ಳ)

ಸಾಕು ನಿನ್ನಯ ಚೇಷ್ಟೆ ಮರಸಿದ ಗಿಳಿಯೋದೆ
ಲೋಕವರಿಕೆಗೆಯ್ದನರಿಯ
ಈ ಕೊಂಕು ನೃಪನೊಳು ಸಲುವುದೆ ತಂಗಿಯೆಂ
ದಾಕೆ ನಾಚ್ಚಿಸಿ ನಗುತಿಹಳು ॥ ೬೦ ॥

ಮರಸಿದ ಗಿಳಿಯೋದ ಕಂಡಂತೆ ಪೇಳ್ದನೆಂ
ದರಿಪಿದ ಸುಡಿ ತಾಗಿತವಳ
ಬರಿಯಳ್ಕೆಯಾಟವ ತೊರೆದಳು ತಲೆವಾಗಿ
ಕೆರುನಗೆ ನಗುತಿದ್ದಳೊಡನೆ ॥ ೬೧ ॥

ನಿಗಢಣೆ ಬೇಡೆಲೆ ಮಕರಂದೆ ನೃಪನೊಳು
ಪಗಢಣೆ ಸಲ್ಲದು ತಂಗಿ
ನಿಗಢಣೆ ಪಗಢಣೆ ನಟನೆಗಳನ್ಯರೊ
ಳಗೆ ಸಲ್ಪುವಿಲ್ಲಿ ಮೆರೆಯವು ॥ ೬೨ ॥

ವಿನೋಲಿಸಿದನಕ್ಕ ನಿನ್ನ ನೀ ರಾಜಾಭಿ
ಧಾನವೇಷದ ಮಾಯಕಾರ
ತಾನಲ್ಲದನ್ಯರು ನಿನ್ನೆದೆಯೊಳಗಿಲ್ಲ
ಹಾನಿಯಾಪುದು ನಮ್ಮ ಬಲ್ಪು ॥ ೬೩ ॥

ವೀಳೆಯದೊಳಗೆ ಮದ್ದುಂಟೊ ನಿನ್ನ ರಸನಾ
ತೋಳೊಳುಂಟೊ ವಶ್ಯಯಂತ್ರಾ
ಬೇಳುವೆಯುಂಟೊ ತಿಲಕದೊಳಲ್ಲದರಿಂತು
ಬೇಳಾಗಿ ನೀನು ಸಿಕ್ಕುವೆಯ ॥ ೬೪ ॥

ಕೇಳುತಿದ್ದನು ರಾಯ ಕುಸುಮಾಜಿಯೊಡನಾಕೆ
ಹೇಳುವ ಗಮಕದ ನುಡಿಯ
ಸೋಲವಾದುದು ತನ್ನ ಚಿತ್ತವಾ ತರುಣಿಯ
ಮೇಲೆ ತಾನಿಂತೆಣಿಸಿದನು ॥ ೬೫ ॥

ಏಳುವ ಮೊಳೆಯೊಳಿ ಕೊಂದು ಕೂಗುವಳಿವ
ಳೀಳಿಲೆವೋದಮೇಲೆಮ್ಮ
ಬಾಳಲೀವಳೆಯೆಂದು ನೆನೆದನಂದಾ ನರ
ಪಾಲಕ ತನ್ನ ಚಿತ್ತದೊಳು ॥ ೬೬ ॥

ನೊಂದಳಹುದು ದಿಟ ಕುಸುಮಾಜಿ ಕರೆ ಮುಕ
ರಂದಾಜಿಯನು ಮನ್ನಿಸುವೆನು
ಎಂದನದಕೆ ತಂಗಿ ಬಾರೆಂದಳರಸಿ ಹೋ
ಗೆಂದು ಕೋಪಿಸಿದಳಾ ತರುಣಿ ॥ ೬೭ ॥

ಮುನ್ನೊಮ್ಮೆ ನಿನ್ನ ವಲ್ಲಭನೊತ್ತಿಗಾನೆಯ್ದಿ
ಮನ್ನಣೆ ಪಡೆದೆನು ಸಾಕು
ಇನ್ನರಿಯನೆ ಹೋಗು ಹೋಗೆಂದು ಝಂಕಿಸಿ
ಕನ್ನೆನುಡಿದಳರಸಿಯನು ॥ ೬೮ ॥

ಏನು ತಂತ್ರವ ಕಂಡೆಯಯ್ಯಯ್ಯೊ ನೀನೊಬ್ಬ
ಮಾನವಪತಿ ಬಂದೆ ಧರೆಗೆ
ಮಾನಿನಿಯರ ಕಂಡರಪ್ಪಿಕೊಂಬುದೆ ತನ್ನ
ಧ್ಯಾನವೆಂದೊಲೆದು ನುಡಿದಳು ॥ ೬೯ ॥

ಒಬ್ಬರಿಬ್ಬರೆ ನಿನಗೇನು ಕಡಮೆಯಾಯ್ತು
ಸಬ್ಬಲಗ್ಗೆಯೊಳಿದೆ ಹೆಣ್ಣು
ಹೆಬ್ಬುವ ಬಳ್ಳಿಯಂತಿದಿರ ಹೆಂಗಳ ಕಂಡು
ತಬ್ಬಿಕೊಂಬುದೆ ಹೊತ್ತು ತನಗೆ ॥ ೭೦ ॥

ಎಲೆಧೂರ್ತ ನಿನಗೆ ಮನ್ನಣೆಯೀವೆನೆಂದರೆ
ಹಳಿವುದೇಕೆಮ್ಮ ನೀನೆಂದ
ಬಲುಧೂರ್ತ ಹೋಗು ಮನ್ನಣೆ ನಿನಗಿರಲಿಯೆಂ
ದುಳಿದಳದಕೆ ರಾಯ ನಕ್ಕ ॥ ೭೧ ॥

ಅಹುದೆ ಆಹುದೆ ನಾನು ಧೂರ್ತ ನೀನೇ ಧೂರ್ತೆ
ಯಹುದಾದರರ್ಥವೇನಾಯ್ತು
ಬಹುದೊ ನೋಡಿದರದು ಕಡೆಗೆಂದನುರೆ ಗಹ
ಗಹಿಸಿದಳವಳೋರೆ ಮೊಗದಿ ॥ ೭೨ ॥

ಎಲ್ಲಿರಿಸಿದೆ ನಿನ್ನ ಗಂಭೀರ ಗರ್ವ ರಾ
ಜೋಲ್ಲಾಸ ಗಮುಕವ ಭಾವ
ಚಿಲ್ಲಾಟಕರ್ತಿಯಾದುದೆಯೆಂದು ಜರೆದಳ
ದೆಲ್ಲವು ಸವಿ ರಾಯಗಾಗ ॥ ೭೩ ॥

ನೊಂದಳೆಂಬುದಕೆ ಮನ್ನಣೆಯೀವೆನೆಂದೆನಿ
ನ್ನೊಂದಾಗಿ ನುಡಿವೆನಲ್ಲೆಂದ
ನಿಂದು ತಾನದಕೆ ನಗುತ ನೋಡು ಮತ್ತು ತ
ನ್ನಂದವ ಬಿಡನೆಂದಳವಳು ॥ ೭೪ ॥

ಹಿಂದೆ ನೀನಿತ್ತುದು ಭಾರವಾಗಿದೆ ನನ
ಗೆಂದು ಕಾಮಿನಿ ಕಂಠಸರವ
ಮುಂದಿರಿಸುವೆನೆಂದು ತೆಗೆದಳಂತದು ಕೊರ
ಳಿಂದ ಬಾರದು ಚಿತ್ರವಾಗ ॥ ೭೫ ॥

ತಿಳಿದಳು ಸ್ತಂಭನೆಗೆಯ್ದನು ಭಾವನೆಂ
ದೊಳಗುಬ್ಬಿ ನಕ್ಕಳಂತದಕೆ
ಬಳಿಕ ಭಾವನ ಮೊಗ ನೋಡುತ ವಿಸ್ಮಯ
ಗೊಳುತಿದ್ದಳರಿಯದಂದದೊಳು ॥ ೭೬ ॥

ಏಕೆ ಬಾರದು ಭಾವ ನಿನ್ನ ಕೊರಳ ಹಾರ
ಬಾಕುಳಿ ತಾನು ನಿನ್ನಂತೆ
ಸಾಕು ಬಿಡೆಂದರು ಬಿಡದಿದೆ ನೋಡೆನು
ತಾಕೆ ನುಡಿದಳು ಚಲ್ಲದೊಳು ॥ ೭೭ ॥

ಕೊಟ್ಟೊಡವೆಯ ನಾವು ತೆಗೆದುಕೊಂಬುವರಲ್ಲ
ಮುಟ್ಟದಿರೌ ನಿನಗಿರಲಿ
ವೆಟ್ಟಿತಟ್ಟಿಯೊಳೆಮ್ಮ ನೀನೆಂದುದಕೆ ತಕ್ಕ
ತಿಟ್ಟವ ಮಾಳ್ಪೆ ನಾನೆಂದ ॥ ೭೮ ॥

ಹರುಷವೇರಿದಳಾಗ ಕುಸುಮಾಜಿ ತಂಗಿ
ಕೇಳರಸನ ವಾಕ್ಯ ಹುಸಿಯದು
ಕರೆಸುವೆ ನಾಳೆ ನಮ್ಮಪ್ಪಾಜಿಯನು ಹೊಸ
ಸಿರಿ ಮಾಳ್ಪೆ ನಿನಗೆಂದಳೊಸೆದು ॥ ೭೯ ॥

ಧಾರಿಣೀಶನ ಪಾಣಿಯೊಳು ನಿನ್ನ ಪಾಣಿಯ
ಸೇರಿಸಿ ಪಿತನ ಕೈಯಿಂದ
ಧಾರೆಯೆರಸುವೆನು ನಿಮಗಿಬ್ಬರಿಗೆ ಬಂದ
ಹೋರಾಟ ತೊಳೆದುಹೋಹಂತೆ ॥ ೮೦ ॥

ಎಲ್ಲಿ ಹೋದುದೊ ಮೊದಲಾಡಿದ ನುಡಿ ನೋಟ
ಚೆಲ್ಲಾಟ ನಗೆಯ ಸೊಕ್ಕಿವಳ
ನಲ್ಲನ ನೋಡಲಂಜುತ ಲಜ್ಜೆಗೊಳುತೆಳೆ
ಹುಲ್ಲೆಯಂತಿದ್ದ ಳೇನೆಂಬೆ ॥ ೮೧ ॥

ಪಾದಕೆರಗು ನಡೆಯೆಂಬಳೊತ್ತಿಗೆ ಹೋಗ
ಳಾದರಿಲ್ಲೆರಗೆಂಬಳದಕೆ
ಆದರಿಸುತ ನಿಲ್ವಳೊತ್ತಿ ಬಗ್ಗಿಸಿದಂತೆ
ವೇದಿಸಲೊಡನೆರಗಿದಳು ॥ ೮೨ ॥

ಮನದೊಳುಲ್ಲಾಸ ಮೈಯೊಳಗೆ ಪರಾಕಿಂದ
ತನಗೆರಗಿದ ಪೆಣ್ಣ ನೋಡಿ
ಮೊನೆಗಾತಿ ಬಲು ಮೋಡಿಗಾತಿ ಮುರುಕಗಾತಿ
ಗೊನೆಹಕಾತಿ ಮಂಮಾಯೆಂದ ॥ ೮೩ ॥

ಸಾಲದೆ ಇವಳೊಡನಾಟ ಭೋಜನಕಿನ್ನು
ವೇಳೆ ವೆಗ್ಗಳಿಸಿದೆ ದೇವ
ಮೇಲಣ ನೆಲೆಯ ಮಾಳಿಗೆಗೆ ಚಿತ್ತೈಸೆಂದು
ಲೋಲಾಕ್ಷಿ ಬಿನ್ನವಿಸಿದಳು ॥ ೮೪ ॥

ಸರಸಕಾಂತೆಯ ಹಸ್ತವಿಡಿದನು ಜಿನಸಿದ್ಧ
ಶರಣೆನುತೆದ್ದನಾಕ್ಷಣಕೆ
ಭರತೇಶ ಮೇಲ್ನೆಲೆಗಡಿಯಿಟ್ಟನಿಲ್ಲಿಗೆ
ಸರಸದ ಸಂಧಿ ಸುಗಂಧಿ ॥ ೮೫ ॥

ಸನ್ಮಾನ ಸಂಧಿ

ಸತಿಯ ಕೈವಿಡಿದು ಮೇಲಣ ನೆಲೆಗೆಯ್ದಿ ಭೂ
ಪತಿ ಕಂಡ ಮನೆಯ ಸಿಂಗರವ
ರತಿದೇವಿಯೊಡನೆ ಮನ್ಮಥ ನುಡಿವಂತೆ ಲಾ
ಲಿತ ವಾಕ್ಯದಿಂದಿಂತು ನುಡಿದ ॥೧॥

ಭಾಪು ಕುಸುಮೆ ನಿನ್ನ ಪೆಸರಂತೆ ಮನೆ ಕುಸು
ಮೋಪಹಾರದೊಳು ತೋರುತಿದೆ
ಆ ಪೂರ್ಣ ಕುಸುಮಮಾಲೆಗಳ ಮೇಲ್ಕಟ್ಟಿಂದ
ವ್ಯಾಪಿಸಿದಂದ ಲೇಸೆಂದ ॥೨॥

ಎಲ್ಲಿಂದ ತರಿಸಿದೆ ಸಿಂಗರಕೀ ನಡು
ಝಲ್ಲಿಯ ಪಟ್ಟಿಪರ್ವತವ
ನಲ್ಲಳ ಹೇಳಿಮ್ಮ ಮಾವಾಜಿಯರಮನೆ
ಯಲ್ಲಿಂದ ಬಂದುವೊ ಎಂದ ॥೩॥

ಮುತ್ತು ಮಾಣಿಕದ ಲಂಬಣ ಸೊಗಸಾದವಿ
ವೆತ್ತಣಿಂದೆಯ್ತಂದುವೆಮ್ಮ
ಅತ್ತೆಯರೇನು ಕಳುಹಿದರೊ ಅಳಿಯನ
ಚಿತ್ತಕುತ್ಸವವಾಗಲೆಂದು ॥೪॥

ಸಾರಣೆ ಚೆನ್ನಾಯ್ತು ಕುಸುಮೆ ಕುಂಕುಮದೊಂದು
ಸಾರಣೆ ಚೆನ್ನಾಯ್ತು ಕುಸುಮಿ
ತೋರಣ ಚೆನ್ನಾಯ್ತು ಕುಸುಮು ನಿನ್ನಾಣೆಯೆಂ
ದಾ ರಾಯ ನುಡಿದನಾಕೆಯೊಳು ॥೫॥

ಚಳಯಗೊಟ್ಟುದು ಲೇಸು ಕುಸುಮಾಜಿ ಹೊಸರಂಗ
ವಲಿ ಲೇಸು ಕುಸುಮಾಂಗಿ ನಿನ್ನ
ನಿಳಯದ ಸಿಂಗಾರ ಸೊಗಸಾಯ್ತು ಕುಸುಮಕೋ
ಮಲೆ ಕೇಳು ಜಿನನಾಣೆಯೆಂದ ॥ ೬ ॥

ಕುಸುಮ ಕುಸುಮಿ ಕುಸುಮಾಜಿ ಕುಸುಮೆಯೆಂಬ
ಕುಸುಮಾಂಗಿ ಕುಸುಮಾಲೆಯೆಂಬ
ಕುಸುಮಿತಿ ಕುಸುಮಿನಿಯೆಂದು ನಲ್ಲಳ ಕುಶ
ಲಿಸಿ ಕೇಳ್ವ ರಾಯನೊಮ್ಮೊಮ್ಮೆ ॥ ೭ ॥

ತವರೂರ ಗಿವರೂರ ಹಂಗನಾನರಿಯೆನೆ
ಮ್ಮವಸೀಶನರಮನೆಯಲ್ಲಿ
ನವನಿಧಿಯುಂಟೆನಗಿದು ಗಣ್ಯವಲ್ಲವೆಂ
ದವಳಾಡಿದಳು ಗಂಡಸೊಡನೆ ॥ ೮ ॥

ನನ್ನ ಮೇಲಣ ಲೇಸಿನಿಂದೆನ್ನ ತವರೂರ
ಬಿನ್ನಣಿಸಿದ ರಾಯನೆಂದು
ತನ್ನೆದೆಯೊಳು ಬಲ್ಲಳದಕುಬ್ಬದರಸನೊಂ
ದುನ್ನತಿಯನೆ ಪೇಳ್ದಳಾಗ ॥ ೯ ॥

ಹೆಡ್ಡಹೆಂಗಳೊಳಂತು ದೊರೆ ಸೋತು ನುಡಿದರೆ
ಜಿಡ್ಡುಬ್ಬಿ ಮಂಡೆಗೇರುವರು
ದೊಡ್ಡಜಾಣೆಯೊಳಾತ ನುಡಿದರೆ ಸತಿ ಸರಿ
ಯೊಡ್ಡದೆ ಕುಸಿದು ನುಡಿದಳು ॥ ೧೦ ॥

ಅದರಿಂದ ಜಾಣ ಜಾಣೆಯರಾಟವೆಂಬುದು
ಚದುರಂಗದಾಟದಂತಿಹುದು
ಬದಗರ ಲೀಲೆಯಹುದು ಟೊಳ್ಳಿಗವಡೆಯ
ಕೆದರ್ವ ಸೋಗಳೆಯಾಟದಂತೆ ॥ ೧೧ ॥

ಎಲ್ಲರ ಪೊರಮಡಿಸಿದಳು ಬಾಗಿಲ ಬಾಹ್ಯ
ದಲ್ಲಿಯೊರ್ವಳ ಘೆಂಟಿಗಿರಿಸಿ
ಸಲ್ಲಲಿತಾಂಗಿ ಬಾಗಿಲನಿಕ್ಕಿಕೊಂಡಾಣ್ಮ
ನಲ್ಲಿಗೈದಿದಳೋಜೆಯಿಂದ ॥ ೧೨ ॥

ಏಕೆ ಬಾಗಿಲನಿಕ್ಕಿದೌ ಕುಸುಮಾಜಿಯೆಂ
ದೇಕಾಂತದೊಳು ಕೇಳ್ದನರಸ
ಸಾಕು ದೇವರು ಮತ್ತೆ ನುಡಿವೆ ನಂತಿರಲಿಯೆಂ
ದಾಕೆ ಗುಟ್ಟನೊಳಿರಿಸಿದಳು ॥ ೧೩ ॥

ಅರಿದನು ಮುನ್ನೊಂದು ಗಿಳಿಗೆ ತಾನೊರೆದುದು
ಹೊರಹೊಮ್ಮಿತೆಂದಂಜಿ ಪರರ
ಪೊರಮಡಿಸಿದಳೀಗ ನಾನೊಂದ ನುಡಿದರು
ಮರೆಸುವ ಬಗೆಯೆಂದು ನೆನೆದ ॥ ೧೪ ॥

ಬಿನ್ನಾಣಕಾತಿಯರರಸಿ ಬೆಡಂಗಿಂದ
ತನ್ನ ಕೈಮುಟ್ಟ ವಲ್ಲಭಗೆ
ಅನ್ನಪಾನವ ಶಾಕಪಾಕವನೆಡೆಮಾಡಿ
ಮನ್ನಿಸಿದಳು ನಿಮಿಷದೊಳು ॥ ೧೫ ॥

ಸ್ವರ್ಗದೊಳಗೆ ಬಿತ್ತಿ ಬೆಳೆದ ಶಾಲಿಯನಪ
ವರ್ಗಲೋಕದೊಳಟ್ಟು ತಂದು
ಭೋರ್ಗರೆದೆಡೆಮಾಳ್ಪ ಪುಣ್ಯಲಕ್ಷ್ಮಿಯೊಯೆಂಬ
ಮಾರ್ಗದೊಳನ್ನವಿಕ್ಕಿದಳು ॥ ೧೬ ॥

ಎಳೆಮಿಂಚನೆರೆವಂತೆ ತಿಳಿದುಪ್ಪವೆರೆದಳು
ಬೆಳುಮುಗಿಲಂದದ ಮೊಸರ
ಜಲಜದಂತೆಸೆವ ಬಟ್ಟಲುಗಳೊಳಿಡೆಮಾಡಿ
ದಳು ಬಗೆಯರಿದು ಲತಾಂಗಿ ॥ ೧೭ ॥

ಮೊರೆದುದಾಗಳೆ ಬಾಗಿಲೊಳು ಘಂಟೆ ಭೋರೆಂದು
ಹರಿವಾಣದೊಳು ಹಸ್ತವಿಟ್ಟು
ಪರಮಾತ್ಮಗರ್ಪಿಸಿದನ್ನ ಪಾನವ ಮೈಗೆ
ಧರಣಿಪಾಲಕನಿತ್ತನೊಲಿದು ॥ ೧೮ ॥

ಕುಸುಮಾಜಿ ತನ್ನ ನೆಳಲು ರಾಯನಗಲಿಗೆ
ಮುಸುಕದಂತೋಜೆಯೊಳ್ನಿಂದು
ಬಿಸಿಯನಾರಿಪಳೊಮ್ಮೆ ಪನ್ನೀರ ಮೈಗೆ ಚಿಂ
ಮಿಸಿಂಪಾಲವಟ್ಟವಿಕ್ಕುವಳು ॥ ೧೯ ॥

ಇನಿಯನಾಸೋಗಿಸುತಿಡೆಯಲ್ಲಿ ಪಾನವ
ನನುಮಾನಿಸುತ ಮನದಲ್ಲಿ
ನೆನೆವಷ್ಟರೊಳಗೆ ಗಿಂಡಿಯನೆತ್ತಿಕೊಡುವಳಾ
ಮನವ ಹೊಕ್ಕಿದ್ದಳೆಂಬಂತೆ ॥ ೨೦ ॥

ಸಿಹಿ ಪಿರಿದಾದಲ್ಲಿ ಹುಳಿಗೊಡುವಳು ಹುಳಿ
ಬಹಳಿಸಲುಪ್ಪುದೋರುವಳು
ಕಹಿಯ ಖಾರವನೊಗರನು ರುಚಿದೋರಿ ಸಂ
ಗ್ರಹಿಸಿ ನೀಡುವಳಾತ್ಮಪತಿಗೆ ॥ ೨೧ ॥

ಪರಿಪರಿಯನ್ನ ಪಾನವ ಹೊಸ ಹೊಸತಾಗಿ
ತರತರದೊಳು ನೀಡುತಿಹಳು
ಶಿರಗೊಡಹುವನು ಸಾಕೆಂದು ಕೈಮುಗಿವಳಿ
ನ್ನೆರಡೆ ತುತ್ತಿರಲೆಂಬಳೊಡನೆ ॥ ೨೨ ॥

ಮಾಡಿದ ವಸ್ತುವ ತಪ್ಪದೆಲ್ಲವ ಸವಿ
ನೋಡಬೇಕರಸಯೆಂದೆನುತ
ಬೇಡಿಕೊಂಡೆಡೆಮಾಡುವಳು ನಸುನಗುತ ಬಾ
ಯ್ಗೊಡಿಸ್ಪು ಸವಿದು ಬಿಡುವನು ॥ ೨೩ ॥

ಆನೆಯನುಣಿಸುವಂತಾ ಕಾಂತೆ ಬಲುಹಿಂದ
ತಾನುಣಿಸಿದಳಾತ್ಮಪತಿಯ
ಆ ನೃಪ ತೃಪ್ತಿವಡೆದು ಹಸ್ತದೊಳೆದನ್ನ
ಪಾನಾಂತ್ಯಕ್ರಿಯೆಯ ಮಾಡಿದನು ॥ ೨೪ ॥

ಎದ್ದನು ಜಿನಶರಣೆಂದು ಕೆಲದೊಳಿರಿ
ಸಿದ್ದ ಪಚ್ಚಡವ ಮೇಲ್ಕೊಳುತ
ಮುದ್ದುಮುಖದ ಕಾಂತೆ ಹೂವಿನುಪ್ಪರಿಗೆಗೆ
ತಿದ್ದಿ ತೋರಿದಳು ದಾರಿಯನು ॥ ೨೫ ॥

ಆರೋಗಿಸಿದ ಮೇಲ್ನೆಲೆಯಿಂದ ಮೇಲಕೆ
ಸೇರಿದ ಸೋಪಾನವಿಡಿದು
ಆರೋಹಿಸಿದನಾ ಹೂವಿನುಪ್ಪರಿಗೆಗೆ
ನಾರಿಯ ಕೈಲಾಗುವಿಡಿದು ॥ ೨೬ ॥

ಮಾಡದ ನಡುವಣ ಗೂಢಗೃಹದೊಳೊಪ್ಪ
ಗೂಡಿದ ಶಕುನಿಮಂಚದೊಳು
ಪಾಡರಿದೆಡದ ಮಗ್ಗಲನೂರಿ ನೃಪತಿ ಮೈ
ನೀಡಿ ಪವಡಿಸಿದನೊಡನೆ ॥ ೨೭ ॥

ವೀಳೆಯವಿತ್ತು ಪನ್ನೀರ ಚಿಮ್ಮಿಸಿ ಕಂಗ
ಳಾಲಿಗೆ ಕಪ್ಪುರವೆಚ್ಚಿ
ಆಲವಟ್ಟವನಿಕ್ಕಿ ಗಂಧವ ಲೇಪಿಸಿ
ಬಾಲೆ ಮನ್ನಿಸಿದಳು ಪತಿಯ ॥ ೨೮ ॥

ಪಾದಸೇವೆಗೆ ಕುಳಿತಳು ರಾಯ ಕಂಡು ಹೊ
ತ್ತಾದುದು ಹೋಗನ್ನರಸವಾ
ಸ್ವಾದಿಸಿ ಮತ್ತೆ ಬಾರೆಂದು ಕಳುಹಲಾಗ
ಹೋದಳು ಪರಮ ಲೀಲೆಯೊಳು ॥ ೨೯ ॥

ನನ್ನಾತ್ಮ ಬೇರಂಗ ಬೇರೆಂದು ಕಣ್ಮುಚ್ಚಿ
ತನ್ನ ತಾನೊಳಗೆ ನಿಟ್ಟಿಸುತ
ಮನ್ನೆಯರೊಡೆಯನಿರಲು ಕೂಡೆ ಕವಿದುದು
ಅನ್ನಸೊಕ್ಕಿನ ನಸುನಿದ್ರೆ ॥ ೩೦ ॥

ಗಂಡನುಂಡಗಲ ತೊಳೆಯದದರೊಳಗಿಕ್ಕಿ
ಕೊಂಡು ತಾನನ್ನ ಪಾನಗಳ
ಉಂಡಳು ತೃಪ್ತಿವಡೆದಳು ಕೈದೊಳೆದಳ
ಖಂಡಿತಾನಂದವೈದಿದಳು ॥ ೩೧ ॥

ಬಾಗಿಲ ತೆಗೆದಳೂಳಿಗದ ನಾರಿಯರೈದಿ
ತೂಗುತಿರಲು ಮಂಚದಲ್ಲಿ
ಆಗಳಿಷ್ಟನ್ನಸೊಕ್ಕಿನ ನಿದ್ರೆಯನು ತೀರ್ಚಿ
ಬೇಗ ಕಣ್ದೆರೆದೆದ್ದಳವಳು ॥ ೩೨ ॥

ಉಪ್ಪರಿಗೆಯೊಳು ಗಂಡನನಿರಿಸಿದಳಲ್ಲಿ
ಬಪ್ಪುದೆ ನಿದ್ರೆ ಸಜ್ಜನೆಗೆ
ತಪ್ಪುಗೈದಂತೆದೆ ದಿಗಿದಿಗಿಲೆನಲೊಡ
ನುಪ್ಪವಡಿಸಿದಳಾ ಜಾಣೆ ॥ ೩೩ ॥

ಕನ್ನಡಿಯೊಳು ಹೊಳೆಹೊಳೆದು ಮೊಗವ ನೋಡಿ
ಚೆನ್ನಾಗಿ ತಿಲಕವ ತಿದ್ದಿ
ಭಿನ್ನಕುಂತಳವ ಸಾಗಿಸಿಕೊಳುತೊಯ್ಯನೆ
ತನ್ನ ತಾನಕ್ಕಳುಬ್ಬಿನೊಳು ॥ ೩೪ ॥

ಕಸ್ತೂರಿ ಪುಣುಗು ಜವಾದಿ ಮುಂತಾದ ಸು
ವಸ್ತುವ ತೊಡೆದು ಪೂದುರುಬಿ
ವಿಸ್ತಾರದಿಂದ ಪಾಡಿಸಿಕೊಂಡಳಾಗ ಸ
ಮಸ್ತಭೃಂಗಗಳಿಂದ ತನ್ನ ॥ ೩೫ ॥

ಕೆಂಬಾಯ ವೀಳೆಯ ಬಿಳಿಯೆಲೆ ವಾಮಕ
ರಾಂಬುಜದೊಳಗಳವಡಲು
ತುಂಬು ಜವ್ವನೆ ನಡೆದಳು ನಲ್ಲನೆಡೆಗೆದೆ
ತುಂಬಿ ತುಳುಕುವರ್ತಿಯಿಂದ ॥ ೩೬ ॥

ಸೋಪಾನವಿಡಿದು ಬರುತ ಗೃಹವಿನ್ನು ಸ
ಮೀಪವೆಂಬೆಡೆಯೊಳು ತನ್ನ
ಚಾಪಲಾಭರಣದ ದನಿಯ ವಂಚಿಸಿ ಮೆಲ್ಲ
ನಾ ಪೆಣ್ಣು ಬಂದಳೋಜೆಯೊಳು ॥ ೩೭ ॥

ನೃಪಗೀಗ ನಿದ್ರೆಯೊ ಯೆಚ್ಚರಿಕೆಯೊಯೆಂದು
ಜಪಿಸುತ ನಿಲುಕಿ ನಿಟ್ಟಿಸುತ
ಚಪಲಾಕ್ಷಿ ಕಾಲ್ತುಡುಕೆನ್ನದೆ ನಡೆತಂದ
ಳುಪಮಿಸಬಹುದೆ ಭಕ್ತಿಯನು ॥ ೩೮ ॥

ಇತ್ತಲೀ ಕಾಂತೆಯಿಂತೆಣಿಸುತ ಬರುತಿರ್ದ
ಳತ್ತಲಾ ರಾಯನೊಂದಿನಿಸು
ಹೊತ್ತಿನಮೇಲೆ ತಾನೆಚ್ಚತ್ತು ಶುದ್ಧಾತ್ಮ
ವೃತ್ತಿಯೊಳಿದ್ದನೇನೆಂಬೆ ॥ ೩೯ ॥

ಅಂಬುಜಲೋಚನೆ ಬಹುದನರಿದು ಚಿ
ದಂಬರ ಪುರುಷಗೆ ನಮಿಸಿ
ಇಂಬುಗೊಳಿಸಿದನು ಯೋಗವ ಹೊದೆದ ದಿ
ವ್ಯಾಂಬರ ಮುಸುಕೆ ಮೈಮುರಿದ ॥ ೪೦ ॥

ಆಗಳಿಸುತ ಕಣ್ಣ ತೀಡಿಕೊಳುತ ವೀತ
ರಾಗಾಯನಮ ಎಂದು ಶಶಿಯ
ಮೇಗೆ ಕವಿದ ಬಿಳುಮುಗಿಲನೊತ್ತರಿಸುವಂ
ತಾಗ ನೂಂಕಿದ ತನ್ನಮುಸುಕ ॥ ೪೧ ॥

ಕಂಡನು ಬಾಗಿಲ ಮರೆಗೊಂಡ ಸತಿಯ ಪ್ರ
ಚಂಡೆ ಬಾರೆನುತೆದ್ದು ಕುಳಿತ
ಕೆಂಡವನುಗುಳ್ವ ಕೆಂಪಿನ ತುಟಿ ನಸುನಗೆ
ಯಿಂಡೆಯಾಡುತ ಬಂದಳವಳು || ೪೨ ||

ಸಾರಿದಳಾ ಕುಸುಮಾಜಿ ವಲ್ಲಭಗೆ ಪ
ನ್ನೀರ ಮುಕ್ಕುಳಿಸಲೆರೆದಳು
ಕೂರುಗುರಿಂದ ಸೀಳ್ದೆಲೆಯ ಮಡಿದು ಕೊಟ್ಟ
ಳಾ ರಾಯಗತಿ ವಿಭವದೊಳು || ೪೩ ||

ನಗುತ ನಗುತ ಮಾತನಾಡುತೆಲೆಯ ಫಳಿ
ಗೆಗಳ ಕೈಕೊಳುತಿದ್ದು ನೃಪತಿ
ಮೊಗ ನೋಡಿ ತನ್ನೊಳು ನುಡಿವರಿಷ್ಟಳುಕುವ
ಬಗೆಯ ಕಂಡನು ತನ್ನ ಸತಿಯ || ೪೪ ||

ಇವಳೊಡನೊಂದೆರಳ್ಟೂಟಿನ ನುಡಿಯ ಕೇ
ಳುವೆನೆಂದು ನೆನೆದುಕೊಂಡೊಡನೆ
ಪವಡಿಸಿ ಮುಸುಕಿಕ್ಕಿ ಕೈನೀಡಿ ಬೆಳ್ಳೆಲೆ
ಗವಳವ ಕೊಳುತಿಂತು ನುಡಿದ || ೪೫ ||

ಕುಸುಮಿ ತಾನೇಕೆ ಬಂದಳು ಕುಸುಮಾಜಿಯೆಂ
ದುಸುರಿದನಾಕೆಯ ಕೂಡೆ
ನಸುನಗುತೇಕೆ ಬಂದಳೊ ದೇವರೇ ಬಲ್ಲ
ರಸಿಯಳಿಚ್ಛೆಯನೆಂದಳವಳು || ೪೬ ||

ಮೊಗವ ನೋಳ್ಪಾಗ ನಮ್ಮೊಡನಿವಳಿಂದೊಂದು
ಜಗಳಕೆ ಬಂದಳೆಂಬಂತೆ
ಬಗೆದೋರುತಿದೆ ನೀನು ಕೇಳಿ ಹೇಳೆಂದಾಗ
ವಿಗಡದ ಮಾತನಾಡಿದಳು || ೪೭ ||

ಕೇಳ್ದಿನಾಕೆಯ ದೇವ ಜಗಳಕಲ್ಲೆಂದಳು
ನೀಳ್ದ ಗೂಢಾರ್ಥವೊಂದುಂಟು
ಆಳ್ದನ ಕೂಡೆ ಯೋಚಿಸಬಂದಿನೆಂದೊಲ್ದು
ಪೇಳ್ದಳಿಂದಳು ಪತಿಯೊಡನೆ ॥ ೪೮ ॥

ಗೂಢಾರ್ಥವೇನು ಪೇಳಲಿ ಕೇಳು, ಕೇಳ್ದಿನು
ಮೂಢರಿಗದ ಹೇಳಬೇಕು
ಪ್ರೌಢರು ಸಾರ್ದಾಗ ಬಲ್ಲರೆಂದಪಳೆಂದು
ಪ್ರೌಢಿಯ ಮಾತನಾಡಿದಳು ॥ ೪೯ ॥

ಎಲೆಯ ಘಳಿಗೆಯನಿತರೊಳು ಸಾಕಾದುದು
ನಳಿನಾಕ್ಷಿ ಪತಿಯ ಪಾದಗಳ
ನಲಿದೊತ್ತುತಿದ್ದಳು ತಳಿರು ತಾವರೆಯ ಮೇ
ಲೊಲಿದಾಡುವಂತಿದ್ದುದಾಗ ॥ ೫೦ ॥

ಪಾದವನೊತ್ತುವ ಕುಶಲ ಲೇಸೆಂದಾಗ
ಪಾದದಿಂದಪ್ಪಿದನವಳ
ಆದುದೊಡೆಯ ಮೆಚ್ಚಿ ಕಾಲೊಳೊದೆದನೆಂಬ
ಗಾದೆಯಿಂದೆನಗೆಂದಳವಳು ॥ ೫೧ ॥

ನಗುತ ಭೂಪತಿಯೆದ್ದನಲ್ಲಿಂದ ಮುಂದಣು
ಜ್ಜುಗವನವರೆ ಬಲ್ಲರದರ
ಸೊಗಸನಂತಿಂತೆಂದು ನುಡಿದೆನಾದರೆ ಬಲು
ಹಗರಣವಹುದದಂತಿರಲಿ ॥ ೫೨ ॥

ಚಿನ್ಮಯ ತತ್ವವ ಮುಟ್ಟಿ ವೀಣೆಯೊಳು ಕಿಂ
ಚಿನ್ಮಧ್ಯೆಸೊಗಸಿ ಹಾಡುತಿರೆ
ಮನ್ಮಥರೂಪನಾಲಿಸುತಿದ್ದನಿಲ್ಲಿಗೆ
ಸನ್ಮಾನ ಸಂಧಿ ಸುಗಂಧಿ ॥ ೫೩ ॥

ವೀಣಾ ಸಂಧಿ

ಏನ ಬಣ್ಣಿಸುವೆನಾ ಕುಸುಮಾಜಿ ಪಾಡುವ
ಗಾನವನಾ ವೀಣೆಗಿವಳು
ತಾನೊಬ್ಬ ಸಖಿಯೊಯೆಂಬಂತೆ ಶಾರೀರ ಸ
ಮಾನವಾಗಿರಲು ಪಾಡಿದಳು ॥ ೧ ॥

ಎಡಗೈಯೊಳಮರಿಸಿ ವೀಣೆಯನಾಂತು ಮೇ
ಗಡೆ ಮೆಟ್ಟಿನೊಳು ಬೆರಳಾಡೆ
ಒಡನೆ ಕೀಳ್ಗಡೆ ತಂತಿಯೊಳು ಬಲಗೈವೆರ
ಳೊಡರಿಸೆ ಪಾಡಿದಳೊಲಿದು ॥ ೨ ॥

ತೊಡೆಯಮೇಲಿಟ್ಟು ನಲ್ಲಳನು ನುಂಗೊರಳ ತ
ನ್ನೆಡಗೈಯೊಳಾಂತು ತೆಳ್ವಸಿರ
ತಡಹುವ ನಲ್ಲನ ಮುದ್ದುಲಾಲನೆಯ ಕ
ನ್ನಡಿಸಿತಾ ವೀಣೆಯಾಂತೊಲವು ॥ ೩ ॥

ಕೆಂಬಾಯ ನಸುದೆರೆದಾಯೆಂದು ರಾಗವ
ನಂಬುಜಾನನೆ ತುಡುಕಿದಳು
ತುಂಬಿಗಳೊಡನೆ ಘುಂಮೆಂದೆಡಬಲಕೆ ತೆ
ರಂಬೊಳೆದುವು ಶ್ರುತಿಗೊಡುತ ॥ ೪ ॥

ವೀಣೆಯೊಳೊಮ್ಮೆ ತೋರುವಳು ರಾಗವ ತನ್ನ
ಗೋಣೊಳಗೊಮ್ಮೆ ತೋರುವಳು
ವೀಣೆಯನೊಂದ ಬಿಟ್ಟೊಂದ ನುಡಿಸುವಳೀ
ಜಾಣೆಯೆಂಬಂತಿಹುದಾಗ ॥ ೫ ॥

ವೀಣೆಯೆ ನುಡಿಸುತ ಪಾಡಿದರಿವಳೀಗ
ವೀಣೆಗಳಿರಡನೊಂದಾಗಿ
ಹೂಣಿ ನುಡಿಸುತಿದ್ದಳೆಂಬೊಲಿಹುದು ಮರು
ರಾಣಿಯ ದನಿಯ ಚೆಲ್ವಿಕೆಯೆ ॥ ೬ ॥

ವೇಳೆಯರಿದು ಶ್ರುತಿಯರಿದು ಕಟ್ಟಣೆಯರಿ
ದಾಳಾಪದನುಭವವರಿದು
ಕೇಳಿಸಿದಳು ಭರತಾಗಮ ಭರತ ಭೂ
ಪಾಲನ ಸತಿಗೆ ವಿಸ್ಮಯವೆ ॥ ೭ ॥

ಆಳಾಪಿಸುತ್ತರಸನ ಮೊಗ ನೋಳ್ಪಳಾ
ವೇಳೆಗೆ ನಗೆ ತೋರಿ ತನಗೆ
ಮೇಲೆ ಕಣ್ಮುಚ್ಚಿ ನಗುತ ಪಾಡುವಳು ಲೀಲೆ
ದಾಳುತಿಹನು ರಾಯ ನೋಡಿ ॥ ೮ ॥

ಕೂಡೆ ಕಣ್ದೆರೆದು ನೋಡುತ ಪಾಡುವಳು ನಗೆ
ಗೂಡಿ ಪಾಡುವಳು ಮತ್ತೊಮ್ಮೆ
ತೀಡುತ ತಂತಿಯತ್ತೆರಗಿ ದೃಷ್ಟಿಯನಿಟ್ಟು
ಪಾಡುವಳಾ ಗಾಡಿಕಾತಿ ॥ ೯ ॥

ಒಳಗುಮ್ಮಿದಾನಂದರಸ ತನ್ನ ತನು ತುಂಬಿ
ತುಳುಕಿ ಹೊರಗೆ ಸೂಸುವಂತೆ
ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ
ಹೊಳೆದು ಮೋಹಿಸುತಿದ್ದುದಾಗ ॥ ೧೦ ॥

ಸುಳಿನಾಭಿಯೊಳು ಪುಟ್ಟಿ ಮೆಲ್ಲೆದೆಯೊಳು ಬೆಳೆ
ದೊಳುಗೊರಳೊಳು ಪ್ರಾಯವಡೆದು
ಎಳೆಯಳ ಬ್ರಹ್ಮರಂಧ್ರವನೇರಿ ಬಾಯ್ದೆರೆ
ಗಿಳಿದು ಮೋಹಿಸಿದುದಾಳಾಪ ॥ ೧೧ ॥

ಏನ ಕಲ್ತಳೊ ಎಲ್ಲಿ ಕಂಡಳೊ ಮಝು ಪುಂ
ಖಾನು ಪುಂಖದೊಳು ಮೇಲ್ಮೇಲೆ
ತಾನವ ಹೊಸ ಹೊಸತಾಗಿ ತಂದಳು ಜೀನ
ಸೋನೆಯ ಕರೆವಳೆಂಬಂತೆ ॥ ೧೨ ॥

ಕುಂಟಣಿಗೋಲೆಯ ಬರೆವ ಕಾವನ ಕೈಯ
ಕಂಠದೊಂದುಲುಹೊ ಯೆಂಬಂತೆ
ಕಂಠವನಲುಗಿಸಿ ಹೊಸ ತಾನಗಳ ಕಳ
ಕಂಠನಿನಾದೆ ತೋರಿದಳು ॥ ೧೩ ॥

ಉಂಚದಿಂದೆತ್ತುವಳಡಕದಿಂದಡಗಿಸಿ
ಮಿಂಚಿನಂತೊಡನೇಳಿಸುವಳು
ಅಂಚೆಯ ನಡೆದಾಡಿಸುವಂತೆ ರಾಗದ
ಸಂಚುಗಾಣಿಸಿ ತೋರುತಿಹಳು ॥ ೧೪ ॥

ಬಂದ ತಾನವ ಬರಲೀಸದೆ ಹೊಸ ಹೊಸ
ತೊಂದೊಂದು ಪರಿಯ ತಾನಗಳ
ತಂದು ತಂದೆದೆಗೊಳಿಸಿದಳು ಗಾನವ ಕರೆ
ತಂದು ತೋರಿಸುವಂತೆ ನೃಪಗೆ ॥ ೧೫ ॥

ತಾನ ತಾನಕೆ ರಾಯ ಹಿಗ್ಗುತಿಹನು ಗಂಡ
ನಾನಂದಕವಳುಬ್ಬುತಿಹಳು
ಗಾನವೊಪ್ಪಿದುದಾಗ ಗಂಧಗಿರಿಯ ಪವ
ಮಾನ ಕಂಮನೆ ತೀಡಿದಂತೆ ॥ ೧೬ ॥

ಅಂಬುಧಿ ಸಾಸಿವೆಯೊಳಗಡಗಿತು ಮಣ್ಪೊ
ಳಂಬರ ಹೂಳಿಹೋಯ್ತೆಂದು
ಕಂಬುಕಂಧರೆ ಪರಮಾತ್ಮಕಲೆಯನವ
ಲಂಬಿಸಿ ಹಾಡಿದಳೊಲಿದು ॥ ೧೭ ॥

ಯೋಗದೊಳಾತ್ಮತತ್ವವೆ ಕಡೆ ದಶವಿಧ
ಭೋಗಕಂಗನೆ ಕಡೆಯೆಂದು
ಯೋಗಶಾಸ್ತ್ರವ ಭೋಗಶಾಸ್ತ್ರವನೆರಡನು
ತೂಗಿ ತೋರ್ಪಡಿಸಿ ಪಾಡಿದಳು ॥ ೧೮ ॥

ಹೊಳೆಹೊಳೆದರಸನ ಮೊಗವ ನೋಳ್ಪಳು ಮೋರೆ
ಯೊಲೆದೊಮ್ಮೆ ನಗುತ ಪಾಡುವಳು
ನಲಿದಾಡಿ ಕೇಳಿಸುತಿದ್ದಳು ಮೋಹನ
ಜಲಧಿಯೊಳೋಲಾಡುವಂತೆ ॥ ೧೯ ॥

[1]ಆದುದೌ[1]ಕುಸುಮಿ ಚೆಲ್ವಾದುದೌ ಕುಸುಮಾಜಿ
ಭೇದಿಸಿ ಹಾಡಿದೌ ಕುಸುಮು
[2]ಓದುದು[2]ಸೊಗಸಾದುದಿನ್ನೊಮ್ಮೆಯೆಂದು ವಿ
ನೋದಿಗಳರಸ ಕೇಳಿದನು ॥ ೨೦ ॥

ಆ ನುಡಿಗೇಳ್ದವಳುಬ್ಬಿ ಹಾಡುವಳದ
ಕಾ ನರನಾಥನುಬ್ಬುವನು
ತಾನವಳಿಗೆ ಮೆಚ್ಚುತವಳು ತನಗೆ ಮೆಚ್ಚು
ತಾನಂದಗೋಷ್ಠಿ ಮಾಡಿದರು ॥ ೨೧ ॥

ಮೆಚ್ಚಿದಿನಿಯಳೊಂದು ಹುಚ್ಚ ನುಡಿದರೆದೆ
ನೊಚ್ಚಗಾಗಿಹುದು ನಲ್ಲರಿಗೆ
ಅಚ್ಚಗಾನವನಾಕೆ ಪಾಡುತಿರಲು ಕೇಳ್ದು
ಮೆಚ್ಚದಿಹನೆ ಚಕ್ರಧರನು ॥ ೨೨ ॥

ಹೊಸ ಹೊಸ ಬಗೆಯಾಗಿ ಹಾಡುವೋಪಳ ಗಾನ
ರಸಕೆ ತಾನುಬ್ಬಿ ರಾಜೇಂದ್ರ
ಆಸಿಯಳ ವೀಣೆಯನೊಯ್ಯನೋಸರಿಸಿ ತ
ಕ್ಕಿಸಿ ಬಿಟ್ಟು ಕೂಡೆ ಹಾಡೆಂಬ ॥ ೨೩ ॥

---

1. ಆದುದೆ (ಕ. ಖ. ಚ. ಛ)
2. ಓದೂದು (ಕ) ಓದೋದು (ಕ.ಛ)

ಬೆಳಗಿನೊಳೋಲಾಡುವಂತೆ ಸಂಗೀತದ
ಸುಳಿಯೊಳು ತೇಲಾಡುವಂತೆ
ತೆಳುಗಾಳಿಯೇರಿ ವೈಹಾಳಿಯ ಮಾಡುವಂ
ತೆಳೆವೆಂಗಳರಸಿ ಹಾಡಿದಳು ॥ ೨೪ ॥

ಒಸೆದುಬ್ಬುವನು ಮರ್ಮು ಕುಸುಮಿಯ ರಾಗವೆ
ಕುಸುಮದ ಕಂಪೆಯೆಂದೆಂಬ
ಕುಸುಮವ ಕೆದರಿದಂತಾಯ್ತೆಂಬ ನೊಸಲೊಳು
ನೊಸಲಿಟ್ಟು ಮುಂಡಾಡಿ ಬಿಡುವ ॥ ೨೫ ॥

ಗಂಡನೆಷ್ಟೆಷ್ಟು ಮನ್ನಿಸಿದನಷ್ಟಷ್ಟು ಹೊ
ಯ್ಬೆಂಡಿನಂತುಬ್ಬಿ ಹಾಡುವಳು
ಮುಂಡೆಯೊಲಿದು ಜಿನ ಜಿನಯೆಂದು ಷಟ್ಪಂಡ
ಮಂಡಲೇಶ್ವರ ಕೇಳುತಿಹನು ॥ ೨೬ ॥

ಗಾನ ಸಾಕತಿವೇಳೆಯಾದುದೋಪಳೆಯೆಂದ
ನಾ ನಾರಿ ಪುರುಜಿನೇಶ್ವರನ
ಸಾನುರಾಗದಿ ಹಾಡಿ ಕೆಲದೊಳಗಿರಿಸಿದ
ಳಾನಂದದಿಂದ ವೀಣೆಯನು ॥ ೨೭ ॥

ವೀಣೆಯನಿರಿಸಿ ನಗುತ ಭಕ್ತಿರಸದಿಂದ
ಪ್ರಾಣೇಶನಡಿಗೆರಗಿದಳು
ರಾಣಿಯ ತೆಗೆದಪ್ಪಿಕೊಂಡನವಳು ಮುನ್ನ
ವೀಣೆಯನಪ್ಪಿದಂದದೊಳು ॥ ೨೮ ॥

ಹಂಸತೂಲದ ತಲ್ಪದೊಳು ಕನಸಿನೊಳಾಗ
ಹಂಸಗಾಮಿನಿಗಾಣ್ಮ ತೋರ್ಪ
ಹಂಸನಾಥನಗಾಣ್ಬನಾ ನೃಪನೆದೆಯೊಳ
ದೇಂ ಸೊಬಗಾದುದೊ ಮೂರ್ಖೆ ॥ ೨೯ ॥

ಸುಖದ ಮಡುವಿನೊಳು ಬಿದ್ದಂತೆ ತಾವಿಷ್ಟು
ಸುಖಮೂರ್ಜಿದಟ್ಟಿ ವಿಶ್ರಮಿಸಿ
ಸುಖವೆ ಕೈವಿಡಿದೆತ್ತಿದಂತೊಡನೆದ್ದರಾ
ಸುಖಿಗಳು ಜಿನಸಿದ್ಧಯೆನುತ ॥ ೩೦ ॥

ತನುವ ತೊಳೆದು ಮಡಿದುಗುಲವ ಮೇಲ್ಕೊಂಡು
ಘನಶೀತಳೋಪಚಾರಗಳ
ಅನುಭವಿಸುತ ಸೂಳುವೀಳೆಯಗೊಳುತ ನೋ
ಹನಶೀಲರಿದ್ದರೇನೆಂಬೆ ॥ ೩೧ ॥

ಹೊಸ ಕಾಂತಿ ತನುವಿನೊಳುಕ್ಕಿ ಸೂಸುತ ಮುಖ
ರಸ ತಳತಳಿಸಿ ತೊಟ್ಟಿಡುತ
ಅಸುವಿನೊಳಾನಂದ ತುಂಬಿ ತುಳುಕುತ ರಾ
ಜಿಸುತಿದ್ದರಧಿಕ ಲೀಲೆಯೊಳು ॥ ೩೨ ॥

ವೀಳೆಯನರಿದಾಗ ಕುಸುಮಾಜಿ ನಗುತ ನ
ರ್ಮಾಲಯಕಿಂದು ನರ್ತನದ
ಬಾಲೆಯರ್ಕೈತಂದು ಹೋದರರಸಯೆಂದು
ವೀಳೆಯಗೊಡುತ ನುಡಿದಳು ॥ ೩೩ ॥

ಬಂದುದೇನವರು ಹೋದಂದವೇನಬಲೆ ನಿ
ನ್ನೊಂದಾಗಿಯೇನ ನುಡಿದರು
ಮುಂದಾದ ಹದನ ಹೇಳಲುಕಬೇಡಲಗೆ ನೀ
ನೆಂದುದ ಕೇಳ್ವೆನಿಂದೆಂದ ॥ ೩೪ ॥

ರಾತ್ರಿಗೆ ದೇವರು ನೃತ್ಯವ ನೋಡಿ ಪ
ವಿತ್ರವ ಮಾಡಬೇಕೆಂದು
ಪಾತ್ರದ ಪೆಂಗಳಿನಗೆ ಪೇಳ್ದರೆಂದಬ್ಜ
ನೇತ್ರೆ ನುಡಿದಳು ನಲ್ಲನೊಳು ॥ ೩೫ ॥

ಆಗಲೆಂದೊಡಬಟ್ಟನೊಡನೆ ನಲ್ಲಳಿಗೆ ಬ
ಹಾಗ ತಾನಿಟ್ಟ ಭೂಷಣವ
ರಾಗರಸದೊಳುರೆ ಕರೆದು ಚೌಕುಳಿ ಹೊರ
ತಾಗಿಯೆಲ್ಲವನೊಲ್ದುಕೊಟ್ಟ ॥ ೩೬ ॥

ನಾದುನಿಗುಡುಗೊರೆಯಿತ್ತನೂಳಿಗದ ತ
ಳೋದರಿಯನು ಮನ್ನಿಸಿದ
ಬಾದಳಗಂಡಿಯೊಳಗೆ ಕಂಡನಸ್ತಾದ್ರಿ
ಗಾದಿತ್ಯಬಿಂಬ ಸಾರ್ದುದನು ॥ ೩೭ ॥

ಶುಚಿಯಾಗಿ ಮತ್ತೆ ಮೇಲ್ನೆಲೆಗೈದಿ ಜಿನಸಿದ್ಧ
ಗುಚಿತಾರ್ಘ್ಯಪಾದ್ಯವನಿತ್ತು
ಅಚಳಿತಾಸನದೊಳು ಕುಳಿತು ಕಂಗಳ ಮುಚ್ಚಿ
ಪ್ರಚುರಾತ್ಮಯೋಗದೊಳಿದ್ದ ॥ ೩೮ ॥

ಮರದನಾಗಳೆಯಿಷ್ಟು ಹೊತ್ತು ನಲ್ಲಳಕೂಡೆ
ಮೆರೆದುದು ಹಳೆಮೆರಹಾಯ್ತು
ಅರಿದನಾಗಳೆ ಕಂಡನಾಗಳೆ ಹಂಸನ
ಕುರುಹನಾ ರಾಜಯೋಗೀಂದ್ರ ॥ ೩೯ ॥

ಸಂದು ಭೋಗದೊಳಿದ್ದು ಯೋಗಕೆ ಸಲುವಾಗ
ಹಿಂದಣ ವಾಸನೆಯಿಲ್ಲ
ಒಂದ ಬಿಟ್ಟೊಂದು ವಸ್ತ್ರವ ಹೊದೆವಂತಿಹು
ದೆಂದೆಂದು ಭಾವವಾ ನೃಪಗೆ ॥ ೪೦ ॥

ತನುವೆ ಜಿನಾಲಯ ಮನವೆ ಸಿಂಹಾಸನ
ವನುಪಮಾತ್ಮನೆ ಜಿನನೆಂದು
ತನಗಾಗಿ ತನ್ನಿಂದ ತನ್ನ ತಾ ನೋಡುತಿ
ದ್ದನು ಸರ್ವಚಿಂತೆಯ ನೀಗಿ ॥ ೪೧ ॥

ಬುದ್ಧಿಯೊಳಾ ರಾಯ ಬೆಳುದಿಂಗಳೊಳಗೊಂದು
ಸಿದ್ಧ ಬಿಂಬವ ರಚಿಸಿದನು
ಸಿದ್ಧೋಹವೆಂದಲ್ಲಿ ಸುಖದೊಳಿದ್ದನು ಜಿನ
ಸಿದ್ಧರಿಹಂತೆ ಮುಕ್ತಿಯೊಳು ॥ ೪೨ ॥

ಮಾಣಿಕಚೆಂಡನಿಟ್ಟಂತರ್ಕ ಹೋದನು
ಹೊಣಿ ದೇಗುಲ ಮರೆಯಾಯ್ತು
ಕಾಣಿಸುತಿದ್ದುವು ನಕ್ಷತ್ರವಿಲ್ಲಿಗೆ
ವೀಣಾ ಸಂಧಿ ಸುಗಂಧಿ ॥ ೪೩ ॥

ಪೂರ್ವನಾಟಕ ಸಂಧಿ

ಎಲ್ಲವ ಮರೆದು ತನ್ನಾತ್ಮನನರಿದು ತ
ನ್ನಲ್ಲಿ ತಾನಿಂತು ಯೋಗದೊಳು
ತಲ್ಲೀನವಾಗಿ ನಾಲ್ಕಳಿಗೆಯಿದ್ದನು ರಾಯ
ಮೆಲ್ಲನಿರಿಸಿದನಂತದನು ॥ ೧ ॥

ಕಣ್ದೆರೆದನು ತನ್ನ ಕೆಲದೊಳು ನಿಂದಿರ್ದ
ಪೆಣ್ ದೇವ ಸಮಯವಾಯ್ತೆನಲು
ಜಾಣ್ದೋರಿ ಸಿಂಗರಿಸಿದನೆದ್ದನೊಡನೆ ಶ
ರಣ್ದಿವ್ಯ ಜಿನಸಿದ್ಧಯೆನುತ ॥ ೨ ॥

ತಾವರೆಯೇರಿದ್ದ ಕಳಹಂಸ ಮತ್ತೊಂದು
ಹೂವಿನ ಬನಕೆ ಹೋಹಂತೆ
ಹೂವಿನುಪ್ಪರಿಗೆಯಿಂದಿಳಿದು ನಾಟಕಶಾಲೆ
ಗಾ ವಿಭು ನಡೆತರುತಿರ್ದ ॥ ೩ ॥

ತೊಡೆದ ಕಂಪಿನ ಗಾಳಿ ಮೈಯ ಕಂಪಿನ ಗಾಳಿ
ಪೊಡವಿಯ ಕಂಮನೆ ಮಾಡೆ
ನಡೆದು ನಾಟಕಶಾಲೆಯೊಳಹೊಕ್ಕು ಕುಳಿತನು
ಗ್ಗಡದ ಸಿಂಹಾಸನದಲ್ಲಿ ॥ ೪ ॥

ನಾಟಕಶಾಲೆಯಿಂತಿಂತಿರ್ದುದೆಂದು ಕ
ರ್ಣಾಟಿಸಿ ಪೇಳಲಾನರಿಯೆ
ಕೋಟಿ ರತ್ನಗಳಿಂದ ಸುರರ ವಿಮಾನಕೆ
ಸಾಟಿಯೆಂದಾಡಿ ಬಿಡುವೆನು ॥ ೫ ॥

ಸಿರಿಗಂಪು ಕುಂಕುಮ ಪನ್ನೀರು ಸಾದು ಕ
ತ್ತುರಿಯ ಸಾರಣೆ ಚಳಿಯಗಳ
ಪೊರಪಿಂದ ಸ್ವರ್ಗದ ಕಂಪ ತುಂಬಿದ ಹೊನ್ನ
ಕರಡಿಗೆಯಂತೊಪ್ಪುತಿಹುದು ॥ ೬ ॥

ನೋಡುವ ಮುನಿದಡ್ಡಮೋರೆದೆಗೆವ ಕಾಲ್ಗೆ
ಕೂಡೆರಗುವ ತಿಳಿವಂತೆ
ಮಾಡಿದ ಪೆಣ್ಣಂಡುಗಳ ರೂಪು ರಂಜಿಸಿ
ಗೋಡೆಯೊಳಿದ್ದುವೇನೆಂಬೆ ॥ ೭ ॥

ಗಿಳಿಯನೋದಿಸುವಂತೆ ವೀಣೆಯ ನುಡಿಸುವಂ
ತೊಲೆದು ಪಾತ್ರವನಾಡುವಂತೆ
ಹಳಹಳಚನೆ ಪೆಣ್ಣು ರೂಪಿನ ಚಿಲ್ಪು ಪು
ತ್ತಳಿಗಳಿಸೆದುವು ಭಿತ್ತಿಯೊಳು ॥ ೮ ॥

ಸುರರ ಖೇಚರರ ಪೆಣ್ಣಂಡು ರೂಪಲ್ಲಲ್ಲಿ
ಬರೆದಿರ್ದುವಿವು ಬೊಂಬೆಯಲ್ಲ
ಸುರರು ಖೇಚರರು ನಾಟ್ಯವನೋಡಿ ಸುಖತಟ್ಟಿ
ಪರವಶರಾದರೆಂಬಂತೆ ॥ ೯ ॥

ಧರೆಗೆ ವಿಸ್ಮಯವಾದ ನಾಟಕಶಾಲೆಯೊ
ಳರಸನೋಲಗವಾಗಲೊಡನೆ
ಬರತಿದ್ದರುಚಿತ ಕಲಾವಿದರೆಸೆವ ಸಿಂ
ಗರಗೂಡಿ ಘಮ್ಮೆನುತಾಗ ॥ ೧೦ ॥

ರಾಜಕುಮಾರರು ರಸಿಕರು ಬುಧರಧಿ
ರಾಜರು ಕವಿ ಗಮಕಿಗಳು
ತೇಜಿಷ್ಟರೈತಂದು ಭರತರಾಜನ ಕಂಡು
ತೇಜದೊಳೊಲ್ದು ಕುಳಿತರು ॥ ೧೧ ॥

ಗಣಿಕೆಯರೆಕ್ಕಡಿಗರು ನಾಟ್ಯಶಾಸ್ತ್ರ ಲ
ಕ್ಷಣಿಕರು ಭಾವರಂಜಕರು
ಗುಣಿಗಳು ಮಂತ್ರಿಗಳರಸನ ಕಂಡು ತಿಂ
ತಿಣಿಯಾಗಿ ಕುಳಿತರೋಜೆಯೊಳು ॥ ೧೨ ॥

ವೃದ್ಧನುತ್ತಮನು ವಿವೇಕಿ ತತ್ಪತಿಕಾರ್ಯ
ಸಿದ್ಧನು ಬಂದು ಕೈಮುಗಿದು
ಬುದ್ಧಿಸಾಗರನೆಂಬ ಮುಖ್ಯಪ್ರಧಾನ ವಿ
ಶುದ್ಧ ಕುಳಿತನು ಸಮ್ಮುಖದಿ ॥ ೧೩ ॥

ತೆರೆಸೇಲೆ ಮರೆಯೊಳಾ ತೆರೆದ ಗವಾಕ್ಷದೊ
ಳೊರೆದು ನೋಡುತ ಬಾಹ್ಯಜನವ
ಅರಸಿಯರಿದ್ದರು ಭೂಪಾಲನೆಡಬಲ
ದೆರಡು ಪಕ್ಕದೊಳು ಸಾಲಾಗಿ ॥ ೧೪ ॥

ಓಲೆಯದಿರೊತ್ತದಿರೊಯ್ಯಾರದೊಳು ಕುಳ್ಳಿ
ರುಲಿಯದಿರಲ್ಲಲ್ಲಿರೆಂದು
ಸುಳಿದು ಕಟ್ಟಗೆಕಾರರೆಲ್ಲರ ತರವರಿ
ದೊಳುನುಡಿದೋರಿ ತಿದ್ದಿದರು ॥ ೧೫ ॥

ಪರಿಮಳದಿಂದುಚಿತಾಸನದಿಂದ ಕ
ಪ್ಪುರವೀಳೆಯದಿಂದ ಸಭೆಯ
ತರತರವರಿದು ಮನ್ನಿಸಿದರು ಪರಿಚಾರ
ಕರು ರಾಯನನುಮತದಿಂದ ॥ ೧೬ ॥

ತಾಳಧಾರಿಯು ತಾಳವಿಡಿದಾಗ ನೃತ್ಯದ
ತಾಳತೋರುವವೊಲು ನಿಂದು
ಕೇಳಿಸಿದನು ಹೊಸ ಪರಿಯಾಗಿ ಮುನ್ನೆಂದು
ಕೇಳಿಸಿತಿಲ್ಲಿಂತುಟೆನಿಸಿ ॥ ೧೭ ॥

ಒಲೆದ ಮಸ್ತಕ ಶ್ರುತಿಗಿಟ್ಟಿಡಗಿವಿ ತೊಡೆ
ಗಳವಟ್ಟ ಮದ್ದಳೆಯಿಂದ
ಹಲವು ಕತ್ತರವ ಕಳಾಸವನರಿದು ಮು
ದ್ದಳಿಗ ಕೇಳಿಸಿ ನಿಂದನೊಡನೆ ॥ ೧೮ ॥

ನಲ್ಲಳ ನಡುವ ಪಿಡಿನವೊಲಾವುಜವಿಡಿ
ದುಲ್ಲಾಸದಂಕೆ ಝುಂಕೆಗಳ
ಕೊಲ್ಲಣಿಯೊಳಗೆ ಕೇಳಿಸಿದನಾವುಜಕಾರ
ನೆಲ್ಲರ ಚಿತ್ತ ಜುಮ್ಮೆನಲು ॥ ೧೯ ॥

ಡಕ್ಕೆ ನಾಟ್ಯಾನಕ ಚಂಪೆ ಕಿಂಕಿಣಿ ಡೌಡೆ
ಕುಕ್ಕುರು ತುಡುಮು ರಿಂಚಿಯವ
ತಕ್ಕಿಟ ತೋಕಿಟ ತೋಂಗಿ ತೋಹಂಗಿ ತೋ
ಧಿಕ್ಕಿಟಯೆನೆ ಕೇಳಿಸಿದರು ॥ ೨೦ ॥

ವಾದ್ಯ ರಂಜನೆಯಾಗಲೊಡನೆ ಮಹಾಗಾನ
ವಿದ್ಯರಾಯೆಂದು ರಾಗಗಳ
ವೇದ್ಯಗಾಣಿಸಿದರು ತಿತ್ತಿದಂಡಿಗೆ ಶ್ರುತಿ
ಹೃದ್ಯವಾಗಿರೆ ಹೊಸತೆನಿಸಿ ॥ ೨೧ ॥

ಆದಿಜಿನೇಶನ ಸಿದ್ಧರಮುನಿಗಳ
ಶ್ರೀದಿವ್ಯಹಂಸನಾಥನನು
ನಾದಪೂಜೆಯೊಳು ಪೂಜಿಸಿ ಭರತೇಶಗಾ
ಮೋದದೋರಿದರು ಗಾಯಕರು ॥ ೨೨ ॥

ಬಳಿಕ ಗಾನದೊಳನುಗತವಾಗಿ ವಾದ್ಯಸಂ
ಕುಳವ ಮೇಳೈಸಿ ತಾವೆಲ್ಲ
ಒಳಸರಿದೊಯ್ಯನೆ ತೆರೆಯ ಮರೆಯ ಪಾತ
ದೊಳು ದನಿಗೈದರೇನೆಂಬೆ ॥ ೨೩ ॥

ನೃತ್ಯೋಪನಯನವ ತೆರೆಯ ಮರೆಯೊಳು ಸಾಂ
ಗತ್ಯಗಾಣಿಸಿ ನಸುನಿಲಿಸಿ
ನೃತ್ಯವಿದ್ಯಾಧರನೆಂಬ ನಟ್ಟುವ ಬಂದ
ನತ್ಯಂತ ಸುಖಿಯ ಸಮ್ಮುಖಕೆ ॥ ೨೪ ॥

ಮುಂದಲೆ ಚುಂಗುಡಿಸುತ್ತಿದ್ದ ಹಚ್ಚಡ
ಹೊಂದೊಡವಾಂತ ಕೈ ಸೆಳವೆ
ಬಂದು ಭೂವರಗೆ ಸಾಷ್ಟಾಂಗನೆರಗಿಯೆದ್ದು
ನಿಂದು ಬಿನ್ನವಿಸಿದನಿಂತು ॥ ೨೫ ॥

ವಿವಿಧ ವಿದ್ಯಾಂಗ ಪರೀಕ್ಷಕ ಹಂಸಾನು
ಭವ ಸಿದ್ಧ ಸ್ವರ್ಗಪ್ರಸಿದ್ಧ
ಅವನೀಶರೊಡೆಯ ನನ್ನೊಡೆಯ ಬಿನ್ನಹವೊಲಿ
ದವಧರಿಸಾದಿಚಕ್ರೇಶ ॥ ೨೬ ॥

ಸ್ವರ್ಗದೊಳುಂಟೀನೊ ನಿನ್ನ ಮೆಚ್ಚಿಸುವ ಸು
ಮಾರ್ಗನಾಟಕವದಂತಿರಲಿ
ಮಾರ್ಗವೆಂದೆರಡು ಪಾತ್ರವ ತಿದ್ದಿದೆನು ಕಣ್ಣ
ಕೂರ್ಗೊನೆಯೊಳೆ ನೋಡು ಸಾಕು ॥ ೨೭ ॥

ನೇತ್ರಮೋಹಿನಿ ಚಿತ್ತಮೋಹಿನಿಯೆಂದೆಂಬ
ಪಾತ್ರದ ತರುಣಿಯರೆನ್ನ
ಪುತ್ರಿಯರವಧರಿಸೆಂದು ಕೈಮುಗಿದಾಗ
ಪಾತ್ರದೆಡೆಗೆ ಸಾರ್ದನೊಡನೆ ॥ ೨೮ ॥

ಸಂಜೆಗೆಂಪೊಲೆವಂತೆ ತೆರೆ ತೊಲಗಿತು ಕಣ್ಗೆ
ಕಂಜಾಕ್ಷಿಯರು ಕಾಣಿಸಿದರು
ರಂಜಿತನಳಿತೋಳ್ಗಳೆತ್ತಿ ಸುವರ್ಣ ಪು
ಷ್ಪಾಂಜಲಿ ಮಾಡಿದರೊಡನೆ ॥ ೨೯ ॥

ನಡುವಿನೊಳಿಟ್ಟ ಹಸ್ತಗಳು ಪಸರಿಸಿದ
ತೊಡೆ ಸಾರ್ದ ಮಡಗಳಿಂದಾಗ
ಮಿಡುಕದೆ ನಿಲುವಿನ ರೇಖೆದೋರಿದರು ಮು
ಪ್ಪೊಡವಿಯಂದವ ತೋರುವಂತೆ ॥ ೩೦ ॥

ತಿಟ್ಟವಿಕ್ಕಲು ತಿದ್ದಲರಿದೆನಿಸುವ ಮೈಯ
ಕಟ್ಟಾಯವೇರುವ ಪ್ರಾಯ
ಕಟ್ಟಾಣಿ ಹೆಂಗಳಿಸೆದರು ನಟ್ಟುವರೊಳು
ಹುಟ್ಟತಕ್ಕವರೆಯೆಂಬಂತೆ ॥ ೩೧ ॥

ತೊಟ್ಟ ಸಿಂಗಾರದ ಕೊಂಕು ಬೆಂಕಣೆ ರಸ
ತೊಟ್ಟಡುವಂತೆ ಲಾವಣ್ಯ
ಮುಟ್ಟಿ ಕಂದುವ ಮೈಯ ಪೆಂಗಳಿದ್ದರು ನಿಂದ
ತಿಟ್ಟ ಸೋಲಿಸೆ ರಾಜಸಭೆಯ ॥ ೩೨ ॥

ನೇತ್ರಮೋಹನಿ ಮೆಲ್ಲನೊಲಿದು ರಾಯನ ನೋಡಿ
ನೇತ್ರಸುಖವ ಸೂಚಿಸಿದಳು
ಸೂತ್ರಿಸಿ ಚಿತ್ತಮೋಹನಿ ನೋಡಿ ಚಿತ್ತವ
ಸೂತ್ರದಂತಲುಗಾಡಿಸಿದಳು ॥ ೩೩ ॥

ನೋಟದೊಳಗೆ ಕೊಂದರೊಮ್ಮೆ ನೋಟಕರನು
ನಾಟಿಸಿ ನಸುನಗೆಯಿಂದ
ಲೂಟ ಮಾಡಿದರು ಮೈಯೊಲೆದಾಟದಿಂದೆದೆ
ಗೋಟೆಯ ಕೊಂಡರೇನೆಂಬೆ ॥ ೩೪ ॥

ಒಬ್ಬರೊಬ್ಬರು ಬಲಮುರಿ ಯೆಡಮುರಿಯಾಗಿ
ಸಬ್ಬವದೊಳು ಚಾರಿವರಿದು
ಇಬ್ಬರು ಸುಳಿದಾಡಿ ನಿಂದಳೊಬ್ಬಳು ಹಿಂದೆ
ವೊಬ್ಬಳಾಡಿದಳು ರಂಗದೊಳು ॥ ೩೫ ॥

ಹೊಂಗಿ ಹೊಳೆದು ನೇತ್ರಮೋಹಿನಿ ತಾಳ ಲ
ಯಂಗಳನರಿದು ನರ್ತಿಸುತ
ರಂಗದೊಳಿದ್ದಳು ನೋಡುವ ಜನದಂತ
ರಂಗದೊಳಿದ್ದಳೇನೆಂಬೆ ॥ ೩೬ ॥

ತೋಳ ನೀಡಿದಳು ಮನ್ಮಥನೊರೆಯಿಂದುರ್ಚಿ
ಬಾಳ ನೀಡಿದನೊಯೆಂಬಂತೆ
ಚಾಳಿಯದೊಳು ಹೊಳೆದಳು ರಾಜಸುತರೆದೆ
ಹೋಳಾಗುವಂತೆ ಹೊಮ್ಮಿರಿದು ॥ ೩೭ ॥

ಎತ್ತ ನೀಡಿತು ಹಸ್ತವತ್ತದೃಷ್ಟಿಗಳಲ್ಲಿ
ಚಿತ್ತವೆಲ್ಲವು ಭಾವ ರಸವು
ತತ್ತತ ತಿತ್ತಿತಿ ಯಾರೆಯಾರೆಯೆನ
ಲತ್ತಿತ್ತಲೊಲೆದು ಹರಿದಳು ॥ ೩೮ ॥

ತಳರ್ವಜ್ಜೆ ತಟಪುಟನಿಡುವಾಗ ವಿಟರೆದೆ
ತಳಹೊಳಗೊಳುತಿಹುದೊಡನೆ
ಒಲೆದು ಕಾಲ್ನೀಡೆ ಮುನಿದು ತಮ್ಮನೊದೆದ ನ
ಲ್ಲಳ ನೆನೆದರು ರಾಜಸುತರು ॥ ೩೯ ॥

ಭಾವ ವಿಭಾವಾನುಭಾವ ಮುಂತಾದ ಕ
ಲಾವಿರಚನೆ ರೇಖೆದೋರಿ
ಭಾವಕರೆಲ್ಲರ ಚಿತ್ತರಂಜಿಸಲಾಡಿ
ಭಾವೆ ಹಿಂಗಡೆಗೆ ಸಾರಿದಳು ॥ ೪೦ ॥

ಚಿತ್ತಮೋಹಿನಿ ಕೂಡೆ ಬಂದು ನಿಂದಳು ಮರ್ಮು
ಚಿತ್ತವೆಲ್ಲವ ಚಿಗುರಿಸುತ
ವೃತ್ತಕುಚದ ಬಲುಭಾರವ ಬಡನಡು
ಹೊತ್ತುನಿಂದುದು ಚಿತ್ರವೆನಿಸಿ ॥ ೪೧ ॥

ದಿಗಿದಿಗಿನೊಡನಿದಿರಾಗಿ ಬಹಳು ನಸು
ನಗುತ ರಾಯನನಪ್ಪುವಂತೆ
ಭುಗಿಲನೆ ತಿರುಗುವಳರಸನೊಳ್ಮನಿದಡ್ಡ
ಮೊಗವಿಕ್ಕಿ ಹೋಹಳೆಂಬಂತೆ ॥ ೪೨ ॥

ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ
ಜಲಧಿಯ ಸುಳಿಯೊಯೆಂಬಂತೆ
ಬಲಕೆಡಕೊಲೆದು ಹರಿವಳೆಳೆವಿಸಿಲಲ್ಲಿ
ಯೆಳೆನಾಗ ಹರಿವಂತೆ ಮುರಿದು ॥ ೪೩ ॥

ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬು
ಹಾರಿಸುವಳು ನಸುನಗುತ
ಹಾರುವುದೊಡನವರೆದೆ ತನ್ನ ತೋಳೆತ್ತಿ
ನೀರೆ ಕೊಲ್ಲಣಿಸಿ ಸುತ್ತುವಳು ॥ ೪೪ ॥

ಮಾರನ ಮದದಾನೆ ಚಾರಿವರಿದು ನಾಟ್ಯ
ಧಾರಿಣಿಯೊಳಗಾಡಿದಂತೆ
ಆರಭಟಿಯೊಳು ನೃತ್ಯವನಾಡಿ ಹಿಂದಕೆ
ಸಾರಿದಳಾ ಬೆಲೆವೆಣ್ಣು ॥ ೪೫ ॥

ಸಂಗೀತಕಾರರು ತಾಳ ಮೇಳವನು ಸು
ಸಂಗಿಸಿಕೊಂಡು ಜೋಕೆಯೊಳು
ಭೃಂಗಾಳಿಯಂತೆ ತಂಗಾಳಿಯಂತೊಡನೆ ಭಾ
ಷಾಂಗ ಕೇಳಿಯ ಕೇಳಿಸಿದರು ॥ ೪೬ ॥

ಶ್ರೀಭರತೇಶನ ಮನವೆಂಬ ನಭದಲ್ಲಿ
ಶೋಭಿಸುವಮೃತ ಭಾಸ್ಕರನೆ
ಶ್ರೀಭರ್ತೃ ಕರ್ತೃ ಚಿದಂಬರಪುರುಷ ಸು
ಲಾಭತೋರೆಂದು ಹಾಡಿದರು ॥ ೪೭ ॥

ಬಾಳು ಬಟ್ಟಲ ಪಿಡಿದೊಮ್ಮೊಮ್ಮೆ ಪೊನ್ನ ಪೂ
ಗೋಲು ಪೊಂಬರಿಗೆಯಂತೊಮ್ಮೆ
ಕಾಲಿಟ್ಟು ಹೊಳೆವುತಿದ್ದರು ಮನಸಿಜನ ಮಾ
ಸಾಳುಗಳಂತೆ ದಿಟ್ಟಿಯರು ॥ ೪೮ ॥

ಉರೆಮೆಚ್ಚಿ ಸಭೆಯೆಲ್ಲ ನೃತ್ಯವ ಹೊಗಳಿತು
ನೆರೆ ಚಾಗಿಗಗಳದೇವನಾಗ
ಹೊರಗಟ್ಟಿ ನಟ್ಟುವಗಾ ಮೇಳದವರಿಗು
ಹೊರುವಷ್ಟು ಕೊಟ್ಟ ಮನ್ನಣೆಯ ॥ ೪೯ ॥

ನೇತ್ರಮೋಹಿನಿ ಚಿತ್ತಮೋಹಿನಿಯರಿಗಾ ಪ
ವಿತ್ರರತ್ನಾಭರಣಗಳ
ಧಾತ್ರೀಶನಿತ್ತನು ಕಾಸೆಯ ಸೆರಗೊಡ್ಡಿ
ಪಾತ್ರಕಾಂತೆಯರಾಂತರೊಸೆದು ॥ ೫೦ ॥

ಬುದ್ಧಿಸಾಗರನೊಬ್ಬನಿರಲೆಂದು ಮಿಕ್ಕಸ
ಮೃದ್ಧಸಭಾಜನಗಳಿಗೆ
ಪದ್ಧತಿವಿಡಿದುಡುಗೊರೆಯಿತ್ತು ಬೀಳ್ಕೊಟ್ಟ
ನುದ್ಧಾರಶೀಲನಾ ಲೋಲಾ ॥ ೫೧ ॥

ನೀಟಾದ ತೆರೆಯೊಳು ಸತಿಯರಿದಿರು ಮಂತ್ರಿ
ನಾಟ ಗದ್ದುಗೆಯೊಳು ನೃಪತಿ
ನಾಟಕಸತಿಯರೈತರುತಿದ್ದರಿದು ಪೂರ್ವ
ನಾಟಕಸಂಧಿ ಸುಗಂಧಿ ॥ ೫೨ ॥

ಉತ್ತರನಾಟಕ ಸಂಧಿ

ಪೂರ್ವನಾಟಕವಾದುದುತ್ತರ ನಾಟ್ಯದ
ಪೂರ್ವಿಕಾಂಗವ ನೋಳ್ಪೆನೆಂದು
ಪೂರ್ವಚಕ್ರೇಶ್ವರನಿರೆ ಬರುತಿದ್ದರ
ಪೂರ್ವನಾಟ್ಯದ ಸುದತಿಯರು ॥ ೧ ॥

ಕಂಕಣಧ್ವನಿ ಕಣಕಣಯೆನೆ ಕಟಸೂತ್ರ
ಕಿಂಕಿಣಿ ಕಿಣಿಮಿಣಿ ಯೆನಲು
ಪಂಕಜಾಕ್ಷಿಯರೈದುತಿದ್ದರಂದುಗೆಗಳ
ಝೇಂಕಾರ ಝಣಝಣರೆನಲು ॥ ೨ ॥

ಗದ್ದುಗೆಯೊಳಗೊಂದು ಹೊನ್ನ ಪುತ್ತಳಿಯನು
ತಿದ್ದಿ ಸಿಂಗರಿಸಲಂತದಕೆ
ಇದ್ದಂತೆ ಪ್ರಾಣ ಬಂದೀಕ್ಷಿಸುವುದೊಯೆನ
ಲಿದ್ದನಾ ಚೆಲುವರ ದೇವ ॥ ೩ ॥

ತೋರುವ ಚಂದ್ರಬಿಂಬದೊಳಡಗಿದ ಹದಿ
ನಾರು ಕಲೆಗಳೊಯೆಂಬಂತೆ
ಮಾರೊಡ್ಡಿ ಮುತ್ತಿನ ಜವನಿಕೆಯೊಳು ಹದಿ
ನಾರು ಪಾತ್ರಗಳಿದ್ದುವಾಗ ॥ ೪ ॥

ತೆರೆಯ ಮುಂಗಡೆಯೊಳು ನಿಂದು ಮದ್ದಳೆಗನು
ಭರತ ಚಕ್ರಿಗೆ ಕೈಯ ಮುಗಿದು
ಅರಿಕಟ ತದಿಕಟ ರಿಕ್ಕ ರಿಕ್ಕಟ ದಿಮಿ
ದಿರುದಿಮಿಕೆಂದು ಕೇಳಿಸಿದ ॥ ೫ ॥

ಠೀವಿಠೀವಿಳಿ ಜೆಜೆಜೆಂಜೆ ಝಿಂಂ ಝಿಂಂ ಮಿರುಕು
ಚಾವು ಚಾವುಲು ಜುಂಜುಮ್ಮೆಂದು
ಆವುಜಕಾರ ಕೇಳಿಸಿದನು ಪಾತ್ರದ
ಭಾವಕಿಯರ ಪಜ್ಜೆ ನಲಿಯೆ ॥ ೬ ॥

ಅಂಗೈಯನೆತ್ತಿ ಸನ್ನೆಯೊಳಾಗ ವಾದ್ಯರ
ವಂಗಳ ನಿಲಿಸಿ ಜೋಕೆಯೊಳು
ರಂಗಶೇಖರನೆಂಬ ನಯಕಾರ ಬಂದನಂ
ದಂಗಜರೂಪನಿದಿರಿಗೆ ॥ ೭ ॥

ಗಡ್ಡ ಕುಂಡಲ ದೋತ್ರ ನಡೆಸುತ್ತಿದಂಬರ
ದೊಡ್ಡಮುಂಡಾಸು ಚಂದನದ
ಅಡ್ಡಬೊಟ್ಟಪರಂಜಿ ಸೆಳವೆವಿಡಿದು ಬಂದು
ಅಡ್ಡಬಿದ್ದನು ರಾಯನಡಿಗೆ ॥ ೮ ॥

ಸಕಲ ಕಲಾಧರ ಸಾರ್ವಭೌಮೋತ್ತಮ
ಸುಕವಿಜನಾಂಭೋಜ ಭಾನು
ಮಕರಾಂಕ ನಿರ್ಜಿತರೂಪ ಷಟ್ಖಂಡ ನಾ
ಯಕನೆ ಬಿನ್ನಹವೆಂದನೊಲಿದು ॥ ೯ ॥

ಹದಿನಾರು ಮಂದಿ ಮನುಗಳ ಸಂಪದವೆಲ್ಲ
ಪುದಿದೊಂದುಗೂಡಿ ನಿಂದಂತೆ
ಹದಿನಾರು ಪಾತ್ರವಿದ್ದಪುವವಧರಿಸಿಲೆ
ಹದಿನಾರನೆಯ ಮನುಮುಖ್ಯ ॥ ೧೦ ॥

ನೀನಿಂದ್ರ ನಿನ್ನ ಮಂತ್ರಿಯು ಸುರಗುರು ಪಾತ್ರ
ದಾ ನಾರಿಯರು ದಿವಿಜೆಯರು
ಈ ನಾಟ್ಯವಿಂದು ಮೋಹಿಸುವುದಂತದ ನೋಳ್ಪೆ
ನಾನೆಂದು ಪೋದ ಕೈಮುಗಿದು ॥ ೧೧ ॥

ರೇಖೆಗಾಣಿಸಿ ಜವನಿಕೆಯಿದಿರೊಳು ರಂಗ
ಶೇಖರಗಿಂದು ಸೂಚಿಸಲು
ಶಾಖೋಪಶಾಖೆಯೊಳಾಳಾಪ ಚಂದ್ರಮ
ಯಾಖದೋರಿದರು ನೀರೆಯರು ॥ ೧೨ ॥

ಶಿಖರಿಣಿ ಸಿಂಜಿನಿಯೆಂದೆಂಬರಿರ್ವರು
ಮುಖರಿಗಾಯಕಿಯರು ನಿಂದು
ಸುಖತನತಪ್ಪದಾಳಾಪಿಸಿದರು ತಿತ್ತಿ
ಮುಖವೀಣೆಗಳ ಶ್ರುತಿಗೂಡಿ ॥ ೧೩ ॥

ಸರಲ ಸರಲವಾಗಿ ಸಪುರ ಸಪುರವಾಗಿ
ತರಲ ತರಲವಾಗಿ ತೋರಿ
ವಿರಲ ವಿರಲವಾಗಿ ಠಾಯೆಗಾಣಿಸಿದರು
ಕೊರಳ ಬೆರಳ ಸರಿತದೊಳು ॥ ೧೪ ॥

ಮಂಜುಲನೇತ್ರವಟ್ಟಿಯ ನೀಳಿದಂತಪ
ರಂಜಿಸರಿಗೆದೆಗೆದಂತೆ
ಕಂಜದ ಕಂಪನುಂಡೇಳ್ವ ತುಂಬಿಯ ಗಾನ
ರಂಜನೆಯೆನೆ ರಾಗಿಸಿದರು ॥ ೧೫ ॥

ಅಳಿವಂತೆ ರಾಗವ ತುಳಿವಂತೆ ಜಾಡ್ಯವ
ಹಿಳಿವಂತೆ ಮೋಹನರಸವ
ತೊಳೆವಂತೆ ಮನವ ಸಂಜೀವನಾಮೃತವನು
ತಳಿವಂತೆ ರಾಗದೋರಿದರು ॥ ೧೬ ॥

ಹಬ್ಬಿಸುವಂತೆ ರಾಗವ ಸ್ವರ್ಗಲೋಕಕೆ
ಯೆಬ್ಬಿಸುವಂತೆ ರೋಮಗಳ
ಕಬ್ಬಿನಬಿಲ್ಲು ಜೇವೊಡೆದಂತೆ ಪಾಡಿದ
ರೊಬ್ಬೊಬ್ಬರಿಂಪು ನುಂಪಿನೊಳು ॥ ೧೭ ॥

ಉಂಚದೊಳಡಕದೊಳೊಡನುಂಚದೊಳು ಸಂಚು
ವಂಚನೆಯೊಳು ಸರಸದೊಳು
ಮಿಂಚು ಮಿಂಚುಗಳು ಪಳಂಚಿದಂತಮೃತವ
ಹಂಚುವಂತೊಲೆದು ಹಾಡಿದರು ॥ ೧೪ ॥

ಚುಂಚು ಚಂಚಲವಾಗಿ ಚುಮ್ಮು ಚುಮ್ಮನೆ ತಾಗಿ
ಹಿಂಚು ಮುಂಚಿನ ಸವಿತೂಗಿ
ಕಂಚುಮಿಂಚಾಗಿ ರಾಗಿಸಿದರು ವೈಗೆ ರೋ
ಮಾಂಚನ ಜುಮ್ಮನೇಳ್ಪಂತೆ ॥ ೧೯ ॥

ಇಂಚರವತ್ತಿತ್ತ ಜಾರದೆ ರಾಗದ
ಮಿಂಚು ಮಾಸದೆ ಸೊಬಗೆಯರು
ಪಂಚಗುರುಗಳ ಪಾಡಿದರು ಪಾತಕ ಹರಿ
ಹಂಚಾಗಿ ಹರಿದುಹೋಹಂತೆ ॥ ೨೦ ॥

ಹದಿನಾರು ಪಾತ್ರಗಳೊಂದೆ ಸಾಲಾಗಿಯೊ
ಡ್ಡಿದ ಕಾಂಡಪಟದ ಮುರೆಯೊಳು
ಇದೆಯಿದೆಯೀಗಾಗ ನೃಪನ ನೋಡುವೆವೆಂಬ
ಹೃದಯಲೀಲೆಯೊಳಿದ್ದ ರಾಗ ॥ ೨೧ ॥

ಎತ್ತಿದ ತೆರೆಯನು ಕೊರಳತನಕ ಮೆಲ್ಲ
ನೊತ್ತಿ ತಗ್ಗಿಸಿ ಕಾಣಿಸಿದರು
ಮತ್ತಕಾಶಿನಿಯರ ಮೊಗಗಳಿದ್ದುವು ಕಾಂತಿ
ವೆತ್ತ ಕನ್ನಡಿಯ ಸಾಲಂತೆ ॥ ೨೨ ॥

ನಡುಮುಟ್ಟಿ ತೆರೆಯಿದ್ದುದಾಗ ತೋಳ್ಗಳನೆತ್ತಿ
ಕಡೆಗಣ್ಣೊಳರಸನ ನೋಡಿ
ಬೆಡಗಿಂದ ಪುಷ್ಪಾಂಜಲಿ ಮಾಡಿದರು ಕಾಮ
ನೊಡನಲರ್ಗಣೆಗಳ ಸೂಸೆ ॥ ೨೩ ॥

ಕೂಡೆ ತೆರೆಯನೆತ್ತಿದರು ರೂಪು ಮರೆಯಾಯ್ತು
ಪಾಡಿದರುಂಚದೊಳೆತ್ತಿ
ನೀಡಗಲದ ಜವನಿಕೆ ತೊಲಗಿತು ಮತ್ತೆ
ಷೋಡಶಪಾತ್ರದೋರಿದುವು ॥ ೨೪ ॥

ಮಡ ಮಡಯಿದಿರಾಗಿ ತೊಡೆ ಕಾಸೆ ಪಸರಿಸೆ
ನಡುವಿನೊಳಿಟ್ಟು ಹಸ್ತಗಳ
ಕಡುಕೊಂಕಿದಂಗವಾಗಿಯು ಕಣ್ಗೆ ಸವಿಯ ಸಾ
ಲಿಡೆ ನಿಲುಕಡೆಯ ತೋರಿದರು ॥ ೨೫ ॥

ಮುತ್ತಿನ ಬೊಟ್ಟು ಮುತ್ತಿನ ಸರ ತುರುಬಿನ
ಮುತ್ತಿನ ಬಲೆ ಮುತ್ತಿನೋಲೆ
ತತ್ತಮೂಗುತಿಯಿಂದ ಮೊಗಗಳಿದ್ದುವು ತಾರೆ
ಮುತ್ತಿದ ಬಹು ಚಂದ್ರರಂತೆ ॥ ೨೬ ॥

ಜವ್ವನ ಜವ್ವನಕೊಪ್ಪುವಲಂಕಾರ
ಜವ್ವರಿಸುವ ಹಾವ ಭಾವ
ಕವ್ವರಿಸುವ ಕಾಂತಿ ರಸದಿಂದ ನೃಪನ ಕ
ಣ್ಣವ್ವಳಿಸುವವೋಲೆಸೆದರು ॥ ೨೭ ॥

ಬೇರೆ ಬೇರೊಂದೊಂದು ಪರಿಯ ಸಿಂಗರದಿಂದ
ನೀರೆಯರೆಸೆದರಾ ನೃಪಗೆ
ಆರು ಖಂಡಗಳೇಕೆಯೀ ಪಾತ್ರದ ಹದಿ
ನಾರು ಖಂಡವೆ ಸಾಲ್ವುದೆನಿಸಿ ॥ ೨೮ ॥

ಕಾಲು ಕದಲಿ ಮೆಲ್ಲನೊಲೆದು ನಡೆದರು ತಂ
ಗಾಳಿಗೊಲೆವ ಲತೆಯಂತೆ
ಸಾಲುಗೊಂಡುದ ಬಿಟ್ಟು ಬಟ್ಟತಾದರು ಕಮ್ಮ
ಗೋಲನ ಚಕ್ರದಂದದೊಳು ॥ ೨೯ ॥

ಸುಳಿಯಳಿದೊಂದು ಸಾಲಾದರು ಮತ್ತೆ ಭೂ
ತಳಪತಿಗಿದಿರಾಗಿ ಕೂಡೆ
ಫಳಿಲನೆ ಹದಿನೈದು ಪಾತ್ರ ಪೋದುವು ಹಿಂದ
ಕುಳಿದುದು ಮುಂದೊಂದು ಪಾತ್ರ ॥ ೩೦ ॥

ಮಂಗಲವತಿಯೆಂಬ ಪಾತ್ರದಂಗನೆ ನಾಟ್ಯ
ರಂಗದೊಳೊಲೆದಾಡಿ ನೃಪನ
ಕಂಗಳಿಗಿಚ್ಛೆಯಹಂತೆ ನಟಿಸುತಿರ್ದ
ಳಂಗವರಿದು ಭಾವವರಿದು ॥ ೩೧ ॥

ನಿಲ್ಪಳು ಗಾನವ ಕೇಳುತ ಧ್ಯಾನಕೆ
ನಿಲ್ಪ ಯೋಗಿಯ ನೆನೆಯಿಸುತ
ಸಲ್ಪಳು ಚಳಚಳನೆಡಬಲಕಂಗಜ
ನೊಲ್ಪ ಖಡ್ಗವ ಜಡಿವಂತೆ ॥ ೩೨ ॥

ಮಾರನಭಾಗ್ಯವೊಂಮಾರೆಂದು ತೋರ್ಪಂತೆ
ನಾರಿ ಭುಜಗಳ ನೀಡುವಳು
ಸಾರಿಸುತ್ತುವಳರಸನ ಕಂಡ ಕಣ್ಮೊಳ
ಲೀ ರೀತಿಯೆಂದು ತೋರ್ಪಂತೆ ॥ ೩೩ ॥

ಉಪ್ಪರಿಸುವಳೂರ್ಧ್ವಲೋಕಕೆ ಹೋಹಂತೆ
ಬಪ್ಪಳು ದಿವಿಜೆ ಬಹಂತೆ
ದೊಪ್ಪುದೊಪ್ಪನೆ ಪಜ್ಜೆಯಿಡುವಳು ದುಗುಡವ
ಸೊಪ್ಪುಸೊಪ್ಪನೆ ತುಳಿವಂತೆ ॥ ೩೪ ॥

ಕಿರುನಗೆವೆರಸಿ ರಾಯನ ನೋಡುವಳು ಕಣ್ಣ
ಬರನೆಲ್ಲ ಬರತುಹೋಹಂತೆ
ಹೊರಚಾರಿ ವೊಳಚಾರಿಯೊಳು ಬಂದಳಾಸರ
ಪೊರಮಡಿಪೊಲು ಮನೆಯಿಂದ ॥ ೩೫ ॥

ಮೊಗದಲ್ಲಿ ಹಾವ ಮನಸಿನಲ್ಲಿ ಭಾವ ಪು
ರ್ಬುಗಳಲ್ಲಿ ವಿಭ್ರಮ ಮತ್ತೆ
ಬಗಸೆಗಣ್ಗಳೊಳು ವಿಲಾಸವೆಸೆಯೆ ರಸ
ವೊಗುವಂತೆ ಪಾತ್ರವಾಡಿದಳು ॥ ೩೬ ॥

ಘುಳಿಘುಳಿಸುವ ತಾಳ ಡೌಡೆಯಾವುಜಕೆ ಮ
ದ್ದಳೆ ಚಿನುಚಂಪೆಯ ಧ್ವನಿಗೆ
ಮೊಳಗಿನ ಧ್ವನಿಗೆ ಕುಣಿವ ಸೋಗೆನವಿಲಂತೆ
ನಲಿದು ನರ್ತಿಸಿದಳಾ ನೀರೆ ॥ ೩೭ ॥

ಕಿನ್ನರಿ ದಂಡಿಗೆ ತಿತ್ತಿ ಕೊಳಲು ಭಿನ್ನ
ಭಿನ್ನರುಚಿಯ ಗಾನರಸಕೆ
ಚೆನ್ನ ಚೆನ್ನನೆ ನಾಗಸರಕೆ ನರ್ತಿಪ ನಾಗ
ಕನ್ನೆಯಂತಾಡಿದಳವಳು ॥ ೩೮ ॥

ಜಂಗಮಲತೆಯಂತೆ ಜಾತಿರೀತಿಯೊಳು ನಾ
ಟ್ಯಾಂಗದ ನಟಣೆಗಾಣಿಸುತ
ಮುಂಗಡೆಯೊಳಗಿದ್ದು ಹಿಂಗಡೆಗೊಲೆದಾಗ
ಮಂಗಲವತಿ ಹೋದಳತ್ತ ॥ ೩೯ ॥

[1]ಒರೋರ್ವ[1]ರಾಗಿ ಒಂದೊಮ್ಮೊಮ್ಮೆ ತಾವೆಲ್ಲ
ರುರ್ವಿಂದ ನಟಿಸಿದರಹುದು
ಒರ್ವಳು ಕೊಂಡುದನೊರ್ವಳು ಬೆರಸದ
ಪೂರ್ವನಾಟಕವ ತೋರಿದರು ॥ ೪೦ ॥

ಅರಸನ ಲಾವಣ್ಯ ಜಲಧಿಯೊಳಾ ಸತಿ
ಯರ ದಿಟ್ಟಿಮೀಂಗಳಾಡುವುವು
ತರುಣಿಯರಂಗಕಾಂತಿಯ ಹೊಳೆಗಳೊಳು ಭೂ
ವರನ ಕಣ್ಮಚ್ಚವಾಡುವುವು ೪೧ ॥

---

1. ಒರೋರ್ವ (ಕ) ಒರ್ವೊರ್ವ (ಖ) ಒರ್ವೊರ್ವ (ಚ.ಗ.)

ನೆಯ್ದಿಲಂದದ ಕಂಪು ನೆಯ್ದಿಲುವಣ್ಣ ಕ
ನ್ನೆಯ್ದಿಲುಗಣ್ಣ ಪೆಣ್ಣುಗಳು
ನೆಯ್ದಿಲುಗೊಳನೆದ್ದು ಕುಣಿವಂತೆ ಕೆಲಬರು
ಮೆಯ್ದೋರಿ ನೃತ್ಯವಾಡಿದರು ॥ ೪೨ ॥

ಮೊಗರಸದಿಂದ ಕಣ್ಬೆಳಗಿನ ಹೊಳೆಯಿಂದ
ನಗೆಯದೊಂದಮೃತಧಾರೆಯೊಳು
ಮೊಗೆಮೊಗೆದಭಿಷೇಕ ಮಾಡಿದರೊಲ್ದು ರಾ
ಯಗೆ ಜಲದೇವಿಯರಂತೆ ॥ ೪೩ ॥

ನಯನುಂಪುಮಿಗೆ ಜಲಕನ್ನಿಕಾ ನಾಟ್ಯಾತಿ
ಶಯವನಾ ಷಟ್ಪಂಡಪತಿಯ
ನಯನದಿದಿರೊಳಾಡುತಿದ್ದು ಸತಿಯರಾಗ
ಬಯಲಾದರಮರಿಯರಂತೆ ॥ ೪೪ ॥

ತಾಳಮೇಳವನನುಗೊಳಿಸಿ ಸಂಗೀತದ
ಬಾಲೆಯರಾಯೆಂದು ಕೂಡೆ
ಅಳಾಪದೆಗೆದರು ಕಾಂಬೋದಿರಾಗವ
ನಾಲಿಸಿ ನೃಪ ತಲೆದೂಗೆ ॥ ೪೫ ॥

ಪಾತ್ರವಾಡಿದ ಸತಿಯರಿಗೆ ತಂಪಹಂತೆ
ಧಾತ್ರೀಶಗಿಂಪಾಗುವಂತೆ
ಸೂತ್ರವ ತೆಗವಂತೆ ರಾಗವನೆತ್ತಿ ಪ
ವಿತ್ರಾತ್ಮಕಲೆಯ ಪಾಡಿದರು ॥ ೪೬ ॥

ಬೆಳಗಿನ ಬೊಂಬೆ ಬೆಳ್ದಿಂಗಳ ಬೊಂಬೆ ತಿಂ
ಗಳ ಬೊಂಬೆ ಜೊನ್ನದ ಬೊಂಬೆ
ತಿಳಿವಿನ ಬೊಂಬೆ ಬೋಧದ ಬೊಂಬೆಯೆಂದಾತ್ಮ
ಕಲೆಯ ಕನ್ನಡಿಸಿ ಹಾಡಿದರು ॥ ೪೭ ॥

ಹಂಸಕಲಾಂಭೋಜ ಹಂಸನೆನಿಪ ನೃಪ
ಹಂಸನ ಸಮ್ಮುಖದಲ್ಲಿ
ಹಂಸಮಂಡಳಿಯೆಂಬ ನಾಟ್ಯವ ತೊಡಗಿದ
ರೇಂ ಸೊಬಗಿಹುದೊಯಿನ್ನಲ್ಲಿ ॥ ೪೮ ॥

ಈರೆಂಟು ಪಾತ್ರಗಳೀರೆಂಟು ದಿಕ್ಕಿನೊ
ಳೋರಣವಿಡಿದಾಗ ನಿಂತು
ಆ ರಂಗವೆಂಬ ಪದ್ಮದ ಹದಿನಾರೆಸ
ಳೋರಗೆಯಾಗಿ ಮೆರೆದರು ॥ ೪೯ ॥

ಉಳಿಯಲಿನ್ನಾ ಮಾತು ನಾಟ್ಯಮಂಟಪವೆಂಬ
ಕೊಳದೊಳಿಸೆವ ಹದಿನಾರು
ಜಲಜಗಳೊಯೆನೆ ಬಳಸಿ ನಿಂದಿದ್ದರಾ
ಜಲಜಮುಖಿಯರು ಗಾಡಿಯೊಳು ॥ ೫೦ ॥

ಮಣಿಮಂಟಪವೆ ಕೊಳ ಸತಿಯರೆ ಕಮಲಗ
ಳೆಣಿಸೆ ರಾಯನೆ ರಾಜಹಂಸ
ಪ್ರಣುತ ಸಂಧ್ಯಾವಂದನೆಗೆ ಕುಳಿತೊಬ್ಬ ಬ್ರಾ
ಹ್ಮಣನೆನಲಿದ್ದನಾ ಮಂತ್ರಿ ॥ ೫೧ ॥

ಪೆಣ್ಣಂಚೆಗಳು ಕೊಳದೊಳು ಸುಳಿವಂತೆಳೆ
ವೆಣ್ಣುಗಳ ನೆಲದೊಳಗೆ
ಪಣ್ಣಿಪಣ್ಣಿಯೊಳು ಸುಳಿದು ಭರತೇಶಗೆ
ಕಣ್ಣಹಬ್ಬವ ಕಾಣಿಸಿದರು ॥ ೫೨ ॥

ಪಕ್ಕಿ ಪಕ್ಕಿಯ ಬಳಿವಿಡಿದು ಹೋಹಂತೆ ಸಾ
ಲಿಕ್ಕಿ ನಡೆವರೊಮ್ಮೆ ಕೂಡೆ
ದಿಕ್ಕು ದಿಕ್ಕಿಗೆ ಹರಿವಂತಗಲುವರಹೊ
ಚಿಕ್ಕನೊಂದಾಗುವರೊಡನೆ ॥ ೫೩ ॥

ಪಕ್ಕದಾಟವ ತೋರುವರು ಭುಜದೊಳು ಪಜ್ಜೆ
ಯಿಕ್ಕಿ ಕಾಲ್ನಡೆಯ ತೋರುವರು
ಕೊಕ್ಕಿನಾಟವ ಮುಕುಳಿತಹಸ್ತವನು ಕೊಕ್ಕಿ
ಗಿಕ್ಕಿ ತೋರ್ಪರು ಕುಶಲದೊಳು ॥ ೫೪ ॥

ನಳಿನದ ಮೇಲಿದ್ದ ಗಂಡುಪಕ್ಕಿಯ ನೀರೊ
ಳೊಲೆದಾಡುವಂಚೆವೆಣ್ಣುಗಳು
ಎಳಸಿ ನಿಟ್ಟಿಸುವಂತೆ ಗದ್ದುಗೆಯೇರಿದ್ದ
ಚೆಲುವನ ನೋಳ್ಪರೋಜೆಯೊಳು ॥ ೫೫ ॥

ಚಲಿಸದೆ ಪವನಾಭ್ಯಾಸದ ಬಲದಿಂದ
ನೆಲನ ಮುಟ್ಟದೆ ಗಗನದೊಳು
ಲಲನೆಯರೊಪ್ಪಚ್ಚಿ ಕುಳಿತು ಭೂಮಿಗೆ ಮೆಲ್ಲ
ನಿಳಿವರು ಕೂಡೆ ಜೋಕೆಯೊಳು ॥ ೫೬ ॥

ಕೊಳದಿಂದ ಕೊಳಗಳಿಗಂಚೆ ಹಾರುವವೊಲು
ಫಳಿಲನೆ ಮೇಲಕೆ ನೆಗೆದು
ಅಲುಗಿಸಿ ತೋಳ ಕಾಲ್ನೀಡಿ ನಾಲ್ಮಾರ ಬಾ
ನೊಳಗೆ ಬಹರು ಪಕ್ಕಿಯಂತೆ ॥ ೫೭ ॥

ಭೂಕಾಂತ ತಲೆದೂಗೆ ಮಂತ್ರಿ ವಿಸ್ಮಯಮಾಡ
ಲಾಕೆಗಳಿಳಿವಂಚೆಯಂತೆ
ಆಕಾಶದೊಳಗೆ ನಾಲ್ಕೆಂಟು ಮಾರೈತಂದು
ಜೋಕೆಯಿಂದಿಳಿವರು ಧರೆಗೆ ॥ ೫೮ ॥

ಹರುಷವೆದೆಯೊಳುಬ್ಬೆ ನಾಟ್ಯ ಸಾಕೆಂದು ಭೂ
ವರನು ಕೈಸನ್ನೆ ದೋರಿದನು
ಪುರುನಾಥ ಗೀತದೊಳೆಲ್ಲರು ನಮಿಸಿ ಹೋ
ಪುರೆಯನೆ ನಿಲಿಸಿದರೊಡನೆ ॥ ೫೯ ॥

ಬಳಿಕ ಮೊಗವ ನೋಡಿ ಬಳಲಿದ್ದೈ ಮಂತ್ರಿಯೆಂ
ದೊಳುನುಡಿಯಿಂದ ನುಡಿದನು
ಬಳಲಿಕೆ ಬಯಲಾಯ್ತು ಸ್ವಾಮಿ ನಿನ್ನೋಲಗ
ದೊಳಗೆಂದು ನುಡಿದನಾ ಮಂತ್ರಿ ॥ ೬೦ ॥

ನೀನೆಂತು ಜಾಣನಹುದು ನಿನ್ನ ಪಾತ್ರದ
ಮೀನಾಕ್ಷಿಯರು ಮರುಳವಮ್ಮಾ
ಈ ನುಂಪು ನೇವಣೆ ರೂಪುರೇಪೆಯ ಲಾಗ
ನೇನ ಸಾಧಿಸಿದರೊ ನೃಪತಿ ॥ ೬೧ ॥

ಮಿಂಚಿನ ಕೂಡೆ ಸಾಧಿಸಿದರೊ ತಂಗಾಳಿ
ಯಂಚಿನೊಳಾಡಿ ಕಲಿತರೊ
ಪಂಚಬಾಣನೊಳತಿ ಸರಿಮಿಗಿಲೆಂದು ಪ
ಳಂಚಿದಭ್ಯಾಸದಿಂದಾಯ್ತೊ ॥ ೬೨ ॥

ಗಿಳಿ ಬಿಳಿದಾದರೆ ಚೋದ್ಯವೆಂಬರು ಹಂಸೆ
ಬಿಳಿದಾಗೆ ಚೋದ್ಯವೆ ಜಗಕೆ
ಉಳಿದ ರಾಜರಿಗಿವು ಬರೆ ಚೋದ್ಯವಹುದು ನಿ
ನ್ನೊಳಗಿವು ಚೋದ್ಯವಲ್ಲೆಂದ ॥ ೬೩ ॥

ಏನಿದು ದೊಡ್ಡಿತ್ತೈ ಬುದ್ಧಿ ಸಾಗರ ಮರು
ನೀನಿದನೆತ್ತಿ ಕೀರ್ತಿಸುವೈ
ಸ್ವಾನುಭವದ ಸುಖದಿಂದಧಿಕವೆ ಪಾತ್ರ
ಗಾನ ಮುಂತಾದ ಸುಖಗಳು ॥ ೬೪ ॥

ಮುಕ್ತಿಯೆ ಸುಖವದರಂತರದಲ್ಲಿ ವಿ
ರಕ್ತಿಯೆ ಸುಖವದರಲ್ಲಿ
ವ್ಯಕ್ತಾತ್ಮಭಾವನೆ ಸುಖ ಮತ್ತೆ ವಿಷಯಸಂ
ಯುಕ್ತಿಯೇತರ ಸುಖವೆಂದ ॥ ೬೫ ॥

ಓಸರಿಸದೆ ಪುಣ್ಯ ತಂದಿತ್ತ ಸುಖವನು
ದಾಸೀನದಿಂದುಂಡು ಬಿಡುವ
ಭಾಸುರಾತ್ಮಾನುಭಾವದೊಳಿರುತಿಹೆನೆಂದು
ಭೂಸುದತೀಶ ನುಡಿದನು ॥ ೬೬ ॥

ನಯಕಾರ ಹೋದನು ನೇಳಸಹಿತ ಮತ್ತೆ
ಪ್ರಿಯಗಾನಸತಿಯರೈದಿದರು
ನಿಯಮಿಸಿ ರಾತ್ರೆ ಪನ್ನೆರಡು ಘಳಿಗೆ ಸಂದು
ಜಯಘಂಟೆ ಠೊಣ್ಣೆಂದುದಾಗ ॥ ೬೭ ॥

ಅತ್ತಲನ್ಯರು ಹೋದರಿತ್ತ ತನ್ನವರಿದ್ದ
ರುತ್ತುಂಗನೃಪತಿ ಮನ್ನಣೆಯ
ಇತ್ತು ಪಾತ್ರಗಳ ಮನ್ನಿಪೆನೆಂದು ನೆನೆದನಿ
ದುತ್ತರನಾಟಕ ಸಂಧಿ ॥ ೬೮ ॥

ತಾಂಡವ ವಿನಯ ಸಂಧಿ

ತೂರಿದಂತನ್ಯರು ಹೋಗಲೊಡನೆ ಮರೆ
ಗೇರಿದ್ದ ನೀಟದ ತೆರೆಯ
ಹಾರ ನೂಂಕಿದರು ರಾಣಿಯರೆಲ್ಲ ಪ್ರತ್ಯಕ್ಷ
ದೋರಿದರರಸಗೇನೆಂಬೆ ॥ ೧ ॥

ಬಗೆಬಗೆಯರಿದು ಸಿಂಗರಿಸಿದ ಸಿಂಗಾರ
ಮಗಮಗಿಸುವ ಕಂಪು ನುಂಪು
ನಗೆಮೊಗದರಸಿಯರೆಲ್ಲರು ಕುಳಿತಿದ್ದ
ರೊಗುಮಿಗೆ ತಿಂತಿಣಿಯಾಗಿ ॥ ೨ ॥

ನೃಪನೆಡಬಲಕೆ ಹಿಂಗಡೆಗೆ ಮುರಿದು ನೋಡಿ
ಚಪಲಾಕ್ಷಿಯರಿಗಿಷ್ಟು ಹೊತ್ತು
ಉಪಸರ್ಗವಾಗಿದ್ದುದಲ್ಲ ತೆರೆಯೊಳಿಂದು
ಉಪಚಾರವಾಕ್ಯದೋರಿದನು ॥ ೩ ॥

ಬಳಲಿದರಾ ಪಾತ್ರಸತಿಯರ ಕರೆದು ಭೂ
ತಳನಾಥ ಮುನ್ನಿನೆಂದೊಸೆದು
ಕಳಕಂಠವಾಣಿಯರುಸುರಿದರದಕೆ ನಿ
ರ್ಮಳಚಿತ್ತ ತಾನೊಡಂಬಟ್ಟ ॥ ೪ ॥

ಬನ್ನಿರೌ ಪಾತ್ರಕಾಂತೆಯರಿರಯೆಂದಾಗ
ತನ್ನ ಬಾಯಾರೆ ತಾ ಕರೆದ
ಸನ್ನಿಧಿಗಾನಂದ ಮಿಗೆ ಬಂದು ನಿಂದರು
ಚೆನ್ನೆಯರರಸನ ಮುಂದೆ ॥ ೫ ॥

ಕೆಡಿಗೆದರುವ ಬಾಯಿ ಮಿಂಚೇಳ್ವ ಕಣ್ಣಿಸು
ಮಿಡಿವಳ್ಳಿ ನಸುಹೆಚ್ಚಿದುಸುರು
ಬಿಡುಪಟ್ಟ ನೊಸಲ ನುಣ್ಗುರುಳ ಸಾಲಿಂದೊಂದು
ಬೆಡಗಾಗಿ ನಿಂದಿರ್ದರಾಗ ॥ ೬ ॥

ಓಸರಿಸುತ ಮೈಯ ನೃಪನ ಮೊಗವ ನಗೆ
ಸೂಸಿ ನೋಡುತ ನಟಣೆಯೊಳು
ಕಾಸೆಯ ಸೆರಗಿಂದ ಬೆಮರ ತೊಡೆವುತೊಂದು
ದೇಸಿಯೊಳ್ನಿಂದಿದ್ದರಾಗ ॥ ೭ ॥

ಹೊಳೆಹೊಳೆದರಸನಾ ಸತಿಯರೆ ಮೊಗದಿಂದ
ತಳಪಾದದೆಡಮುಟ್ಟ ನೋಡಿ
ಎಳಿನಗೆ ಮಿನುಗೆ ನುಡಿದನೊಲ್ದು ಗಂಡುಗೋ
ಗಿಲೆಯ ಬಾಯ್ದೆರೆಯ ಜಕ್ಕುಲಿಸಿ ॥ ೮ ॥

ಭಾಪು ಪ್ರಚಂಡೆಯರಿರ ನೋಡಲಿಂದು ಮ
ಹಾಪಟುವೆನೆ ನಟಸಿದಿರಿ
ಶ್ರೀಪುರುಪರಮೇಶನಾಣೆ ಚೆನ್ನಾಯ್ತು ಮ
ಹಾಪರಿಣಾಮವಾಯ್ತೆನಗೆ ॥ ೯ ॥

ಲೇಸನಾಡಿದಿರಿ ಲೇಸನೆ ನುಡಿದಿರಿ ನಿಮ್ಮ
ಲಾಸಿಕೆಗಾನು ಮೆಚ್ಚಿದೆನು
ಬೇಸರವಿಲ್ಲದೆ ಬೇಡಿ ನಿಮ್ಮಿಚ್ಛೆಯ
ಮಾಸದೆ ಕೊಡುವೆ ನಾನೆಂದ ॥ ೧೦ ॥

ಇವಳ ಕೇಳವಳ ಕೇಳೀಕೆಗೇನಾಕೆಗೇ
ನವಗತ ಕಾಂಕ್ಷೆಯುಂಟಿನುತ
ತವೆಹದಿನಾರು ಪಾತ್ರವ ನೋಡುವಾಗಿಬ್ಬ
ರವರೊಳಗಿಲ್ಲ ವಿಚಿತ್ರ ॥ ೧೧ ॥

ರೂಪಾಣಿ ಪದ್ಮಿನಿಯೆಂದೆಂಬರಿರ್ವರು
ಭೂಪಾಲನೊಡನಿಷ್ಟು ಮುನಿದು
ಕೋಪದಿಂದೊತ್ತಿಗೆ ಬಾರದೆ ದೂರದೊ
ಳಾ ಪೆಂಗಳಿದ್ದರೇನೆಂಬೆ ॥ ೧೨ ॥

ತಮ್ಮ ನೃತ್ಯವ ನೋಡುತರಸ ವೀಳೆಯಕೊಮ್ಮೆ
ಹೆಮ್ಮಕ್ಕಳತ್ತೊಲಿದೊಮ್ಮೆ
ಒಮ್ಮೊಮ್ಮೆ ಮಂತ್ರಿಯತ್ತೊಲೆದು ನೋಡಿದರದ
ಕುಮ್ಮಳವಟ್ಟಗಲಿದರು ॥ ೧೩ ॥

ನೋಡುತ ತಾವೊಬ್ಬರೊಬ್ಬರು ನಗದೆ ಮಾ
ತಾಡದೆ ಕಂಭವ ನೆಮ್ಮಿ
ಜೋಡುಪುತ್ತಳಿಯಂತೆ ನಿಂದಿದ್ದ ಚಿಂತೆಯ
ಗಾಢವ ಕಂಡನಾ ರಾಯ ॥ ೧೪ ॥

ಕರೆ ಕರೆ ತಾವಿಬ್ಬರೇಕತ್ತ ನಿಂದರೆಂ
ದರಸ ಸೇವಕಿಯರ ಕಳುಹೆ
ಬರಲಟ್ಟಿದನು ಸ್ವಾಮಿ ನಿಮ್ಮನೆಂದವ ರೈದಿ
ಕರೆದರಾ ಪಾತ್ರಕಾಂತೆಯರ ॥ ೧೫ ॥

ಹೋಗಿರೌ ನಿಮ್ಮ ಸ್ವಾಮಿಯ ದೃಷ್ಟಿಗಳಿಗೆಮ್ಮ
ಲಾಗುನರ್ತನ ಬಂದುದಿಲ್ಲ
ಆಗುಗೆಟ್ಟವರನು ಕರೆಯಲೇಕೆಂದು ಭೂ
ಭಾಗೇಂದ್ರ ಕೇಳೆ ನುಡಿದರು ॥ ೧೬ ॥

ಎಡ್ಡವಲ್ಲಲ್ಲ ನಮ್ಮಾಟ ನಿಮ್ಮೊಡೆಯಗಿಂ
ದಡ್ಡಮೋರೆಯೆ ಪಿರಿದಾಗಿ
ಹೆಡ್ಡವೆಂಗಳ ನೃತ್ಯವೇನೆಂದು ಮಂತ್ರಿಯ
ಗಡ್ಡವೊಂದನೆ ನೋಡುತಿದ್ದ ॥ ೧೭ ॥

ನಸ್ಸಿಂದ ನೋವಾದುದವರಿಗೆಂದಾಗ ನೃ
ಪೋನ್ನತ ನೆನೆದನೆದೆಯೊಳು
ಇನ್ನಿವರನು ತಿಳುಪುವ ಬಗೆಯಾವುದೆಂ
ದುನ್ನಿಸಿ ನುಡಿದನು ಮತ್ತೆ ॥ ೧೮ ॥

ರೂಪಾಣೆ ಬಾರೆಲೆ ಪದ್ಮಿನಿ ಬಾರೌ ಸ
ಮೀಪಕೆ ನಿಮ್ಮ ಮನಸಿನ
ತಾಪವ ಕೆಡಿಸುವೆನೆಂದು ಗದ್ದುಗೆಯೊಳಿ
ದ್ದಾ ಪೂರ್ವಚಕ್ರಿ ಕರೆದನು ॥ ೧೯ ॥

ಕಣ್ಣಿಚ್ಚೆಯಾದಲ್ಲಿ ಮನಕಿಚ್ಚೆಯಹುದೈಸೆ
ಕಣ್ಣಿಚ್ಚೆಯಲ್ಲದ ನಮ್ಮ
ಬಣ್ಣಗಾರಿಕೆಗೀಗ ಕರೆವುದೇತಕೆಯೆಂದು
ಹೆಣ್ಣುಗಳ್ನೊಂದು ನುಡಿದರು ॥ ೨೦ ॥

ಕೇಳಿರೌ ನಿಮ್ಮ ನೃತ್ಯವ ನೋಡುವಾಗ ನಾ
ನಾಲಸ್ಯವಡೆದವನಲ್ಲ
ವೀಳೆಯಗೊಳಲೊಮ್ಮೆ ನೊಗದಿರುಹಿದರಿಂತು
ತಾಳಬಹುದೆ ನೋವ ನೀವು ॥ ೨೧ ॥

ನುಡಿಯಿಂದ ನಮ್ಮ ಚಾಳಿಸಬೇಡ ರಾಯ ನಿ
ನ್ನೊಡನಾಡಿದವರೆಸೆ ನಾವು
ಬಿಡು ಬಿಡು ರಚನೆಯ ನಮ್ಮ ಪಾತ್ರವ ಮೊದ
ಲಿಡಹಿಬಿಟ್ಟೀಗ ವರ್ಣಿಪೆಯ ॥ ೨೨ ॥

ಬೇಡವೌ ನೀವೆನ್ನ ಮೇಲಿಷ್ಟು ಕೋಪವ
ಮಾಡುವುದಕೆ ನಾನು ನಿವಗೆ
ಮಾಡಿದ ದೋಷವಿಲ್ಲಕಟ ಬರಿದೆ ನಮ್ಮ
ಕಾಡುವುದುಚಿತವೆಯೆಂದ ॥ ೨೩ ॥

ಎಲ್ಲೆ ಕಲಿತೆ ಯೆದೆಯೊಳಗೆ ಕಠಿಣ ನುಡಿ
ಯಲ್ಲಿ ಮೃದುವ ತೋರ್ಪ ಗದಕ
ಕಲ್ಲ ಕರಗಿಸುವೆ ನುಡಿಯಿಂದ ನೀನದ
ಬಲ್ಲೆವು ಸಾಕು ಸುಮ್ಮನಿರು ॥ ೨೪ ॥

ನೊಂದಿರಹುದು ನೋಯಿಸಿದೆನಹುದಹುದಿನ್ನು
ನೊಂದ ನೋವನು ತೊಲಗಿಪೆನು
ಮುಂದೊತ್ತಿ ಬನ್ನಿ ನೀವೇನ ಬೇಡಿದರೀವೆ
ನೆಂದು ಕರೆದನವನೀಶ ॥ ೨೫ ॥

ಗುಣವೆ ಭೂಷಣವಭಿಮಾನವೆ ವಸ್ತ್ರವೆಂ
ದೆಣಿಸಿ ಕೈವಿಡಿದಿಹೆವೆಮಗೆ
ಬಣಗುಮೊಡಿಗೆಯಾಸೆದೋರಬೇಡೆಂದು ವೊ
ಕ್ಕಣಿಸಿ ದೂರದೊಳಿದ್ದರವರು ॥ ೨೬ ॥

ಚಂದನವತಿ ಹೋಗು ಮಂಗಲವತಿ ಹೋಗು
ನೊಂದ ಪೆಂಗಳ ಕರೆತನ್ನಿ
ಇಂದಿನ ನೋವ ಮರೆಯಲಿನ್ನು ಮುಂದೆ ನೀ
ವೆಂದಂತೆ ನಡಿಸುವೆನೆಂದ ॥ ೨೭ ॥

ತಂಗಿಯರಿರ ಬನ್ನಿ ದೊರೆಯೊಮ್ಮೆ ದೈನ್ಯರ
ಸಂಗಳ ತೋರಿ ಕರೆದರೆ
ಹಿಂಗಿಸಬೇಕು ಕೋಪವನೆಂದು ರಾಜನೃ
ತ್ಯಾಂಗನಾಗುಣವ ಪೇಳಿದರು ॥ ೨೮ ॥

ಆ ಗುಣ ನಿವಗಹುದಕ್ಕ ನವಗೆ ಕೋಪ
ಹೋಗದು ಹೋಗಿ ನೀವೆಮ್ಮ
ಮೇಗೆ ನೋಯದಿರಿ ಹಿರಿಯರೆಂದು ಕೈಮುಗಿ
ದಾಗಳೆ ಕಳುಹಿದರವರ ॥ ೨೯ ॥

ಮತ್ತೆ ಚಂದ್ರಾಣಿ ಮಂದ್ರಾಣಿಯರೈತಂದು
ಬಿತ್ತೈಗರೊಡೆಯನನಿನ್ನು
ಒತ್ತಲಾಗದು ಸಾಕು ಬನ್ನಿ ಪೆಂಗಳಿರೆಂದು
ಮೆತ್ತನೆ ನುಡಿದು ಕರೆದರು ॥ ೩೦ ॥

ಅದಕು ಬಾರರು ಕೂಡೆ ರಾಣಿಯರೆಲ್ಲರು
ಕೆದರಿ ಕೆಕ್ಕಳಿಸಿ ತಮ್ಮೊಳಗೆ
ಮುದನುಮುವಿಷ್ಟೇಕೆ ಪಾತ್ರಕಾಂತೆಯರಿಗೆಂ
ದಿದಿರಾಗಳೆ ಕೋಪಿಸಿದರು ॥ ೩೧ ॥

ಸ್ವಾಮಿ ವಿನಯದೋರಿ ಕರೆವುದೆತ್ತಕಟ ತಾ
ವೀ ಮುನಿಸನೆ ಮುಂದೆ ಮಾಡಿ
ಕ್ಷೇಮಗೆಡಿಸಿ ಕಾಡುತಿಹುದೆತ್ತ ಸಲುವುದೆ
ಕೋಮಲೆಯರಿಗೆಂದರವರು ॥ ೩೨ ॥

ಅಷ್ಟರೊಳಂಜಿ ರೂಪಾಣಿಯೆಲ್ಲರ ಕೂಡೆ
ಕಷ್ಟವೇಕೆಂದು ತಾ ತಿಳಿದು
ಇಷ್ಟರ ನುಡಿಗೇಳಬೇಕೆಂದು ಬಂದಳ
ಭೀಷ್ಟಾರ್ಥದರಸನ ಬಳಿಗೆ ॥ ೩೩ ॥

ಪಾದಕೆರಗಿದ ನಲ್ಲಳ ಪಿಡಿದೆತ್ತಿ ಲೀ
ಲೋದಯನಮರ್ದಪ್ಪಿಕೊಂಡು
ಕಾದಲೆ ನಿನ್ನನೋಯಿಸಿದೆನಹುದು ಮರೆ
ಯಾ ದೊಡ್ಡನೋವ ನೀನೆಂದ ॥ ೩೪ ॥

ಏಕೆ ನಿಂದಳು ಮತ್ತೆ ಪದ್ಮಿನಿ ಬಾರದೆ
ಹಾ ಕಷ್ಟಗುಣವ ಕಲಿತಳು
ಸಾಕಿನ್ನು ಬಾರೆಗೆ ಹೆಣ್ಣೆಯೆಂದರಸಿಯ
ರಾಕೆಗೆ ಸನ್ನೆ ದೋರಿದರು ॥ ೩೫ ॥

ಪೊಲ್ಲದ ಗುಣದವಳಾಗಿತ್ತಲಿಹೆನು ನೀ
ವಲ್ಲಿರಿ ಸಾಕು ನಿಮ್ಮಾಟ
ಎಲ್ಲರೊಂದಾಗಿ ಕೊಂಡೊಬ್ಬಳ ಜಡಿವಿರಿ
ನಲ್ಲಗೆ ಹಿತವಾಗಿಯಕಟ ॥ ೩೬ ॥

ಅರಸನುದಾಸೀನಗೈದರೇನೊತ್ತಿನ
ತರುಣಿಯರೆನ್ನವರೆಂದು
ಹಿರಿದು ನಂಬಿದ್ದೆನು ನೀವು ನಿಮ್ಮರಸನ
ಪರಿಯಾದಿರಕ್ಕ ಚೆನ್ನಾಯ್ತು ॥ ೩೭ ॥

ಎಳೆಯೆಂಬ ರಾಯಗೆ ತುಳಿಯೆಂಬ ಮಂತ್ರಿಯೆಂ
ದಿಳೆಯೊಳಾಡುವ ಗಾದೆಯಿಂದು
ಫಲಿಸಿದುದಕ್ಕ ಚೆನ್ನಾಯ್ತು ಚೆನ್ನಾಯ್ತೆಂದು
ಒಲೆಮೊಲೆದಾಡಿ ನುಡಿದಳು ॥ ೩೮ ॥

ಕಡಲನೊತ್ತದೆ ಕಡಲುದಕವ ತುಂಬುವ
ಕೊಡನನೊತ್ತುವರಂತೆ ನೀವು
ಕಡುದೊಡ್ಡ ನೃಪನನೊತ್ತದೆ ನನ್ನನೊತ್ತುವ
ಬೆಡಗು ಲೇಸೆಂದಳಾ ಜಾಣೆ ॥ ೩೯ ॥

ಇವಳಿಗೆನ್ನೊಡನಿನ್ನು ಪ್ರಣಯಕಲಹ ಮಾ
ಡುವ ರುಚಿಯುಂಟೆಂದು ನೆನೆದು
ಯುವತಿಯರಿರ ನೀವು ನಿಲ್ಲಿ ನಾವವಳ ಶಾಂ
ತವ ಮಾಳ್ಪೆವೆಂದನಾ ರಾಯ ॥ ೪೦ ॥

ಎಲಗೆ ಪದ್ಮಿನಿ ನೀವಿಬ್ಬರೊಳಗೊಬ್ಬಳು
ವೊಳಗಾದಮೇಲೆ ನೀನಿನ್ನು
ಛಲವ ಮಾಳ್ಪುದು ಸಲ್ಲ ಬೇಡ ಕಾಣಗೆ ಪಂಥ
ನಿಲಲರಿಯದು ನಿನಗೆಂದ ॥ ೪೧ ॥

ಅಳ್ಳೆದೆಯವಳು ರೂಪಾಣಿಯೊಬ್ಬಳು ಲಜ್ಜೆ
ಯಿಲ್ಲದೆ ನಿನಗೆರಗಿದಳು
ಡಿಳ್ಳುಹೋಹಳೆ ಭಾವು ಪದ್ಮಿನಿ ನೀ ನೋಡ
ಲಿಲ್ಲವೆಯೆಂದಳಾ ಧೀರೆ ॥ ೪೨ ॥

ಲೇಸಿಗೆ ಕಾಲಿಗೆರಗಬಹುದರಸ ವು
ದಾಸೀನಕಾರೆರಗುವರು
ಕಾಸೆಯಲ್ಲವೆ ನಾನು ಕಟ್ಟಿದುದೀ ರಾಣಿ
ವಾಸ ನೋಡಲಿ ನೀನು ನೋಡು ॥ ೪೩ ॥

ಅಷ್ಟುಂಟೆ ನಿನಗೆ ಮನೋಧೈರ್ಯವುಂಟುಂಟು
ದೃಷ್ಟಿಸಿನೋಡಿ ಮಾತಾಡು
ಭ್ರಷ್ಟರಂತಡ್ಡಮೋರೆಯೊಳೀಕೆ ನುಡಿವೆ[1]ವು[1]
ತ್ಕೃಷ್ಟ ಧೀರೆಯೆಯೆಂದನೊಡನೆ ॥ ೪೪ ॥

ನೋಡಿದರೇನು ಮೊಗವನೆಂದು ದುಗುಡವ
ಕೂಡಿಕೊಂಡೊಲೆದು ನೋಡಿದಳು
ಓಡಿತು ದುಗುಡ ಮೂಡಿತು ನಗೆ ನಗುತಾಕೆ
ಕೂಡೆ ಬಾಗಿದಳು ಮಸ್ತಕವ ॥ ೪೫ ॥

ಸಿಲ್ಲೆಂದು ಧೈರ್ಯವ ಬಲಿದು ಹಿಡಿವಳದು
ಸಿಲ್ಲದೆ ಜರಿದೋಡುತಿಹುದು
ಒಲ್ಲೆ ಹೋಗೆಂದು ಕಾಕರವ ನೂಂಕುವಳದು
ಕೊಲ್ಲುತಿಹುದು ಮೈಗೆ ಹಬ್ಬಿ ॥ ೪೬ ॥

ಇನ್ನು ಪಂಥವೆ ಪದ್ಮಿ ನಿನಗೆಂದನೀತನ
ನಿನ್ನೆಂತು ಜಯಿಸುವೆನೆಂದು
ಚೆನ್ನೆಯೋಚಿಸಿ ಬಗೆಗಾಣದೆ ತಲೆಯೆತ್ತಿ
ಚೆನ್ನಾಗಿ ನಗುತ ನುಡಿದಳು ॥ ೪೭ ॥

---

1 ಯು (ಖ) ಉ (ಕ) ಯೂ (ಚ) ವು (ಛ, ಗ)

ಎಲೆ ಮಾಯಕಾರ ನಿನ್ನಾಸ್ಯವ ಕಂಡರೆ
ದಳವೇರುತಿದೆ ನಗೆ ನನಗೆ
ತಲೆ ಕುಸಿದರೆ ನಮಿಸಿದಳೆಂಬೆ ಯಿದನಿನ್ನು
ಗೆಲುವಂದವೆಂತೆಂದಳವಳು ॥ ೪೮ ॥

ನಿಂದಳು ತಲೆವಾಗಿ ಮೌನದೊಳಾಕೆ ಮ
ತ್ತೊಂದು ತಂತ್ರವನು ಚಿಂತಿಸುತ
ನಿಂದೆಯಾದರೆ ಪದ್ಮಿ ನಿನ್ನಾಣೆ ನಡೆದು ಬಾ
ರೆಂದನಾ ರಸಿಕರ ದೇವ ॥ ೪೯ ॥

ಆಣೆಯ ಮೀರದೆ ಹತ್ತು ಹಜ್ಜೆಯ ನಡೆ
ದೇಣಲೋಚನೆ ನಿಂದಳಲ್ಲಿ
ಚೂಣಿವರಿವ ಕಡೆಗಣ್ಣಿಂದ ನೋಡುತ
ಪ್ರಾಣೇಶನೊಡನೆ ನುಡಿದಳು ॥ ೫೦ ॥

ಜಾಣಿಂದ ಜಯಿಸಲಾರದೆ ನೋಡು ತಾನು ತ
ನ್ನಾಣೆಯಿಟ್ಟಿನ್ನ ಕರೆವನು
ಮಾಣಿನ್ನು ಕರೆಯದಿರೆಂದಲ್ಲಿ ನಿಂದಳು
ಮಾಣಿಕ ಬೊಂಬೆಯಂದದೊಳು ॥ ೫೧ ॥

ತಾಳ ಮದ್ದಳೆಯಿಲ್ಲ ಕಡೆಸೂತ್ರ ಕಂಕಣ
ಕಾಲಂದುಗೆಗಳ ನಾದದೊಳು
ಜಾಲುಚಾಲನೆ ನಡೆದಾಡಿ ನರ್ತಿಸಿದ ನಿ
ನ್ನೀ ಲಾಸ್ಯ ಸೊಬಗಾದುದೆಂದ ॥ ೫೨ ॥

ನಗುವಳು ತಲೆವಾಗುವಳು ನೋಡುವಳು ಮೋರೆ
ದೆಗೆವಳು ಮನದೊಳುಬ್ಬುವಳು
ದುಗುಡಕೋಳಾಹಳ ದುರ್ಗಕೋಳಾಹಳ
ಪಗೆಕೋಳಾಹಳನ ಮುಂದವಳು ॥ ೫೩ ॥

ರಾಣಿಯರುಗಳ ಸಂಧಾನದೊಳಗೆ ಬಂದು
ಕ್ಷೋಣೀಶನಡಿಗೆರಗಿದಳು
ಕಾಣಲೊಡನೆ ರಾಯ ಮುಸುಕಿಕ್ಕಿಕೊಂಡನು
ಪ್ರಾಣಕಾಂತೆಯರು ಚಪ್ಪಳಿಸೆ ॥ ೫೪ ॥

ಆಣೆಯ ಮೀರಿದಳವಳ ಕಾಣಿಸಿಕೊಂಡ
ರೂಣೆಯವಹುದೆನಗೆಂದ
ಆಣೆಗೆ ತಡೆದುದಿಲ್ಲವಳು ನಡೆದಳೆಂದು
ಕಾಣಿಸಿ ಬಿನ್ನವಿಸಿದರು ॥ ೫೫ ॥

ಎತ್ತ ನಡೆದಳವಳಿಡಬಲಕೊಲೆದಳೆ
ನ್ನತ್ತ ಬಂದುತಾಯ್ತೆ ನಿಮ್ಮ
ಶತ್ರುಗಾರಿಕೆಯ ಬಲ್ಲೆನು ಸುಮ್ಮನಿರಿಯೆಂದು
ಒತ್ತಿ ನುಡಿದನು ರಾಣಿಯರ ॥ ೫೬ ॥

ಭೂಧವ ತೆಗೆ ನಿನ್ನ ವ.ಸುಕಸಿವಳೊಳಪ
ರಾಧವ ತೆರಿಸಿ ಕೊಡುವೆವು
ಈ ಧೂರ್ತಗಾಗಿ ಮುಸುಕನಿಕ್ಕಬೇಕೆಯೆಂ
ದಾ ದೊರೆಯೊಡನೆ ನುಡಿದರು ॥ ೫೭ ॥

ತಪ್ಪೇನ ಕೊಡಿಸುವಿರೆಂದನವಳ ನಿನ
ಗೊಪ್ಪಿಸುವೆವು ನಿನ್ನ ಮನಕೆ
ಒಪ್ಪಂತೆ ಮಾಡಿಕೊಳ್ಳಿಂದರಾ ನುಡಿಗೆ ನಾ
ನೊಪ್ಪೆನೋಜೆಯೊಳಾಡಿರೆಂದ ॥ ೫೮ ॥

ಪುರುಷಗೆ ತಪ್ಪುಮಾಡಿದ ಕಾಂತೆ ತಾನು ತ
ನ್ನರಸಿತನದ ಹಮ್ಮು ಬಿಟ್ಟು
ಪರಿವಾರ ಸತಿಯಂತೆ ಕಾಳಂಜಿವಿಡಿದಾಗ
ಪರಿಹಾರವೆಂದು ತಿದ್ದಿದರು ॥ ೫೯ ॥

ಅಹುದೆಯಾದರೆ ಇಷ್ಟು ಸೈರಿಸಿರೆಂದು ಸಂ
ಗ್ರಹಿಸಿದ ಮುಸುಕಿನೊಳಿದ್ದು
ಅಹಹ ಮತ್ತೊಂದು ವಿಸ್ಮಯವ ತೊಡಗಿದನಾ
ಸಹಸಿಗಳರಸನೇನೆಂಬೆ ॥ ೬೦ ॥

ಹಲಬರಿಗೊಂದು ರೂಪಿನೊಳಿದ್ದು ಮನ್ನಣೆ
ಗಳ ತಿದ್ದೆ ಕಳುವಹುದೆಂದು
ಹಲವು ರೂಪಾಗುವೆನೆಂದು ನೆನೆದನದು
ಸಲುವುದಾತನು ವಿಕ್ರೀಯಾಂಗ ॥ ೬೧ ॥

ಮೇಲಿಟ್ಟ ಮುಸುಕು ತೊಲಗಲಾಗಿ ಭರತ ಭೂ
ಪಾಲನೆ ಹಲವು ರೂಪಾಗಿ
ಬಾಲೆ ಬಾಲೆಯರಿಗೆ ತಪ್ಪದೊಪ್ಪಿದನಿಂದ್ರ
ಜಾಲವನಾಡಿದಂತಾಯ್ತು ॥ ೬೨ ॥

ಗದ್ದುಗೆಯೊಳು ಕುಳಿತಿದ್ದನು ಕೆಳಗೆ ನಿಂ
ದಿದ್ದ ಲತಾಂಗಿಯರೊಡನೆ
ಎದ್ದು ನಿಂದಿದ್ದನೊಬ್ಬೊಬ್ಬಳಿಗೊಬ್ಬೊಬ್ಬ
ಮುದ್ದಿನ ಭರತೇಶನಾಗಿ ॥ ೬೩ ॥

ತೆಗೆತೆಗೆದುತ್ತುಮಾಭರಣ ವಸ್ತ್ರವ ತನ್ನ
ಮೃಗನೇತ್ರೆಯರಿಗೊಲಿದಿತ್ತು
ಬಿಗಿಬಿಗಿದಪ್ಪಿಕೊಂಡರ್ತಿಮಾಡಿದನೇನ
ಹೊಗಳುವೆನವನ ಲೀಲೆಯನು ॥ ೬೪ ॥

ಅನಿತರೊಳಗೆ ಸಮರಾತ್ರಿಯ ಘಂಟೆ ಕೊಂ
ಣನೆ ಕೇಳಲಾಯ್ತು ಹೋಯೆಂದು
ಮುನಿಸ ತಿಳುಹುವೆನೆಂದತಿ ವೇಳೆಯಾಯ್ತೆಂದು
ಜನಪನಾಡಿದನು ಪೆಂಗಳೊಳು ॥ ೬೫ ॥

ಗಂಡರಗಂಡ ತಾಂಡವವ ಕಂಡೊಲ್ದಿಳ
ವೆಂಡಿರ ಮನ್ನಿಸಿಯವರ
ಹಿಂಡೊಡಗೂಡಿಕೊಂಡೆದ್ದನೆಂಬಲ್ಲಿಗೆ
ತಾಂಡವ ವಿನಯದ ಸಂಧಿ ॥ ೬೬ ॥

———

ಶಯ್ಯಾಗೃಹ ಸಂಧಿ

ನಿಷ್ಕುಟಲಾಂಗನು ವರ್ಧನಾವತಿಯೆಂಬ
ನಿಷ್ಕನಾಟಕ ಶಾಲೆಯಿಂದ
ಪುಷ್ಕರಾವತಿಯೆಂಬ ಸಜ್ಜಿವನೆಗೆ ಪಾದ
ಪುಷ್ಕರವಿಟ್ಟನೊಲ್ಮೆಯೊಳು ॥ ೧ ॥

ಬೆಡಗಿಂದ ಕೆಲಬರ ಕೈಲಾಗುವಿಡಿದಡಿ
ಯಿಡುತಿರ್ದ ಮತ್ತೆ ಕೆಲಬರ
ನಡುವನೆಡದ ಕೈಯೊಳಪ್ಪಿ ಮಾತಾಡುತ
ನಡೆವುತಿದ್ದನು ಮೋಡಿಕಾರ ॥ ೨ ॥

ಕುಟಿಲ ಕುಂತಲೆಯರ ಕೆಲಬರ ಬೆರಳಿನ
ಚಿಟುಕತೆಗೆವುತ ನಡೆದನು
ನಟ ನಳಯೆನೆ ಕೆಲಬರು ತನ್ನ ಬೆರಳ್ಗಳ
ಚಿಟುಕ ತೆಗೆಯಲೊಲ್ದು ನಡೆದ ॥ ೩ ॥

ಬಾಯ್ದೆರೆದೆಲೆಯ ಘಳಿಗೆಯ ಕೆಲಬರೂಡಿ
ಕೆಯ್ದೆಗೆವರು ಕೆಲರವನ
ಬಾಯ್ದೆರೆಗರ್ಥ ಘಳಿಗೆಯ ಕೊಟ್ಟರ್ಥವ
ನೊಯ್ದುಕೊಂಬರು ತಮ್ಮ ಬಾಯ್ಗೆ ॥ ೪ ॥

ಕಡುಲೋಭಿಗಳಿರಾ ಘಳಿಗೆಯೊಂದ ಕೊಡುತಿರ್ದು
ಕೊಡದರ್ಥವನು ಕೊಂಡಿರೆಂದ
ಬಡಮನಸಿನ ಹೆಂಗಳರಸ ನಿನ್ನಂತಾವು
ಕಡುಚಾಗಿಗಳೆಯೆಂಬರವರು ॥ ೫ ॥

ನಲ್ಲ ಕೇಳದಕಲ್ಲ ನಿನ್ನ ಬಾಯ್ದೆರೆ ಸೋಂಕೆ
ನಲ್ಲಿ ಬಂದೆಲೆಯ ಭಾಗವದು
ಬೆಲ್ಲ ಸಕ್ಕರೆಯ ಸೋಲಿಸುತದೆ ಸವಿಯಿದ
ಕೆಲ್ಲಿ ಬಂದುದೊಯೆಂಬರವರು ॥ ೬ ॥

ನೂರು ಫಳಿಗೆಯ ಕೊಡುವೆವಾವು ನೀನೆಮ
ಗಾರು ಫಳಿಗೆ ಕೊಡು ಸಾಕು
ಮಾರಾಟ ನಿನಗಿದು ಲಾಭವಲ್ಲವೆಯೆಂದು
ನೀರೆಯರಿಂಪನಾಡವರು ॥ ೭ ॥

ಲಲನೆಯನೊಬ್ಬಳ್[1] ನೊಬ್ಬ[1]ಕೈವಿಡಿದಂತೆ
ಹಲವು ಪೆಂಗಳೊಳ್ಳೈದುತಿರ್ದ
ಛಲವೆಂತು ಬಹುದಿನ್ನು ಸವತಿ[2]ಮತ್ಸರ[2]ವೆಂತು
ನೆಲುಸುವುದವನ ಪೆಂಡಿರಿಗೆ ॥ ೮ ॥

ನಿಡುಗೆರೆಯಾಗಿ ನಾಲ್ದೆಸೆಗೆ ಸಾಲಾಗಿ ಚೆ
ಲ್ವಡರಿದ ಸೆಜ್ಜೆವನೆಗಳು
ಇಡಿಕಿರೆದಿದ್ದುವಾ ಮನೆಗಳೆಲ್ಲರ ನಟ್ಟ
ನಡುವಣ ಮನೆ ಗೃಹರಾಜ ॥ ೯ ॥

ಆಲಯಗಳ ಮುಂದೆ ಮಿರುಮಿರುಗುವ ಪಟ್ಟ
ಶಾಲೆಯ ಮದನ ಕೈಗಳೊಳು
ಚೋಲುವ ದೀಪಸಾಲುಗಳೊಳು ಕೇರಿ ದೀ
ಪಾಳಿಯ ಹಬ್ಬದಂತಿಹುದು ॥ ೧೦ ॥

ಶಯನದ ಗೃಹವೆಲ್ಲ ನವರತ್ನಮಯ ಹೇಮ
ಮಯಗಳು ಮತ್ತವನೊಲ್ದು
ಮಯನು ನಿರ್ಮಿಸಿದನೆಂದಾಡಿ ಬಿಡುವೆನು ವಿ
ಸ್ಮಯಬಟ್ಟು ಪೊಗಳಲಾನರಿಯೆ ॥ ೧೧ ॥

---

1 ನೊಬ್ಬ ಪುರುಷ (ಕ. ಖ. ಚ. ಛ.) 2 ಮಚ್ಚರ (ಚ. ಛ.)

ಭಾವ ಬಂದನು ತನ್ನ ಭಾವಕಿಯೆಡೆಗೀಗ
ಭಾವಜಕೇಳಿಗೆ ಬಂದ
ಭಾವಿಸೆ ಬಡಪರಿಯವನಲ್ಲವೆಂದು ಶು
ಕಾವಳಿ ನುಡಿದುವಲ್ಲಲ್ಲಿ ॥ ೧೨ ॥

ಶಾಖಾದೇಹದೊಳೊಬ್ಬಳೊಬ್ಬಳ ಹಸ್ತ
ಶಾಖೆಯೊಳೊಂದೊಂದು ಮನೆಯ
ಶ್ರೀಖಂಡ ಗಂಧ ಹೊಕ್ಕನು ಕೇರಿ ತುಂಬಿ[1]ರ್ದ[1]
ವಾಖಂಡಲಪುರದಂತೆ ॥ ೧೩ ॥

ರಾಜಿಸೆ ನಾಲ್ದೆಸೆಯೊಳು ಕೇರಿ ನಡುವೆ ವಿ
ಭ್ರಾಜಿಪ ಗೃಹರಾಜನೆಂಬ
ರಾಜಗೃಹವ ಮೂಲತನುಗೂಡಿ ಹೊಕ್ಕನಾ
ರಾಜನು ಪದ್ಮಿನಿ ಸಹಿತ ॥ ೧೪ ॥

ಸಿಂಹವಾಹಿನಿಯೆಂಬ ಮಂಚದಮೇಲಿದ್ದ
ಸಿಂಹ ವಿಕ್ರಮನ ಕೆಲದೊಳು
ಸಿಂಹಾಯತಮಧ್ಯೆ ಕುಳಿತಳು ಜಾಡ್ಯವ
ಸಂಹರಿಸುವ ಶಕ್ತಿ ಮೆರೆಯೆ ॥ ೧೫ ॥

ಕಾಲ ತೊಳಿವುತಂಗದಟ್ಟವನಿಕ್ಕುತ
ವೀಳೆಯಗೊಡುತ ಮತ್ತವರ್ಗೆ
ಕಾಲೋಚಿತದ ಸೇವೆಯ ಮಾಡುತಿದ್ದವು
ಸಾಲಭಂಜಿಕೆಗಳೀನೆಂಬೆ ॥ ೧೬ ॥

ಹಲವು ಪುತ್ತಳಿಗಳು ಸೇವೆಯ ಮಾಳ್ಪಾಗ
ನಿಲಿಸಿದಳೊಂದು ಪುತ್ತಳಿಯ
ಎಲೆಯ ಫಳಿಗೆಯ ತನ್ನ ರಸಗೆ ತಾನರ್ತಿ
ಯೊಳು ಕೊಡುತಿರ್ದಳಾ ಜಾಣೆ ॥ ೧೭ ॥

1 ದ (ಕ, ಖ, ಚ, ಛ)

ಕಡುಪಂಥಗಾತಿ ನೀನೆಲಗೆ ವೀಳೆಯದೆಲೆ
ಗೊಡದಿರಂಜುವೆವು ನಾವೆಂದ
ನಡೆಯಿತೆ ನಿನ್ನ ಮುಂದೆನ್ನಯ ಪಂಥ ಕೊ
ಪಿಡಿ ಸುಮ್ಮನೆನುತೀಯುತಿಹಳು ॥ ೧೪ ॥

ಬಿರಿನುಡಿಗಳನೆ ಕಲಿತೆ ಮೃದುವಚನವ
ಮರೆತೆಯೆಲಾ ಪದ್ಮಿಯೆಂದ
ಬಿರಿಸೇನು ನೀವು ತಾವೆಂದು ಛಾಂದಸಿಕೆಯ
ಮೆರೆಯಬೇಕೆಯೆಂದಳವಳು ॥ ೧೫ ॥

ಆಗಲಾಗಲಿ ದೇವರೆಲೆಯ ಘಳಿಗೆಯ ಲೇ
ಸಾಗಿ ಚಿತ್ತೈಸಿ ಹಸಾದ
ಭಾಗದೆಲೆಯೊಳೆನಗರ್ಧವ ಪಾಲಿಸಿ
ಯೀಗಲಾದುದೆಯೆಂದಳವಳು ॥ ೧೦ ॥

ಅಕ್ಕಟಕ್ಕಟ ನೋಡಯಿವಳಿಗೆನ್ನೊಡನೆಕ್ಕ
ಸಕ್ಕದುದಾಸೀನದಾಟ
ಲೆಕ್ಕಕೆ ತಾರೆ ನಾನಾರಂತೆ ನಿನ್ನ ನೋ
ಟಕ್ಕೆ ತೋರಿದೆನೊ ಹಾಯೆಂದ ॥ ೧೧ ॥

ದೇವ ನೀನೆನ್ನ ನೋಟಕೆ ನನ್ನ ಮನಕೆ ಸಂ
ಜೀವನವಾಗಿ ತೋರಿದಪೆ
ಹಾ ವೈಶಿಕದಾಟ ಸಾಕೆಂದು ಮುನಿದು ಕ
ಲಾವಿದ ಮೊಗವಡ್ಡತೆಗೆದ ॥ ೧೨ ॥

ಹರಣವ ಸೂರೆಗೊಂಡರಸ ನೀನುರೆ ಮೊಗ
ದಿರುಹಿದರಾನು ಬಿಡುವೆನೆ
ತಿರುಗಿತ್ತ್ತಲೆಂದು ತನ್ನತ್ತ ತೆಗೆದಳು ನುಂ
ಗೊರಳನೆಡದ ತೋಳೊಳಪ್ಪಿ ॥ ೧೩ ॥

ಪದ್ಮಿಯ ಪ್ರಾಣದೊಡೆಯನೆ ಕಣ್ದೆರೆ ಬೇಗ
ಪದ್ಮಿಯ ಸಿರಿಯೆ ಮಾತಾಡು
ಪದ್ಮಿನಿಗರ್ತಿತೋರೆಂದು ಮುದ್ದಿಸಿ ಮುಖ
ಪದ್ಮವ ತಡವಿ ನೋಡುವಳು ॥ ೨೪ ॥

ಗಿಳಿಯಂತೆ ನುಡಿವಳು ಲತೆಯಂತೆ ತಬ್ಬುವ
ಳಿಳಿದು ಹರಿವ ಹೊಳೆಯಂತೆ
ಗಳರವ ತೋರುವಳಪ್ಪಿ ತೂಗಾಡಿ ಕಂ
ಗಳ ತೆರೆಯೆಂದು ಕಾಡುವಳು ॥ ೨೫ ॥

ಆ ನೀರೆ ಮಾಡುವ ಕಲೆಗೆ ಮೈ ಮಿಸುಕದೆ
ತಾನೊಂದು ಪುತ್ಥಳಿಯಂತೆ
ಜ್ಞಾನಾತ್ಮನೊಳಗಿದ್ದನಾ ರಾಯನೆನಲಾತ್ಮ
ಧ್ಯಾನದ ಶಕ್ತಿ ಸದರವೆ ॥ ೨೬ ॥

ತವಕದೊಳವಳು ಸೈರಿಸಲಾರದವನ ಪಾ
ದವ ಕಟ್ಟಿಕೊಂಡು ನೀನೆನ್ನ
ಸವಿಯೊಳೋಲಾಡಿಸು ಕಣ್ದೆರೆಯೆಂದು ದೈ
ನ್ಯವ ತೋರಿ ನುಡಿದಳರ್ತಿಯೊಳು ॥ ೨೭ ॥

ಅದಕೂ ಕಣ್ದೆರೆಯನವಳು ಕಂಡಳಾತ್ಮ ಯೋ
ಗದ ಶಕ್ತಿವಿಡಿದಿರ್ದನೆಂದು
ಇದಕೆ ತಂತ್ರವ ಬಲ್ಲೆ ನಾನೆಂದು ನೃಪನ ಚಿ
ತ್ತದ ನೆಲೆಯರಿದು ನುಡಿದಳು ॥ ೨೮ ॥

ಅರಸ ಕಣ್ದೆರೆ ತೆರೆಯದಿರೆ ಚಿದಂಬರ
ಪುರುಷನ ಮೇಲಾಣೆಯೆನಲು
ದರಹಾಸದಿಂದ ಕಣ್ದೆರೆದು ನೋಡಿದನು ಸ
ದ್ಗುರುವಿನಾಣೆಯ ಮೀರಬಹುದೆ ॥ ೨೯ ॥

ಕಣ್ದೆರೆದಾಕ್ಷಣ ಬರೆಸೆಳೆದಾ ತೊಂಡೆ
ವಣ್ಣುಟಿಯಬಲೆಯನಪ್ಪಿ
ನಾಣ್ದಾಣಿ ಜುಮ್ಮೆನೆ ಚುಂಬಿಸಿ ಲಲನೆಗೆ
ಗೇಣ್ದೋರಿದನು ಸ್ವರ್ಗಸುಖವ ॥ ೩೦ ॥

ಪದ್ಮಿನಿಯೊಡನಿಲ್ಲಿ ಕೂಡಿದಂದದಿ ಮಿಕ್ಕ
ಪದ್ಮವದನೆಯರೆಲ್ಲರೊಳು
ಸದ್ಮ ಸದ್ಮಕೆ ತಪ್ಪಗೈದಿ ಕೂಡಿದ್ದನು
ಭದ್ಮವಿಲ್ಲದೆ ರಾಜಮೋಹಿ ॥ ೩೧ ॥

ಜಿನ ಜಿನಯೇನೆಂಬೆ ನೃಪನೆದೆಯೊಳಗಾಗ
ಕನಸಿನೊಳಾತ್ಮ ತೋರುವನು
ವನಜಗಂಧಿನಿಯರಿಗರನನೆ ತೋರುವ
ನೆನಲದೇಂ ಪುಣ್ಯಜೀವಿಗಳೊ ॥ ೩೨ ॥

ತಿಳುನಿದ್ದಿಯಲ್ಲದೆ ಬಲುನಿದ್ದಿಯವರ್ಗಿಲ್ಲ
ಕಲಹಂಸತೂಲತಲ್ಪದೊಳು
ಮಲಗಿ ಕಣ್ಗೆಸೆದರು ಪೆಣ್ಣೂಡಿ ಕಳಹಂಸ
ಬಿಳಿಯ ತಾವರೆಯೊಳಿಪ್ಪಂತೆ ॥ ೩೩ ॥

ಕಿರಿದು ಹೊತ್ತಿನೊಳಾತಗೆಚ್ಚರಾದುದು ಮರೆ
ದೊರಗಿರ್ದ ಸತಿಯರೆಲ್ಲರೊಳು
ಒರಗಿರ್ದನಿಲ್ಲಿ ಪದ್ಮಿನಿಯೊತ್ತಿನೊಳು ಕ
ಣ್ದೆರೆದಿದ್ದನಾ ಭಾವಿತಾತ್ಮ ॥ ೩೪ ॥

ಬ್ರಹ್ಮಿಯೆಂದೆಂಬ ಮುಹೂರ್ತಸನ್ನಿಧಿಯದು
ಬ್ರಹ್ಮಯೋಗಕೆ ತಕ್ಕಕಾಲ
ಬ್ರಹ್ಮಮಾರ್ಗಕೆ ನಡಿಸಿದನು ವಾಯವ ಪರ
ಬ್ರಹ್ಮವ ಕಂಡ ತನ್ನೊಳಗೆ ॥ ೩೫ ॥

ನುಡಿಯಬಾರದ ಶಬ್ದ ನೋಡಬಾರದ ವರ್ಣ
ಪಿಡಿಯಬಾರದ ಶೂನ ರೂಪ
ನುಡಿದನು ನೋಡಿದ ಹಿಡಿದನಾ ಚಕ್ರೇಶ
ಬಡವನೆ ಭಾವತಾಪಸನು ॥ ೩೬ ॥

ಧ್ಯಾನದೊಳಾ ರಾಯನಿದ್ದನಂತಿರಲಿ ಮ
ತ್ತೇನೆಂಬನಾ ಸಮಯದೊಳು
ಭಾನುಮೂಡುವ ವೇಳೆಯರಿದು ಬಂದರು ಮರ್ಕು
ಗಾನಕಾಂತೆಯರು ಮೇಳದೊಳು ॥ ೩೭ ॥

ಅರುಹನನೆನಹಿಂದ ಪಾಪ ತೊಲಗುವಂತೆ
ಧರೆಯಂಧಕಾರ ಜಾರುತಿದೆ
ಗುರುಭಕ್ತಿ ತೋರುವಂತುರುಣೋಯ್ದು ತೋರಿ
ತರಸಯೆಂದೆತ್ತಿ ಹಾಡಿದರು ॥ ೩೮ ॥

ಅರುಣೋದಯವಾಗಿ ಕಿರುಣೋದಯವಾಯ್ತು
ತರಣಿತೋರದ ಮುನ್ನ ನಿನ್ನ
ಸುರುಚಿರಾಂಗವ ತೋರಿ ಜಗವನುದ್ಧರಿಸೆಲೆ
ಪುರುನಾಥನಗ್ರಕುಮಾರ ॥ ೩೯ ॥

ಭೋಗಕೆ ಮರುಳಾಗಿ ಧರ್ಮವಮರೆದಧೋ ೀ
ಭೋಗಕೆ ಬೀಳ್ವರ ನಗುತ
ಭೋಗದೊಳಿದ್ದು ಯೋಗಿಗಳಂತೆ ಸುಖಿಯಹ
ಭೋಗಿಗಳರಸ ನೀನೇಳು ॥ ೪೦ ॥

ಎಂದು ಪಾಡುವ ಸುಪ್ರಭಾತಗೀತವ ಕೇಳ್ದು
ಮಂದಿರ ಮಂದಿರಗಳಿಗೆ
ಸಂದ ಹಲವು ರೂಪ ಬಯಲು ಮಾಡಿದನು ಮೈ
ಯೊಂದರೊಳಗೆ ನಿಂದನಾಗ ॥ ೪೧ ॥

ಮುಂಚಮುಂಚದೊಳು ಪೆಣ್ಗಳ ಕಣ್ಗೆತೋರಿದ
ಮಿಂಚಿನಂತಿರೆ ಬಯಲಾದ
ಅಂಜೆಗಮನೆಯರಚ್ಚರಿವಟ್ಟು ನಿತ್ಯಕೃ
ತ್ಯಾಂಚಿತದೊಳಗಿದ್ದರೆಲ್ಲ ॥ ೪೨ ॥

ಸುಪ್ರಭಾತವ ಕೇಳುತೊಡನೆದ್ದು ಪದ್ಮಿನಿ
ಸುಪ್ರಭಾವದೊಳರಿ ನೋಡಿ
ಸುಪ್ರಿಯೆ ಮತ್ತೆ ಬಾ ನೀನೆಂದು ಜಿನಗೃಹ
ಕಾ ಪ್ರಭುವೆದ್ದನಾಕ್ಷಣವೆ ॥ ೪೩ ॥

ಪರ್ವಾಭಿಷೇಕ ಸಂಧಿ

ನುಡಿಯಲಳವೆ ಚಕ್ರನಾಥನ ಜಾಣ್ಮೆಯ
ಕಡುಶುಚಿ ದೇಹಿ ತಾನಹುದು
ಮಡದಿಯರೊಡನಿದ್ದನೆಂದು ಪೂಜೆಗೆ ಮುನ್ನ
ನಡೆದನು ಮಜ್ಜನಗೃಹಕೆ ॥ ೧ ॥

ಭೋಗಮಜ್ಜನ ಯೋಗಮಜ್ಜನವೆಂದೆರ
ಡಾಗಿಹುವವನಿಗೆ ಜಳಕ
ಭೋಗಾರ್ಥ ಮೀವುದು ಭೋಗಮಜ್ಜನ ಪೂಜೆ
ಗಾಗಿರೆ ಯೋಗಮಜ್ಜನವು ॥ ೨ ॥

ಉರುಕೇಶವೆಂಬ ರಾಹುವಿನ ಮೈಮುಸುಕಿದ
ಹೆರೆಯೊ ಕಾಳಿಂದಿಯ ನೊರೆಯೊ
ಪರಮನಾಲಯಕೆ ಬಹರಸನ ಚೀನಾಂ
ಬರವಿದ್ದುದಡ್ಡ ಸುತ್ತಿನೊಳು ॥ ೩ ॥

ಕಿರಿದಾಗಿ ತಿಲಕವಿಲ್ಲಾಗ ನೊಸಲು ತುಂಬಿ
ನೆರೆವುತಿದ್ದುದು ಧರ್ಮಚಕ್ರ
ಉರೆಕರ್ಮಕಾಂಡವ ತರಿವ ಚಕ್ರವೊ ಬಟ್ಟ
ವೆರೆಯೊಯೆಂಬಂತೆ ಚೆಲ್ವಿನೊಳು ॥ ೪ ॥

ಪಲ್ಲ ಕೆಂಪಳವಂತೆ ಸುಲಿದಿದ್ದನವು ಮೊಗ್ಗೆ
ಮುಲ್ಲಿಗೆಯಂತಿದ್ದುವಾಗ
ಸಲ್ಲಗಳೆದನು ವೀಳೆಯವ ಸಂಯಮಿತನ
ಪಲ್ಲವಿಸುತ ಪಜ್ಜೆಯಿಟ್ಟ ॥ ೫ ॥

ನೆರವಿ ಮೆಟ್ಟಿದ ನೆಲನೆಂದದ ಮೆಟ್ಟದೆ
ನಿರುತ ಶುಚಿರ್ಭೂತನಾಗಿ
ಅರಳಿ ಕೀಲಿಸಿದ ಬೆಳ್ಳಿಯ ಪಾವುಗೆಯ ಮೆಟ್ಟಿ
ಬರುತಿದ್ದನಧಿಕ ಶಾಂತದೊಳು ॥ ೬ ॥

ಹೊಗಳಭಾರದು ತನ್ನ ಕಂಡೊಬ್ಬರಾಗ ಕೈ
ಮುಗಿಯಬಾರದು ಛತ್ರವಿಲ್ಲ
ಸುಗತ ನಿವಾಸಕೆ ನಡೆದನು ಹೆಮ್ಮೈಯ
ತೆಗೆದಿಟ್ಟು ಭಯಭಕ್ತಿವೆರಸಿ ॥ ೭ ॥

ಇಂದೆಮ್ಮ ಪತಿಗೆ ಸಂಯಮ ನಾವು ಸಂಯಮ
ದಿಂದೆಯ್ದಬೇಕೆಂದು ತಾವು
ಮಿಂದು ಪುರುಷನಂತೆ ಮೋಕ್ಷ ಶೃಂಗಾರ ತ
ಳ್ತೊಂದಿ ಬಂದರು ರಮಣಿಯರು ॥ ೮ ॥

ಬಳಸಿನೊಳರಸಿಯರ್ಕೈತರೆ ಮಿಂಚುಮಾ
ದಳವ ಹಸ್ತದೊಳಾಂತು ನೃಪತಿ
ಮಲಹರಿ ಲಲಿತೆಯೊಳಧ್ಯಾತ್ಮ ಗಾನಮಂ
ಗಲವ ಕೇಳುತ ನಡೆತಂದ ॥ ೯ ॥

ಪರಿಪರಿಯರ್ಚನಾದ್ರವ್ಯವ ಧರಿಸಿದ
ಪರಿವಾರ ಸತಿಯರ ಹಿಂದೆ
ಎರಡುಪಕ್ಕದೆ ಗಾನವೆಸೆಯೆ ಬಂದನು ಶಂಖ
ಮೊರೆಯೆ ಭುಂ ಭುಂ ಎಂದು ಮುಂದೆ ॥ ೧೦ ॥

ಅರಮನೆಯೊತ್ತಿನ ಸಿರಿವನದೊಳಗಿಹ
ಪುರುಜಿನಾಲಯಕಡಿಯಿಟ್ಟು
ಪರಿವೃತ ಕೋಟಿಯೊತ್ತಿನೊಳು ಪಾವುಗೆಗಳ
ಪರಿಹರಿಸಿದನೊಳಹೊಕ್ಕ ॥ ೧೧ ॥

ರಾಜಗೃಹವ ರಚಿಸಿದ ಗಡ ಸುರಶಿಲ್ಪಿ
ಶ್ರೀ ಜಿನಗೃಹವ ನಿರ್ಮಿಸನೆ
ಆ ಜಿನಗೃಹವ ಬಣ್ಣಿಸಲರಿಯೆನು ಕಲ್ಪ
ಭೂಜದಂತಿಹುದೆಂಬೆನೊಮ್ಮೆ ॥ ೧೨ ॥

ಮುತ್ತಿನ ಕಲಶ ಮಾಣಿಕದ ಕಲಶಗಳು
ಸುತ್ತ ಪ್ರಕಾಶ ಬಿಂಬಿಸುತ
ಇತ್ತಲೀಕೆ ಚಂದ್ರಸೂರ್ಯರ ಕಿರಣಗ
ಳತ್ತಲಿರಲಿಯೆನುತಿಹುವು ॥ ೧೩ ॥

ಆಕಾಶದಮರರ ಕರೆವಂತೆ ಹಲವು ಪ
ತಾಕೆ ಕೈವೀಸುತೊಪ್ಪಿದುವು
ವ್ಯಾಕುಲದೊಡ್ಡ ಝಂಕಿಸುವಂತೆ ಮಣಿಘಂಟಾ
ನೀಕ ಡಂ ಢಣರೆನುತಿಹುವು ॥ ೧೪ ॥

ನಗುವಂತೆ ನೋಳ್ಪಂತೆ ನುಡಿವಂತೆ ಪುತ್ತಳಿ
ಬಗೆಗೊಳಿಸಿದ್ದುವಲ್ಲಲ್ಲಿ
ಧಗಧಗಿಸುತ ಜಿನಸಿದ್ಧ ಮೂರ್ತಿಗಳು ದಿ
ಟ್ಟಿಗೆ ಶಾಂತಿಗರೆವುತೊಪ್ಪಿದುವು ॥ ೧೫ ॥

ಸಕಲ ಸಂಪದದ ಬೀಡೆನಿಸುವ ಬಸದಿಯ
ತ್ರಿಕರಣಶುದ್ಧಿ ಪೂರ್ವಕದಿ
ಮುಕುಳಿತ ಹಸ್ತಾಬ್ಜ ಮೂರು ಸೂಳ್ಪಲಗೊಂಡ
ನಕಳಂಕಚರಿತೆಯರ್ವೆರಸಿ ॥ ೧೬ ॥

ಚರಣವ ತೊಳೆದೊಳಹೊಕ್ಕು ಕಟ್ಟಿದಿರೊಳು
ಪುರುಜಿನಬಿಂಬವ ಕಂಡ
ದರುಶನಾಂಜಲಿಯೆಂದು ಹೇಮಪುಷ್ಪವ ಸೂಸಿ
ಕರಗೂಡಿ ನಿಂದು ಕೀರ್ತಿಸಿದ ॥ ೧೭ ॥

ಕೈವಲ್ಯಬೋಧ ಮಹಾರಾಜ್ಯದೊಡೆಯನ
ದೇವಾಧಿದೇವನ ಜಿನನ
ಪಾವನಬಿಂಬವೆ ಜಯ ಜಯ ಚೆಲ್ವಾದಿ
ದೇವನ ಬಿಂಬವೆಯೆಂದ ॥ ೧೮ ॥

ಶ್ರೀಮುಕ್ತಿಯೊಡೆಯನ ಸಿದ್ಧಾಂತ ವಾಕ್ಯನ
ಕಾಮಿತ ಸಿದ್ಧಿದಾಯಕನ
ಶ್ರೀಮಯ ಪ್ರತಿಮೆಯೆ ಜಯ ಜಯ ನನ್ನ
ಸ್ವಾಮಿಯ ಪ್ರತಿಮೆಯೆಯೆಂದ ॥ ೧೯ ॥

ರಾಜಾರ್ಕಕೋಟಿಪ್ರಕಾಶನ ತ್ರಿಭುವನ
ರಾಜರೊಡೆಯನ ಚಿನ್ಮಯನ
ರಾಜಿತ ಪ್ರತಿರೂಪೆ ಜಯ ಜಯ ಭರತನ
ಪ್ಪಾಜಿಯ ಪ್ರತಿರೂಪೆಯೆಂದ ॥ ೨೦ ॥

ಎಂದು ಕೀರ್ತಿಸಿ ಮತ್ತೆ ಕೈಲಾಸಗಿರಿಗೊಲ
ವಿಂದ ಚಿತ್ತವ ನೀಡಿ ಮೈಯ
ಮಂದಿರದೊಳು ನೀಡಿ ಮೂರು ಸೂಳೆರಗಿದ
ಸಂದುದಾದೀಶಗಾ ಭಕ್ತಿ ॥ ೨೧ ॥

ದರ್ಭಾಸನದಲ್ಲಿ ಕುಳಿತನು ಕೂಡೆ ಸಂ
ದರ್ಭಿಸಿ ಸಕಲ ಕ್ರಿಯೆಗಳ
ನಿರ್ಭವಕರನವ ಜೈನದೇವತೆಗೆ ಶು
ಚಿರ್ಭೂತಸಿತ್ತನರ್ಘ್ಯವನು ॥ ೨೨ ॥

ಸ್ತೋತ್ರವ ಮಾಡಿದ ಜಪವ ಮಾಡಿದ ಕೂಡೆ
ನೇತ್ರವ ಮುಗುಳ್ದಾತ್ಮನೊಳಗೆ
ಚಿತ್ರಿಸಿದಂತಾದಿ ಜಿನನ ಕಂಡಾ ಜಾತಿ
ಕ್ಷತ್ರಿಯಯೋಗೀಂದ್ರನಿರ್ದ ॥ ೨೩ ॥

ರಾಣಿಯರೆಲ್ಲರು ಸ್ತುತಿಸುತಿದ್ದರು ಬಹು
ವೀಣೆಯ ಮಿಡಿದರೆಂಬಂತೆ
ಮಾಣಿಕಬಸದಿ ಮಾತಾಡುತಿರ್ದುದು ಕೂಡೆ
ವೀಣೆಗೆ ಪ್ರತಿವೀಣೆಯಂತೆ ॥ ೨೪ ॥

ದೇವದೇವೋತ್ತಮ ದೇದೀಪ್ಯಮಾನ ದೇ
ಹಾವಲಂಬನ ದೇವರತ್ನ
ಮಾವಾಜಿ ಜಯ ಜಯಯೆಂದರಾ ದೇವಾಧಿ
ದೇವನ ಸೊಸೆಯರರ್ತಿಯೊಳು ॥ ೨೫ ॥

ಸಾವು ಹುಟ್ಟಿಗೆ ಸಿಕ್ಕಿ ಸಂಕಟಬಡುವೆಮ್ಮ
ನೋವನೆಲ್ಲವನು ನುಗ್ಗೊತ್ತಿ
ಕಾವುದೆಮ್ಮನು ಸ್ವಾಮಿಯೆಂದರಾ ತ್ರಿಭುವನ
ದೇವನ ಮಗನ ರಾಣಿಯರು ॥ ೨೬ ॥

ಸಿನ್ನ ಕುಮಾರನಂತೆಮಗೆ ಶುದ್ಧಾತ್ಮಯೋ
ಗೋನ್ನತಿ ಬಾರದು ಸ್ವಾಮಿ
ಸಿನ್ನ ನಂಬಿಹೆವೆಂದು ಸಮ್ಯಕ್ತ್ವಶೀಲ ಸಂ
ಪನ್ನೆಯರತಿ ನುತಿಸಿದರು ॥ ೨೭ ॥

ಅನಿತರೊಳಗೆ ರಾಯ ಕಣ್ದೆರೆದೆದ್ದನಂ
ಗನೆಯರು ನಡೆದರು ಕೂಡೆ
ಮುನಿವಾಸಕಡಿಯಿಟ್ಟು ಮುನಿಗಳಿಗೆಲ್ಲವಂ
ದನೆಗೆಯ್ದನಬಲೆಯರ್ವೆರಸಿ ॥ ೨೮ ॥

ದಿನವ್ರತ ದಿಗ್ವ್ರತ ಮಿತಪರಿಗ್ರಹವ ಮ
ತ್ತನಶನವ್ರತವ ಕೈಕೊಂಡು
ವನಜಮುಖಿಯರು ಕೈಕೊಂಡರು ವ್ರತಗಳ
ಜಿನಮುನಿಗಳ ಸಮಕ್ಷದೊಳು ॥ ೨೯ ॥

ನೋಡ ಚಿತ್ತೈಸಿ ಪೂಜೆಯನೆಂದು ಮುನಿಗಳ
ಬೇಡಿಕೊಂಡನು ಕೂಡೆ ಮಗುಳ್ದ
ಅಡಲಳವೆ ತನ್ನ ಕೈಮುಟ್ಟಿದಭಿಷೇಕ
ಮಾಡತೊಡಗಿದನಾ ಚಕ್ರಿ ॥ ೩೦ ॥

ಪೆರ್ಚುವೆತ್ತ ಪರಂಜಿಗಳಶವನಷ್ಟವಿ
ಧಾರ್ಚನೆಯಿಂದ ಸತ್ಕರಿಸಿ
ಬಾರ್ಚಿ ಕೈವಿಡಿದನು ಮಾಂದಳಿರಿಗೆ ಪಣ್ಣಾ
ಸಾರ್ಚಿದಂತೊಪ್ಪಿತಾ ಭಾವ ॥ ೩೧ ॥

ಜಿನಬಿಂಬವೈನೂರು ಮಾರುದ್ದವದು ಸುಖಾ
ಸನದೊಳಗಡಕವಾಗಿಹುದು
ಜನಪನ ಸತಿಯರೈನೂರು ಮಾರುದ್ದವಾ
ಘನತೆಯದೆಂತೊ ಪೂಜೆಯೊಳು ॥ ೩೨ ॥

ಪಿರಿದುದ್ದವಾಗಿ ಬೇತಾಳರೂಪಲ್ಲವಾ
ಪಿರಿದುದ್ದಕೊಪ್ಪುವ ತೋರ
ಕರಚರಣಾಂಗದ ಶೋಭೆಗಳಳವಟ್ಟು
ಪುರುಷ ಪ್ರಮಾಣದಂತಿಹುದು ॥ ೩೩ ॥

ಪ್ರಚ್ಛಾದವೊಡೆದು ಮುಗಿಲ್ಗಳು ಕನಕಾದ್ರಿ
ಗಚ್ಛಾಂಬುಗಳ ಕರೆವಂತೆ
ಸ್ವಚ್ಛ ಜಲಾಭಿಷೇಕವ ಮಾಡಿದನು ಜಿನ
ಕಿಚ್ಚಿಪಟ್ಟಖಿಳ ಕುಂಭದೊಳು ॥ ೩೪ ॥

ಇಂಗಡಲೊಳು ತೇಲ್ವ ನೊರೆಯೆಲ್ಲ ತೆರೆಗಟ್ಟಿ
ಅಂಗೈಗೆ ಸಾರ್ದು ಜಾರ್ವಂತೆ
ತೆಂಗಿನಕಾಯ[1]ತೂರೆ[1]ಗಳನಾ ಭೂಪ ದೇ
ವಂಗಭಿಷೇಕವ ಗೈದ ॥ ೩೫ ॥

---

[1] (ಕ, ಖ, ಛ) ತೊಗೆ (ಚ. ಗ)

ತಾಳಿಯ ಹೊವಿನೆಸಳೊಯೆನೆ ಸುಲಿದಿಂಪು
ವಾಳಿಯ ಹಣ್ಣನಾ ರಾಯ
ಲಾಲಿತ ಪ್ರತಿಮೆಯ ಭುಜಮುಟ್ಟ ಮೆದಗಟ್ಟಿ
ಢಾಳಿಸಂತಭಿಷೇಕ ಗೈದ ॥ ೩೬ ॥

ತಿಳಿದುಪ್ಪವೆರೆದಾಗ ಚಿನ್ನದ ರಸದೊಂದು
ಹೊಳಿ ಹರಿವಂತೆ ಶೋಭಿಸಿತು
ಬಲು ಹರೆದುಪ್ಪ ಬಹಾಗ ಪಾಲ್ಗಡಲ ನು
ಣ್ಮಳಲಿಳಿವಂತೆ ರಂಜಿಸಿತು ॥ ೩೭ ॥

ಕಡುದೊಡ್ಡ ಕುಂಭವ ನಿಡುದೋಳ್ಗಳಿಂದೆತ್ತಿ
ಬಿಡಲಾಗಿ ಪಾಲಧಾರೆಗಳು
ಬುಡು ಬುಡು ಭೋರ್ಭೋರು ಝುಲ್ಲು ಝುಲ್ಲೆನುತ ದಿಂ
ಕಿಡುತಿಳಿದುದು ತೊರೆಯಾಗಿ ॥ ೩೮ ॥

ದಿಟ್ಟಗೆ ಬೆಳ್ಪು ಕೋರೈಸುತ ತೆಂಗಿನ
ಬಟ್ಟಿಳೆಗಾಯಂತೆ ಮೆರೆವ
ಘಟ್ಟವೊಸರೊಳಭಿಷೇಕವ ತನ್ನ ಕೈ
ಮುಟ್ಟಿ ಮಾಡಿದನಕ್ಕರಿಂದ ॥ ೩೯ ॥

ಪಣ್ಣ ತೆಗೆವರು ಪಾಲ್ಮೊಸರ ತೆಗೆವರು ಹೊಂ
ಬಣ್ಣದ ಘೃತವ ತೆಗೆವರು
ಕಣ್ಣೆವೆ ಹಳಚುವಷ್ಟರೊಳವನೂಳಿಗ
ವೆಣ್ಣುಗಳೊಳ್ಪುಮಾಡುವರು ॥ ೪೦ ॥

ಚೆಂಡಾಡಿದಂತೆ ಕುಂಭವನೆತ್ತಿ ಗಜಗಳ
ಸುಂಡಿಲ ನಗುವ ಚೆಲ್ವಿಕೆಯ
ದುಂಡುದೋಳೆತ್ತಿ ಸ್ವಾಮಿಯನೆಲೆ ಸುರಿವನ
ಖಂಡಿತದಮೃತಧಾರೆಗಳ ॥ ೪೧ ॥

ಹಾಲಸಮುದ್ರವೊಂದನೆ ತಂದು ಜಿನಗೆಂದು
ಶೈಲದೊಳಮರರೆರೆದರು
ಹಾಲಿಕ್ಷುರಸ ಘೃತ ದಧಿಯ ನಾಲ್ಕಬ್ಧಿಯ
ಮೇಲಿಸಿಂದಿಳುಹಿದನಿವನು ॥ ೪೨ ॥

ಲಾಜಾಂಗಚೂರ್ಣವ ಕುಂಕುಮಚೂರ್ಣವ
ಗಾಜುಗೋಜಾಗಿ ಸೂಸಿದನು
ಶ್ರೀಜಿನಸಿದ್ಧನಮೃತಸತಿಯಿಟ್ಟ ನೀ
ರೇಜ ಧೂಳಿಯೊಳದ್ದಿದಂತೆ ॥ ೪೩ ॥

ಪೂರ್ಣಕುಂಭವನೆತ್ತಿ ಲೋಕದ ಸಂತಾಪ
ನಿರ್ನಾಶವಾಗುವಂದದೊಳು
ವರ್ಣಶುದ್ಧದೊಳೋದಿ ಶಾಂತಿಮಂತ್ರವನು ಸು
ವರ್ಣಾಂಗನಭಿಷೇಕಗೈದ ॥ ೪೪ ॥

ಹಲವು ವರ್ಣದ ಪುಷ್ಪ ತುಂಬಿದ ನೂರೆಂಟು
ಗಳಗೆಯನೆತ್ತಿ ಸೂಸಿದನು
ಪಳಪಳನಿಳಿವ ಹೂಮಳೆಯ ಕಂಡೆಲ್ಲರಂ
ದುಲಿದರು ಜಯ ಜಯಯೆಂದು ॥ ೪೫ ॥

ಬಳಿಕ ಪ್ರತಿನೆಗಷ್ಟವಿಧದರ್ಚನೆಯ ಮಾಡಿ
ಅಲರ್ದ ನೂರೆಂಟು ತಾವರೆಯ
ಸಲೆ ಮಂತ್ರಪುಷ್ಪವಸಿಕ್ಕಿ ಕೈಮುಗಿದನಾ
ಗಳೆ ವಾದ್ಯತತಿ ಸುಮ್ಮನಾಯ್ತು ॥ ೪೬ ॥

ಪರಮಾತ್ಮಸಿದ್ಧಿರಸ್ತೆಂದನಾಚಾರ್ಯ ಮಿ
ಕ್ಕರು ಧರ್ಮವೃದ್ಧಿರಸ್ತೆನಲು
ಹರಕೆಯನಾಂತು ಕೂಡೊಲೆದು ನೋಡಿದನಲ್ಲಿ
ನೆರೆದಿರ್ದ ಜನವನಾ ರಾಯ ॥ ೪೭ ॥

ಅರಮನೆಯೊತ್ತಿನ ಬಸದಿ ಮತ್ತನ್ಯರು
ಬರಬಾರದೇಕಾಂತೆ ಪೂಜೆ
ಪರಿಸೆ ಬಹಳವಿಲ್ಲ ಕಿರಿದು ಕೂಡಿದುದು ಪ
ನ್ನೆರಡು ಲಕ್ಷದೊಳಿದ್ದುದಾಗ ॥ ೪೮ ॥

ನಡುವಗಲಿನ ಸನ್ನೆಯಾದುದು ವಾದಕ
ರೆಡಬಲಕೊಲೆದು ಸಾಗಿದರು
ಬಿಡುಗೆಗೊಂಡರು ವೃದ್ಧವ್ರತಿಕರು ಭರತೇಶ
ನಡಿಗಳಿಗೆರಗಿ ಭಕ್ತಿಯೊಳು ॥ ೪೯ ॥

ಧರಣೀಶನಿಂದು ನಾರಿಯರುಗೂಡಿಲ್ಲಿ ಜಾ
ಗರವಿಹನೆಂದು ಯೋಗಿಗಳು
ಪುರದ ಮಧ್ಯದ ಜಿನವಾಸಕೆದ್ದರು ಸುಖ
ವಿರು ಭವ್ಯಯೆಂದೊಲ್ದು ಹರಸಿ ॥ ೫೦ ॥

ಪಾರಣಾ ಸಂಧಿ

ಎಂತಿರ್ದುದಾ ಭರತೇಶನ ಯೋಗವಿಂ
ತಂತಿರ್ದುದೆಂದಾಡಲರಿಯೆ
ಶಾಂತಿಯಾಗಿರ್ದುದು ಕಾಂತಿಯಾಗಿರ್ದುದೇ
ಕಾಂತವಾಗಿರ್ದುದಾತ್ಮದೊಳು ॥ ೧ ॥

ಕೋಗಿಲೆ ದನಿಯಂತೆ ವೀಣಾರವದಂತೆ
ರಾಗದೋರುವುದೊಮ್ಮೆ ನಾದ
ಸಾಗರಘೋಷ ತೋರುವುದು ಕರ್ಣದೊಳದು
ಲಾಗು ಯೋಗಬ್ರಹ್ಮಶಕ್ತಿ ॥ ೨ ॥

ನಿಂದೆಳೆ ಮುತ್ತಿನಂತೊಪ್ಪುವ ನಿರ್ಮಲ
ಬಿಂದುವ ಕಾಣ್ಬನೊಮ್ಮೊಮ್ಮೆ
ನಿಂದಲ್ಲಿ ನಿಲ್ಲದುಳ್ಕಿನವೊಲು ಚಲಿಸುವಾ
ನಂದಕಲೆಯ ಕಾಣ್ಬನೊಮ್ಮೆ ॥ ೩ ॥

ಒಳಗೆ ತನ್ನಾತ್ಮನ ಬೆಳಗಿನೊಳಿರ್ದನು
ನಿಳಯ ತಾನದು ಮಣಿವೆಳಗು
ಬೆಳಗಿಗೆ ಬೆಳಗಿದಿರ್ವಪ್ಪಂತೆ ತೋರಿತು
ಬೆಳಗಿನ ಚಿಹ್ನವಷ್ಟರೊಳು ॥ ೪ ॥

ತಂಗಾಳಿ ತೀಡಿತು ತಾರಗೆ ಮಸುಳ್ದುವು
ಹಿಂಗಿತು ಜಗದಂಧಕಾರ
ಮುಂಗಾರ ಮೊಳಗಿನಂದದಿ ಮೊಳಗಿದುವು ವಾ
ದ್ಯಂಗಳು ಜಿನಗೃಹದೊಳಗೆ ॥ ೫ ॥

ನೋಡುವೆನಾತ್ಮಯೋಗಿಯನು ಪಾರಣೆಯನು
ಮಾಡಿಪೆನೆಂದು ರಥವನು
ಓಡಿಸಿಕೊಂಡು ಬಂದನೊಯೆನೆ ರವಿ ಬಂದು
ಮೂಡಣಗಿರಿಯನೇರಿದನು ॥ ೬ ॥

ಎಳೆವಿಸಿಲಡರ್ದೇರಿ ಜಿನನಿಲಯದ ರತ್ನ
ಕಳಶದೊಳ್ಪಾತಾಡೆ ಕಂಡು
ಬೆಳಗಾಯ್ತು ದೇವ ಕಣ್ದೆರೆಯೆಂದು ವನಿತೆಯ
ರೆಳಸಿ ಬಿನ್ನವಿಸಿವರಾಗ ॥ ೭ ॥

ಶಾಂತಿ ಭಕ್ತಿಯನಂತರಂಗದೊಳಿಸಗಿ ನಿ
ಶ್ಚಿಂತಾತ್ಮ ಗುರುವ ಬೀಳ್ಕೊಂಡು
ಶಾಂತದೃಷ್ಟಿಯೊಳು ಕಣ್ದೆರೆದನು ಲೋಕದ
ಸಂತೋಷ ಕಣ್ದೆರೆವಂತೆ ॥ ೮ ॥

ಪಾದಕೆರಗಿದರಬಲೆಯರವರನೊಲಿ
ದಾದರಿಸುತ ಘೆಮ್ಮನೆದ್ದ
ಆ ದೇವಿಯರುಗೂಡಿ ವದನಮಜ್ಜನಗೈದು
ಹೋದನಾಗಳೆ ಜಿನಾಲಯಕೆ ೯ ॥

ಕ್ಷತ್ರಿಯಕರ್ಮದ ದೇವತಾರ್ಘ್ಯವನಿತ್ತು
ಸ್ತೋತ್ರ ಜಪವನೊಲ್ದುಮಾಡಿ
ಸುತ್ರಾಮನಂತೆ ಪೂಜಿಸಿದನು ಜಿನನ ಚಾ
ರಿತ್ರಶುದ್ಧಾಂಗಿಯರ್ವೆರಸಿ ॥ ೧೦ ॥

ಸಲಿಲ ಗಂಧಾಕ್ಷತ ಪುಷ್ಪ ನೈವೇದ್ಯ ಪ್ರ
ಜ್ವಲದೀಪ ಧೂಪ ಸತ್ಫಲವ
ಕಲಿಲಾರಿಗರ್ಚಿಸಿದನು ಭಕ್ತಿಮಿಗೆ ಹೊರ
ಗುಲಿವ ಮಂಗಲವಾದ್ಯವೆಸೆಯೆ ॥ ೧೧ ॥

ಸುರುಚಿರಾಘ್ರ್ಯವನೆತ್ತಿ ಶಾಂತಿಧಾರೆಯ ಮಾಡಿ
ಬಿರಿಮುಗುಳ್ಮಳೆಯ ಮೇಲ್ಗರೆದು
ಬೆರಕೆವರಲ ರತ್ನವೃಷ್ಟಿಯ ಮಾಡಿದ
ನಿರದೆಲ್ಲ ಜಯ ಜಯವೆನಲು ॥ ೧೨ ॥

ಸೌಂದರಿಯರುಗೂಡಿ ಸಿದ್ಧಸೇಸೆಯನಾಂತ
ನಿಂದುದಾಗಳೆ ವಾದ್ಯನಿನದ
ಸಂದುದು ನಿನ್ನಿನ ವ್ರತವೆಂದು ದೇವನ
ಮುಂದಿರಿಸಿದನು ಕಂಕಣವ ॥ ೧೩ ॥

ಚೆನ್ನೆಯೊರ್ವಳ ಕೈಯೊಳೆಲ್ಲರ್ಗೆ[1] ಸಲ[1] ವಾಗಿ
ನಿನ್ನೆ ಕಟ್ಟಿರ್ದ ಕಂಕಣವ
ಮನ್ನಿಸಿ ಸಡಿಲಿಸಿದನು ಮತ್ತೆ ನೋಡಿದ
ತನ್ನ ರಾಣಿಯರನೆಲ್ಲರನು ॥ ೧೪ ॥

ಹಲಬರ ಮೊಗ ತಳತಳಿಸುತೊಪ್ಪಿದುವಲ್ಲಿ
ಕೆಲಬರ ವದನ ಬಾಡಿದುವು
ಎಲೆಲೆಯಿವರು ಪ್ರಥಮೋಪವಾಸದ ಪೆಂಗ
ಳಲಸಿದರೆಂದಿಷ್ಟು ನೊಂದ ॥ ೧೫ ॥

ಮತ್ತೆ ಬಾಯ್ದೆರೆದೆಲೆ ವಸ್ತಿಯರಿರ ಹೋಗಿ
ಹೊತ್ತಾಯ್ತು ಪಾರಣೆಗೆಂದ
ಅತ್ತೆಗೆರಗಿ ಮುನ್ನ ಪಾರಣೆಗೈವನು
ವೃತ್ತಿಗುಜ್ಜುಗಿಸಿದರವರು ॥ ೧೬ ॥

ಧೈರ್ಯವಂತೆಯರು ನೀವಹುದು ಮೇಲ್ತಾಗಿನ
ಕಾರ್ಯ ಕಾಣಿಸದಿನ್ನು ನಿಮಗೆ
ಸೂರ್ಯನ ಬಿಸಿಲುಬ್ಬಿ ಪಿತ್ತ ಕೆರಳದೆ ಚಾ
ತುರ್ಯದನ್ನವ ಕೊಳ್ಳಿರೆಂದ ॥ ೧೭ ॥

---

1 ಶಲ (ಖ), ಸಲ (ಗ, ಛ), ಸಲ [?] ಪಲ (ಕ)

ಸರ್ವದಿವಸ ಕಾಣ್ಬುದಿಲ್ಲವತ್ತ್ಯಮ್ಮನ
ಪರ್ವದಿ ಕಾಣದೆಂತಿಹೆವು
ಸರ್ವದಿವಸ ಹೋಗಿ ಕಾಣಿರಿಂದಿಗೆ ಜೀಡ
ಸರ್ವಜ್ಞಮತದೋಜೆಯಿಂದ ॥ ೧೮ ॥

ಎಂದಿನಂತಾನೈದದಿದ್ದರತ್ತ್ಯಮ್ಮಾಜಿ
ಗಿಂದು ನೋವಾಗದೆ ದೇವ
ಎಂದ ಮಾತನು ಕೇಳದಿರ[1]ಲು[1] ನಿಮ್ಮತ್ತೆಯ
ಕಂದ ನೋಯನೆ ಹೋಗಿರೆಂದ ॥ ೧೯ ॥

ನಗುತ ಮತ್ತವರು ಯಶಸ್ವತಿದೇವಿಯ
ರಿಗೆ ದೂರವಾದೆವಿಂದೆನಲು
ಮಗನ ಮಾತನು ಕೇಳ್ದರಾ ಯಶಸ್ವತಿದೇವಿ
ಮಿಗೆ ಮೆಚ್ಚುವಳು ಹೋಗಿರೆಂದ ॥ ೨೦ ॥

ಹೊಸ ವ್ರತಿಕೆಯರೊಡಗೂಡಿ ಕೆಲಬರು ಭೋ
ಜಿಸಪೋಗಿ ಕೆಲರಮ್ಮನೆಡೆಗೆ
ಒಸೆದೆಯ್ದಿರೆಮ್ಮ ಮನೆಯೊಳಮ್ಮನಿಂದು ಭೋ
ಜಿಸುವಂತು ಮಾಳ್ಪಿ ನಾನೆಂದ ॥ ೨೧ ॥

ಅದಕೆಲ್ಲರೊಡಬಟ್ಟು ಕೆಲಬರು ಪಾರಣೆ
ಗೊದವಿ ಪಯಣವ ಮಾಡಿದರು
ಅದನರಿದವರ ತನ್ನೊತ್ತಿಗೆ ಕರೆದು ಭೂ
ಸುದತೀಶ ಬುದ್ಧಿವೇಳಿದನು ॥ ೨೨ ॥

ಕೇಳಿರೌ ಮೊದಲುಪವಾಸವೆಂಬುದು ಮಹಾ
ಜ್ವಾಲೆದೋರುವುದು ಸುಡುವುದು
ತಾಳಿದ ಮೇಲದು ಸದರವಹುದು ಕರ್ಮ
ಧೂಳಿಯೆಲ್ಲವು ಭಸ್ಮವಹುದು ॥ ೨೩ ॥

---

1 ನು (ಖ), ಲು (ಕ, ಛ, ಗ)

ಒಂದೊಂದು ದಿನದುಪವಾಸವೆಂಬರೆ ಇದು
ಕೊಂದು ಕೂಗುವುದು ಕರ್ಮಗಳ
ಮುಂದೆ ಕೈವಲ್ಯವಹುದು ಸಾವು ಹುಟ್ಟಿನ
ದಂದುಗವಳಿದಿರಬಹುದು ॥ ೨೪ ॥

ಮುನಿಭುಕ್ತಿಯಾದಮೇಲಾನು ಬಂದನ್ಮಾಜಿ
ಯನು ಬಿಜಯಂಗೈಸಿ ತಹೆನು
ಅನಿತು ಕಾಲಂಬರ ನೀವಲ್ಲಿ ಹೋಗಿರಿ
ಯೆನುತ ಕಳುಹಿದನು ಕೆಲರ ॥ ೨೫ ॥

ಮಿಕ್ಕ ನಾರಿಯರ ಕರೆದು ನೀವು ನಮ್ಮ ಗೃ
ಹಕ್ಕೆ ಹೋಗಿರಿ ಮುನಿಗಳನು
ಚೆಕ್ಕನೆ ನಿಲಿಸಿ ತಂದಪೆನು ನಾನೆಂದು ಮ
ತ್ತಕ್ಕರುಮಿಗೆ ಕಳುಹಿದನು ॥ ೨೬ ॥

ಜಿನಬಿಂಬಕೆರಗಿ ಮುನೀಂದ್ರರ ತರಲೆಂದು
ಜನನಾಥ ನಡೆವನೋಜೆಯೊಳು
ಅನುರಾಗದಿಂದ ಹೆಣ್ಣುಗಳು ತಮ್ಮತ್ತೆಯ
ಮನೆಗೈದುವಾಗಳೇನೆಂಬೆ ॥ ೨೭ ॥

ಕಂಡಳು ದೂರದೊಳಗೆ ಬಹ ಸೊಸೆಯರ
ತಂಡವನಾ ಸಮಯದೊಳು
ಕಂಡರಾ ಸೊಸೆಯರತ್ತೆಯ ರೂಪ ಕಂಡಾಗ
ಳುಂಡಂತೆ ತಣಿದರೇನೆಂಬೆ ॥ ೨೮ ॥

ಮುಟ್ಟಲೊತ್ತಿಗೆ ಬಂದು ಜಿನಪಾದಪುಷ್ಪದ
ಬಟ್ಟಲ ನೀಡಿದರೊಸೆದು
ಬೊಟ್ಟನಿಂದಾ ದೇವಿ ತೆಗೆದುಕೊಂಡಳು ಮುಡಿ
ಗಿಟ್ಟುಕೊಂಡಳು ಸುಭಕ್ತಿಯೊಳು ॥ ೨೯ ॥

ನಾವು ಕಂಡಭಿಷೇಕ ಪೂಜೆಗತ್ಯಮ್ಮಾಜಿ
ನೀವೊಡಂಬಡಿಯೆಂದರೊಡನೆ
ಆ ವಚನಕೆ ನಗುತಿಚ್ಛಾಮಿಯೆಂದಳಾ
ದೇವಿ ತನ್ನಯ ಸೊಸೆಯರೊಳು ॥ ೩೦ ॥

ಒಸೆದು ತಮ್ಮತ್ತೆಯ ಪಜ್ಜೆಗಳೊಳು ಪೆರೆ
ಸೊಸಲನಿಟ್ಟಿರಗಿದರೆಲ್ಲ
ಸುಸುಖ ಸುಶೀಲ ತಪ್ಪದೆ ಬಾಳಿರೆಂದಾಗ
ಸೊಸೆಯರ ಹರಸಿದಳೊಲಿದು ॥ ೩೧ ॥

ಯುವತಿಯರರೆಬರು ಕಾರ್ಯಾರ್ಥವಾಗಿ ನಿ
ಮ್ಮವ[1]ನತಿಗಿಂದೆಯ್ದಿತಿಲ್ಲ
ಅವರು ಮಾಡುವ ಪರ್ವಭಕ್ತಿಯಿದಿಂದೆಲ್ಲ
ತವತವಗೊಡನೆರಗಿದರು ॥ ೩೨ ॥

ಕುಳಿತರೆಲ್ಲರು ಸುತ್ತಿಮುತ್ತಿಕೊಂಡತ್ತೆಯ
ಬಳಸಿನೊಳಾ ಮನೆ ತುಂಬಿ
ಹಳಹಳಚನೆ ನುಡಿದಾಡಿದರೊಪ್ಪಚ್ಚಿ
ವಿಳಸಿತ ಧರ್ಮಚಿಂತನೆಯ ॥ ೩೩ ॥

ಸೊಸೆಯರೊಳಗ ನೋಳ್ಪಿನೆಂದು ಯಶಸ್ವತಿ
ನಸುನಗೆಯಿಂದ ಬಾಯ್ದೆರೆದು
ಹೊಸಹರೆಯದೊಳೀಕೆ ನೀವಿಂತು ತನುವ ದಂ
ಡಿಸುವಿರೌ ಹಾಯೆಂದಳೊಡನೆ ॥ ೩೪ ॥

ನಿವಗೆ ಕೆಲಸವಿಲ್ಲ ನಿಮ್ಮಾಣ್ಮಗಾದರೆ
ಸುವಿವೇಕಯೆಳ್ಳನಿತಿಲ್ಲ
ಅವನಿಯನಾಳುತ ಮುನಿಯಂತೆ ನಡೆವುದಿ
ದವಿವೇಕಿಗಳ ನಡೆಯಲ್ತೆ ॥ ೩೫ ॥

---

1 ರರ್ಥಿಗೆಂದೆಯ್ದಿರೆಲ್ಲಾ (ಖ) ನತಿಗಿಂದೆಯ್ದಿತೆಲ್ಲಾ (ಕ)

ತನಗೆ ಭೋಗದೊಳಿಚ್ಛೆಯಿಲ್ಲದಿರಲಿ ಮಾ
ನಿನಿಯರ ಹೆಸಿಯಿಸಿ ತಾನು
ಇನಿತು ಪ್ರಯಾಸವ ಮಾಡುವುದುಚಿತವೆ
ಜಿನಜಿನಯೆಂದಳಾ ದೇವಿ ||! ೩೬ ||

ನವಗೇನು ಪ್ರಯಾಸ ಅತ್ತ್ಯಮ್ಮ ಪೊಂದೊಂದು
ದಿವಸ ನಿರ್ಭುಕ್ತಿ ತಿಂಗಳಿಗೆ
ನವಪ್ರಾಯಶಕ್ತಿಯೊಳಾತ್ಮಾರ್ಥವಾಗಿ ಮಾ
ಡುವುದೊಳ್ಳಿತಲ್ತೆ ಸುವ್ರತವ || ೩೭ ||

ಸುವಿವೇಕಿಯಲ್ಲೆಂದು ನೀವಾಡಬಹುದಾತ್ಮ
ಭವನಾದ ಕಾರಣ ನೃಪನ
ದಿವಿಜರು ಪೊಗಳದಿರ್ಪವರಾರು ನಿಮ್ಮಯ
ಕುವರ ಮಹಾಪ್ರೌಢನೆಂದು || ೩೮ ||

ಒಳ್ಳಿತಾದುದು ಹೆಣ್ಣುಗಳಿರ ನಿಮ್ಮರಸನ
ಗೆಲ್ಲಕೆ ನೀವು ಬೀಗುವಿರಿ
ಸಲ್ಲೀಲೆಯೊಳು ವ್ರತದೊಳು ಸುಖವಿರಿಯೆಂದ
ಳೆಲ್ಲರಿಗದು ತಾನು ಹರಕೆ || ೩೯ ||

ಇಂದು ಭೂಪತಿ ನಿಮ್ಮ ಪಂತಿಯೊಳಗೆ ತನ್ನ
ಮಂದಿರದಲ್ಲಿ ಪಾರಣೆಯ
ಚಂದದಿ ಮಾಳ್ಪೆನೆಂದನು ತಾನು ಬಹೆನಿಲ್ಲಿ
ಗೆಂದು ಬಿನ್ನವಿಸಿದರಾಗ || ೪೦ ||

ಎಂದರೆ ಮಗನುಪವಾಸದೊಳಿಲ್ಲಿಗೆ
ಬಂದಪನೆಂದಿನ್ನು ನಡೆದು
ನೊಂದಪನೆಂದು ತಾಯಲ್ಲವೆ ಸುತಮೋಹ
ದಿಂದ ತಾನೆದ್ದಳಾಕ್ಷಣವೆ || ೪೧ ||

ಭರತಣ್ಣನೆಮ್ಮ ಮನೆಯೊಳುಣ್ಬನಾದರೆ
ಬರಬೇಕು ತನ್ನಿ ಕ್ಕೆಗೆನ್ನ
ಕರೆಯಲೀತಕೆ ಬನ್ನಿರೆಂದಾಗ ಸೊಸೆಯರ
ಕರೆದುಕೊಂಡೆದ್ದಳಾ ಮಾತೆ || ೪೨ ||

ಅಡಿಗಡಿಗೊಬ್ಬೊಬ್ಬ ಸೊಸೆಯರ ಕೈಲಾಗು
ವಿಡಿವುತ ಹಲವು ಸೊಸೆಯರ
ನಡುವೆ ಮೆಲ್ಲನೆ ನಡೆತಂದಳಾ ಷಟ್ಖಂಡ
ದೊಡೆಯನ ತಾಯಿ ಜೋಕೆಯೊಳು || ೪೩ ||

ಜನಸಿಯೆಯ್ತರುತಿರ್ದಳಿತ್ತಲಾ ನೃಪನತ್ತ
ಮುಸಿಭುಕ್ತಿಗೈಸಿ ಬೀಳ್ಕೊಟ್ಟು
ವನಿತೆಯರೊಡಗೂಡಿ ಬರುತಿದ್ದನಮ್ಮನ
ಮನೆಗಾಗ ಕಂಡನಿದಿರೊಳು || ೪೪ ||

ಜಿನ ಜಿನ ನೋಡು ನೋಡವ್ವಾಜಿ ತಾವಿಂದು
ನನಗಿದಿರೈತಹ ಪರಿಯ
ಮನೆ ಮುಟ್ಟಬಂದೆನು ಬಿಜಯಂಗೈಸಿ ತ
ಪ್ಪೆನು ಮೋಸವಾಯ್ತು ಹೋಯೆಂದ || ೪೫ ||

ನಾಂ ತಡೆಯದೆ ಬಪ್ಪೆ ನೀಂ ಹೋಗಿರಿಯೆಂದು
ನಿಂತುಕಳುಹೆ ಹೋದರವರು
ಕಾಂತೆಯರೊ ಕಡು ಭ್ರಾಂತೆಯರೊಯೆಂದು
ಕಂತುಸನ್ನಿಭನೊಂದು ನುಡಿದ || ೪೬ ||

ಬಿನ್ನವಿಸಿದೆವವರ್ತಮ್ಮ ಪುತ್ರಗೆ ಬಿಸಿ
ಲಿನ್ನ ಹುದೆಂದೆದ್ದರೊಡನೆ
ಮುನ್ನೀರು ಚಂದ್ರನತ್ತೀಳ್ವಾಗ ತಡೆವ ಸಂ
ಪನ್ನರಾರೆಂದುಸುರಿದರು || ೪೭ ||

ನೊಂದುಕೊಳ್ಳದಿರಣ್ಣ ನನ್ನ ಮನಸಿಗಿಚ್ಛೆ
ಬಂದಾಗ ಬಂದೆ ನಾನಿದಕೆ
ಕುಂದೇನು ನಿನ್ನ ನಾರಿಯರು ಬಂದಾಗ ನೀ
ಬಂದುದಲ್ಲವೆಯೆಂದಳಾಕೆ ॥ ೪೮ ॥

ಸಾರಲೈತಂದು ನಿವಾಳಿಯಿಟ್ಟನು ಪದ
ವಾರಿಜಕೆರಗುವೆನೆಂದು
ಭೂರಮಣ ತಲೆವಾಗಲೆಡೆಯೊಳೆತ್ತಿ
ಸಾರಾಂಗಿ ತಕ್ಕೈಸಿದಳು ॥ ೪೯ ॥

ಇಂದ್ರೋಭವ ಪುನರಿಂದ್ರಪೂಜ್ಯೋಭವ
ಸಾಂದ್ರಸುಖೀಭವಯೆಂದು
ಮಂದ್ರವಾಕ್ಯದೊಳು ಮಗನ ಹರಸಿದಳಾ ಜಿ
ತೇಂದ್ರಿಯಚರಿತೆಯ ಜನನಿ ॥ ೫೦ ॥

ಕೂಡಿದಿರ್ಬಂದ ಸೊಸೆಯರೆಲ್ಲರೆರಗಲು
ನೋಡುತೊಲಿದು ಹರಸಿದಳು
ನೀಡಿದ ಮಗನ ಕೈಲಾಗುವಿಡಿದು ಮಾತ
ನಾಡುತ ನಡೆದಳಾ ಮಾತೆ ॥ ೫೧ ॥

ನಿನಗದು ಸದರವಾದರೆ ನೀನು ಧರಿಸುಯೆ
ನ್ನನುಜರಾತ್ಮಜೆಯರ ನೀನು
ಅನಶನಗೈಸಿ ನೋಯಿಸಲೇತಕಿಂದಿಷ್ಟು
ಬಿನದವ ನುಡಿದಳಾ ಜನನಿ ॥ ೫೨ ॥

ಮಿನುಗಿ ನಕ್ಕನು ರಾಯನದಕೆ ಕೇಳಮ್ಮ ನಿ
ನ್ನನುಜರ ಸುತೆಯರು ನಿನ್ನ
ತನುಜನಿಂದಧಿಕವೆ ನೋಡೊಂದು ಸೊಕ್ಕನೆಂ
ದನು ವಿನೋದಾರ್ಥಕೋವಿದನು ॥ ೫೩ ॥

ಸುಮ್ಮನೆ ನಾನುಪವಾಸಗೆಯ್ದೆನು ನಿಮ್ಮ
ತಮ್ಮಗಿಮ್ಮದಿರ ಪುತ್ರಿಯರ
ಒಮ್ಮೆ ನಾನೊಂದು ವ್ರತವ ತಾಳಿರೆನ್ನೆನು
ತಮ್ಮ ತಾವೆಸಗುವರಮ್ಮ ॥ ೫೪ ॥

ತಿಂಗಳಿಗೊಂದುಪವಾಸವ ಮಾಳ್ಪರೀ
ಹೆಂಗಳಿಗೇನಾದುದಮ್ಮ
ಅಂಗಭೋಗಕೆ ಬಹುಕಾಲ ಸಲ್ವಾಗ ಧ
ರ್ಮಾಂಗವೊಮ್ಮೊಮ್ಮಿರಬೇಡ ॥ ೫೫ ॥

ತನುಭೋಗದೊಳಗತಿ ಮಗ್ನರಾದರೆ ಪಾಪ
ಜನಿಸುವುದದರಿಂದ ನರಕ
ಜಿನವ್ರತಕಾಗಿಷ್ಟು ಬಳಲಬೇಕಮ್ಮಾಜಿ
ಘನಮುಕ್ತಿಯಹುದವರ್ಗೆಂದ ॥ ೫೬ ॥

ಭರತಣ್ಣ ನಿನ್ನಾಣೆ ನಿನ್ನರಾಜ್ಯವನು ನಿ
ನ್ನರಸಿಯರನು ನಿನ್ನ ವ್ರತವ
ಪರಿಕಿಸಲೊಮ್ಮೊಮ್ಮೆ ಚಿಂತೆತೋರ್ಪುದು ಪರಿ
ಹರಿಸಿದುದಿಂದೆನ್ನ ಕಂದ ॥ ೫೭ ॥

ಒಳ್ಳಿತಮ್ಮಾಜಿ ನೀವಂತು ಚಿಂತಿಸಲಾಗಿ
ಯೆಳ್ಳಷ್ಟು ಭಯವಿಲ್ಲ ನನಗೆ
ಅಲ್ಲದಿದ್ದರೆ ಯೆನಗೀ ಸಿರಿಯುಂಟೆ ಯಿ
ದೆಲ್ಲವು ನಿಮ್ಮ ಪ್ರಸಾದ ॥ ೫೮ ॥

ಇಂತು ನುಡಿವುತ ಬಂದರು ಬಾಗಿಲೆಡೆಯೊಳೋ
ರಂತೆ ತಾಯಡಿಗಳ ತೊಳೆದ
ಕಾಂತೆಯರೊಡನೆ ಕಾಲ್ದೊಳೆಯೆ ತಾಯೊಡನೆ ಗೃ
ಹಾಂತರಾಳವ ಪೊಕ್ಕನಾಗ ॥ ೫೯ ॥

ತನ್ನಿರೌ ಪೂಜೆಗೆ ವಸ್ತುವನೆನ್ನದ
ಮುನ್ನ ತನ್ನರಸಿಯರೆಲ್ಲ
ತನ್ನಂತೆ ನಲಿದು ವಸ್ತುವ ನೀಡಿ ಕೊಡಲು ಸಂ
ಪನ್ನ ಪೂಜಿಸಿದನಂಬಿಕೆಯ ॥ ೬೦ ॥

ಸಂದಣಿಗೊಂಡು ಸೊಸೆಯರೆಲ್ಲ ನವರತ್ನ
ವೃಂದದಾರತಿಗಳನೆತ್ತಿ
ತಂದು ನಿವಾಳಿಯಸಿಟ್ಟಿರಗಿದರಾಗ
ಸಂದುದು ನೃಪನ ಕಣ್ಣತಿ ॥ ೬೧ ॥

ಕಡೆಯೊಳು ನೃಪನೆರಗಿದನು ತನ್ನಮ್ಮಾಜಿ
ಯಿಡದ ಭಾಗವ ಸಾರ್ದು ಕುಳಿತ
ನಿಡುಗುಪ್ಪೆಯಾದ ಪೂಜಾದ್ರವ್ಯ ಬಯಲಾದು
ದೆಡೆಮಾಡಲನುವಾದರೊಡನೆ ॥ ೬೨ ॥

ಕರೆದು ಯಶಸ್ವತಿದೇವಿ ಸೊಸೆಯರ ಕು
ಳ್ಳಿರಿಸಿಕೊಂಡಳು ಮನೆ ತುಂಬಿ
ಹಿರಿಯ ಹಬ್ಬವನೇನ ಪೇಳ್ವೆನೆಲ್ಲರು ನಲ್ಮೆ
ವೆರಸಿ ಪಾರಣೆಯ ಮಾಡಿದರು ॥ ೬೩ ॥

ಭರತೇಶ ತಾಯ ಪಂತಿಯೊಳು ಸೌಂದರಿಯರು
ವೆರಸಿ ಪಾರಣೆಯ ಮಾಳ್ಪಾಗ
ಸುರಪನ ಭೋಗ ತಾನಾನ ಪಾಪಟಿಯೆಂಬ
ಪರಿಯೊಳಿರ್ದುದು ಜಿನ ಬಲ್ಲ ॥ ೬೪ ॥

ಪಾರಣಾಶ್ರಮವೆಂದು ನೃಪತಿ ಮಾತೆಯ ತನ್ನ
ತೋರಗೈಲಾಗಿನಿಂ ನಡಸಿ
ಸಾರತಲ್ಪದೊಳಿಷ್ಟು ಪವಡಿಸಬೇಕೆಂದ
ನಾ ರಾಜಮಾತೆಯೊಪ್ಪಿದಳು ॥ ೬೫ ॥

ತೂಗುಮಂಚದೊಳೊರಗಿದ ತಾಯ ಭರತೇಶ
ತೂಗಿದನಂದು ತೊಟ್ಟಿಲೊಳು
ರಾಗದೊಳಿಟ್ಟಾಕೆ ತೂಗಿದ ಸಾಲವ
ತೂಗಿ ತಿದ್ದುವನೊಯೆಂಬಂತೆ ॥ ೬೬ ॥

ಜಿನಸಿದ್ಧಭಾವನೆವಿಡಿದಿಷ್ಟು ಪವಡಿಸಿ
ತನಯ ವಿಶ್ರಮಿಸುತಿಲ್ಲೆಂದು
ನೆನೆದುಕೊಂಡಳು ಕೂಡೆ ಜಿನಶರಣೆಂದೆದ್ದು
ಜನಪನ ಜನನಿ ಕುಳಿತಳು ॥ ೬೭ ॥

ಅಣ್ಣ ನನಗೆ ನನ್ನ ಮನೆಗೆಯ್ದಿದಲ್ಲದೆ
ಕಣ್ಣಿಗೆ ನಿದ್ರೆ ಮುದ್ರಿಸದು
ತಣ್ಣನೆ ನೀನಿಲ್ಲಿರೆಂದೆದ್ದಳೊಡನೆ ಹೊಂ
ಬಣ್ಣಮೈಯಣುಗ ಕೈಗೊಡಲು ॥ ೬೮ ॥

ಅಂಬಿಕೆ ಮನಗೈದಿ ಬರಿದೆ ತೆರಳಬಾರ
ದೆಂಬುಪಚಾರ ಮಂಗಲಕೆ
ತುಂಬಿ ನೂರಾರು ಪೆಟ್ಟಿಗೆ ದುಗುಲವ ಮುಂದೆ
ಕಂಬಿಗಟ್ಟಿಸಿ ಕಳುಹಿದನು ॥ ೬೯ ॥

ಬಂದುದಷ್ಟರೊಳಿದಿರಾಗಿ ಪಲ್ಲಕ್ಕಿ ಜೀ
ಯೆಂದೆನಲೀರಿದಳೊಸೆದು
ವಂದಿಸಿದಣುಗನ ಹರಸಿ ಸಿಲ್ಲಿಸಿ ತನ್ನ
ಮಂದಿರವತ್ತ ಸಾಗಿದಳು ॥ ೭೦ ॥

ರಾಯರದೇವನ ತಾಯಿ ಹೊಕ್ಕಳು ತನ್ನ
ಶ್ರೀಯುತ ರಾಜಮಂದಿರವ
ತಾಯ ಬೀಳ್ಕೊಂಡು ತನ್ನ ರಮನೆಯ ಮಹಾ
ರಾಯ ಹೊಕ್ಕನು ಲೀಲೆಯಿಂದ ॥ ೭೧ ॥

ಸಾರಭವ್ಯನು ಸಾರಭವ್ಯಕಾಂತೆಯರು ಮ
ತ್ತಾ ರಾಜರತ್ನನ ಜನನಿ
ಪಾರಣೆಗೈದು ಸುಖದೊಳಿರ್ದರಿಂತಿದು
ಪಾರಣಾಸಂಧಿ ಸುಗಂಧಿ ॥ ೭೨ ॥

ನವರಾತ್ರಿ ಸಂಧಿ

ಕೃತಯುಗದಾದಿಯೊಳಾದಿವಸ್ತುವಿನಾದಿ
ಸುತನಾದಿ ಚಕ್ರನಾಯಕನು
ಕ್ಷಿತಿಯ ಪಾಲಿಸುತಿರ್ದನೇನೆಂಬೆ ಜಿನ ಜಿನ
ಸತತ ಜೋಗುಳವಾಡಿತವನಿ ॥ ೧ ॥

ಭೂಮಿಭಾರವ ತಾಳ್ದ ಚಿಂತೆಯಿಲ್ಲೊಂದರ
ಕಾಮವಿಲ್ಲಾಲಸ್ಯವಿಲ್ಲ
ಕ್ಷೇಮದೊಳಾಳುತಿರ್ದನು ದೀರ್ಘಧರೆಯ ಸು
ತ್ರಾಮ ಸ್ವರ್ಗವನಾಳುವಂತೆ ॥ ೨ ॥

ಲೀಲೆಯೊಳಿಂತು ರಾಜ್ಯವನಾಳುತಿರ್ದ ಭೂ
ಪಾಲನೊತ್ತಿಗೆ ಮಂತ್ರಿ ಬಂದು
ಆಲೋಚನೆಗೆಯ್ದನರಸನ ಲೀಲೆ ವಿ
ಶಾಲವಪ್ಪಂತೇನನೆಂಬೆ ॥ ೩ ॥

ಮಳೆಗಾಲ ಹೋದುದು ಬೆಳುಗಾಲ ಬಂದುದು
ದಳ ನಡೆವುದಕಿನ್ನು ಚೆನ್ನು
ಅಲಸಿಕೆ ಪರಿಹಾರವಾಗಿ ದಿಗ್ವಿಜಯಕಿ
ನ್ನೆಳಸುವುದೊಳ್ಳಿತು ನೃಪತಿ ॥ ೪ ॥

ಬಾಲಾರ್ಕನಂತುದಯಿಸಿ ಚಕ್ರರತ್ನ ಶ
ಸ್ತ್ರಾಲಯದೊಳಗಿರುತಿರ್ದು
ಆಲಸ್ಯವೇತಕೆ ಧರೆಯ ಸಾಧಿಸುವರಿ
ನ್ನೇಳರಿತಿಮಿರಮಾರ್ತಾಂಡ ॥ ೫ ॥

ದ್ವೀಪ ದ್ವೀಪದೊಳುಕ್ಕಿ ಸೊಕ್ಕಿದ್ದ ದಿಂಡೆಯ
ಭೂಪತಿಗಳ ಹಿಂಡ ನಿನ್ನ
ಶ್ರೀಪಾದಕೆರಗಿಸಿಕೊಳಲಡಿಯಿಡು ಜಂಬೂ
ದ್ವೀಪ ದಕ್ಷಿಣಲೋಕಸೂರ್ಯ ॥ ೬ ॥

ಗಿರಿದುರ್ಗ ಜಲದುರ್ಗ ವನದುರ್ಗದೊಳಗಿರ್ದ
ನರಪತಿಗಳ ಸೊಕ್ಕ ಮುರಿದು
ಭರತ ಷಡ್ಖಂಡದ ಧರೆಯ ಸಾಧಿಸಿ ತೋರು
ಭರತೇಶನೆಂಬ ಬೀರವನು ॥ ೭ ॥

ಆರು ಖಂಡದ ಪ್ರಜೆಗಳಿಗೆ ನಿನ್ನಯ ರೂಪ
ತೋರಿ ಕೃತಾರ್ಥರ ಮಾಡಿ
ಮೂರು ಚೋಟಿಂದಾರು ಖಂಡವ ಕಂಡು ಬ
ಲ್ಲಾರಿಕೆಯೊಳು ಬಹವೇಳು ॥ ೮ ॥

ವನದೊಳು ಚರಿಸಿ ವಸಂತನಾವನವ ಭೋಂ
ಕನೆ ಚಿಗುರೇರಿಸುವಂತೆ
ವನಧಿಮಧ್ಯದ ಧರಣಿಯ ನಿನ್ನ ಸುಳುಹಿಂದ
ನೆನೆಕೊನೆವೋಗಿಸು ನೃಪತಿ ॥ ೯ ॥

ಎಂದು ನುಡಿದ ಬುದ್ಧಿಸಾಗರ ಮಂತ್ರಿಗಾ
ನಂದದಿಂದುಡುಗೊರೆಯಿತ್ತು
ಮುಂದಿಗೆ ಹೇಳಿ ಸುಪಯಣಕುಜ್ಜುಗಿಸು ಹೋ
ಗೆಂದು ಬೀಳ್ಕೊಟ್ಟನಾ ರಾಯ ॥ ೧೦ ॥

ನವರಾತ್ರಿ ಜಿನಮಹಿಮೆಯ ಮಾಡಿ ದಶಮಿಯ
ದಿವಸದೊಳು ಪಯಣವಪ್ಪುದಕೆ
ಹವಣಿಸಿ ಜೋಕೆಮಾಡುವೆನೆಂದು ಮಂತ್ರಿ ಬಿ
ನ್ನವಿಸಿ ಬೀಳ್ಕೊಂಡು ನಡೆದನು ॥ ೧೧ ॥

ಕಟ್ಟಿದುವಾಗಳೆ ಗುಡಿತೋರಣಂಗಳು
ಪಟ್ಟಣದೊಳಗಲ್ಲಿಗಲ್ಲಿ
ಬೆಟ್ಟಿದಂದದ ತೇರು ಸಿಂಗರಿಸಿದುವಹೊ
ಹುಟ್ಟಿತು ದಂಡಿನ ಸುದ್ದಿ ॥ ೧೨ ॥

ಗುಡಿಸಿ ಮಿಂಚಿಕ್ಕಲು ಬೀದಿಯಿದ್ದುವು ಪೋಪ
ರಡಿಗಳ ಜುಮ್ಮುದಟ್ಟಿಸುತ
ಬಿಡೆಕೆದರಿದ ಪುಷ್ಪದಿಂದ ಕಂಪಿನದೊಂದು
ಕಡಲಂತೆ ಮೆರೆದುದಾ ನಗರ ॥ ೧೩ ॥

ನಿತ್ಯಪ್ರಭಾವನೆ ನಿತ್ಯರಥೋತ್ಸವ
ನಿತ್ಯಾಭಿಷೇಕ ಪೂಜೆಗಳು
ನಿತ್ಯ ಚತುಸ್ಸಂಗ ತೃಪ್ತಿಗಳೆಸೆದುವ
ಮಾತ್ಯನ ಪ್ರೇರಣೆಯಿಂದ ॥ ೧೪ ॥

ಜಿನಪೂಜಾಪೂರ್ವಕವಾಗಿ ಕೊಂಡೊಂಬತ್ತು
ದಿನ ನಡೆದುದು ಚಕ್ರಪೂಜೆ
ಅನುಚರರೆಲ್ಲರು ತಂತಮ್ಮ ಖಡ್ಗವ
ನನುರಾಗ ಮಿಗೆ ಪೂಜಿಸಿದರು ॥ ೧೫ ॥

ನಗರ ಮಧ್ಯದ ಜಿನವಾಸಕಾ ರಾಜೇಂದ್ರ
ಹಗಲೆಯ್ದಿ ಪೂಜೆಯ ನೋಡಿ
ಮಗುಳ್ದರಮನೆಗೆಯ್ದಿ ಮತ್ತೆ ರಾತ್ರಿಯಳೋ
ಲಗವಾದನೇನ ಬಣ್ಣಿಪೆನು ॥ ೧೬ ॥

ಕಾರಿರುಳನು ತನ್ನ ರತ್ನಕೀರಿಟ ಕ
ಣ್ಣಾರೆ ಹಗಲು ಮಾಡುವಂತೆ
ವಾರಣವೈರಿಪೀಠವನೇರಿ ಕಡೆಯ ಹ
ಜಾರದೊಳೋಲಗವಾದ ॥ ೧೭ ॥

ದಿಟ್ಟಿಸಲ್ವಷ್ಟಕೆ ಮುಂದೆ[1] ಭರಾಭರಿ[1]
ಗೊಟ್ಟರ್ದುದುರೆ ಪರಿವಾರ
ತೆಟ್ಟಿತೆಟ್ಟಿಯೊಳು ನಿಂದಿರ್ದುದು ಬಹುಪ್ರಜೆ
ನಿಟ್ಟಿಸುತಾ ಚಕ್ರಧರನ ॥ ೧೮ ॥

ಇಂದ್ರಜಾಲಿಗರು ಗೋವಿಂದಗತಿಗಳು ಮ
ಹೇಂದ್ರಜಾಲಿಗರು ವಿಸ್ಮಯರು
ಖೇಂದ್ರನಾಟಕರಿದ್ದರನುವಾಗಿ ಭರತ ರಾ
ಜೇಂದ್ರಗಾಟವ ತೋರ್ಪೆವೆಂದು ॥ ೧೯ ॥

ಭಾವಿಸಿ ಭಾಸ್ಕರ ನಡೆದತ್ತ ಮುಗಿದಿರ್ದ
ತಾವರೆ ಮಿಡಿದಲರ್ವಂತೆ
ಆವಕಡೆಗೆ ರಾಯ ಮೊಗವಿತ್ತನತ್ತ ನಾ
ನಾ ವಿದ್ಯೆಗಳ ತೋರುತಿಹರು ॥ ೨೦ ॥

ಸೂತ್ರವ ಮಿಡಿದರೆ ಬೊಂಬೆಗಳೆಲ್ಲ ತ
ನ್ಮಾತ್ರದಿ ಕುಣಿವಂತೆ ನೃಪನ
ನೇತ್ರಗಳೊಲೆದತ್ತ ತವತವಗಾಗಳೆ
ಪಾತ್ರದ ಪೆಂಗಳಾಡುವರು ॥ ೨೧ ॥

ಅಂಬರ ತುಡುಕೆ ಗಳೆಯನೇರಿ ನೃಪನ ಮು
ಖಾಂಬುಜವನೆ ನೋಡುತಿರ್ದು
ಕಂಬೆಳಗೊಲೆಯಲೊಡನೆ ತಟಪುಟನುಬ್ಬಿ
ಡೊಂಬರು ಲಾಗು ದೋರುವರು ॥ ೨೨ ॥

ಜಟ್ಟಿಗಳುಬ್ಬಿ ಕೋಯೆಂದಾಲ್ದು ಭುಜಗಳ
ತಟ್ಟಿಕೊಂಡೊಡೆಯ ಜೀಯೆಂದು
ಥಟ್ಟು ಪಟ್ಟನೆ ತಿವಿದೊಬ್ಬರೊಬ್ಬರ ತೆಗೆ
ದಿಟ್ಟಾಡಿ ಕೆಡೆದರತ್ತಿತ್ತ ॥ ೨೩ ॥

---

1 ಬಖಬರಿ (2) ಬರಾಬರಿ (ಕ, ಚ, ಛ)

ಅವರವರಂಗವನರಿದು ವಿದ್ಯಾಧಿಕ
ನಿವಹಕೆ ಸೂರೆ ಚಾಗವನು
ನವನಿಧಿಯಾಗಿ ಕೊಟ್ಟನು ಕೊಡುವಾಗ ಮ
ತ್ತವನ ಕೈಗೆಡೆತಡೆಯುಂಟೆ ॥ ೨೪ ॥

ನಿಂದುದು ಪುಷ್ಪಕ ನೃಪನಿದಿರೊಳು ಕೂಡೆ
ನಿಂದುವು ತೇಜಿಗಳ್ಬಳಸಿ
ನಿಂದಲ್ಲಿ ನಿಲ್ಲದೆ ಕುಣಿವುತಿದ್ದುವು ಮರ್ಕು
ಚಂದ ಚಂದದ ವಾದ್ಯಗತಿಗೆ ॥ ೨೫ ॥

ಮಂಜು ಮುಸುಕಿದಂತೆ ಝಲ್ಲಿಕಡೆಯ ರತ್ನ
ಪುಂಜದ ಬಾಸಿಗದಂತೆ
ರಂಜಿಸುತಿದ್ದುದು ರಾಯನೇರುವ ಪವ
ನಂಜಯವೆಂಬಶ್ವರತ್ನ ॥ ೨೬ ॥

ವಿಜಯಪರ್ವತವೆಂಬ ಪಟ್ಟದಾನೆಯ ಮೇಲೆ
ರಜತಾದ್ರಿಯೊಡೆಯನ ಪ್ರತಿಮೆ
ಬಿಜಯಂಗೈಸಿರೆ ಕಾಣಲೊಡನೆ ರಾಯ
ನಿಜಭಕ್ತಿಯಿಂದೆದ್ದು ನಿಂದ ॥ ೨೭ ॥

ತಾರಗೆ ಮುಸುಕಿದ ನಾಲ್ಕು ಮೇರುಗಳು ಸಂ
ಚಾರದೋರ್ಪಂತೆ ನಾಲ್ದೆಸೆಗೆ
ಭೂರಿ ದೀಪಗಳಿಡಿಕಿರಿದಿರ್ದ ನಾಲ್ಕು ಹೊಂ
ದೇರು ನಾಲ್ದೆಸೆಗೆ ಹರಿದುವು ॥ ೨೮ ॥

ಪಲ್ಲವ ಸತ್ತಿಗೆ ಸುತ್ತ ತೂಗುವ ನಿಡು
ಝಲ್ಲಿ ಮಾಣಿಕ್ಯದ ಕಲಶ
ಅಲ್ಲಾಡಿ ದಸಿಮಾಳ್ಪ ಘಂಟೆ ಪತಾಕೆಯ
ಗೆಲ್ಲದಿ ನಡೆದುವಾ ತೇರು ॥ ೨೯ ॥

ಹರಿದುವು ಮೂರು ದಿಕ್ಕಿಗೆ ಮೂರು ತೇರುಗ
ಳರರೆ ಮತ್ತೊಂದು ತೇರಾಗ
ಅರಮನೆಯತ್ತ ಹರಿದುದವನೀಶನ
ಹರಸಲರುಹನೆಯ್ದುವಂತೆ ॥ ೩೦ ॥

ವಾರನಾರಿಯರ ಪಾತ್ರಗಳಿಂದ ಪಾಡಿಂದ
ಭೇರಿ ಶಂಖದ ಘೋಷದಿಂದ
ತೇರು ತೆರಳಿ ಬಂದು ನಿಂದುದು ಕಡೆಯ ಹ
ಜಾರದ ಮುಂದೆ ಬಿಂಕದೊಳು ॥ ೩೧ ॥

ಮೇಲೆ ಮೆರೆವ ಪಳುಕಿನ ಸಿದ್ಧ ಬಿಂಬಕೆ
ಭೂಲಲನೇಶ ಕೈಮುಗಿದ
ಮೇಲು[1]ಮೆ[1]ಚ್ಚಿನೊಳು ಯಶಸ್ವತಿ ದೇವಿಯಿ
ರ್ದಾಲಿಸಿ ಭಕ್ತಿಮಾಡಿದಳು ॥ ೩೨ ॥

ಸೊಸೆಯರು ರಚಿಸಿದ ರತ್ನದಾರತಿಗಳ
ಹಸನಾದುವೆಂದೊಲ್ದುನೋಡಿ
ಒಸೆದು ಕಳುಹಿದಳು ತೇರಮೇಲಣ ದೇವ
ಗೆಸಗಿದರುಚಿತದರ್ಚನೆಯ ॥ ೩೩ ॥

ತಿರುಗಿತು ತೇರು ಜಿನಾಲಯದತ್ತ ಕೇ
ಸರಿಪೀಠದೊಳು ರಾಯ ಕುಳಿತ
ಪೊರೆಯಿಟ್ಟುದೊಂದು ರಾತ್ರಿಯ ಜಿನಮಹಿಮೆಯೀ
ಪರಿ ನಡೆಯಿತು ನವರಾತ್ರಿ ॥ ೩೪ ॥

ಪಾಡ್ಯದ ದಿನ ಮೊದಲಾಗಿ ನವಮಿಮುಟ್ಟ
ಕುಡ್ಯಲಂಘನದಶ್ವಮೆರೆದು
ತಾಡ್ಯಮಾನದ ವಾದ್ಯರವಮುಣ್ಮೈ ನಡೆದುದು
ಜಾಡ್ಯವಳಿದು ನವರಾತ್ರಿ ॥ ೩೫ ॥

---

1 ನು (ಖ, ಛ, ಕ)

ನವಮಿಯ ರಾತ್ರಿಯೊಳೋಲಗ ಹರಿವುದೆಂ
ಬವಸರಕೊಂದಿಷ್ಟು ಮುಂಚೆ
ಯುವರಾಜನಾಪ್ತ ಕಂಡನು ಬಂದು ಸಾಷ್ಟಾಂಗ
ವನತಿಯೊಳು ಕಾಣ್ಕೆಯಿಕ್ಕಿ ॥ ೩೬ ॥

ಕಾಮದೇವನ ಮಂತ್ರಿ ಪ್ರಣಯಚಂದ್ರಮನೆಂಬ
ನಾಮಕೊಪ್ಪುವನು ವಿವೇಕಿ
ಭೂಮೀಶನನುಮತದಿಂದ ಕುಳಿತನು ರಾ
ಜಾಮಾತ್ಯನೊತ್ತಿನೊಳಾಗ ॥ ೩೭ ॥

ಕಿರಿದು ಪ್ರಸಂಗವನತ್ತಿತ್ತ ನುಡಿದಾಡಿ
ಕಿರಿದು ವೇಳೆಯ ನೂಂಕಿ ತನ್ನ
ಕಿರಿಯನ ಸ್ಥಿತಿಯ ಕೇಳುವೆನೆಂದು ರಾಯ ಮ
ತ್ತುರೆ ಮಂತ್ರಿಯತ್ತ ನೋಡಿದನು ॥ ೩೮ ॥

ಏನೈ ಪ್ರಣಯಚಂದ್ರಮ ಬಾಹುಬಲಿ ನಿಚ್ಚ
ಲೀನು ಲೀಲೆಯೊಳಿರುತಿಹನು
ಈ ನಮ್ಮ ಪಣಯವ ಕೇಳ್ದೀನ ನುಡಿದನೆಂ
ದಾ ನರಪತಿ ಕೇಳ್ದನವನ ॥ ೩೯ ॥

ದೇವರ ಕೃಪೆಯಿಂದ ದೇವರ ಸೋದರ
ಗಾವ ಚಿಂತೆಯ ತೊಡಕಿಲ್ಲ
ಆವಾಗ ಸುಖದೊಳೋಲಾಡುತಿಹನು ಪುರು
ದೇವನಾತ್ಮಜನಲ್ತೆಯೆಂದ ॥ ೪೦ ॥

ದೇವರೊಳಪ್ಪಾಜಿಗರಸರೊಳಣ್ಣಾಜಿ
ಗಾವನ ಸರಿಗಾಣಬಹುದು
ನಾವೆಲ್ಲರವರ ನೆನೆದು ಬಾಳ್ವವೆಂಬನು
ದೇವ ನಿನ್ನನುಜನೆಮ್ಮೊಡನೆ ॥ ೪೧ ॥

ಬಂದು ದೇವರ ಕಂಡು ಬುದ್ದಿಗಲಿಸಿಕೊಂಬೆ
ನೆಂದೆಮ್ಮ ನೃಪನೊಮ್ಮೆ ಬಗೆದ
ಒಂದು ಶಾಸ್ತ್ರವ ಕೇಳತೊಡಗಿದ್ದ ಮೊದಲದ
ರಿಂದೆನ್ನ ನಿಲ್ಲಿಗಟ್ಟಿದನು ॥ ೪೨ ॥

ಹೇಳುವರಾತ್ಮ ಪ್ರವಾದವ ಮುನಿಗಳು
ಕೇಳುವನೆಮ್ಮವನೀಶ
ನಾಳೆ ನಾಡಿದಿನೊಳು ಮುಗಿವುದಾ ಗ್ರಂಥ ಭೂ
ಪಾಲವಂಶಾಂಬರಭಾನು ॥ ೪೩ ॥

ಇನ್ನೊಂದು ಗೂಢಾರ್ಥವುಂಟೆಂದು ನೃಪತಿಗೆ
ಸನ್ನೆಗಾಣಿಸಿದನಾ ಮಂತ್ರಿ
ಚೆನ್ನಾಯ್ತು ಸಾಕಿನ್ನು ಕುಳಿತುಸುರೆಂದು ರಾ
ಜೋನ್ನತ ಪೇಳೆ ಕುಳಿತನು ॥ ೪೪ ॥

ಗೂಡಾರ್ಥವುಂಟೆಂದು ಮಂತ್ರಿ ಕುಳ್ಳಿರಲಲ್ಲಿ
ಪ್ರೌಢರಿಹರು ಮೂಢರಿಹರೆ
ಪ್ರೌಢಜಕ್ರಿಗೆ ಕೈಮುಗಿದರೆಲ್ಲರು ತಮ್ಮ
ಪ್ರೌಢಿಗಾಣಿಸಿ ತೊಲಗಿದರು ॥ ೪೫ ॥

ಮಾತೇನು ಪೆರತಲ್ಲ ಸ್ವಾಮಿ ಸ್ವಾಮಿಯ ನಿಜ
ಮಾತೆಯ ಲೋಕಮಾತೆಯನು
ತಾತನರ್ಧಾಂಗಿಯ ತಾ ತನ್ನ ಪುರಕಂಗ
ಜಾತನೆಯ್ತಂದೊಯ್ವೆನೆಂದ ॥ ೪೬ ॥

ಮಗನ ಮನೆಗೆ ತಾಯಿ ಹೋಹರೆ ತಾಯನಾ
ಮಗ ತಾನೆ ಕರೆದೊಯ್ವರಿದಕೆ
ತೆಗೆಬಿಗಿಯೇನೆಮ್ಮನೇನ ಕೇಳ್ವುದು ತಾನು
ಮಗ ನಾನು ಮಗ ನಮ್ಮಗಲ್ತೆ ॥ ೪೭ ॥

ಮೊದಲೆ ದೇವರ ತಮ್ಮ ದೇವರಂತಾಡಿದ
ನಿದಕಾರ ಕೇಳಬೇಕೆಂದು
ಅದು ಮತವಲ್ಲ ಸೂಚಿಸಬೇಕು ವಿಭುವಿಗೆಂ
ದಿದ ಕೂರ್ತು ಬಂದೆ ನಾನೆಂದ ॥ ೪೮ ॥

ಉತ್ತಮನೈ ನೀನು ಬಿಡದೆಮ್ಮ ಭುಜಬಲಿ
ಯೊತ್ತಿನೊಳಿರು ಮಂತ್ರಿಯೆಂದು
ಉತ್ತಮದುಡುಗೊರೆಯಿತ್ತು ಬೀಳ್ಕೊಡಲು ಕೈ
ಮೆತ್ತಿ ಮುಗಿದು ಹೋದನವನು ॥ ೪೯ ॥

ಅನನತ್ತ ಸಾಗಿದನಾ ರಾಯನೊಡನಿತ್ತ
ಯುವರಾಜನಂತರಂಗವನು
ತವೆ ತನ್ನ ಮನದೊಳಾಲೋಚಿಸಿ ನಸುನಗೆ
ಚವಚವಿಸುತ ಮತ್ತೆ ನುಡಿದ ॥ ೫೦ ॥

ಬುದ್ಧಿಸಾಗರ ಮಂತ್ರಿ ಕಂಡೆಯ ಭುಜಬಲಿ
ಯುದ್ಧತಿಕೆಯನೆಮ್ಮ ಬಳಿಗೆ
ಶುದ್ಧ ಚಿತ್ತದೊಳಿಂದ್ದುಲ್ಲವೆ ಶಾಸ್ತ್ರದ
ಶುದ್ಧಿಗಾಣಿಸಿ ಬಿಟ್ಟನೆಂದ ॥ ೫೧ ॥

ದರ್ಪವೈ ಭುಜಬಲಿಗದರ ಮೇಲೆಮ್ಮ ಕಂ
ದರ್ಪನೆಂಬುದು ಹೆಮ್ಮೆ ತನಗೆ
ಆರ್ಪಾಟಿ ತನಗೆಂಬ ಪರಿಯಿದು ಹುಂಡಾವ
ಸರ್ಪಣಿಯಲ್ತೆ ಈ ಕಾಲ ॥ ೫೨ ॥

ಅಮ್ಮಾಜಿಯರೊಳಗಪ್ಪಾಜಿಯರೊಳಗೆಮ್ಮ
ತಮ್ಮಂದಿರಿಗೆ ಮಹಾಭಕ್ತಿ
ನಮ್ಮ ಕಂಡರೆ ತನುಗರಸ ವಿರಸ ಪರ
ಬೊಮ್ಮಸುತಗಿದು ನಡೆಯೆ ॥ ೫೩ ॥

ನಾನಿವರೊಳಗೆ ವಿನಯವ ನೆನೆವನು ತಾ
ವೇನೊ ನನ್ನೊಳು ಪೆರತಿಹರು
ಏನಮಾಡಿದೆನು ನಾನಿವರ್ಗಿಷ್ಟು ನೋವಾಗ
ನೀನರಿಯೆಯ ಹೇಳು ಮಂತ್ರಿ ॥ ೫೪ ॥

ಜಿನನಾಣೆ ಗಡ ನಿನ್ನೊಳಿಂದು ನುಡಿದೆನ್ಯೈಸೆ
ಇನಿಬರ ಜೇಷ್ಟೆಯನೆನ್ನ
ಜನನಿಯರಿದರೆ ನೊಂದಹಳೆಂದು ಮಾಜಿಕೊಂ
ಡನುಜರೊಳ್ಳಿದರೆನುತಿಹೆನು ॥ ೫೫ ॥

ಕಿರಿಯರವರುಸ್ವಾಮಿ ಸೈರಿಸು ನಿನಗಾದ
ಕೊರತೆಯೇನಿದರಿಂದ ಚಕ್ರಿ
ಅರಿಯರವರು ದೇವ ನಿನ್ನೊಳು ಪುದುವಾಳ್ದ
ಮೆರೆವವರ್ಗತಿ ಪುಣ್ಯ ಬೇಕು ॥ ೫೬ ॥

ನಿನ್ನನುಡಿಯೆಸಾಕು ಜಗವೆಲ್ಲ ಭಾಸ್ಕರ
ನುನ್ನಗರ್ತಿ ಮಾಡುವುದು
ಕನ್ನೈದಿಲಡ್ಡಮೋರೆಯೊಳಿರುವುದರಿಂದ
ಬನ್ನವುಂಟೆ ಪ್ರಭಾಕರಗೆ ॥ ೫೭ ॥

ತೊಡಹಗಾರಿಕೆಯೊಳಾ ಮಂತ್ರಿಮಾಡಿದ ಮಾತಿ
ಗೊಡನಹುದಹುದೆಂದ ನಗುತ
ಒಡಕುಹುಟ್ಟಿಸದ ಬಾಂಧವ ತಂತ್ರಿಯೆಂದದ
ನುಡಿಯದೆ ಮೆಚ್ಚಿದನೊಳಗೆ ॥ ೫೮ ॥

ಆರೆಯಿರುಳಿನ ಸನ್ನೆಯಾಯ್ತಾಗ ಜಿನಸಿದ್ಧ
ಶರಣೆನುತವನೀಶನೆದ್ದ
ವರಮಂತ್ರಿ ಸೇವಕರೊಡಗೂಡಿ ಶಸ್ತ್ರಮುಂ
ದಿರಕೆ ಬಂದನು ಗಮಕದೊಳು ॥ ೫೯ ॥

ಬಲುತೆರಪಿನ ಶಸ್ತ್ರಶಾಲೆಯೊಳೊರೆಯುಚ್ಚಿ
ದಲಗುಗಳೆಲ್ಲ ಸಾಲಾಗಿ
ಬಲಿಪುಷ್ಪಗಂಧ ಮುಂತಾದ ಪೂಜೆಯೊಳು ವೆ
ಗ್ಗಳಿಸುತಿದ್ದುವು ವೀರರಸವ ॥ ೬೦ ॥

ರಕ್ತ ಚಂದನದಲ್ಲಿ ಸಾರಣೆ ಕಾರಣೆ
ರಕ್ತ ಚಂದ್ರಿಕೆಯ ಮೇಲ್ಬಟ್ಟು
ರಕ್ತವರ್ಣದ ಪುಷ್ಪಮಾಲೆಯಿಂದಾ ಶಾಲೆ
ಯುಕ್ತಿಗೊಪ್ಪಿತು ಸಂಜೆಯಾಯ್ತು ॥ ೬೧॥

ಹೊಗೆಯೇಳ್ವ ಧೂಪ ಹೊಂಗಿಡಿಗೆದರುವ ದೀಪ
ಬಗೆಬಗೆವಣ್ಣದ ಪುಷ್ಪ
ಚಿಗುರೆಲೆ ಕೆಂಗೂಳು ಪಣ್ಯಾಯ ಮೆದೆಯಿಂದ
ದಿಗುಬಲಿಗೊಟ್ಟಿರ್ದುದಲ್ಲಿ ॥ ೬೨ ॥

ಭಲ್ಲೆಯ ಕತ್ತಿ ಕಠಾರಿ ಮುಪ್ಪಿಡಿ ವಂಕಿ
ಸಲ್ಲಿಹ ಗದೆ ಲೌಡಿ ಸಬಳ
ಬಿಲ್ಲಂಬು ಜವದಾಡೆ ಕಿರಿಸೆಗಳಾ ಗೃಹ
ದಲ್ಲಿದ್ದವುರಿಮಾರಿಯಂತೆ ॥ ೬೩ ॥

ಎಂದಿಗೀ ದೊರೆ ದಂಡು ನಡೆವನೊ ರಿಪುಗಳ
ತಿಂದು ತೇಗುವೆನೆಂದು ಮೃತ್ಯು
ಇಂದೆ ನಾಲಗೆ ನೀಡಿದಂತಿರ್ದುದಲ್ಲಿ ಸಾ
ನಂದಕವೆಂಬಸಿರತ್ನ ॥ ೬೪ ॥

ಕಾಲನ ದಾಡೆಗಳಂತೆ ಕರಾಳ ಖ
ಡ್ಗಾಳಿಗಳೆರೆ ಮತ್ತೆ ನಡುವೆ
ಜ್ವಾಲಾರ್ಕನಂತೆಸೆದುದು ಚಕ್ರರತ್ನ ಭೂ
ಪಾಲ ನೋಡಿದನದ ನಿಂದು ॥ ೬೫ ॥

ಚಕ್ರಿಬಿನ್ನಹವಿಂದು ಮುಟ್ಟಸಂಭ್ರಮದಲ್ಲಿ
ಚಕ್ರರತ್ನದ ಪೂಜೆಯಾಯ್ತು
ವಿಕ್ರಾಂತ ಲಗ್ನದೊಳಗೆ ನಾಳೆ ಪಯಣ ಯ
ಥಾಕ್ರಮವೆಂದನಾ ಮಂತ್ರಿ ॥ ೬೬ ॥

ಆ ನುಡಿಗೇಳುತ ನೃಪತಿ ಚಕ್ರದಮೇಲೆ
ತಾನೊಂದು ಕಮಲವನಿಟ್ಟ
ಭಾನುವಿಗಬ್ಜ ಸಾರ್ದುದು ದೇವ ನಿನಗಿದು
ತಾನೆ ಲೇಸಿಹ ಚಿಹ್ನವೆಂದ ॥ ೬೭ ॥

ಧಾತ್ರೀಶನಲ್ಲಿಂದ ಮಗುಳ್ದನಾ ಮಂತ್ರಿಯ
ನೇತ್ರಲೀಲೆಯೊಳು ಬೀಳ್ಕೊಟ್ಟ
ಸೂತ್ರಿಸಿ ತನ್ನ ರಮನೆವೊಕ್ಕನಿದು ನವ
ರಾತ್ರಿಯ ಸಂಧಿ ಸುಗಂಧಿ ॥ ೬೮ ॥

ಪಟ್ಟಿಪಯಣದ ಸಂಧಿ

ಉತ್ತಮ ಲಗ್ನದೊಳಗೆ ದಶಮಿಯೊಳು ರಾ
ಜೋತ್ತಮ ಶೃಂಗಾರವಾಗಿ
ಉತ್ತುಂಗ ದಿಗ್ವಿಜಯಕೆ ಪೊರಮಟ್ಟ ಸಂ
ಪತ್ತನದೇನ ಬಣ್ಣಿಪೆನು ॥ ೧ ॥

ರಾಯವಿಭಾಡ ರಾಜಾದಿತ್ಯ ಮಲೆವರಿ
ರಾಯದಲ್ಲಣ ರಿಪುಮಥನ
ಪಾಯವಧಾರು ಜತನ ಜಯಯೆನೆ ತನ್ನ
ತಾಯರಮನೆಗೆ ನಡೆದನು ॥ ೨ ॥

ಬರುತಿಹ ಮಗನ ಸೌಭಾಗ್ಯವ ತಾಯಿ ತ
ನ್ನೆರಡು ಕಣ್ಣಿಣಿವಂತೆ ನೋಡಿ
ಹರುಷನೇರಿದಳು ಸಂಪೂರ್ಣಚಂದ್ರನ ಕಂಡು
ಶರಸಿಧಿ ಹೆಚ್ಚುವಂದದೊಳು ॥ ೩ ॥

ಸಕಲ ವಿಲಾಸಿನಿಯರ ನಟ್ಟನಡುವೆ ಮಾ
ಣಿಕದ ದೇವತೆಯಂತೆ ಮೆರೆವ
ಅಕಳಂಕಚರಿತೆಗಂಬಿಕೆಗೆ ಷಟ್ಪಂಡನಾ
ಯಕನೆರಗಿದ ಕಾಣ್ಕೆಯಿಕ್ಕಿ ॥ ೪ ॥

ಘನದಸಮುದ್ರಾಂತ ಧರೆಯ ಲೀಲಾಮಾತ್ರ
ದನುವಿಂದ ಜಯಿಸೆನ್ನ ಕಂದ
ಜಿನಭಕ್ತಿಯಲ್ಲಿ ಭೋಗದೊಳಿಂದ್ರನಾಗೆಂದು
ಜನನಿ ಹರಸಿದಳು ಮಗನ ॥ ೫ ॥

ತಕ್ಕೈಸಿಕೊಂಡು ತೂಪಿರಿದಳು ಹರಸಿದ
ಳಕ್ಕರಿಂ ಮೊಗವ ನೋಡಿದಳು
ನಕ್ಕಳು ಮಗನೆ ತಾಮಸವಾಡಬೇಡ ನ
ನ್ನಿಕ್ಕೆಗೆಯೆಂದಳು ಬೇಗ ॥ ೬ ॥

ಆನೆ ಕುದುರೆಯ ಕಾಲಿಗೆ ಮುಳ್ಳು ತಾಗದೆ
ಮಾನವೇಂದ್ರರ ನಿನ್ನ ಕಾಲ್ಗೆ
ಆನತಗೈಸಿಕೊಂಡೆನ್ನೊಗೆ ಬಾರೆಂದು
ಸೂನುವ ಬೀಳ್ಕೊಟ್ಟಳೊಡನೆ ॥ ೭॥

ಜನನಿಯು ಹರಕೆಯ ಕೈಕೊಂಡು ಜಿನಸಿದ
ಎನುತ ರಾಜೇಂದ್ರ ನಡೆದನು
ಅನಿತರೊಳಗೆ ಸೊಸೆಯರು ಬಂದರತ್ತೆಗೆ
ವಿನಮಿಸಿ ಬೀಳ್ಕೊಂಬೆವೆಂದು ॥ ೮ ॥

ಬನ್ನವೆಂಬುದು ನಿಮ್ಮ ಕನಸಿನೊಳಗೆ ಕಾಣ
ದೆನ್ನನುಜನ ಸುತೆಯರಿರ
ನನ್ನಣುಗನ ಕೂಡೆ ಲೀಲೆಯೊಳೋಲಾಡಿ
ಬನ್ನಿರೆಂದುರೆ ಹರಸಿದಳು ॥ ೯ ॥

ನಿಮ್ಮರಸನ ಜಾಣ್ಮೆತೊಳೆದು ಲೋಕದ ಜಿಡ್ಡ
ಕಮ್ಮನೆ ಮಾಡುತಿದ್ದಪುದು
ನಮ್ಮನಿನ್ನೇನ ಕೇಳ್ವುದು ನಿಮ್ಮ ಪತಿವೇಳ್ದ
ಸೊಮ್ಮಿನೊಳಿಹುದದೆ ಬುದ್ಧಿ ॥ ೧೦ ॥

ಅತ್ತ್ಯಮ್ಮನಡಿಗಳ ಕಾಣ್ಬತನಕ ವ್ರತ
ಕೃತ್ಯವೊಂದೊಂದು ಬೇಕೆಂದು
ಸತ್ಯಕಾಂತೆಯರೆಲ್ಲ ತನ್ಮೊಳಾಲೋಚಿಸಿ
ವೃತ್ಯನುಮತದಿ ಮಾಡಿದರು ॥ ೧೧ ॥

ಉಂಬ ರಸಗಳಲ್ಲಿ ಮುಡಿವ ಪುಷ್ಪಗಳಲ್ಲಿ
ತಂಬುಲದುಗುಲಗಳಲ್ಲಿ
ಇಂಬರಿದೊಬ್ಬೊಬ್ಬರೊಂದೊಂದ ತೊರೆದರೇ
ನೆಂಬೆನವರ ಭಕ್ತಿರಸವ ॥ ೧೨ ॥

ಪರರಾಜ್ಯಕೆಯ್ದುತಿದ್ದ ಪಿರಿ ಪೆಂಗಳಿರ ಸಂ
ಚರವ್ರತ ಬೇಡೆಂದಳತ್ತಿ
ಭರತೋರ್ವಿ ನಮ್ಮದು ಪರರಾಜ್ಯಕೆಯ್ದೆವೆಂ
ದೊರೆದೆಲ್ಲ ವ್ರತವ ತಾಳಿದರು ॥ ೧೩ ॥

ಬಗೆಮೆಚ್ಚಿ ಮತ್ತೆ ತಮ್ಮತ್ತೆಗೆರಗಿಯಾಕೆ
ತೆಗೆದಿಟ್ಟ ಸೇಸೆಯನಾಂತು
ದುಗುಡದಿ ಬಾಳ್ವ ಗೃಹಸ್ಥರ ಬಾಳ್ಕೆಯ
ನಗುವಂತೆ ನಗುತ ನಡೆದರು ॥ ೧೪॥

ಇಟ್ಟಣಿಸಿದ ಸತಿಯರ ಬಳಸಿನೊಳಳ
ವಟ್ಟೊಂದು ಹೊನ್ನರಥದೊಳು
ಕಟ್ಟುಮೆಚ್ಚಿನೊಳರ್ಕಕೀರ್ತಿ ಕುಮಾರನ
ತೊಟ್ಟಲ್ಗೈತರುತಿರ್ದುದಾಗ ॥ ೧೫ ॥

ಕೂಪನಂಬುಗೆ ವಂದರೆನಲಣ್ಣಗಳ ನಾಮ
ಕಾಪುಗೊಂಡವರು ರಾಣಿಯರ
ಆಪುರದ್ವಾರದತ್ತಿಯ್ದಿ ಸುತಿರಲಿತ್ತ
ಭೂಪ ನಡೆದ ಜಿನಗೃಹಕೆ ॥ ೧೬ ॥

ಕೆಳೆಯರು ತೋರುವ ಶುಭಶಕುನವ ನೋಡು
ತೊಳನಗೆ ನಗುತ ತನ್ನೊಳಗೆ
ಗೆಲವಿಂದ ಹಂಸನಾಥನ ಸ್ಮರಿಸುತ ಬಂದ
ಪೊಳಲ ಮಧ್ಯದ ಜಿನಗೃಹಕೆ ॥ ೧೭ ॥

ಹೊರಗಣ ಪೌಳಿಗಾಣುತ ಪಾವುಗೆಯ ಮಾಣ್ದು
ಸೆರಗುಡೆ ಸುತ್ತಿ ನಡೆದನು
ಮಿರುಪೈದು ಹೊನ್ನಕೋಟಿಯ ದಾಟಿ ಕಂಡನು
ಮೆರೆವಾದಿಜಿನನ ಬಿಂಬವನು ॥ ೧೪ ॥

ಭದ್ರಮಂಟಪದಲ್ಲಿ ನಿಂದು ಕಾಣಿಕೆಯಿಕ್ಕಿ
ಭದ್ರಭಾವದೊಳೆರಗಿದನು
ಚಿದ್ರೂಪಭಾವನೆಯುಳ್ಳ ಯೋಗಿಗಳ ಸ
ಮುದ್ರವಿದ್ದುದು ನಮಿಸಿದನು ॥ ೧೯ ॥

ಸಿದ್ಧ ದಿಗ್ವಿಜಯ ಕಾರ್ಯೋಭವ ಭೂಪ ಸ
ಮೃದ್ಧ ಸುಖೀಭವಯೆಂದು
ಸಿದ್ಧಾಂತಘೋಷದೋರಿದರು ನಿರಂಜನ
ಸಿದ್ಧಭಾವನೆಯ ಯೋಗಿಗಳು ॥ ೨೦ ॥

ಧರಿಸಿಲ್ಲಿ ಸ್ವಾಮಿ ಕಿರೀಟವನೆಂದನಾ
ದರದಿಂದ ಮಂತ್ರಿ ಮತ್ತದಕೆ
ದರಹಸಿತಾನನನಾ ರಾಯನೊಡಬಟ್ಟು
ಧರಿಸಿದನುತ್ತಮಾಂಗದೊಳು ॥ ೨೧ ॥

ಜಿನಗೈ ಮುಗಿದನು ಸ್ವಾಮಿ ಪುನರ್ದ
ರ್ಶನವಾಗಲೆಂದು ಕಿರೀಟ
ಮುನಿಗಳ್ಗಿ ನಮಿಸಿದ ಜಯಜಯವೆಂಬ ಘೋ
ಷಣೆಯೊಳು ಮುಗುಳ್ದನಲ್ಲಿಂದ ॥ ೨೨ ॥

ಸರ್ವ ಸಂಭ್ರಮದಿಂದ ಪಂಚಕೋಟಿಯ ದಾಟಿ
ಸಾರ್ವಭೌಮನು ನಡೆತಂದು
ಪರ್ವತದಂತಿದ್ದ ಪಟ್ಟದಾನೆಯನೇರಿ
ಸರ್ವಜ್ಞ ಶರಣೆನುತಡರ್ದ ॥ ೨೩ ॥

ಎತ್ತಿತು ಮುತ್ತಿನ ಸತ್ತಿಗೆ ಚಾಮರ
ವತ್ತಿತ್ತ ಬೀಮ್ಮಿದುವಾಗ
ಸುತ್ತ ಪತಾಕೆಯೆದ್ದುವು ವಾದ್ಯಕೋಟಿ ದಿ
ಗ್ಭಿತ್ತಿ ಬಿರಿಯೆ ಮೊಳಗಿದುವು ॥ ೨೪ ॥

ಇಟ್ಟ ಕಿರೀಟ ಮೂಡುವ ಸೂರ್ಯನಂತೆ ಮೈ
ಗಟ್ಟು ಹೊಂಬೊಂಬೆಯಂತೆಸೆಯೆ
ಬೆಟ್ಟವ ನಡೆಸುವಂತಾ ರಾಯ ಮುಂದಕೆ
ಪಟ್ಟದಾನೆಯ ನಡೆಸಿದನು ॥ ೨೫ ॥

ಪುರುಷೋತ್ತಮನಿಂದು ಪುರದಿಂದ ಮುಂದಕೆ
ತೆರಳುತಿದ್ದಪನೆಂಬುದರಿದು
ಪುರದೊಳಗಿದ್ದ ಪೆಣ್ಗಂಡೆಲ್ಲರೊಲವಿಂದ
ನೆರೆದು ನಿಟ್ಟಿಸಿದರೇನೆಂಬೆ ॥ ೨೬ ॥

ಆಡಲಳವೆ ಚಕ್ರನಾಥನ ಸೊಬಗನು
ನೋಡಿದ ಪೆಣ್ಗಳಲ್ಲಲ್ಲಿ
ನೋಡುತ ಸೈವೆರಗಾಗಿದ್ದರುಸುರದ
ಲ್ಲಾಡದ ಪುತ್ತಳಿಯಂತೆ ॥ ೨೭ ॥

ಮಾನಿನಿಯರು ತನ್ನ ನೋಡುತಿರ್ದರು ರಾಯ
ತಾನವರನು ನೋಡುತಿಲ್ಲ
ಆನೆಯ ಕುಂಭದತ್ತೀಕ್ಷಿಸುತೆಯ್ತಂದ
ಯೇನ ಕಲಿತನೊ ಗೌರವವ ॥ ೨೮ ॥

ಸಿರಿಬನದೊಳಗೆ ಮನ್ಮಥರಾಜ ಬಪ್ಪಂತೆ
ಪುರದ ಬೀದಿಯೊಳಿಂತು ಬಂದು
ಸಿರಿ ನೆಲಸಿಪ್ಪ ಹೊತ್ತಿನೊಳು ವಿನೀತಾ
ಪುರದ ಕೋಟಿಯನು ದಾಟಿದನು ॥ ೨೯ ॥

ಪಟ್ಟಣವನು ದಾಟಿ ಪೌಜನೋಡುವ ಬಲು
ಬಟ್ಟಬಯಲಿಗಾಗಿ ನೃಪತಿ
ಪಟ್ಟದಾನೆಯನೇರಿ ಬರುತಿರ್ದನಿಲ್ಲಿಗೆ
ಪಟ್ಟಣಪಯಣದ ಸಂಧಿ ॥ ೩೦ ॥

ದಶಮಿಪ್ರಸ್ಥಾನ ಸಂಧಿ

ಇಭವನಡರಿ ಭರತೇಶ ನಾನಾವಾದ್ಯ
ರಭಸದೊಳೆಯ್ತರುವಾಗ
ಅಭಿಮುಖದೊಳು ಮುಂದೆ ಬನ್ನಿಯ ಮರದಲ್ಲಿ
ಪ್ರಭೆದೋರಿದುದು ಚಕ್ರರತ್ನ ॥ ೧ ॥

ಉನ್ನತದೆಳೆಗೊನೆಗಳು ಗಾಳಿಯಿಂದ ಕೈ
ಸನ್ನೆಗೈವಂದದಿ ಕೂಗೆ
ಬನ್ನಿಯೆಂಬೆಲ್ಲರನೊತ್ತಿಗೆ ಕರೆವಂತೆ
ಬನ್ನಿಯ ಮರ ವಿರಾಜಿಸಿತು ॥ ೨ ॥

ಅಂಕೆಗೊಟ್ಟಾನೆಯ ನಿಲಿಸಿ ಮೇಲೂರಿದೊಂ
ದಂಕುಶದೊಳು ಹಸ್ತವಿಟ್ಟು
ಬಿಂಕದೊಳೊಲೆದು ನೋಡಿದನು ಶೃಂಗಾರದ
ಸೋಂಕಿನೊಳೆಸೆವ ಪಾಯ್ದಳವ ॥ ೩ ॥

ಕಣ್ಣಿಟ್ಟುವಪ್ಪರೊಳಿತ್ತ ನೋಡಿದರತ್ತ
ಹೆಣ್ಣಿದಾನೆಗಳು ತೇಜಿಗಳು
ಬಣ್ಣಬಗೆಯ ರಥ ವೀರಭಟರ ಮೊತ್ತ
ಪಣ್ಣೆಪಣ್ಣೆಯೊಳಿರ್ದುದಾಗ ॥ ೪ ॥

ಮಧ್ಯಾಹ್ನ ತಿರುಗಿ ಮೂರನೆಯ ಜಾವದೊಳಗ
ಯೋಧ್ಯನ ಕೈಸನ್ನೆಯರಿದು
ಅಧ್ಯಕ್ಷರಾಜರು ಸಾರ್ತಂದು ಕಂಡರ
ಯೋಧ್ಯಾಧಿಪತಿಯ ನೇನೆಂಬೆ ॥ ೫ ॥

ಆರು ಖಂಡದೊಳೈದು ಖಂಡದ ನೃಪರಲ್ಲಿ
ತೋರುತಿಲ್ಲೊಂದು ಖಂಡದೊಳು
ತೋರುವ ನೃಪರೆಲ್ಲ ಬಂದು ಕಂಡರು ಪಂಥ
ಕಾರನನಾ ಚಕ್ರಧರನ ॥ ೬ ॥

ಆರ್ಯಾಖಂಡದ ನೃಪರೆಲ್ಲ ಕಂಡರು
ಶೌರ್ಯದಿಂದೈದು ಮ್ಲೇಚ್ಛದೊಳು
ಕಾರ್ಯಕೆ ಬಾರದ ನೃಪರ ಕೈವಶಮಾಳ್ಪ
ಕಾರ್ಯಕೀ ಬಲವ ಕೂಡಿದನು ॥ ೭ ॥

ಪಡೆಯನೆಲ್ಲವ ಕೂಡಿ ಭರತರಾಜೇಂದ್ರನು
ತೊಡೆಸನ್ನೆಯಿಂದ ಹಸ್ತಿಯನು
ನಡೆಸಿದನೆಲ್ಲರು ಜಯ ಜಯ ಚಾಂಗೆಂದು
ಕಡಲಂತೆ ಕೂಗಿ ಬೊಬ್ಬಿರಿಯೆ ॥ ೮ ॥

ಛಟಪಟ ಸುರುಬುರು ಬುಸ್ಸು ಬುಸ್ಸೆಂದು ಚೀ
ರ್ಚಿಟ ತೊಪ್ಪು ತೊಪ್ಪು ಡಪ್ಪೆಂದು
ಪೆಟಲು ಕೋಟಾಕೋಟಿ ಸುಟ್ಟವು ವೀರರಾ
ರ್ಭಟಿಸಿದರೊಂದೆ ಲಗ್ಗೆಯೊಳು ॥ ೯ ॥

ಭೇರಿ ನಿಸ್ಸಾಳ ಪಟಹ ಶಂಖ ಹೆಗ್ಗಾಳೆ
ವೀರತಂಬಟ ತುಡುಮುಗಳ
ಭೋರನೊಂದೇ ಬಾರಿ ಸದೆದರು ಪ್ರಳಯದ
ಭೈರವಾರ್ಭಟೆ ತೋರಿತೆನಿಸಿ ॥ ೧೦ ॥

ವಿಜಯವೃಕ್ಷವ ಬಲಕಿಕ್ಕಿ ನಡೆಸಿದನು
ವಿಜಯಪರ್ವತವನಾ ಚಕ್ರಿ
ಧ್ವಜದೊಗ್ಗಿನೊಳು ಹೊಳೆವುತ ತೆರಳಿದುದು ಸಾ
ಮಜದ ಮುಂಗಡೆಯೊಳು ಚಕ್ರ ॥ ೧೧ ॥

ಎಡ ಬಲ ಹಿಂದು ಮುಂದೆಲ್ಲಿಯು ತುಂಬಿ ಪೆ
ರ್ವಡೆ ನಡೆದುದು ಕಡಲಂತೆ
ನಡುವೆ ಮುಂದರದಂತೆ ರಾಜೇಂದ್ರ ಮುತ್ತಿನ
ಕೊಡೆಯ ನೆಳಲೊಳಿಯ್ದುತಿರ್ದ ॥ ೧೩ ॥

ದೊರೆ ದೊರೆಗಳು ತಮ್ಮ ಪೌಜಿನೊಳೂದುವ
ಬಿರುದಿನ ಕಹಳೆ ವಾದ್ಯದೊಳು
ಬರುತಿದ್ದರೋಲೈಸಿ ಭರತರಾಜೇಂದ್ರನ
ಸಿರಿಗೆಱೆಯಹ ಸಿರಿಯುಂಟೆ ॥ ೧೩ ॥

ಜಯಘೋಷದೊಳು ಪುರಕತಿದೂರವಾಗದೋ
ಜೆಯೊಳು ಕಿರಿದು ದೂರ ಗಮಿಸಿ
ಮುಯ ರಚಿಸಿದ ಬೀಡುದಾಣದ ಕೆಲದೊಳಾ
ನೆಯ ನಿಲಿಸಿದನವನೀಶ ॥ ೧೪ ॥

ತೇರಮೇಲಾನೆಯಮೇಲೆ ತೇಜಿಯಮೇಲೆ
ಸಾರೆನಿಂದಖಿಲ ಭೂಮಿಪರ
ತೋರಹಸ್ತದ ಸನ್ನೆ ಕಣ್ಸನ್ನೆಯಿಂದ ಬೀ
ಡಾತಕೆ ಬೀಳ್ಕೊಟ್ಟನೊಡನೆ ॥ ೧೫ ॥

ಬುದ್ಧಿಸಾಗರನ ಸೇನಾಧಿಪತಿಯ ಗಣ
ಬದ್ಧರ ಕೆಳೆಯರ ಕಳುಹಿ
ಶುದ್ಧಾಂತರಂಗ ಹೊಕ್ಕನು ಭದ್ರಮುಖನೆಂಬ
ವಿದ್ಧಿ ಮಾಡಿದ ಶಿಬಿರವನು ॥ ೧೬ ॥

ಒಳಗೊಂದು ಮದುವೆಯ ಜಗಲಿ ಸಿಂಗರಿಸಿರ
ಲೊಲೆದು ರಾಜೇಂದ್ರ ನೋಡುತಿರೆ
ಕೆಲದಲ್ಲಿ ಕುಸುಮಾಜಿ ನುಡಿದಳು ಮುಂದೆ ಮುಂ
ಗಲದ ಸೂಚನೆ ನಿವಗೆಂದು ॥ ೧೭ ॥

ಇದು ತನ್ನ ತಂಗಿಯ ಮದುವೆಗಿಂದವಳೆಸ
ಗಿದ ತಿಟ್ಟವೆಂದದನರಿದ
ಸುದತಿಯ ಕಾರ್ಯವ ಪುರದೊಳಿದ್ದಾಗ ಸಂ
ಪದಿಸುವುದೇನಾದುದೆಂದ ॥ ೧೪ ॥

ಕಳುಹಿದೆನಹುದಿಲ್ಲಿಗಪ್ಪಾಜಿ ಬಹುದಿಷ್ಟು
ತಳುವಾದುದದರಿಂದ ಮುಂದೆ
ತಳದ್ದಾಗ ವೇಳೆ ಸಂಘೆಡಿಸದೆಂದಿಲ್ಲಿ ಸಂ
ಗಳಿಸಿದೆನೆಂದಳಾ ಕುಶಲೆ ॥ ೧೯ ॥

ಇರುಳಿಗೆ ಲಗ್ನ ಲೇಸೆಂದೆಮ್ಮ ಜನಕ ನಿ
ರ್ಧರಿಸಿ ಬಂದಿದ್ದನೆನ್ನನುಜೆ
ಪರಿಪೂರ್ಣ ಶೃಂಗಾರವಡೆದಿರ್ದಳೆನುತಾಕೆ
ಪ್ರರುಷನೊಳ್ನುಡಿವುತೆಯ್ದಿದಳು ॥೨೦॥

ಒಂದು ಕಂತಿಯೊಳಂತರಾಯವಿಲ್ಲದೆ ಪೆಂಟ
ರೊಂದಾಗಿ ಭೋಜಿಸಿ ನೃಪತಿ
ಮುಂದಹ ಜಗದ ಸೂಚನೆಯೆಂದು ನವಗೆಂದು
ಸೌಂದರಿಯರಕೂಡೆ ನುಡಿದ ॥ ೨೧ ॥

ಅರ್ಕನಸ್ತಮಿಸೆ ಸಂಧ್ಯಾಚರಣೆಯ ಮಾಡಿ
ಅರ್ಕಕೀರ್ತಿಯನು ಮುದ್ದಾಡಿ
ತೋರ್ಕೆಯೊಳೊಡನೆ ಸಿಂಗರಿಸಿ ಕಾಂತೆಯರ ಸಂ
ಪರ್ಕದೊಳಿರ್ದನಿರ್ವಾಗ ॥ ೨೨ ॥

ಮುಟ್ಟಲಾದುದು ಲಗ್ನವೆನೆ ರಾಯ ನಡೆತಂದು
ಮೆಟ್ಟಕ್ಕಿಗಳ ಮೆಟ್ಟಿ ನಿಂದು
ನಿಟ್ಟಿಸಿ ಮಾವನೊತ್ತಿಸೊಳಿದ್ದ ಮೈದುನ
ಗಟ್ಟಹಾಸದೊಳಿಂತು ನುಡಿದ ॥೨೩॥

ಕುಸುಮಾಜಿಯಂತಲ್ಲ ಕಮಲಾಂಕ ಕೇಳು ಕೋ
ಪಿಸಿ ನನ್ನ ಜರೆದಿರ್ದಳವಳು
ಅಸಮಾನದವಳ ನೀನೆನಗೀವೆನೆಂಬುದು
ರಸಿಕರ ಮಾರ್ಗವೆಯೆಂದ ॥೨೪॥

ವಸುಧೆಯೊಳ್ನಿನಗೆ ಸಮಾನವಿಲ್ಲಾಗಿ ನೀ
ನಸಮಾನದವನನದರಿಂದ
ಅಸಮಾನದವನೀಶಗಸಮಾನದಬಲೆಯ
ರಸಿಕರೀಯರೆ ಯೆಂದನವನು ॥ ೨೫ ॥

ಪಯಣದ ವೇಳೆಯಾದುದು ಬಹುವಾಕ್ಯಕಾ
ಶ್ರಯವಿಲ್ಲ ಸೈರಿಸೆಂದೊರೆದು
ನಿಯತ ಶೋಭನ ಮಂಗಳಾಷ್ಟಕಗೇಳುತೋ
ಜೆಯೊಳಿರ್ದನಾ ಮೋಡಿಕಾರ ॥ ೨೬ ॥

ಸಿಕಟದ ತೆರೆ ಜಾರೆ ವಾದ್ಯ ಘೂರ್ಣಿಸೆ ಗಜಾ
ನಕರಾಜನು ಧಾರೆಯೆರೆಯೆ
ಪುಕರಂದಾಜಿಯನಾ ರಾಯ ಹೋಮಸಾ
ಕ್ಷಿಕದಲ್ಲಿ ಹಸ್ತವಿಡಿದನು ॥ ೨೭ ॥

ರಾಜೇಂದ್ರನರಮನೆಗವಳನೊಯ್ದನು ಕುಸು
ಮಾಜಿ ಬೀಳ್ಕೊಟ್ಟಳಯ್ಯನನು
ಸೌಜನ್ಯಕಾಂತೆಯರೆಲ್ಲರೊಳಾ ಮಹಾ
ರಾಜಸಿದ್ದನು ಸುಖಾಂಗದೊಳು ॥ ೨೮ ॥

ನಶವಹುದೀತಗುರ್ವರೆ ನಾಳೆ ಯೇಕಾ
ದಶಿ ಮುಂದೆ ನಡೆವವೆಂದನುತ
ಕುಶಲವೃತ್ತಿಯೊಳು ಪಾಯ್ದಳವಿದ್ದುದಿಲ್ಲಿಗೆ
ದಶಮಿಪ್ರಸ್ಥಾನದ ಸಂಧಿ ॥ ೨೯ ॥

ಪೂರ್ವಸಾಗರದರ್ಶನ ಸಂಧಿ

ಏಕಾದಶಿಯುದಯದೊಳಿದ್ದು ಭರತೇಶ
ಸಾಕೇತಪುರದ ರಕ್ಷಣೆಗೆ
ಮಾಕಾಳನೆಂಬನ ಬೀಳ್ಕೊಟ್ಟು ಮುಂದೆಸೆ
ವಾ ಕೋಟ ನಡೆಯ ಹೇಳಿದನು ॥ ೧ ॥

ಬೆಟ್ಟವ ತೋಡಿ ತೊಗಲಕಟ್ಟಿದಂತಳ
ವಟ್ಟ ಪನ್ನೆರಡು ಭೇರಿಗಳ
ಕುಟ್ಟಿದರಾಗಳೆ ಜಗವೆಲ್ಲ ಮೊಳಗಿನ
ಮೊಟ್ಟೆಯ ಕಟ್ಟಿದಂತಾಯ್ತು ॥ ೨ ॥

ಟಿಕ್ಕೆಯ ನೇಜಯವೆದ್ದುವು ತಿಳಿವೆಳ
ಗುಕ್ಕುತ ತೆರಳಿತು ಚಕ್ರ
ಕಿಕ್ಕಿರಿದನುಪಮ ರತ್ನಮಯದ ಪ
ಲ್ಲಕ್ಕಿಯೊಳಿರ್ದನಾ ರಾಯ ॥ ೩ ॥

ಬಿಳಿಯ ತಾವರೆಯಂತೆ ನೆಗೆದ ಸತ್ತಿಗೆ ಹಂಸೆ
ಸುಳುಹಂತೆ ಬೀಸುವ ಚವರ
ಕೆಳೆಯರು ಮಧುವಿಂದು ಮರುತನಂತೆಯ್ತರೆ
ತಳರ್ದನಾ ರಾಜಮನೋಜ ॥ ೪ ॥

ಸಯ್ಯರಿದುತ್ತಮರೂದಿಕೊಳಲು ತಪ್ಪ
ಕೈಯ್ಯೊಳುದಯರಾಗದೊಡನೆ
ಮೆಯ್ಯೊಳಿದ್ದಾತ್ಮಕಲೆಯ ಹಾಡುತಿರೆ ಕೇಳು
ತೊಯ್ಯನೈದಿದನಾತ್ಮರಸಿಕ ॥ ೫ ॥

ದಂಡಿಗೆ ಕುದುರೆಯೊಳೂಳಿಗನೆಂಗಳು
ಪೆಂಡಿರು ಪಲ್ಲಕ್ಕಿಗಳೊಳು
ನುಂಡಿತ ರಥದೊಳು ಕುವರನ ತೊಟ್ಟಲು
ದಂಡಿಗೆಯ್ತರುತಿರ್ದರಾಗ ॥ ೬ ॥

ಸಾರ್ತಂದ ಪೌಜು ತನ್ನ ದು ಪೆಣ್ಣ ಪೌಜರ್ಕ
ಕೀರ್ತಿಯ ಪೌಜೆಂದು ಜಗಕೆ
ವಾರ್ತೆಯ ಪುಟ್ಟಿಸಿ ನಡೆತಂದನಾ ಚಕ್ರ
ವರ್ತಿ ಮುಂದಧಿಕ ಲೀಲೆಯೊಳು ॥ ೭ ॥

ತರಳನ ಪೌಜಿನ ಹಿಂದಿಷ್ಟು ದೂರವಾ
ಗಿರೆ ಕೋಟಿ ಭಟರೊಡಗೂಡಿ
ಭರತ ಪಾದುಕರೆಂಬ ಗೊಲ್ಲನಾಯಕರಿಬ್ಬ
ರರಿ ವಿಜಯರು ಬರುತಿಹರು ॥ ೮ ॥

ಪೂರ್ವಾಹ್ಣಕಾಲದೊಳಗೆ ಪುರುಜಿನಪುತ್ರ
ಪೂರ್ವಯುಗದ ಚಕ್ರವರ್ತಿ
ಪೂರ್ವಾಭಿಮುಖನಾಗೆ ದಂಡು ನಡೆದುದೊಂದ
ಪೂರ್ವ ಸಂಭ್ರಮವನೇನೆಂಬೆ ॥ ೯ ॥

ಆನೆಗಳ್ನೆಗಳು ಮತ್ತಾ ರಥ ಪಡಗು ನ
ವೀನ ತುರಂಗ ತರಂಗ
ಆ ನೆಲದಗಲದೊಳಾದಿಚಕ್ರೇಶನ
ಸೇನೆ ನಡೆದುದಬ್ಧಿಯಂತೆ ॥ ೧೦ ॥

ಘುಡಿಘುಡಿಸುವ ವಾದ್ಯ ಗುಡುಗು ಚೀರ್ಚಿಟಲೆಂದು
ಸಿಡಿನ ಪೆಟ್ಟಲು ತಾನೆ ಸಿಡಿಲು
ಕುಡುಮಿಂಚಿನಂತೆ ಕೂರಲಗು ಪೊಳೆಯೆ ಪಡೆ
ನಡೆದುದು ಕಾರ್ಗಾಲದಂತೆ ॥ ೧೧ ॥

ಕುದುರೆಕಾರರು ಕುದುರೆಯ ನೂಂಕಿ ಭರತೇಶ
ನಿದಿರಿಗೆಯ್ತಂದು ಕೈಮುಗಿದು
ಸದೆವ ವಾದ್ಯದ ಗತಿಯೊಳು ತಮ್ಮ ಕುದುರೆಯ
ಚದುರಿಂದ ಕುಣಿಸುತೆಯ್ದುವರು ॥ ೧೨ ॥

ಮೂವತಿಗರು ಮದದಾನೆಯ ನೂಂಕಿ ಕ
ಲಾವಿದನಿದಿರಿಗೆ ಬಂದು
ದೇವಗೆ ಪೊಡವಡೆಂದಾನೆಯನೆರಗಿಸಿ
ತಾವು ಕೈಮುಗಿದರುಬ್ಬಿನೊಳು ॥ ೧೩ ॥

ಸೊಂಡಿಲನೆತ್ತಿ ಬಾಲವ ನೀಡಿ ಕಿವಿಗಳ
ಮುಂಡಿಸಿ ಬಲ್ಪನಿದೋರಿ
ಚಂಡೇಭ ಸುಳಿದುವು ಗಿರಿಯಿಂದ ಕಡುದೊಡ್ಡ
ಗುಂಡುಗಳುರುಳುವಂದದೊಳು ॥ ೧೪ ॥

ಸ್ಯಂದನ ಗಜ ಹಯ ಭಟರ ಮೊತ್ತದೊಳು ಪೊ
ನ್ನಂದಣಗಳನೇರಿ ನೃಪರು
ಇಂದುವನೋಲ್ಕೆಪ ನಕ್ಷತ್ರಗಣದಂತೆ
ಬಂದರೋಲೈಸಿ ಚಕ್ರಿಯನು ॥ ೧೫ ॥

ದೆಸೆತುಂಬಿ ನಡೆವ ಪಾಯ್ದಳಗೂಡಿ ತನ್ನ ಭಾ
ವಿಸುತೊಂದು ಪಯಣವ ಸಾಗಿ
ಬಿಸಿಲು ಬಲಿಯದ ಮೊದಲೆ ಬೀಡ ಬಿಡಿಸಿದ
ನೊಸೆದೊಂದು ತೆರಪಿನೆಡೆಯೊಳು ॥ ೧೬ ॥

ಉಚಿತದಿಂದೆಲ್ಲರ ಬೀಳ್ಕೊಟ್ಟು ಸುರಶಿಲ್ಪಿ
ರಚಿಸಿದ ಶಿಬಿರವ ಹೊಕ್ಕ
ಪ್ರಚುರಾರ್ಕಕೀರ್ತಿಯ ಪೌಜು ಬಂದುದು ರಾಯ
ನಚಲಿತ ಲೀಲೆಯೊಳಿರ್ದ ॥ ೧೭ ॥

ಬರಸಿಡಿಲಂತೆ ಭಾರಿಯ ಭೇರಿ ಸೂಳ್ಪೈಸೆ
ಮರುದಿನವೆದ್ದನಲ್ಲಿಂದ
ತೊರೆಯುಕ್ಕಿ ಹರಿವಂತೆ ಹರಿವುತಿದ್ದುದು ರಾಯ
ರೆರೆಯನ ಸೇನೆ ಲೀಲೆಯೊಳು ॥ ೧೮ ॥

ದಿಗ್ಗಜದಂದದ ಗಜಘಟೆ ನಡೆವಾಗ
ಲಗ್ಗೆಯ ರಥ ಹರಿವಾಗ
ತಗ್ಗುತಿದ್ದುದು ಭೂಮಿ ಕಿರುಬೆಟ್ಟ ಬಡಬೆಟ್ಟ
ನುಗ್ಗಾಗಿ ನೆಲಸಮವಾಯ್ತು ॥ ೧೯ ॥

ಬಡಿವ ವಾದ್ಯದ ರಭಸಕೆ ದೂರದೊಳು ನಿಂದ
ನಿಡುಬೆಟ್ಟಗಳ ಕಟ್ಟು ಸಡಲಿ
ಗುಡುಗುಟ್ಟಿ ಗುಂಡುಗಳುರುಳ್ದುವುಂಡಲಿಗೆಯ
ಮಡಕೆಯನೊಡೆಯಹೂಯ್ದಂತೆ ॥ ೨೦ ॥

ಎಡೆತೊರೆಗಳ ಮುಂದೆ ನಡೆವವರ್ಕುಡಿದರು
ನಡುವೆ ಪೋಪರಿಗರಿಲಾಯ್ತು
ಕಡೆಯೊಳೆಯ್ದುವರ ಕಾಲೊಳು ಹುಡಿ ಹಾರಿತು
ನಡೆದುದು ಚಕ್ರಿಯ ಕಟಕ ॥ ೨೧ ॥

ಜಯರಾಜ ಬಿನ್ನವಿಸಿದವೊಲು ಕುರು ಕುರು
ಹಯಣದೊಳಲ್ಲಲ್ಲಿ ಬಿಟ್ಟು
ದ್ವಯ ತ್ರಯ ದಿನವಿರುತೆಯ್ತಂದು ನೃಪತಿ ಗಂ
ಗೆಯ ತಡಿಯೊಳು ಬೀಡುಬಿಟ್ಟ ॥ ೨೨ ॥

ದೇವಗಂಗೆಗೆ ತೆಂಕಲಿಹುದುಪಲವಣಾಬ್ಧಿ
ಭೂವರನದ ಬಲಕಿಕ್ಕಿ
ದೇವಗಂಗೆಯ ತಡಿವಿಡಿದು ನಡೆದನು ಪೂ
ರ್ವಾವಲಂಬನದ ವಾರಿಧಿಗೆ ॥ ೨೩ ॥

ಈ ಕಡಲೊಳು ಮಾಗಧಾಮರನಿಹನು ಮ
ಹಾಕೋಪಿಯಾತನ ಜಯಿಸಿ
ಬೇಕಾದ ಕಾರ್ಯವ ಮುಂದೆ ಯೋಚಿಪವೆಂದ
ನಾ ಕಿರೀಟಯಕೂಡೆ ಮಂತ್ರಿ ॥ ೨೪ ॥

ಕೋಪವೆ ಮಾಗಧನವನ ಕೋಪಾಗ್ನಿಯ
ಲೋಪಿಸಿ ಬೂದಿಮಾಡುವೆನು
ಈ ಪಯೋಧಿಯೊಳಿದ್ದನೆಂಬ ಸೊಕ್ಕೈಸೆ ಸಾ
ಕಾ ಪೇತಿನಾಟವೇನೆಂದ ॥ ೨೫ ॥

ಓಲೆಮಾತ್ರವನೆಚ್ಚು ನೋಡುವೆನೋದಿಸಿ
ಕೇಳಲೊಡನೆ ಬಾರದಾಗ
ಮೇಲೆ ಹೇಳುವೆನವನಿಗೆ ತಕ್ಕ ಹರುವ ವಾ
ಗ್ಜಾಲವೇಕೀಗ ಸಾಕೆಂದ ॥ ೨೬ ॥

ಬಂದುದಷ್ಟರೊಳರ್ಕಕೀರ್ತಿಯ ಪೌಜೊಲ
ವಿಂದರಮನೆಯೊಳಗಾಯ್ತು
ಮುಂದರಧೀರನು ಪಲ್ಲಕ್ಕಿಯಿಳಿದೋಜೆ
ಯಿಂದ ನಡೆದನರಮನೆಗೆ ॥ ೨೭ ॥

ನಾಳೆ ಯೋಚನೆಯುಂಟು ಮಂತ್ರಿ ಹೋಗೆಂದು ನೃ
ಪಾಲಕನಾತನ ಕಳುಹಿ
ಆಲಯದೊಳು ಹೊಕ್ಕು ನವಭದ್ರಶಾಲೆಯೊ
ಳೋಲಗಗೊಟ್ಟನರ್ತಿಯೊಳು ॥ ೨೮ ॥

ಸುತನ ತರಿಸಿಕೊಂಡು ನೋಡಿ ಮುದ್ದಾಡಿ ಸ
ಮ್ಮತದ ದಾದಿಯ ಕೈಗೆ ಕೊಟ್ಟು
ಸತಿಯರೆಲ್ಲರು ಬಂದು ಕಂಡರವರ ಮುಂದ
ಸ್ಮಿತಮುಖದಿಂದ ನೋಡಿದನು ॥ ೨೯ ॥

ತಿಳ್ಳುಸುರೊಪ್ಪಚ್ಚಿ ಹೆಚ್ಚಿ ನೈಬಾಡಿದ್ದು
ದಲ್ಲಲ್ಲಿ ಮೊಗ ಬೆಮರಿದುದು
ಪಲ್ಲವ ಬಿಸಿಲು ತಾಗಿದವೊಲು ತನ್ನಿದಿ
ರಲ್ಲಿ ನಿಂದವರೊಳು ನುಡಿದ ॥ ೩೦ ॥

ಕುಳ್ಳಿರಿರೌ ಬಳಲ್ದಿರಿಯೆಂದನವರದ
ಕೆಲ್ಲರು ನಗುತ ಕುಳಿತರು
ಪಲ್ಲಕ್ಕಿಗಳ ಭರದಲ್ಲಿ ತಂದರೆ ದೇಹ
ವಲ್ಲಾಡಿ ನೊಂದುವೆಯೆಂದ ॥ ೩೧ ॥

ನಸುಕಂದಿ ಮುಖ ತೋರುತಿದೆ ನಿವಗಿಂದಿಷ್ಟು
ಬಿಸಿಲು ತಾಗಿದುದಹುದಕಟ
ಪಿಸುಣರು ದಟ್ಟದ ಪನ್ನಂಗಗಳನಿವ
ಗೆಸಗಿತಿಲ್ಲಹುದೆಂದು ನೊಂದ ॥ ೩೨ ॥

ನೀವೊಮ್ಮೆ ಸುಮ್ಮನೆಯಿದ್ದರೆ ನಿಮ್ಮೊತ್ತಿನ
ಸೇವಕಿಯರಿಗು ಪರಾಕೆ
ಜೀವವಳ್[1] ದರೆ[1] ನಂಬುಗೆವಂತರೆಂದನು
ನೋವಿಂದ ತನ್ನ ಸೆಂಡಿರೊಳು ॥ ೩೩ ॥

ಇಂದು ಸಮುದ್ರ ಸಮೀಪವೆಂದರೆ ನೋಳ್ಪೆ
ವೆಂದು ಬೇಗದಿ ಸಾಗಿರೆನಲು
ತಂದರವರು ನಾವು ಪೇಳ್ದಂತೆ ಬೆಸದವ
ರಿಂದ ತಪ್ಪಿಲ್ಲೆಂದರವರು ॥೩೪॥

ಈ ಪಯಣದೊಳೊತ್ತಿ ಬಂದೆವಲ್ಲದೆ ಹಿಂದ
ಣಾ ಪಯಣದೊಳೊದಗಿದೆವೆ
ತಾಪವಾಗಳೆ ನಿಮ್ಮ ಕಾಣುತ ಹೋದುದೆಂ
ದೋಪನೊಳಾಡಿದರೊಸೆದು ॥ ೩೫ ॥

---

1. ದರೋ (ಖ, ಚ) ವರೊ (ಕ)

ಎಂದರುಷ್ಪರಿಗೆಯನೇರಿ ಹಿಂಬೊತ್ತಿಗಾ
ನಂದದಿಂದಬ್ಧಿಯ ನೋಳ್ಪ
ಮಿಂದು ದೇವಾರ್ಚನೆಗ್ಕೈದು ಭೋಜಿಪವೇಳೆ
ರೆಂದೆದ್ದನಬಲೆಯರ್ವೆರಸಿ ॥ ೩೬ ॥

ದೇವತಂತ್ರದೊಳೆಲ್ಲ ಮಿಂದುಟ್ಟು ತೊಟ್ಟು ಜಿ
ನಾವಾಸಕಡಿಯಿಟ್ಟರೊಸೆದು
ದೇವಪೂಜೆಯ ಮಾಡಿ ದಿವ್ಯಾನ್ನಪಾನವ
ಸೇವಿಸಿದರು ಲೀಲೆಯಿಂದ ॥ ೩೭ ॥

ಪರಿಮಳ ತಂಬುಲಗಳ ಕೊಂಡು ಶಯನಮಂ
ದಿರಕೆಯ್ದಿ ಸುಖನಿದ್ರೆಗೆಯ್ದು
ಸರಸ ವಿನೋದದಿ ಮಧ್ಯಾಹ್ನದಾಸರ
ಪರಿಹರಿಸಿದರು ಭೋಗಿಗಳು ॥ ೩೮ ॥

ಬಳಿಕ ಮೂರನೆಯ ಜಾವದೊಳವನೀಶನಾ
ನಳಿನಾಕ್ಷಿಯರು ಸಹವಾಗಿ
ನೆಲೆಮಾಡವೇರಿ ಮೇಲ್ಮನೆಯೊಳು ಕುಳಿತು ಪೆಂ
ಗಳಿಗಂಬುನಿಧಿಯ ತೋರಿದನು ॥ ೩೯ ॥

ಕಡಲ ಮುನ್ನರಿಯದ ಪೆಂಗಳಚ್ಚರಿವಟ್ಟು
ನಿಡುಬೆರಳಿಟ್ಟು ನಾಸಿಕಕೆ
ಮುಡಿಯೊಲೆದೊಲೆದು ನೋಡಿದರದರೊಂದು ಬ
ಲ್ಗಡಣಿಗೆ ಬಗೆಯೊಳು ಮೆಚ್ಚಿ ॥ ೪೦ ॥

ದಿಟ್ಟಿಗೆಮಿಗೆ ಹಾಯ್ದು ತೋರ್ಪ ಸಮುದ್ರದ
ಕಟ್ಟಳಲಿಗೆ ಚೋದ್ಯವಟ್ಟು
ಅಟ್ಟಹಾಸವ ಮಾಡುತೊಬ್ಬರೊಬ್ಬರ ಮೈಯ
ತಟ್ಟುತ ತೋರಿ ನುಡಿದರು ॥ ೪೧ ॥

ಆಟ್ಟುವ ತೆರೆಯ ಮುಂದೋಡುವ ತೆರೆಯ ಪೆ
ರ್ಬೆಟ್ಟದಂತೇಳ್ವ ತೆರೆಗಳ
ತೊಟ್ಟನೆ ಬಯಲಹ ತೆರೆಗಳನವರು ಕ
ಣ್ಣಿಟ್ಟು ನೋಡಿದರರ್ತಿವಡುತ ॥ ೪೨ ॥

ಎಡೆಗುತ್ತಿಗಳನಲ್ಲಿಗಲ್ಲಿ ನಿಂದದ್ರಿಯ
ನಿಡುಗಲ್ಲುಗಳನದರೊಳಗೆ
ಎಡೆಯಾಡುತಿಹ ದೋಣಿ ದುಗ್ಗಿಕಪ್ಪಲು ದೊಡ್ಡ
ಹಡಗುಗಳಿರವ ನೋಡಿದರು ॥ ೪೩ ॥

ತುಂತುರು ತೆರೆ ನೊರೆ ಸುಳಿ ಘುಳುಘುಳುರವ
ತೂಂತಿಟ್ಟು ಹೊಳೆವ ವಾರಿಧಿಯ
ಕಾಂತೆಯರೆಲ್ಲರೀಕ್ಷಿಸುತಿರೆ ಭೂಪಾಲ
ನಿಂತೆಂದು ನುಡಿದನವರೊಳು ॥ ೪೪ ॥

ಇಂದು ಮೊದಲುಗೊಂಡು ನಿಚ್ಚಲು ನೀವು ಪೆಂ
ಪೊಂದಿದಬ್ಧಿಯ ನೋಡಬಹುದು
ಇಂದಿಗೆ ಸಾಕೆಂದು ಕರೆಯುಕೊಂಡರಸಿಯ
ರೊಂದಾಗಿ ನೂಡದಿಂದಿಳಿದ ॥ ೪೫ ॥

ರಾಗದಿಂದಾದಿನ ಮತ್ತೆ ಕಾಲೋಚಿತ
ಭೋಗದೊಳಾ ರಾಯನಿರ್ದ
ಸಾಗರ ತಟದೊಳು ಪಡೆಯಿದ್ದುದಿದು ಪೂರ್ವ
ಸಾಗರದರ್ಶನಸಂಧಿ ॥ ೪೬ ॥

ರಾಯಸದಂಬೆಚ್ಚ ಸಂಧಿ

ಅಂದಿನ ಮರುದಿನ ದಳಪತಿ ಸಚಿವರ
ಮುಂದಿರಕಾ ಚಕ್ರಿ ಕರೆಸಿ
ಮುಂದಣ ಕಾರ್ಯವ ಯೋಚಿಸಿ ನುಡಿದನ
ದೊಂದು ಲೀಲಾಮಾತ್ರವಾಗಿ ॥ ೧ ॥

ಬಿಡು ಮಾಗಧನ ಗೆಲ್ಲ್ವುದಾವ ಗಹನವೆಲೆ
ಪಡೆವಳ್ಳ ಕೇಳ್ಮಂತ್ರಿ ಕೇಳು
ಕಡಲತಡಿಯೊಳಿನಗೊಮ್ಮೆ ಯೋಗದೊಳಿರ
ಲಡರುತಿರ್ದಪುದರ್ತಿಯೆಂದ ॥ ೨ ॥

ಪುರದಿಂದ ತಳರ್ದದು ಮೊದಲಾಗಿ ಪಥದಲ್ಲಿ
ಪಿರಿದು ಯೋಗವ ಮಾಡಿತಿಲ್ಲ
ಶರಧಿಯೊತ್ತಿನೊಳೊಮ್ಮೆ ಯೋಗದೊಳಿರ್ದದ
ಪರಿಕಿಸಬೇಕು ನಾನೆಂದ ॥ ೩ ॥

ಬಿನ್ನ ಹ ದೇವ ಧ್ಯಾನವ ಮಾಳ್ಪೊಡಬ್ಧಿಯ
ಸನ್ನಿಧಿ ಲೇಸಹುದದಕೆ
ಚಿನ್ನಾಗಿ ಪಗೆಯ ಜಯಿಸಿ ಮತ್ತೆ ಮಾಳ್ಪುದು
ಮುನ್ನಲಿಂತಹುದೆಂದರನರು ॥ ೪ ॥

ಮಾಗಧ ನನಗೊಬ್ಬ ಪಗೆಯೆ ಸೂರ್ಯಗೆ ದೊಡ್ಡ
ಗೂಗೆಯು ಯೋಚಸೆಯೇಕೆ
ಯೋಗದೊಳಿರಲೆನಗೆದೆಹಾರಲವಬಂದು
ತಾಗಲಾಪನೆ ನನ್ನ ಪಡೆಯ ॥ ೫ ॥

ತೃಣವ ಪರ್ವತವ ಮಾಳ್ಪಂತೆ ನೀವವನನೊ
ಕ್ಕಣಿಸುತಿಹಿರಿ ತೋರಮಾಡಿ
ಗಣಬದ್ಧರಿಗೆ ಬೆಸಸಿತ್ತೊಂದು ಕ್ಷಣದೊಳಾ
ಬಣಗನ ತರಿಸಲೆ ಹಿಡಿದು ॥ ೬ ॥

ಅದು ಬೇಡ ವಜ್ರಖಂಡಾಖ್ಯ ಚಾಪಕೆ ಕಿಡಿ
ಗೆದರುವ ಬಾಣವ ತೊಟ್ಟು
ಬುದಿಬುದಿನವನೂಗ ನಡುವೆ ಕೆಂಡವ ಸೂಸಿ
ಗದಕಾಪುಗೊಳಿಸಲೆ ಪುರವ ॥ ೭ ॥

ಚಕ್ರಬೇಡವನಿಗೆ ಚಾಪಾಸ್ತ್ರ ಬೇಡೆನ್ನ
ವಿಕ್ರಮದರಸು ಮಕ್ಕಳೊಳು
ಆಕ್ರಮಿಸಿಲ್ಲಿಗೆ ತರಿಸಿಕೊಂಡೆನಗೆ ಪಾ
ದಾಕ್ರಾಂತಗೆಯ್ಸು ನೂಂಕಿಸಲೆ ॥ ೮ ॥

ಅಹಹ ನೋಡವನಿಂದು ಬರಿಸಾಗೆ ಮುಂದಿನ್ನು
ಗುಹೆಯೊಳಗೆರಡು ಪೆರ್ದೋರೆಯ
ವಹಿಸಿ ದಾಂಟುವ ಪರಿಯೆಂತೆಂದು ನುಡಿದನು
ಗಹಗಹಿಸುತ ಚಕ್ರಧರನು ॥ ೯ ॥

ಅದರಿಂದ ನನಗಿದು ತೋರವಲ್ಲಿದಕೆ ನೀ
ವೆದೆಹಾರಗೊಳ್ಳದೊಪ್ಪಿಹುದು
ಉದಧಿಯೊತ್ತಿನೊಳೊಮ್ಮೆ ಪರಮಾತ್ಮಯೋಗ ಸಂ
ಪದವ ನೋಡುವೆನು ನಾನೆಂದ ॥ ೧೦ ॥

ಒಂದಂಬನೆಚ್ಚವನೊಳಗ ನೋಡುವೆನುಗು '
ರಿಂದ ಹೋಹದಕೇಕೆ ಕೊಡಲಿ
ಬಂದರೊಂದೊಳ್ಳಿತು ಬಾರದರೆರಡೊಳ್ಳಿ
ತೆಂದು ತೋರುವೆನೆನ್ನ ಪರಿಯ ॥ ೧೧ ॥

ಕರ್ಮಾಳಿಗಳ ಗೆಲ್ವರೆನಗೆ ಯೋಚನೆಯೈಸೆ
ಪೆರ್ಮಡುವಿನ ಮಧ್ಯದಲ್ಲಿ
ಕೂರ್ಮನಂತಿರ್ದನ ಗೆಲ್ವರೊಂದೆಣಿಕೆಯೆ
ಮರ್ಮಜ್ಞರಲ್ಲವೆ ನೀವು ॥ ೧೨ ॥

ಧ್ಯಾನದೊಳಗೆ ಮೂರು ದಿನವಿದ್ದು ಮರುದಿನ
ನಾನವಗೊಂದಂಬನೆಚ್ಚು
ಈ ನಿಳಯಕೆ ಬಹೆನಿದು ರಾಜಯೋಗಾಂಗ
ಸೇನೆ ಜತನ ಹೋಗಿರೆಂದ ॥ ೧೩ ॥

ಉಡುಗೊರೆಯಿತ್ತವರಿಬ್ಬರ ಬೀಳ್ಕೊಟ್ಟ
ನೊಡನೆ ಸಾಗರದೊತ್ತಿಗೆದ್ದ
ಬಡಗಿಯೊಡ್ಡಿದ ಗೃಹದೊಳು ಮೂರು ದಿನ ಯೋಗ
ವಿಡಿದಿದ್ದನಾ ರಾಜಯೋಗಿ ॥ ೧೪ ॥

ನೇಮಿಸಿ ಯಮನಿಯಮಾಸನ ಪ್ರಾಣಾ
ಯಾಮ ಪ್ರತ್ಯಾಹಾರ ಧ್ಯಾನ
ಕೋಮಲಧಾರಣೆ ಸುಸಮಾಧಿಯೆಂಬ ಯೋ
ಗಾಮೃತಾಷ್ಟಾಂಗವ ಬಗೆದ ॥ ೧೫ ॥

ಮೂರು ದಿವಸ ಮೂರು ಗಳಿಗೆಯಾಗಿದ್ದುದು
ತೋರಿತಿಲ್ಲುದರಾಗ್ನಿ ನೃಪಗೆ
ಮೂರು ಲೋಕದ ಸಾರವೆನಿಪಾತ್ಮಸುಖದೊಳಾ
ನೀರನೋಲಾಡಿ ತಣಿದನು ॥ ೧೬ ॥

ತೀರಕೆ ಬೋನಗುಡಿಕೆ ಬರೆ ಮರುದಿನ
ಪಾರಣೆಗೈದು ವಿಶ್ರಮಿಸಿ
ಧೀರರ ದೇವ ಮೂರನೆಯ ಜಾವದೊಳು ಪೊಂ
ದೇರೇರಿ ನಡೆದನಬ್ಧಿಯೊಳು ॥ ೧೭ ॥

ಧ್ವಜ ಘಂಟೆ ಕಲಶ ಪೂಮಾಲೆಯ ಶೃಂಗಾರ
ದಜಿತಂಜಯವೆಂಬ ರಥವ
ಅಜಡ ಸಾಂಬ್ರಾಣಿಗಳೀರೈದು ತೆಗೆಯೆ ಭೂ
ಭುಜಗಮಿಸಿದನೋಜೆಯಿಂದ ॥ ೧೮ ॥

ಕೆಲದೊಳು ಗಣಬದ್ಧನೊರ್ವ ಸಾರಥಿಯಾಗಿ
ಸೆಳೆದೆತ್ತಿ ದಾಯೆಂದು ನಡಸೆ
ನೆಲದ ಮೇಲೊಯ್ವಂತೆ ಜಲದಮೇಲೊಯ್ದುವಾ
ಜಲಗಾಮಿ ವಾಜಿಗಳೊಸೆದು ॥ ೧೯ ॥

ಮುಂಗಡೆಯೊಳು ಬಂದು ತಾಗುವ ಹಲವು ತ
ರಂಗಮಾಲೆಗೆ ಮೊಗವೆತ್ತಿ
ಮುಂಗಾಲ ಮಡಿದು ಹಿಂಗಾಲ್ನೀಡಿ ರಥವ ತು
ರಂಗಮಾಲೆಗಳು ತೆಗೆದುವು ॥ ೨೦ ॥

ಚೆಂಗಚೆಂಗನೆ ತೇಜಿ ತೆಗೆಯೆ ದ್ವಾದಶಯೋಜ
ನಾಂಗಣಪರ್ಯಂತ ಹರಿದು
ನಂಗಲ್ಲನಿಳುಹಿದ ಹಡಗು ನಿಲ್ವಂತೆ ರ
ಥಾಂಗ ನಿಂದುದು ತೊಟ್ಟನಲ್ಲಿ ॥ ೨೧ ॥

ಹಂದೆಯವನು ನಿನ್ನ ಕಂಡರೋಡುವನಿನ್ನು
ಮುಂದೆಯ್ದು ಬೇಡವೆಂದಬ್ಧಿ
ಬಂದು ಕಾಲ್ವಡಿದು ನಿಲ್ಲಿಸಿದಂತೆ ನಿಂದುದಾ
ಹೊಂದೇರು ಹರಿಯದೆ ಮುಂದೆ ॥ ೨೨ ॥

ನಿಡುಬಿಲ್ಲ ರಥದಮೇಲೂರಿ ದಕ್ಷಿಣದೊಂದು
ತೊಡೆಸೋಂಕಿ ಬಾಗಿಸಿ ಹೆದೆಯ
ಎಡೆಗೈಯೊಳೇರಿಸಿ ನೀವಿ ಜೇವಡೆದನು
ಸಿಡಿಲ ವೀಣೆಯ ಮುಟ್ಟಿದಂತೆ ॥ ೨೩ ॥

ಆಕರ್ಣಪರ್ಯಂತ ಬಾಣವ ತೆಗೆದುಬ್ಬಿ
ಭೂಕಾಂತ ಸರಿತಗೊಟ್ಟಿಚ್ಚ
ಆಕಾಶದೊಳು ಬಾಣ ಚುಮ್ಮು, ಭೋರ್ಚುಯ್ಯೆಂದು
ಭೀಕರಿಸುತ ಹೋದುದತ್ತ ॥ ೨೪ ॥

ಹೂಂಕರಿಸಿದ ರಾಯನಾರ್ಭಟೆಗಾ ಬಿಲ್ಲ
ಟಂಕಾರದಾರ್ಭಟೆಗಬ್ಧಿ
ದಿಂಕಿಟ್ಟು ಗಗನಕೆದ್ದುದು ಕೊಳವಿಯೊಳೂದೆ
ಬೆಂಕಿ ನಾಲಗೆ ನೀಡುವಂತೆ ॥ ೨೫ ॥

ಕಟಕದೊಳಿದ್ದಾನೆ ಕುದುರೆ ಬೆದರಿ ಲಟ
ಲಟಿಸುತತ್ತಿತ್ತಲೋಡಿದುವು
ತಟವನುಚ್ಚಳಿಸಿತು ಕಡಲು ಮುಂತಿಟ್ಟರೆ
ಘಟದ ಮೊಸರು ಚೆಲ್ಲುವಂತೆ ॥ ೨೬ ॥

ಬಿರುಗುಟ್ಟುತಾ ಬಾಣ ವೋಗಿ ಮಾಗಧನಿದ್ದ
ಹೊರಗಣೋಲಗದ ಶಾಲೆಯೊಳು
ನಿರಿಸಿದ ಕಂಭಕೆ ತೊಟ್ಟನೆ ನೆಟ್ಟತು
ಬರಸಿಡಿಲಂತಿರಾರ್ಭಟಿಸಿ ॥ ೨೭ ॥

ಝಲ್ಲನೆ ಸಭೆ ಕೆದರಿತು ಹುಲಿ ಬರೆ ಕಂಡು
ಹುಲ್ಲೆಯ ಹಿಂಡಿನಂದದೊಳು
ಬಲ್ಲಿದನಲ್ಲವೆ ಮಾಗಧಾಮರನಿದ್ದ
ನಲ್ಲಿ ತನ್ನಯ ಗದ್ದುಗೆಯೊಳು ॥ ೨೮ ॥

ಅಳುಕುಬಿಟ್ಟೊಡನೆಲ್ಲರೊತ್ತಿಗೆ ಬಂದರು
ಹಿಳುಕಿನೋಲೆಯ ತನ್ನಿರೆಂದ
ಅಳುಕುತಳುಕುತೊಬ್ಬನದರೊತ್ತಿಗೆಯ್ತಂದ
ನೆಳಸಿ ಕೊಟ್ಟನು ಕರಣಿಕಗೆ ॥ ೨೯ ॥

ಕರಣಿಕನೋದಿದನೊಡನೆ ಶ್ರೀಮನ್ಮಹಾ
ಪುರುಜಿನೇಂದ್ರನ ಸುಕುಮಾರ
ಗುರುಹಂಸನಾಥಭಾವಕೆ ಸೊಕ್ಕಿದರಿರಾಯ
ಗಿರಿವಜ್ರದಂಡ ಪ್ರಚಂಡ ॥ ೩೦ ॥

ಮಾರ್ಮಲೆವರಿರಾಯಮೇಘರ್ಝುಂಝೂನಿಲ
ದುರ್ಮುಖರಾಯಜಜ್ಜಾರ
ಕರ್ಮಕೋಳಾಹಳ ಮೃತ್ಯುಕೋಳಾಹಳ
ಧರ್ಮಪಾಲಕ ಪ್ರಜಾಪಾಲ ॥ ೩೧ ॥

ಭರತಚಕ್ರೇಶ್ವರನೊಲವಿಂದ ನಮ್ಮ ಕಿಂ
ಕರ ಮಾಗಧನಿಗೆ ನಿರೂಪ
ಸರಿತದೊಳಗೆ ನಾಳೆ ಬಂದೆಮ್ಮ ಕಾಣ್ಬುದು
ಪರಮಶಾಸನವೆಂದು ಮುಗಿದ ॥ ೩೨ ॥

ಕೇಳುತ ಕಿಡಿಕಿಡಿಯಾಗಿ ಮಾಗಧನು ಮೈ
ತೂಳವೆದ್ದಾಡುಗಚ್ಚಿದನು
ಸೀಳು ಸೀಳೋಲೆಯ ಸುಡು ಸುಡೆಂದನು ತನ್ನ
ಬಾಳ ಸೀಳ್ಸುಡುಸುಡೆಂಬಂತೆ ॥ ೩೩ ॥

ಹಲ್ಲ ಕಡಿದು ಕಣ್ಣ ಕೆಂಪೇರಿ ತುಂಬುರ
ಗೊಳ್ಳಿಯಂತುರಿ ಛಿಟಿಛಿಟಿಸಿ
ಅಲ್ಲಾಡಿ ಮೀಸೆ ಸೆರೆತು ನೋಡಿ ನುಡಿದನು
ಕೊಲ್ಲುವಂತದನೋದಿದವನ ॥ ೩೪ ॥

ಎಲ್ಲಿಯ ಭರತಗಿರತನಿವನೆಮ್ಮಬ್ಧಿ
ಯಲ್ಲಿಯ ಭರತವಿಳಿತವೊ
ಚಲ್ಲಬಡಿವೆ ತನ್ನ ಸೇನೆಯ ಕರೆಯೊ ನ
ಮ್ಮೆಲ್ಲ ವ್ಯಂತರಿಗರನೆಂದ ॥ ೩೫ ॥

ಕಿಂಕರನೆ ನಾನು ತನಗೆ ತನ್ನೋಲೆಯೊಂ
ದಂಕೆನಿರೂಪವೆ ನನಗೆ
ಬಿಂಕದ ಕಡಲೊಳಿಪ್ಪವರೊಳು ಪೊಡವಿಯ
ಡೊಂಕರಿಂತುಸುರ್ವುದು ಸೊಕ್ಕೆ ॥ ೩೬ ॥

ಕೂಪರು ಸಚಿವರಾ ಸಮಯದೊಳವನ ಸ
ಮೀಪದೊಳಿರ್ದವರವನ
ಕೋಪ ತಂಪಹಂತೆ ನುಡಿದರು ತಂತ್ರಕ
ಲಾಪವರಿದು ಕಾರ್ಯವರಿದು ॥ ೩೭ ॥

ಓಲಗ ಹರಿಯಲಿ ನವಗೆ ಬೆನನ ಕೊಡು
ವೇಲೆಮ್ಮ ನೋಡೆಂದರದನು
ಲಾಲಿಸಿ ಕುಳಿತನು ಹರಿದುದೋಲಗ ತವ್ಮೊ
ಳಾಲೋಚನೆಯ ಮಾಡಿದರು ॥ ೩೮ ॥

ಮುನಿಸ ಬಿಸುಡು ನಮ್ಮ ನುಡಿಗೇಳು ನೀನರ
ಮನೆಯೊಳಗಿರು ನಾವು ಮಾಳ್ಪ
ಘನತೆಯ ನೋಡು ಭೂತಳವೆಲ್ಲ ಮೆಚ್ಚಿ ನಿ
ನ್ನನೆ ಕೀರ್ತಿಪಂತೆ ಮಾಡುವೆವು ॥ ೩೯ ॥

ಎನೆ ನಸುನಕ್ಕಿನ್ನು ಮುನಿಸಿಲ್ಲ ಪೇಳಿ ನಿ
ಮ್ಮನುಮಾನವೇನೆಂದು ಕೇಳ್ದ
ಮನಸು ತಂಪಾದುದನರಿದು ಮತ್ತವರು ಮೆ
ಲ್ಲನೆ ನುಡಿದರು ಕಾರ್ಯದನುವ ॥ ೪೦ ॥

ಭರತಚಕ್ರೇಶ್ವರ ಸಾಮಾನ್ಯನಲ್ಲ ದೇ
ವರದೇವನಾತ್ಮಜನವನ
ಪರಿಯ ಮಹಾಪ್ರಭು ನೀನೆ ತಿಳಿಯಬೇಕು
ಮರುಳು ವ್ಯಂತರರರಿದಪರೆ ॥ ೪೧ ॥

ಜಾಣನಲ್ಲವೆ ನೀನು ನೋಡವನೆಚ್ಚೊಂದು
ಬಾಣ ನೆಟ್ಟಿದೆ ಕಂಭದಲ್ಲಿ
ಕೋಣೆಯೊಳಗೆ ಮುನ್ನ ಲಿಂತಾವನೆಚ್ಚನು
ಕಾಣಬಹುದಕೆ ಕನ್ನಡಿಯೆ ॥ ೪೨ ॥

ಅಲ್ಲಿದ್ದು ಕಂಭವ ತಾಗೆಂದು ಬಿಡೆ ಕಂಭ
ವಲ್ಲಿ ನೆಟ್ಟತು ಬಾಣ ಬಂದು
ಕೊಲ್ಲೆಸಿ ಮತ್ತೊಬ್ಬ ಪಗೆಯ ತಾಗೆಂದೆಚ್ಚ
ಬೊಲ್ಲದೊಲೆವುದೆ ಮಂತ್ರಾಸ್ತ್ರ ॥ ೪೩ ॥

ಓಲೆಯ ಕಟ್ಟಿ ಬಾಣವನೆಸೆವವಸುರಿ
ಮಾಲೆಯ ಬಾಣವನಿಡಸೆ
ಜ್ವಾಲೆಯನುಗುಳುವ ಚಕ್ರದಿಂದಿಡನೆ ಸ
ಮಾಲೋಚಿಸೆದೆಯೊಳು ನೃಪತಿ ॥ ೪೪ ॥

ತುಡುಕ ಬೇಕಹುದು ಕಾಳಗವನು ತನಗೆ ತ
ಕ್ಕೆಡೆಯೊಳಗಧಿಕನೊಳ್ಸಿಣಸಿ
ಬಡವ ಸೆರೆತು ನೋಡಿ ತಿವಿಯಿಸಿಕೊಂಡ ನಾ
ಣ್ನುಡಿಗೆಡೆಯಾಗಲುಬಹುದೆ ॥ ೪೫ ॥

ಕುಲವೃದ್ಧರಾಡಿದ ನುಡಿಯ ಲಾಲಿಸಿ ಚಕ್ರಿ
ಬಲುಶಕ್ತಿವಂತನೆಂದರಿದು
ಕಲಹ ಜಯಿಸದೆಂದು ಕಂಡೆದೆಯೊಳು ಸೋರಿ
ತಲೆಗುಸಿದನು ಮತ್ತೆ ನುಡಿದ ॥ ೪೬ ॥

ಎಂದರಿನ್ನೇನ ಮಾಡುವವೆಂದನಿದಕೊಲ
ವಿಂದೈದಿ ಚಕ್ರೇಶನಡಿಗೆ
ವಂದನೆಮಾಡುವವೆಂದರಾದೀಶನ
ಕಂದನಲ್ಲವೆಯೆಂದರೊಡನೆ ॥ ೪೭ ॥

ಒಡಬಟ್ಟನದಕೆ ಮಂತ್ರಿಗಳಾಪ್ತರವನೊಡಂ
ಬಡಿಕೆಗೆ ಬಂದುದಕೊಲಿದು
ಪೊಡವಟ್ಟುಕೊಂಡಾಡಿದರು ನೀತಿಗೇಳ್ವನಾ
ದೊಡೆಯನ ಪೊಗಳದರಾರು ॥ ೪೮ ॥

ಇತ್ತ ಚಕ್ರೇಶ್ವರ ಬಾಣವನೆಚ್ಚಮೇ
ಲೊತ್ತಿನ ಸಾರಥಿ ರಥವ
ಒತ್ತಿ ತಿರುಹಿ ಕಟಕಕೆ ಮುಖಮಾಡಿ ಸಂ
ಪತ್ತು ಕೈವಿಗೆ ನಡೆಸಿದನು ॥ ೪೯ ॥

ಕಟಕವೆಲ್ಲವು ಜಯಜಯಯೆನುತಾ ವಾರ್ಧಿ
ತಟದಲ್ಲಿ ನಿಂದು ನೋಡುತಿರೆ
ನಟನವನಾಡಿದಂತೆಯ್ತೆಂದು ರಥದಿಂದ
ಸ್ಫುಟದಿ ಲಂಘಿಸಿದನಾ ಚಕ್ರಿ ॥ ೫೦ ॥

ಕವಿಗಳು ಕೀರ್ತಿಸೆ ಪಾಠಕರೋದೆ ಹ
ಸ್ತವನೆತ್ತಿ ಭಟ್ಟರುಗ್ಗಡಿಸೆ
ಅವಧಾನ ಪಾದ ಪರಾಕೆಂಬ ವೇತ್ರಾಂಕ
ರವದೊಳೊಯ್ಯನೆ ಪಜ್ಜೆಯಿಟ್ಟ ॥ ೫೧ ॥

ಅಲ್ಲಲ್ಲಿ ಕೆಲಬರ ಕೈಸನ್ನೆ ಕಣ್ಸನ್ನೆ
ಮೆಲ್ಲುಸುರಿಂದ ಬೀಳ್ಕೊಡುತ
ಮೆಲ್ಲಮೆಲ್ಲನೆ ನಡೆದೆಲ್ಲರ ಕಳುಹಿ ಭೂ
ವಲ್ಲಭ ಹೊಕ್ಕನು ಗೃಹವ ॥ ೫೨ ॥

ರಾಣಿಯರೆಲ್ಲ ನಿವಾಳಿಯನಿಟ್ಟಚ್ಚ
ಮಾಣಿಕದಾರತಿಯೆತ್ತಿ
ಪ್ರಾಣೇಶನಡಿಗೆರಗಿದರೊಂದು ಪರಮ ಕ
ಲ್ಯಾಣವನೇನೆಂಬೆನಾಗ ॥ ೫೩ ॥

ತೋಯಧಿಯೊಳು ಹೋಗಿ ಬಂದ ಕಾರ್ಯವನು ತ
ನ್ನಾಯತಾಕ್ಷಿಯರೊಳು ನುಡಿದು
ರಾಯ ಮತ್ತು ಚಿತಲೀಲೆಯೊಳಿರ್ದನಿಲ್ಲಿಗೆ
ರಾಯಸದಂಬೆಚ್ಚ ಸಂಧಿ ॥ ೫೪ ॥

ಆದಿರಾಜೋದಯ ಸಂಧಿ

ಉದಯದೊಳೆದ್ದು ಜಿನೇಂದ್ರಪೂಜೆಯ ಮಾಡಿ
ತ್ರಿದಶೇಂದ್ರನಂತೆ ಸಿಂಗರಿಸಿ
ಮದವದರಾತಿದಲ್ಲಣನು ಹಜಾರವ
ಟ್ಟದೊಳು ಬಂದೋಲಗವಾದ ॥ ೧ ॥

ಇದರಲ್ಲಿ ಕವಿ ಗಮಕಿಗಳು ಪಾಠಕರು ಚಿ
ತ್ಪದಗದ್ಯಪದ್ಯವನೋದೆ
ಕೆದರುವ ಚಮರಗಳೊಗ್ಗಿನೊಳಾ ರಾಜ
ಮದನನಿದ್ದನು ವಿಲಾಸದೊಳು ॥ ೨ ॥

ಪಾಡುವ ಪ್ರಾತಃಕಾಲದ ರಾಗವ
ಪಾಡುಗಾರಿಕೆಯೊಳಾಲಿಸುತ
ನೀಡುವೆಲೆಯ ಘಳಿಗೆಯ ಕೊಳುತೊರಗುವ
ಮೂಡೆಯನೊರಗಿ ನೋಹಿಸಿದ ॥ ೩ ॥

ಒಂದೊಂದು ರಾಗಕೆ ಮೆಚ್ಚುತ ಪರಮಾತ್ಮ
ನಂದವ ಬಗೆವುತಿರ್ಪಾಗ
ಮುಂದಾಕಿನಿಯೆಂಬ ದಾದಿ ಕುಮಾರನ
ತಂದುಕೊಟ್ಟಳು ಚಕ್ರಧರಗೆ ॥ ೪ ॥

ಚಂಡಿಮಾಡಿದನು ಸಣ್ಣರಸು ದೇವರ ಸಭಾ
ಮಂಡಲಕೆಯ್ದಿಸೆಂದೆನ್ನ
ದಂಡಿಸಿದರೆ ತಂದೆನೆಂದಿಂತು ದಾದಿ ಮೈ
ಗೊಂಡು ನಿಂದಳು ಹೊರಸಾರಿ ॥ ೫ ॥

ಗಲಭೆಯಲ್ಲವು ನಿಂದಿತೆಲ್ಲರಾ ಕುವರನ
ಚೆಲುವನೀಕ್ಷಿಸುತಿದ್ದರಾಗ
ಒಲದ ತೊಡೆಯಮೇಲೆ ಮಗನ ಕುಳ್ಳಿರಿಸಿಕೊಂ
ಡೊಲಿದು ಮುದ್ದಾಡಿಸುತಿರ್ದ ॥ ೬ ॥

ತಂದೆಯ ಚಿಲ್ಪೆ ತಂದೆಯ ರೂಪೆ ತಂದೆಯೊಂ
ದಂದವೆ ತಂದೆಯ ನೋಟ
ತಂದೆಯಚ್ಚಿನೊಳೊತ್ತಿದಂತಿರ್ದನಾ ರಾಜ
ನಂದನ ತಂದೆಯಂಕದೊಳು ॥ ೭ ॥

ಅರಳಿಲೆ ಮಾಗಾಯಿ ಕುಂಡಲ ಹಸ್ತದ
ಮುರಿ ಮಣಿಮಯದುಡಿದಾರ
ಬೆರಳುಂಗರ ಗೆಜ್ಜೆಯಂದುಗೆ ಮೆರೆದುವಾ
ಭರತರಾಜೇಂದ್ರನಾತ್ಮಜಗೆ ॥ ೮ ॥

ತೊಡೆಯಮೇಲಿಟ್ಟು ಮಗನ ನೋಡಿ ಮಂಡೆಯ
ತಡಹುತ ಮುತ್ತ ಕೊಡುವನು
ಒಡನೆತ್ತಿಕೊಂಡೆಪೆ ತುಂಬಲಪ್ಪುವನು ಜೊ
ಟ್ಟಡುವನು ಪಣೆಯೋಳಾ ನೃಪತಿ ॥ ೯ ॥

ಮೆಯ್ಯೆಲ್ಲ ಗುಡಿಗಟ್ಟ ತಕ್ಕಿಸಿಕೊಂಡು ಚೆ
ಲ್ವಯ್ಯ ಚಿನ್ನಾ ನೆಯೆಂದೆಂಬ
ಕೆಯ್ಯಕನ್ನಡಿಯಂತೆ ತೊಡೆಯಮೇಲಿಟ್ಟು ಮು
ತ್ತೊಯ್ಯನೆ ನೋಡಿ ನಗುವನು ॥ ೧೦ ॥

ತಂದೆಯ ಕೊರಳನೆವ್ವಪ್ಪುವ ಕಿರುವೆರ
ಳಿಂದ ಕೊರಳ ಮಣಿಗಳನು
ಒಂದೆಂಟು ಹತ್ತೆರಡೆಂದು ತಪ್ಪೆಣಿಸುವ
ನಂದದಕರಸುಬ್ಬಿ ನಗುವ ॥ ೧೧ ॥

ಆದಿತೀರ್ಥಂಕರ ಎನ್ನ ಕರ್ಕೀರ್ತಿಯೆಂ
ದೋದಿಸುವನು ತನ್ನ ಮಗಗೆ
ಆದಿಂಕರನೆಂಬನಾ ಬಾಲನದಕೆ ವಿ
ನೋದದಿ ನಗುವನಾ ರಾಯ ॥ ೧೨ ॥

ಅಣ್ಣ ಚಿದಂಬರಪುರುಷ ಎನ್ನೆಂದಾಗ
ಬಣ್ಣಿಸಿ ಕಲಿಸಿಕೊಡುವನು
ಚಿಣ್ಣ ಚಿಂಬರಪೂಸಯೆಂಬನದಕೆ ಹೊಟ್ಟಿ
ಹುಣ್ಣಾಗೆ ನಗುವನಾ ಚಕ್ರಿ ॥ ೧೩ ॥

ನೋಡಣ್ಣ ಮುಂದಿದ್ದರಾರೆಂದು ದೊರೆಗಳ
ಕೂಡೆ ತೋರುವನು ಬಾಲಕಗೆ
ನೋಡುತ ಶಿಶು ಹಸ್ತದೊಳು ತೋರದೆಡಗಾಲ
ನೀಡಿ ತೋರುವುದು ಭೂಭುಜರ ॥ ೧೪ ॥

ಪಾದದೂಳಗದವರೆಂದು ನಮ್ಮೆಲ್ಲರ
ಪಾದಪದ್ಮದಿ ಸೂಚಿಸಿದನು
ಆದಿಚಕ್ರಿಯ ಸುತಗದು ಜಾತಿಸಹಜವೆಂ
ದಾ ದೊಡ್ಡ ದೊರೆಗಳಾಡುವರು ॥ ೧೫ ॥

ಜಾಣರಲ್ಲವೆ ರಾಜರೆಲ್ಲರಾಲೋಚಿಸಿ
ಕ್ಷೋಣೀಶನೊತ್ತಿಗೆ ಬಂದು
ಕಾಣಿಕೆಯಿಕ್ಕಿದರಾ ಶಿಶುವಿಗೆ ತಮ್ಮ
ಪ್ರಾಣರಕ್ಷಕನೀತನೆಂದು ॥ ೧೬ ॥

ತರಳಗೆ ಕೈಕಾಣ್ಕೆ ಬೇಡವೆಂದನು ಚಕ್ರಿ
ಧರಣಿಪಾಲರು ಬೇಡಿಕೊಂಡು
ಇರಬೇಕು ಸ್ವಾಮಿ ನಮ್ಮಯ ಸೇವೆಯಿಷ್ಟೆಂದು
ಹರುಷದಿ ಕಾಣ್ಕೆಯಿಕ್ಕಿದರು ॥ ೧೭ ॥

ಕಳುಹಣ್ಣ ನಿನಗೆ ಕಾಣಿಕೆಯಿಕ್ಕಿ ಕೈಮುಗಿ
ದೆಳಿಸಿ ನಿಂದಿರ್ದರನೆಂದ
ತಲೆಯೊಲೆದೊಲೆದು ಕೈಯಾಡಿಸಿ ಕಳುಹಿತಾ
ಯೆಳೆಗೂಸಿಗದು ಜಾತಿಸಹಜ ॥ ೧೮ ॥

ಅಂತಲ್ಲವಣ್ಣ ವೀಳೆಯವ ಕೊಟ್ಟಿಲ್ಲರ
ಸಂತೋಷದೊಳು ಕಳುಹೆಂದ
ತಾಂ ತೆಗೆದವರ ಮೇಲೆಲೆಯ ಚೆಲ್ಲಿತು ಶಿಶು
ಮುಂತೆಲ್ಲ ಕುಳಿತರರ್ತಿಯೊಳು ॥ ೧೯ ॥

ಈ ರಾಶಿ ಹೊನ್ನ ಸಿನ್ನಾರ್ಗೀವವಣ್ಣಯೆಂ
ದಾರೆಯ್ದನಾ ಪುತ್ರನೊಳಗ
ಸಾರೆಸಿಂದಿರ್ದ ಸೇವಕರ ತೋರಿತು ಶಿಶು
ಭೂರಾಮ ವಿಸ್ಮಯಬಟ್ಟ ॥ ೨೦ ॥

ಬೀಜಕೆ ಬಿಡುವುದ ಹೀಚಿನೊಳರಿಯೆಂಬು
ದೀ ಜಗದೊಳಗುಳ್ಳ ಗಾದೆ
ರಾಜ ಸಿನ್ನಣುಗನೊಳ್ತೋರಿತೀತನೆ ಚಾಗಿ
ರಾಜಾಗ್ರಣಿಯೆಂದರೊಸೆದು ॥ ೨೧ ॥

ಬುಧರಿಗೆ ಸೇವಕರಿಗೆ ಹೊನ್ನ ಕೊಡಿಸಿ ವಾ
ಜ್ಯಧುರಗೋಷ್ಠಿಯೊಳೊಪ್ಪುವಾಗ
ಒದರಿತಾ ದಿಕ್ತಟವೆನೆ ವಾದ್ಯರವದಿ ಮಾ
ಗಧನ ಬರವು ತೋರಿತೊಡನೆ ॥ ೨೨ ॥

ಮುಂದಾಕಿನಿಯ ಕರೆದು ಕುವರನ ಕೊಟ್ಟು
ಮುಂದಿರಕವಳ ಬೀಳ್ಕೊಟ್ಟು
ಮುಂದರದಂತೆ ತಾನೋಲಗವಾದನು
ಮುಂದಿಯಿದ್ದುದು ಗಮಕದೊಳು ॥ ೨೩ ॥

ರಾಹುಮುಖನು ದೊಡ್ಡಕಂಗಳವನು ದೀರ್ಘ
ದೇಹಿ ಡೊಳ್ಳೊಡಲ ಕರಿಕನು
ಸಾಹಸಿ ಮಾಗಧ ಮಣಿಮಯಾಭರಣದ
ಮೋಹರದೊಳು ಬರುತಿರ್ದ ॥ ೨೪ ॥

ಅಲ್ಲಲ್ಲಿ ನಿಲ್ಲುತ ಮೈಯೋಸರಿಸಿ ಕುಗ್ಗು
ತೊಲ್ಲಗೊತ್ತಿಗೆ ಬರುತಿಹನ
ದಳ್ಳಿಸುತಿಹ ಕೋಪದಿಂದ ಭೂಪತಿ ನೋಡಿ
ಸೊಲ್ಲಿಸಿದನು ಕಠಿಣದೊಳು ॥ ೨೫ ॥

ಇವನೊ ಮಾಗಧನೆಂದು ಸಂಧಿವಿಗ್ರಹಿಗಳ
ನವನೀಶನೊಲಿದು ಕೇಳಿದನು
ಇವನೀಗ ಸ್ವಾಮಿ ಮಾಗಧನು ದೊಡ್ಡವನು ನೀ
ನವಧರಿಸೆಂದರಾಗವರು ॥ ೨೬ ॥

ಎಲವೊ ಮಾಗಧ ನಿನ್ನೆ ಹಿರಿದಾಗಿ ಪಂಥವ
ಕೆಲದೆ ಕೊಂಡಹುದೊ ಗುಲಾಮ
ಜಲಧಿಯೊಳಿದ್ದೆನೆಂಬ ಸೊಕ್ಕೆ ನಿನಗೆಂದು
ಯೆಳೆಮೀಸೆ ತಿದ್ದುತ ನುಡಿದ ॥ ೨೭ ॥

ಗಡಗಡನಾಗಳೆ ನಡುಗಿದದಕ್ಕೆಬಲ
ಯೆಡದಕೈಯೊಳು ತನ್ನ ಬಾಯ
ಬಡಿದುಕೊಂಡನು ತಪ್ಪುತಪ್ಪೆನ್ನ ರಕ್ಷಿಸೆ
ನ್ನೊಡೆಯಯೆಂದೆನುತಡ್ಡಗೆಡೆದ ॥ ೨೮ ॥

ನಕ್ಕನು ಚಕ್ರಿಯೇಳೇಳಂಜಬೇಡೆಂದ
ದಿಕ್ಕನೆದ್ದಿವ ಮುಂದೆ ನಿಂದು
ಮುಕ್ಕೊಡೆಯೊಡೆಯನಾತ್ಮಜ ನಿನ್ನ ಕಂಡಾರ
ಸೊಕ್ಕುಡುಗದು ಸ್ವಾಮಿಯೆಂದ ॥ ೨೯ ॥

ಭಾವಿಯೊಳಗೆ ಕಪ್ಪೆ ಬಾಳ್ವಂತೆ ನಾವೊಂದು
ದೀವಿಯೊಳಿದ್ದವರೈಸೆ
ದೇವ ನಿನ್ನಯ ತೇಜದೇಳ್ಗೆಯ ಬಲ್ಲೆವೆ
ಗಾವಿಲರೆಂದರೇನಾಯ್ತು ॥ ೩೦ ॥

ಭೋಗ ಯೋಗದೊಳಿದ್ದು ಮುಕ್ತನಾಗುವ ಮೋಕ್ಷ
ಭಾಗಿಗಾರೆಣೆ ನಿನಗೆಂದು
ಮಾಗಧೇಂದ್ರನು ನಿಂದು ಚಕ್ರವರ್ತಿಯ ಭಟ್ಟ
ಮಾಗಧರಂತೆ ಕೀರ್ತಿಸಿದ ॥ ೩೧ ॥

ಭೂಮಿಪಾಲರು ರಾಜಪುತ್ರರದಕೆ ಮೆಚ್ಚಿ
ಸ್ವಾಮಿಗುಳ್ಳುದನು ಕೀರ್ತಿಸಿದೆ
ಸ್ವಾಮಿಹಿತವನು ನೀನೆಂದು ಪ್ರೇಮದಿ ಮಾಗ
ಧಾಮರೇಂದ್ರನ ಪೊಗಳಿದರು ॥ ೩೨ ॥

ಅಷ್ಟರಮೇಲೆ ಚಕ್ರೇಶ್ವರನವನಿಗ
ಭೀಷ್ಟದೊಳಾಸನಗೊಡಿಸಿ
ಕಷ್ಟನಲ್ಲುತ್ತಮನೈ ನೀನು ಕುಳ್ಳಿರೆಂ
ದಿಷ್ಟು ವಾಕ್ಯವನೊಲ್ದು ನುಡಿದ ॥ ೩೩ ॥

ಬದುಕಿದೆ ಸ್ವಾಮಿಯೆಂದದಕೆ ಸಂತಸಬಡು
ತೊದಗಿ ನಿವಾಳಿಯನಿಟ್ಟ
ಇದು ಕಾಣ್ಕೆಯೆಂದು ಜಾಳಿಗೆಯನೊಡೆದು ಹೊನ್ನ
ಬುದಿಬುದಿನಡಿಗಳ್ಗೆ ಸುರಿದ ॥ ೩೪ ॥

ಬಾರೈ ಮಾಗಧಯೆಂದು ಸನ್ನಿಧಿಗೆ ಗಂ
ಭೀರವಾಕ್ಯದೊಳೊಲ್ದು ಕರೆದು
ಧಾರಿಣಿಗುತ್ಕೃಷ್ಟವೆನಿಪ ಭೂಷಣಗಳ
ನಾ ರಾಯನುಡುಗೊರೆಯಿತ್ತ ॥ ೩೫ ॥

ಅಡಿಗೆರಗಿಸಿಕೊಂಬ ತೇಜವೊಂದಲ್ಲದೆ
ಒಡವೆಯಾಸೆಯೆ ಚಕ್ರಧರಗೆ
ಒಡನಿದ್ದನೃಪರೆಲ್ಲ ತಲೆದೂಗುವಂತವ
ಗುಡುಗೊರೆಯಿತ್ತು ಮನ್ನಿಸಿದ ॥ ೩೬ ॥

ಭವನವ ಹೊಕ್ಕಾನು ಬಪ್ಪೆನೆನ್ನ ಹ ನಾಳಿ
ನವನಿರಲೆಂದು ಮಾಗಧನು
ಧ್ರುವಗತಿಯೆಂಬನ ಕರೆಸಿ ಕಾಲ್ಗೆರಗಿಸಿ
ಅವನೀಶಗೊಪ್ಪಿಸಿಕೊಟ್ಟ ॥ ೩೭ ॥

ಪಾದಕೆರಗಿ ಮಂತ್ರಿಸಹಿತ ಮಾಗಧನತ್ತ
ಹೋದನು ಗೆದ್ದೆ ಹೋಯೆನಲು
ಆದುದು ಸಭೆಗೆಲ್ಲ ಪರಮಸಂತೋಷ ಭಾ
ಗ್ಯೋದಯನಿದ್ದನುಬ್ಬಿನೊಳು ॥ ೩೮ ॥

ಜಿನಜಿನ ಏನೆಂಬೆನಷ್ಟರಳೊಬ್ಬ ಮಾ
ನಿನಿ ರಾಯನರಮನೆಯಿಂದ
ಘನಕುಚ ಕುಣಿವುತ ನಗುತೋಡಿಬಂದು ರಾ
ಯನಿಗೆ ಕೈಮುಗಿದಳುಬ್ಬಿನೊಳು ॥ ೩೯ ॥

ಚಿತ್ತೈಸು ದೇವ ದೊಡ್ಡೊಸಗೆ ಕುಮಾರನು
ತ್ಪತ್ತಿಯೊದನು ನಿವಗಿಂದು
ಉತ್ತಮೋತ್ತಮನೆಂದರವಳಿಗಾಗಳೆ ಮೆಚ್ಚಿ
ಮುತ್ತಿನ ಹಾರವ ಕೊಟ್ಟ ॥ ೪೦ ॥

ಒಸೆದು ಮುತ್ತವಳನೊತ್ತಿಗೆ ಕರೆದಾವಳು
ಬೆಸಲಾದಳೆಂದು ಕೇಳಿದನು
ಕುಸುಮಾಜಿಯರು ಸುಕುಮಾರನ ಪಡೆದರೆಂ
ದುಸುರಿದಳವಳು ಕರ್ಣದೊಳು ॥ ೪೧ ॥

ತೋರಣಗಟ್ಟಿತು ಗುಡಿಯೆದ್ದು ಕಟಕದಿ
ಭೋರೆಂದು ವಾದ್ಯ ಮೊಳಗಿತು
ಧಾರಿಣಿ ಮುಟ್ಟಿತಾಗಳೆ ಚಕ್ರಿಗಿಂದು ಕು
ಮಾರನೊಗೆದನೆಂಬ ವಾರ್ತೆ ॥ ೪೨ ॥

ಇದ್ದವರೆಲ್ಲರನುಚಿತದಿ ಬೀಳ್ಕೊಡು
ತೆದ್ದನು ಜಿನ ಶರಣೆನುತ
ಹೊದ್ದಿದನೊಲವಿಂದ ಹೆರುಗೆಯ ಮನೆಯನು
ಮುದ್ದಿನ ಮಗನ ನೋಡಿದನು ॥ ೪೩ ॥

ನಸುನಾಣ್ಚುತೀಕ್ಷಿಸಿ ತಲೆವಾಗಿ ಕುಳಿತಿರ್ದ
ಕುಸುಮಾಜಿಯೊತ್ತಿನೊಳೆಸೆವ
ಹಸುಳೆಯ ನೋಡಿ ಸಿದ್ಧೋ ರಕ್ಷತೆಂದು ಸಂ
ತಸದಿಂದ ಮಗುಳ್ದನಲ್ಲಿಂದ ॥ ೪೪ ॥

ಅರಸಿಯರೆಲ್ಲರು ನಲಿದಾಡುತೆಯ್ತಂದು
ಪುರುಷನಘ್ರಿಯಮೇಲೆ ಬಿದ್ದು
ವರಸುತನಾದನೆಂದುಲಿವುತೊಪ್ಪಿದರೊಂದು
ಪರಮ ಸಂಭ್ರಮವನೇನೆಂಬೆ ॥ ೪೫ ॥

ದಾನಾಭಿಷೇಕ ಪೂಜೆಗಳ ನಾಡೊಳಗೆ
ಪ್ರಧಾನ ಸೂಚಿಸಿ ನಡೆಸಿದನು
ಸೇನೆಯೊಳಗೆ ಸೇನಾಪತಿಯು ನಡೆಸಿದನೇ
ನಾ ನೃಪನೈಸಿರಿ ಬಡವೆ ॥ ೪೬ ॥

ಆ ದಿನದೊಳು ಜಾತಕರ್ಮವ ಮಾಡಿಸಿ
ದ್ವಾದಶದಿನದೊಳು ನೃಪತಿ
ಆದಿಜಿನನ ಪೆಸರವನಾದಿರಾಜನೆಂ
ದಾದರ ಮಿಗೆ ನಾಮವಿಟ್ಟ ॥ ೪೭ ॥

ನಾಮಕರ್ಮದ ದಿನದೊಳು ಮಾಗಧನು ತನ್ನ
ಸೀಮೆಯ ಸಂಪತ್ತುಗೂಡಿ
ಸ್ತೋಮದುಲುಪೆಗೂಡಿ ಸಂಭ್ರಮದೊಳು ಬಂದು
ಭೂಮಿಪತಿಯ ಕಂಡನೊಸೆದು ॥ ೪೮ ॥

ಮುಂದಣ ಪಯಣಕೆ ಬಹೆನೆಂದು ಹೋಗಿ ನೋ
ಡಿಂದಿಲ್ಲಿಗಿವನೊದಗಿದನು
ಎಂದೆಂದಿಗೆಮಗೆ ಮಾಗಧನೆ ಮಹಾ ಹಿತ
ನೆಂದು ನುಡಿದನಾ ಚಕ್ರೇಶ ॥ ೪೯ ॥

ಕಳುಹಿಸಿಕೊಂಡಾನು ಕಡಲೊತ್ತಿನೊಳು ಕೇಳ್ದಿ
ಸಲೆಕುಮಾರೋದಯೋತ್ಸವವ
ಉಲುಪೆಸಹಿತ ಬಹೆನೆಂದೂರ್ಗೆ ಹೋದೆನಾ
ಗಳೆ[1] ಮಗುಳ್ದೆನೆ[1] ಯೆಂದನವನು ॥ ೫೦ ॥

ಹೋಗು ನಿನ್ನಯ ನಾಳಿನವನ ಕರೆದುಕೊಂಡು
ಸಾಗರದೊಳಗೆ ತೆಪ್ಪಗಿರು
ಆಗಲೆ ಸಂದಿತೆನ್ನೋಲಗವೆಂದನು
ಮಾಗಧೇಂದ್ರಗೆ ರಾಯ ಮೆಚ್ಚಿ ॥ ೫೧ ॥

ಸುಡು ಸುಡು ನಾಡಿನೊಳೇನುಂಟು ಸಿರಿ ನಿನ್ನ
ಪಡೆಯೊಳಿಪ್ಪುದೆ ಭಾಗ್ಯವೆನಗೆ
ಬಿಡೆನಿನ್ನು ನಿನ್ನ ಡಿಗಳನೆಂದನವನಾರು
ಬಿಡುವರಾ ಸೊಬಗನ ಕಂಡು ॥ ೫೨ ॥

ಹುಟ್ಟಿದ ಶಿಶುವಿಷ್ಟು ಬಲಿಯಬೇಕೆಂದು ಸಂ
ಘಟ್ಟಿಸಿ ದಂಡು ತೆರಳದೆ
ಬಿಟ್ಟ ಬೀಡಿನೊಳಾರು ತಿಂಗಳಿದ್ದನು ಹೊಸ
ಪಟ್ಟಣದೊಳಗಿಪ್ಪ ತೆರದಿ ॥ ೫೩ ॥

---

1 ಮಗುಳ್ದೆನೆ (ಖ) [ಮಗುಳ್ದೆನು] ಮಗುಳೆನೆ (ಕ, ಛ)

ವರತನುಸಾಧ್ಯ ಸಂಧಿ

ಆರು ತಿಂಗಳವೇಲೆ ದಂಡೆದ್ದುದಲ್ಲಿಂದ
ಚೀರಿಟ್ಟು ಭೇರಿ ಸೂಳ್ಯೈಸೆ
ತೋರಲೆತ್ತಿದುವು ಪತಾಕೆ ಟಿಕ್ಕೆಯು ಬಾನ
ಕೇರಿತು ಪಡೆಯ ಕಾಲ್ದೂಳು ॥ ೧ ॥

ಮುಖರ ಮಾಗಧನ ಮೂಡಣ ವಾರ್ಧಿಯೊಳು ಗೆಲ್ದು
ನಿಖಿಳಸೇನೆಯ ಕೂಡಿಕೊಂಡು
ಸುಖಿಗಳೊಡೆಯ ಕಡಲೊತ್ತುವಿಡಿಯ ತೆಂಕ
ಮುಖವಾಗಿ ದಂಡೆತ್ತಿ ನಡೆದ ॥ ೨ ॥

ಒಂದು ರಥದೊಳು ಕಿರಿಯ ಕುವರನ ತೊಟ್ಟ
ಲೊಂದು ರಥದೊಳು ದೊಡ್ಡಣುಗ
ಮುಂದಾಕಿಸಿಯ ತೊಡೆಮೇಲೇರಿ ಬರೆ ಬಂದು
ಪಂದರ್ಕಕೀರ್ತಿಯ ಪೌಜು ॥ ೩ ॥

ಮಾಗಿಯ ಬೇಸಗೆಯನು ಮಳೆಗಾಲವ
ನೀಗುತಲ್ಲಲ್ಲಿ ವಿಶ್ರಮಿಸಿ
ಸಾಗಿ ಹಲವು ಪಯಣದಮೇಲೆ ತೆಂಕಣ
ಸಾಗರವನು ಬಂದು ಕಂಡ ॥ ೪ ॥

ಪಾಳೆಯ ಬಿಟ್ಟಿತು ಕಡಲೊತ್ತಿನೊಳು ಮುನ್ನ
ಪೇಳಿದಷ್ಟಗಲಮದ್ದದೊಳು
ಸಾಲುಮಾತೇನು ಮುನ್ನಿನ ತೆರದೊಳು ಗೃಹ
ಜಾಲ ನಿರ್ಮಿಸಿತು ಸರ್ವರಿಗೆ ॥ ೫ ॥

ಕರೆಯೊಳು ನಿಂದು ರಾಜೇಂದ್ರ ಮಾಗಧನೆಲ್ಲಿ
ಕರೆಯೊಯೆನ್ನ ದ ಮೊದಲ್ಬಂದು
ಕರವ ಮುಗಿದು ಮುಂದೆ ಮಾಗಧ ನಿಂದನು
ಭರತೇಶ ನುಡಿದನಿಂತೆಂದು ॥ ೬ ॥

ಏನೈ ಮಾಗಧ ವರತನು ವ್ಯಂತರ
ನೀ ನೀರ ನಡುಕುರುವದೊಳು
ತಾನು ಕುರುಬರಂತೆ ಬೆರೆತುಕೊಂಡಿಹನಲ್ಲೈ
ನೀನವನೊಳಗ ಬಲ್ಲೆಯಲ್ಲೈ ॥ ೭ ॥

ಸುಮ್ಮನೆ ಬಂದೆಮ್ಮ ಕಾಣ್ಬನೊ ಬಾರದೆ
ಹೆಮ್ಮೆಯೊಳಿಪ್ಪನೊ ಅವನ
ಸೊಮ್ಮೀನು ಹೇಳೆಂದರವನು ಚಕ್ರೇಶನ
ಸಮ್ಮುಖದೊಳಗಿಂತು ನುಡಿದ ॥ ೮ ॥

ದೇವ ನಿನಗೆ ಬೇರೆ ವೆಗ್ಗಳವಿಳಿಯೊಳಿ
ಲ್ಲಾ ವರತನು ತಾನು ಸುಮುಖ
ಸೇವೆಗೆ ನಾಳೆ ನಾನೊಡಗೊಂಡು ಬಪ್ಪೆನಿ
ದಾವ ಗಹನ ಸ್ವಾಮಿಯೆಂದ ॥ ೯ ॥

ಆದರೊಳ್ಳಿತು ಪೋಗು ನಾಳೆ ಬಾರೆಂದು ನಿ
ವೇದಿಸಿ ಬೀಳ್ಕೊಟ್ಟನವನ
ಆದರದಿಂದುಳಿದವರ ಬೀಳ್ಕೊಟ್ಟು ಪ್ರ
ಮೋದಿ ಹೊಕ್ಕನು ರಾಜಗೃಹವ ॥ ೮೦ ॥

ಸ್ನಾನ ದೇವಾರ್ಚನ ಭೋಜನ ಶಯನ ಲೀ
ಲಾನುವರ್ತನದೊಳಾ ದಿನವ
ಮೀನಲೋಚನೆಯರ ಮೇಳದೊಳರಸನ
ನೂನವೆಂದೆನೆ ನೂಂಕಿ ಕಳೆದ ॥ ೮೧ ॥

ಬೆಳಗಾಗೆ ನಿತ್ಯಕರ್ಮವ ತೀರ್ಚಿ ಬಂದು ಸ
ಲ್ಲಲಿತದೊಳೋಲಗವಾದ
ಇಳೆಯರಸುಗಳು ಕಾಣ್ಮೆಯನಿಕ್ಕಿ ಕಂಡು ಮುಂ
ದೆಳಸಿ ಕುಳ್ಳಿರ್ದರೊಪ್ಪದೊಳು ॥ ೧೨ ॥

ದೊಡ್ಡ ಭೂಭುಜರನೀಕ್ಷಿಸುತ ಗಾಯಕತತಿ
ಗೆಡ್ಡವಾಗಿರೆ ಮೆಚ್ಚುಗೊಡುತ
ಒಡ್ಡೋಲಗಗೊಟ್ಟು ಕಡೆಯ ಹಜಾರದೊ
ಳೊಡ್ಡುದೋರಿರ್ದನಾ ನೃಪತಿ ॥ ೧೩ ॥

ಆದಿಜಿನನ ನೆನೆಯುತ ಹಂಸನಾಥನ
ಭೇದಿಸಿ ಬಗೆವುತಿರ್ಪಾಗ
ಆದಿರಾಜನನೊಬ್ಬ ಗಂಧಮಾಧವಿಯೆಂಬ
ದಾದಿ ತಂದಿತ್ತಳಾ ನೃಪಗೆ ॥ ೧೪ ॥

ತೊಡೆಯ ಮೇಲಾದಿರಾಜನನಿಟ್ಟುಕೊಂಡು ಮೈ
ದಡಹುತ ನೃಪತಿ ನೋಡುತಿರೆ
ಸಡಗರದಿಂದರ್ಕಕೀರ್ತಿ ಸಿಂಗರಿಸಿ ಕಾ
ಲ್ನಡೆಯೊಳೆಯ್ತೆರುತಿರ್ದನಾಗ ॥ ೧೫ ॥

ಕಾಸೆ ಚಲ್ಲಣ ನಡುವಿನ ಸಣ್ಣ ಜವದಾಡೆ
ಮಾಸಾಳು ಕುಲ್ಲಾಯಿ ತಿಲಕ
ಪೂಸಿದ ಗಂಧ ತಾವುಜ ಕುಡುಕಿನೊಳು ತೋ
ಳ್ಬೀಸುತ ಬರುತಿರ್ದನಾಗ ॥ ೧೬ ॥

ಕಾಣುತ ರಾಯನರಿದಸಿದು ಬಿನದಕೆ
ರಾಣಿಯರಿಟ್ಟಂದವೆಂದು
ಹೂಣಿಸಿ ತಾನೆಮ್ಮನೋಲೈಸಲೆಂಬ ಬಿ
ನ್ನಾಣವೆಂದೀಕ್ಷಿಸುತಿರ್ದ ॥ ೧೭ ॥

ಅಣ್ಣಾ ಜಿಬಹಾಗ ಕುಳಿತಿರಲಾಗದೇ
ಳಣ್ಣಾಯೆಂದನು ಚಿಕ್ಕಮಗನ
ಪೊಣ್ಣನಾ ಮಗನೆದ್ದನೊಡನೆ ಕೈಮುಗಿಯೆಂದು
ಬಣ್ಣಿಸಿಕೊಡಲು ಕೈಮುಗಿದ ॥ ೧೮ ॥

ಕಿರಿಯ ಕೈಮುಗಿಯೆ ಕೈಸನ್ನೆಯೊಳ್ನಿಲಿಸುತ
ಮೆರೆವ ಸಿಂಹಾಸನವೇರಿ
ಕಿರುರತ್ನವೊಂದ ಕಾಣ್ಕೆಯನಿಕ್ಕಿ ಕೈಮುಗಿ
ದುರೆ ತಂದೆಯೊತ್ತಿನೊಳ್ನಿಂದ ॥ ೧೯ ॥

ಅರ್ಕಕೀರ್ತಿಯ ಕಾಣುತಾದಿರಾಜನು ಕೂಡೆ
ಮಾರ್ಕೊಂಡು ಸೇವೆಗಿಚ್ಛೈಸಿ
ಬೇರ್ಕೆಗೈದೊಡನೆ ಕುಪ್ಪಸವ ಬೀಸಾಡಿ ಸ
ಮರ್ಕೆಯೊಳಾಯತವಾದ ॥ ೨೦ ॥

ತೊನೆದಣ್ಣಿಸಿಟ್ಟ ಕುಲ್ಲಾಯಿ ಚಲ್ಲಣ ಕಾಸೆ
ಯನು ಜನದಾಡೆಯ ನೋಡಿ
ತನಗಂತು ಬೇಕೆಂದು ನಡುವ ಮುಂಡೆಯ ಮುಟ್ಟಿ
ಜನಕಗೆ ತೋರಿ ಕಾಡಿದನು ॥ ೨೧ ॥

ಏನರ್ಕಕೀರ್ತಿಯಲ್ಲವೆಯವನೋಲೈಸೆ
ನೀನೊಡಂಬಡಬಹುದಣ್ಣ
ನೀನಾದಿರಾಜ ನನ್ನಪ್ಪಾಜಿಯಲ್ಲವೆ
ನಾನಂಜುವೆನು ಕುಳ್ಳರೆಂದ ॥ ೨೨ ॥

ಅದನವ ಕೇಳನಳುವನು ಚಂಡಿಯ ಮಾಳ್ಪ
ನದಕೊಬ್ಬ ಗಣಬದ್ಧಗರಸು
ಪದೆದು ಸೂಚಿಸಲವ ಸಿಂಗರಿಸಿದನು ಬೇ
ಗದೊಳರ್ಕಕೀರ್ತಿಯಂದದೊಳು ॥ ೨೩ ॥

ಬಲದ ದಿಕ್ಕಿನೊಳು ತಾನಣ್ಣನಂದದೊಳು ನಿಂ
ದೊಲವಿಂದ ಪಿತನನೀಕ್ಷಿಸುತ
ಒಲೆಯದುಲಿಯದೆ ಗಂಭೀರದೊಳಿರೆ ನೋಡಿ
ತಲೆತೂಗಿದರು ಸರ್ವನೃಪರು ॥ ೨೪ ॥

ಕುಳ್ಳಿರೈ ಬಾಲಕರಿವರಿದ್ದರೇಕೆ ನೀ
ವೆಲ್ಲರೆದ್ದಿರಿಯೆಂದು ನೃಪರ್ಗೆ
ಸಲ್ಲಾಪದೋರಿದನೀ ಮಹಾಭಾಗ್ಯವ
ನೆಲ್ಲಿ ಕಂಡಪೆವೆಂದರವರು ॥ ೨೫ ॥

ಒಂದು ಘಳಿಗೆ ನಿಂದು ನಮ್ಮನೋಲೈಸಿದ
ರಿಂದಿವರ್ಗೇನು ಸಂಬಳವೈ
ಅಂದವರಿದು ದಳಪತಿ ಪೇಳು ಮಂತ್ರಿ ಪೇ
ಳೆಂದು ರಾಜೇಂದ್ರ ಕೇಳಿದನು ॥ ೨೬ ॥

ಘಳಿಗೆಗೆ ಕೋಟಿ ವಿತ್ತವ ಹಿರಿಯರಸಿಗೆ
ಸಲಿಸಬೇಕೆಂದನಾ ಮಂತ್ರಿ
ಒಲಿದರೆ ಕೋಟಿಯು ಚಿಕ್ಕರಸಿಗೆ ಕೂಡ
ಸಲುವುದೆಂದನು ದಂಡನಾಥ ॥ ೨೭ ॥

ಆಗಲಿ ಘಳಿಗೆಗೊಂದೂವರೆ ಕೋಟಿಯ
ನೀಗ ನೀವಿವರಿಗೆ ಸಲಿಸಿ
ಈ ಗಣಿತದೊಳಿ ಮುಂದೋಲೈಸಿದಾಗ ಲೇ
ಸಾಗೀವುದೆಂದು ನೇಮಿಸಿದ ॥ ೨೮ ॥

ಸಾಕಿನ್ನು ಬನ್ನಿರೈ ಜಾತಿವೀರರಿರಯೆಂ
ದಾ ಕುಮಾರಕರನಿಬ್ಬರನು
ಭೂಕಾಂತನೆರಡು ತೋಳಿಂದಪ್ಪಿಕೊಂಡರ್ತಿ
ಯೋಕುಳಿಯಾಡಿದನೊಡನೆ ॥ ೨೯ ॥

ಕರೆದಾದಿರಾಜನ ಗಂಧಮಾಧವಿಯ ಕೈ
ಗರಸನಿತ್ತೊಡನೆ ಬೀಳ್ಕೊಟ್ಟ
ಹಿರಿಯ ಕುವರನ ಮುಂದಾಕಿನಿಗೊಪ್ಪಿಸು
ತರಮನೆಯತ್ತ ಬೀಳ್ಕೊಟ್ಟ ॥ ೩೦ ॥

ಜಲನಿಧಿಯೊತ್ತಿಗೆ ಬಂದು ವಿಮಾನದಿಂ
ದಿಳಿದು ಮಾಗಧನಂತೆ ತಾನು
ತಳಿ ಚವರವ ಮಾಣ್ದು ವರತನು ಕಾಲ್ನಡೆ
ಯೊಳು ಬರುತಿದ್ದನೋಜೆಯೊಳು ॥ ೩೧ ॥

ಇತ್ತರವಿಡಿದ ರಾಜರ ನಡುವವನೀಶ
ನೊತ್ತಿಗೊಯ್ಯಾರದೊಳೆಯ್ದೆ
ಚಿತ್ತೈಸು ವರತನುವಿವನೀಗ ಸ್ವಾಮಿಯೆಂ
ದೆತ್ತಿ ಕೈಮುಗಿದ ಮಾಗಧನು ॥ ೩೨ ॥

ಭಕ್ತಿಯೊಳ್ಪರತನು ಪೊಸನಿವಾಳಿಯನಿಟ್ಟು
ಮೌಕ್ತಿಕಂಗಳ ಹಸ್ತತುಂಬಿ
ಶಕ್ತರಾಜೇಂದ್ರನ ಪಾದಪದ್ಮಗಳಿಗೆ
ಯುಕ್ತಿಯೊಳಭಿಷೇಕಗೈದ ॥ ೩೩ ॥

ಚಕ್ರೇಶನರಿದನೀ ವರತನು ಸುಮುಖನು
ವಕ್ರಿಯಲ್ಲೆಂದು ಮೆಚ್ಚಿದನು
ಸುಕ್ರಮವಾಯ್ತು ನೀ ಬಂದುದೇಳೇಳೆಂದು
ಪಕ್ರಮವಾಕ್ಯದೋರಿದನು ॥ ೩೪ ॥

ಇತ್ತ ಬಾರೈ ವರತನುನಾಮಯೆಂದು ತ
ನ್ನೊತ್ತಿಗೆ ರಾಜೇಂದ್ರ ಕರೆದು
ಇತ್ತನಾಭರಣ ದಿವ್ಯಾಂಬರಗಳ ನೋಳ್ಪ
ನೊತ್ತದ ನೃಪರರ್ತಿಮಾಡೆ ॥ ೩೫ ॥

ನಿಂದಮಾತ್ರವೆ ನಿನ್ನೆ ಮಾಗಧಾಂಕಿತನ ಹೋ
ಗೆಂದಟ್ಟಿದೆವು ಹೋದನಹುದು
ಚಿಂದಗಾಣಿಸಿದನು ಕಾರ್ಯವ ಬಳಲಿದ
ನೆಂದೊಳ್ಪ ನುಡಿದನಾ ನೃಪತಿ ॥ ೩೬ ॥

ವ್ಯಂತರ ಮುಖ್ಯರಿನ್ನಾರು ಬಂದರು ನಿನ್ನ
ಪಿಂತಣೋಲಗ ಸಲ್ವುದವರ್ಗೆ
ಮುಂತಣ ತೇಜ ಮನ್ನಣೆ ನಿನ್ನ ದೆಂದು ಭೂ
ಕಾಂತ ನುಡಿದನೆಲ್ಲರೊಸೆಯೆ ॥ ೩೭ ॥

ಆ ನೃಪ ತಾನಿಟ್ಟ ಹಾರವ ಕೊಟ್ಟನ
ನೂನ ಭೂಷಣವ ಬೇರಿತ್ತ
ಏನ ಕೊಡನು ಚಕ್ರಿ ವ್ಯಂತರಾಗ್ರಣಿಯೆಂದು
ಪೀನಬಿರುದ ಕೊಟ್ಟನೊಡನೆ ॥ ೩೮ ॥

ಬೀಡಿಗೆ ಹೋಗು ವಿಶ್ರಮಿಸೆಂದು ವಿನಯುವ
ನಾಡಿದನೊಡನೆ ಮಾಗಧಗೆ
ಕೂಡೆ ಪಾದಕೆ ಮಣಿದನು ಪುರೆಯಿಡೆ ನಲಿ
ದಾಡುತೆಯ್ದಿದನವನತ್ತ ॥ ೩೯ ॥

ಮತ್ತುಳಿದೆಲ್ಲರನುಚಿತದಿ ಬೀಳ್ಕೊಟ್ಟು
ಚಿತ್ತದೊಳರುಹನ ನೆನೆದು
ಮುತ್ತಿನ ಗದ್ದುಗೆ ಯಿಂದೆದ್ದು ಹೊಕ್ಕನಾ
ಚಿತ್ತಜೋಪಮನು ಮಂದಿರವ ॥ ೪೦ ॥

ಅಂತಃಪುರದ ಪೆಂಗಳುಗೂಡಿ ತನ್ನ ಯ
ಸಂತಾನಗೂಡಿ ಭೋಗಿಸುತ
ಚಿಂತೆಯಿಲ್ಲದೆ ಕೆಲದಿವಸವಲ್ಲಿದ್ದನೋ
ರಂತಾತ್ಮಭಾವನೆವೆರಸಿ ॥ ೪೧ ॥

ಬೆಳೆದುದನರಿದರ್ಕಕೀರ್ತಿ ರಾಜಗೆ ರಾಜ
ಕುಲಮೆಚ್ಚಲೊಂದು ದಿನದೊಳು
ಸುಲಲಿತ ಯಜ್ಞೋಪವೀತ ಕಲ್ಯಾಣವ
ನಿಳಿ ಪೊರೆಯಿಡಲೆಸಗಿದನು ॥ ೪೨ ॥

ಹಿಂದರ್ಕಕೀರ್ತಿಯ ಪೌಜೆಂಬ ನುಡಿಯಿದ್ದು
ದಿಂದದು ಮಾಣ್ದುದು ಕೂಡೆ
ಮುಂದಾದಿರಾಜನ ಪೌಜೆಂದು ಸತಿಯರ
ಸಂದೋಹಕಾಯ್ತೊಂದು ವಾರ್ತೆ ॥ ೪೩ ॥

ಪುರುಹೂತ ದಿಕ್ಕಿನ ದಕ್ಷಿಣ ದಿಕ್ಕಿನ
ಶರಧಿಪಾಲರ ಗೆಲ್ದು ನೃಪತಿ
ವರುಣ ದಿಕ್ಕಿಗೆ ಹೋಗಲೆಳಸಿವ್ದನಿಲ್ಲಿಗೆ
ವರತನುಸಾಧ್ಯದ ಸಂಧಿ ॥ ೪೪ ॥

ಪ್ರಭಾಸಾವುರಚಿಹ್ನ ಸಂಧಿ

ಪೊಡವಿಯಾಗಸ ನಾದಮುಯವಾಗುವಂತೆತ್ತಿ
ಬಡಿದು ಬಲ್ಭೇರಿ ಸೂಳೈಸಿ
ಪಡುವಣ ದಿಕ್ಕಿಗೆ ಮುಖವಾಗಿ ದಂಡೆತ್ತಿ
ನಡೆದನಾ ರಾಜಮಾರ್ತಾಂಡ ॥೧॥

ಠಾವರಿದಲ್ಲಲ್ಲಿ ಬಿಡುತೆಯ್ದುವಾಗೊಂದು
ಪಾವನಮಪ್ಪ ತಾಣದೊಳು
ಭೂವರಾಗ್ರಣಿಯ ಪೆಂಡಿರೊಳೊರ್ವ ಚಂದ್ರಿಕಾ
ದೇವಿ ಪೆತ್ತಳು ವರಸುತನ ॥೨॥

ಎಸಗಿತಾಗಳೆ ಗುಡಿತೋರಣವಲ್ಲಲ್ಲಿ
ಮಸಗಿತು ವಾದ್ಯನಿನಾದ
ದೆಸೆತುಂಬಿ ಬಿಟ್ಟ ಸೇನೆಯೊಳು ಕುಮಾರನಾ
ದೊಸಗೆ ಹಬ್ಬಿತು ಚಕ್ರಧರನ ॥೩॥

ಭೂಮೀಶ ಜಾತಕರ್ಮವನೆಸಗಿಸಿ ಮತ್ತೆ
ನಾಮಕರ್ಮದ ದಿವಸದೊಳು
ಪ್ರೇಮದಿ ಪೆಸರಿಟ್ಟಸಿವನು ವೃಷಭಸೇನ
ನಾಮ ವೃಷಭರಾಜನೆಂದು ॥೪॥

ಅರುದಿಂಗಳಿನ ಮೇಲೆ ದಂಡೆದ್ದುದಲ್ಲಿಂದ
ಬಿರುಬೆದ್ದು ಭೇರಿ ಸೂಳೈಸಿ
ಹೆರೆದೆಗೆಯದೆ ನೂಂಕಿ ನಡೆದುದು ಕಟಕ ಬ
ಲ್ತೆರಪಿನೊಳಗೆ ಜಾತ್ರೆಯಂತೆ ॥೫॥

ಬಿಡುತಲ್ಲಿಗಲ್ಲಿ ದಂಡೆತ್ತಿ ನಡೆವುತ ವೆ
ರ್ವಡೆಗೂಡಿ ಕ್ರಮದೊಳು ಗಮಿಸಿ
ಕಡೆನೂಂಕೆ ಹಲವು ಪಯಣದೊಳೊಯ್ಯನೆ ಬಂದು
ಪಡುವಣ ವಾರ್ಧಿಯ ಕಂಡ ॥ ೬ ॥

ಮಾಗಧಾಂಕನ ಕರೆ ವರತನು ಬರಲೆಂದ
ನಾಗವರ್ಬಂದು ಕೈಮುಗಿಯೆ
ಸಾಗರತೀರದೊಳ್ನಿಂದವರಿರ್ವರ್ಗೊಂ
ಗಿದಾಭೂಪತಿಯಿಂತು ನುಡಿದ ॥ ೭ ॥

ಈ ಸಮುದ್ರದ ಕುರುವದೊಳು ಬಾಳ್ವನಲೈ ಪ್ರ
ಭಾಸನೆಂದೆನಿಪ ವ್ಯಂತರನು
ಮಾಸದೆಯ್ತಂದೆಮ್ಮ ಕಾಣ್ಬನೊ ಕಡೆಯೊಳು
ಮಾಸಿ ಬಪ್ಪನೊ ಹೇಳಿರೆಂದ ॥ ೮ ॥

ಉತ್ತಮನವನು ಪ್ರಭಾಸದೇವನು ನಿನ್ನ
ಬಿತ್ತವನೊಲಿಸತಕ್ಕವನು
ಸುತ್ತಿನ ನುಡಿಯೇನು ನಾವಿಬ್ಬರೆಯ್ದಿ ನಿ
ನ್ನೊತ್ತಿಗೆ ತಹೆವೆಂದರವರು ॥ ೯ ॥

ನೀವೆಯ್ದಬೇಡ ನಿಮ್ಮಯ ನಾಳನವರೊಂದು
ಸೇವೆಯ ಮಾಡಲಿ ನವಗೆ
ನಾವವರನು ನೋಡಬೇಡವೆಯೆಂದು
ಸದ್ಭಾವದಿ ನುಡಿದನಾ ಚಕ್ರಿ ॥ ೧೦ ॥

ಧ್ರುವಗತಿ ಭಾಸುರಕೀರ್ತಿ ಬಾ ಹೋಗಿ ನೀ
ವವನ ನಿಲ್ಲಿಗೆ ತಹುದೆಂದು
ಸುವಿನಯದಿಂದ ಬೀಳ್ಕೊಟ್ಟನಾ ಸೇವೆಗು
ತ್ಸವಿಸುತೆಯ್ದಿದರವರತ್ತ ॥ ೧೧ ॥

---

1 ಯು (ಚ) ಯೆ (ಕ) ಯೆ (ಕ)

ಎಲ್ಲರ ಬೀಳ್ಕೊಟ್ಟು ಕುವರರಿಬ್ಬರ ಮುತ್ತು
ಲಲ್ಲೆಯೊಳ್ಬೀಡಿಗೆ ಕಳುಹಿ
ಪಲ್ಲಕ್ಕಿಯಿಳಿದರಮನೆಯ ಹೊಕ್ಕನು ಕಬ್ಬು
ವಿಲ್ಲನರೂಪನುಬ್ಬಿನೊಳು ॥ ೧೨ ॥

ಎಳೆವೆಂಗಳೊಡಗೂಡಿ ಜಳಕ ಮುಂತಾದ ನಿ
ರ್ಮಲ ಭೋಗ ಯೋಗ ಲೀಲೆಯೊಳು
ಕಳೆದನಾ ಹಗಲಿರುಳನು ಮರುದಿವಸದ
ಬೆಳಗಿನೊಳೋಲಗವಾದ ॥ ೧೩ ॥

ಚರ್ಮದೃಷ್ಟಿಯೊಳು ಲೋಕವ ನೋಡುತಿದ್ದನಂ
ತರ್ಮಹಾಜ್ಞಾನದೃಷ್ಟಿಯೊಳು
ನಿರ್ಮಲಾತ್ಮನ ನೋಡುತಿರ್ದನವನ ಮನೋ
ಧರ್ಮವ ಬಲ್ಲವರಾರು ॥ ೧೪ ॥

ಕೆಸರೊಳಿರ್ದಬ್ಜಕೆ ರವಿಯಮೇಲಲ್ಲದಾ
ಕೆಸರಿನ ಮೇಲಾಸೆಯಹುದೆ
ಅಸಮಭೋಗದೊಳಿರ್ದೊಡಾತ್ಮನಮೇಲಲ್ಲ
ದೆಸೆವುದೆ ಮನುತೆ ಭವ್ಯರಿಗೆ ॥ ೧೫ ॥

ವಿಜಯಾರ್ಧದರ್ಶನ ಸಂಧಿ

ಬಲಗೂಡಿ ಬಂದು ಸಮುದ್ರದೊತ್ತಿನೊಳಾಪ್ತ
ಬಲವ ನಿಲ್ಲಿಸಿ ವ್ಯಂತರೇಂದ್ರ
ಲಲಿತ ವಿಮಾನದಿಂದಿಳಿದು ಚಕ್ರೇಶನ
ಬಳಿಗೈದುತಿರ್ದನತರ್ತಿಯೊಳು ॥೧॥

ಪ್ರತಿಭಾಸನೆಂಬ ತನ್ನಯ ನಾಳಿನವನು ತ
ನ್ನತುಳಮಂತ್ರಿಯು ತನ್ನ ಹಿಂದೆ
ಹಿತಗೆಯ್ದು ಸುರಕೀರ್ತಿ ಧ್ರುವಗತಿಗಳು ಮುಂದೆ
ಗತಿಗೆಯ್ಯೆ ಗಮಿಸಿದನವನು ॥೨॥

ಸರಿತದೊಳೊತ್ತಿಗೆ ಸಾರ್ದಿವನೀಗವ
ಧರಿಸು ಪ್ರಭಾಸೇಂದ್ರನೆಂದು
ಸುರಕೀರ್ತಿ ಧ್ರುವಗತಿಗಳು ಚಕ್ರಧರಗೆತ್ತಿ
ಕರವ ಮುಗಿದು ಕಾಣಿಸಿದರು ॥೩॥

ಕರುಣದಿ ನೋಡಿ ಚಕ್ರೇಶನೇಳೇಳೆಂದ
ನಿರದೆದ್ದನಿರ್ವರುಸಹಿತ
ಹರಿಪೀಠದೊಳಗೆಸೆವರಸನಿದಿರೊಳು ನಿಂ
ದರರೆ ಕೀರ್ತಿಸಿದನೇನೆಂಬೆ ॥೪॥

ಸುಮುಖನ್ಯೆ ಬಳಲಿದ್ಯೆ ಕುಳ್ಳಿರೆಂದವನ ಭೂ
ರಮಣ ಕುಳ್ಳಿರಗೊಡಿಸಿದನು
ಸಮತೆಯೊಳವ ಮಂತ್ರಿ ಪ್ರತಿಭಾಸರೊಡಗೂಡಿ
ಗಮಕದೊಳೊಲ್ದು ಕುಳಿತನು ॥೫॥

ಮನೆಗೆ ಹೋಗಲಿ ಪ್ರಭಾಸಾಮರನಿಂದು ಮೆ
ಲ್ಲನೆ ನಾವು ಮುಂದೆ ಬಿಟ್ಟಿಡೆಗೆ
ಅನುಗಮಿಸಲಿ ದೇವ ಕಳುಹ ಚಿತ್ತೈಸೆಂದು
ವಿನಯದೊಳೊರೆದನಾ ಸಚಿವ ॥ ೬ ॥

ಕರೆದು ಪ್ರಭಾಸದೇವಗೆ ಪ್ರತಿಭಾಸಾಂಕ
ಗೆರವಿಲ್ಲದವರ ಸಚಿವಗೆ
ಹಿರಿದುಡುಗೊರೆಯಿತ್ತನೋಲಗದೊಳಗಿರ್ದ
ದೊರೆಗಳಿಲ್ಲರ್ತಿಮಾಳ್ಪಂತೆ ॥ ೭ ॥

ಅವರ್ಗೆ ಮನ್ನಣೆಯಿತ್ತು ಸುರಕೀರ್ತಿ ಬಾರೆಲೆ
ಧ್ರುವಗತಿ ಬಾರೆಂದು ಕರೆದು
ನವರತ್ನಭೂಷಣವಿತ್ತು ನೀವೆಮಗೆ ತ
ಕ್ಕವಸರದಾಳ್ಗಳೈಯೆಂದ ॥ ೮ ॥

ಅಡಿಗೆರಗಿದ ಧ್ರುವಗತಿ ಸುರಕೀರ್ತಿಯೊ
ಳೊಡನೆ ಕುಳ್ಳಿರಿಯೆಂದು ನುಡಿದು
ನಡೆ ಪ್ರಭಾಸಾಂಕ ನಿನ್ನೂರಿಗೆಂದವನ ಬೀ
ಳ್ಕೊಡುವಷ್ಟರೊಳಗೊಂದು ಚೋದ್ಯ ॥ ೯ ॥

ಒಸಗೆ ಒಸಗೆಯೆಂಬ ಗಲಭೆ ಹುಟ್ಟಿದುದು ತಾ
ಮಸಮಾಡಿ ಪೋಪೆ ನಾನೆಂದು
ವಸುಧಾದಿಪತಿಯ ಮುಂದವನೊಲ್ದು ಕುಳಿತನಿ
ನ್ನೊಸಗೆಯೇನೆಂಬೆನಚ್ಚರಿಯ ॥ ೧೦ ॥

ಸಂಚಯಸಭೆಯಲ್ಲಿ ನೃಪಸಿತ್ತಲಿರಲತ್ತ
ಮಿಂಚುವೆತ್ತರಮನೆಯೊಳಗೆ
ಪಂಚಕಾಂತೆಯರು ಪೆತ್ತರು ಪಂಚಪುತ್ರರ
ಪಂಚರತ್ನವಪಡೆದಂತೆ ॥ ೧೧ ॥

ಪರಿವಿಡಿಯಿಂದೊಬ್ಬರೊಬ್ಬರಿಗೊಂದೊಂದು
ಸರವ ಸಮಾನದೊಳೀಯೆ
ಭರತಚಕ್ರೇಶ ನಿಕ್ಕಿರ್ದ ಕೊರಳ ಪಂಚ
ಸರ ಸರಿಯಾದುದೈವರಿಗೆ ॥ ೧೨ ॥

ಪಂಚಕುಮಾರರೊಸಗೆಯ ಪೇಳ್ದವರಿಗೆ
ಪಂಚಸರವನೊಸೆದಿತ್ತು
ಪಂಚಮುಖಾಸನನೊಳು ಲೀಲೆಯಿಂದಿರ್ದ
ಪಂಚಾಸ್ತ್ರನಿರ್ಜಿತರೂಪ ॥ ೧೩ ॥

ಅರಸನಾನಂದವನಂತಿಂತುಟೆಂಬುದಂ
ತಿರಲಿ ಮಹಾಸ್ಥಾನದಲ್ಲಿ
ನೆರೆದಿದ್ದರೆಲ್ಲರು ತವಗೆ ಚಕ್ರೇಶನ
ಸಿರಿ ಸಾರಿದಂತೆ ಹೆಚ್ಚಿದರು ॥ ೧೪ ॥

ಈ ವಿಶ್ವತೋತ್ಸಾಹವನು ನೋಡದೆಯ್ದಿ ನ
ನ್ನಾ ವಾಸದೊಳು ಕಾಣ್ಬುದೇನು
ದೇವ ನಾನಿಲ್ಲಿಪ್ಪೆನೆಂದು ಪ್ರಭಾಸಾಂಕ
ನಾ ವೇಳೆಯೊಳು ಪೊಣ್ದು ನುಡಿದ ॥ ೧೫ ॥

ಪರಿವೃತರೆಲ್ಲರನುಚಿತದಿ ಬೀಳ್ಕೊಟ್ಟು
ಗುರುನಿರಂಜನಸಿದ್ಧ ಯೆಂದು
ಧರಣೀಶನಾಸ್ಥಾನದಿಂದೆದ್ದು ರಾಜಮಂ
ದಿರವಹೊಕ್ಕನು ವಿಳಾಸದೊಳು ॥ ೧೬ ॥

ವಿತತ ಸುವಸ್ತುಗಳುಲುಪೆವೆರಸಿ ಬಂದು
ನುತ ನಾಮಕರಣದಿನದೊಳು
ಪ್ರತಿಭಾಸದೇವನು ಚಕ್ರಿಯ ಕಂಡವ
ನತನಾಗಿ ಸಲುಗೆವಡೆದನು ॥ ೧೭ ॥

ಷಣ್ಮಾಸ ತಡೆದನಲ್ಲಿಂದ ದಂಡೇಳದೆ
ಷಣ್ಮಾಸ ತುಂಬಿದಮೇಲೆ
ಪೊಣ್ಮೆಮಹಾಭೇರಿ ಸೂಳ್ಯೈಸಲಲ್ಲಿಂದ
ಜಾಣ್ಮೆಯೊಳಿದ್ದನಾ ಚಕ್ರಿ ॥ ೧೮ ॥

ಹಿಮಗಿರಿಯೊಳು ಪುಟ್ಟಿ ಗಂಗೆವೊಲ್ತೆಂಕಲಾ
ಕ್ರಮಿಸಿ ಮತ್ತಪರಸಾಗರವ
ನಿಮಿರಿ ಕೂಡಿತು ಸಿಂಧುವೆಂಬ ಮಹಾನದಿ
ಗಮಿಸಿದ (ರದರೊತ್ತ)ವಿಡಿದು ॥ ೧೯ ॥

ಪಡುವಣವಾರ್ಧಿಯ ತಡಿಯಿಂದ ದಂಡೆತ್ತಿ
ಗಡಣಿಸಿ ಮೂಡ ಮುಂತಾಗಿ
ನಡೆದುದು ಕಟಕವಾ ಸಿಂಧುನದಿಯ ತೆಂಕ
ವಿಡಿದು ಮಹಾಲೀಲೆಯಿಂದ ॥ ೨೦ ॥

ಪಯಣದೊಳಲ್ಲಲ್ಲಿ ಪಡೆದ ಮುಕ್ಕಳಿಗುಪ
ನಯನ ಮುಂತಾದ ಕ್ಷತ್ರಿಯರ
ಕ್ರಿಯೆಗಳ ಮಾಡಿಸುತೆಯ್ತರುತಿರ್ದನ
ರ್ಥಿಯೊಳಗಣಿತಪುಣ್ಯಭಾಗಿ ॥ ೨೧ ॥

ಬಿಟ್ಟಲ್ಲಿ ಬಿಡದೆ ದಂಡೆತ್ತಿ ನಡೆದು ರಿಪು
ರಟ್ಟಡಿಕಾರನೆಯ್ತಂದು
ದಿಟ್ಟಗಳಿಗೆ ರಮ್ಯವೆನಿಸುವ ಬೆಳ್ಳಿಯ
ಬೆಟ್ಟವ ಕಂಡನಿದಿರೊಳು ॥ ೨೨ ॥

ನಾಡಾಡಿ ಗಿರಿಯಲ್ಲ ವಿಜಯಾರ್ಧಗಿರಿಯದು
ನೀಡಿ ಮೇಘವ ಮುಟ್ಟುತಿಹುದು
ಮೂಡಣ ಪಡುವಣಬ್ಧಿಯ ಮುಟ್ಟಿ ಬೆಳ್ಳಿಯ
ಗೋಡೆಯಂತೆಸೆವುದೇನೆಂಬೆ ॥ ೨೩ ॥

ಬಿಳಿಯಾನೆಗಳವಟ್ಟರಂಜಿಕೆಯಂತೆಡ
ಬಲದೊಳಾ ಗಿರಿಯ ತಪ್ಪಲೊಳು
ಸಲೆ ನೂರಹತ್ತು ಪಟ್ಟಣವೆಸೆದಿಹುವದ
ರೊಳಗೆ ವಿದ್ಯಾಧರರಿಹರು ॥ ೨೪ ॥

ಪುರಗಳೊಳ್ ಗಗನವಲ್ಲಭಪುರ ರಥನೂ
ಪುರಚಕ್ರವಾಳವೆಂಬೆರಡು
ಪುರಗಳಗ್ಗಳವಲ್ಲಿ ನಮಿರಾಜ ವಿನಮಿರಾ
ಜರು ಬಾಳುತಿಹರು ಸೋದರರು ॥ ೨೫ ॥

ಆವರು ಭೂಭುಜನ ಸೋದರದ ಮಾನಂದಿರ
ಕುನರರು ಖಚರರೆಲ್ಲರನು
ಅವನತೆಗೆಯ್ಸಿ ಕೊಂಡುರೆ ತಮ್ಮೊಳಧಿರಾಜ
ಯುವರಾಜ ಪದವಿಯೊಳಿಹರು ॥ ೨೬ ॥

ಗಿರಿಯೆರಳ್ಪದಿಯವೋಲೆಸೆವ ತಪ್ಪಲೊಳು ಖೇ
ಚರರಿಹರದರ ತುದಿಯೊಳು
ವರವಿಜಯಾರ್ಧಕುಮಾರನೆಂಬರಸು ಕಿ
ನ್ನರ ಸಿದ್ಧ ಯಕ್ಷಾದ್ಯರಿಹರು ॥ ೨೭ ॥

ಆ ಗಿರಿಗುತ್ತರ ದಿಕ್ಕಿನೊಳದಕೆ ಮೀ
ಟಾಗಿ ಪೂರ್ವಾ ಪರಾಬ್ಧಿಗಳ
ತಾಗಿ ಮತ್ತೊಂದಡ್ಡಗೋಡೆಯೆಂಬಂತೆ ಪೆಂ
ಪಾಗಿರುತಿಹುದು ಹೇಮಾದ್ರಿ ॥ ೨೮ ॥

ಎರಡು ಬೆಟ್ಟಗಳ ನಡುವೆ ಮೂಡ ಪಡುವ ನೀ
ಳ್ದರೆ ಮೂರು ಖಂಡ ರಾಜಿಪುವು
ಭರತ ಷಟ್ಖಂಡವನಾಳುವನಾ
ಭರತಚಕ್ರೇಶನೇನೆಂಬೆ ॥ ೨೯ ॥

ಕೋಟಿಯಂದದ ವಿಜಯಾರ್ಧಕೆ ವಜ್ರಕ
ವಾಟ ಮುಟ್ಟಿಹುದದನೊಡೆದು
ದಾಟಸಬೇಕಾಚೆಗಖಿಳ ಸೇನೆಯನದ
ರಾಟವ ಮುಂದೆ ಹೇಳುವೆನು ॥ ೩೦ ॥

ಯೋಚಿಸಿ ಮುಂದಣ ಕಾರ್ಯವ ನೃಪತಿ ಸೇ
ನಾಚಕ್ರಮುಖ್ಯನ ಕರೆದು
ಖೇಚರಗಿರಿಗೀಚೆ ರವಿಯೋಜನದೊಳು ಸಂ
ಕೋಚದಳಗ ತೆಗೆಸೆಂದ ॥ ೩೧ ॥

ಇಂದು ಬೀಡಿನೊಳಿರು ನಾಳೆ ನಿನ್ನನುಜರ
ಮುಂದಿರ ರಕ್ಷಣೆಗಿರಿಸಿ
ವೃಂದವ್ಯಂತರಸೇನೆಗೂಡಿ ತೆರಳಿ ದಂಡ
ದಿಂದ ಖಾತಿಯ ತೆಗೆಸೆಂದ ॥ ೩೨ ॥

ಮುಚ್ಚಿದ ಪಡಿಯ ಮುಂದೊಡೆವಾಗಲೊಳಗಿರ್ದ
ಕಿಚ್ಚು ಪನ್ನೆರಡು ಗಾವುದಕೆ
ಉಚ್ಚಳಿಸುವುದದು ಮುಂದೊತ್ತಿ ಬಾರದಂ
ತೆಚ್ಚತ್ತುಗೈಸಬೇಕೆಂದ ॥ ೩೩ ॥

ಕಾಲುವೆ ತಗೆಯದಿದ್ದರೆ ಕಿಚ್ಚು ಮುಂದೊತ್ತಿ
ಜ್ವಾಲೆಯ ಕೆದರುತ ಬಹುದು
ಪಾಳೆಯವೆದ್ದೋಡಬೇಕಹುದದನರಿ
ದೀ ಲೆಕ್ಕದೋರಿದೆನೆಂದ ॥ ೩೪ ॥

ವ್ಯಂತರಾಗ್ರಣಿಯ ಪ್ರಭಾಸಾಂಕ ವರತನು
ಮುಂತಾದವರನಾಗ ಕರೆಸಿ
ಎಂತೀತ ಪೇಳ್ದನಂತೆಸಗುವುದೆಂದು ನಿ
ಶ್ಚಿಂತ ನೇಮಿಸಿಬಿಟ್ಟನವರ ॥ ೩೫ ॥

ಅಗಲದೊಳಗೆ ಸೇನೆ ಬಿಟ್ಟಿತು ಮನೆಗಳು
ನೆಗೆದುವೆಲ್ಲರಿಗೆ ತಕ್ಕಂತೆ
ಜಗ ದಜಂಜಡದ ರಾಜ್ಯಾಂಗವೆ ಹೊಸತೊಂದು
ನಗರಿಯಾಯ್ತಾಕ್ಷಣದಲ್ಲಿ ||೩೬||

ಸುಜನೋಕ್ತಿಯಿಂದ ಸರ್ವರ ತರವರಿದೊಲ್ದು
ನಿಜನಿಜನಿಳಯಕೆ ಕಳುಹಿ
ಭುಜಬಲಾಗ್ರಣಿ ರಾಜಗೃಹ ಹೊಕ್ಕನಿಲ್ಲಿಗೆ
ವಿಜಯಾರ್ಧದರ್ಶನ ಸಂಧಿ ||೩೭||

ಕವಾಟವಿಸ್ಫೋಟನ ಸಂಧಿ

ಅಗಳ ತೆಗೆದು ನೀರ ತುಂಬಿಯೆಂಟನೆಯ ರಾ
ತ್ರಿಗೆ ಬಂದು ಸ್ವಾಮಿಯ ಕಾರ್ಯ
ಮುಗಿದುದೆಂದೊಡೆಯಗೆ ಜಯರಾಜ ಕರವೆತ್ತಿ
ಮುಗಿದನು ವ್ಯಂತರರ್ವೆರಸಿ ॥ ೧ ॥

ದಳಪತಿ ಸಚಿವರ ಮರುದಿನ ತನ್ನಯ
ನಿಳಯಕೆ ಕರೆಸಿ ರಾಜೇಂದ್ರ
ಗಳಧೌತಗಿರಿಯ ಕವಾಟವನೊಡೆಹೊಯ್ವ
ಕಳೆಯ ನುಡಿದ ನಲ್ವಮಾಡಿ ॥ ೨ ॥

ಕೇಳಿಲೆ ಮಂತ್ರಿ ಕೇಳ್ವಡೆವಳ್ಳ ವಿಜಯಾರ್ಧ
ಶೈಲದೊಳಿಕ್ಕಿದ ಪಡಿಯ
ನಾಳೆ ಹೋಳ್ಮಾಡಿಬಿಡುವೆನೊಣಗಿದ ಬರ
ಹಾಳೆಯನೊಡೆಯಹೊಯ್ವಂತೆ ॥ ೩ ॥

ಹಂಸನಾಥನ ನೋಡಿ ಕರ್ಮವನೊಡೆವುದು
ಪ್ರಾಂಶುವಜ್ರದ ಕವಾಟವನು
ಧ್ವಂಸಗೈವುದು ನಿನಗಹುದುಳಿದರ್ಗ
ದೇಂ ಸದರವೆಯೆಂದರವರು ॥ ೪ ॥

ಎನಲವರಿರ್ವರಿಗುಡುಗೊರೆಯಿತ್ತು ಮೇ
ದಿನಿಪತಿ ಬೀಡಿಗೆ ಕಳುಹಿ
ಜಿನಪೂಜೆಗೈದು ಹತ್ತನೆಯ ದಿನದ ಬೆಳ
ಗಿನ ಹೊತ್ತಿನೊಳು ಪೊರಮಟ್ಟ ॥ ೫ ॥

ಗೋಣ ಸಂಕೋಚಿಸಿ ಯೆಡಬಲಕೊಲೆವಾಗ
ಗೋಣ ನಿಮಿರಿ ಹರಿವಾಗ
ಮೇಣದ ಕುದುರೆಯೊಯೆಂಬಂತೆ ನೃಪನ ಸಾಂ
ಬ್ರಾಣಿ ಕಂಗೆಸೆದುದೇನೆಂಬೆ ॥ ೬ ॥

ಏಳು ವೈಹಾಳಿಯ ಸೂಚಿಸಿ ಬಿಸಿಲುರಿ
ಯೇಳದ ಮುನ್ನ ರಾಜೇಂದ್ರ
ತೋಳ ಸನ್ನೆಯೊಳು ಪಾಳೆಯವ ನಿಲಿಸಿ ಕೂಡೆ
ಶೈಲಕೆ ದಾರಿದೆಗೆದನು ॥ ೭ ॥

ಪಡೆವಳ್ಳನೊಡನೆ ನಿಂದಿತು ಸೇನೆ ಗಣಬದ್ಧ
ರೊಡಗೂಡಿ ನೃಪತಿ ಹೋಗುತಿರೆ
ಕಡುಗಿ ಬಂದರು ಮಾಗಧಾದಿ ವ್ಯಂತರಿಗರಾ
ಳ್ದೊಡೆಯನ ಬಿಟ್ಟು ನಿಲ್ಲುವರೆ ॥ ೮ ॥

ಸೋಪಾನವಿಡಿದಲ್ಪ ದೂರವ ಪತ್ತಿ ಮ
ತ್ತಾ ಪರ್ವತದ ಗರ್ಭದಲ್ಲಿ
ಆಪತ್ತಿನಂತಿರ್ದ ವಜ್ರಕವಾಟವ
ಭೂಪತಿ ತೊಟ್ಟಗೆ ಕಂಡ ॥ ೯॥

ಭೇರಿಯಿಕ್ಕಡೆಯ ಮುಚ್ಚಿದ ಚರ್ಮದಂತೆ ಗಂ
ಭೀರಗುಹೆಯ ತೆಂಕ ಬಡಗ
ಸೇರಿಹುವೆರಡು ಕವಾಟಗಳವರೊಳಾ
ಧೀರ ಕಂಡನು ತೆಂಕಣದನು ॥ ೧೦ ॥

ಹಲ್ಲ ಕೀಲಿಸಿದಂತೆ ಕೀಲದ ತುಟಿಗಳಂ
ತಿಲ್ಲಿ ಮುಚ್ಚಿವೆಕೊ ದ್ವಾರಗಳು
ಹಲ್ಲ ಮುರಿದು ಬಾಯ ಬಿಡಿಸುವೆ ಗುಹೆಯನೆಂ
ದುಲ್ಲಾಸದೊಳು ನಕ್ಕು ನುಡಿದ ॥ ೧೧ ॥

ಕಡೆಸಾರಿ ನೀವಿನ್ನು ಬೇಗದೊಳಗಳ ಮುಂ
ಗಡೆಗೆಯ್ದಿರೆಂದು ಕೈವೀಸಿ
ಕಡುಪಿನ ದಂಡರತ್ನಾಯುಧಕರಸ ಕೈ
ದುಡುಕಿದನಧಿಕ ವೀರದೊಳು ॥ ೧೨ ॥

ಹಿಂಚಾರಿಯೊಳು ತೂಗಿ ತಿವಿದನಾ ಪಡಿ ಕೂಡೆ
ಹಿಂಚಿದಂತೆರಡು ಹೋಳಾಯ್ತು
ಕಂಚಿನಬೆಟ್ಟ ಹೋಳಾದಂತೆ ದನಿಯಾಯ್ತು
ಮಿಂಚಿನಂತಶ್ವ ಲಂಘಿಸಿತು ॥ ೧೩ ॥

ಜಡಿದ ಭರಕೆ ರಾಯ ಪೊಡೆದ ಭರಕೆ ಕದ
ವೊಡೆದ ಭರಕೆ ವಿಜಯಾರ್ಧ
ನಡುಗಿತು ನೆಲವದಿರಿತು ಕಡಲುಗಳುಕ್ಕಿ
ಬಡದೋಣಿಯಂತೆ ತುಳ್ಕಿದುವು ॥ ೧೪ ॥

ಬರಸಿಡಿಲೆರಗೆ ಪಾಸರೆ ಬಿರಿವಂತೆ ಪೊ
ಚ್ಚರಿಸಿ ಸೀಳಾಯ್ತು ಮತ್ತೊಡನೆ
ಮೊರೆಯಿಡುವಂತೆ ಘಿರ್ರೆಂದು ಘೀಳಿಡುತಾಗ
ತೆರೆದುದಾ ವಜ್ರಕವಾಟ ॥ ೧೫ ॥

ತೂಂಬ ಕಿತ್ತರೆ ನೀರು ನೆಗೆವಂತೆ ಗುಹೆಯಲ್ಲಿ
ತುಂಬಿದ್ದ ಬೆಂಕಿ ಭೂಪತಿಯ
ಬೆಂಬಳಿಯೊಳಗೆ,ನಾಲಗೆ ನೀಡಿತಶ್ವ ಕ
ದುಂಬಿ ಹಾರಿತು ಮೂರು ಹಾರ ॥ ೧೬ ॥

ಛಿಳಛಿಳಿ ಛಿಟಿಛಿಟಿ ದಿಮಿದಿಮಿ ದಿಮಿದಿಮಿ
ಘಳುಘಳು ಬುರುಬುರು ಪಲೆರು
ದಳದಳ ದಗಿದಗಿಲೆಂದುರಿ ನೆಗೆದುದು
ಪ್ರಳಯಕಾಲದ ಕಿಚ್ಚಿನಂತೆ ॥ ೧೭ ॥

ದಳ್ಳುರಿಯೆದ್ದುದ ಕಂಡು ವಿದ್ಯಾಧರ
ರಳ್ಳಿವೊಯ್ದರು ಮ್ಲೇಚ್ಛನೃಪರು
ತಳ್ಳಂಕಗೊಂಡರು ವಿಜಯಾರ್ಧದೇವನು
ಡಿಳ್ಳೈಸಿ ಮುಂಡೆದೂಗಿದನು ॥ ೧೮ ॥

ಮಾಗಧೇಂದ್ರಾದಿಗಳಚ್ಚರಿವಟ್ಟರು
ಕೂಗಿ ಬೊಬ್ಬಿರಿದುದು ಕಟಕ
ತೂಗಿ ವಾಹನರತ್ನ ಕುಣಿಯೆ ಕಂದವ ತಟ್ಟು
ತಾಗ ಭೂಪತಿ ನೋಡುತಿರ್ದ ॥ ೧೯ ॥

ವಿಜಯಾರ್ಧದೇವನಾಗಳೆ ತನ್ನ ದೇವತಾ
ವ್ರಜಗೂಡಿ ಬಂದು ಬಾನದೊಳು
ವಿಜಯಲಕ್ಷ್ಮಿಯ ನಲ್ಲ ಜಯಜಯಯೆಂದು ಭೂ
ಭುಜಗೆ ಹೂಮಳೆಯ ಸೂಸಿದನು ॥ ೨೦ ॥

ಇಟ್ಟು ನಿವಾಳಿಯ ಕೊಟ್ಟು ಕಾಣಿಕೆಯ ಬಾಂ
ಬಟ್ಟಿಯೊಳ್ಮಣಿದೆದ್ದು ನಿಂದ
ದಿಟ್ಟರ ದೇವ ಜೆಲ್ವರ ದೇವ ನಮ್ಮಯ
ದಿಟ್ಟ ಸಫಲವಾದುದೆಂದ ॥ ೨೧ ॥

ಸೋಂಕಿಗೆ ಕರೆದು ತಾನಿಕ್ಕಿದನರ್ಘ್ಯದ
ಕಂಕಣಗಳ ಕೊಟ್ಟನವಗೆ
ಅಂಕಿತಾಳಾಪದಿ ಬೀಳ್ಕೊಡೆ ಬಲಗೂಡಿ
ಭೋಂಕನೆ ಹೋದನಾ ದೇವ ॥ ೨೨ ॥

ತೇಜಿಯ ಮನ್ನಿಸವೇಳುತ ಗಣಬದ್ಧ
ರಾಜಿ ಮುಂತಾದ ವ್ಯಂತರರ
ಪೌಜಿಗೊಲ್ದುಡುಗೊರೆಯಿತ್ತು ಬೀಳ್ಕೊಟ್ಟನಾ
ರಾಜ ಹೊಕ್ಕನು ರಾಜಗೃಹವ ॥ ೨೩ ॥

ಖೇಚರಿಯರ ವೈವಾಹ ಸಂಧಿ

ಮಿಗೆ ರಥನೂಪುರ ಚಕ್ರವಾಳಾಖ್ಯದ
ನಗರಿಯ ವಿನಮಿರಾಜೇಂದ್ರ
ನೆಗೆದುರಿಗಂಡು ಸಂತಸದಲಿ ಹೋದನು
ಗಗನವಲ್ಲಭವೆಂಬ ಪುರಕೆ ॥ ೧ ॥

ಬಳಿಯಟ್ಟಿ ಮಂತ್ರಿಯ ಬರವ ಹಾರುತ ತನ್ನ
ನಿಳಯದೊಳಗೆ ಮೋನದಲ್ಲಿ
ಕುಳಿತಿರ್ದ ನಮಿರಾಜನೆಡೆಗೆಯ್ದಿ ವಿನಮಿ ಕೈ
ಗಳ ಮುಗಿದುಬ್ಬಿನೊಳ್ನುಡಿದ ॥ ೨ ॥

ಕೇಳ್ದಿರೆ ವಜ್ರಕವಾಟವ ಭಾವಾಜಿ
ಪೋಳ್ದುಬಿಟ್ಟನು ನಿಮಿಷದೊಳು
ನೀಳ್ದುದಾಕಾಶಕೆ ದಳ್ಳುರಿಯೆಂದರ್ತಿ
ದಾಳ್ದು ನುಡಿದನಣ್ಣನೊಡನೆ ॥ ೩ ॥

ಕುಟ್ಟದ ರಭಸಕೆ ಬೆಟ್ಟವದಿರಲೆಮ್ಮ
ಪಟ್ಟಣದರಸುಗಳೆಲ್ಲ
ತೊಟ್ಟಿಲ ಮಕ್ಕಳಂತಿಳೆಗೆ ಬಿದ್ದರು ಹೆಮ್ಮೆ
ವಟ್ಟಿರ್ದ ಗದ್ದುಗೆಯಿಂದ ॥ ೪ ॥

ಪರಿವ ಬೆಳ್ಮಗಿಲು ಕಿಚ್ಚಿನ ನಾಲಗೆಗೆ ಸಿಕ್ಕಿ
ದರಳೆಯಂತುರಿದು ಹೋಗುತದೆ
ತಿರುಗಲಮ್ಮರು ಮೇಲೆ ಸುರರು ಭಾವಾಜಿಗೆ
ಸರಿಯುಂಟೆ ಅಣ್ಣಾಜಿಯೆಂದ ॥ ೫ ॥

ಮಕ್ಕಳಾಟಕೆಯಲಾ ನಿನಗೆ ರಾಜಾಂಗದ
ದಿಕ್ಕಿನ್ನು ತೋರಿತಿಲ್ಲನುಜ
ಮಿಕ್ಕು ನುಡಿಯದಿರೀ ನುಡಿಗಳ ಹೊರಗೆಂದು
ಚಿಕ್ಕವಗೋಜೆವೇಳಿದನು ॥ ೬ ॥

ಭಾವಾಜಿಯೊಂದು ಪೌರುಷಕೆ ಬೀಗಿದೆ ನಿನ್ನ
ಭಾವಾಜಿ ಷಟ್ಖಂಡದೆರೆಯ
ಭೂವರಾವಳಿ ತನ್ನ ನೋಲೈಸಬೇಕೆಂಬ
ನಾವು ಸೇವಕರಾದೆವಿನ್ನು ॥ ೭ ॥

ಒಂದಾಗಿ ಕುಳಿತೊಮ್ಮೆ ಸರಸದಿ ನೀನು ತಾ
ನೆಂದೆಂಬ ನುಡಿ ಹೋದುದೆಮಗೆ
ನಿಂದು ಕಾಣ್ಕೆಯನಿಕ್ಕಿ ಕಂಡಯ್ಯ ಜೀಯ ಲೇ
ಸೆಂದೆಂಬ ನುಡಿ ಬಂದಿತೆಂದ ॥ ೮ ॥

ಸರಿಸಿರಿಯಾದಾಗ ಬೀಯಗರೆಂಬರು
ಸಿರಿ ಹೆಚ್ಚಿದವರು ಬೀಯಗರ
ಕರೆವರು ತೊಂಡರ ಕರೆವಂತೆ ಕ್ಷತ್ರಿಯ
ರಿರವಿನ್ನು ನಿನಗೆ ಕಾಣಿಸದು ॥ ೯ ॥

ಥಾರೆ ಕೋರೆಯ ನೋಡೆ ರಾಜತೇಜವ ನೋಡೆ
ಯಾರೆಣೆ ಭಾವಾಜಿಗೆಂದು
ಹೂರಿಗೆಯೆಂದರೆ ಗಬಕೆಂಬ ಗಾದೆಯಂ
ತಾರಿಂತು ನುಡಿವರೈಯೆಂದ ॥ ೧೦ ॥

ಆತನೆಮ್ಮಪ್ಪಾಜಿಯೊಡಹುಟ್ಟದಳ ತನು
ಜಾತ ನಾವನ ಸೋದರದ
ಮಾತುಳರಾತ್ಮಜರಿದರೊಳಗೆಡೆಗಟ್ಟ
ದೇತರದಣ್ಣಾಜಿಯೆಂದ ॥ ೧೧ ॥

ಹೆಣ್ಣ ಕೊಟ್ಟವರು ಕೈಮುಗಿಯೆ ಕೈಮುಗಿಯನು
ಬಣ್ಣಕೆ ನೀವು ತಾವೆಂಬ
ಹೆಣ್ಣುಗಳೊಡಹುಟ್ಟಿದವರ್ಗದುವಿಲ್ಲ ಹು
ಚ್ಚಣ್ಣರೊಪ್ಪುವರದನೆಂದ ॥ ೧೨ ॥

ಅದಕಾತನಿಷ್ಟು ಯೋಚಿಸತೊಡಗಿದನು ತ
ನ್ನಿದಿರ ಮಂತ್ರಿಯ ಮುತ್ತೆ ನೋಡಿ
ಇದಕೇನು ತಂತ್ರವೈ ಮಂತ್ರಿ ನಾವಾತನ
ಚದುರಿಂದ ಜಯಿಸಬೇಕೆಂದ ॥ ೧೩ ॥

ಅನುಜೆ ಸುಭದ್ರಾದೇವಿಯ ಭರತರಾ
ಜನಿಗಿತ್ತರೊಳ್ಳಿತೆಂದೆಂದು
ನನಗೆ ನೀನಾಡಿದ್ದೆಯಲ್ತೆಯಿನ್ನಾ ಮಾತ
ನೆನೆಯದಿರ್ಮರೆ ಮರೆಯೆಂದ ॥ ೧೪ ॥

ದಕ್ಷಿಣ ಭಾಗೆಯ ಖಚರ ಪುತ್ರಿಯರೊಳು
ಲಕ್ಷಣ ರೂಪವತಿಯರ
ದಾಕ್ಷಿಣ್ಯ ವಿನಯದೊಳೊಯ್ದು ನೀವಾತನ
ವೀಕ್ಷೆ ತಣಿಯೆ ಧಾರೆಯೆರಸಿ ॥ ೧೫ ॥

ಉತ್ತರಕಾತ ಬಂದಾಗ ಯೋಚಿಸಿಕೊಂಬ
ವೆತ್ತಗಿಂದಿಗೆ ಹೋಗಿರೆಂದ
ಉತ್ತರಗೊಡದೆದ್ದು ವಿನಮಿ ಮಂತ್ರಿಯು ರಾಯ
ನೊತ್ತಿಂದ ಬೀಳ್ಕೊಂಡರೊಡನೆ ॥ ೧೬ ॥

ಸುಮತಿಸಾಗರಮಂತ್ರಿವೆರಸಿ ಖೇಚರಭೂಪ
ರಮಲಕುಮಾರಿಯರ್ಮೂಡಿ
ಥಮಥಮವೆಂಬ ವಾದ್ಯದೊಳು ವಿನಮಿರಾಜ
ಗಮಕದೊಳೆಯ್ತರುತಿರ್ದ ॥ ೧೭ ॥

ಕೇಳುತ ಮೈದುನ ಬಂದ ಬರವನುರ್ವಿ
ಪಾಲಕ ಗೂಢಗೋಷ್ಠಿಯೊಳು
ಓಲಗವಾದನು ಬುದ್ಧಿಸಾಗರನು ಸ
ಲ್ಲೀಲೆಯ ಕೆಳೆಯರು ಸಹಿತ ॥ ೧೮ ॥

ನೆರೆದ ಖೇಚರರು ಮತ್ತೆಯ್ದಲಿ ಮೊದಲೊಮ್ಮೆ
ಬರಹೇಳು ತನ್ನ ನೆಂದೊಡನೆ
ತರುವಕ್ಕಳನು ರಾಯ ಕಳುಹಲಾಕ್ಷಣ ಮಂತ್ರಿ
ವೆರಸಿ ವಿನಮಿರಾಜ ಬಂದ ॥ ೧೯ ॥

ಉಡೆಸುತ್ತಲಿಲ್ಲ ಸಾಷ್ಟಾಂಗವೆರಗಲಿಲ್ಲ
ನಡೆದು ಬಂದೊಂದು ರತ್ನವನು
ಬೆಡಗಿಂದ ಭಾವಗೆ ಕಾಣ್ಕೆಯನಿತ್ತರ್ತಿ
ವಡುತ ಕೈಮುಗಿದನಾ ಸುರಸ ॥ ೨೦ ॥

ವಿನಮಿ ನಿನಗೆ ಪರಿಣಾಮವೆ ನಮಿನಾಮ
ಗನುಪಮ ಕ್ಷೇಮವೆ ಮತ್ತೆ
ಮನೆಯೊಳಿದ್ದವರೆಲ್ಲ ಪದುಳವೆಯೆಂದು ಮೇ
ದಿನಿಪತಿ ಕೇಳ್ದ ಮೈದುನನ ॥ ೨೧ ॥

ದೇವರ ಪೆಂಪಿಂದ ನನಗೊಳ್ಪು ನಮಿರಾಜ
ಗಾವಾಗ ಪರಮಸಂತೋಷ
ಆವಾಸದೊಳಗಿರ್ದರೆಲ್ಲರ್ಗೆ ಸುಖವೆಂದು
ಭಾವನೊಳುಸುರಿದನವನು ॥ ೨೨ ॥

ಪುರುನಾಥನುದರದೊಳಗೆ ದೇವರುದಯಿಸಿ
ಭರತೋರ್ವಿಯೆಲ್ಲವನಾಳೆ
ವರಬಂಧು ಜನವೆಂಬ ವನಕೆ ವಸಂತನ
ಪರಿಯಾದೆ ಭಾವಾಜಿಯೆಂದ ॥ ೨೩ ॥

ನಮಿರಾಜ ಬಹನಹುದಿಲ್ಲಿಗೆ ದೇವರು
ಗಮಿಸುವಂದಿಗೆ ಮೊದಲೊಂದು
ಭ್ರಮರಿವಿದ್ಯೆಯ ಸಾಧಿಸುವೆನೆಂದು ತೊಡಗಿದ್ದ
ಸ್ತಿಮಿತವಾಯ್ತುದರಿಂದ ಪಯಣ ॥ ೨೪ ॥

ಮಂತ್ರಯೋಗದೊಳಿದ್ದ ನಮಿರಾಜಗರುಹಿ ತ।
ನ್ಮಂತ್ರಿ ಸಹಿತ ಬಂದೆನೆಂದು ॥
ತಂತ್ರದಿ ವಿನಮಿ ನುಡಿದನಹುದರಸನಾ।
ತಂತ್ರವರಿದು ಸುಮ್ಮಸಿರ್ದ ॥ ॥ ೨೫ ॥

ಬಂದು ಚಕ್ರಿಗೆ ಕಾಣ್ಕೆಯಿಕ್ಕಿ ಖೇಚರರು ಪೆಂ
ಪಿಂದ ಕೈಮುಗಿಯಲಾ ಕ್ಷಣವೆ
ತಂದು ಕುಳ್ಳಿರಲಿತ್ತಲರಸನ ಕಣ್ಸನ್ನೆ
ಯಿಂದೆಲ್ಲರೊಲ್ದು ಕುಳಿತರು ॥ ೨೬ ॥

ಪಡೆಯಬೇಡವೆ ಪ್ರಾಯದೊಳಗಿಂತು ಚೆಲ್ವನೀ
ಬೆಡಗನೀ ಸಿರಿಯ ಗೌರವವ
ಜಡರೆಲ್ಲ ದೊರೆಗಳೆ ಸುಡು ಸುಡೆಂದೆಲ್ಲರು
ನುಡಿಯದೆ ನೆನೆದರೆದೆಯೊಳು ॥ ೨೭ ॥

ಸೌಂದರಾಂಗಿಯರಾದ ಮುನ್ನೂರು ಪೆಂಗಳ
ತಂದಿದ್ದರೆಮ್ಮರಸುಗಳು
ಚಂದದಿ ಮದುವೆ ನಿಲ್ಲೆಂದು ಖೇಚರಮಂತ್ರಿ
ನಿಂದು ಬಿನ್ನಹವ ಮಾಡಿದನು ॥ ೨೮ ॥

ಮಣಿಮಯದುಡುಗೊರೆಗಳ ಖಚರರಿಗಿತ್ತು
ಗುಣನಚನದೊಳು ಬೀಳ್ಕೊಟ್ಟ
ಮಣಿದವರೆಲ್ಲರು ಬೀಡಾರಕೊಡನೆ ಸಂ
ದಣಿಗೊಂಡು ಸಾಗಿದರತ್ತ ॥ ೨೯ ॥

ಮರುದಿನ ಸಾರಣೆ ತೋರಣ ಗುಡಿ ಕೇತು
ನೆರೆ ರಂಗವಲಿ ಪುಷ್ಪವಲಿಯ
ಮೆರಹಿಂದ ಕಟಕ ಸಿಂಗರವಾಯ್ತು ಮಂಗಲ
ವರೆಕೋಟ ಮೊಳಗಿತಲ್ಲಲ್ಲಿ ॥ ೩೦ ॥

ಸೊನ್ನಾರದಲ್ಲಿ ಸೊಬಗಿನಲ್ಲಿ ರನ್ನದಿ
ಚಿನ್ನದಿಂದೊಂದು ಸಾಲ್ಗಾಗಿ
ಮುನ್ನೂರು ಮದುವೆಯ ಮಂಟಪವಾದುವು
ಸನ್ನದ್ಧ ಮಯನ ತಂತ್ರದೊಳು ॥ ೩೧ ॥

ಖಚರಭೂಪರು ತಮ್ಮ ಸುತೆಯರ ನವರತ್ನ
ಖಚಿತ ಭೂಷಣತತಿಯಿಂದ
ರಚನೆಯಪ್ಪಂತು ಸಿಂಗಾರ ಮಾಡಿಸಿದರು
ಶುಚಿವೆತ್ತ ದಾದಿಯರಿಂದ ॥ ೩೨ ॥

ಅಲತಗೆಯೂಡಿ ಮಿಂಚಿಟ್ಟುಗುರಿಂದ ಜ
ಕ್ಕುಲಿಸುವಂದುಗೆಯಿಂದ ಮತ್ತೆ
ಗಳಬಳಿಸುವ ಬಳೆಯಿಂದ ಕಂಕಣದಿಂದ
ನಳನಳಿಸಿದರು ನೀರೆಯರು ॥ ೩೩ ॥

ಭೂಚರಾಂಗನೆಯರು ಚಕ್ರಿಯ ಚಿತ್ತವಿ
ಲೋಚನಗಳನೊಲಿಸಿದುದ
ಖೇಚರಿಯರು ನೀವು ಮರೆಸಬೇಕೆಂದಾಗ
ಸೂಚಿಸಿದರು ಕೆಳದಿಯರು ॥ ೩೪ ॥

ಪರಿಪೂರ್ಣವಾಗೆ ಶೃಂಗಾರ ನೀರಾಜನ
ವಿರಚನಗೈದು ದಾದಿಯರು
ಭರತರಾಜೇಂದ್ರನ ಮನವ ಸೋಲಿಸಿಯೆಂದು
ಹರಸಿ ಸೇಸೆಗಳನಿಕ್ಕಿದರು ॥ ೩೫ ॥

ಇರುಳು ಮುಂಜಾವದೊಳುತ್ತಮ ಲಗ್ನ ಹ
ತ್ತಿರೆ ತೋರಿತೆಂಬ ವೇಳೆಯೊಳು
ಅರಸನೂಳಿಗದವರೆಯ್ತಂದು ಪೇಳೆ ಪೇ
ಚರರೆದ್ದರೊಂದೆ ಲಗ್ನೆಯೊಳು ॥ ೩೬ ॥

ಮಾಣಿಕ್ಯದೀಪದ ಸಾಲು ರಂಜಿಸುವ ಕ
ಲ್ಯಾಣಮಂಟಪದೊಳಹೊಕ್ಕು
ಶ್ರೇಣಿವೆತ್ತೊಂದು ದಿಕ್ಕಿನ ಪಡಲಿಗೆಯೇರಿ
ಜಾಣವೆಂಗಳು ನಿಂದರೊಸೆದು ॥ ೩೭ ॥

ಜಿನವಾಸಕೆಯ್ದಿ ಜಿನೇಂದ್ರವಂದನೆಗೈದು
ಘನಗುರು ಹಂಸನಾಥನನು
ಮನಮುಟ್ಟಿ ಜಾನಿಸಿ ಬಂದರಮನೆಯೊಳಾ
ಜನಪನಿರ್ದನು ಪೆಂಡಿರೊಡನೆ ॥ ೩೮ ॥

ವನಜಗಂಧಿನಿಯರು ಸಿಂಗರಿಸಿದ ಮದ
ವನಿಗನ ಪೊರೆಯೊಳಿದ್ದಲ್ಲಿ
ಮನದಲ್ಲಿ ನೋವಿಲ್ಲದರ್ತಿಗೊಬ್ಬಿಬ್ಬರು
ಬಿನದವ ನುಡಿದರೇನೆಂಬೆ ॥ ೩೯ ॥

ದೇವ ಬಿನ್ನಹವೊಂದು ಹಂಸಕೆ ಪೆಣ್ಬಕ್ಕಿ
ಸಾವಿರವುಂಟು ಮತ್ತದಕೆ
ತೀವಿ ಕೆಲವು ಪಕ್ಕಿ ಬಂದುವು ಮೊದಲವು
ನೋವವೆಯೆಂದಳಿರ್ವಬಲೆ ॥ ೪೦ ॥

ಒಂದು ಹಂಸವೆ ಬಹು ರೂಪಾಗಿ ಹಲವರೊ
ಳೊಂದುವುದಬಲೆ ಮತ್ತವಕೆ
ನೊಂದುಕೊಂಬುದಕೆ ಕಾರಣವೇನು ಹೇಳು ನೀ
ನೆಂದನಾಕೆಯೊಳೊಲ್ದು ನಗುತ ॥ ೪೧ ॥

ಮಾತಿನ ಮಾಲೆಯೀನವರನು ಮುನ್ನಿನ
ರೀತಿಯೊಳ್ಕಾಣಿಸಿಕೊಂಡ
ಆ ತೆರದೊಳೆ ಕಪ್ಪ ಸಂದುವು ಮದುವೆ ಮು
ತ್ತಾ ತೆರದೊಳೆ ನೃಪಗಾಯ್ತು ॥ ೧೨ ॥

ಚೆನ್ನಿಗರರಸನ ಕಂಡು ಕಣ್ಣಿಲಿದು ಪ್ರ
ಸನ್ನಲೀಲೆಗೆ ಮನ ಹಿಗ್ಗಿ
ಕನ್ನೆಯರೊಸೆದು ಕೂಡಿದರು ಚಂದ್ರನ ಕಂಡು
ಕನ್ನೈದಿಲರಳುವಂದದೊಳು ॥ ೧೩ ॥

ಮರೆಯಿಸಿದನು ತಂದೆ ತಾಯಿಗಳನು ಕೂಡೆ
ಹೊರೆಯಿಸಿದನು ಬಂಧುಜನವ
ನೆರೆ ಜಾಣನಾ ರಾಯನೊಂದಿರುಳೊಳೆ ತನ್ನೊ
ಳಿರಕವ ಮಾಡಿದನವರ ॥ ೧೪ ॥

ವೇಳೆಯನರಿದು ಮತ್ತೊಂದು ಪಗಲು ರಾಯ
ನೋಲಗಕೆಯ್ತಂದು ಮಂತ್ರಿ
ಲೀಲೆಯೊಳಿರ್ದ ರಾಜೇಂದ್ರನ ಮುಂದೆಲ್ಲ
ಕೇಳೆ ಬಿನ್ನೈಸಿದನಿಂತು ॥ ೧೫ ॥

ಮೂರು ಖಂಡವು ಸಾಧ್ಯವಾದುವಿನ್ನಾ ಚೆಯ
ಮೂರು ಖಂಡವ ಗೆಲಬೇಕು
ಆರಿತು ಬೆಂಕಿ ಪ್ರಯಾಣಕುಜ್ಜುಗಿಸೆಲೆ
ಮಾರಾಂಕದಲ್ಲಣಯೆಂದ ॥ ೧೬ ॥

ನೆರೆದರಸುಗಳನೆಲ್ಲರ ಕಳುಹಿದನು ಖೇ
ಚರಮಂತ್ರಿ ವಿನಮಿರಾಜರನು
ಭರತೇಶ ಕಳುಹುವೆನೆಂದು ನೋಳ್ಪೆಡೆಗೆ ಭೂ
ಚರಿಯರ ವೈವಾಹಸಂಧಿ ॥ ೧೭ ॥

ಮೈದುನ ಮಾತಿನ ಸಂಧಿ

ಹಲಬರ ಕಳುಹಿ ಪ್ರಧಾನಿ ಸಹಾಯರು
ಕೆಲದೊಳಗಿರೆ ಚಕ್ರಧರನು
ಕಳುಹಬೇಕಲ್ಲನೆ ವಿನಮಿಯನೆಂದು ಮ
ತ್ತೊಳನುಡಿಯಿಂದಿಂತು ನುಡಿದ ॥ ೧ ॥

ವಿನಮಿ ಕೇಳ್ನಮಿನಾಮಧೇಯನು ತನ್ನೊಂದು
ಘನತರ ಪ್ರೌಢಿಯನೆನಗೆ
ಮೊನೆದೋರುತಿದ್ದನು ನನ್ನ ತಾನಾರೆಂದು
ನೆನೆದನೊ ಜಿನ ಜಿನಯೆಂದ ॥ ೨ ॥

ಏನ ಕಾಣಿಸಿದನು ಜಾಣ್ಮೆಯ ದೇವರಿ
ದೇನ ಚಿತ್ತೈಸುವಿರಕಟ
ಹಾ ನಮ್ಮ ಕರ್ಮದ ಫಲವೈಸೆ ಭಾವಾಜಿ
ನೀನಿಂತು ನೆನೆವರೆಯೆಂದ ॥ ೩ ॥

ಸಾಕೈ ಸಟೆಯ ವಿನಯ ನಿಮ್ಮ ವಚನ ವ್ಯ
ಲೀಕವಲ್ಲದೆ ಸತ್ಯವಹುದೆ
ಏಕೆ ತಾನೆನ್ನ ಬಳಿಗೆ ಬಾರದಾದನು
ಈ ಕೊಂಕು ನಾನರಿಯದುದೆ ॥ ೪ ॥

ಬೇಡವೈ ವಿನಮಿ ನಿಮ್ಮಣ್ಣಗೆ ಹೇಳಿನ್ನ
ಕೂಡಿಷ್ಟು ಹೆಮ್ಮೆ ಮೆರೆವುದೆ
ನೋಡುವವದಕೇನು ತಾ ನಾನು ಸರಸವ
ನಾಡುವವೆಂದನು ಕೂಡೆ ॥ ೫ ॥

ಮತ್ತೇನು ದೇವರ ಸಾಮರ್ಥ್ಯ ನಮ್ಮನೆ
ವೊತ್ತಬೇಕೈಸೆ ಸೋದರದ
ಅತ್ತೆಯ ಮಗನಿಂದ ಹರುಷಿಸಿ ನಗಬಾರ
ದತ್ತೆವೆಂದೆನಿಸಬೇಕೆಂದ ॥ ೬ ॥

ಹೋ ವಾಕ್ಯಪ್ರೌಢಿಯಿಂದಾರ ಚಾಳಿಸಬಂದೆ
ಭಾವಿಸ್ಯೆ ನೀವು ಸೋದರದ
ಮಾವನ ಸುತರಲ್ತೆ ನಂಟುಮಾಡುವರೊಮ್ಮೆ
ಮಾವರೆನಿಸಿದಿರೈಯೆಂದ ॥ ೭ ॥

ನಮಿಯೆಂದು ವಿನಮಿಯೆಂದಂದು ಮಾವಾಜಿಯ
ರಮರಿಸಿ ಪೆಸರಿತ್ತರರಿಯ
ನಮಿಸಬೇಡವೆ ನೀವು ನನಗೆ ನಿಮ್ಮಯ್ಯಂದಿ
ರಮಳವಾಕ್ಯಗಳ ಮೀರುವರೆ ॥ ೮ ॥

ಭರತೇಶನೆಂದೆನಗಪ್ಪಾಜಿ ನಾಮವ
ಕರುಣಿಸಲಾತನೆಂದಂತೆ
ಭರತೋರ್ವಿಯೆಲ್ಲವನಾಳ್ವಿನೈ ನೋಡು ನೀ
ವರರೆ ಬಾಹಿರರಾದಿರೆಂದ ॥ ೯ ॥

ಪರನಲ್ಲ ವಿನಮಿ ನೀನೆನ್ನವನುರೆ ನಿನ್ನ
ಹಿರಿಯನೊಬ್ಬನೆ ಪರನದರ
ಪರಿಯ ಬಲ್ಲೆನು ಹೇಳಬಾರದು ನೀನರಿ
ದಿರು ಮುಂದೆ ಕಾಣಿಪೆನೆಂದ ॥ ೧೦ ॥

ಭಾವಾಜಿ ನಿನ್ನ ಚಿತ್ತವ ನಾವು ನೋಯಿಪು
ದಾವ ಬಲ್ಲವಿಕೆ ಕೇಳ್ನಿನ್ನ
ಭಾವಕೆ ಸಂತೋಷವಪ್ಪಂತೆ ಮಾಳ್ಪೆವೆಂ
ದೋವಿ ವಿನಮಿರಾಜ ನುಡಿದ ॥ ೧೧ ॥

ವಿನಮಿ ಕೇಳದಕಲ್ಲ ನಿಮ್ಮಣ್ಣ ಹೆಮ್ಮೆಯ
ನೆನಗೆ ತೋರುವುದದು ಗುಣವೆ
ನಿನಗಾಗಿ ತಾಳಿದೆನ್ನೆ ನನ್ನ ಮುಂದೊಂದು
ಗೊನೆಹವೆ ಪರರ್ಗೆಂದು ನುಡಿದ ॥ ೧೨ ॥

ಮತ್ತಾರುಮಿಲ್ಲ ಗೂಢವಿದ್ಯೆಸಿ ಕೇಳ್ನಿಮ್ಮ
ಹೆತ್ತ ತಾಯ್ನನ್ನ ಚಿಕ್ಕಂದು
ಎತ್ತಿ ಮುದ್ದಾಡಿರ್ದಳದರಿಂದ ತಾಳ್ದಿನೆಂ
ದತ್ತೆಗೆ ವಿನಯವೇರಿಸಿದ ॥ ೧೩ ॥

ನಮಿರಾಜಗಾನು ಬಿನ್ನವಿಸಿದೆನೆನ್ನಿದು
ಕ್ರಮವಲ್ಲ ತನ್ನ ಭಾವನನು
ಮಮತೆಯೊಳಗೆ ಬಂದು ಕಾಣಹೇಳೆಂದನು
ತ್ತಮ ಬುದ್ಧಿಸಾಗರ ಮಂತ್ರಿ ॥ ೧೪ ॥

ಹಲವು ಮಾತೇನು ಭಾವಾಜಿ ನೀನುತ್ತರ
ಕೊಲವಿಂದ ಗಮಿಸಲಾಕ್ಷಣವೆ
ನಲವಿಂದ ನಮಿರಾಜ ಬಂದು ಕಾಣ್ಬನು ನಿನ್ನ
ತೊಲಗಿ ನಾವಿಹುದೊಂದು ಬದುಕೆ ॥ ೧೫ ॥

ನಿನ್ನಿಂದ ಹೆಚ್ಚಿನ ಬೀಯಗರಾರುಂಟು
ಭಿನ್ನಪ್ರೀತಿಯ ಮಾಡಿವಿನ್ನು
ನಿನ್ನಯ ಮನಕೆ ಸಂತಸವ ಮಾಡುವೆವೆಂದು
ಚೆನ್ನ ಚೆನ್ನನೆ ತೋರಿ ನುಡಿದ ॥ ೧೬ ॥

ಅಗಲ್ಯೆ ಮಾವನ ಮಕ್ಕಳೆಂದುರೆ ಪ್ರೀತಿ
ಯೋಗವ ಬಯಸಿವೆ ನಾನು
ಲೋಗರಂತಿರದಿರಿ ನೀವೆಂದು ಮತ್ತನು
ರಾಗದಿ ನುಡಿದನಾ ಚಕ್ರಿ ॥ ೧೭ ॥

ಇತ್ತ ಬಾರೆಂದು ತನ್ನೊತ್ತಿಗೆ ಕರೆದವ
ಗುತ್ತುಂಗದುಡುಗೊರೆಯಿತ್ತ
ಮತ್ತೆ ಮಂತ್ರಿಗೆ ಕೊಟ್ಟ ನಮಿನಾಮಧೇಯಗೆಂ
ದಿತ್ತನು ದೊಡ್ಡುಡುಗೊರೆಯ ॥ ೧೮ ॥

ಹರಿಸದಿ ವಿನಮಿ ಕೈಮುಗಿದು ಬೀಳ್ಕೊಂಡ ಮೇ
ಚರಮಂತ್ರಿ ಸಾಷ್ಟಾಂಗನೆರಗಿ
ದೊರೆಯ ಬೀಳ್ಕೊಂಡನೆಲ್ಲರು ವಿಮಾನವನೇರಿ
ತೆರಳಿದರಾಕಾಶವಿಡಿದು ॥ ೧೯ ॥

ಕೊಡದಿದ್ದರಹುದೆ ಸುಭದ್ರಾದೇವಿಯನಿನ್ನು
ಬಿಡುವನಲ್ಲೀ ಚಕ್ರಿ ನಾವು
ಬಡಬಡಿಸುವ ನಮಿರಾಜನೆಂದತ್ತ
ನುಡಿವುತ ಸಾಗಿದರವರು ॥ ೨೦ ॥

ಕೃತಮಾಲ ಬಂದನಷ್ಟರೊಳವನನು ದಳ
ಪತಿ ತಂದು ನೃಪನ ಕಾಣಿಸಿದ
ಕ್ಷಿತಿಪನಾಗಳೆ ಭದ್ರಮುಖನ ಕರೆಸಿ ದಳ
ಪತಿಗವನಿಗು ಪೇಳ್ದನಿಂತು ॥ ೨೧ ॥

ಇವನು[1]ತಮಿಸ್ರ[1]ಗುಹೆಯ ಹೊಲಬಿಗನು ನೀ
ವಿವನೊಡನೆಯ್ದಿ ಹಾದಿಯನು
ಸವರಿ ಬಹುದು ಮತ್ತೆ ದಂಡೆತ್ತಿಹೋಹೆವೆಂ
ದವನೀಶ ನೇಮವನಿತ್ತ ॥ ೨೨ ॥

ತೆಗೆದಗಳನು ಹೂಳಿ ಮುಂದೆ ವಜ್ರದ ಪಡಿ
ತೆಗೆದು ಕತ್ತಲೆಯಿಡಿದಿರ್ದ
ವಿಗಡದ ಗುಹೆಯನು ಕಾಕಿಣಿ ಪ್ರಭೆಯಿಂದ
ಹೊಗುವುದೊಯ್ಯಾರದೊಳೆಂದ ॥ ೨೩ ॥

---

1 ತಿಮಿಶ್ರ (ಛ)

ಗುಹೆಯ ನಡುವೆ ಸಿಂಧುನದಿ ತೆಂಕಮುಖವಾಗಿ
ವಿಹರಿಸುತಿರ್ದುದಾ ನದಿಯ
ಲಹರಿಗೆ ಮೂಡಣಿಂ ಪಡುವಣಿಂದೆರಡು ದು
ರ್ವಹನದಿ ಕೂಡಿರ್ದುವೆಂದ ॥ ೨೪ ॥

ಬೆಂಡ ಬಿಟ್ಟರೆ ಗುಂಡಿನಂತೆ ಪಾತಾಳಕೆ
ಕೊಂಡೊಯ್ಯುತಿಹುದು ನಿಮಗ್ಗ
ಗುಂಡ ಬಿಟ್ಟರಿ ಮೇಲಕುನ್ಮಗ್ನ ನದಿ ಹೊಯಿ
ಚೆಂಡಿನಂತಿಡುತಿಹುದೆಂದ ॥ ೨೫ ॥

ಎಲ್ಲ ನದಿಯ ಚರ್ಮದೊಳು ದಾಟಬಹುದವ
ರಲ್ಲಿಗಾಗದು ಚರ್ಮರತ್ನ
ಬಲ್ಲಿತಾಗಿರೆ ಸೇತುಗಟ್ಟಬೇಕೆಂದು ಭೂ
ವಲ್ಲಭ ತಂತ್ರದೋರಿದನು ॥ ೨೬ ॥

ಒಡನೆ ಮುಂದೆಯ್ದಿ ಮತ್ತಾ ಗುಹೆಗಿಕ್ಕಿದ
ಬಡಗಣ ಕದವಿನ ಕೀಲ
ಬಡಿದೊತ್ತಿ ತೆಗೆವುದು ನಾವೆಯ್ದುವಿನೆಗಲ್ಲಿ
ಪಡೆಗೂಡಿ ಕೃತಮಾಲನಿರಲಿ ॥ ೨೭ ॥

ವ್ಯಂತರಾಗ್ರಣಿ ಮೊದಲಾದರ ಖಚರರ
ನಂತರಿಸದೆ ಕೂಡೆ ಕರೆಸಿ
ಮುಂತವರೊಡಗೂಡಿ ಕಳುಹಿದನವರು ಭೂ
ಕಾಂತಗೆರಗಿ ಪೋದರತ್ತ ॥ ೨೮ ॥

ಬಳಿಕ ಮಂತ್ರಿಗೆ ವಿನಯವನಾಡಿ ಮನ್ನಣೆ
ಗಳನಿತ್ತು ಬೀಡಿಗೆ ಕಳುಹಿ
ತಳುವದೆದ್ದನು ಜಿನಶರಣೆನುತರಮನೆ
ಯೊಳಹೊಕ್ಕನಾ ಸಾರ್ವಭೌಮ ॥ ೨೯ ॥

ವೃಷ್ಟಿನಿವಾರಣ ಸಂಧಿ

ತಿಂಗಳಮೇಲೆ ಭೇರಿಯ ನಾದ ಭೂಗಗ
ನಾಂಗಣ ಮುಸುಕಿ ಸೂಳ್ಪೈಸೆ
ಸಂಗರಾಂಗಣಮುಲ್ಲ ದಂಡೆತ್ತಿ ನಡೆದನು
ತ್ತುಂಗಲಗ್ನದೊಳು ಲಗ್ಗೆಯೊಳು ॥ ೧ ॥

ಎಣಿಸಿ ಗಾವುದಕೊಂದು ಚಂದ್ರಾರ್ಕರೂಪ ಕಾ
ಕಿಣಿಯಿಂದ ಗುಹೆಯ ಗರ್ಭದೊಳು
ಅಣೆದೊತ್ತಿ ಬರೆಯಲಾ ಬೆಳಗಿಂದ ಭೂಭುಜಾ
ಗ್ರಣಿಯ ಕಟಕ ಗಮಿಸಿದುದು ॥ ೨ ॥

ಎಂದಿನಂದದಿ ಹಿಂದೆ ಸತಿಯರೆಯ್ತಪ್ಪುದು
ಚಂದವಲ್ಲೆಂದು ರಾಜೇಂದ್ರ
ಅಂದು ತನ್ನೊತ್ತಿನೊಳಿಲ್ಲರ ಕೂಡಿಕೊಂ
ಡೊಂದು ಲೀಲೆಯೊಳಿಯ್ದುತಿರ್ದ ॥ ೩ ॥

ಲಲನೆಯರಂಜುವರಲಸುವರೆಂದಾಗ
ಹಲವು ರೂಪಾಂತೆಲ್ಲರೊಡನೆ
ಒಳುನುಡಿದೋರುತೆಯ್ತಂದನು ಹಿಂದು ಮುಂ
ದೆಳಸಿದ ತೆರೆಯ ಕೋಟೆಯೊಳು ॥ ೪ ॥

ಪಾಲವ ದಾಂಟದನಲ್ಲಿಗಲ್ಲಿಗೆ ಮುಂದೆ
ಪಾಳೆಯ ಬಿಡುತ ಸೇನೆಯನು
ಪಾಲಿಸುತೊಯ್ಯಾರದೊಳು ದಂಡು ತೆರಳೆ ಭೂ
ಪಾಲನಾ ಗುಹೆಯ ದಾಂಟದನು ॥ ೫ ॥

ಲಾಯದೊಳಿದ್ದಶ್ವ ಬಯಲಿಗೆ ಬಂದು ವಿ
ಡಾಯದಿ ಹರಿದಾಡುವಂತೆ
ಸ್ತ್ರೀಯರ ಕಂಗಳು ಗುಹೆಯಿಂದ ದಾಂಟಿ ನಿ
ಟ್ಟಾಯದೆಣ್ದೆಸೆಯ ನೋಡಿದುವು ॥ ೬ ॥

ಮದಗದೊಳಗೆ ನೀರು ಗಳಗಳನಿಳಿವಂತೆ
ಮದಗಜ ಹಯ ರಥ ಸೇನೆ
ಕದುಬಿ ಮೊತ್ತದಿ ವೊರಮಡುತಿದ್ದುದಾ ಗುಹೆ
ಯುದರದಿಂದುತ್ತರ ಧರೆಗೆ ॥ ೭ ॥

ನಡುವಣ ವ್ಲೇಚ್ಛ ಖಂಡವ ವೆಟ್ಟಿ ಪಾಳೆಯ
ಬಿಡಿಸಿದನಾ ಚಕ್ರವರ್ತಿ
ಪಡೆ ಬರುತಿರ್ದುದು ಸಾಲಾಗಿ ದಿನಚರಿ
ವಿಡಿದು ಗುಹಾಮುಖದಿಂದ ॥ ೮ ॥

ಉಳಿಯದೆ ಬಲವೆಲ್ಲ ಬಂದುದ ಕೇಳ್ದಿದೆ
ಯೊಳು ರಾಯ ನಿಶ್ಚಿಂತನಾದ
ತಿಲಮಾತ್ರ ಮರಹುಂಟೆ ಕೃತಮಾಲಗವನ ಪೆ
ರ್ಬಲಕಿತ್ತ ಕರೆದು ಮನ್ನಣೆಯ ॥ ೯ ॥

ಸರ್ವಬಲವ ನೋಡಿ ಸಂತವಿಟ್ಟಾ ಮಧ್ಯ
ದುರ್ವಿಯೊಳರಸನಿಪ್ಪಾಗ
ಪೂರ್ವದೊಳಾರು ಕಂಡರಿಯದುದೊಂದು ವಿ
ಗುರ್ವಣೆಯಾದುದೇನೆಂಬೆ ॥ ೧೦ ॥

ಆ ವಸುಮತಿಗೆ ಚಿಲಾತರಾಜನು ಬಳಿ
ಕಾವರ್ತರಾಜನೆಂದೆಂಬ
ಭೂವರರಿಬ್ಬರಗ್ಗಳರವರೆಸಗಿದ
ರಾವೇಳೆಯೊಳಗೊಂದು ಭಯವ ॥ ೧೧ ॥

ಎಂದುಯಿಲ್ಲದ ಚಕ್ರಿ ಬಂದನಿವನಿಗಾವು
ವಂದಿಸುವೆವೆ ಫಡಾಯೆಂದು
ಮುಂದಿಸಹಿತ ಕಾದಿ ತೆರಳಿಸಲರಿದು ಮ
ತ್ತೊಂದು ತಂತ್ರವ ಕಂಡರವರು ॥ ೧೨ ॥

ಕಾಲಮುಖರು ಮೇಘಮುಖರೆಂಬ ತಮ್ಮ ವಿ
ಶಾಲ ಕುಲಾಧಿದೈವಗಳ
ಆಲಸ್ಯವಿಲ್ಲದರ್ಚಿಸಿ ಭಜಿಸಿದರವು
ಮೇಲೆ ಮೈದೋರಿದುವೊಡನೆ ॥ ೧೩ ॥

ನಮ್ಮ ನೀವೇನು ಕಾರಣ ಜಪಿಸಿದಿರಿಯೆಂ
ದುಮ್ಮಿ ದೈವಗಳು ಕೇಳಿದುವು
ನಿಮ್ಮ ಭಕ್ತರು ನಾವು ಪರರಿಗೆರಗುವುದು
ಸಮ್ಮತಾಂಗವೆಯೆಂದರವರು ॥ ೧೪ ॥

ಕಾದಿ ಜಯಿಸಲೆಮಗರಿದು ಪಾಯ್ದಳ ಬಂದ
ಹಾದಿಯೊಳ್ಕಿರುಗಿ ಹೋಹಂತೆ
ಭೇದವಿಲ್ಲದೆ ಮುಳಿಗರೆದು ಬೀಸರಿಪೆವೆಂ
ದಾ ದೈವ ಕಳುಹಿದುವವರ ॥ ೧೫ ॥

ಒಡ್ಡಿತಾಗಳೆ ಮುಗಿಲಾಕಾಶ ತುಂಬಿ ಘಾ
ರೊಡ್ಡಿದಾನೆಯ ಹಿಂಡಿನಂತೆ
ಅಡ್ಡಪಿಡ್ಡಗೆ ಸುಳಿದುವು ಕಾಲರಾಹುವಿ
ನೊಡ್ಡು ಸಂಚಲಿಸುವಂದದೊಳು ॥ ೧೬ ॥

ಮೊಗಸಿತು ಚಂದ್ರಸೂರ್ಯರಿಗೆ ಮುಸುಕು ಕಾರ
ಮುಗಿಲು ಸುತ್ತಲು ಪಸರಿಸಿತು
ಹಗಲು ಕತ್ತಲೆ ಕವಿದಂತಾಯ್ತು ದುಷ್ಟದೈ
ವಗಳ ವಿಗುರ್ವಣೆಯಿಂದ ॥ ೧೭ ॥

ಮುಂಚಿ ಕಾರ್ಮುಗಿಲೊಡ್ಡು ಬಹುದೆಂದು ದೈವಗ
ಳಂಚಿನೊಳ್ನಿಂದು ಸೂಚನೆಗೆ
ಕುಂಚವ ಬೀಸುತಿದ್ದುವೊಯೆನೆ ಚೆಲುವಾಗಿ
ಮಿಂಚು ಮಿಂಚಿದುವಲ್ಲಿಗಲ್ಲಿ ॥ ೧೮ ॥

ಕೊಡದ ಸಾಲಂದದ ಮುಗಿಲ ಕಾಮನಬಿಲ್ಲ
ಬಡಿಗೆಯಿಂ ಬಡಿಯೆ ದೈವಗಳು
ಒಡೆದಂತೆ ಗುಡುಗಾದುದೊಳಗಿದ್ದ ನೀರು ತೊ
ಟ್ಟಡುವಂತೆ ಕರೆದುದು ವೃಷ್ಟಿ ॥ ೧೯ ॥

ಮುಗಿಲೆಂಬ ಮದಗಜಗಳ ಮದಧಾರೆಯೊ
ಮಿಗೆ ಮೇಘವೆಂಬ ರಾಹುಗಳು
ಉಗುಳುವ ವಿಷವೊಯೆಂಬಂತಾಗ ಕಷ್ಟ ವೃ
ಷ್ಟಿಗಳ ಸೂಸಿದುವು ದೈವಗಳು ॥ ೨೦ ॥

ಏನೆಂಬೆ ಪಡೆ ಬೆಚ್ಚುವಂತಾಲಿವರಲ ಮ
ತ್ತಾನೆಯ ತೋರದೊಳ್ಕರೆಯೆ
ಅನೆಕಲ್ಲೆಂದಿಂದು ಮುಟ್ಟಲು ನುಡಿವರು
ಮಾನವರಾಲಿಕಲ್ಲುಗಳ ॥ ೨೧ ॥

ಅಗಣಿತ ದೈವಗಳೊಂದು ಹಬ್ಬವ ಮಾಡ
ಲಗಲದೊಳ್ನೆರೆದೊತ್ತಲಾಗಿ
ಗಗನವೆಂದೆಂಬ ಸೇವಗೆಯೊರಳಿಂದ ಸೇ
ವಗೆಯಿಳಿವೊಲು ಮಳೆಯಾಯ್ತು ॥ ೨೨ ॥

ಕರೆದುದು ವೃಷ್ಟಿಯೇನೆಂಬೆನಂಬರವೆ ಬಾ
ಯ್ದೆರೆದುಗುಳಿದುದೊಯೆಂಬಂತೆ
ಕಿರುಧಾರೆಯಲ್ಲ ತೆಂಗಿನ ಮರಗಳ ತೋರ
ದುರುವ ಧಾರೆಯೊಳೆಡೆವಿಡದೆ ॥ ೨೩ ॥

ಕೆರೆ ಬಾವಿ ಹಳ್ಳ ಕೊಳ್ಳಗಳು ಬೆಂಚೆಗಳು ಹೆ
ದ್ದೊರೆ ಹೊಳೆ ತಗ್ಗು ತಿಟ್ಟಿಲ್ಲ
ಮರೆಸಿಯೇಕಾರ್ಣವವಾಯ್ತು ದೈವಗಳುಬ್ಬಿ
ಕರೆವುತಿದ್ದುವು ಮತ್ತು ಮಳೆಯ ॥ ೨೪ ॥

ಬಳಸಿದ್ದ ಕೋಂಟೆಯ ಮಿಾರಿ ಪಾಳೆಯಕೆ ನೀ
ರಿಳಿವುದ ಕಂಡು ಪಾಯ್ದಳವು
ಗಳಬಳಿಸಲು ಛತ್ರ ಚರ್ಮರತ್ನಗಳನಾ
ಗಳೆ ಚಕ್ರಿ ಹರಹಹೇಳೆಂದ ॥ ೨೫ ॥

ಛತ್ರ ರತ್ನವ ಮೇಲೆ ಪಸರಿಸಿ ಚರ್ಮವ
ಧಾತ್ರಿಯೊಳಗೆ ಹರಹಿದರು
ಶತ್ರುವಿಜಯನ ಪಾಯ್ದಳವಿದ್ದುದಲ್ಲಿ ಬ
ಹಿತ್ರದೊಳ್ಪರದರಿಪ್ಪಂತೆ ॥ ೨೬ ॥

ಹೂಳಿತು ಚಂದ್ರಸೂರ್ಯರ ಪ್ರಭೆ ಮಳೆಯಿಂದ
ಕಾಳಗತ್ತಲೆ ಹೆಚ್ಚಿತಾಗ
ಢಾಳದ ಚಕ್ರ ಕಾಕಿಣಿಗಳ ಬೆಳಗಿಂದ
ಪಾಳೆಯವಿರ್ದುದಾ ನೃಪನ ॥ ೨೭ ॥

ಹಗಲಿರುಳಿಡವಿಡದೀ ಮಳೆ ಕರೆದುದು
ತೆಗಹಿಲ್ಲ ಮುಂದೆ ಹೆಚ್ಚುತಿದೆ
ತಗಹಿಕ್ಕಿದಂತಾಯ್ತು ಪಾಯ್ದಳಕೆಂದು ಚ
ಕ್ರಿಗೆ ಮತ್ತೆ ಯೋಚನೆಯಾಯ್ತು ॥ ೨೮ ॥

ಹೋಗದೆ ಸುರಿವುತಿದ್ದುದು ಮಳೆಯಿದು ನೋಡು
ವಾಗ ದೈವಗಳ ಪ್ರೇರಣೆಯೊ
ಮಾಗಧಾಂಕಿತ ಜಯನಾಮ ಹೊರಗೆ ಮೇಲು
ಭಾಗೆಯ ನೋಡಿರೈಯೆಂದ ॥ ೨೯ ॥

ಕಂಡರವರು ಮೇಲುಭಾಗೆಯೊಳಗೆ ಸಾಲು
ಗೊಂಡಿದ್ದ ದೈವಗಳೊಡ್ಡ
ಮುಂಡೆ ಮಣಿದು ಚಕ್ರಿಗೊರೆದು ಬೆಸನವ ಕೈ
ಕೊಂಡು ಲುಂಪಿಸಿದರಂಬರಕೆ ॥ ೩೦ ॥

ತಂಬಟ ಭೇರಿ ತಿತ್ತಿರಿ ಕಾಳೆ ನಿಸ್ಸಾಳ
ಜೆಂಬಕವರೆ ಪಟಹಗಳ
ಬೆಂಬಳಿಯೊಳು ಬಡಿವುತ ಹೋಗಿ ತಾಗಿದ
ರಂಬರದೊಳಗೆ ದೈವಗಳ ॥ ೩೧ ॥

ದೂರದೊಳಗೆ ನಿಂದು ದೈವಗಳುಬ್ಬಿ ಕ
ಠೋರಯುದ್ಧಕೆ ಮನವಿಕ್ಕಿ
ನೀರ ಸೂಸುವುದ ಮಾಣ್ದೊಡನೆ ಗುಂಡಿನ ಬಿರು
ಧಾರೆಯ ಸೂಸಿದುವಾಲ್ಬ ॥ ೩೨ ॥

ಅವರಿಟ್ಟ ಗುಂಡ ತಪ್ಪಿಸುತಾಂತು ವ್ಯಂತರ
ರವರನಿಟ್ಟರು ಗುಂಡಿನಿಂದ
ಪವಿಯ ಹರಿಗೆ ಜೋಡುಟಾಳಿಯ ಬಲದಿಂದ
ವಿವಿಧ ಖೇಚರರು ನೂಂಕಿದರು ॥ ೩೩ ॥

ಇನ್ನೊಂದನೇನೆಂಬೆನೀ ಕಡೆಯೊಳಗಿನ
ರುನ್ನತದಿಂದೊತ್ತುವಾಗ
ಬೆನ್ನ ಕಡೆಯೊಳು ದೈವಗಳನೊತ್ತುತ ಬಂದ
ರಿನ್ನಾರೊ ಅವರೂ ವ್ಯಂತರರು ॥ ೩೪ ॥

ಜೋಡಿಸಿ ಪೆಟ್ಟಲು ತುಪಾಕಿ ಮುಸುಂಡಿ ಸಿಂ
ಗಾಡಿಯೊಳಿಚ್ಚೊತ್ತುವಾಗ
ಮಾಡದ ಮೇಲಣ ಕಾಗೆಗಳಂತೆ ಕೆ
ಟ್ಟೋಡಿದುವಖಿಲ ದೈವಗಳು ॥ ೩೫ ॥

ಹಿಡಿ ಹಿಡಿ ಕಾಲಮುಖನ ಮೇಘಮುಖನನೆಂ
ದೊಡನೆ ಬೆನ್ನಟ್ಟಿ ವ್ಯಂತರರು
ಕುಡಿಮಿಂಚಿನಂತೆ ಹೇಮಾದ್ರಿಯ ನೆಗೆದು ಕಂ
ಗೆಡುತೋಡಿ ಹೋದರಾ ಖಳರು ॥ ೩೬ ॥

ಕುಲದೈವ ಸೂಸುವ ಮಳೆಯ ನೋಡುತ ಹೆಮ್ಮೆ
ಯೊಳಗಿದ್ದು ಮಳೆ ನಿಲ್ಲಲೊಡನೆ
ತೊಲಗಿ ಚಿಲಾತಭೂವರನೊಂದು ದೆಸೆಯೊಳು
ತಲೆಮರೆಸಿದನು ಮುಂದರಿದು ॥ ೩೭ ॥

ಮಳೆ ನಿಂದರೇನೆಮ್ಮ ಕುಲದೈವಗಳು ಕಾದಿ
ಗೆಲವೆಯೆಂದಾವರ್ತರಾಜ
ಕುಲಲಿಯೆನುತ ನೋಡುತಿದ್ದನಾತನ ಭೂಚ
ಗಳು ತೋರೆ ಜಯರಾಜ ಪಿಡಿದ ॥ ೩೮ ॥

ಕಾಳಗದೊಳು ಕಾದಿದವರು ಹಲಬರಲ್ಲಿ
ಕೋಳುಸಿಕ್ಕಿದುದೊಬ್ಬ ಕಲಿಗೆ
ತೋಳೆರಡನು ಕಟ್ಟಿ ಜಯರಾಜನಿತ್ತ ಚ
ಡಾಳಿಸಿ ತರುತಿದ್ದನತ್ತ ॥ ೩೯ ॥

ಆವರ್ತನೃಪನ ತಂದಿದಿರಲ್ಲಿ ಕೆಡಹಿ ಸೇ
ನಾವರನುಬ್ಬಿ ಕೈಮುಗಿದು
ದೇವ ಚಿತ್ತೈಸಿವನೀಗ ದೈವಗಳಿಂದ
ನೋವುಗಾಣಿಸಿದವನೆಂದ ॥ ೪೦ ॥

ಪದುಳದಿ ಬಂದೆರಗದೆ ನನಗಿದಿರಾಗಿ
ಕದನವನೆಸಗಿದನಿವನೆ
ಒದೆ ಒದೆ ತೊಂಡನ ಮಕುಟವನೆಂದು ಕೋ
ಪದಿ ನುಡಿದನು ಚಕ್ರಧರನು ॥ ೪೧ ॥

ಮಟ್ಟಗೆ ಕಾವಲೊಳರಲಿವನೆಂದಾಗ
ಕೊಟ್ಟನು ದಳಪತಿಗವನ
ಕಟ್ಟಬಿಡಿಸಿ ಭೃತ್ಯನೊಡನೊಂದು ಮನೆಗವ
ಕೊಟ್ಟು ಕಳುಹಿದನಾಕ್ಷಣವೆ ॥ ೪೨ ॥

ಸಿಂಧುದೇವಿಯೊತೀರ್ವಾದ ಸಂಧಿ

ಏಳು ದಿವಸ ಮಳೆಯೊಳಗಲಸಿದ ತನ್ನ
ಲೋಲನೇತ್ರೆಯರನಾ ನೃಪತಿ
ಲಾಲನೆಗೈದನೆರಡು ದಿನ ಸರಸ ಸ
ಲ್ಲೀಲೆಯೊಳೀನು ಕೋವಿದನೊ ॥ ೧ ॥

ಒಳಗೆ ತನ್ನ ಬಲೆಯರೆಲ್ಲರ ಮನ್ನಿಸಿ
ಬಳಿಕ ಮೂರನೆಂಯ ದಿನದೊಳು
ಹೊಳೆವ ಚಾವಡಿಯೊಳೋಲಗವಾಗಿ ಕದನದ
ಕಲಿಗಳೆಲ್ಲರ ಕರೆಯೆಂದ ॥ ೨ ॥

ಬಂದು ಕೈಮುಗಿದು ಸರ್ವರು ಕಂಡರಾನಂದ
ದಿಂದಾತನೆಲ್ಲರ ನೋಡಿ
ದಂದುಗಬಟ್ಟರೈ ಮೊನ್ನೆ ನೀವೆಲ್ಲರು
ಸಂದ ಸಂಗ್ರಾಮದೊಳೆಂದ ॥ ೩ ॥

ನವಗಾವ ದಂದುಗ ಸಿನ್ನೊಂದು ದಿವ್ಯನಾ
ಮವ ನೆನೆವುತ ನಡೆವಾಗ
ಸುವಿಲಾಸವಾಗಿಹುದೆಂದೊಡೆಯಸಿಗೆ ಬಿ
ನ್ನವಿಸಿದರೆಲ್ಲರರ್ತಿಯೊಳು ॥ ೪ ॥

ಹುಸಿಯಲ್ಲ ನಾವೀಚೆ ನಡೆವಾಗ ಮೊನ್ನೆತಾ
ಮಸದೈವಗಳನಿಬ್ಬರಾಚೆ
ಅಸಮಸೇನೆಯೊಳೊತ್ತಿ ಬಂದರು ನಿನ್ನಯ
ಹೆಸರ ಹೇಳುತ ಹಿತವಾಗಿ ॥ ೫ ॥

ಎನೆ ಚಕ್ರಿ ನಲಿದವರಾರೆಂದು ಮಾಗಧಾಂ
ಕನ ಕೇಳಿದನು ಕೇಳಲೊಡನೆ
ಮನುಜೇಂದ್ರ ಚಿತ್ತವಿಸವರೆಮ್ಮ ವ್ಯಂತರ
ಜನತತಿಗಾರಾಧ್ಯರೆಂದ ॥ ೬ ॥

ಒಬ್ಬನು ಸಿಂಧುದೇವನು ಸ್ವಾಮಿ ಲಾಲಿಸಿ
ನ್ನೊಬ್ಬ ಗಂಗಾದೇವನವರು
ಇಬ್ಬರು ಬಂದು ದೈವಗಳೊಡ್ಡನೊತ್ತಿದ
ರೊಬ್ಬುಳಿಯಾಗಿ ಜಾರಿದರು ॥ ೭ ॥

ಆವರ್ತನನುಜ ಮಾಧವನು ಚಿಲಾತನು
ದೇವರ ಕಾಣಲಿಯ್ತೆಂದು
ತಾವಂಜುತಿದ್ದರು ಕರುಣಿಸೆಂದೊಡೆಯನಿ
ಗಾ ವೇಳೆಯೊಳು ಪೇಳ್ದನವನು ॥ ೮ ॥

ಕೊರಳಿಗೆ ಚಿಂದಿಯ ಹಾಕಿ ಬಂದವರಿಬ್ಬ
ರರಸನ ಮುಂದಡ್ಡಗೆಡೆದು
ಶರಣಾಗತವಜ್ರಪಂಜರ ಪಾಲಿಸು
ಮರುಳರನೆಂದೊರಲಿದರು ॥ ೯ ॥

ವೇಳೆಯರಿದು ಮುಂದೆ ಬಹುದೆಂದು ನುಡಿದು ನೃ
ಪಾಲ ಚಿಲಾತಗವನಿಗೂ
ಮೇಲೆ ಮನ್ನಣೆಯಿತ್ತನಾವರ್ತಸಹಿತ ನಿ
ರಾಲಸ್ಯದೊಳು ಕಳುಹಿದನು ॥ ೧೦ ॥

ವ್ಯಂತರಪತಿಗಳಿಲ್ಲರ ಮಾಗಧೇಂದ್ರನು
ಪಿಂತಿಕ್ಕಿಕೊಂಡೆಯ್ದಿ ನಮ್ಮ
ಅಂತಸ್ಥವೊಂದ ಪಾಲಿಪುದೆಂದು ರಾಯನ
ಮುಂತೆ ಸಾಷ್ಟಾಂಗವೆರಗಿದ ॥ ೧೧ ॥

ದೇವ ಬಿನ್ನಹ ಸಿಂಧುದೇವನು ಗಂಗಾ
ದೇವನೆಂಬಿಬ್ಬರು ಜಿನನ
ಭಾವನೆವಿಡಿದಿಹರೆಮ್ಮೆಲ್ಲರಿಗೆ ಪೂಜ್ಯ
ಭಾವರಾಗಿಹರನವರತ ॥ ೧೨ ॥

ನಿನ್ನೊಳು ಭಕ್ತಿಯುಳ್ಳವರಹುದದ ಪೇಳ
ಲಿನ್ನೇಕೆ ನೀನರಿಯದುದೆ
ಮನ್ನಣೆಯೊಳಗೆ ಕಾಣಿಸಿಕೊಳ್ಳಬೇಕೆಂದು
ಬಿನ್ನವಿಸಿದನೊಡೆಯನಿಗೆ ॥ ೧೩ ॥

ಆಗಲ್ಕೈ ನೀವಿದಕಡ್ಡಬೀಳಲದೇಕೆ
ಮಾಗಧ ನೀನೆಂದ ನುಡಿಯ
ಹೋಗಲಾಡುವೆನೆ ಕಾಣಲಿ ಕರೆಸೆಂದನು
ರಾಗಿಸಲಿಲ್ಲ ವ್ಯಂತರರು ॥ ೧೪ ॥

ಬಂದು ಕಾಕ್ಕೈಯನಿಕ್ಕಿ ಜಂಬುಕಾನದೊಳೋಜೆ
ಯಿಂದ ಭದ್ರಾಸನಾದಿಗಳ
ಮುಂದೆ ಪಾಗುಡವಿತ್ತು ಕೈಮುಗಿದರು ಸನ್ನೆ
ಯಿಂದ ಚಕ್ಕಳದಿ ಕುಳಿತರು ॥ ೧೫ ॥

ನಿನಗೆ ವಿರೋಧಿಯಾದವನೀಗ ತನ್ನ ತಾ
ತನಗೆ ವಿರೋಧಿಯಾದವನು
ನಿನಗೆ ಹಿತವ ನೆನೆದವನೀಗ ಚೆನ್ನಾಗಿ
ತನಗೆ ಹಿತವ ನೆನೆದವನು ॥ ೧೬ ॥

ಒಡೆಯನ ಸಹಜಗುಣವನೆ ಬಣ್ಣಿಸಿದಿರೆಂ
ದೊಡನೆ ವ್ಯಂತರಿಗರಾಡಿದರು
ಪೊಡವಿಗೊಡೆಯನದನಾಲಿಸುತೊಲವಿಂದ
ನುಡಿದನಿಂತೆಂದವರೊಡನೆ ॥ ೧೭ ॥

ಕೊಡುವ ಕೊಂಬೊಂದು ಬೀಯಗತನ ಕೂಡದು
ನುಡಿಯೊಳೆ ಮಾಳ್ಪಿವಿನ್ನೆಮ್ಮ
ಮಡದಿಯರ್ನಿಮ್ಮಕ್ಕಂದಿರು ನಿಮ್ಮ ಸತಿಯರೆ
ಮ್ಮೊಡ ಹುಟ್ಟಿದನುಜೆಯರೆಂದ ॥ ೧೮ ॥

ನಿನ್ಮೂರೊಳದ್ದ ಜಿನೇಂದ್ರಬಿಂಬವ ನೋಡ
ಲೆಮ್ಮ ಚಿತ್ತದೊಳರ್ತಿಯುಂಟು
ಘಮ್ಮನೆ ನಾಳೆ ಬಪ್ಪೆವು ಮುಂದೆ ತೆರಳಿಯೆಂ
ದೊಮ್ಮೊದಲೊಳೆ ಬೀಳುಕೊಟ್ಟ ॥ ೧೯ ॥

ನಲಿದುಬ್ಬಿ ಕೈಮುಗಿದವರು ಹೋದರು ರಾಯ
ತಳುವದೆದ್ದನು ಮರುದಿವಸ
ಹಲವು ಪಯಣದಲ್ಲಿ ಸಿಂಧುಕೂಟವ ಸಾರಿ
ಕೆಲದಲ್ಲಿ ಪಾಳೆಯ ಬಿಟ್ಟ ॥ ೨೦ ॥

ದೇವವಾಹಿನಿಗೂಡಿ ಬಂದು ಸುವಸ್ತುಚ
ಯಾವಳಿಯುಲುಪೆಯ ತಂದು
ಆ ವೀರಕಟಕವೆಲ್ಲವು ತಣಿವೊಲು ಸಿಂಧು
ದೇವ ಮನ್ನಿಸಿದ ಭಾವನನು ॥ ೨೧ ॥

ಗಗನವ ತುಡುಕುವ ಹಿಮಶೈಲನೊಳು ಪುಟ್ಟ
ನೆಗೆದು ದಕ್ಷಿಣ ಮುಖವಾಗಿ
ಧಿಗಿಧಿಗಿನಿಳೆಗೆ ಬೀಳುವ ಸಿಂಧುನದಿಯನಾ
ಸುಗುಣ ಚಕ್ರೇಶ ನೋಡಿದನು ॥ ೨೨ ॥

ಮೇಲೆ ಕಿರಿದು ಬರಬರ ತೆರಪಾಗಿರೆ
ನೀಳವಾದೊಂದು ಮುತ್ತಿಡಿದ
ಕಾಳೆಯ ತಲೆಕೆಳಗಾಗೆ ಪಿಡಿದವೊಲು
ಬೀಳುತಿದ್ದುದು ಸಿಂಧುತಟನಿ ॥ ೨೩ ॥

ನೆಲದ ಮೇಲೊಂದು ವಜ್ರದ ಕಿರುಪರ್ವತ
ನೆಲಸಿಹುದದರ ತುದಿಯೊಳು
ಪಳುಕಿನ ಜಿನಬಿಂಬವೆಸೆವುದಾ ಬಿಂಬದ
ತಲೆಯೊಳಾ ನದಿ ಬೀಳುತಿಹುದು ॥ ೨೪ ॥

ಮಾನಿನಿಯರಿಗೆ ತೀರ್ಥದ ಚೆಲ್ವ ಕಾಣಿಸಿ
ಜೈನಬಿಂಬವ ಸ್ತುತಿಗೈದು
ಸ್ನಾನವ ಮಾಡಿ ಭೂಸುರರಿಗಿತ್ತನು ಭೂರಿ
ದಾನವ ಮನದಣಿವಂತೆ ॥ ೨೫ ॥

ಶ್ರೀ ವಿಪ್ರಜನದ ಪರಕೆ ಕೇಳುತಿರೆ ಸಿಂಧು
ದೇವನೆಯ್ತಂದೊತ್ತ ಸಾರ್ದು
ದೇವರ ತಂಗಿ ದೇವರ ಕಾಣ್ಬೆನೆಂಬಳೆಂ
ದೋವಿ ಕರ್ಣದೊಳು ಸೂಚಿಸಿದ ॥ ೨೬ ॥

ಲೇಸೆನುತೊಡಬಟ್ಟು ಬಳಿಕ ವಿನಯದಿಂದ
ಭೂಸುರರೆಲ್ಲರ ನಿಲಿಸಿ
ಆ ಸುಖಿಯೊಳವೊಕ್ಕು ಸತಿಯರುವೆರಸಿ ವಿ
ಲಾಸದೊಳೋಲಗವಾದ ॥ ೨೭ ॥

ಗರುವಿಗೆ ಗಾಡಿ ಶೃಂಗಾರ ಲಾವಣ್ಯ ಮೈ
ಸಿರಿಗೂಡಿ ನಡೆದು ಬಹಾಗ
ಭರತರಾಜೇಂದ್ರನ ತಂಗಿಯೆ ತಪ್ಪದೆಂ
ಬಿರವಿನೊಳ್ಬಂದಳಾ ದೇವಿ ॥ ೨೮ ॥

ಹತ್ತಿರ ಸಾರ್ದು ಹಸ್ತಗಳಲ್ಲಿ ಹೊಳೆವೆಳೆ
ಮುತ್ತಿನಕ್ಷತೆಗಳ ತುಂಬಿ
ಎತ್ತಿ ನಿಂದಣ್ಣಾಜಿ ಸುಖಬಾಳು ಬಾಳೆಂದು
ಮುತ್ತೈದೆ ಹರಸಿ ಸೂಸಿದಳು ॥ ೨೯ ॥

ಅಣ್ಣನ ಹರಸಿ ಮುತ್ತಾತನೊತ್ತಿನೊಳಿದ್ದ
ಹೆಣ್ಣುಗಳೆಲ್ಲರ ನಾಕೆ
ಕಣ್ಣರ್ತಿ ಮಿಗೆ ನೋಡಿ ನಗುತ ಹರಸಿದಳು
ಬಣ್ಣವಣ್ಣಿಗೆಯೊಳೇನೆಂಬೆ ॥ ೩೦ ॥

ಹರೆಯ ಜಾರದೆ ಮುಪ್ಪುದೋರದೆ ಸವತಿ ಮ
ತ್ಸರವಾಗದೆನ್ನಣ್ಣನೊಡನೆ
ಸ್ಥಿರ ಬಾಳಿರೆಂದು ದೇವಾಂಗದ ಸೀರೆಯ
ಹರಸಿ ಸರ್ವರಿಗಿತ್ತಳಾಕೆ ॥ ೩೧ ॥

ಎರಡು ಪೊತ್ತ ಬಲೆಯರ್ವೆರಸಿ ರಾಜೇಂದ್ರನಾ
ದರದೊಳಾರೋಗಣೆಗೈದು
ಇರುಳ ಕಳೆದು ಮರುದಿನದಲ್ಲಿ ತಂಗಿಯ
ಕರೆದು ಮನ್ನಿಸಿದನೇನೆಂಬೆ ॥ ೩೨ ॥

ಬಾ ಸಿಂಧುದೇವಿ ಮುನ್ನೆನ್ನೊಬ್ಬ ತಂಗಿಕೈ
ಲಾಸದೊಳ್ತಪಸುದಾಳಿದಳು
ವ್ಯಾಸಂಗದಾ ನೋವು ನಿನ್ನ ಕಂಡಗಲಿತೆಂ
ದಾ ಸುಮುಖರ ದೇವ ನುಡಿದ ॥ ೩೩ ॥

ಅವಳ ಪೆಸರು ಬ್ರಾಹ್ಮಿಲಾದೇವಿಯೆಂದುನಿ
ನ್ನ ವಯವದಂತವಳಿರವು
ನವಗಿನ್ನು ಬ್ರಾಹ್ಮಿಲಾದೇವಿ ನೀನೆಂದು ಮಾ
ನವಪತಿ ನುಡಿದನಾಕೆಯೊಳು ॥ ೩೪ ॥

ಅಮ್ಮಿ ನೀನೊಸಗೆ ಮಾಡಿದೆ ನವಗೆಲ್ಲರ್ಗೆ
ಸುಮ್ಮಾನಗೆಯ್ದೆ ಮುಂದಿನ್ನು
ನಮ್ಮೊಳೊಂದೊಸಗೆಯಹಾಗ ಸ್ತ್ರೀಪುರುಷರ
ನಿಮ್ಮ ಕರೆಸಿಕೊಂಬೆನೆಂದ ॥ ೩೫ ॥

ತಂಗಿ ನೀ ನಿಲ್ಲೆಂದು ನಿಲಿಸಿಯಾ ರಾಜಲೀ
ಲಾಂಗನಾಕ್ಷಣದೊಳಲ್ಲಿಂದ
ಮುಂಗಡೆಗೆದ್ದನು ಪರನಾರಿಸೋದರ
ಚಾಂಗು ಭಲಾಯೆಂದು ಹೊಗಳೆ ॥ ೩೬ ॥

ನಾರಿಯರೆಲ್ಲರು ಸಿಂಧುದೇವಿಗೆ ಸರ
ಸಾರೂಢಿದೋರಿ ಮೌಕ್ತಿಕದ
ಹಾರ ಮಾಣಿಕ್ಯದುಂಗುರ ಮೊದಲಾದುಪ
ಚಾರ ವಸ್ತುವ ಕೊಟ್ಟರೊಸೆದು ॥ ೩೭ ॥

ಅನ್ಯೋನ್ಯ ವಿನಯವ ಬಿಡದಿರಿಯೆಂದು ತಾ
ವನ್ಯೋನ್ಯ ನೋಡಿ ಮಾತಾಡಿ
ಮಾನ್ಯಕಾಂತೆಯರು ಮಾನ್ಯಾಂಗನೆಯಿಂದ ಸೌ
ಜನ್ಯದಿ ಬೀಳ್ಕೊಂಡರೊಡನೆ ॥ ೩೮ ॥

ಅಂಕಮೂಲಾ ಸಂಧಿ

ಸಿಂಧುದೇವನ ವಿನಯದಿ ನಿಲಿಸುತ ಗುಣ
ಸಿಂಧು ಜಿನೇಂದ್ರನ ನೆನೆದು
ದಾಂ ಧಣಂ ಧಾಣೆಂಬ ನಿಸ್ಸಾಳಧ್ವನಿಯ ಪ್ರ
ಬಂಧದೊಳೆದ್ದನಾ ರಾಯ ॥ ೧ ॥

ಗಂಗಾನದಿಯಿನ್ನು ಗಾವುದವೆಂಬಾಗ
ಗಂಗಾದೇವನು ತನ್ನ
ಸಂಗಸಂಪದಗೂಡಿ ಬಂದಿದಿರ್ಗೊಂಡನು
ಸಿಂಗಾರಕಾರ ಭಾವನನು ॥ ೨ ॥

ನಡೆದು ಗಂಗಾನದಿಯೊತ್ತಿನೊಳ್ಪಾಳಿಯ
ಬಿಡಿಸಿದನಾ ಚಕ್ರವರ್ತಿ
ಹಿಡಿದುದುಲುಪೆ ಸೇತುಗಟ್ಟಾಗಿ ಭಾವನ
ಪಡೆಯನಾ ಸುಖಿ ತಣಿಸಿದನು ॥ ೩ ॥

ಮೈದುನ ಮಾಡಿದ ವಿನಯದಿಂದಾ ದಿನ
ಹೋದುದು ಮರುದಿನ ತನ್ನ
ಸೋದರಿಗನ ಕಾಣ್ಬೆನೆಂದರ್ತಿಯಿಂದ ಗಂ
ಗಾದೇವಿ ಬಂದಳು ತಾನೆ ॥ ೪ ॥

ರಾಜೀವವನಕೆ ಪೆಣ್ಣಂಚೆಗಳೊಡಗೂಡಿ
ರಾಜಹಂಸವನೆಯ್ದಿ ಪಂತೆ
ರಾಜಗೃಹವ ಹೊಗಿಸಿದಳಾಕೆ ಚೆಲ್ವ ಕಾಂ
ತಾಜನ ಕೂಡಿ ಚಕ್ರಿಯನು ॥ ೫ ॥

ಮಜ್ಜನ ಭೋಜನಗೈದು ಮತ್ತಾ ದಿನ
ಸೆಜ್ಜೆವನೆಯೊಳು ವಿಶ್ರಮಿಸಿ
ಸಜ್ಜನಾನಂದನು ಮರುದಿನದೊಳು ತೀರ್ಥ
ದುಜ್ಜಗಕಿಚ್ಛೆ ಮಾಡಿದನು ॥ ೬ ॥

ಅರುಹನ ಪ್ರತಿಮೆಯೆಂಬಮಳಚಂದ್ರನ ಕಂಡು
.ಕರಗಿ ಹಿಮಾದ್ರಿಯೆಂದೆಂಬ
ಸುರುಚಿರ ಶಶಿಕಾಂತ ಸೋರುತಿರ್ಪುದೊಯೆನೆ
ಬರುತಿರ್ದುದಾ ಪುಣ್ಯಗಂಗೆ ॥ ೭ ॥

ಆರ್ಭಕ್ಕಿಯೊಳು ಮಿಂದರವರ ಪಾಪಗಳ ತಾ
ನಾರ್ಭಟದೋರುತಟ್ಟುವೊಲು
ಭೋಭೋರೀರು ಘುಮುಘುಮು ಝಲ್ಲುಝಲ್ಲೆಂಬ ಸಂ
ದರ್ಭದೊಳಿಳಿದುದಾ ತೀರ್ಥ ॥ ೮ ॥

ಅರಮನೆಯೊಳಗೆ ಮತ್ತಾ ದಿನ ತಡೆದು ಶ್ರೀ
ಗುರುಹಂಸನಾಥನ ಭಜಿಸಿ
ಹಿರಿದು ಕರ್ಮಗಳ ನಿರ್ಜರೆಮಾಡಿ ಮರುದಿನ
ತೆರಳಲೆಳಸಿದನೇನೆಂಬೆ ॥ ೯ ॥

ತಂಗಿ ಬಾ ನಾನಿಂತು ದಂಡುಮಾಡಿದ ನೋವು
ಹಿಂಗಿದುದಕ್ಕ ನಿನ್ನಾಣೆ
ಗಂಗಮ್ಮಿ ಲೇಸುಮಾಡಿದೆಯೆಂದು ಮೃದುವಚ
ನಂಗಳಿಂದಣ್ಣ ಮನ್ನಿಸಿದ ॥ ೧೦ ॥

ಗಂಗಾದೇವನ ವಿನಯದಿ ನಿಲಿಸಿ ಜಿ
ನಂಗೆ ಕೈಮುಗಿದಾನೆಯೇರಿ
ತ್ರಾಂಗು ತ್ರಾಂಗೆಂದು ನಿಸ್ಸಾಳ ಸೂಳ್ಯೈಸಲು
ಮುಂಗಡೆಗೆದ್ದನಾ ಚಕ್ರಿ ॥ ೧೧ ॥

ಆ ಸಮಯದಿ ಮೂಡ ಪಡುವಣ ಖಂಡದ
ದೂಸರಿಂದಿಬ್ಬರೆಯ್ತಂದು
ಆ ಸೀಮೆ ವಶವಾದುವೆಂದು ತಂದೋಲೆಯ
ಭೂಸುದತೀಶಗಿಕ್ಕಿದರು ॥ ೧೨ ॥

ಉತ್ತರ ಪೂರ್ವ ಪಶ್ಚಿಮ ಮುಖವಾಗಿ ದಂ
ಡೆತ್ತಿ ನಡೆವ ಕಾರ್ಯ ಮುಗಿದು
ಮತ್ತಗಜವನೇರಿ ಮಧ್ಯಮಖಂಡದೊ
ಳ್ಕತ್ತೆ ದಕ್ಷಿಣಕೆ ತಿರುಗಿದ ॥ ೧೩ ॥

ನಡುವಣಖಂಡದ ನಟ್ಟನಡುವೆ ಕಳ
ದೆಡೆಯಲ್ಲಿ ಮೇಟಿಯಿಪ್ಪಂತೆ
ನಿಡಿದಾದ ವೃಷಭಾದ್ರಿಯಿಹುದಲ್ಲಿಗಾ ಚಕ್ರಿ
ನಡೆತರುತಿರ್ದನುಬ್ಬಿನೊಳು ॥ ೧೪॥

ಉರ್ವಿಯೆಲ್ಲವು ತನ್ನ ವಶವಾಗಲುರುಗರ್ವ
ಪರ್ವತವೇರಿ ಬಪ್ಪಂತೆ
ಕೊರ್ವಿದ ವಿಜಯಪರ್ವತವೇರಿ ಬಂದನು
ಗರ್ವಿತಾರಾತಿದಲ್ಲಣನು ॥ ೧೫ ॥

ಕರ್ಣದ ಮದಧಾರೆಗೆರಗಿ ಕವ್ವರೆಗೊಂಡು
ಘೂರ್ಣಿಸಿ ತುಂಬಿಗಳೆಸೆವ
ಪೂರ್ಣೇಭವೇರಿ ಬಂದನು ನೀಲಗಿರಿಯ ಸು
ವರ್ಣಾದ್ರಿಯೇರಿ ಬಪ್ಪಂತೆ ॥ ೧೬ ॥

ದಾಂಟುವುದಿಡುಗುಡ್ಡೆಗಳ ಗಿರಿಗಳನಿಕ್ಕಿ
ದಾಂಟುವ ಡಾಳೆಯಂದದೊಳು
ಉಂಟಾದ ಸೇನೆಯ ನಡುವೆ ಹರಿವುದು ಪೂ
ದೋಂಟದೊಳ್ಗಾಳಿ ಪೋಪಂತೆ ॥ ೧೭ ॥

ಆನೆಯೊಳೊಮ್ಮೆ ತೇಜಿಯೊಳೊಮ್ಮೆ ಶಿಬಿಕಾ ವಿ
ಮಾನರಥಗಳೊಳೊಮ್ಮೊಮ್ಮೆ
ಆನುತೇಳುತ ಬಂದು ಹಲವು ಪಯಣದಲ್ಲಿ
ಭೂನಾಥ ಸಾರ್ದನಾ ಗಿರಿಯ ॥ ೧೪ ॥

ಕಾಲ ಕಾಲದೊಳಾದ ಚಕ್ರವರ್ತಿಗಳಂಕ
ಮಾಲೆಯ ಬರೆಸುವರಲ್ಲಿ
ಶೈಲವೆಲ್ಲವು ಲಿಪಿ ತುಂಬಿರೆ ನೋಡಿ ನೃ
ಪಾಲನ ಗರ್ವ ಸೋರಿದುದು ॥ ೧೯ ॥

ಎನಿಬರಾಳಿದರೊಯೊ ಗಿರಿಯಲ್ಲಿ ಬೆರಳಿಡು
ವನಿತಿಲ್ಲ ಬರೆಯದ ತಾಣ
ಜಿನ ಜಿನ ಭೂತಳ ನನ್ನ ದೆಂದುಬ್ಬುವ
ಮನುಜನೆ ಮರುಳೆಂದು ನೆನೆದ ॥ ೨೦ ॥

ತನ್ನಂಕಮಾಲೆಗೆ ತೆರಪಿಲ್ಲದಿರೆ ನೋಡಿ
ಮುನ್ನಿದ್ದದೊಂದು ಶಾಸನವ
ಉನ್ನತ ಶೌರ್ಯನು ದಂಡದಿಂದೊರೆಸೆಂದು
ಸನ್ನೆದೋರಿದನು ಕಿಂಕರಗೆ ॥ ೨೧ ॥

ತೊಡೆ ತೊಂಡಲಿಪಿಯನೆಂದನು ಧೂಳಿಲಿಪಿಗಳ
ತೊಡೆವಂತೆ ತೊಡೆದನಾ ಭೃತ್ಯ
ನೆಡುವಂತೆ ಬರೆಯೆನೆ ವಜ್ರಶಾಸನನೆಂಬ
ಕಡುಜಾಣ ಕರಣಿಕ ಬರೆದ ॥ ೨೨ ॥

ಶೃಂಗಾರಯೋಗಿ ಶುದ್ಧಾತ್ಮನು ರಾಗಿ ರಾ
ಜ್ಯಾಂಗನಾಗಿಯು ಸಂಗತ್ಯಾಗಿ
ಅಂಗನಾಜನವನಮಧುಮಾಸ ದಿವ್ಯ ಮು
ಕ್ತ್ಯಂಗನಾಚಿತ್ತವಿಲಾಸ ॥ ೨೩ ॥

ಹುಂಡಾವಸರ್ಪಿಣಿ ಕಾಲದಾದಿಯೊಳು ಷ
ಟ್ಖಂಡವ ಭರತಚಕ್ರೇಶ
ಚಂಡನಾಳ್ದನು ಸುಮಂಗಲ ಮಹಾಶ್ರೀ ಶ್ರೀ
ಮಂಡನಮಸ್ತು ಹಿ ಸ್ವಾಹ ॥ ೨೪ ॥

ಮಣಿಮಾಲೆಯಂದದೊಳಕ್ಷರಗಳನು ಕಾ
ಕಿಣಿಯಿಂದ ಬರೆಯಲಾ ನೃಪತಿ
ಗಣಕಗುಚಿತವಿತ್ತು ಶೈಲದೊತ್ತಿನೊಳು ಸಂ
ದಣಿ ಮಿಗೆ ಪಾಳೆಯ ಬಿಟ್ಟ ॥ ೨೫ ॥

ಲಾಲಿಸಿ ಸರ್ವರ ಬೀಡಿಗೆ ಬೀಳ್ಕೊಟ್ಟು
ಬಾಲನ ಪೌಜೆಯ್ದಿ ತೆನಲು
ಲೀಲೆಯಿಂದರಮನೆವೊಕ್ಕನೆಂಬೆಡೆಗಂಕ
ಮಾಲೆಯ ಸಂಧಿ ಸುಗಂಧಿ ॥ ೨೬ ॥

ಮಂಗಲಯಾನ ಸಂಧಿ

ವಿಜಯ ಪ್ರಶಸ್ತಿಯ ಬರೆಯಿಸಿ ಕಟ್ಟಿಂಡ
ವಿಜಯನಲ್ಲಿರಲೆಂಟು ದಿವಸ
ವಿಜಯಾರ್ಥದೊತ್ತಿನೊಳ್ಸೀನೆಯನಿಂಬಿಟ್ಟು
ವಿಜಯರಾಜನು ಬಂದು ಕಂಡ ॥೧॥

ಒಂದೊಂದು ಖಂಡದಿ ನಾನ್ನೂರು ಪೆಂಗಳು
ಬಂದಿರ್ದರಂಬರೇಚರರು
ತಂದಿದ್ದರೆಂಟುನೂರೆಳೆವೆಣ್ಣನೊಟ್ಟೈಸು
ವಂದಿರಳ್ಸಾವಿರವೆಂದ ॥೨॥

ಸುರಪುರದಂದದಿ ಕಟಕ ಸಿಂಗರವಾಗೆ
ಶರಧಿವೊಲ್ವಾದ್ಯಗಳುಲಿಯೆ
ಎರಡುಸಾವಿರ ಪೆಣ್ಣುಗಳನೊಂದೆ ಹಸೆಯೊಳು
ಕರವಿಡಿದಿಂಬಿಟ್ಟುಕೊಂಡ ॥೩॥

ಹೆಂಗಳ ಜನಕರೆಲ್ಲರನು ಮನ್ನಿಸಿ ಸರ
ಸಾಂಗದೊಳಿರೆ ರಾಯನಿತ್ತ
ಸಂಗಲಿಸಿದುದತ್ತ ನಮಿರಾಜಗಾಪ್ತಜ
ನಂಗಳ ವಾಕ್ಯವೇನೆಂಬೆ ॥೪॥

ಕೊಡುವುದುತ್ತಮ ದೇವರನುಜೆಯ ಚಕ್ರಿಗೆಂ
ದೊಡಬಡಿಸಿದರು ಬಾಂಧವರು
ಒಡನದು ಲೇಸೆಂದು ಸುಮತಿಸಾಗರನೂ ತ
ನ್ನೊಡಹುಟ್ಟಿದವನೂ ನುಡಿದರು ॥೫॥

ನಿನ್ನ ತಮ್ಮನ ಕೂಡೆ ಮಂತ್ರಿಯ ಕೂಡಾತ
ಮೊನ್ನೆ ತೋರಿದ ಮಾತ ಮರೆದ್ಯೆ
ಚೆನ್ನಲ್ಲ ಕೊಡು ಕೊಡು ಚಕ್ರಿಯ ಬಳಿಗೆಯ್ದೆ
ಬನ್ನವಲ್ಲೆಂದರುತ್ತಮರು ॥ ೬ ॥

ಮಾನಹಾನಿಯ ನೋಡದಾ ನೃಪರಿತ್ತರು
ನಾನಂತು ಕೊಡೆನದಂತಿರಲಿ
ಏನ ಮಾಡುವನೆನ್ನ ತಮ್ಮನೊಳ್ನುಡಿದಾತ
ತಾನು ಗೆಯ್ವುದ ಕಾಣ್ಬೆನೆಂದ ॥ ೭ ॥

ಆಪ್ತರು ತಿಳುಹಲಾರದೆ ಯಶೋಭದ್ರೆಗೆ
ಗುಪ್ತದಿ ಸೂಚಿಸಲಾಕೆ
ಪ್ರಾಪ್ತರ ಕಳುಹಲೆದ್ದನು ತಾಯ ಮನೆಗತಿ
ದೀಪ್ತದೊಳಾ ನಮಿರಾಜ ॥ ೮ ॥

ಏನಣ್ಣ ಭರತೇಶಗನುಜೆಯ ಕುಡೆನೆಂದು
ನೀನತಿರಭಸದೋರ್ಪೆ ಗಡಾ
ಆ ನೃಪಗೆಂದೆ ಬಳೆದ ಪೆಣ್ಣ ಕೊಡಬೇಕು
ಗ್ಲಾನಿದೋರದಿರಿಂದಳಾಕೆ ॥ ೯ ॥

ಹೆಣ್ಣು ಬೇಕಾದರೆ ಬರಬೇಕು ನಾವೆಮ್ಮ
ಬಣ್ಣಿಗೆದಪ್ಪಿ ಕೊಡುವೆವೆ
ಹೆಣ್ಣು ಗಂಡಿನ ಕೊಳು ಕೊಡೆಯ ಮೈಸಿರಿ ತಪ್ಪಿ
ಬಣ್ಣಿಸಲಾಗದಿಂತೆಂದ ॥ ೧೦ ॥

ಗಾಡಿಯೊಳಿದ್ರನ ನಗುವ ಚಕ್ರಿಗೆ ಶಚಿ
ಪಾಡಲ್ಲವೆಂಬೆನ್ನ ಮಗಳ
ಜೋಡಿಸಲೊಲ್ಲೆಯ ತಣ್ಣಗಿರಾನೊಮ್ಮೆ
ನೋಡುವೆ ಕೈಲಾಸಗಿರಿಯ ॥ ೧೧ ॥

ರಾಜಗೌರವ ತಪ್ಪಿ ಬಾಳುವ ಸಿರಿಯಿಂದ
ಶ್ರೀ ಜಿನದೀಕ್ಷೆಯೆ ಲೇಸು
ಓಜೆಯಲ್ಲದುದ ಪೇಳ್ದವ ನಾನೆ ಪೋಪೆನ
ಮ್ಮಾಜಿ ತೆಪ್ಪಗಿರಿ ನೀವೆಂದ ॥ ೧೨ ॥

ಅಳುಕಿದಳದಕೆ ಕೇಳ್ಮಗನೆ ನೀನಿಷ್ಟು ವೆ
ಗ್ಗಳಿಸದಿರಾ ಚಕ್ರಿ ನಿನ್ನ
ನಿಳಯಕೆ ಬಾರನು ತಾಳಿ ಬಂದಿಯ ಕಟ್ಟಿ
ಲೊಲಿದೀವೆಯಾಯೆಂದಳೊಡನೆ ॥ ೧೩ ॥

ಇಲ್ಲಿಗಾಪ್ತರನಟ್ಟಿ ಬಂದಿಗಟ್ಟಿಸನು ತ
ನ್ನಲ್ಲಿಗೆ ಬರಲೆಂಬನಮ್ಮ
ಇಲ್ಲಿ ತನ್ಮಂಗಲವೆಸಗಿದರದೆ ಸಾಕು
ಸಲ್ಲೀಲೆಯೊಳಗೀವೆನೆಂದ ॥ ೧೪ ॥

ಬಾಲತ್ವದೊಳು ಭರತೇಶನ ಬಲ್ಲಳೀ
ಕಾಳಂದಿ ಮತ್ತೆನ್ನ ಮಗಳ
ಮೇಳದ ಮಧುವಾಣಿ ಕಡುಜಾಣೆಯವರಿಂದ
ಹೇಳಿಪೆನೆಂದೆಣಿಸಿದಳು ॥ ೧೫ ॥

ಗನ್ನವ ಕಲಿಸಿಕೊಟ್ಟಳಿಯಗೆ ತಕ್ಕಂತೆ
ಚೆನ್ನುಡುಗೊರೆಗಟ್ಟಿ ಕೊಟ್ಟು
ಸನ್ನುತ ಮಂತ್ರಿಯೊಡನೆ ಕಳುಹಿದಳು ಪ್ರ
ಸನ್ನೆ ಯಶೋಭದ್ರಾದೇವಿ ॥ ೧೬ ॥

ಭರದಿ ವಿಮಾನವನೇರಿ ಬಂದೋಲಗ
ಹರಿವಾಗ ನೃಪತಿಯ ಕಂಡು
ಬರವೇನು ಕಾರಣವೆಂದು ಭೂವರ ಕೇಳ
ಲೊರೆದನಾ ಮಂತ್ರಿ ಕರ್ಣದೊಳು ॥ ೧೭ ॥

ಅರಿದನಾಗಳೆ ಹೆಣ್ಣಿನೊಸಗೆಯೆಂದದನರಿ
ದರಿಯದಂತವನನಿಂಬಿಟ್ಟು
ಹೊರಸಭೆಯಿಂದೊಳಚಾವಡಿಗೆಯ್ದಿ ಚೆ
ಲ್ವೆರಕದೊಳೋಲಗವಾದ ॥ ೧೮ ॥

ಒಳಗಿದ್ದ ಪಂಡಿತ್ರಿ ಬರಲೆನುತತ್ಯಾಜಿ
ಕಳುಹಿದವರ ಕರೆಯೆಂದ
ಫಳಿಲನೆ ಬಂದಳು ಪಂಡಿತೆ ಖಚರೆಯ
ರೊಳಹೊಕ್ಕರರಸನೋಲಗಕೆ ॥ ೧೯ ॥

ನಿನ್ನತ್ತೆ ಕಳುಹಿದಳುಡುಗೊರೆಗಳನೆಂದು
ಬಿನ್ನವಿಸಿದಳಷ್ಟರೊಳಗೆ
ಚಿನ್ನದಾವರೆಯ ಕಾಣ್ಕೆಯನಿಕ್ಕಿ ಮಧುವಾಣಿ
ತನ್ನ ಕೈಮುಗಿದಳರ್ತಿಯೊಳು ॥ ೨೦ ॥

ಆರು ಸೂಡದ ಮಾಲೆ ತೊಡದ ಪೊಂದೊಡಿಗೆ ಚ
ಕೋರ ತುಡುಕದಚ್ಚ ಜೊನ್ನ
ಸೇರಿ ನೋಡದ ಚಿತ್ರವೆನೆ ಕಚ್ಛನೃಪನ ಕು
ಮಾರಿಯಿಹಳು ವಿಾಸಲಾಗಿ ॥ ೨೧ ॥

ತಾಗುತಿದ್ದುದು ಮಧುವಾಣಿಯ ನುಡಿ ರುಚಿ
ಯಾಗುತಿದ್ದುದು ರಾಯ ನಗುತ
ಈಗ ನೀವೆಯ್ತಂದ ಕಾರ್ಯವೇನತಿ ಜೋಲಿ
ಯಾಗದೆ ಪೇಳೆಂದನೊಡನೆ ॥ ೨೨ ॥

ನವಗೇನು ಕಾರ್ಯ ನಿಮ್ಮತ್ತೆ ನಿವಗೆ ತನ್ನ
ಕುವರಿಯ ಕುಡುಿನೆಂದೆಮ್ಮ
ಅವಸರದಿಂದಟ್ಟಲೆಯ್ತಂದೆವಾಕೆಯ
ಸುವಿವೇಕವೊಂದ ಕೇಳಿನ್ನು ॥ ೨೩ ॥

ವಿನಮಿರಾಜನು ಮಂತ್ರಿ ಬಂಧುಗಳೆಲ್ಲರು
ನಿನಗೆ ಪೆಣ್ಣೊಡುವರೊಪ್ಪಿದರು
ಘನತರ ಭಾಗ್ಯವಂತಗೆ ಕೊಡಲಮ್ಮೆವೆಂ
ದನುಮಾನಿಸಿದನು ದೊಡ್ಡರಸು ॥ ೨೪ ॥

ತಾಳಿ ಬಂದಿಯ ಕಟ್ಟಿಸುವನಾತ ಬಳಿಕಾತ
ನಾಲಯಕೆಯ್ದಿ ಪೆಣ್ಣೊಡುವ
ಲೀಲೆಗೊಪ್ಪೆಂದರೊಪ್ಪಿದನದನಾವೊಲ್ದು
ಹೇಳಲೆಯ್ದಿದೆವೆಂದಳವಳು ॥ ೨೫ ॥

ಆಂತಹುದತ್ಯಾಜಿಯರ ಮಾತ ಮುರಿವೆನೆ
ಸಂತತಿಭೂಪರ ಕಳುಹಿ
ನಾಂ ತಾಳಬಂದಿಗಟ್ಟಿಸುವೆನೆಂದನು ಮುಖ
ಕಾಂತಿಯಾಯ್ತುವರಿಗಾಕ್ಷಣವೆ ॥ ೨೬ ॥

ಸಂದುದಾ ದಿನ ಮರುದಿನ ತನ್ನ ಮಂತ್ರಿಯ
ಮುಂದು ಮಾಡಿಲ್ಲರ ಕೂಡೆ
ಬಂದ ಪೆಂಗಳಿಗೆ ಖೇಚರಮಂತ್ರಿಗುಚಿತವಿ
ತ್ತೊಂದೆ ಲಗ್ನಯೊಳು ಕಳುಹಿದ ॥ ೨೭ ॥

ಮಂಗಲವಸ್ತುವೆರಸು ತಾಳಿ ಬಂದಿಯ
ನಂಗನೆಗಟ್ಟಿ ಮತ್ತಿತ್ತ
ತಂಗಿಯರಿಗೆ ಬಳಿಯಟ್ಟಿದನಿಲ್ಲಿಗೆ
ಮಂಗಲಯಾನದ ಸಂಧಿ ॥ ೨೮ ॥

ಉಂಗುರುಡಿಗೆಯ ಸಂಧಿ

ಕಾಳಿಂದಿ ಮಧುವಾಣಿಯರು ಪೇಳಲೊಸಗೆಯ
ಕೇಳಿ ಯಶೋಭದ್ರಾದೇವಿ
ಓಲಾಡಿ ಹರುಷದೊಳವರನಾಗಳೆ ತನ್ನ
ತೋಳಿರಳ್ತುಂಬಿಯಪ್ಪಿದಳು ॥ ೧ ॥

ಸಿಂಗರಿಸಿದ ಪುರದೊಳು ಗಜ ತೇರು ತು
ರಂಗ ಪತಾಕೆ ವಿಮಾನ
ಸಂಗಡಿಸಿರೆ ವಾದ್ಯರವದೊಳು ಮೆರೆದುವಂ
ದುಂಗುರ ತಾಳಿಬಂದಿಗಳು ॥ ೨ ॥

ತೊಡಿಗೆಯ ಕಿರಣವ ಕೆದರುತೆಲ್ಲರು ಬಂದು
ಕಡು ದೀರ್ಘಗೃಹವೆಂಬ ಕೊಳದ
ನಡುವೆ ತಾವರೆಯಂತೆ ಬಂದಿಯ ಹರಿವಾಣ
ಬೆಡಗುವಟ್ಟರೆ ನಿಟ್ಟಿಸಿದರು ॥ ೩ ॥

ಆಸನಾವಳಿಯನೆಲ್ಲರಿಗೀಯೆ ಪರಮ ವಿ
ಲಾಸದೊಳ್ನಮಿರಾಜ ಕುಳಿತ
ಭೂಸುರರೋದಿದರೊಡನೆ ಸಿದ್ಧಾಂತ ವಿ
ನ್ಯಾಸದೊಳ್ಕಂಗಳಾಷ್ಟಕವ ॥ ೪ ॥

ಮಂಗಲ ಕೌಶಿಕೆಯೊಳು ಪಳಮಂಜರಿ
ಸಂಗದೊಳಿಸೆದುದು ಗಾನ
ಹೆಂಗಳು ಧವಳ ಶೋಭನವ ಪಾಡಿದರು ಕ
ರ್ಣಂಗಳ ಬರ ಬರವಂತೆ ॥ ೫ ॥

ಜಯ ಜಯ ಶೋಭನ ಶೋಭನವೆಂಬ ವಾ
ಜ್ಮಯದೊಳು ಗೀತವಾದ್ಯದೊಳು
ಪ್ರಿಯ ಸಖಿಯರು ತೊಂಡಿಲುಂಗುರ ಸೀರೆ ಬಂ
ದಿಯ ನೀರೆಗನುಗೊಳಿಸಿದರು ॥ ೬ ॥

ಮುತ್ತಿನ ತೊಂಡಿಲು ಮುಡಿಯೊಳೊಪ್ಪಿತು ಪದ್ಮ
ಕತ್ತಲೆಯೊಳಗಲರ್ದಂತೆ
ಉತ್ತುಂಗಚಕ್ರಿಯ ಪುಣ್ಯಸಾಮರ್ಥ್ಯವ
ನೆತ್ತಿತೋರ್ಪಂತೆ ಭೂತಳಕೆ ॥ ೭ ॥

ನಾಳೆ ಚಕ್ರೇಶನೀ ಕೊರಳ ತಾವುಜ ತಳ್ತ
ತೋಳೊಳಿಂತಪ್ಪುವನೆಂದು
ಹೇಳುವಂತೆಸೆದುದು ತಾಲಿವೆರಸಿ ರತ್ನ
ಕೇಲಣಿಗುಣಿಕೆಯ ಬಂದಿ ॥ ೮ ॥

ದೊರೆಗಳೊಡೆಯನಿನ್ನು ಸಿನ್ನ ಕೈವಶವಾಗಿ
ಸ್ಥಿರಬಾಳಲೆಂದು ಪೇಳ್ವಂತೆ
ಅರಸನ ರೂಪಿನ ರತ್ನ ಮುದ್ರಿಕೆ ಸಣ್ಣ
ವೆರಳೊಳೊಪ್ಪಿತು ಚಂದ್ರಮುಖಿಗೆ ॥ ೯ ॥

ಶ್ರೀ ಸುಭದ್ರಾದೇವಿ ಭರತರಾಜನ ರಾಣಿ
ವಾಸಕೆ ತಲೆವಣಿಯಾಗಿ
ಭಾಸುರಸುಖದೊಳೋಲಾಡೆಂದು ಮುತ್ತಿನ
ಸೇಸೆಯನಿಟ್ಟಳಾ ತಾಯಿ ॥ ೧೦ ॥

ತಾಂಬೂಲ ವಸ್ತ್ರಭೂಷಣವಿತ್ತು ನಮಿರಾಜ
ತುಂಬಿದ್ದ ಜನವ ಬೀಳ್ಕೊಟ್ಟ
ಮುಂಬಾಗಿಲೆಡೆಮುಟ್ಟ ಹೋಗಿ ತಿರುಗಿ ಬಂದ
ನೇಂ ಬಲ್ಕಿಕಾರನೊ ಮಂತ್ರಿ ॥ ೧೧ ॥

ಸ್ವಾಮಿ ಕಳುಹಿದನತ್ಯಾಜಿಗೆ ಮೈದುನ
ರ್ಗೀ ಮನೆವೆಂಗಳಿಗೆಂದು
ಕ್ಷೌಮವಸ್ತ್ರಾಭರಣವ ಬೇಗ ತರಿಸಿ ತಾ
ನಾ ಮನೆಯನು ತುಂಬಿಬಿಟ್ಟ ॥ ೧೨ ॥

ಮದುವೆಯ ಸಂಭ್ರಮ ಸಂಧಿ

ಮದುವೆಯುತ್ಸವಕೆಂದು ಕಟಕದ ನಡುವೆಯೊ
ಡ್ಡಿದುದೊಂದು ಹೊಸ ಜಿನವಾಸ
ಅದಕೆ ನೃಪರ ಮನೆ ದೇಹಾರಗಳು ನೆಲ
ಸಿದುವವಸರಕೆ ತಕ್ಕಂತೆ ॥ ೧ ॥

ಜಿನಪೂಜೆಯಾಗಲಭ್ಯಂಗಪೂರ್ವಕ ವಿಪ್ರ
ಜನಕೆ ಸತ್ರದೊಳನ್ನವಾಯ್ತು
ಕನಕವಸ್ತುಗಳ ಕರ್ಪೂರ ವೀಳೆಯವ ಚಂ
ದನವನಿತ್ತನು ತಣಿವಂತೆ ॥ ೨ ॥

ಸತಿ ಸುಭದ್ರಾದೇವಿ ಪತಿ ಭರತೇಶನೂ
ರ್ಜಿತಸುಖದೊಳು ಬಾಳಲೆಂದು
ಹಿತದಿಚ್ಛಾಭೋಜನವುಂಡು ದಾನವ ಕೊಂಡು
ವಿತತ ವಿಪ್ರರು ಪರಸಿದರು ॥ ೩ ॥

ಕಣ್ಣು ತಣಿಯೆ ಚಕ್ರಿ ಮಾಳ್ಪೊಸಗೆಯ ನೋಡಿ
ಹಣ್ಣಾದುದತ್ತೆಯ ಚಿತ್ತ
ಬಣ್ಣವೇರಿದ ನಮಿರಾಜನೊಂದಾನೊಂದು
ಹೆಣ್ಣ ಕೂರ್ತಾಗದುದೇನು ॥ ೪ ॥

ಮುಂಬಗಲಿಂತು ಲೀಲೆಯೊಳು ಸಾಗಿತು ಮತ್ತೆ
ಹಿಂಬಗಲಿನೊಳು ಚಕ್ರೇಶ
ತುಂಬಿದ ಕಟಕದೊಳ್ಕುಂಕುಮ ಗಂಧಕ
ದಂಬದೋಕುಳಿಯಾಡಿಸಿದನು ॥ ೫ ॥

ಕುಸುಮ ಶ್ರೀಗಂಧ ಕುಂಕುಮದಲ್ಲಿ ಪನ್ನೀರೊ
ಳಸಮ ಕಟಕವೆಲ್ಲ ನೆನೆದು
ಕೆಸರಾಯ್ತು ನೆಲನೆಲ್ಲ ಬೇಸಗೆಯೊಳಗೆ ತಂ
ಪೆಸೆವ ಪೆರ್ಮಳೆಗರೆದಂತೆ ॥ ೬ ॥

ಒದವಿ ಗಂಗಾದೇವಿ ಸಿಂಧು ದೇವಿಯರು ರಾ
ಗದೊಳಣ್ಣನೊತ್ತಿಗೆ ಬಂದು
ಮದುವೆಗೆ ಸಿಂಗರಿಸಿದ ಪೆಣ್ಣ ನಾವು ನೋ
ಡಿದರಾಗದೆಯೆಂದರೊಡನೆ ॥ ೭ ॥

ಸ್ವೀಕಾರಬಟ್ಟು ಕರೆಸಿಕೊಂಡು ಹೋಗದೆ
ನೂಕಿ ಬಂಧುಗಳೆಯ್ದಲವರು
ಏಕವರ್ಬಂದರೋ ಕರೆದೆವೆಯೆಂಬರು
ತೂಕ ತಗ್ಗುವುದಕ್ಕಯೆಂದ ॥ ೮ ॥

ನೀನೊಲ್ದು ನಂಟರೆಂದರೆ ನಂಟರುರೆ ಬಂಟ
ಮಾನಸರೆನೆ ಬಂಟರೆಲ್ಲ
ಏನ ಮಾಡುವರಣ್ಣ ಪರರೆಮಗವರ ಸ
ನ್ಮಾನವೇನೊಲಿದಿಟ್ಟುದೇನು ॥ ೯ ॥

ಸಲಲಿ ನಿಮ್ಮರ್ತಿಯೆಂದೊಡನೆ ಬೀಳ್ಕೊಟ್ಟನಾ
ಗಳೆ ಹೋಗಿ ಹೊಕ್ಕರಾ ಗೃಹವ
ಅಳಿಯನ ತಂಗಿಯರೆಯ್ತಂದರೆಂದತ್ತೆ
ನಲಿದು ಸಮ್ಮಾನ ಮಾಡಿದಳು ॥ ೧೦ ॥

ಸೂಸುಮೋಹನದ ಸಿಂಗರದೊಟ್ಟು ತನ್ನ ವಿ
ಲಾಸಿನಿಯರ ಬಳಸಿನೊಳು
ಪೂಸರಲನ ಪುಣ್ಯದೇವತೆಯಂತಿರ್ದ
ಭಾಸುರಾಂಗಿಯ ಕಂಡರಾಗ ॥ ೧೧ ॥

ನಿನ್ನ ರಸನ ತಂಗಿಯರು ಬಂದರೇಳಕ್ಕ
ಮನ್ನಿಸೆಂದಳು ತಾಯಿ ಮಗಳ
ಚೆನ್ನೆಯೆದ್ದಿದಿರಾಗಿ ಬಂದಳನ್ಯೋನ್ಯ ಪ್ರೇ
ಮನ್ನೆಡಲಾಲಿಂಗಿಸಿದರು ॥ ೧೨ ॥

ಮೂವರೊಂದಾಗಿ ಕುಳಿತರು ಯಶೋಭದ್ರಾ
ದೇವಿ ಕೆಲದೊಳು ಕುಳಿತಳು
ಸೇವೆಯ ನರ ಸುರಸತಿಯರು ಬಳಸಿಯಂ
ದಾ ವಿಭವದೊಳಿರ್ದರಾಗ ॥ ೧೩ ॥

ನೋಡಿದರಾಕೆಯ ಹಾವಭಾವಗಳ ಮಾ
ತಾಡುವಂತೆಸೆವ ಸಿಂಗರವ
ನಾಡಾಡಿ ಪೆಣ್ಣಲ್ಲ ಚಕ್ರವರ್ತಿಯ ಮರು
ಳ್ಮಾಡುವಳೆಂದು ನೆನೆದರು ॥ ೧೪ ॥

ರಾಗ ರಸಾಬ್ಧಿಯ ತೆರೆಗಳೊ ಮದುವೆಗೆ
ಸೀಗುರಿಗಳ ಮಾಳ್ಪೊಡೀಕೆ
ತೂಗಿ ಮೇಲ್ಪಂತಿದೋರ್ಪಳೊಯೆನೆ ನಿರಿಗಳ
ಸಾಗಿಸಿದುಡಿಗೆ ಮೋಹಿಸಿತು ॥ ೧೫ ॥

ವೈವಾಹದುಚಿತವಲ್ಲದೆ ತೊಡವೇಕೆ ಸ್ವ
ಭಾವಶೃಂಗಾರಾಂಗಿಯವಳು
ಹೂವಿಂದ ನಾರೊಪ್ಪುವಂತೆಯಾಕೆಯ ಸೋಂಕಿ
ಪಾವನವಾದುವು ತೊಡಿಗೆ ॥ ೧೬ ॥

ನೀನೇ ನಮ್ಮಣ್ಣನ ಸೋಲಿಪಳೆಂದವ
ರಾನಂದದಿಂದ ಕೇಳಿದರು
ಏನದು ದೊಡ್ಡಿತೆ ನನಗೆಂದು ನಗುವಂತೆ
ಮೋನದೊಳ್ನಗುತಿರ್ದಳಾಕೆ ॥ ೧೭ ॥

ಈ ತಿಲಕವೆ ಚಕ್ರಧರನ ಸೋಲಿಪುದು ಪೇ
ಳೀ ತುರುಬೆ ಮತ್ತೀ ಪೂವೆ
ಮಾತಾಡು ಹೆಣ್ಣೆಯೆಂಬರು ಲಜ್ಜೆಯಿಂದಾಕೆ
ಸೋತಂತೆ ತಲೆಗುನಿದಿಹಳು ॥ ೧೮ ॥

ಕೆಯ್ಯಿಂದ ಮೊಗವಿಡಿದೆತ್ತಿ ನಗುತ ನೋಳ್ಪ
ರಯ್ಯಯ್ಯೊ ನಿನ್ನಯ ಜಾಣ್ಮೆ
ಮೆಯ್ಯುಳ್ಳ ಮದನ ನಿನಗೆ ಮೆಚ್ಚುವನೆ ನಮ್ಮೊ
ಳೊಯ್ಯನೆ ನುಡಿಯೆಂಬರೊಸೆದು ॥ ೧೯ ॥

ಕಡೆಗಡ್ಡಮೊಗವಿಕ್ಕಿ ಸುಮ್ಮನಿಹಳು ನೋಡಿ
ನುಡಿಗೆಟ್ಟ ಹೆಣ್ಣಿಗೆಮ್ಮಣ್ಣ
ಕಡುಸೋತುದಾಯ್ತಲ್ಲಯೆಂದೊತ್ತಿ ಚುನ್ನವ
ನುಡಿವರದಕೆ ನಗುತಿಹಳು ॥ ೨೦ ॥

ಸರಸಗುಣಗಳಿಲ್ಲದಿವಳ ರೂಪೇನು ಕಾ
ಸರಕನ ಹಣ್ಣಿನಂತೆಂದು
ಕೆರಳಿಸಿ ನುಡಿವರು ಮಾತಾಡಬೇಕೆಂದು
ಶಿರಬಾಗಿ ನಗುತಿಹಳಾಕೆ ॥ ೨೧ ॥

ಇಂದು ನುಡಿಯಳಾಕೆ ನಾಳೆ ನಾಡಿದು ನೀವು
ಬಂದೊಮ್ಮೆ ಮಾತಾಡಿ ನೋಡಿ
ಒಂದೊಂದು ನುಡಿಯೊಳೆ ಕಟ್ಟಬಿಡುವಳು ಸಾ
ಕೆಂದಿಗೆಂದಳು ಮಧುವಾಣಿ ॥ ೨೨ ॥

ಅತ್ತಿಗೆ ನೋಳ್ಪೆ ವುಂಗುರಗಳ ತೋರೆನು
ತೊತ್ತಿ ತೆಗೆದು ಬೆರಳಿಂದ
ಇತ್ತಳು ಕುರುಹನೆಂದಿವ ನಿನ್ನ ಪುರುಷನಿ
ಗಿತ್ತಪೆನೆನುತೆದ್ದರೊಡನೆ ॥ ೨೩ ॥

ಏಳೇಳಲಿಬ್ಬರ ಕೈವಿಡಿದಳು ಕುಳಿ
ತೇಳದೆ ಕೈಗಳ ನೀಡೆ
ಚಾಳಿಸಿ ಪೋಪೆವೆಂದತ್ತಿತ್ತಲೊಲೆದರು
ಬಾಲೆ ಬಲ್ವಿಡಿದು ತೆಗೆದಳು ॥ ೨೪ ॥

ಸಂಧಾನಕೆಂದೆಯ್ದಿ ಸೂರೆಮಾಡಿದರೆಂಬ
ಅಂದದೋರ್ಪಿರೆಯೆಂದು ನಗುತ
ಸಿಂಧೂರದಂತಾಯ್ದು ಕೊಂಡಳುಂಗುರಗಳ
ತಾಂ ದನಿದೋರುತವರೊಳು ॥ ೨೫ ॥

ನುಡಿಪೊಣ್ಮಲಾಕೆಯ ಧ್ವನಿ ಸ್ವರ್ಗ ವೀಣೆಯ
ನುಡಿಸಿದಂತಿಂಪಾಯ್ತು ಕಿವಿಗೆ
ನುಡಿಗೇಳಬೇಕೆಂದು ತೊಡಗಿದ ಕಾರ್ಯ ಸಂ
ಗಡಿಸಿತೆಂದವರು ನಲಿದರು ॥ ೨೬ ॥

ಮುದದಿಂದ ಚಕ್ರೇಶನೆಡೆಗೆಯ್ದಿ ಕಂಡೆವಾ
ಮದುವೆಯ ಪೆಣ್ಣನಣ್ಣಾಜಿ
ಮೊದಲು ನೀನೆಸಗಿದುತ್ಸವ ಪಿರಿದೆಂದಿದ್ದೆ
ವದು ತಕ್ಕುದೆಂದರಾ ಸತಿಗೆ ॥ ೨೭ ॥

ಆಕೆಯ ಶೃಂಗಾರವಾಕೆಯ ಗಂಭೀರ
ಸಾಕು ಮತ್ತಾಕೆ ನೋಡಿದರೆ
ಲೋಕದಂಗನೆಯೆ ಪೆಣ್ಣೆನಲೊಂದು ರತ್ನಶ
ಲಾಕೆ ಹುಟ್ಟಿದುದೆಂದರೊಡನೆ ॥ ೨೮ ॥

ಇರುಳಾಯಿತಷ್ಟಕ್ಕೆ ಹುಣ್ಣಿಮೆಯೆಂದು ಚಂ
ದಿರನ ಪ್ರಕಾಶ ಬಿಂಬಿಸಿತು
ನರಲೋಕವಲ್ಲ ಜ್ಯೋತಿರ್ಲೋಕವೆಂಬಂತೆ
ಹರೆದುವು ಸೊಡರು ಪಂಜುಗಳು ॥ ೨೯ ॥

ಮೊಳಗಿತು ವಾದ್ಯ ಕೋಟಾ ಕೋಟಿ ದಿವಿಜರ
ಪೊಳಲು ಮಾರ್ದನಿಗೊಡುವಂತೆ
ಕಲಕಲಿಸಿತು ಸೇನೆ ಜಯ ಜಯಯೆಂದುಬ್ಬಿ
ಘಳು ಘಳಿಸುವ ವಾರ್ಧಿಯಂತೆ ॥ ೩೦ ॥

ಆಳಾಪ ಲೆಕ್ಕವೆ ವಾದ್ಯ ಲೆಕ್ಕವೆ ನಾಟ್ಯ
ಕೇಳಿ ಲೆಕ್ಕವೆ ಕಟಕದೊಳು
ತೂಳವೆದ್ದಲ್ಲಲ್ಲಿ ಜನಗಳು ಕುಣಿವುದ
ಹೇಳಲಳವೆ ಮಹೋತ್ಸವವ ॥ ೩೧ ॥

ಪಟ್ಟದ ಸತಿಯಾಕೆ ಚಕ್ರೇಶಗೆಂಬುದ
ನಿಟ್ಟಿಸಿದವರಿವಂತೆ
ಕಟ್ಟಿ ಪಟ್ಟವ ಸುಭದ್ರಾದೇವಿ ಬಲು ಕಡೆ
ಕಟ್ಟಿ ರಂಚಿಸುತಿರ್ದಳತ್ತ ॥ ೩೨ ॥

ಭರತೇಶನಿತ್ತ ಸಿಂಗರಿಸಿದ ನವರತ್ನ
ವಿರಚನೆವೆತ್ತ ಬಾಸಿಗವ
ಧರಿಸಲದರ ಕಾಂತಿ ಮುಖವೆಂಬ ಚಂದ್ರಗೆ
ಪರಿವೇಷದಂತೆ ರಂಜಿಸಿತು ॥ ೩೩ ॥

ರಾಜ್ಯಪಟ್ಟವ ತಮ್ಮ ತಂದೆ ಕಟ್ಟಲು ರತಿ
ರಾಜ್ಯ ಪಟ್ಟವನಿಂದು ತಾನೆ
ಪ್ರಾಜ್ಯಪುಣ್ಯದಿ ಕಟ್ಟಕೊಂಡನೆಂದೆನೆ ಲೋಕ
ಪೂಜ್ಯ ಕಟ್ಟಿದನು ಪಟ್ಟವನು ॥ ೩೪ ॥

ಅದೆಯಿದೆ ಲಗ್ನ ಸಮೀಪಕೆ ಬಪ್ಪುದೆಂ
ಬುದ ಹಾರುತರಮನೆಗಳೊಳು
ಮದವಕ್ಕಳುತ್ಸಾಹದೊಳಗಿದ್ದರಿಲ್ಲಿಗೆ
ಮದುವೆಯ ಸಂಭ್ರಮ ಸಂಧಿ ॥ ೩೫ ॥

ಸ್ತ್ರೀ ರತ್ನ ಸಂಭೋಗ ಸಂಧಿ

ಜೆಲ್ಲಿದಂತೆಯ್ತಂದು ನೃಪನರಮನೆಯ ಮುಂ
ದೆಲ್ಲರು ನಿಂದರು ಹೊರಗೆ
ಪಲ್ಲಕ್ಕಿಯಬಲೆಯ ಮದುವೆಯ ಗೃಹಕೆ ಮ
ಹೋಲ್ಲಾಸದಿಂದೊಯ್ದರೊಡನೆ ॥ ೧ ॥

ಮುತ್ತಿನ ಮೆಟ್ಟಕ್ಕಿಯೊಳು ಕನ್ನೆ ನಿಂದಳು
ಮುತ್ತಿನ ತೆರೆಯ ಮರೆಯೊಳು
ಮತ್ತಕಾಶಿನಿಯರು ಹಾಡುತಿರ್ದರು ಸ್ವರ
ವೆತ್ತಿ ಶೋಭನ ಧವಳಗಳ ॥ ೨ ॥

ಮೆಟ್ಟಕ್ಕಿಯೊಳು ನಿಂದು ನಲ್ಲನೆದೆಗೆ ಜುಮ್ಮ
ದಟ್ಟಿಸಿ ಬರಿಸಿದಳೆನಲು
ತೊಟ್ಟನೆ ಭರತೇಶ ಬರುತಿರ್ದನಿದೆ ಲಗ್ನ
ಮುಟ್ಟಲಾಯ್ತೆನೆ ಕೇಳುತೊಡನೆ ॥ ೩ ॥

ತೆರೆಯ ಮರೆಯೊಳಿರ್ದ ನಲ್ಲಳ ನೋಡುವಾ
ತುರದೊಳುದ್ದವನೇರುವಂತೆ
ಬರುತ ಮೆಟ್ಟಕ್ಕಿಯ ಮೆಟ್ಟ ನಿಂದನು ಶುಭ
ಕರ ಜಯಜಯಯೆಂಬ ರವದಿ ॥ ೪ ॥

ಸುಲಲಿತ ಮಂಗಲಾಷ್ಟಕ ಪೂರ್ಣವಾಗಿ ಮಂ
ಗಲದ ಕೌಶಿಕೆಯ ರಾಗದೊಳು
ಪಳಮಂಜರಿಯೊಳು ಪಾಡಿದೊಡೆ ಮಧ್ಯದ ತೆರೆ
ತೊಲಗಿತು ಜಯಜಯಯೆನಲು ॥ ೫ ॥

ಪ್ರಮದೆಯ ಕೈಗೆ ಪೂಮಾಲೆ ಕೊಟ್ಟದ ನಿನ್ನ
ರಮಣಗೆ ಸೂಡಕ್ಕಯೆಂದು
ನಮಿರಾಜ ಸಿಂಧು ಗಂಗಾದೇವ ವಿನಮಿಗ
ಳಮಳ ಸಂಭ್ರಮದೊಳಾಡಿದರು ॥ ೬ ॥

ನಾಣಿಂದ ತಲೆಗುಸಿದವಳ ಕೈಗಳ ಮಧು
ವಾಣಿ ಮುತ್ತೈತ್ತಿ ಸೂಚಿಸಲು
ಪ್ರಾಣಕಾಂತಗೆ ಮಾಲೆಯಿಟ್ಟಳು ಧವಳ ಕ
ಲ್ಯಾಣ ಶೋಭನದ ಘೋಷದೊಳು ॥ ೭ ॥

ನಿನ್ನಿಂದ ನನಗೆ ನನ್ನಿಂದ ನಿನಗೆ ತಾಪ
ಮುನ್ನುಕ್ಕಿ ಹೊಯ್ಮಾಲೆಯಾಯ್ತು
ಇಲ್ಲಿಲ್ಲ ಹೊಯ್ಮಾಲೆ ಹೂಮಾಲೆಯಾಯ್ತೆಂಬ
ಗನ್ನದೊಳ್ಮಾಲೆಯಿಕ್ಕಿದಳು ॥ ೮ ॥

ಬಿನ್ನಾಣದಿಂದ ತಂದೆಳೆಯ ಲತೆಯನು ಬಾ
ವನ್ನ ವೃಕ್ಷಕೆ ಹಬ್ಬಲಿತ್ತು
ಪನ್ನೀರನೆರೆವಂತೆ ನಮಿರಾಜನೆರೆದನು
ಹೊನ್ನ ಗಿಂಡಿಯಲಿ ಧಾರೆಯನು ॥ ೯ ॥

ಇನಿಯಳ ಕೈವಿಡಿದಿನಬಿಂಬದೊತ್ತಿನೊ
ಳ್ಬಿನದಕಾಡುವ ಕಾಮನಂತೆ
ಅನಲಕುಂಡವ ಸುತ್ತಿ ಬಂದನು ತನ್ನ ಮಾ
ನಿನಿಯ ಹಸ್ತಾಂಗುಲಿವಿಡಿದು ॥ ೧೦ ॥

ಅಳಿಯನೊಡನೆ ಪೋಪ ಮಗಳ ಗಾಡಿಯನು ಪೆಂ
ಗಳ ಮರೆಯೊಳು ನಿಂದು ನೋಡಿ
ಪುಳಕವಾಂತಾನಂದರಸದೊಳೋಲಾಡಿದ
ಳೆಳಸಿ ಯಶೋಭದ್ರಾದೇವಿ ॥ ೧೧ ॥

ನಮಿರಾಜ ಮೊದಲಾದ ನೃಪರ ಮಂತ್ರಿಯನು ಸಂ
ಭ್ರಮದ ನೋಟದೊಳು ಬೀಳ್ಕೊಟ್ಟು
ರಮಣಿಯ ಕೈವಿಡಿದಾ ರಾಯ ಹೊಕ್ಕನು
ತ್ತಮ ರಾಜಗೃಹವ ಲೀಲೆಯೊಳು ॥ ೧೨ ॥

———————

ಜಿನದರ್ಶನ ಸಂಧಿ

ಮಂಗಲ ಮುಗಿದು ಮತ್ತಾ ಚಕ್ರಿ ರಾಜಲೀ
ಲಾಂಗದೊಳಿರುತಿರಲಲ್ಲಿ
ತಂಗಾಳಿ ಬನಕೆ ಬಹಂತೊಂದು ದಿನ ಮಂತ್ರಿ
ಪುಂಗವ ಬಂದನೋಲಗಕೆ ||೧||

ಮೂರು ವಾರ್ಧಿಯ ಮಧ್ಯದೊಳು ಹೇಮಗಿರಿ ಮುಟ್ಟ
ತೋರುವ ಧರೆ ಸಾಧ್ಯವಾಯ್ತು
ಆರುಖಂಡವ ಗೆಲ್ದು ವೃಷಭಾದ್ರಿಯೊಳು ರೇಖೆ
ದೋರಿದೈ ವೀರಶಾಸನವ ||೨||

ಅಮ್ಮಾಜಿ ದಿನಗಳನೆಣಿಸುತಿಹಳು ನಿನ್ನ
ತಮ್ಮಂದಿರಾಸೆ ಬಿಟ್ಟಿಹರು
ಇಮ್ಮೈಯೊಳಿದ್ದ ಮೈದುನರ ಬೀಳ್ಕೊಟ್ಟನ್ನು
ಫೆಮ್ಮನೆ ಬಿಜಯ ಮಾಡೆಂದ ||೩||

ಸುಮತಿಸಾಗರ ಮೊದಲಾದ ಪಾಯ್ದಳಕೆ ಕೂ
ಡಮರರಿಬ್ಬರ ಸರ್ವದಳಕೆ
ಪ್ರಮುದದಿ ಪೆಣ್ಣಿತ್ತ ಖಚರರ್ಗೆ ಸಾಕು ಸಾ
ಕಮಮಯೆಂದೆನಲು ಮನ್ನಿಸಿದ ||೪||

ತೀರಿತೆಲ್ಲಾ ಜೋಲಿಯಾ ದಿನ ಮರುದಿನ
ವೀರಕಟಕದ ಲಗ್ಗೆಯೊಳು
ಈರಾರು ಭೇರಿ ಭೋರೆಂದು ಸೂಳ್ಯೆಸೆ ಮ
ಹಾರಾಯನೆದ್ದನುಬ್ಬಿನೊಳು ||೫||

ಬಿಡುತೆತ್ತಿ ನಡೆವುತ ದಕ್ಷಿಣ ಮುಖವಾಗಿ
ಪಡೆಗೂಡಿ ಬರುತ ರಾಜೇಂದ್ರ
ಕಡುಬೆಳ್ಪ ಕೆದರುವ ಕೈಲಾಸಗಿರಿಯ ತ
ನ್ನೆಡದಲ್ಲಿ ಕಂಡ ದೂರದೊಳು ॥ ೬ ॥

ಬಿಡಹೇಳೊ ಇಲ್ಲಿ ಪಾಳಯವನೆಂದನು ಕೂಡೆ
ಪಡೆವಳ್ಳ ಬಿಡಿಸಿದನಲ್ಲಿ
ಮಡದಿಯರೆಲ್ಲರ ಬೀಡಿನೊಳ್ಸಂತವಿ
ಟ್ಟೊಡನೆದ್ದ ಕೈಲಾಸಗಿರಿಗೆ ॥ ೭ ॥

ಸಾವಿರದಿನ್ನೂರ್ವರಣುಗರು ಗಣಬದ್ಧ
ದೇವರ್ಕಳೊಡಗೂಡಿ ನೃಪತಿ
ದೇವರ್ಕಳಂತೆ ವಿಮಾನದೊಳ್ಗಗನವಾ
ರ್ಗಾವಲಂಬನದೊಳೆಯ್ದಿದನು ॥ ೮ ॥

ಹಲವು ವಿಮಾನವ ಪೊರಗಿಂಪುಗೈದು ಮ
ಕ್ಕಳುಗೂಡಿ ಸೋಪಾನವೇರಿ
ತಳರುತ ನವರತ್ನದಿಂದ ರಂಜಿಪ ಪೊರ
ವಳಯದ ಕೋಟೆಯ ಸಾರ್ದ ॥ ೯ ॥

ನಾಗೇಂದ್ರ ನಿಲ್ಲು ದೇವೇಂದ್ರ ವಂದಿಸು ಕೆಲ
ಕಾಗಿರೈ ದಿಕ್ಪಾಲರೆಲ್ಲ
ಯೋಗಿಗಳ್ಕುಳ್ಳಿರಿರೆಂಬ ವೇತ್ರಿಗರ ಶ
ಬ್ದಾಗಮ ಕೇಳುತೆಯ್ದಿದನು ॥ ೧೦ ॥

ಸುರಿವ ಪೂಮಳೆ ಕಾಂತಿಯುರಿವ ಭಾಮಂಡಲ
ಮೊರೆವ ದೇವಾನಕವೆಸೆಯೆ
ಹರಿಪೀಠದಬ್ಜವ ಸೋಂಕದಿಪ್ಪಯ್ಯನ
ಚ್ಚರಿಗೆ ಹಿಗ್ಗುತ ಬರುತಿರ್ದ ॥ ೧೧ ॥

ಸುರ ಸಿದ್ಧ ಯಕ್ಷ ಕಿಂಪುರುಷರು ಮೊದಲಾದ
ಪರಮನ ಸಭೆಯವರೆಲ್ಲ
ಭರತೇಶ ಬಹುದ ತಮ್ಮಿದಿರಲ್ಲಿ ಕಾಣುತ
ಚ್ಚರಿವಟ್ಟರೇನ ಬಣ್ಣಿಪೆನು ||೧೨||

ಆರಿವನಧಿಕ ಲಾವಣ್ಯನು ಚೆಲ್ವ ಕು
ಮಾರರು ವೆರಸಿ ಬಹವನು
ತಾರಾದ್ರಿಯೊಳು ಮುನ್ನ ನಾವೆಂದು ಕಂಡುದಿ
ಲ್ಲೀ ರೂಪನೆಂದು ನುಡಿದರು ||೧೩||

ಹತ್ತಿರ ಬರಲೀತ ಭರತೇಶನಲ್ತೆ ದೇ
ವೋತ್ತಮನಾತ್ಮಜನಲ್ತೆ
ಮತ್ತಾರಿಗೀ ಸಿರಿ ಸಲುವುದಾತನಿಗೆಂದು
ಚಿತ್ತದೊಳ್ನಲಿದು ನೋಡಿದರು ||೧೪||

ಹರುಷದೊಳೊಳಿಪಳಹೊಗುತಿದ್ದ ನಪ್ಪರೊಳು ದೇ
ವರ ದೇವ ತ್ರಿಭುವನಾದಿತ್ಯ
ಪುರುನಾಥ ಚಿತ್ತೈಸು ಭರತೇಶ ಬಂದನೆಂ
ದೊರೆದರು ಸುರವೇತ್ರಧರರು ||೧೫||

ಒಳವೊಕ್ಕನೊಡನೆ ರತ್ನಾಂಜಲಿಯನು ಪಾದ
ನಳಿನಯುಗಕೆ ಸೂಸಿ ಚಕ್ರಿ
ನಳಿತೋಳ ನೀಡಿ ಸಾಷ್ಟಾಂಗವೆರಗಿದನು
ಪುಳಕ ಸರ್ವಾಂಗದೊಳುಣ್ಮೈ ||೧೬||

ಧಾತ್ರಿಯೊಳ್ಮೂರು ಸೂಳೆರಗಿ ನಿಂದಾ ದಿವ್ಯ
ಗಾತ್ರನ ಮುಂದೆ ಕೈಮುಗಿದು
ಸ್ತೋತ್ರವ ಮಾಡಿದನೇನೆಂಬೆ ತನ್ನ ಸು
ಪುತ್ರರುಗೂಡಿ ಚಕ್ರೇಶ ||೧೭||

ಕರತಳ ಕಂಪಿಸುತಿದ್ದುವಾನಂದಾಶ್ರು
ಸುರಿವುತಿದ್ದುವು ಕಂಗಳಿಂದ
ದರಹಸಿತಾಸ್ಯ ಸುಸ್ವರದೋರಿ ತನ್ನ ಸ
ದ್ಗುರುವ ಕೀರ್ತಿಸಿದನಿಂತೆಂದು ||೧೮||

ಸುತ್ರಾಮಶತಮಕುಟಾನರ್ಘ್ಯರತ್ನಾಂಶು
ಚಿತ್ರಿತ ಚರಣಾಬ್ಜಯುಗಳ
ಛತ್ರ ಮುಕ್ತಾಂಶು ಗಂಗಾವೃತ ಬಹು ಜಟಾ
ಜಸೂತ್ರಿತ ಯಜಯಯೆಂದ ||೧೯||

ಸಂಗ ನಿಸ್ಸಂಗ ಸುರಾಂಗ ಚಿದಂಗ ಮು
ತಂಗಜರಿಪುವಿಷ್ಟರಾಢ್ಯ
ಸಾಂಗಿಕ ಸುರಕುಸುಮಾಸಾರ ಧೂಳಿ ಭ
ಸ್ಮಾಂಗಿತ ಜಯಜಯಯೆಂದ ||೨೦||

ಪಿಂಜರಿತೋಗ್ರ ಕರ್ಮಾರಣ್ಯ ದಾವಛ
ನಂಜಯ ಸುಜ್ಞಾನಭಾನು
ಭಂಜಿತಜಾತಿ ಜರಾಮಯದುಃಖಮೃ
ತ್ಯುಂಜಯ ಜಯಜಯಯೆಂದ ||೨೧||

ಕಂಜಕಿಂಜಲ್ಕ ಭುಂಜಿತ ಮುಂಜುಳಾಳಿ ಸ್ವ
ರಂಜಿತ ಮುಂಜು ಘೋಷೆಯರ
ರಂಜಿತಗೀತ ಪುಷ್ಪಾಂಜಲಿ ಪೂಜ್ಯ ಪ
ರಂಜ್ಯೋತಿ ಜಯಜಯಯೆಂದ ||೨೨||

ಸುರಕೃತ ಜಲದಿಂದ ಮಿಂದನು ಕೂಡೆ ಸಿಂ
ಗರಿಸಿದನಾತ್ಮಜರ್ವೆರಸಿ
ವರವಸ್ತುಚಯದಿಂದ ಜಿನನ ಪೂಜಿಸಿದನಾ
ಭರತೇಶಗೇನದಚ್ಚರಿಯೆ ||೨೩||

ತೀರ್ಥಾಂಬು ಮಲಯಜಾಕ್ಷತೆ ಪುಷ್ಪ ಚರು ದೀಪ
ಪ್ರಾರ್ಥನೆ ಧೂಪ ಫಲಾರ್ಘ್ಯೆ
ಸಾರ್ಥಸಿದ್ಧಿಗೆ ಸಾರೆ ಸಭೆ ಜಯಜಯಯೆನೆ
ತೀರ್ಥನಾಥನ ಪೂಜಿಸಿದನು ॥ ೨೪ ॥

ಪರಮನ ಸಭೆಗೊಂದು ಹೊಸಸಿರಿ ಬಂದು ಸಿಂ
ಗರವಾದುದಾ ಚಕ್ರಿ ತನ್ನ
ಗುರುವನೆಳಸಿ ನೋಡುತಿದ್ದನಿಲ್ಲಿಗೆ ಜಿನ
ದರುಶನ ಸಂಧಿ ಸುಗಂಧಿ ॥ ೨೫ ॥

ತೀರ್ಥಾಗಮನ ಸಂಧಿ

ಮಂಗಲ ಮಹಿಮನ ತಳತಳಿಸುವ ಪಾವ
ನಾಂಗದೊಳಾ ಚಕ್ರಧರನು
ಕಂಗಳ ಸುಳಿದಾಡಿ ಚಿತ್ತಕಾನಂದತ
ರಂಗವನುಂಟುಮಾಡಿದನು ॥ ೧ ॥

ತನಗೆ ಕೈವಲ್ಯವಪ್ಪಂದವ ಮುನ್ನಾದಿ
ಜಿನರಲ್ಲಿ ಕೇಳಿದ್ದನಹುದು
ತನುಜಗೆ ಕೈವಲ್ಯವಪ್ಪುದ ಕೇಳ್ದನಾ
ಜನಕಗೆಂತುಟೊ ಪುತ್ರಮೋಹ ॥ ೨ ॥

ಮುಂದಿಯ ಹಾದಿಯೊಳಿರಿಸಿ ಬಂದೈ ಚಕ್ರಿ
ನಂದನರರ್ಥವ ಕೇಳ್ದೈ
ಇಂದಿಗೆ ಸಾಕಿನ್ನು ಹೋಗತಿಜೋಲಿ ಬೇ
ಡೆಂದನು ವೃಷಭಸೇನಾರ್ಯ ॥ ೩ ॥

ಎಂದರೆ ದೇವರಾಜ್ಞೆಯ ಮಾರಲೇಕೆಂದು
ನಂದನರ್ವೆರಸೆದ್ದು ಜಿನಗೆ
ವಂದಿಸಿ ಪುನರಪಿದರ್ಶನವುಸ್ತೆಂದು
ಚಂದದಿ ಬೀಳ್ಕೊಂಡನೊಡನೆ ॥ ೪ ॥

ಸರ್ವರು ಸ್ವಾಮಿಯ ಮಹಿಮೆಯ ನುಡಿಯುತ
ಕೊರ್ವಿಂದ ನಗುತೆಯ್ದುತಿರಲು
ಇರ್ವರವರೊಳು ಸುಮ್ಮನೆ ಬರುತಿದ್ದರಿ
ನ್ನೂರ್ವರು ಕಿರಿಯ ಮಕ್ಕಳೊಳು ॥ ೫ ॥

ಅರಿದನು ಚಕ್ರಿಯವರ ಚಿತ್ತ ದೀಕ್ಷೆಯ
ತ್ತೆರಿಗಿತೆಂದಂತರಂಗದೊಳು
ಮರುಕದಿಂದೊತ್ತಿಗೆ ಕರೆದುಕೊಂಡೊಡನೆ ಬಾ
ಯ್ದೆರೆದಿಂತು ನುಡಿದನವರೊಳು ॥ ೬ ॥

ಏನಣ್ಣ ಜಿನರಾಜು ಮುನಿರಾಜು, ಸುತರು ಸು
ಮ್ಮಾನದೊಳೆಯ್ತರುತಿರಲು
ದೂನಿಸುತಿದ್ದಿರಿ ನೀವೆಮಗಿದರ ಸಂ
ಧಾನಗಾಣಿಸದಾಡಿರೆಂದ ॥ ೭ ॥

ಮುಂದೆ ನೋಡದೆ ನೀವು ಹಿಂದಕೆ ತಿರುತಿರು
ಗಿಂದು ನೋಡುವುದೇತಕೆಂದ
ಎಂದು ಕಾಣ್ಬೆನು ಸ್ವಾಮಿ ಪುಣ್ಯಶೈಲವನದ
ರಿಂದ ನೋಡಿದೆವೆಂದರೊಡನೆ ॥ ೮ ॥

ಬಲ್ಲೆನಣ್ಣ ನಿಮ್ಮ ಮನದನುಭವವದ
ನೆಲ್ಲವನೀಗೆಣಿಸದಿರಿ
ಮೆಲ್ಲಗೆ ನೀವು ನಾವೊಂದಾಗಿ ಜಿನಸಭೆ
ಯಲ್ಲಿ ಮುಂದೆಸಗುವುವೆಂದ ॥ ೯ ॥

ಭೋಗದೊಳ್ಕೆಲವು ದಿವಸವಿದ್ದು ಮತ್ತೆ ದೀ
ಕ್ಷಾಗಮವೆಯ್ದುವ ಮತ್ತೆ
ಈಗಲೆ ತವಕಿಸದಿರಿಯೆಂದನವರ್ಗದು
ಬಾಗಿಲ ತೆರೆದವೋಲಾಯ್ತು ॥ ೧೦ ॥

ಎಳೆವರೆಯದೊಳೆ ಮುಕ್ತಿಯನಾಳಬೇಕೆಮ್ಮ
ಕಳುಹ ಚಿತ್ತೈಸೆಂದು ನುಡಿಯೆ
ತಳಹೊಳಗೊಂಡನೆದೆಯೊಳು ಚಕ್ರೇಶನಾ
ಗಳೆ ಕಣ್ಣನೀರ್ಗಳುಮ್ಮಿದುವು ॥ ೧೧ ॥

ಕೆಟ್ಟಿಕೆಟ್ಟೆನು ಹಾ ಹಾ ನೀವೆನ್ನ ಬಿಟ್ಟು ಬೆ
ಳ್ಳೆಟ್ಟಕೆಯ್ದುವೆವೆಂಬ ಮಾತ
ಬಿಟ್ಟೆನ್ನ ರಕ್ಷಿಸಬೇಕೆಂದು ತೆಗೆದೆತ್ತಿ
ಕಟ್ಟಕ್ಕರಿಂದಪ್ಪಿಕೊಂಡ ॥ ೧೨ ॥

ಕುವರರು ಕಡಮೆಯೆ ದೇವಗೆ ನಾವಿಬ್ಬ
ರವಿಚಳ ತಪವ ಕೈಕೊಂಡು
ಜವನನಟ್ಟಿದರದು ತಾ ನಿನ್ನ ಕೀರ್ತಿಯ
ಲ್ಲವೆ ಸ್ವಾಮಿ ಹೇಳೆಂದರೊಡನೆ ॥ ೧೩ ॥

ಆ ಕೀರ್ತಿ ಬೇಡ ನೀವೆನ್ನೊಡನಿರಿ ನನ
ಗೀ ಕೀರ್ತಿ ಸಾಕೆಂದನಯ್ಯ
ಕಾಕು ಮಾಡುವ ಜವನೊಳಗಾಗಿ ಬಾಳ್ವುದು
ಸಾಕು ಚಿತ್ತೈಸೆಂದರವರು ॥ ೧೪ ॥

ಅಲ್ಲವಪ್ಪ ನೀವು ನಮ್ಮ ಪುರವ ನೋಡಿ
ತಿಲ್ಲ ನಮ್ಮಮ್ಮಾಜಿ ನಿಮ್ಮ
ಲಲ್ಲೆಯ ಕಂಡಿತಿಲ್ಲೀಗ ನೀವೆಯ್ದುವು
ದೆಲ್ಲರ ಮನಸಿಗೆ ಬಹುದೆ ॥ ೧೫ ॥

ಮತ್ತೆ ಬಹುದೆ ದೀಕ್ಷೆಗಿಚ್ಛೆ ವಿಚಿತ್ರ ಸಂ
ಪತ್ತಿನೊಳ್ಸಿಕ್ಕಿದ ಮೇಲೆ
ಅತ್ತಣ ಸುದ್ದಿಯ ತಡಹಬೇಡೆಮ್ಮ ಸು
ಚಿತ್ತದೊಳ್ಕಳುಹೆಂದರೊಡನೆ ॥ ೧೬ ॥

ಸಲ್ಲದಪ್ಪಾ ನೀವು ನನ್ನ ಮನಸಿಗಿಷ್ಟು
ತಲ್ಲಣದೋರ್ಪುದು ಚದುರೆ
ಸೊಲ್ಲಿಸದಿರಿರಿನ್ನು ತಪದ ಸುದ್ದಿಯನೆಂದು
ಗಲ್ಲವ ಪಿಡಿದಲುಗಿದನು ॥ ೧೭ ॥

ನೋಡಿದ ಪುತ್ರರ ತವಕವನಿದಕೊಂದ
ಮಾಡಬೇಕೆಂದೆಣಿಸಿದನು
ಕೂಡೊಂದು ಕಠಿಣದ ತಂತ್ರವ ಕಂಡು ಮಾ
ತಾಡಿದನವರೊಡನಿಂತು ॥ ೧೮ ॥

ಸರ್ವಥಾ ದೀಕ್ಷೆಗೆಯ್ದಲೆ ಬೇಕೆ ಬೇಕಾಗ
ಲುರ್ವಿಗುತ್ತಮವ ನೆನೆದಿರಿ
ಒರ್ವೊರ್ವರೊಂದೊಂದು ವಸ್ತುವ ನವಗೆ ಕೊ
ಟ್ಟರ್ವರು ತೆರಳಿರೈಯೆಂದ ॥ ೧೯ ॥

ತೊಟ್ಟಿರ್ದ ಸರ್ವನ ತೊರೆದು ದೀಕ್ಷೆಗೆ ಹೋಗು
ತೊಟ್ಟೈಸಿದಾಸೆಯೆ ನಮಗೆ
ಕೊಟ್ಟಪೆವೇನು ನಿರೂಪಿಸೆಂದರು ರಾಯ
ತೊಟ್ಟನಂಗೈಯ ನೀಡಿದನು ॥ ೨೦ ॥

ಒಬ್ಬ ಕರ್ಪೂರವನಿರಿಸಿಲ್ಲಿ ಕೂಡೆ ಮ
ತ್ತೊಬ್ಬ ತೈಲವನಿಲ್ಲಿ ಹನಿಸಿ
ಇಬ್ಬರು ಹೋಗಿರೈ ಜಿನನಾಣೆ ತಡೆಯೆನೆಂ
ದುಬ್ಬಿ ಕಣ್ಣೀರೊಳೆ ನುಡಿದ ॥ ೨೧ ॥

ಸ್ವಾಮಿ ಕೈಯೊಡ್ಡಿ ವಿಷವ ಬೇಡುವಂತಾಯ್ತೆ
ಈ ಮಾತ ಕೇಳ್ದಿವೆ ನಾವು
ಹಾ ಮರ್ಧು ಜಿನ ಜಿನ ಗುರು ಹಂಸನಾಥಯೆಂ
ದಾ ಮಗ ಕಿವಿಯ ಮುಚ್ಚಿದನು ॥ ೨೨ ॥

ಅಣ್ಣನ ಮೊಗವನಯ್ಯನ ಮೊಗವನು ನೋಡಿ
ಕಣ್ಣ ನೀರ್ಗುಳುಗುಳನುಗುತ
ಪೊಣ್ಣನೆ ಕಾಲ್ಗೆ ಬಿದ್ದರು ದೀಕ್ಷೆಯೆಂದಿನ್ನು
ಹಣ್ಣೆವು ಕ್ಷಮಿಸೆಂದರಂಜಿ ॥ ೨೩ ॥

ತಂದೆ ಮಕ್ಕಳ ಕಣ್ಣು ನೀರ್ಗಳ ತೊಡೆದನಾ
ತಂದೆಯ ಕಣ್ಣೀರನವರು
ಚಂದಳಿರ್ಗೈಯಿಂದ ತೊಡೆದರು ತಳ್ಕಂಕ
ನಿಂದಿತು ಮನ ತೆಪ್ಪಗಾಯ್ತು ॥ ೨೪ ॥

ನೋಡಿರೈ ನಾನೆನ್ನ ತಂದೆ ರಾಜ್ಯದೊಳಿಂಬು
ಮಾಡಿದಂತಿಹೆನು ನಮ್ಮಮ್ಮ
ಊಡಿದ ಮೊಲೆವಾಲ ಋಣಕಾಕೆಯಾಜ್ಞೆಯೊ
ಳಾಡುತಿದ್ದಪೆನಲ್ತೆಯೆಂದ ॥ ೨೫ ॥

ಅರಸಂಚೆ ಮರಿಗಳ್‌ಗೋಜೆಯ ಕಲಿಸುತ
ಭರದೊಳು ಬಂದಂತೆ ನೃಪತಿ
ಸರಸ ಸಲ್ಲಾಪವ ಸುತರೊಳು ನುಡಿವುತೆ
ಯ್ತರುತಿದ್ದನಧಿಕ ಲೀಲೆಯೊಳು ॥ ೨೬ ॥

ಬರೆ ಬರೆ ಕಟಕ ಸಮೀಪವಾದುದು ನಮ್ಮ
ದೊರೆಯಿಂದು ತೀರ್ಥವಂದನೆಯ
ಪರಮ ಲಾಭದೊಳೆಯ್ದುತಿದ್ದನೆಂದತಿ ಭಕ್ತಿ
ವೆರಸಿದಿರ್ಗೊಂಡುದು ಕಟಕ ॥ ೨೭ ॥

ಅಲ್ಲಲ್ಲಿಗಿಡುವ ನಿವಾಳಿಯಾರತಿ ಪುಷ್ಪ
ಪಲ್ಲವ ಫಲ ಪೂಜೆಗೊಳುತ
ಎಲ್ಲ ಪುತ್ರರುಗೂಡಿ ಪುಷ್ಪಕವಿಳಿದೋಜೆ
ಯಲ್ಲಿ ಮುಂದಿಳತರುತಿರ್ದ ॥ ೨೮ ॥

ನಗೆನುಡಿ ನೋಟ ಕೈಸನ್ನೆಯಿಂದಲ್ಲಿಗ
ಲ್ಲಿಗೆ ಸರ್ವಜನರ ಬೀಳ್ಕೊಡುತ
ಸುಗುಣ ಚಕ್ರೇಶ ಹೊಕ್ಕನು ರಾಜಗೃಹವ ಪೆಂ
ಪೊಗೆಯೆ ಸುಪುತ್ರರುಗೂಡಿ ॥ ೨೯ ॥

ಬೀಗಿ ಸುಪುತ್ರರುಗೂಡಿ ಪಂತಿಯೊಳಾ
ರೋಗಣೆಗೈದು ಚಕ್ರೇಶ
ರಾಗಾನುಲೀಲೆಯೊಳಿರ್ದನೆಂಬೆಡೆಗೆ ತೀ
ರ್ಥಾಗಮನದ ಪುಣ್ಯಸಂಧಿ ॥ ೩೦ ॥

ಅಂಬಿಕಾದರ್ಶನ ಸಂಧಿ

ಪುರು ಪರಮೇಶನ ಪಾದಗಂಧೋದಕ
ಶಿರ ಸೋಂಕೆ ಸುಪವಿತ್ರವೆತ್ತು
ತೆರಳಿತು ದಂಡು ನಿಸ್ಸಾಳ ಸೂಳೈಸಲಂ
ಬರ ಭೂಮಿ ಕಿಕ್ಕಿಂಧವಾಗಿ ॥ ೧ ॥

ಭರತೇಶ ತಿರುಗಿದನೆಂಬುದ ಪೌದನ
ಪುರದೊಳಿದ್ದಂಬಿಕೆ ಕೇಳ್ದು
ಪಿರಿದು ಸಂತಸವೆಯ್ದಿ ವಾರ್ತೆಯ ತಂದ ದೂ
ತರಿಗಿತ್ತೊಸೆದು ಮನ್ನಣೆಯ ॥ ೨ ॥

ಮಗನಟ್ಟಿದುಡುಗೊರೆಗಳ ತಾನು ತಂಗಿಯು
ತೆಗೆದುಟ್ಟು ತೊಟ್ಟರ್ತಿವಟ್ಟು
ಮುಗುಳಂಬಗದರ ವೃತ್ತಾಂತವನರುಹಿ ಮೂ
ಜಗವನಾಳ್ದಂತಿರ್ದರವರು ॥ ೩ ॥

ನಡೆದಿನ್ನು ಹತ್ತೆಂಟುದಿನಕೆಮ್ಮ ಪುರದ ಮುಂ
ಗಡೆಗೆ ದಂಡೆಯ್ದುವುದೆನಲು
ಪಡೆದ ತಾಯಲ್ಲವೆ ತಾನಷ್ಟು ದಿನಮುಟ್ಟ
ತಡೆದಿರಲಾರದೆಯ್ದಿದಳು ॥ ೪ ॥

ಭರತಣ್ಣನೆಲ್ಲಿದ್ದನದೆ ಪುರ ನನ್ನೆದೆ
ತರಹರಿಸದೆ ಪೋಪೆ ನಾನು
ಪುರವ ಹೊಕ್ಕಾಗ ನೀವೆಯ್ತಹುದೆಂದು ಬಿ
ತ್ತರಿಸಿ ತಂಗಿಯ ನಿಲಿಸಿದಳು ॥ ೫ ॥

ಆರು ಅರಿಯದಂತೆ ದುಳುದುಳನೆಯ್ದಿ ಬೀ
ಡಾರವ ಹೊಕ್ಕಾಗ ತನ್ನ
ನಾರಿಯರ್ತಾನು ಬೆಕ್ಕಸಬಡಬೇಕೆಂದು
ಮಾರನನೊಡಬಡಿಸಿದಳು ॥ ೬ ॥

ಪಲ್ಲಕ್ಕಿಯೊಳು ಪೋಗೆ ತಡವಹುದದು ಬೇಡ
ಫುಲ್ಲಪುಷ್ಪಕವೇರಿ ಗಮಿಸಿ
ನಿಲ್ಲದಿಂದೆ ಕಾಣ್ಪೆನಣ್ಣನನೆಂದಿನಿ
ವಿಲ್ಲನ ಬೀಳ್ಕೊಂಡಳೊಡನೆ ॥ ೭ ॥

ಕ್ಷಣಕೆ ಪುಷ್ಪಕ ಸೇನೆ ಮುಟ್ಟಲಾಯ್ತೆನೆ ಬಂದು
ದೆಣಿಕೆಯಿಲ್ಲದ ಕಟಕವನು
ಗುಣರತ್ನ ನಂಬಿಗೆ ಮತ್ತೊಯ್ಯನಂಬರಾಂ
ಗಣದಲ್ಲಿ ನೋಡುತೆಯ್ದಿದಳು ॥ ೮ ॥

ಮುಂಗಡೆಯೊಳು ಸುರವೀರ ನಂಬುಗೆವಂತ
ರಂಗಯ್ಯನೆತ್ತಿ ಹೋಯೆಂದು
ಡಂಗುರಿಸಿದರೆಮ್ಮ ಸ್ವಾಮಿಯಂಬಿಕೆ ಬಿಜ
ಯಂಗೈದಳೆಂದು ಪಾಯ್ದಳಕೆ ॥ ೯ ॥

ಪಟುಮತಿಯಿಂದವರಾಡಲಾ ನುಡಿ ಕರ್ಣ
ಪುಟದಲ್ಲಿ ಬೀಳಲಾಕ್ಷಣವೆ
ನಿಟಲಕೆ ಕರವಿಟ್ಟು ಜಯ ಜಯಯೆಂದೆಲ್ಲ
ಕಟಕ ಬೊಬ್ಬಿರಿದುದಂದಲ್ಲಿ ॥ ೧೦ ॥

ಅವರ ಕಂಡವರು ಮತ್ತವರ ಕಂಡಾಚೆಯಿ
ದ್ದವರವರಿಂದಾಚೆಯವರು
ತವ ತವಗೆಲ್ಲರು ಜಯ ಜಯಯೆಂದು ಘೋ
ಷವ ಮಾಡಿದರು ಸೇನೆತುಂಬಿ ॥ ೧೧ ॥

ಬಡಿವ ತಂಬಟ ಭೇರಿ ಮಿಡಿವ ಕಹಳೆ ಕೊಂಬು
ಸುಡುವ ಪೆಟಲು ಕೂಡೆ ನೆಗೆವ
ಗುಡಿ ಕೇತು ತೋರಣದಿಂದ ಪಾಯ್ದಳವೆಲ್ಲ
ಸಡಗರಗೊಂಡುದತ್ತಿತ್ತ ॥ ೧೨ ॥

ಪಡೆಯೆಲ್ಲ ಬಳ್ಳಿಯ ಮೊದಲನಲುಗಲೆಲ್ಲ
ಕುಡಿಗಳು ಮಿಸುಕಿದಂತಾಯ್ತು
ಬಡವನ ಜನನಿಯೆ ಪಟ್ಟಂಡದೆರೆಯನ
ಪಡೆದಳೆಯ್ತರಲಿದು ಘನವೆ ॥ ೧೩ ॥

ಅರಮನೆಯೊಳಗಿದ್ದ ನೃಪನದ ಕೇಳ್ದು ತೊ
ತ್ತಿರನಟ್ಟಿ ನೋಡಿಸಲವರು
ಹರಿತಂದು ಕಡೆಯ ಬಾಗಿಲ ಸಾರಿ ನೋಡಿ ಚ
ಚ್ಚರದೊಳೋಡಿದರಾಣ್ಮನೆಡೆಗೆ ॥ ೧೪ ॥

ಒಡೆಯ ಬಿನ್ನಹ ನಮ್ಮ ಕಟಕವೆಲ್ಲವು ಬಲು
ಕಡಲು ಕಲಕಿದಂತೆ ಕಲಕಿ
ಪೊಡವಿಯಾಗಸ ತುಂಬಿ ಹರಿದೋಡುತಿದೆ ನಮ್ಮ
ನುಡಿಗೇಳ್ವರಿಲ್ಲೆಂದರವರು ॥ ೧೫ ॥

ಧರೆ ಸಾಧ್ಯವಾಯ್ತೆಂದು ಮೈಮರೆದಾಗಿಂತು
ಬರುತಿರಲೀ ವೇಳೆಯರಿದು
ಅರಿಗಳಾರಾದರು ಮೇಲ್ಗವಿದರೊಯೆಂದು
ಭರತೇಶ ನೆನೆದನೆದೆಯೊಳು ॥ ೧೬ ॥

ಸೌಂದರಿಯರಿಗಂಜದಿರಿರೆಂದು ಪೇಳ್ದು ಸೌ
ನಂದಕವೆಂಬ ಖಂಡೆಯವ
ಕುಂದಣದೊರೆಯಿಂದ ಸುಗಿದನು ಫಣಿ ಹೆರೆ
ಯಿಂದುಚ್ಚಿ ನಿಮಿರಿದಂತಾಯ್ತು ॥ ೧೭ ॥

ಜವನ ನಾಲಗೆಯಂತೆ ಮೆರೆವ ಖಡ್ಗವನಾಂತು
ಯುವತಿಯರೊತ್ತಿ ನಿಂದೆದ್ದು
ಕವಚ ಹರಿಗೆ ಮೊದಲಾದ ಸಂಜೋಗವಿ
ಲ್ಲವನೀಶನೆದ್ದನಿದ್ದಂತೆ ॥ ೧೮ ॥

ರಕ್ಕಸರಾಗಲಿಂದಿದಿರಾದರಾದರೆ
ಹಕ್ಕಿಯನಟ್ಟುವಂತವರ
ದಿಕ್ಕು ದಿಕ್ಕಿಗೆ ತೆಮಳ್ದುವೆನೆಂಬ ವಿಕ್ರಮ
ಮುಕ್ಕಳಿಸುತ ನಡೆತಂದ ॥ ೧೯ ॥

ದಿಗಿದಿಗಿನೆಯ್ತಂದು ಕಡೆಯ ಬಾಗಿಲ ಸಾರ್ದು
ಜಗದೇಕವೀರ ನೋಳ್ಪಾಗ
ಬಿಗಿದ ಚಲ್ಲಣ ಕಾಸೆ ಕೂರಸಿವೆರಸಿ ಕೈ
ಮುಗಿದರು ಕುವರರು ಬಂದು ॥ ೨೦ ॥

ಗಣಬದ್ಧರೊದಗಿದರಷ್ಟರೊಳರಸ ಮುಂ
ದಣ ಪೌಜ ನೋಳ್ಪಾಗ ಮುಂದೆ
ಎಣೆಗೂಡಿ ಶೂರ ವೀರರು ಬೆರಸೆಯ್ತಂದು
ಮಣಿದುಸಿರ್ದರು ಕಾರ್ಯಗತಿಯ ॥ ೨೧ ॥

ಗುರುಹಂಸನಾಥ ನಮ್ಮಮ್ಮಾಜಿಯೆಯ್ತಂದ
ಪರಿಯೆ ಭಾಪೆಂದುಬ್ಬಿ ನಗುತ
ಕರವಾಳ ಭಟನ ಕೈಗಿತ್ತನು ಶೂರವೀ
ರರಿಗಿತ್ತನೊಡನೆ ಮನ್ನಣೆಯ ॥ ೨೨ ॥

ಗಾಳಿಯೆದ್ದಷ್ಟರೊಳ್ಬಂದು ಪುಷ್ಪಕ ಹೊರ
ಪಾಳಯದೊಳವೊಕ್ಕುದೊಡನೆ
ಮೇಲಣಲೋಕದ ದಿವಿಜೆಯಂತಿಳಿದಳಾ
ಲೋಲೆ ಯಶಸ್ವತೀದೇವಿ ॥ ೨೩ ॥

ಹೊದೆದ ದೂವಟವ ನೆವಾಳಿಯಿಟ್ಟೊಡನೊಂದ
ಹೊದೆವುತ ನೃಪ ತನ್ನ ತಾಯ
ಇದಿರಲ್ಲಿ ಸಾಷ್ಟಾಂಗವೆರಗಲಷ್ಟರೊಳಾಕೆ
ಒದಗಿ ಕೈಯೊಡ್ಡಿ ತಡೆದಳು ॥ ೨೪ ॥

ಏರುವ ಜವ್ವನ ಜಾರದೆ ನೆರೆತಲೆ
ದೋರದೆ ಚಿರಬಾಳು ಕಂದ
ಆರು ಖಂಡವ ಬಹುದಿನವಾಳ್ದು ಮುಕ್ತಿಯ
ಸೂರೆಗೊಳ್ಳಿಂದಳು ಕ್ಷಣಕೆ ॥ ೨೫ ॥

ಅರುವತ್ತು ಸಾವಿರ ವರ್ಷವಾಯ್ತಣ್ಣ ನೀ
ನುರೆ ನನ್ನ ಪಕ್ಕದಿಂದಗಲಿ
ಮರಿಯಾನೆ ಇಂದು 1 ಸಂದಿಸಿದೆ 1 ಯಯ್ತೆಂದಪ್ಪಿ
ಮರುಕದೊಳ್ನುಡಿದಳಾ ಜನನಿ ॥ ೨೬ ॥

ಒಡನೆ ಕೈಲಾಗಿತ್ತು ಹೊರಗಣ ಪೌಳಿಯಿಂ
ನಡುವಣ ಪೌಳಗಂಬಿಕೆಯ
ಅಡಿಯಿಡಿಸಿದನು ಚಿಕ್ಕಮ್ಮನ ಕ್ಷೇಮುಗೇ
ಳ್ದೊಡಹುಟ್ಟದನ ಲೇಸ ಕೇಳ್ದು ॥ ೨೭ ॥

ನಡುವಣ ಚಾವಡಿಗೆಯ್ದಿ ಗದ್ದುಗೆಯಲ್ಲಿ
ಪಡೆದಳ ಬಿಜಯಂಗೈಸಿ
ಎಡ ಬಲದಲಿ ಕುವರರು ತಾನು ನಿಂದು ಪೆಂ
ಪಿಡಿಸುತೋಲೈಸಿದರೊಸೆದು ॥ ೨೮ ॥

ಅತ್ತೆ ಬಂದುದ ಸೊಸೆಯರು ಕೇಳ್ದು ನವ್ಯ ಸಂ
ಪತ್ತು ಬಂದಂತರ್ತಿವಡುತ
ಒತ್ತಿ ಬಂದರು ಮಱು ಮನದ ಸಂತಸವೆಂತೊ
ತತ್ತರಗೊಂಡು ತಮ್ಮೊಳಗೆ ॥ ೨೯ ॥

1 ಸಂದಿಸಿದೆ 1 ಯೆಂದಪ್ಪಿ

ಸಡಿಲುವ ಮುಡಿಯ ಸಾಗಿಸದೆ ಸೇವಕಿಯರ
ತಡಹದೆ ಪತಿಗೆ ಶಂಕಿಸದೆ
ನಡೆತರುತಿರ್ದರು ಸೊಕ್ಕಿದಾನೆಯ ಹಿಂಡ
ತಡೆಯಬಿಟ್ಟಂತೆ ಲಗ್ಗೆಯೊಳು ॥ ೩೦ ॥

ಗೆಲುವಾಂತು ಸೊಸೆಯರೆಯ್ತರುತಿರಲತ್ತೆ ಕಂ
ಗಳು ತುಂಬಿ ಕಂಡುಬ್ಬಿ ನಗುತ
ಎಲೆಲೆ ನನ್ನನುಜರ ಸುತೆಯರು ಬಂದರೊ
ನಲವ ತಂದರೊಯೆಂದಳಿನಗೆ ॥ ೩೧ ॥

ಮೊಗವೆಲ್ಲ ನಗೆ ತನುವೆಲ್ಲ ಪುಳಕ ಕಣ್ಣೊ
ಳೊಗುವ ಬಾಷ್ಪಗಳಿಂದ ಸಾರಿ
ದುಗುಲ ನಿವಾಳಿಯಿಟ್ಟತ್ತೆಯ ಪಜ್ಜೆಗೆ
ಬಗೆಮೆಚ್ಚಿ ನೊಸಲಿಟ್ಟರವರು ॥ ೩೨ ॥

ತರತರದೊಳು ಬಂದು ನಮಿಸುವ ಸೊಸೆಯರಿ
ಲ್ಲರ ನೋಡಿ ನಗುತಲಾ ದೇವಿ
ಶಿರವಿಡಿದೆತ್ತೆತ್ತಿ ಹರಸುತಿರ್ದಳು ಬಲು
ಪರಿಷೆಯ ದೇವತೆಯಂತೆ ॥ ೩೩ ॥

ವಂದನೆ ಮುಗಿದ ಮೇಲತ್ಯಮ್ಮ ನಾವೆಲ್ಲ
ರಂದು ಕೈಕೊಂಡ ನೇಮಗಳು
ಇಂದಿಗೆ ಸಂಪೂರ್ಣವೆಂದರು ಬಲುವ್ರತ
ಸಂದುವೆ ಲೇಸೆಂದಳಾಕೆ ॥ ೩೪ ॥

ಸೊಸೆಯರಾಕೆಗೆ ನಮಿಸಿದ ಮೇಲೆ ಸೊಸೆಯರ
ಸೊಸೆಯರು ನಮಿಸಿದರಾಗ
ವಸುಧೇಶ ಚಕ್ರೇಶ ತಾಯೊಡನೊಂದ ಸಂ
ತಸವಾಂತು ನುಡಿದನೇನೆಂಬೆ ॥ ೩೫ ॥

ನಿಮ್ಮ ಸೊಸೆಯರ ನೀವಂದು ಹರಸಲಾಗಿ
ಸುಮ್ಮಾನದೊಳು ಬಾಳುತಹರೆ
ನಮ್ಮ ಸೊಸೆಯರಿವರನು ನೋಡಿ ಹರಸಬೇ
ಕಮ್ಮಾಜಿಯೆಂದನರ್ತಿಯೊಳು ॥ ೩೬ ॥

ಅಹುದೆ ಕೇಳರಸಣ್ಣ ನಿನ್ನ ಸೊಸೆಯರೆನ್ನ
ಮಹಿಮೆಯ ಸೊಸೆಯರಂದದೊಳು
ಬಹು ಸುಖದೊಳು ಬಾಳಲೆಂದು ಗಹ
ಗಹಿಸಿದಳ್ಬಿನದಕೆ ಮಗನ ॥ ೩೭ ॥

ಸರ್ವರು ಬಂದರೇಕಕ್ಕಾಜಿ ಬಾರಳೆಂ
ದುರ್ವಿ ಪೆಂಗಳು ನೋಡುವಾಗ
ಸಾರ್ವಭೌಮನ ಪಟ್ಟದರಸಿಯಲ್ಲವೆ ಬಂದ
ಳುರ್ವಿಯ ಸಿರಿಯೆ ಬಹಂತೆ ॥ ೩೮ ॥

ಸಿಂಗರಿಸಿದ ಸತಿಯರ ಬಳಸಿನ್ನೊಳು ತ
ನ್ನಂಗಶೃಂಗಾರ ವೆಗ್ಗಳಿಸೆ
ಅಂಗದ ಕಾಂತಿಯೊಳ್ಮಡು ಗಟ್ಟಿ ತುಳುಕೆ ಲ
ತಾಂಗಿ ಬಂದಳು ವಿಲಾಸದೊಳು ॥ ೩೯ ॥

ತುಂಬುಜವ್ವನ ತುಂಬಿದಂಗ ಮತ್ತದರಲ್ಲಿ
ತುಂಬಿ ತುಳುಕುವ ಲಾವಣ್ಯ
ತುಂಬಿದ ಗಾಡಿಯೊಳ್ಬರುತಿದ್ದ ಸೊಸೆಯ ಕ
ಣ್ತುಂಬ ನೋಡಿದಳತ್ತೆ ಕೂರ್ತು ॥ ೪೦ ॥

ಕಚ್ಛೇಂದ್ರಸುತೆ ಸುಭದ್ರಾದೇವಿ ಗುಣರತ್ನ
ಗುಚ್ಛದೊಳೆಸೆವ ಸ್ತ್ರೀ ರತ್ನ
ಅಚ್ಛಾವಧಾನ ಸಾರ್ತಂದಳೆಂದರಿಪಿದ
ರಿಚ್ಛೆಯೊಳ್ಕಂಬಿಕಾತಿಯರು ॥ ೪೧ ॥

ಪಟ್ಟನಿವಾಳಯಿಟ್ಟೊಡನೊಂದು ಹಾರವ
ನಿಟ್ಟು ನಿವಾಳಯ ಮೇಲೆ
ತೊಟ್ಟನೆರಗಲತ್ತೆ ತೆಗೆದಪ್ಪಿಕೊಂಡರ್ತಿ
ವಟ್ಟು ಹರಸಿದಳಾ ಸೊಸೆಯ ॥ ೪೨ ॥

ಅಣ್ಣನ ಕಂಡವೊಲಾಯ್ತೆಂದು ನುಡಿದಳು
ಹಣ್ಣಾದುದಿಬ್ಬರ ಹೃದಯ
ಕಣ್ಣೊಳಿಬ್ಬರಿಗುಕ್ಕುವಶ್ರು ಸೋದರಿಕೆಯ
ಬಿಣ್ಣತೆನಿಪ ಮೋಹವಲ್ತೆ ॥ ೪೩ ॥

ಘಳಿಯಾರದೊಳಗಪ್ಪರೊಳು ಶಂಖನಾದವು
ಚ್ಚಳಿಸಿತಾರೋಗಣೆಗಿನ್ನು
ತಳರ್ವುದುತ್ತಮವೆಂದು ಚಕ್ರೇಶ ತನ್ನಮ್ಮ
ಗೆಳಸಿ ಬಿನ್ನವಿಸಿದನೊಡನೆ ॥ ೪೪ ॥

ಚಾವಡಿಯಿಂದೆದ್ದು ಸರ್ವರು ಬೇರೆ ಬೇ
ರಾವಾಸಗಳ ಹೊಕ್ಕು ಮಿಂದು
ದೇವ ಪೂಜೆಯ ಮಾಡಿ ಭೋಜನ ಗೃಹಕೆ ಮ
ಹಾ ವಿಭವದಿ ಹೊಕ್ಕರೊಡನೆ ॥ ೪೫ ॥

ಇಂಬಿಂದ ಪುತ್ರ ಪೌತ್ರರು ಸೊಸೆಯರ್ಕಳು
ತುಂಬಿ ಮತ್ತವರ ಸೊಸೆಯರು
ಅಂಬಿಕೆಯೊಡನೆ ಪಂತಿಯೊಳುಂಡು ತಣಿದರಿ
ದಂಬಿಕಾದರ್ಶನ ಸಂಧಿ ॥ ೪೬ ॥

ಕಾಮದೇವಾಸ್ಥಾನ ಸಂಧಿ

ಜನನಿಯ ಕಂಡು ಸಂತಸವ ತಾಳ್ದಾ ಮರು
ದಿನದೊಳು ಭೇರಿ ಸೂಳ್ಯಿಸೆ
ಜನನಾಥ ದಂಡೆತ್ತಿ ನಡೆದನು ಧರೆಯ ತೆ
ಕ್ಕನೆ ತನ್ನ ಪಡೆ ತುಂಬಿ ನಡೆಯೆ ॥ ೧ ॥

ಸೇನೆಯೆಲ್ಲರ ಮುಂದೆ ಚಂದ್ರ ಸೂರ್ಯಧ್ವಜ
ಚೀನ ಪತಾಕೆಯೊಗ್ಗಿನೊಳು
ಭಾನುಮಂಡಲ ನಡೆವೊಲು ಚಕ್ರರತ್ನ ಪ್ರ
ಭಾನುಲೀಲೆಯೊಳೆಯ್ದುತಿಹುದು ॥ ೨ ॥

ಹತ್ತೆಂಟು ಪಯಣವ ಬಂದು ಪೌದನಪುರ
ದತ್ತ ಸಾರ್ದಲ್ಲಿಂದ ಮುಂದೆ
ಎತ್ತಿ ನಡೆವೆನೆನೆ ನಿಂದುದು ನಡೆಯದ
ತ್ತಿತ್ತೊಲೆಯದೆ ಚಕ್ರರತ್ನ ॥ ೩ ॥

ಚಕ್ರಿಗೆರಗಿದವರುರ್ವಿಯೊಳ್ನಡೆವುದು
ವಕ್ರಿಸಿದವರ ಸೀಮೆಯೊಳು
ಚಕ್ರ ವೋಗದೆ ನಿಲ್ವುದಾ ಚಕ್ರ ನಿಲೆ ಸೇನಾ
ಚಕ್ರ ವಿಸ್ಮಯಬಟ್ಟುದೆಲ್ಲ ॥ ೪ ॥

ಏನು ಕಾರಣ ನಿಂದಿತೈ ಚಕ್ರವೆಂದು ಪ್ರ
ಧಾನಿಯ ಕೇಳ್ದನಾ ಚಕ್ರಿ
ವಿಾನಾಂಕ ಮೊದಲಾದ ನಿನ್ನ ಸೋದರರು ಬಂ
ದಾನತರಾಗಬೇಕೆಂದ ॥ ೫ ॥

ಬಿಡಿಸಿ ಪಾಯ್ದಳವನಲ್ಲಿ ಲೇಖನವ ತ
ನ್ನೊಡಹುಟ್ಟದವರಿಗಟ್ಟದನು
ಕಡೆಗವರೆಲ್ಲರಾ ಲೇಖನಾರ್ಥವನೋದಿ
ಪೊಡವಿಯಾಸೆಯ ಬಿಟ್ಟರೊಡನೆ ॥ ೬ ॥

ತಂದೆ ಕೊಟ್ಟುಂಬಳಿಯೊಳಗಿರ್ದು ತನಗಿನ್ನು
ವಂದಿಸಿ ಬಾಳ್ವೆವೆಯೆಂದು
ಒಂದನು ನುಡಿಯದೆ ಕೈಲಾಸಗಿರಿಗೆಯ್ದಿ
ತಂದೆಯೊಳ್ತಪದಾಳ್ದರವರು ॥ ೭ ॥

ಕುಡುವಿಲ್ಲ ಪೊರಗಾಗಿ ತೊಂಬತ್ತು ಮೂವರು
ನಡೆದು ದೀಕ್ಷೆಯ ಕೊಂಡರೆಂಬ
ನುಡಿಗೇಳ್ದು ಚಕ್ರೇಶ ಮನದೊಳು ಮರುಗಿದ
ನೊಡನೆ ವಿಕ್ರಮಕೆ ಮೆಚ್ಚಿದನು ॥ ೮ ॥

ಎಲ್ಲರಿಗೋಲೆಯ ಕಳುಹಿದ್ದನಾ ವೋಲೆ
ಯಲ್ಲಿ ಬಂದೆರಗುವುದೆಂಬ
ಸೊಲ್ಲಿರೆ ನೊಂದವರ್ತಪಸುದಾಳ್ದರು ಕಬ್ಬು
ವಿಲ್ಲಗಂತೋಲೆ ಹೋಯ್ತಿಲ್ಲ ॥ ೯ ॥

ಈಕ್ಷಿಸಿ ಸಖರೆಲ್ಲರನುಮತದಿಂದೊಬ್ಬ
ದಕ್ಷಿಣಾಂಕನ ಚಕ್ರಿ ಕರೆದು
ಇಕ್ಷುಚಾಪನ ತಹುದೆಂದಟ್ಟಲವ ಹೋಗಿ
ಸುಕ್ಷೇಮದೊಳು ಹೊಕ್ಕ ಪುರವ ॥ ೧೦ ॥

ಸತ್ತಿಗೆ ಚಮರ ಚಮ್ಮಾವುಗೆಯುಳಿದು ಬೆಂ
ಬತ್ತಿದ ಸರ್ವರ ನಿಲಿಸಿ
ಮತ್ತೆ ತಾನೊರ್ವನೆ ಕಡೆಯ ಹಜಾರದ
ಮುತ್ತಿನಬಾಗಿಲ ಸಾರ್ದ ॥ ೧೧ ॥

ಮಾರನೆ ತಾನು ಬಂದುದನವಸರದೊಬ್ಬ
ಸೌರಭಾನಿಲಗೆ ಪೇಳ್ದಟ್ಟ
ದ್ವಾರದೊಳಿರ್ದು ವೋಲಗಕೆ ಪೋಪುದ್ದಂಡ
ನಾರಿಯರಿರವನೀಕ್ಷಿಸಿದ ॥ ೧೨ ॥

ನಾರಿಯರೊಳಪ್ಪೊಕ್ಕರೊಡನೆ ಮುನ್ನೆಯ್ದಿದ
ದ್ವಾರ ಸೌರಭ ಮಗುಳಿದನು
ದಾರಿಯ ನೋಡುತ ನಿಂದಿರ್ದ ದಕ್ಷಿಣ
ಗಾರಯ್ದು ನುಡಿದನಿಂತೆಂದು ॥ ೧೩ ॥

ಸ್ವಾಮಿಯೋಲಗವಾದ ನೀನೆಯ್ದಿದಿರವ ಕೇ
ಳ್ದಾವೋದಿಸಿದನು ಬಾರೆಂದು
ಕಾಮನೋಲಗಕೆ ಚಕ್ರೇಶನ ಸಖನ ಸು
ಪ್ರೇಮದೊಳೊಯ್ದನಾ ಸುಮುಖ ॥ ೧೪ ॥

ಪುತ್ತಳಿಗೆಲಸದ ಬಾಗಿಲು ಕಾಂಚನ
ಭಿತ್ತಿ ಮಾಣಿಕದ ಕಂಭಗಳು
ಕತ್ತುರಿ ಸಾರಣೆ ಪೂವಲಿ ನೆಲದೊಳು
ಮೆತ್ತ ಮೆತ್ತನೆ ಬರುತಿರ್ದ ॥ ೧೫ ॥

ಬರುತಿಪ್ಪನಿವನಾರು ದಕ್ಷಿಣಾಂಕನೊ ಪಂಚ
ಶರನ ಕಾಣಲ್ಕೆ ವೋದಪನೊ
ಭರತೇಶನೆಲ್ಲಿದ್ದನಿವನೇಕೆ ಬಂದನೆಂ
ದರಗಿಳಿ ನುಡಿದುವಲ್ಲಲ್ಲಿ ॥ ೧೬ ॥

ಅಗ್ಗದ ದೊರೆಯ ಕೆಳೆಯನೆಂಬ ಗರ್ವವೊ
ಮೊಗ್ಗೆಗೋಲನ ಸಭೆಗಿನಿಸು
ತಗ್ಗಿ ಬಾ ನೋಡಿ ಬಾ ಮೆಲ್ಲನೆ ಬಾರೆಂದು
ಹೆಗ್ಗಾರ ನುಡಿದುವಲ್ಲಲ್ಲಿ ॥ ೧೭ ॥

ಮೋರೆಯ ತಾಗುವಂತೊಂದು ಪಾರಿವಪಕ್ಕಿ
ಪಾರಿ ಬಹಾಗ ದಕ್ಷಿಣನು
ಮೋರೆಯನೊಲೆದು ಕೈಯೊಡ್ಡಿ ಕಳೆಯೆ ಕಂಡ
ನೀರೆವೆಂಗಳು ನಕ್ಕರೊಸೆದು ॥ ೧೮ ॥

ಆರಯ್ಸುತೋಸರಿಸುತ ನಡೆತಪ್ಪಾಗ
ನಾರಿಯರೋಲಗದೊಳಗೆ
ದೂರದೊಳಿದಿರೊಳೊಪ್ಪುವ ಮನಸಿಜನ ಕ
ಣ್ಣಾರೆ ಕಂಡನು ದಕ್ಷಿಣಾಂಕ ॥ ೧೯ ॥

ಅರಲಸಿಂಹಾಸನದಗ್ರದೊಳಂಚೆಯ
ಕೊರಳ ತುಪ್ಪುಳ ಗದ್ದುಗೆಯೊಳು
ನರ ಸುರ ನಾಗಲೋಕದ ಮೋಹನಾಂಗವೆ
ಪುರುಷರೂಪಾಂತವೊಲಿರ್ದ ॥ ೨೦ ॥

ಪಚ್ಚೆಯ ಪ್ರತಿಮೆ ಪ್ರಾಣಂಬೆತ್ತು ನವರತ್ನ
ದಚ್ಚದೊಡಿಗೆ ತೊಟ್ಟು ತೋರ್ಪ
ಮೆಚ್ಚಿನೊಳಿರ್ದನಾ ಕಾವದೇವನು ನೋಳ್ಪ
ರಚ್ಚರಿವಡುವ ಚೆಲ್ವಿನೊಳು ॥ ೨೧ ॥

ಕೋಗಿಲೆವಿಡಿದರಗಿಳಿಗಳ ಪಿಡಿದನು
ರಾಗದಿಂದಂಚೆಯ ಪಿಡಿದ
ಸೋಗೆನವಿಲ ಪಿಡಿದಬಲೆಯರಿದ್ದರು
ಪೂಗೋಲನಾಸ್ಥಾನದಲ್ಲಿ ॥ ೨೨ ॥

ಗಾನ ಕೇಳುತ ತನ್ನ ಸಖರೆಂಟು ಮಂದಿ ಸಂ
ಧಾನಿಪರ್ಥಕೆ ಮೆಚ್ಚಿ ನಗುತ
ವಿಾನಾಂಕನಿರ್ದನು ಮಲಗ ತಾನೊರಗಿ ಸು
ಮ್ಮಾನದೊಳ್ನೀಡಿ ಪಾದಗಳ ॥ ೨೩ ॥

ಮಲಯಮಾರುತ ಚರಣವನೊತ್ತುತಿರೆ ಹಸ್ತ
ತಳವ ಮಂದಾನಿಲನೊತ್ತೆ
ಕೆಳೆಯರ ನುಡಿಗೇಳುತಿದಿರ ಮಂತ್ರಿಯ ನೋಡು
ತೊಲವಿನೊಳಿದ್ದನಾ ಮದನ ॥ ೨೪ ॥

ಒತ್ತಿನೊಳನ್ಯರಿದ್ದಾಗ ಗಂಭೀರಾಂಗ
ವೆತ್ತಿಹರವ ಚಕ್ರಿಯಲ್ಲ
ಚಿತ್ತಜನಲ್ಲವೆ ಓಲಗದೊಳು ತನ್ನ
ಚಿತ್ತಕೆ ಬಂದವೊಲಿರ್ದ ॥ ೨೫ ॥

ಕಟ್ಟದಿರೊಳು ತೋರ್ಪ ಕಾಮನ ನೋಡುತ
ಮುಟ್ಟಲೆಯ್ದಿದನು ದಕ್ಷಿಣನು
ಕಟ್ಟಿತು ಸಂಗೀತ ಕಳಕಂಠನೆಂಬೊರ್ವ
ಕಟ್ಟಗೆಕಾರನಿಂತೆಂದ ॥ ೨೬ ॥

ಮನ್ಮಥವೀರ ಮರ್ತ್ಯಾಮರ ನಾಗಲೋ
ಕೋನ್ಮದಕಾರಿ ಸಂಹಾರಿ
ಚಿನ್ಮಾರ್ಗಚಕ್ರಿಯ ಸಖ ಬಂದನವಧಾನ
ಸನ್ಮೋಹಿ ಸಲೆ ಪರಾಕೆಂದ ॥ ೨೭ ॥

ಚಕ್ರೇಶನನುಜಾತ ನರ ಸುರ ನಾಗ ಭೂ
ಚಕ್ರ ಮೋಹನಮೂಲಕರ್ತ
ಚಕ್ರವಾಕಧ್ವಜ ತೇ ನಮೋ ನಮಯೆಂದು
ಚಕ್ರಿಯ ಸಖನೆದ್ದು ನಿಂದ ॥ ೨೮ ॥

ಬಂದುದುತ್ತಮವಾದುದಿತ್ತ ಬಾ ದಕ್ಷಿಣ
ಯೆಂದೊತ್ತಿನೊಳು ಕುಳ್ಳಿರಿಸಿ
ಕಂದರ್ಪ ನಗುತ ಕುಳ್ಳಿರವೇಳೆ ಕುಳಿತನ
ದೊಂದು ಸಾಲದೆ ರಾಜತೇಜ ॥ ೨೯ ॥

ಸುಳಿಯದಿರಬಲೆ ಸೋಂಕದಿರೆಲೆ ಪ್ರಬಲೆ ನಿ
ಮ್ಮೊಳು ಮಾತು ಸಾಕು ಕಂಕಣದ
ಬಳೆಗಳ ದನಿದೋರದಿರಿ ಪೆಂಗಳೆಂದಲ್ಲಿ
ಕಳಕಂಠ ಸೊಬಗುದೋರಿದನು ॥ ೩೦ ॥

ಸುತ್ತಲೆಲ್ಲರು ಸುಮ್ಮನಾಲಿಸುತಿದ್ದರು
ಚಿತ್ತಜನೊಡನೆ ದಕ್ಷಿಣನ
ಎತ್ತಣಿಂ ಬಂದೆ ನಿನ್ನೊಡೆಯನನೆಲ್ಲೆಲ್ಲಿ
ಸುತ್ತಿಸಿ ತಂದೆಯ್ಯೆಯೆಂದ ॥ ೩೧ ॥

ಎತ್ತಣಿಂದೆಂಬೆಯ ನಿನ್ನ ಕಾಣುವ ಪುಣ್ಯ
ದತ್ತಣಿಂ ಬಂದೆನಂತಿರಲಿ
ಸುತ್ತಿಸಿ ತಹರಾರು ಜಗವ ಸುತ್ತಿಪ ಕಾಮ
ನತ್ತಣಿಂ ಪಿರಿಯನನೆಂದ ॥ ೩೨ ॥

ಲೀಲಾಮಾತ್ರದಿ ಧರೆ ಸಾಧ್ಯವಾಯ್ತಾದ
ಮೇಲಾ ಸಾಹಸವ ತೋರುವನು
ಪೇಳಲಚ್ಚರಿ ಚಕ್ರಧರನ ಸಂಪತ್ತ ಪೂ
ಗೋಲ ಬಲ್ಲಹ ಲಾಲಿಸೆಂದ ॥ ೩೩ ॥

ಕಮ್ಮಗೋಲಿಂದ ಮೂಜಗವನಂಡಲೆವಾತ
ತಮ್ಮನು ಭಟರಿಂದ ನೃಪರ
ಹೆಮ್ಮೆಯ ಬಿಡಿಸುವನಣ್ಣನೆಂಬಾಗ ಹೊ
ನಿಮ್ಮ ಮಿಕ್ಕಧಿಕರಾರೆಂದ ॥ ೩೪ ॥

ನೀವಗ್ರಗಣ್ಯರೆಂದಾಡಲೇತಕೆ ನಿಮ್ಮ
ಸೇವಾನುಮತದೊಳಾಚರಿಪ
ನಾವೆಲ್ಲರಧಿಕರೆಂಬುದು ಲೋಕವೆಂದನಾ
ಕಾವನ ಸಖರು ಲೇಸೆನಲು ॥ ೩೫ ॥

ಪ್ರಣಯಚಂದ್ರಮ ಮಂತ್ರಿ ಕೇಳಿದೈ ನುಡಿವ ದ
ಕ್ಷಿಣನ ಚಾತುರ್ಯವನೆಂದ
ಗುಣವನುಳ್ಳದನಾಡಿದನು ಸ್ವಾಮಿಯೆಂದು ಪೂ
ಗಣಿಯಗಾ ಮಂತ್ರಿ ಸೂಚಿಸಿದ ||೩೬||

ನೀನತಿ ದಕ್ಷ ನಿನ್ನಣ್ಣನಗ್ಗಳನೆಂಬು
ದೇನುಪಚಾರದ ನುಡಿಯೆ
ಭಾನು ಚಂದ್ರರ ಲೋಕ ಬಣ್ಣಿಪಂತಿಹುದೆಂದು
ಮಾನಾಂಕಗೊರೆದನಾ ಸಚಿವ ||೩೭||

ಇಂದಿಗೋಲಗ ಸಾಕು ದಕ್ಷಿಣನಾಯಕ
ಬಂದಲಸಿಕೆಯ ಹಿಂಗಿಸಲಿ
ಮುಂದಾತನೆಯ್ತಂದ ಕಾರ್ಯವ ಬೆಸಗೊಂಬ
ವೆಂದನಾ ಮಂತ್ರಿ ಮನ್ಮಥಗೆ ||೩೮||

ಉಡುಗೊರೆಯಿತ್ತು ದಕ್ಷಿಣಗೆ ಮತ್ತೀತನ
ಪಡೆಯ ಮನ್ನಿಸು ಮಂತ್ರಿಯೆಂದ
ನಡೆಯಿಂದು ವಿಶ್ರಮಿಸೆಂದು ತನ್ನಯ ಸಖ
ರೊಡನೆ ಬೀಳ್ಕೊಟ್ಟನಾ ಮದನ ||೩೯||

ಈ ಮಂತ್ರಿಸಖರು ತನ್ನತ್ತಲೀ ಭುಜಬಲಿ
ಸ್ವಾಮಿ ಬೇರಾಗಿದ್ದನೆಂದು
ಕ್ಷೇಮಾರ್ಥಿ ದಕ್ಷಿಣ ನೆನೆವುತೆಯ್ದಿದನಿದು
ಕಾಮದೇವಾಸ್ಥಾನ ಸಂಧಿ ||೪೦||

ಸಂಧಾನಭಂಗ ಸಂಧಿ

ಮದನನ ಸಖರಿಗೆ ಮಂತ್ರಿಗೆ ದಕ್ಷಿಣ
ಹೃದಯದರ್ಥವನಾಡಿ ತೋರಿ
ಹದಗೈದು ಕೊಂಡೆಯ್ದಿ ಮರುದಿನ ಕಂಡನು
ಮದನನಾಸ್ಥಾನದಲ್ಲಿ ॥ ೧ ॥

ಬಿನ್ನಹ ಸ್ವಾಮಿ ದೊಡ್ಡೊಡೆಯನ ಸೋದರ
ನನ್ನ ಚಿಕ್ಕೊಡೆಯ ನಾಡೊಡೆಯ
ಚಿನ್ನಿಗರೊಡೆಯ ನಿನ್ನವನ ಬಿನ್ನಹವ ಪ್ರ
ಸನ್ನ ಚಿತ್ತದಿ ಲಾಲಿಸೆಂದ ॥ ೨ ॥

ರಾಯಗೆ ಧರೆ ಸಾಧ್ಯವಾಯ್ತಾದ ಮೇಲೆ ಮಾ
ರ್ಗಾಯದೊಳಯ್ಯನ ಕಂಡ
ತಾಯ ಕಂಡನು ಮೇಲೆ ತಮ್ಮನ ಕಾಣ್ಬರ್ತಿ
ಯಾಯಿತೆಂದಾಯೆದೆಯೊಳಗೆ ॥ ೩ ॥

ದೊರೆಗಳಿಲ್ಲೆರು ನೀವು ಸಂಧಿಸಿ ನುಡಿವೊಂದು
ಸಿರಿಗಾಣಲರ್ತಿಸುತಹರೆ
ತೆರಳ್ವಾಗ ಸ್ಮರಪುರದಿದಿರಲ್ಲಿ ಸಂಧಿಸೆ
ಧರಣೀಶನದಕೊಡಂಬಟ್ಟ ॥ ೪ ॥

ದೂರವಲ್ಲೀಗ ನಿನ್ನೂರ ಸಮಿಾಪದೊ
ಳಾ ರಾಯನಿದ್ದನರ್ತಿಯೊಳು
ಹಾರಯ್ಸಿದವರ ಕಣ್ಣರ್ತಿಯ ಸಲಿಸೆಲೆ
ಮಾರಯೆಂದೊಡನಡ್ಡಬಿದ್ದ ॥ ೫ ॥

ಏಳೇಳು ಕುಳಿತು ಮಾತಾಡೆನೆ ಕುಳಿತನು
ಕೇಳು ದಕ್ಷಿಣ ನಿಮ್ಮ ಪುರಕೆ
ಲೀಲೆಯೊಳೆಯ್ದಿರೈ ನಿಮ್ಮಾಣೆ ಪೇಳ್ದಂತೆ
ನಾಳೆ ನಾನೆಯ್ತು ಹೆನೆಂದ ॥ ೬ ॥

ಬೇಡವೈ ಸ್ವಾಮಿ ನೀನೆಯ್ದಿ ನಿಮ್ಮಣ್ಣನ
ನೋಡಿ ನಿಮ್ಮಯ ವಿಳಾಸವನು
ನೋಡದ ಪಡೆಗೆ ಸಂತಸಮಾಡು ವಿರಸವ
ಮಾಡುವುದುಚಿತವೆಯೆಂದ ॥ ೭ ॥

ಬಲ್ಲೆವೈ ನೀನಿಷ್ಟು ಜಾಣನೆಂಬುದ ಮಾತಿ
ನಲ್ಲಿ ನಮ್ಮನು ಜಾಳ್ಮೆಸದಿರು
ಸಲ್ಲದು ನನಗೀಗ ಬಹುದಕೆ ಹೋಗೆಂದು
ಮಲ್ಲಿಗೆಗೋಲನಾಡಿದನು ॥ ೮ ॥

ಅಣ್ಣನೊತ್ತಿಗೆ ಗಮಿಸುವರಾಗದೆಂದಿಂತು
ಬಣ್ಣಿಸುವರೆ ಸ್ವಾಮಿಯೆಂದ
ಅಣ್ಣನಲ್ಲಿ ಮಗಾತನೊಡೆಯನ್ನೆ ನೀನಿಂತು
ಬಣ್ಣವಿಕ್ಕದಿರು ಸಾಕೆಂದ ॥ ೯ ॥

ಚಕ್ರ ನಿಂದರೆ ನನ್ನ ಕಾಣಿಸಿಕೊಂಬ ಪ
ರಾಕ್ರಮಾರ್ಥಕೆ ಬೀಡುಬಿಟ್ಟು
ಚಕ್ರಿ ಕಳುಹೆ ಬಂದು ಬಣ್ಣವ ನುಡಿಯುವೈ
ವಕ್ರವನರಿದೆ ಹೋಗೆಂದ ॥ ೧೦ ॥

[1]ನಿಂ[1]ದಿತು ಚಕ್ರ ನೀವಿಬ್ಬರೀ ಸ್ಥಳದಲ್ಲಿ
ಸಂಧಿಸಲೆಂಬರ್ಥಕಾಗಿ
ಮುಂದಿ ಹಾರಿತು ಕಂಡ ನಿಮ್ಮನೋಲೈಸುವೆ
ನೆಂದು [2] ಹಾರದೆ [2] ಚಕ್ರವೆಂದ ॥ ೧೧ ॥

---

1. ಸ (ಳ) 2. ನಿಂದರೆ ರವೆ. (ಳ)

ಒಳಗನರಿಯದಲ್ಲಿ ಜಾಣ್ಮೋರಬೇಕಹು
ದೊಳಗ ಕಂಡವರಿದಿರಿನೊಳು
ಸಲವುದೆ ಜಾಣ್ಮೆ ಸಾಕೈ ಸುಮ್ಮನಿರು ಮಾತ
ಕಲಿತೆಯೆಂದಾಡುವೆಯೆಂದ ॥ ೧೨ ॥

ಏನಿಷ್ಟು ಸೊಕ್ಕು ನಿಮ್ಮೊಡೆಯಗೆ ಧರಣಿಯ
ಭೂನಾಥರೆರಗೆ ತಣಿಯದೆ
ಸೇನೆಯ ಮುಂದೆನ್ನ ನೆರಗಿಸಿಕೊಂಬ ಬ
ಲ್ಮಾನಕೆ ನಾನೆಯ್ದ ಬೇಕೆ ॥ ೧೩ ॥

ಎರಗುವುದಕೆ ಪ್ರಸ್ತುವೇನು ತನ್ನಯ ಹಂಗು
ಕಿರಿದುಂಟೆ ನನಗಯ್ಯನಂದು
ಪಿರಿಚಿ ಕೊಟ್ಟುಂಬಳಿಯಲ್ಲಿ ನಾನಿಹೆನು ಕ
ಣ್ಗರುಬಾಯ್ತೆ ತನಗಿದ ನೋಡಿ ॥ ೧೪ ॥

ಉಂಬಳಿಯೇನು ನಿಮ್ಮಣ್ಣ ನಿನಗೆ ತನ್ನ
ತುಂಬಿದ ಧರೆಯೊಳರ್ಧವನು
ಇಂಬರಿದೀವೆನೆಂದೆಮ್ಮೊಳಾಡಿದನಿಂತು
ಟೆಂಬರೆ ಸ್ವಾಮಿ ನೀನೆಂದ ॥ ೧೫ ॥

ಬಿಡೆಯಲಾ ನಿನ್ನ ಜಾಣ್ಮೆಯ ಮತ್ತು ನನಗೊಂದು
ಪೊಡವಿಯಾಸೆಯ ತೋರಿ ಕರೆದು
ಒಡೆಯನ ಕಾಲ್ಗೆರಗಿಪೆನೆಂದು ನೆನೆವೆಯೈ
ಬಡಮನದವನೆ ನಾನೆಂದ ॥ ೧೬ ॥

ಗುಣಕೆರಗುವೆನಹುದಣ್ಣನೆಂದೊಮ್ಮೆ ಝುಂ
ಕಣೆಗೆರಗುವೆನೆ ತಾನೀಗ
ಅಣಿದೋರಿ ನಿಂದು ಬಣ್ಣಕೆ ನಿನ್ನ ಕಳುಹಿ ಪ್ರೇ
ರಣಿಸುತಿದ್ದನು ಭಾಪು ನೋಡ ॥ ೧೭ ॥

ಕೇಳಿಬ್ಬರರಸಿಯರುಂಟೈಸೆ ದೊರೆ ಪಾಟಿ
ಊಳಿಗವೆಣ್ಣಿಲ್ಲ ಪಿತಗೆ
ಊಳಿಗದವರ ಮಕ್ಕಳ ಕರೆವಂತೆಮ್ಮ
ಕೇಳಬಹುದೆ ನಿಮ್ಮ ನೃಪತಿ ॥ ೧೮ ॥

ಅಟ್ಟೋಲೆಗಳನಟ್ಟಿ ಚಿಕ್ಕ ಚಿಕ್ಕನುಜರ
ದಟ್ಟಿಸಿ ತಪಸಿಗೋಡಿಸಿದ
ದಿಟ್ಟನೆಂಬುದನರಿದೆನಗೀಗ ಕೆಳೆಯನ
ನಟ್ಟದನೈ ಬಲ್ಲೆವೆಂದ ॥ ೧೯ ॥

ಹುಸಿವಿನಯವ ತೋರುತಂಜಿಸುತೆಮ್ಮ ಚಾ
ಳಿಸುವುದ ಕಂಡೆವ್ಮ ಹೃದಯ
ಬಿಸಿಯಾಗದಿಹುದೆ ತಂಪೆನಿಪ ಚಂದನ ಮಥ
ನಿಸೆ ಹೊಸಕಿಡಿ ಸೂಸದಿಹುದೆ ॥ ೨೦ ॥

ಕ್ಷಣಕ್ಷಣಕೆನಗೆ ನಿನ್ನೊಡೆಯನ ಗುಣವನೊ
ಕ್ಕಣಿಸುವಾಗೆದೆಯಲ್ಲಿ ಕೋಪ
ಕುಣಿದಾಡುತಿದೆ ನನ್ನ ಕೆರಳಿಸಬೇಡ ದ
ಕ್ಷಿಣ ಹೋಗು ಹೋಗು ಸಾಕೆಂದ ॥ ೨೧ ॥

ಕಂಬನಿದುಂಬಿದನೊಡನೆದ್ದು ದಕ್ಷಿಣ
ಮುಂಬಟ್ಟಿಯೊಳಗಡ್ಡ ಬಿದ್ದು
ಇಂಬುಗೊಳ್ಳಿಲೆ ಸ್ವಾಮಿ ನಿಮ್ಮ ನೋಯಿಸಿದೆನೇ
ನೆಂಬೆ ನಾನತಿಕ್ರೂರನೆಂದ ॥ ೨೨ ॥

ಒಡೆಯರಿಬ್ಬರನೊಡಗೂಡಿ ನೋಡುವೆವೆಂದು
ಸಡಗರಗೊಂಬೆವು ನಾವು
ಕಡುಪಾಪಿಗಳು ನೆನೆದುದು ಫಲಿಸುವುದೆ ಚಿ
ಕ್ಕೊಡೆಯಯೆಂದತ್ತತ್ತು ನುಡಿದ ॥ ೨೩ ॥

ಮೂಲೋಕಕಮೃತವ ಕರೆವನ ಮನದಲ್ಲಿ
ಜ್ವಾಲೆಗೊಳಿಸಿದೆನು ನಾನು
ಹಾಲು ಬಪ್ಪಲ್ಲಿ ನೆತ್ತರ ಬರಿಸಿದೆ ನಾನು
ಮೂಲೋಕಕತಿಪಾಪಿಯೆಂದ ॥ ೨೪ ॥

ಪಾಪಿಯಲ್ಲೀಳೀಳು ಪೋಗೆಂದನೊಡನೆದ್ದು
ಪೋಪೆನೆಂದವನು ಪೋಗುತಿರೆ
ಹೋ ಪೋಗದಿರು ದಕ್ಷಿಣಾಂಕ ನಿಲ್ಲೆಂದು ಸ
ಮಾಪದ ಮಂತ್ರಿ ಮಾರ್ಕೊಂಡ ॥ ೨೫ ॥

ಅಂಜುವೆನೊಡೆಯ ನಿಮ್ಮಯ ಕೋಪಕಿದಿರಾರು
ನೀಂ ಜಾಣದೊರೆಯದರಿಂದ
ಕಂಜಾಸ್ತ್ರ ನೀವಿಕ್ಕಿದಾಜ್ಞೆಗೊಳಗು ಲಾಲಿ
ಸಂಜದಿನ್ನಾಡುವೆನೆಂದ ॥ ೨೬ ॥

ಪುರುಷರಮೇಶನ ಸುತರು ನೀವಿಬ್ಬರು
ವಿರಸದ ನುಡಿ ನುಡಿದಾಗ
ಧರೆಯೊಳಿದ್ದವರಿನ್ನು ಸಹಜದಿ ನಡೆವರೆ
ಮರಳುಗೊಂಡಾಡರೆ ವಿಭುವೆ ॥ ೨೭ ॥

ಗುರುವಿಗೆ ಶಿಷ್ಯ ತಂದೆಗೆ ಮಗ ತನ್ನ ಯ
ಪುರುಷಗೆ ಸ್ತ್ರೀಯೆರಗದಿರೆ
ಹಿರಿಯಣ್ಣಗನುಜರೆರಗದಾಗ ಮುಳಿ ಬೆಳೆ
ಧರೆಯೊಳುಂಟೆ ಸ್ವಾಮಿಯೆಂದ ॥ ೨೮ ॥

ಅದರ ಮೇಲೊಡೆಯ ನಿನ್ನಣ್ಣನು ನೀನು ಲೋ
ಕದೊಳಿಲ್ಲರಂದದ ನೃಪರೆ
ತ್ರಿದಶಲೋಕದ ಮೆಚ್ಚಿನರಸುಗಳಲ್ಲವೆ
ಇದ ನೆನೆವರೆ ಸ್ವಾಮಿಯೆಂದ ॥ ೨೯ ॥

ಜನಕಗ್ರಗಣ್ಯರು ನೀವು ಕೂಡಿರಲದು
ಜಗದ ಸೌಭಾಗ್ಯವೆಮ್ಮರ್ತಿ
ದುಗುಡ ಬೇಡೆಂದು ಮಂತ್ರಿಗೆ ಸನ್ನೆಮಾಡಿ ಕೈ
ಮುಗಿದಡ್ಡಬಿದ್ದರಾ ಸಖರು ॥ ೩೦ ॥

ನನಗತಿಹಿತರೆಂದು ಕಂಡಿದ್ದೆ ನೀವೆನ್ನ
ಮನಕಿಚ್ಛೆಯಿಲ್ಲದ ನುಡಿಯ
ಅನುವಡಿಸುವರೆ ನನ್ನವರೆಂದರೆನ್ನ ಮಾ
ತನೆ ಮೆಚ್ಚಬೇಡವೆಯೆಂದ ॥ ೩೧ ॥

ನೋಡಿರೈ ಚಕ್ರಿಯಿಚ್ಛೆಯನೆ ಚಕ್ರಿಯ ಸಖ
ನಾಡಿದನಲ್ತೆ ನೀವಿವನ
ನೋಡಿಕೊಂಡಾದರು ನನ್ನತ್ತಲಾಡದಿಂ
ತಾಡಬಹುದೆಯೆಂದನೊಡನೆ ॥ ೩೨ ॥

ಕೇಳುತಿದ್ದವರು ಸೈರಿಸಲಾರದಷ್ಟರೊ
ಳೋಲಗವೆಂಗಳೊಳ್ಕೆಲರು
ಪಾಲಿಸಬೇಕೆಲ್ಲರಿಚ್ಛೆಯನೆಂದು ಮೈ
ನೀಳಗೊಟ್ಟಿರಗಿದರವರು ॥ ೩೩ ॥

ಸುತ್ತ ಸುಮ್ಮನೆ ನೋಡುತಿರದೆ ಬುದ್ಧಿಯ ಹೇಳ
ಲಿತ್ತಲಾರ್ಕರೆತಂದರಿವರ
ತೊತ್ತಿರ ಬಡಿ ಬಡಿಯೆಂದು ಮನ್ಮಥ ನೇಮ
ವಿತ್ತನು ಕಳಕಂಠಗೊಡನೆ ॥ ೩೪ ॥

ಬಾಳೆಯಸುಳಿಯಕಟ್ಟಿಗೆ ಕೋಲೊಳವ ಹೊಯ್ದ
ನೇಳೇಳು ಮೂಲೆಗೋಡಾಡಿ
ಆ ಲೇಸುವೆಂಗಳ ಮೈಗೆ ಬಾಸಳು ಪುಷ್ಪ
ಮಾಲೆಯಂತೆದ್ದುವಾಕ್ಷಣವೆ ॥ ೩೫ ॥

ಅವಿವೇಕದೊಳು ನಾನು ನಡೆವವ ನೀವೆಲ್ಲ
ಸುವಿವೇಕದೋಜೆದೋರುವರು
ಕವುದಿಗೆ ಹಲ್ಲು ಬಂದಂತಾಡಿಸುವುದು ಕಾ
ಲವೊ ಕರ್ಮವೊ ಹಂಸನಾಥ ॥ ೩೬ ॥

ಮೊರನು[1] ಹೊಯ್ದುರೆ[1] ಬೆಕ್ಕನಂಜಿಸಿಕೊಂಡ[2]ನೆಂ[2]
ಬರಿಕೆಯ ನುಡಿಯಂತೆ ಮದನ
ಉರುಬಿ ಹೇಳುವ ಮಂತ್ರಿ[3] ಸಖರ[3] ನಂಜಿಸಿಕೊಂಡ
ಹೊರವೆಣ್ಣುಗಳ ಮೇಲೆ ಮುನಿದು ॥ ೩೭ ॥

ಹೋರಿ ಹೇಳುವ ಮಂತ್ರಿ ಸಖರ ಮೇಲಣ ಕೋಪ
ವಾರನಾರಿಯರ ನೋಯಿಸಿತು
ಊರಿಗೆಯ್ದಿದ ಮಾರಿ ಬೀರಸೆಟ್ಟಿಯ ಹೊಯ್ದ
ದಾರಿಕಾರರ ಗಾದೆಯಂತೆ ॥ ೩೮ ॥

ತಲೆಗುತ್ತಿ ನಡುಗುತ ಸುಮ್ಮನಿದ್ದುದು ಸಭೆ
ಬಳಿಕ ಹೂಂಕರಿಸುತಂಗಜನು
ತೊಲಗಿ ದೂರದೊಳಿದ್ದ ಗುಣವಸಂತಕನೆಂಬ
ದಳನಾಯಕನ ನೋಡಿ ನುಡಿದ ॥ ೩೯ ॥

ಇತ್ತಿತ್ತ ಬಾ ಬಾರೈ ಗುಣವಸಂತಕ ದೂರ
ದತ್ತತ್ತಲೇಕೆ ನೀ ನಿಲ್ಲೈ
ಹೊತ್ತು ಹೋಕವೊಯೆನ್ನ ಮಾತು ನೀತಿಯೊ ಪೇಳು
ಚಿತ್ತದೊಳಿರ್ದುದನೆಂದ ॥ ೪೦ ॥

---

1 ಹೊಯಿದ

2 ರಿಂ

3 ನೃಪರ

ಕೆಟ್ಟಿ ಕೆಟ್ಟಿನು ಸ್ವಾಮಿ ನಿನ್ನ ನಿರೂಪವ
ಕುಟ್ಟ ಪರೀಕ್ಷಿಪರುಂಟೆ
ಕಟ್ಟಾಣಿ ಮುತ್ತಿನ ಸರವದು ಸೊಬಗಿನ
ಕಟ್ಟಿ ಲೇಸಿನ ಬಟ್ಟೆಯೆಂದ ॥ ೪೧ ॥

ಗುಣಕೆರಗುವೆನೆಂದೆ ವಿಕ್ರಮಕೆರಗೆನೆಂ
ದೆಣಿಸಿದೆ ನಿನ್ನಲ್ಲಿ ತಪ್ಪೆ
ಗುಣಿಗಳಾರಿದ ಮೆಚ್ಚದವರೆಂದು ನುಡಿದನು
ಗುಣವಸಂತಕ ವೇಳೆಯರಿದು ॥ ೪೨ ॥

ಮೆಚ್ಚಿದನದಕೆ ಬಾ ಬಾರೆಂದು ಕರೆದೊಂದು
ಪಚ್ಚೆಯ ಪದಕವನಿತ್ತ
ಒಚ್ಚೆಯಗೊಡದತಿ ವೀರನ್ನೆ ನಿನ್ನ ನಾ
ನಚ್ಚಿದೆನಿನ್ನು ಹೋಗೆಂದ ॥ ೪೩ ॥

ಕಳಕಂಠ ಮತ್ತಕೋಕಿಲ ಮಂದಮಾರುತ
ಮಲಯಮಾರುತರು ಹೊತ್ತರಿದು
ಎಲೆ ಸ್ವಾಮಿ ನಿನ್ನ ಕಾರ್ಯಕೆ ಸರಿಯುಂಟೆಯೆಂ
ದುಲಿದರದಕೆ ಮೆಚ್ಚುಗೊಟ್ಟ ॥ ೪೪ ॥

ನೀವೀಗ ನನ್ನವರುಳಿದವರೇನೆಂದು
ಭಾವಿಪೆನೆನುತೋರೆ ಮೊಗದಿ
ಕಾವನಿನ್ನೋಲಗ ಪರಿಯಲ್ಲೆಯೆಂದನು
ಚಾವಡಿಯಿಂದೆದ್ದರೆಲ್ಲ ॥ ೪೫ ॥

ನುಡಿಯದೆ ಸಖರು ಮಂತ್ರಿಯು ದಕ್ಷಿಣಾಂಕನು
ಪೊಡವಟ್ಟು ಸಾಗಿದರವರು
ಒಡನೆ ಕೈ ಮುಗಿದು ಪೆಣ್ಣುಗಳೆಲ್ಲ ಪೋದರು
ದುಡುಗುಟ್ಟುವೆದೆಯ ಬಲ್ವಿಡಿದು ॥ ೪೬ ॥

ಇದ್ದರು ಗುಣವಸಂತಕ ಮೊದಲಾದವ
ರಿದ್ದವರೆಲ್ಲ ಸಾಗಿದರು
ಗದ್ದುಗೆಯೊಳಗಿದ್ದು ಕರೆ ಕರೆ ಕಳಕಂಠ
ಹೊದ್ದಿ ದಕ್ಷಿಣನ ಬೇಗೆಂದ ॥ ೪೭ ॥

ಕಡೆಯ ಬಾಗಿಲಿಗವ ಹರಿತಂದು ಕರೆದನು
ಸಡಗರಗೊಂಡು ದಕ್ಷಿಣನ
ಒಡೆಯನ ಮನವಿಷ್ಟು ತಿಳಿದುದೊಯೆಂದಾಸೆ
ನಡುತ ಬಂದವನು ಕೈಮುಗಿದ ॥ ೪೮ ॥

ಬಡವರ ಸಂಧಿಸಿದಂದವಲ್ಲೀಗ ದಾ
ಳಿಡುವನಾ ಭುಜಬಲಿರಾಜ
ಪಡೆಗೂಡಿ ಜೋಕೆಯಾಗಿರಲೆಂದನವನಿದು
ಕಡೆಗಾಲ ನಿವಗೆಂದು ನೆನೆದ ॥ ೪೯ ॥

ಹೋಗು ನಿನ್ನೊಡೆಯಗೀ ಹದನ ಹೇಳೆನಲವ
ಮೂಗುವಟ್ಟೊಡನೆ ಕೈ ಮುಗಿದು
ಹೋಗುತಿದ್ದನು ಮರ್ಕು ತೀವ್ರ ಕರ್ಮವೆ ಮೋಕ್ಷ
ಭಾಗಿಯ ಕಾಡುವೈಯೆನುತ ॥ ೫೦ ॥

ಅಣೆಯದು ಚಕ್ರಿಯಾಪ್ತಿಗರೆಯ್ದಲಿಮ್ಮ ಪ
ಟ್ಟಣದೊಳಹೊಗಿಸಬೇಡೆಂದು
ಗುಣವಸಂತಕ ಮೊದಲಾದರ ಕಳುಹಿ ಪೂ
ಗಣೆಯ ಹೊಕ್ಕನು ನಿಜಾಲಯವ ॥ ೫೧ ॥

ನಮಿಸಬೇಕೆಂಬರಲ್ಲದೆ ತಮ್ಮಣ್ಣಗೆ
ಸಮರಕೊಡ್ಡುವುದು ಲೇಸೆಂದು
ಅಮೃತವನುಂಡವರಾರು ನುಡಿವರೆಂದು
ತಮತಮಗೆಲ್ಲರಾಡಿದರು ॥ ೫೨ ॥

ಕಟಕ ವಿನೋದ ಸಂಧಿ

ಕುಡುವಿಲ್ಲನಾಪ್ತರ ಬೀಳ್ಕೊಂಡು ತನ್ನ ಪೆ
ರ್ವಡೆಗೂಡಿ ಚಕ್ರಿಯ ಸಖನು
ಕಡೆಯ ಹಜಾರದ ಬಾಗಿಲ ಮುಂದಕೆ
ನಡೆದನೇನೆಂಬೆನುಬ್ಬೆಯೊಳು ॥ ೧ ॥

ಗುರುಸೇವೆ ತಪ್ಪಿದ ಶಿಷ್ಯ ಚಿಂತಿಸುವಂತೆ
ದೊರೆಯಟ್ಟದೂಳಿಗ ತಪ್ಪೆ
ಕೊರಗುತ ಕಾಲ್ನಡೆಯೊಳು ಬಂದು ಪೌದನ
ಪುರದ ಬಾಗಿಲನು ದಾಂಟಿದನು ॥ ೨ ॥

ಸ್ವಾಮಿಯ ಕಾರ್ಯಕೆ ಗೆಲವಾದರಾವು ಮ
ಹಾ ಮಹಿಮೆಯೊಳೆಯ್ದಬೇಕು
ಕಾಮಿನಿಯಿಲ್ಲ ಕೈಥಾರೆಮಂತ್ರವೆಯೆಂದು
ಸ್ವಾಮಿಹಿತವನೊಂದು ನುಡಿದ ॥ ೩ ॥

ತಡವಿಲ್ಲದಾನೆಯ್ದಿ ಸ್ವಾಮಿಯ ಕಾಣ್ಬೆನು
ಪಡೆ ಹಿಂದೆ ಬರಲೆಂದು ತನ್ನ
ಪಡೆಯ ಮುಖ್ಯಗೆ ಪೇಳ್ದು ನಡೆದನು ಮರುತ ಮಾ
ವಡರಿ ತನ್ನೊಡನೆಯ್ದೆ ಕೆಲರು ॥ ೪ ॥

ಮರುತನನೇರಿ ಬಪ್ಪವನಿಗೆ ತಳುವುಂಟೆ
ತುರಿಹದಿ ಕಟಕವ ಸಾರ್ದು
ನೆರವಿಯ ಹೊಕ್ಕೆಯ್ದಿ ವಾಹನವಿಳಿದು ಮಂ
ದಿರಕೆ ಬೀಳ್ಕೊಟ್ಟ ತನ್ನವರ ॥ ೫ ॥

ಇರುಳೊಳೋಲಗವಿತ್ತು ಚಕ್ರೇಶನೆಲ್ಲರ
ಕರೆಯೆಂಬ ವೇಳೆಯೊಳೊಬ್ಬ
ಚರನೋಡಿ ಬಂದು ದಕ್ಷಿಣ ಬಂದ ವಾರ್ತೆಯ
ದೊರೆಗಿಂತು ಬಿನ್ನವಿಸಿದನು ॥ ೬ ॥

ನಡೆತಂದನಷ್ಟರೊಳಗೆ ದಕ್ಷಿಣಾಂಕ ತ
ನ್ನೊಡೆಯನನಿದಿರಲ್ಲಿ ಕಂಡು
ಒಡವೆಯ ನೀಗಿದ ಮಗನು ತಂದೆಯ ಕಾಣ್ಬ
ಕಡುಲಜ್ಜೆಯೊಳು ಬರುತಿರ್ದ ॥ ೭ ॥

ಬಾಡಿದ ಮೊಗ ಬಸವಳಿದ ಮೈಯೊಳು ತನ್ನ
ನೋಡೆ ನಾಣ್ಚುತ ಬಪ್ಪ ಸಖನ
ನೋಡಿ ಚಕ್ರೇಶ್ವರ ಚಿಂತೆಯೇಕೈ ನಲ್ಮಿ
ಗೂಡಿ ಬಾ ಬೆದರದಿರೆಂದ ॥ ೮ ॥

ಬಂದು ಸಮ್ಮುಖದಲ್ಲಿ ಮೈನೀಡಿ ಚಕ್ರಿಯ
ಮುಂದಡ್ಡಬಿದ್ದೆಲೆ ಸ್ವಾಮಿ
ಒಂದನು ನುಡಿವೆನೆಂದರೆ ಬಾಯಿ ಬಾರದೆ
ನ್ನಿಂದ ಕಾರ್ಯವು ತಪ್ಪಿತೆಂದ ॥ ೯ ॥

ಇನ್ನೊಬ್ಬ ಹೋದರೆ ಚಂದವಪ್ಪುದು ಕಾರ್ಯ
ನನ್ನಿಂದ ಹಸಗೆಟ್ಟುದೊಡೆಯ
ನಿನ್ನ ತಮ್ಮನೊಳೀನು ಕಡಮೆಯಿಲ್ಲೆಂದನು
ಜೆನ್ನಾದುದೇಳು ಸಾಕೆಂದ ॥ ೧೦ ॥

ಸಮ್ಮುಖದೊಳಗೆದ್ದು ನಿಂದನಾಗಲಿ ನನ್ನ
ತಮ್ಮನೇನೆಂದ ಹೇಳೆನಲು
ಕಮ್ಮಗಣೆಯನಲ್ತೆ ಕಠಿಣವ ನುಡಿವನೆ
ಕಮ್ಮನಾಡಿದನೆಂದನವನು ॥ ೧೧ ॥

ಆಡಿದುದೇನೆಂದನಣ್ಣಾಜಿ ಪರಿವಾರ
ಗೂಡಿ ಕೌಶಲಿಗೆಯ್ದಲೆಂದ
ನೋಡೆನ್ನ ಪುರಕೆಯ್ದಿ ತನ್ನಪ್ಪಣೆಯೆ ಗರ್ವ
ಕಾಡುತಿದ್ದುದು ತನಗೆಂದ ॥ ೧೨ ॥

ಕಾಳಗವೆಂದನೊ ಕಡೆಯ ಮಾತೊಂದನೆ
ಹೇಳಂಜಬೇಡ ನೀನೆಂದ
ಕಾಳಗವಲ್ಲಣ್ಣನೊಡನೆ ಸಾಧನೆಮಾಳ್ಪ
ಲೀಲೆಗಿಚ್ಛೈಸಿದನೆಂದ ॥ ೧೩ ॥

ನಿನ್ನ ಕಂಡಂತೆ ಭಕ್ತಿಯ ಮಾಡಿದೆನು ನಸು
ಭಿನ್ನಹುಟ್ಟದ ಮಾತ ನುಡಿದೆ
ತನ್ನವರೆಲ್ಲ ಮೆಚ್ಚಿದರಾತಗಾಯ್ತಿಲ್ಲ
ನನ್ನ ಪಾಪದ ಫಲವೆಂದ ॥ ೧೪ ॥

ಬಹಿರಾತ್ಮರಿಗೆ ತನ್ನ ಪುಷ್ಪಬಾಣವ ತೋರಿ
ಬಹುಬಾಧೆಗೊಳಿಸಿದ ಸೊಕ್ಕ
ಸಹಜಾತ್ಮರಸಿಕಗೆನಗೆ ತೋರುತಿದ್ದನೆ
ಸಿಹಿವಿಲ್ಲ ಸುಡು ಫಡಾಯೆಂದ ॥ ೧೫ ॥

ಹಂಸನಾಥನ ನೋಡಿ ಪುಷ್ಪಬಾಣಗಳ ವಿ
ಧ್ವಂಸ ಮಾಡುವೆನದ ಮಿಾರಿ
ಹಿಂಸೆಗಂಜದೆ ಖಡ್ಗವಿಡಿದು ಬಂದರೆ ಖಡ್ಗ
ವಂ ಸೆಳೆಕೊಂಡು ನೂಂಕುವೆನು ॥ ೧೬ ॥

ದಿಟ್ಟಿಸಿ ಹೋಗೆಂಬೆ ಹೋಗದಿದ್ದರೆ ಬೆನ್ನ
ಮುಟ್ಟಿ ಹೋಗೆಂದು ನೂಂಕುವೆನು
ದಟ್ಟಿಸಿದರೆ ಕಟ್ಟಿ ಕಳುಹುವೆ ಶಿಬಿಕೆಯೊ
ಳಿಟ್ಟು ಚಿಕ್ಕಮ್ಮನ ಬಳಿಗೆ ॥ ೧೭ ॥

ಮುನಿದೆನಾದರೆ ಚೆಂಡನಿಡುವಂತೆ ಹಿಡಿದೆತ್ತಿ
ವನಧಿಗಿಡುವ ಶಕ್ತಿಯುಂಟು
ಅನುಜನ ಮೇಲೆ ಶಕ್ತಿಯ ತೋರಬಹುದೆ ಮೇ
ದಿನಿ ಮೆಚ್ಚುವುದೆ ತೋರೆನೆಂದ ॥ ೧೮ ॥

ಸಾವಿರವಾದರು ಹಿರಿಯನೆಂಬರು ನನ್ನ
ಕಾವನೆ ಕಿರಿಯನೆಂಬರಲಾ
ಆವುದಗ್ರವನನುಪಾಯದೊಳ್ಗೆಲುವೆನೈ
ನೀವೆಲ್ಲರರಿದಿರಿಯೆಂದ ॥ ೧೯ ॥

ಪನ್ನೀರ ಕೊಡಿಸಿ ನೀಳೆಯಗೊಡಿಸಿದನೇಕೆ
ಖಿನ್ನನಪ್ಪೈ ದಕ್ಷಿಣಾಂಕ
ನಿನ್ನಿಂದ ಕಾರ್ಯ ತಪ್ಪದು ನಾನು ಬಲ್ಲೆನೈ
ನನ್ನಾಣೆ ಮರುಗದಿರೆಂದ ॥ ೨೦ ॥

ಕಡೆಯೊಳು ದಕ್ಷಿಣಗುಡುಗೊರೆಗೊಡುತ ಮೈ
ದಡವಿ ಮಂಡೆಯನಪ್ಪಿಕೊಳುತ
ಬಿಡು ನೋವನೆಂದು ಮುದ್ದಿಸಿದನಾ ನೃಪನಾತ
ಗೊಡೆಯನೊ ತಂದೆಯೊ ಗುರುವೊ ॥ ೨೧ ॥

ಸರ್ವರು ಚಿಂತಿಸುತಿದ್ದರಾ ವಾರ್ತೆಯ
ಸಾರ್ವಭೌಮನು ಕೇಳಿ ನಕ್ಕ
ಗರ್ವ ವೆಗ್ಗಳಿಸಿತ್ತೈ ಮದನಗೆಂದರು ರವಿ
ಜಾವುದು ರಾತ್ರಿಯಾಯ್ತೊಡನೆ ॥ ೨೨ ॥

ಭರತೇಶ ಸೆಜ್ಜೆವನೆಯೊಳೊರಗಿದನಂದಿ
ನಿರುಳ ಮೂರನೆಯ ಜಾವದೊಳು
ಪರಮಾತ್ಮಯೋಗದೊಳಿದ್ದನಪ್ಪರೊಳೊಂದು
ಸರಸಾರ್ಥ ಹುಟ್ಟುತೇನೆಂಬೆ ॥ ೨೩ ॥

ಮರನಲುಗದ ಮಾತುಗುಟ್ಟದ ಹೊತ್ತದು
ತೆರೆನಿಂದ ಕಡಲಂತೆ ಕಟಕ
ಪರವಾಶವಾಗಿದ್ದು ದಿಬ್ಬರೆಚ್ಚತ್ತು ಭೂ
ವರನನಿಂತೆನುತಿದ್ದರಾಗ ॥ ೨೪ ॥

ಹನಿಗೂಡಿ ಹಳ್ಳ ನಾರೊಡಗೂಡಿ ಹಗ್ಗವೆಂ
ಬನುವಿನೊಳ್ಪಡೆಗೂಡಿ ಚಕ್ರಿ
ಘನತೆವೆತ್ತನು ಸೇನೆ ಹೊರತಾದರಿವನೊಬ್ಬ
ಮನುಜನಲ್ಲವೆಯೆಂದರವರು ॥ ೨೫ ॥

ಭಾವ ನೈದುನರು ಖೇಚರರವರಾಡಲಾ
ಭೂವರ ಕೇಳ್ದದನೊಂದು
ಭಾವದಿ ಪ್ರಕಟಿಸಬೇಕೆಂದು ನೆನೆದಿದ್ದ
ತಾವರೆಯೋಪ ಮೂಡಿದನು ॥ ೨೬ ॥

ದೇವತಾರ್ಘ್ಯವನಿತ್ತು ಕಡೆಯ ಚಾವಡಿಗೆಯ್ದಿ
ಠೀವಿಯಿಂದೋಲಗವಾದ
ಭಾವಶುದ್ಧದೊಳೆಲ್ಲರೆಯ್ತಂದು ಕಂಡು ಸ
ಭಾವಾಸ ತುಂಬಿದ್ದರಾಗ ॥ ೨೭ ॥

ಮೊಗವನಲ್ಪವ ಮಾಡಿಕೊಂಡು ಮೋನದೊಳು ಗ
ದ್ದುಗೆಯೇರಿ ಚಕ್ರೇಶನಿರಲು
ಮುಗುಳಂಬ ಮಲೆತ ಚಿಂತೆಯೆಯೆಂದು ನೆನೆವುತ
ಮಿಗೆ ಪೊರ್ದಿ ಮಂತ್ರಿಯಿಂತೆಂದ ॥ ೨೮ ॥

ಚಿಂತೆ ಬೇಡೆಂದೆಮಗರುಹಿ ದೇವರಿದೇನ
ಚಿಂತಿಪುದೆನೆ ಕೇಳ್ದು ನೃಪತಿ
ಕಂತುವಿಗೆಣೆಸೆನ್ನೆ ನರಬಿಗಿದೆನ್ನನು
ಚಿಂತೆಗೊಳಿಸುತಿದೆಯೆಂದ ॥ ೨೯ ॥

ಪರಿಕಿಪೆನೆಲ್ಲೆಲ್ಲಿಯೆಂದ ಮಂತ್ರಿಗೆ ಕೆರು
ವೆರಲ ಸಟಿಗೆ ಡೊಂಕು ಮಾಡಿ
ಅರಸ ತೋರಿದನದು ತುದಿಬಾಗಿದೊಂದು ಪೂ
ಸರಲಂತೆ ಕಣ್ಗೆ ಮೋಹಿಸಿತು ॥ ೩೦ ॥

ಭೂನಾಥನಂಗವೈದ್ಯರು ಬಂದು ನಿಂದರು
ಮೂನೂರರುವತ್ತು ಮಂದಿ
ಸೇನೆಯೊಳುಳ್ಳ ಸರ್ವರು ಬಂದು ನೆರೆದರು
ನಾನು ಮಾಣಿಪೆನೆಂದರವರು ॥ ೩೧ ॥

ಬಡವಗೆ ಬಲುರೋಗ ಬಂದು ಬಾಯ್ಬಿಡಲೊರ್ವ
ರೆಡಹಿಯು ಕಾಣರುರ್ವಿಯೊಳು
ಒಡವೆಯುಳ್ಳವಗಲ್ಪರುಜೆ ಬರೆ ವಿಸ್ಮಯ
ಬಡುತ ಸಾರುವರದು ಸಹಜ ॥ ೩೨ ॥

ನೆಟ್ಟಯ ತೆಗೆದೊಮ್ಮೆ ನೋಡಿರೈಯೆಂದಾಗ
ಜಟ್ಟಿಗಳಿಗೆ ಕೈಯ ನೀಡೆ
ಬೆಟ್ಟಿಮಾಡದೆ ಕೈಯನವರೊತ್ತಲರಸನ
ಬೆಟ್ಟದ್ದುದಿನಿಸು ಸಡಿಲದೆ ॥ ೩೩ ॥

ನಸುನೇರವಾಗದೆ ಬೆರಳಿದ್ದರಿನ್ನೊಂದು
ಪೊಸತಂತ್ರವುಂಟೆಂದು ನೃಪತಿ
ಮಿಸುನಿಯ ಸರಪಣಿಯೊಂದನಂಗುಲಿಗೆ ಪೋ
ಣಿಸಿ ತೂಗಿರೆಂದನೆಲ್ಲರಿಗೆ ॥ ೩೪ ॥

ಹರಿದಾರಿ ಮುಟ್ಟಿಲ್ಲ ಸಾಲಾಗಿ ನಿಂದೊಂದು
ಸರಪಣಿವಿಡಿದು ತೆಗೆದರು
ಬೆರಳಿಷ್ಟು ಮಿಸುಕದು ಮತ್ತರೆಗಾವುದು
ಹರಿದು ತೆಗೆದರು ಖೋಯೆಂದು ॥ ೩೫ ॥

ಅದರೊಳು ನೇರವಾಗದು ಚಕ್ರವರ್ತಿಯಿ
ನ್ನಿದಕೊಂದು ತಂತ್ರವುಂಟೆಂದ
ಇದಿರಲ್ಲಿ ನಿಂದಿರ್ದ ವಿಶ್ವಕರ್ಮನ ನೋಡಿ
ಸದಮಲಾನಂದನಿಂತೆಂದ ॥ ೩೬ ॥

ಕಟಕವೆಲ್ಲಕೆ ಹಬ್ಬುವೊಲು ಸರಪಣಿಯ ಸಂ
ಘಟಿಸಿ ತಾ ಬೇಗದೊಳೆಂದ
ಸ್ಫುಟದಿ ನಿರ್ಮಿಸಿಕೊಟ್ಟನವ ಕೂಡೆ ಚಕ್ರಿಯ
ತುಟಿ ಮಿಸುಕಿದ ಕಾರ್ಯ ತಡವೆ ॥ ೩೭ ॥

ಹೊಡೆಬಳ್ಳಿಯೊಂದರ ಗಂಟುಗಂಟಿಗೆ ಕುಡಿ
ಯೊಡೆದೆಂಟು ದೆಸೆಗೆ ವ್ಯೋಪಂತೆ
ನಿಡುಸರಪಣಿಯೊಂದು ಬಹುಸರಸಣಿ ತನ್ನ
ತೊಡರೆ ಹಬ್ಬಿತು ಕಂಡ ಕಡೆಗೆ ॥ ೩೮ ॥

ಕಿರುವೆರಳಿಗೆ ಸರಪಣಿಯ ಸಂದಿಸಿ ರಾಯ
ಬಿರಿಸಾಗಿ ತೂಗಿರೈಯೆಂದ
ಇರುಹೆಗಳೆಣ್ಣೆ ಸೋಂಕಿದ ನೇಣ ಮುತ್ತುವಂ
ತೆರಗಿ ಪಿಡಿದುದಾಗ ಕಟಕ ॥ ೩೯ ॥

ತೇರನೆಳೆಯಬಹುದೈಸೆ ಹಗ್ಗವ ಹಾಕಿ
ಮೇರುವನೆಳೆದರೆ ಬಹುದೆ
ಆರಾರು ಬಹುದಹುದಾ ಸೇನೆ ತೆಗೆದಾಗ
ಧೀರಾಗ್ರನಿದ್ದನಿದ್ದಂತೆ ॥ ೪೦ ॥

ನರವಿಷ್ಟು ಸಡಿಲದು ತೆಗೆಯ ಹೇಳಧಿಕ ನಿ
ರ್ಭರದಿಂದ ಕಟಕವನೆಂದ
ಮುರಿದು ಪಲ್ಗಚ್ಚಿಕೊಂಡುಳ್ಳ ಶಕ್ತಿಯನಿಕ್ಕಿ
ಸರಪಣಿದುಯ್ದುದಾ ಸೇನೆ ॥ ೪೧ ॥

ಕಾಲ ಪೈಸರಗೊಟ್ಟು ಸರಪಣಿವಿಡಿದು ಹಿ
ಮ್ಮಾಲಾಗಿ ಪಡೆ ತೆಗೆವಾಗ
ತೋಳ ಸಿಕ್ಕಿಗೆ ರಾಯ ನೀಡಿದನುರೆ ಹೊಟ್ಟಿ
ಮೇಲಾಗಿ ಕೆಡೆದರುರ್ವಿಯೊಳು ॥ ೪೨ ॥

ಬಲುಹಾಗಿ ಹಿಡಿಯಹೇಳಾನೊಮ್ಮೆ ನನ್ನತ್ತ
ಬಲಿದು ನೋಡುವೆನೆಂದನದಕೆ
ಕಲಿಗಳು ಫಣಿಗಳ ಪಿಡಿವಂತೆ ಸರಪಣಿ
ಗಳ ಪಿಡಿದರು ದೃಢವಾಗಿ ॥ ೪೩ ॥

ಸದರದೊಳಗೆ ತೆಗೆದನು ನೊದಲೊಮ್ಮೆ ಮ
ತ್ತದರಿಂದ ನಸು ಹೆಚ್ಚಿತೆಗೆದ
ಅದಕೆ ವೆಗ್ಗಳಿಸಿ ನಾಲ್ವತ್ತೆಂಟುಗಾವುದ
ಗದಗದಿಸಿತು ರಾಜಕಟಕ ॥ ೪೪ ॥

ಸಣ್ಣ ಬೆರಳ ಶಕ್ತಿಯಿಂತು ಪೆಬ್ಬೆಟ್ಟಿನ
ಬಿಣ್ಣೆತೆಂತುಟೊ ಮುಷ್ಟಿಯೆಂತೊ
ಬಣ್ಣದ ನುಡಿಯಲ್ಲ ಚಕ್ರಿಗುಂಟದ್ರಿಯ
ನಣ್ಣೆಕಲ್ಲಾಡುವ ಶಕ್ತಿ ॥ ೪೫ ॥

ನರನಾಥ ತಲೆವಾಗಿ ನಸು ನಕ್ಕನಾಗ ಮಿ
ತ್ರರು ಹುಸಿರೋಗವೆಂದರಿದು
ಪರರಿಂದ ಮಾಣದೊಡೆಯ ನೀನೆ ನಿನ್ನ ನು
ಣ್ಬೆರಳ ಮಾಣಿಪುದೆಂದರೊಸೆದು ॥ ೪೬ ॥

ಸರಪಣಿದೆಗೆದೆಡಗೈಯಿಂದ ತನ್ನ ನು
ಣ್ಬೆರಳನೊತ್ತುತ ವಿನೋದಾರ್ಥಿ
ಗುರು ಹಂಸನಾಥಾಯ ಸ್ವಾಹಯೆಂದನು ಕೂಡೆ
ಸರಿತವಾಗಿದ್ದುದಾ ಬೆರಳು ॥ ೪೭ ॥

ಸುರರು ಪೂಮಳೆಗರೆದರು ಮೊಳಗಿತು ಮೂರು
ವರೆಕೋಟಿ ವಾದ್ಯ ಭೋರೆಂದು
ಸುರಗಣಿಕೆಯರು ನರ್ತಿಸಿದರು ಸಾಲದೆ
ಭರತರಾಜನದೊಂದು ಭಾಗ್ಯ ॥ ೪೮ ॥

ಸರಸಾರ್ಥವಿದನೇಕೆ ನೆನೆದೆ ಚಕ್ರೇಶಯೆಂ
ದುರು ಮುದದೊಳು ಮಂತ್ರಿ ಕೇಳ್ದ
ಇರುಳಿಬ್ಬರಾಡಿದ ನುಡಿಗಿಂತು ನೆನೆದೆನೆಂ
ದರಸನಾ ಸ್ಥಿತಿಯ ಪೇಳಿದನು ॥ ೪೯ ॥

ಬಡಗಣದೆಸೆಯೊಳಾಡಿದರೆಂದು ಚಕ್ರೇಶ
ನುಡಿಯಲಾ ಖಚರರು ಕೇಳಿ
ಒಡೆಯನಾವರಿಯದಾಡಿದೆವೆಂದು ಮುಂದಡ್ಡ
ಗೆಡೆದರು ಪಾಲಿಪುದೆಂದು ॥ ೫೦ ॥

ನಾಡುಗರಿಗೆ ಸೇನೆದೋರಿ ಗೆಲ್ದನು ಯುದ್ಧ
ಮಾಡುವರಿವಗಿದಿರುಂಟೆ
ನೋಡು ಚಕ್ರಿಗೆ ಸರ್ವಬಲದಾಸೆಯೆಂದಿವ
ರಾಡಬಹುದೆಯೆಂದರೆಲ್ಲ ॥ ೫೧ ॥

ಗಡಬಡೆ ಸಾಕು ಹೊ ಪಡೆ ನೊಂದಿತಾನೊಂದು
ನುಡಿಗಿಂತುಟಲೆದೆನೆ ಮಂತ್ರಿ
ಕಡಿ ಕಡಿದವರಿಗಾ ಸರಪಣಿಯನೆ ಹಂಚಿ
ಕೊಡು ನೊಂದ ನೋವಾರಲೆಂದ ॥ ೫೨ ॥

ತಣಿದುದು ಕಟಕವೆಲ್ಲವು ಕೂಡೆ ಸರ್ವರ
ಗುಣವಚನದೊಳು ಬೀಳ್ಕೊಟ್ಟು
ಅಣುಗರ ಬೀಳ್ಕೊಟ್ಟು ಚಕ್ರೇಶ ಹೊಕ್ಕನಾ
ಕ್ಷಣ ತನ್ನ ರಾಜಮಂದಿರವ ॥ ೫೩ ॥

ಲಲನೆಯರರ್ತಿಯ ಹೇಳಲರಿಯೆ ನೊಗ
ತಳತಳಿಸುತ ನಗುತೆಯ್ದಿ
ಗೆಲವಿನೊಳಾರತಿಯೆತ್ತಿ ನಿವಾಳಿಯಿ
ಟ್ಟೊಲಿದೆರಗಿದರೋಪನಡಿಗೆ ॥ ೫೪ ॥

ಸ್ತ್ರೀಯರ ಹಿಂದಿಕ್ಕಿ ಬಂದು ಭೂಪತಿ ತನ್ನ
ತಾಯಂಘ್ರಿಗಳ ನಮಿಸಿದನು
ಮಾಯದ ರೋಗದೋರಿತೆ ನನ್ನ ಮಗಗೆ ಮಾ
ಮಾಯೆಂದಳಾಕೆ ತಕ್ಕೈಸಿ ॥ ೫೫ ॥

ನಿನಗೆಂತು ರುಜೆ ಬರಬಾರದು ರುಜೆ ನಿನ್ನ
ನೆನೆದರ್ಗೆ ಬರಬೇಡವೆಂದು
ಜನನಿ ಹರಸಿ ಮುತ್ತಿನಕ್ಷತೆಯಿಟ್ಟಳು
ಬಿನದಕೆ ಮೆಚ್ಚುತ ಮಗನ ॥ ೫೬ ॥

ದಿಟವಿನ್ನು ದೇವರ ಹರಕೆ ರಕ್ಷಿಪುದೆಂದು
ಚಟುಲಾಕ್ಷಿಯರು ತಾಯಿವೆರಸಿ
ಪಟುಚಕ್ರಿ ಭೋಜನಕೆಯ್ದಿದನಿಲ್ಲಿಗೆ
ಕಟಕವಿನೋದದ ಸಂಧಿ ॥ ೫೭ ॥

ಮದನಸನ್ನಾಹ ಸಂಧಿ

ಕಟಕದ ವಾರ್ತೆಯ ಕೇಳುತಿಷ್ಟಳುಕುತ
ಪಟುವಾಗಿ ಮೊದಲು ತಾ ನುಡಿದ
ಘಟತ ಗರ್ವವ ನೆನೆದಾ ಕಾಮು ಕೂಡೆ ಹೋ
ರಟಿಗೆ ಮುಂಕೊಂಡನೇನೆಂಬೆ ॥ ೧ ॥

ಮಿಗೆ ಸುನಂದಾದೇವಿ ಕೇಳ್ದು ಪ್ರಾಪ್ತರನಟ್ಟಿ
ಮಗನ ಕರೆಸಿದಳು ಮನೆಗೆ
ದುಗುಡವ ಕಾಣಿಸದಂಗಜ ಬಂದಿಷ್ಟು
ನಗೆವೊಗದಿಂದೆರಗಿದನು ॥ ೨ ॥

ಭುಜಬಲಿ ದೊಡ್ಡಣ್ಣನೊಡನೆ ಕಾಳಗವೆಂದು
ಗಜಬಜಿಸಿದೆ ಕಂಡ ನೀನು
ಸುಜನರಾರಿದ ಮೆಚ್ಚುವರು ಸುಡು ನಿನ್ನೊಂದು
ಕುಜನಮಾರ್ಗವನೆಂದಳಾಕೆ ॥ ೩ ॥

ಅಣ್ಣನ ಕೂಡೆ ಕಾಳೆಗವ ಮಾಡೆಂದಾನು
ಬೆಣ್ಣೆವಾಲೂಡಿ ಸಾಕಿದೆನೆ
ತಣ್ಣನೆ ಮಾಡಬೇಕೆಮ್ಮೆಲ್ಲರುದರಕೆ
ಹುಣ್ಣು ಮಾಳ್ಪುದು ಲೇಸೆ ಮಗನೆ ॥ ೪ ॥

ಹಿರಿಯಣ್ಣ ಹೆತ್ತ ತಂದೆಯ ಪಾಟಿಯೆಂದು ಸ
ತ್ಪುರುಷರು ಭಕ್ತಿ ಮಾಡುವರು
ಸರಿ ನಾನು ತಾನೆಂದು ದಾಯಾದ್ಯರಾಗಿ ಧೂ
ರ್ತರು ಹೋರುವರು ಜಗದೊಳಗೆ ॥ ೫ ॥

ಎಲ್ಲರು ತಪಸಿಗೆಯ್ದಿದರು ನೀನೊಬ್ಬ ನ
ಮ್ಮೆಲ್ಲರರ್ತಿಯ ಸಲಿಸಣ್ಣ
ಬಲ್ಲಿತುದೋರದಿರಣ್ಣ ನಿಗೆರಗೆಂದು
ಗಲ್ಲವ ಪಿಡಿದಲುಗಿದಳು ॥ ೬ ॥

ಇಲ್ಲಮ್ಮಾಜಿ ಕಾಳಗವೆಂದು ಮೊದಲಿಷ್ಟು
ಸೊಲ್ಲಿಸಿದೆನು ಕೋಪದಿಂದ
ಸಲ್ಲದೆಂದೆಲ್ಲರಾಡಲು ಬಿಟ್ಟಿನಣ್ಣನ
ಮೆಲ್ಲಡಿಗೆರಗುವೆನೆಂದ ॥ ೭ ॥

ಪರರಲ್ಲವೆಂಬುದ ಮಾಡೆನು ನಾನು ದೇ
ವರಿಗತಿ ಚಿಂತೆಯೇಕಿದಕೆ
ಶಿರಬಾಗಿ ಬಹೆನಣ್ಣಗೆಂದನು ಮಾತಿನೊ
ಳರಿಸಿಕೊಂಡೆದೆಯೊಳು ಕೋಪ ॥ ೮ ॥

ಸಂತಸಬಟ್ಟಾಕೆ ತಕ್ಕೈಸಿಕೊಂಡೆನ್ನ
ಕಂತು ನೀನಂತೆ ಮಾಡೆಂದು
ಚಿಂತೆ ಹೋಯ್ತೆಂದು ಪರಸಿ ಕಳುಹಿದಳೆಲ್ಲ
ರಂತರಂಗವ ಕಾಂಬರಾರು ॥ ೯ ॥

ಪಡೆದಳಿಗೆರಗಿ ಬೀಳ್ಕೊಂಡು ತನ್ನರಮನೆ
ಗೊಡನೆ ಹೊಕ್ಕನು ಪುಷ್ಪಬಾಣ
ಬೆಡಗಾಗಿ ಸಿಂಗರಿಸಿದನು ತನ್ನಂಗಕೆ
ಕಡೆಯ ಶೃಂಗಾರವದಲ್ತೆ ॥ ೧೦ ॥

ಖೋಡಿಯಿಲ್ಲದ ಮೋಹನಾಂಗವದಕೆ ತಕ್ಕ
ಗಾಡಿ ಮೋಡಿಯೊಳು ಸಿಂಗರಿಸಿ
ನೋಡುವರೆಲ್ಲರ ಕಣ್ಮನಗಳ ನಲಿ
ದಾಡಿಸುತಿದ್ದನಾ ಸೊಬಗ ॥ ೧೧ ॥

ಸಿಂಗರವಾಗಿ ಕನ್ನಡಿಯ ನೋಳ್ಪಾಗ ತ
ನ್ನಂಗನೆಯರು ಬಂದರೆಲ್ಲ
ಹೆಂಗಳು ಸಹ ಪಟ್ಟದರಸಿ ಕೈಮುಗಿದಳ
ನಂಗಗಿಚ್ಛಾಮಹಾದೇವಿ ॥ ೧೨ ॥

ಆರ ಮೇಲೆಸುಗೆ ದೇವರಿಗೆ ಹೆಂಗಳ ಮೇಲೊ
ದೂರಿಸುವಾಳ್ಗಳ ಮೇಲೊ
ವೀರಾಂಗ ಶೃಂಗಾರವಾಗಿದೆಯೆಂದು ವಿ
ಚಾರಿಸಿದಳು ಪಟ್ಟದರಸಿ ॥ ೧೩ ॥

ಹೆಂಗಳಿಲ್ಲರು ನನ್ನ ಪಕ್ಷ ಪುರುಷರೆಲ್ಲ
ರಿಂಗೋಲ ಕೇಳ್ನಿನ್ನ ಪಕ್ಷ
ಕಂಗೆಡಿಸದಿರೆನ್ನ ಪಕ್ಷದವರನೆಂದು
ಭೃಂಗಾಕ್ಷಿ ನುಡಿದಳೋಪನೊಳು ॥ ೧೪ ॥

ಆಗಲೌ ನಲ್ಲಳೆ ನಿನ್ನ ಪಕ್ಷದ ಮೇಲೆ
ಪೂಗಣೆ ತೊಡುವುದಿಲ್ಲಬಲೆ
ಹೋಗದೆನ್ನೊಡನೊಡ್ಡಿ ಸಿಂದ ಚಕ್ರಿಯ ಪೌಜ
ತಾಗುವೆನೆಂದನಾ ಮದನ ॥ ೧೫ ॥

ಸಲ್ಲದೋಪನೆ ಬಿಡು ಹಿರಿಯಣ್ಣನೊಡನಿಂತು
ಬಲ್ಲಿತುದೋರ್ವುದು ಗುಣವೆ
ಬಿಲ್ಲು ಡೊಂಕಲು ನಿನ್ನ ನಡೆ ಡೊಂಕೆ ಬೇಡೆಂದು
ನಲ್ಲಳಾಡಿದಳು ನಲ್ಮೆಯೊಳು ॥ ೧೬ ॥

ಒಂದು ಮನೆಯ ಹೆಣ್ಣುಗಳ ತಂದು ಸಡ್ಡುಕ
ರೆಂದು ಬಾಳ್ವವರುಂಟು ಕೂಡಿ
ಇಂದು ನೀವಣ್ಣತಮ್ಮದಿರೆವಗೆಮ್ಮಕ್ಕ
ನೊಂದುಗೂಡಿಸದಗಲಿಪರೆ ॥ ೧೭ ॥

ಸುಖಿಯಲ್ತೆ ದೇವ ನೀನೆಲ್ಲರ್ಗೆ ಜಗದೊಳು
ಸುಖವನೆ ಸಂಧಿಪೆಯಲ್ತೆ
ಸುಖಿಗಳಗ್ರಣಿಯಲ್ತೆ ನಿಮ್ಮಣ್ಣನಾತಗೆ
ಸುಖಮುಖದೋರೆಂದಳಾಕೆ ॥ ೧೮ ॥

ಚತುರೆ ಚಾಪಲನೇತ್ರೆ ನಿಶ್ಚಲಮತಿ ನೀರೆ
ಪತಿಭಕ್ತೆ ಧೀರೆ ಶೃಂಗಾರೆ
ರತಿಕಲಾಕುಶಲೆ ರಟ್ಟಡಿಕಾತಿ ನುಡಿದಳು
ರತಿದೇವಿ ರಮಣನೊಳಾಗ ॥ ೧೯ ॥

ಅಲ್ಲವೆ ತನ್ನ ಸಾಮರ್ಥ್ಯ ತನ್ನವರ ಮೇ
ಲಲ್ಲದಿನ್ನೆಲ್ಲಿ ಮರೆವುದು
ಬಿಲ್ಲಂಬ ಹಿಡಿದೊಂದು ಬಲ್ಮೈಯ ನಿನ್ನಣ್ಣ
ನಲ್ಲಿ ತೋರುವುದೊಳ್ಳಿತಾಯ್ತು ॥ ೨೦ ॥

ಭಾವಾಜಿಯವರ ಹೆಣ್ಣುಗಳಿಗೆಮಗೆಲ್ಲರ್ಗೆ
ನೋವುದೋರುವೆನೆಂಬ ನಿನ್ನ
ಕಾವನೆಂಬರದೇಕೆ ಕೊಲ್ವನೆನ್ನದೆ ಭ್ರಾಂತ
ಜೀವರು ನರ ಸುರೋರಗರು ॥ ೨೧ ॥

ಒಬ್ಬರ ಮನಸಿಗು ಸಿಹಿಯಿಲ್ಲವೀ ನಡೆ
ಕಬ್ಬವೊಕ್ಕೈಯೊಳಗಿಹುದು
ಕಬ್ಬಿನ ಬಿಲ್ಲೊ ಕಾಕಪ್ಪನ ಬಿಲ್ಲೊ ಸಾ
ಹೆಬ್ಬಿದಿರಿನ ಕೊಂಕುಬಿಲ್ಲೊ ॥ ೨೨ ॥

ಮೆಲ್ಲೆದೆಯಳಿದು ತಮ್ಮಣ್ಣನಿಗಿದಿರಹ
ನಲ್ಲೆದೆಯೋಪನಂಬುಗಳು
ಮಲ್ಲಿಗೆ ಗೋಲ್ಗಳೊ ಮರದ ಮಿಂಟಿಯೊ ಪೇಳು
ಪುಲ್ಲಂಬೊ ಲೋಹದಂಬುಗಳೊ ॥ ೨೩ ॥

ಉಳಿದ ಹೆಂಗಳು ಯುದ್ಧ ಬೇಡೆಂದು ನುಡಿದರಾ
ಹಲಬರ ನುಡಿಗೇಳಿ ಮದನ
ನುಡಿದುದುತ್ತಮವಾಯ್ತು ನಿಮ್ಮೆಲ್ಲರರ್ತಿಯ
ಕೆಡಿಸೆನೌ ಸುಖದೋರ್ಪೆನೆಂದ ॥ ೨೪ ॥

ಬಂದು ತನ್ನ ರಮನೆಯಿದಿರಲ್ಲಿ ನೆರೆದಿಹ
ಮಂದಿಯ ನೋಡುತಂಗಜನು
ವಂದಿಗಳ್ಬಾಂಗು ಭಲಾ ಜೀವುರೆನಲು ಮಾ
ಕಂದನೆಂಬಾನೆಯೇರಿದನು ॥ ೨೫ ॥

ಬಲದಲ್ಲಿ ಗೌಳಿ ನುಡಿದುವಾಗ ವಾಯಸ
ಬಲದಿಂದ ಹಾರಿದುವೆಡಕೆ
ಫಲಫಲನೊಕ್ಕಾಯ್ತು ತಿರುಗಲರಿಯಸಿನ್ನು
ವೊಳಲಿಗೀ ಕಾಮನೆಂಬಂತೆ ॥ ೨೬ ॥

ಅದ ಕಂಡು ಮಂತ್ರಿ ಮರುಗಿ ಸಾರಿ ನಾಳೆ ನಾ
ಡಿದು ಗಮಿಸುವೆ ಸ್ವಾಮಿಯೆಂದ
ಇದು ಮಹಾಲಗ್ನವೈ ಸುಮ್ಮನೆ ಬಾರೆಂದು
ಮದಮುಖದೊಡೆಯನೆಯ್ದಿದನು ॥ ೨೭ ॥

ಬಲವನೀಕ್ಷಿಸಿ ಮೆಚ್ಚಿ ಮನ್ಮಥ ಕರೆದಾಗ
ದಳಪತಿಗಿತ್ತನು ಮೆಚ್ಚ
ಗೆಲವೇರಿ ನಡೆಯಲ್ಕೆ ಕಟಕವೆಂದನು ಘಳು
ಘಳಿಸುತ ನಡೆದುದಾ ಸೇನೆ ॥ ೨೮ ॥

ಪೊಡವಿ ಭೋರಿಡೆ ತನ್ನ ಪಡೆಗೂಡಿ ಚಕ್ರಿಯ
ಪಡೆಯನು ನೋಡಲೆಯ್ತಂದು
ಕಡಲಿದಿರೊಳು ನಿಲ್ವ ಕೆರೆಯಂತೆ ನಿಂದನು
ಕುಡುವಿಲ್ಲ ಕಟಕದಿದಿರೊಳು ॥ ೨೯ ॥

ಅಲರಂಬ ದಾಳಿಗೆಯ್ತಂದನೆಂದಾ ಚಕ್ರ
ಧರನ ಪಾಳೆಯವೆಲ್ಲ ಮುಸಗಿ
ಮುರಿ ಮುರಿದೀಕ್ಷಿಸುತಿದ್ದುದು ಮದನನೈ
ಸಿರಿಯಿದೆಯೆಂದರ್ತಿವಡುತ ॥ ೩೦ ॥

ಕಾದಲೆಯ್ತಂದನು ಕಿರಿಯಯ್ಯ ನಮ್ಮ ಕಂ
ಡಾದರೂ ತಿಳಿಯನೆಯೆಂದು
ಸೋದರರೊಡಗೂಡಿಕೊಂಡಿದಿರ್ಗೆಯ್ದಿದ
ನಾದರದಿಂದರ್ಕಕೀರ್ತಿ ॥ ೩೧ ॥

ಕುಂದದ ಚಂದ್ರರಂದದಿ ಬಹ ಸುತರ ಮಾ
ಕಂದದ ಮೇಲಿರ್ದು ಕಂಡು
ಕಂದರ್ಪನಿವರಾರು ಚೆಲ್ವರ್ಕೆಯೆನೆ ನಿನ್ನ
ಕಂದಂದಿರೆಂದನಾ ಮಂತ್ರಿ ॥ ೩೨ ॥

ಬರಬೇಡ ಹೋಗ ಹೇಳೊ ತಮ್ಮ ಪಿತ ನನ
ಗರಸು ತಾವಣುಗರೆ ನನಗೆ
ಅರರೆ ತಾವಾರ ಚಾಳಿಸಬಂದರೆಂದನಾ
ಸ್ಮರನೆನಲೆದ್ದುದೊ ಕರ್ಮ ॥ ೩೩ ॥

ನಿಲ್ಲದೆ ಪರಿತಂದು ಕಳಕಂಠಸಿದು ವೇಳೆ
ಯಲ್ಲೆಂದರೆಂದು ಕೈಮುಗಿದ
ಕಲ್ಲ ತಾಗಿದ ಮಿಂಟೆಯಂತವರ್ತಿರುಗಿದ
ರಿಲ್ಲರ ಮನಕೆ ನೋವಾಗೆ ॥ ೩೪ ॥

ಅಯ್ಯಯ್ಯೊ ಅಣ್ಣಾಜಿಯರು ಬರೆ ಪೋಗಲೆಂ
ದಯ್ಯ ಬಾರಿಸಿದನೆಯೆಂದು
ಒಯ್ಯನಾನೆಯನಿಳಿದಾ ಮಹಾಬಲರಾಜ
ಮೆಯ್ಯ ತೋರದೆ ಪೋದ ನೊಂದು ॥ ೩೫ ॥

ಕಾಮನ ಸುತನಲ್ತೆ ಲಾವಣ್ಯ ಸೂಸುತ
ಭೂಮೀಶನೆಡೆಗೆಯ್ದುವಾಗ
ಶ್ರೀ ಮಹಾಬಲರಾಜ ನಿನ್ನ ತಮ್ಮನ ಸೂನು
ಸ್ವಾಮಿಯೆಂದನು ದಕ್ಷಿಣಾಂಕ ॥ ೩೬ ॥

ಸಾರಿ ಕಾಣಿಕೆಯಿಕ್ಕಿ ಪಜ್ಜೆಗೆರಗಿದ ಕು
ಮಾರನ ತೆಗೆದಪ್ಪಿಕೊಂಡು
ತೋರದೊಡೆಯೊಳಟ್ಟುಕೊಂಡನಾ ನೃಪನಂತೆ
ಸಾರಹೃದಯರೊಬ್ಬರುಂಟೆ ॥ ೩೭ ॥

ಮೊಗವೇಕೆ ಬಾಡಿತು ಗೂಢದೊಳಿಯ್ತುಂದ
ಬಗೆಯೇನು ನಿನಗೊಬ್ಬರೊಡನೆ
ಜಗಳವಾದುದೊ ಹೇಳು ಹೇಳಣ್ಣಯೆಂದಪ್ಪಿ
ಮಗನನಾ ಚಕ್ರಿ ಕೇಳಿದನು ॥ ೩೮ ॥

ದೇವರ ಸುತರು ಚಿಕ್ಕಯ್ಯನೊತ್ತಿಗೆ ಸಾರ
ಲೀ ವೇಳೆ ಬೇಡವೆಂದಟ್ಟೆ
ನೋವ ತಾಳ್ದೀತನಿಂತೆಯ್ತುಂದನೆಂದರು
ಸೇವಕರಾ ಚಕ್ರಿಯೊಡನೆ ॥ ೩೯ ॥

ಹಂಸನಾಥನೆ ಬಲ್ಲ ಮದನನ ಮನದ ವಿ
ಧ್ವಂಸ ಭಾವನೆ ನಿಂದುದಕಟ
ನಾಂ ಸೇರದಿರೆ ನನ್ನ ಸುತರು ವೈರಿಗಳೆ ಕ
ರ್ಮಾಂಶನ ನಡೆ ಸುಡಲೆಂದ ॥ ೪೦ ॥

ತಂದೆಯ ನುಡಿಗೊಪ್ಪದೀ ಕುಮಾರಕ ಜಾರಿ
ಬಂದ ವಿವೇಕಕಿನ್ನೆಣೆಯೆ
ಇಂದಿಷ್ಟು ಬುದ್ಧಿ ಜವ್ವನವಾದರಿನ್ನೆಂತೊ
ಯೆಂದು ಸರ್ವರು ಪೊಗಳಿದರು ॥ ೪೧ ॥

ಒಡ್ಡಿದಂಕವ ನಾನು ಗೆಲ್ವೆ ನೀನನ್ನಕ
ದೊಡ್ಡಣ್ಣನೊಡನಿರೆಂದವಗೆ
ಎಡ್ಡ ಮನ್ನಣೆಯನಿತ್ತರ್ಕಕೀರ್ತಿಯ ತೋರ
ಲಡ್ಡಬಂದವ ಕರೆಕೊಂಡ ॥ ೪೨ ॥

ಮದಗಜವೇರಿ ಮನ್ಮಥನಿರ್ದ ಸಭೆಯೊಳ
ಗ್ಗದ ಚಕ್ರಿಯಿರ್ದ ನಿನ್ನವರ
ಕದನ ಕರ್ಕಶದೋರಿ ಮೃದುವಪ್ಪುದಿಲ್ಲಿಗೆ
ಮದನಸನ್ನಾಹದ ಸಂಧಿ ॥ ೪೩ ॥

ರಾಜೇಂದ್ರಗುಣವಾಕ್ಯ ಸಂಧಿ

ಭರತೇಶ ಭುಜಬಲಿರಾಜರ ಮಂತ್ರಿ ಮಿ
ತ್ರರು ನಡುನೆಲದೊಳೊಗ್ಗಾಗಿ
ದೊರೆಗಳಿಬ್ಬರ ಕದನಕೆ ಮುಂದೆ ಯೋಚಿಸಿ
ದರು ಮೃದುಕಲಿಯನೇನೆಂಬೆ ॥೧॥

ಸರ್ವಬಲವ ಕೊಲ್ಲಬೇಡ ಕೂರಸಿವಿಡಿ
ದೊರ್ವರು ಕಾಡಬೇಡಿನ್ನು
ಇರ್ವರ ಧರ್ಮಯುದ್ಧಕೆ ಕೇಳ್ವವೆಂದೆಯ್ದಿ
ಸಾರ್ವಭೌಮನ ಕೇಳ್ದರೊಡನೆ ॥೨॥

ಕುಲಿಶದೇಹಿಗಳು ನೀವಿಬ್ಬರಿನ್ನಂಕದ
ತಳದಲ್ಲಿ ಕಾಲಿಕ್ಕುವಾಗ
ಬಳಿಗಾರವಸರದೊಳಿರಡಾನೆ ಹೊಕ್ಕು ಹೋ
ಕುಳಿಸಿದಂತಹುದೆಂದರವರು ॥೩॥

ಇದಕೆ ನೀವೇನ ಕಂಡಿರಿ ಪೇಳಿರೆಂದರಂ
ಜದೆ ನುಡಿವೆವೆ ಸ್ವಾಮಿಯೆನಲು
ಎದೆಹಾರು ಬೇಡವೈ ಪೇಳಿರೆಂದನು ಧರ್ಮ
ಕದನಕೊಪ್ಪೆಂದರಾ ಹಿತರು ॥೪॥

ಅಂತಿಂತುಟೆಂದೆನ್ನೆ ಕೇಳಬೇಡರಲಂಬ
ನೆಂತೊಪ್ಪಿದಂತೆ ಕೇಳುವೆನು
ಚಿಂತಿಸಿಕೊಳ್ಳಿರೈ ಹೋಗಿರೆಂದನು ಮಹಾ
ಸಂತಸಬಡುತ ಸಾಗಿದರು ॥೫॥

ಮದನನ ಕಂಡು ಕೈಮುಗಿದು ಬಿನ್ನವಿಪೊಡೆ
ಮ್ಮೈದೆ ಬೆಚ್ಚುತಿದೆಯೆಂದರವರು
ಕದನವುಂಟಾದರೆ ಭೀತಿ ಬೇಡುಸುರಿರೈ
ಮೊದಲಂತೆ ಹೇಳಬೇಡೆಂದ ॥೬॥

ಕಾಳಗವುಂಟು ಖಡ್ಗದ ಯುದ್ಧ ಬೇಡ ಕೇ
ಳ್ಕೀಲಾದ ಮೃದುಲಯುದ್ಧವನು
ತೋಳ ಬಲ್ಮೆಯೊಳೆ ನೀವಿಬ್ಬರು ಮಾಳ್ಪುದೆಂ
ದಾ ಲೇಸುಗಾರರಾಡಿದರು ॥೭॥

ಎವೆಯಿಕ್ಕದೊಬ್ಬರೊಬ್ಬರ ನೋಡಬೇಕು ಕ
ಣ್ಣೆವೆಯಿಕ್ಕಿದಾಗದು ಸೋಲ
ಬವರವನಸ್ಪರೊಳ್ಬಿಡಬೇಕು ಬಿಡದಿರ್ದ
ರವಧರಿಸಿನ್ನೊಂದು ಮಾತ ॥೮॥

ಮೊಗೆದು ಹಸ್ತಗಳಿಂದ ಜಲವನೊಬ್ಬೊಬ್ಬರು
ಮೊಗಕೆ ಚೆಲ್ಲುವುದು ಚೆಲ್ಲುತಿರೆ
ಮೊಗವಡ್ಡದೆಗೆದಾಗ ಸೋಲವಲ್ಲಿಯು ಯುದ್ಧ
ಮುಗಿಯದರಾಲಿಸಿನ್ನೊಂದ ॥೯॥

ಮಲ್ಲಯುದ್ಧವ ಮಾಳ್ಪದವರೊಳೊಬ್ಬನನೆತ್ತಿ
ದಲ್ಲಿ ಸುಮ್ಮನೆ ನಿಲಬೇಕು
ಅಲ್ಲಿಂದ ಮುಂದೊಂದು ಕಾಳಗಗೀಳಗ
ಸಲ್ಲದೊಪ್ಪಿನಲೊಪ್ಪಿತೆಂದ ॥೧೦॥

ಸಂಗರ ದೊರೆಗಳಬ್ಬರಿಗಲ್ಲದುಳಿದ ಷ
ಡಂಗವಾಹಿನಿಗಿಲ್ಲವೆಂದು
ಡಂಗುರ ಸಾರಿತು ಕಟಕದೊಳ್ಮದನನ
ಣ್ಣಂಗೊಡ್ಡಿ ನಿಲೆ ಮೇರುವಂತೆ ॥೧೧॥

ತರತರವಾಗಿ ನಿಂದರು ವ್ಯಂತರಾಂಕರಂ
ಬರಚರರಾಕಾಶದಲ್ಲಿ
ನರರು ತುರುಗಿ ತುಂಬಿ ನಿಂದಿರ್ದರಾ ವಸುಂ
ಧರೆ ತೆರಪೆಯ್ದದೆಂಬಂತೆ ॥ ೧೨ ॥

ಗರ್ವಗಿರಿಯನಿಳಿವಂತಾನೆಯಿಂದಿಳಿ
ದುರ್ವಿಯೊಳಲ್ಪದೂರವನು
ಕರ್ವುವಿಲ್ಲನು ಮಧ್ಯದೊಳು ನಿಂದನಾ ಪಸು
ರ್ವರ್ವತನಿಂದುದೆಂಬಂತೆ ॥ ೧೩ ॥

ಹೆಣ್ಣು ಗಂಡಿನ ಕಂಗಳವನಲ್ಲಿ ನಿಂದವು
ಕಣ್ಣಿಯೊಳಿರಳೆ ಬಿದ್ದಂತೆ
ಅಣ್ಣಗೊಡ್ಡಿದುದೊಂದು ಕೊರತೆಯಲ್ಲದೆ ಮಿಕ್ಕ
ಬಣ್ಣದೊಳವಗುಂಟೆ ಕೊರತೆ ॥ ೧೪ ॥

ಹತ್ತಿರಕೆಯ್ತಂದು ಚಾಂಗು ಭಲಾಯಿನ
ಲೆತ್ತಿದ ಶಿಬಿಕೆಯಿಂದಿಳದು
ಹತ್ತೆಂಟು ಮಾರೆನೆ ಸ್ಮರಿಸಿದಿರೊಳು ನಿಂದ
ನುತ್ತುಂಗಚರಿತನಾ ಚಕ್ರಿ ॥ ೧೫ ॥

ಕುಂದಣದದ್ರಿ ಪಚ್ಚೆಯ ಗಿರಿಯೆರಡೊಡ್ಡಿ
ನಿಂದುವೊ ಕಳದೊಳೆಂಬಂತೆ
ಸೌಂದರಾಯತದೀರ್ಘದೇಹಿಗಳಣ್ಣ ತ
ಮ್ಮಂದಿರೊಪ್ಪಿದರು ನೋಳ್ಪರಿಗೆ ॥ ೧೬ ॥

ಭೂರಿವಾದ್ಯದ ನಾದ ನಿಂದುದು ಕದನದ
ಭೇರಿಯ ಸನ್ನೆ ಮತ್ತಿರಲಿ
ಆರಯ್ದು ನಾಲ್ಕೆಂಟು ನುಡಿವೇಳ್ವಿ ಮೊದಲೆಂದ
ನಾ ರಾಯ ಪಲರು ಕೇಳ್ವಂತೆ ॥ ೧೭ ॥

ಮನಸಿಜ ಕೇಳಣ್ಣ ನಿನಗೆನಗಿಂದು ದು
ರ್ಮನದಿಂದ ಜಗಳವಪ್ಪುದಕೆ
ಫೆನವೇನು ಹೇಳು ನಿಷ್ಕಾರಣ ಕದನವ
ಜನಪರೆಸೆಗುವರೆಯೆಂದ ॥ ೧೮ ॥

ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ ನೀ
ನೆನ್ನೊಡವೆಯ ಕೊಂಡುದಿಲ್ಲ
ಮುನ್ನಯ್ಯನಿರಿಸಿದಂದದಿ ರಾಜ ಯುವರಾಜ
ಸನ್ನಾಹದೊಳಗಿರ್ದೆವಲ್ತೆ ॥ ೧೯ ॥

ನುಡಿಯಲ್ಲಿ ನಾ ನಿನ್ನ ಬಿಟ್ಟಾಡಿದೆನೆ ನನ್ನ
ಪಡೆಯೊಳಗೊಬ್ಬರಾಡಿದರೆ
ಒಡಹುಟ್ಟಿದವನ ನೋಡುವೆನೆಂದು ಬರಹೇಳಿ
ಫಡ ಹುಸಿಯೆಂಬರೆ ಅಪ್ಪ ॥ ೨೦ ॥

ಮಾತಿಗೆ ತೊಡಗಿದ ಕದನಕಿಂದಿವನಿಗೆ
ಭೀತಿಯಾದುದೆಯೆನಬೇಡ
ಪೂತು ಮರುಳೆಯೆನೆ ಕದನದೋರ್ಪೆನು ಕೇಳು
ಪಾತಕ ಕಳೆವೆನು ಮೊದಲು ॥ ೨೧ ॥

ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ
ಸೇನೆಗೆ ಬರವೇಳ್ದೆನೈಸೆ
ನೀನೆನಗಗ್ರಜನಾದರೆ ನೀನಿರ್ದ
ಸ್ಥಾನಕೆಯ್ದದೆ ತಡೆದಿಹೆನೆ ॥ ೨೨ ॥

ಪಾಟಿಸಿ ಕೇಳಣ್ಣ ನಾನು ನೀನಾಡುವ
ರಾಟಕಾರರು ನಮ್ಮ ಭಟರು
ನೋಟಕಾರರೆ ನೀನು ನೆನೆದ ಸಂಗ್ರಾಮ ಸ
ಘಾಟಕೆಯಾಯ್ತು ಕಂಜಾಸ್ತ್ರ ॥ ೨೩ ॥

ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು
ನಿನ್ನ ಗೆಲ್ದೆನಗೊಂದು ಜಸವೆ
ಪನ್ನಗ ನರ ಸುರ ಲೋಕದುತ್ತಮರು ಛೀ
ಯೆನ್ನರೆ ಯೋಚಿಸಿ ನೋಡು ॥ ೨೪ ॥

ಅದಕೇನು ನೀನಿಂತು ಕದನಕೆಯ್ದಿದೆಯೈಸೆ
ಕದನದೊಳ್ಗೆಲವೈಸೆ ಕಡೆಗೆ
ಬದೆಗರಂದದಿ ಹೋರಲೀತಕೆ ಗೆಲವು ನಿ
ನ್ನದು ಸೋಲವೆನಗೆ ಹೋಗೆಂದ ॥ ೨೫ ॥

ಗೆಲವೆಂಬುದೇನುಪಚಾರವಲ್ಲಣ್ಣ ತೋ
ಳ್ವಲವ ಬಲ್ಲೆನು ಸತ್ಯವಹುದು
ಬಲವೆಲ್ಲ ಕೇಳ್ವಂತೆ ಪೇಳ್ವೆನು ಕೇಳೆಂದು
ಬಳಿಕ ಚಕ್ರೇಶನಿಂತೆಂದ ॥ ೨೬ ॥

ದೃಷ್ಟಿವಿಜಯವೆಂತು ಪಂಚವಿಂಶತಿಚಾಪ
ದಷ್ಟುದ್ದ ಹೆಚ್ಚು ನೀನೆನ್ನ
ದೃಷ್ಟಿಸಬಹುದಾನು ನಿನ್ನ ನೋಳ್ಪಾಗೂರ್ಧ್ವ
ದೃಷ್ಟಿ ನೊಂದೆವೆ ಹೊಯ್ವುದೆಂದ ॥ ೨೭ ॥

ಜಲಯುದ್ಧದೊಳು ನಾನು ಚೆಲ್ಲೆ ನಿನ್ನೆದೆ ಮುಟ್ಟ
ಯಿಳಿವುದು ವಾರಿ ನೀನೆನ್ನ
ಮುಳುಗಿಸಿ ಬಿಡಬಹುದವರಿಂದ ನನಗಾಗ
ಚಳಿತಡ್ಡಮೊಗವಹುದೆಂದ ॥ ೨೮ ॥

ಮಲ್ಲಗಾಳಗವೆಂತು ಭುಜಬಲಿಯೆಂದಯ್ಯ
ನಲ್ಲವೆ ಪೆಸರಿಟ್ಟನಂದು
ಬಲ್ಲೆನಯ್ಯನ ವಾಕ್ಯ ಹುಸಿಯದು ಭುಜಬಲ
ದಲ್ಲಿ ನೀನೆತ್ತುವೆಯೆಂದ ॥ ೨೯ ॥

ಅನುಜಾತಗಗ್ರಜ ಸೋತೆನೆಂಬಾಗ ಕ
ರ್ರನೆ ದಶದಿಕ್ಕು ಕಂದಿದುವು
ಅನಲವಿಲ್ಲದೆ ಹೊಗೆ ಸೂಸಿತು ಸೂಸದೆ
ಮನರತ್ನ ನೊಂದಾಡುವಾಗ ॥ ೩೦ ॥

ಬೆದರಿತು ಕಟಕ ಹಾ ಕಷ್ಟವ ನೆನೆದೆನೆಂ
ದೆದೆಯೊಳಂಗಜ ನೊಂದುಕೊಳುತ
ಮದನ ಸಮ್ಮುಖವಾಗದೋರೆಯಾಗಿರೆ ಚಕ್ರಿ
ಮುದದೋರಿ ಮತ್ತಿಂತು ನುಡಿದ ॥ ೩೧ ॥

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ
ಸ್ತ್ರಾಲಯದೊಳು ತಾನೆ ಹುಟ್ಟ
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ
ಆಲಿಗೆ ನೋವಾಗುವಂತೆ ॥ ೩೨ ॥

ಅರಸಾಗಿ ನೀನೂರೊಳಿರ್ದೆ ನೀನಟ್ಟಿದ
ದೊರೆಯಾಗಿ ನಾನೆಯ್ದಿ ನಿನ್ನ
ಧರೆಯ ಸಾಧಿಸಿ ತಂದೆನೊಪ್ಪುಗೊಳ್ನಿನ್ನ ಭೂ
ವರವೃಂದವಿದೆ ಕಟಕವಿದೆ ॥ ೩೩ ॥

ನಿನಗೆ ನಾನಣ್ಣ ನೆಂಬಕ್ಕರವಿಲ್ಲ ನೀ
ನನುಜನೆಂಬಕ್ಕರುಂಟಪ್ಪ
ನನೆವಿಲ್ಲ ನಿನ್ನ ಭಾಗ್ಯವ ಕಣ್ಣುತುಂಬ ನೋ
ಪ್ಪೆನು ರಾಜಪದವಿಗಿಂತೊಪ್ಪು ॥ ೩೪ ॥

ಕೌಶಲಿಯೊಳು ನೀನು ಸುಖಬಾಳು ನನಗೊಂದು
ದೇಶವ ಕೊಟ್ಟು ಬೇರಿರಿಸು
ಕ್ಲೇಶದ ಮಾತಲ್ಲ ಸಂತೋಷ ಪುರುಪರ
ಮೇಶನ ಕೆಂಬಜ್ಜಿಯಾಣೆ ॥ ೩೫ ॥

ವಿರಸವ ಬಿಡು ಬಿಡೆಂದಾ ಚಕ್ರಿ ನುಡಿಯೆ ಪೂ
ಸರನು ತಗ್ಗುತ ಮನಸಿನೊಳು
ಮುರಿದ ಮೋರೆಯೊಳಿರೆ ಚಕ್ರರತ್ನವನಾಗ
ಕರೆದಿಂತು ನುಡಿದನಾ ಚಕ್ರಿ ॥ ೩೬ ॥

ಹೋಗು ಚಕ್ರವೆ ಭುಜಬಲಿಯನೋಲೈಸೆನೆ
ಹೋಗದೀತಗೆ ಪುಣ್ಯವುಂಟು
ಪೂಗಣೆಯಗೆ ಚಕ್ರ ಬೆಸಗೈಯ್ವ ಪುಣ್ಯವಿ
ಲ್ಲಾಗಿ ನಿಂದಿತು ಮುಂದೆ ಬಂದು ॥ ೩೭ ॥

ಎಲೆಲೆ ಪಿಶಾಚ ಹೋಗೆಂದರೇತಕೆ ಹೋಗೆ
ಕಲಹ ನಿನ್ನಿಂದಾದುದೆನಗೆ
ಜಲಜಾಸ್ತ್ರನತ್ತ ಸಾರೆಂದು ನೂಕಿದರದು
ಬಳಿ ಜಾರುವಂತೆ ಜಾರಿದುದು ॥ ೩೮ ॥

ಗರುಡಮಂತ್ರಕೆ ವಿಷವಿಳವಂತೆ ಭರತಭೂ
ವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ ಕೋಪ ವೈ
ಸರಿಸಿತು ಹೃದಯ ತಂಪಾಯ್ತು ॥ ೩೯ ॥

ಒಲೆದ ಮೋರೆಯ ತಿರುಹಿದನು ಸಮ್ಮುಖವಾಗಿ
ಕಳೆದನೊಯ್ಯನೆ ತೋಳತೊಡಕ
ಅಳುಕಾದುದಣ್ಣನ ಮೊಗವ ನೋಡದೆ ನಾಚಿ
ತಲೆಗುಸಿದಿರ್ದನಾ ಮದನ ॥ ೪೦ ॥

ಕಡೆಯ ಯುದ್ಧದೊಳಲ್ಲದಿವರುಕ್ಕು ನಿಲ್ಲದೆಂ
ದಿಡಿಕಿರಿದೀಕ್ಷಿಸುತಿರ್ದು
ನುಡಿಯೊಳೆ ಚಕ್ರಿ ಗೆಲ್ದುದ ಕಂಡು ಪೊಗಳ್ದರು
ನುಡಿಯದೆ ಸಖ ಮಂತ್ರಿ ನೃಪರು ॥ ೪೧ ॥

ನುಡಿವ ಗಂಭೀರ ಬೋಧಿಪ ಬೋಧೆ ತಮ್ಮನೆಂ
ದೊಡಕು ಹುಟ್ಟಿಸದೊಂದು ಪ್ರೀತಿ
ತೊಡರದ ಮಾತಿಂದ ಗೆಲ್ದ ಚಾತುರ್ಯಕೆ
ಪಡೆಯೆಲ್ಲ ಮೆಚ್ಚಿ ಕೀರ್ತಿಸಿತು ॥ ೪೨ ॥

ನಾಸಿಕಾಗ್ರದೊಳಿಟ್ಟ ಬೆರಳಿಂದ ತನ್ನ ದು
ರ್ವಾಸನಾ ಚರಿತವ ನೆನೆದು
ಹೇಸುವ ತಲೆಗೊಡಹುವನಾಗ ಮನಸಿಜ
ನಾಸನ್ನ ಮೋಕ್ಷುಕನಲ್ತೆ ॥ ೪೩ ॥

ಪಾಪಿ ನಾನೆನ್ನಣ್ಣ ಗಿದಿರಾಗಿ ಕುಲಕೆ ಲೋ
ಕಾಪವಾದವ ತಂದೆನಕಟ
ಕೋಪ ಗರ್ವಗಳಾರ ಕೆಡಿಸವೆಂದಾ ಪುಷ್ಪ
ಚಾಪ ತನ್ನೊಳು ಮರುಗಿದನು ॥ ೪೪ ॥

ಸನ್ಮತವಲ್ಲದ ಕಾರ್ಯವ ನೆಗಳ್ವೆನ್ನ
ನುನ್ಮತ್ತನೆನ್ನದೆ ಪಿತನು
ಮನ್ಮಥನೆಂದೇಕೆ ಕರೆದನೆಂಬೆದೆಯೊಳು
ದ್ಯನ್ಮೋಕ್ಷಗಾಮಿ ಚಿಂತಿಸಿದ ॥ ೪೫ ॥

ನೀತಿವೇಳ್ವಾಗ ನಿನ್ನಣ್ಣ ನಿನ್ನಣ್ಣನೆಂ
ದೋತೆಲ್ಲರೊರೆವಾಗ ನಾನು
ಆತನೀತನು ಚಕ್ರಿಯೆಂದೆನಗ್ರಜನೆಂಬ
ಮಾತನಾಡಿದೆನೆ ಹಾಯೆಂದ ॥ ೪೬ ॥

ಲೋಕದ ಮುಂದಣ್ಣ ಸೋಲವೆಂದನು ನೂಕು
ತಾಕಾಯ್ತು ಚಕ್ರಕೆನ್ನಿಂದ
ತೂಕವೆ ನನಗಿದು ಲಘುತೆಯೆಂದಾತ್ಮನಿ
ರಾಕರಣೆಯ ಮಾಡಿಕೊಂಡ ॥ ೪೭ ॥

ದೀಕ್ಷೆಗೆಯ್ದುವುದೆ ಲೇಸೆಂದೆದೆಯೊಳು ನೆನೆ
ದಿಕ್ಷುಕೋದಂಡನಣ್ಣನನು
ಈಕ್ಷಿಸದೆಡಬಲದತ್ತ ನೋಡಿದನು ಶಾಂ
ತಾಕ್ಷಿಯೊಳೊಮ್ಮೆ ಪಾಯ್ದಳವ || ೪೮ ||

ಆಕಾಶ ಭೂಮಿ ತುಂಬಿದ್ದ ದಳವ ನೋಡ
ಲಾ ಕಾಮಗೊಡನೆ ಕೈಮುಗಿಯೆ
ಏಕೆ ಕೈಮುಗಿದಪರೆನಗೆಂದು ನಾಚ್ಚಿ ಮ
ತ್ರೀಕಡೆಗೊಲೆದು ನೋಡುವನು || ೪೯ ||

ಪೌಜ ನೋಳ್ಪುದ ಬಿಟ್ಟು ತಲೆವಾಗಿ ಮದನನ
ಣ್ಣಾಜಿಗಿನ್ನೆನ್ನ ಕಾರ್ಯವನು
ಮಾಜದಾಡುವೆನೆಂದು ನೆನೆದಿರ್ದನಿಲ್ಲಿಗೆ
ರಾಜೇಂದ್ರಗುಣವಾಕ್ಯ ಸಂಧಿ || ೫೦ ||

ಚಿತ್ತಜನಿರ್ವೇಗ ಸಂಧಿ

ನೋವುತಿರ್ದುದು ಚಿತ್ತ ಮನ್ಮಥ ತಲೆಯೆತ್ತಿ
ಭೂವರಾಗ್ರಣಿಯ ನೋಡಿದನು
ದೇವರು ಕ್ಷಮಿಸುವುದೆನ್ನದು ತಪ್ಪೆಂದು
ಭಾವಶುದ್ಧದೊಳು ಕೈಮುಗಿದ ॥ ೧ ॥

ತಪ್ಪಿಲ್ಲವಣ್ಣ ನಿನ್ನಯ ನಡೆಯೆಲ್ಲವು
ಒಪ್ಪವೆನ್ನೆದೆಗೆ ಸಂತೋಷ
ಒಪ್ಪಚ್ಚಿ ನೋವೆನಗಿಲ್ಲವೆಂದೊರೆದನಾ
ಭಪ್ಪನ್ನ ದೇಶದೊಡೆಯನು ॥ ೨ ॥

ದೂಷಣವನು ತೊಡಗಿದೆ ನಾನು ದೇವರು
ಭೂಷಣಗೈದಿರಿ ನನ್ನ
ದೋಷವೆನ್ನನೆ ಪುದಿದಲೆವುದು ಪರಮ ಸಂ
ತೋಷ ದೇವರಿಗಹುದೆಂದ ॥ ೩ ॥

ಅಂತಾಡದಿರು ನೀನು ಬೇರೆ ನಾ ಬೇರೆಯೇ
ನಿಂತು ನೋವರೆ ಕಬ್ಬುವಿಲ್ಲ
ಕುಂತೆಂಬುದೆನಗಿಲ್ಲ ನಿನಗಿಲ್ಲ ನೀನಿಂತು
ಚಿಂತೆಗೊಳ್ಳದಿರೆಂದನಣ್ಣ ॥ ೪ ॥

ನನಗಾವ ಚಿಂತೆಯಿಲ್ಲೆನ್ನ ಬಿನ್ನಹವನೊಂ
ದನೆ ಪಾಲಿಪುದು ದೇವರೆಂದ
ಅನುಜ ಪೇಳೇನೆಂದ ದೀಕ್ಷೆಗೆ ಪೋಪೆನೊ
ಪ್ಪೆನುತ ಕೈಮುಗಿದನಂಗಜನು ॥ ೫ ॥

ಭೋಂಕನೆದ್ದನು ಚಕ್ರಿ ಗಳಗಳನೆಯ್ತಂದು
ಪಂಕಜಾಯುಧ ದೀಕ್ಷೆಗೀಗ
ಮುಂಕೊಂಡು ಪೋಪೆನೆಂಬುದ ಮರೆಯೆಂದು ತ
ಳ್ಳಂಕದಿ ತಕ್ಕೈಸಿಕೊಂಡ ॥೬॥

ದೀಕ್ಷೆಗೆಯ್ದಲದೇಕೆ ಭಂಗವೇನಾಯ್ತು ಕ
ಟಾಕ್ಷಿಸಿ ನುಡಿದೆನೆ ನಿನ್ನ
ಮೋಕ್ಷಕಾರ್ಯವ ಮುಂದೆ ಯೋಚಿಸಿಕೊಂಬವಿಂ
ದೀ ಕ್ಷೋಭೆ ಬೇಡಪ್ಪಯೆಂದ ॥೭॥

ಭಂಗವಿಲ್ಲೆನಗೆ ದೇವರಿಗೊಡ್ಡಿ ನಿಂದಾಜಿ
ರಂಗದಿ ಲಘುತೆದೋರಿದೆನು
ಭಂಗುರಕರ್ಮತಂತ್ರದಿ ನೊಂದೆನೆನ್ನಂತ
ರಂಗ ಹೇಸಿತು ಪೋಪೆನೆಂದ ॥೮॥

ದರ್ಪಕ ನೀನೇನ ಮಾಡಿದ್ಯೆ ಹುಂಡಾವ
ಸರ್ಪಿಣಿದೋಷದೊಳೆನಗೆ
ತೋರ್ಪುದೀ ಭಂಗವೆಂದೊರೆದನಯ್ಯನು ನೀನು
ಬೇರ್ಪಟ್ಟು ನೆನೆಯದಿರೆಂದ ॥೯॥

ಕಾಲದೋಷದೊಳಾದರೆನ್ನಿಂದ ಪ್ರಕಟವಾ
ದೀ ಲೋಕವಾರ್ತೆ ಜಾರುವುದೇ
ಕೈಲಾಸಗಿರಿಗೈಯ್ದು ಬೇಕೆನ್ನ ಬಿನ್ನಹ
ಕಾಲಸ್ಯ ಮಾಡದೊಪ್ಪೆಂದ ॥೧೦॥

ಆಡದಿರಾ ಮಾತನೆನ್ನ ಮುನಸಿಗರ್ತಿ
ಮಾಡಿ ಮತ್ತೆಯ್ದು ನೀನೆಂದು
ಕೂಡೊಮ್ಮೆ ತಕ್ಕೈಸಿ ಗಡ್ಡವ ಪಿಡಿದೊತ್ತಿ
ಬೇಡಿಕೊಂಡನು ಚಕ್ರಧರನು ॥೧೧॥

ಎಂದಿರ್ದು ದೀಕ್ಷೆಯ ತಾಳ್ದು ನಾನಪವರ್ಗ
ಮಂದಿರದೊಳು ನಿಲ್ವೆನೈಸೆ
ತಂದೆಯ ಬಳಿಗಿಂದೆ ಪೋಪೆನೊಪ್ಪಣ್ಣಾಜಿ
ಯೆಂದನಾ ಕುಸುಮಕೋದಂಡ ॥ ೧೨ ॥

ಹರಿದುದು ಸಂಸಾರಸುಖದಾಸೆ ನಿಮ್ಮೆಲ್ಲ
ರೆರಕದ ಮಮತೆ ಜಾರಿದುದು
ಮುರಿದ ಚಿತ್ತವನಿನ್ನು ಮೊನೆಮಾಡಬಹುದೆ ಬಾ
ಯೆ೦ದೆರೆದು ಹೋಗೆಂದುಸುರೆಂದ ॥ ೧೩ ॥

ಅಣ್ಣನಿಗಿದಿರೊಡ್ಡಿ ನಿಂದ ದೇಹವ ಮಸಿ
ಮಣ್ಣ ಮಾಳ್ಪೆನು ತಪಕೊಡ್ಡಿ
ಉಣ್ಣದುರಿವ ಕರ್ಮಗಳ ಸುಟ್ಟು ಮೋಕ್ಷಕೆ
ಪೊಣ್ಣನೆಯ್ದುವೆನು ನೋಡೆಂದ ॥ ೧೪ ॥

ಮುನ್ನಿದ್ದರರುವರು ತೊಂಬತ್ತಮೂವರು
ನಿನ್ನೆ ಹೋದರು ನೀನು ಹೋಗೆ
ಭಿನ್ನ[1]ಗಾ[1]ಗದೆಯೆನ್ನ ಭಾಗ್ಯ ಬೇಡಣ್ಣ ನೀ
ನೆನ್ನ ನುಡಿಯ ಮನ್ನಿಸೆಂದ ॥ ೧೫ ॥

ಪುರುನಾಥನಾಣೆ ದೇವರ ಪಾದದಾಣೆ ಶ್ರೀ
ಗುರು ಹಂಸನಾಥನೆ ಸಾಕ್ಷಿ
ಇರೆನು ದೀಕ್ಷೆಗೆ ನನ್ನ ಕಳುಹಚಿತ್ತೈಸೆಂದು
ಚರಣಾಬ್ಜದೊಳು ಮುಂಡೆಯಿಟ್ಟ ॥ ೧೬ ॥

ಕಂಬನಿ ಗುಳಗುಳನೊಕ್ಕವೇಳೀಳಣ್ಣ
ನೀಂ ಬಯಸಿದುದಾಗಲೆಂದ
ಇಂಬಿನೊಳಿದ್ದಾಗಲೆಂದೊಡಂಬಟ್ಟು ಪಾ
ದಾಂಬುಜಕಿತ್ತ ಹೆಮ್ಮಗನ ॥ ೧೭ ॥

---

1 ವಾ (ಖ)

ಅಳುತಿರ್ದನಣ್ಣನು ನಗುತ ಕೈಮುಗಿದವ
ಕಳಭ ಸಂಕಲೆ ಬಿಟ್ಟು ವನಕೆ
ತಳರ್ವಂತೆ ಸಂಗವೆ ತೊರೆದೆಯ್ದು ತಿರ್ದನು
ದಳವೆಲ್ಲ ಬೆರಗಾಗಿ ನೋಡೆ ॥ ೧೮ ॥

ಅಕಟ ಕಷ್ಟವನೊಂದನೇನೆಂಬೆ ಕುಟಿಲನಾ
ಯಕ ಶತನಾಯಕನವರು
ಮಕರಾಂಕ ವೊದಲು ತಮ್ಮೊಡೆಯನಿಗೊಡ್ಡಿದಾ
ಟಕೆ ನೋವ ತಾಳ್ದದ್ದರೊಳಗೆ ॥ ೧೯ ॥

ಒಡೆಯನಿಗನುಕೂಲವಾದರೀ ಸ್ಮರನು ನ
ಮ್ಮೊಡೆಯನು ಮೀರಿದಾಗಿವನು
ಒಡೆಯನೆಯೆಂದಲ್ಪದೂರವ ಹೋಗಿ ಬೆಂ
ಗಡೆಯೊಳಿಂತೆಂದರು ನಿಂದು ॥ ೨೦ ॥

ಸಿರಿಯ ಹೋಗಾಡಿ ಹೋಹರಸ ಕೇಳ್ನೀನೆಮ್ಮ
ಭರತಚಕ್ರೇಶ್ವರಗೆರಗಿ
ಇರದಾದೆ ಹೋಗು ಹೋಗಿನ್ನು ಭಿಕ್ಷೆಗೆ ನೀನು
ತಿರಿವೊಡಾತನ ನಾಡೆ ಬೇಕು ॥ ೨೧ ॥

ಜಸಶಾಂತಿಯೊಳು ಹೋಗುತಿರ್ದನಾ ನುಡಿಗಿಷ್ಟು
ಕುಪಿತದಿ ತಿರುಗಿ ನೋಡಿದನು
ತಪಸಿಗೆಯ್ದುವಗೆ ಸೈರಣೆ ಮುಖ್ಯವೆಂದು ನಿ
ರ್ಲಪಿತದಿ ನಡೆದನಾ ಮದನ ॥ ೨೨ ॥

ಜೋಲಿಯಿಲ್ಲದೆ ಬಂದು ಜಿನನ ಕಂಡಾತ್ಮಸ
ಖಾಳವೆರಸಿ ಯೋಗಿರೂಪ
ತಾಳಿದನಂಗಜನೆಂಬೆನು ಕೊಸರುವ
ವೇಳೆಯಲ್ಲಿರಲತ್ತಲಿತ್ತ ॥ ೨೩ ॥

ಮುಂದಿಯ ಕಳುಹಿ ಕಣ್ಣೀರಿಕ್ಕುವಂಗಜ
ನಂದನರುಗಳ ಕೈವಿಡಿದು
ಕಂದಿದ ಮೊಗ ಕಣ್ಣೊಳಗುವ ಕೆಂಬನಿಯಿಂದ
ಮುಂದಿರವೊಕ್ಕನಾ ಚಕ್ರಿ ॥ ೨೪ ॥

ಪೂಗೋಲ ದೀಕ್ಷೆಗೆಯ್ದಿದನೆಂಬ ನುಡಿ ಕಿವಿ
ದಾಗೆ ಯಶಸ್ವತೀದೇವಿ
ತೂಗುಮಂಚದೊಳಿರ್ದು ಮೂರ್ಛೆಹೋದಳು ಮೂರ್ಛೆ
ಯಾಗದೆ ಪೆತ್ತ ತಾಯ್ಗಳಿಗೆ ॥ ೨೫ ॥

ಚಿಕ್ಕಣ್ಣ ದೀಕ್ಷೆಗೆಯ್ದಿದನೆ ಹಾ ಹಾ ನನ್ನ
ಚಿಕ್ಕಾನೆ ಮದವೆದ್ದು ಹೋಯ್ತೆ
ಹೊಕ್ಕಡ್ಡಗಟ್ಟ ತಡೆವರಿಲ್ಲದಾದರೆ
ಅಕ್ಕಟಯೆಂದಳಲಿದಳು ॥ ೨೬ ॥

ಇರುಳಾದುದಷ್ಟಕಾಯುರುಳಿಲ್ಲ ಶೋಕಜಾ
ಗರವಿದ್ದರುದಯವಾಯ್ತೊಡನೆ
ಇರುಳಿ ಝುಂಝೂನಿಲನೆಂಬ ನಂಬುಗೆವಂತ
ಸ್ಮರಪುರಕೆಯ್ದಿ ಹೇಳದನು ॥ ೨೭ ॥

ಕೇಳಲೊಡನೆ ಸುನಂದಾದೇವಿ ಮೂರ್ಛೆಯ
ತಾಳಿದಳರಸಿಯರೆದೆಗೆ
ಬಾಳಬೀಸಿದ ತೆರನಾಯ್ತು ಹಾಯೆಂದು ಮೂ
ರ್ಛಾಲಂಬವಡೆದೊರಗಿದರು ॥ ೨೮ ॥

ಎಚ್ಚತ್ತು ಜನನಿ ಏನೇನು ಝುಂಝೂನಿಲ
ಪಚ್ಚೆವಿಲ್ಲಣ್ಣನೇನಾದ
ಹುಚ್ಚುಗೊಂಡಂತೆಮ್ಮ ಬಿಸುಟು ಹೋದನೆ ದೀಕ್ಷೆ
ಮೆಚ್ಚಾಯ್ತೆ ಹೋಗೆಂದಳಳುತ ॥ ೨೯॥

ಕಾಣ್ಬೆನೆಂದೆಯ್ದಿದನಣ್ಣನ ದೀಕ್ಷೆಗೆ
[1]ಪೂಣ್ಬ ವಿರಕ್ತಿಯೆಂ[1] ತಾಯ್ತ್ತಿ
ಜಾಣ್ಬೆಡೆ ನುಡಿವನಲ್ಲರಸಣ್ಣ ಹೇಳೆಂದು
ಗೋಣ್ಬಾತು ಕೇಳಿದಳಳುತ ॥ ೩೦ ॥

ಮತ್ತೆ ಮೂರ್ಛೆಗೆ ಸಲ್ವ ಳೆಚ್ಚರುವಳು ಬಟ್ಟೆ
ಮುತ್ತಿನಂತಳಿಯೆ ಕಣ್ಣೀರು
ಚಿತ್ತಜ ನನ್ನ ಕೊಂದೈ ಕಂದ ಹಾ ಹಾ ಗು
ಣೋತ್ತಮಯೆಂದಳಲಿದಳು ॥ ೩೧ ॥

ಮಕ್ಕಳ ನೆನೆಯದೆ ಪೆಂಡಿರ ನೋಡದೆ
ಲೆಕ್ಕಕೆ ತಾರದೆ ನನ್ನ
ಚಿಕ್ಕಪ್ರಾಯದೊಳಂತು ದೀಕ್ಷೆಗೆ ಲಂಘಿಸ
ತಕ್ಕುದೆ ನಿನಗೆ ಕಂದರ್ಪ ॥ ೩೨ ॥

ಜನವ ಮೋಹಿಪ ನಿನ್ನ ಪಿರಿಯೆತ್ತ ನೀನೆತ್ತ
ಮುನಿವೇಷವಡೆವುದಿದೆತ್ತ
ಕನಸ ಕಂಡಂತಾಯ್ತ್ತಿ ನಿನ್ನ ಸಂಸದವೆಂದು
ಜನಸಿ ಮರುಗಿದಳಂಗಜನ ॥ ೩೩ ॥

ಪರವಶ ತಿಳಿದೆದ್ದು ಸ್ಮರನ ರಾಣಿಯರೈದೆ
ಜರಿವುತ ಮಳಲೇರಿಯಂತೆ
ಸುರಿವ ಕಂಬನಿಯಿಂದ ಹಲುಬಿದರೊಡನೆ ನ
ಲ್ಲರನಗಲ್ದಾರು ಸೈರಿಪರು ॥ ೩೪ ॥

ನಲ್ಲ ಹಾ ಹಾ ನಮ್ಮ ಬಿಟ್ಟು ಹೋದೈ ಕಬ್ಬು
ವಿಲ್ಲ ಹಾ ಹಾ ನಮ್ಮ ತೊರೆದೈ
ಕೊಲ್ಲದೆ ಕೊಂದೆ ನೀನೆಮ್ಮನೆಂದಬಲೆಯ
ರೆಲ್ಲರು ಹಳವಳಿಸಿದರು ॥ ೩೫ ॥

---

1 ಹೂಣ್ಬ ವಿರಕ್ತಿಗೆಂ (ಖ)

ಅಂಗನೆಯರ ಕೂಟ ಸಾಕಾಯ್ತೆ ನಿನಗೆ ಮು
ಕ್ತ್ಯಂಗನೆಯಾಟ ಬೇಕಾಯ್ತೆ
ಸಂಗರವೆಂಬೊಂದು ನೆವದೋರಿ ವಿಧಿ ನಿನ್ನ
ವುಂಗಡೆಗೊಯ್ದುದೆ ನೀರ ॥ ೩೬ ॥

ಅರಗಿಳಿಗಳಿರ ಬಾಣಾಂಕಿಗಳಿರ ಸಾಕಿ
ದೆರಳೆಗಳಿರ ಹಂಸಗಳಿರ
ಅರಲಂಬ ಪೋದ ಬಟ್ಟಿಗೆ ಪೋಪೆವಿನ್ನೆಮ್ಮ
ಸ್ಮರಿಸದೆ ಸುಖವಿರಿ ನೀವು ॥ ೩೭ ॥

ಲತೆಯೆ ನಂದನವೆ ತಂಗೊಳನೆ ತಾವರೆಯೆ ಮಾ
ರುತನೆ ಮುತ್ತಾಳಿ ಕೇಳೆಮ್ಮ
ಪತಿ ಪೋಪ ದೆಸೆಗೆ ಪೋಪೆವು ಸುಖವಿಹುದೆಂದು
ಸತಿಯರೆದ್ದರು ಗೃಹದಿಂದ ॥ ೩೮ ॥

ಬಂದು ತಮ್ಮತ್ತೆಯ ಕಂಡು ಕಾಲ್ಗೆರಗಿ ನ
ಮ್ರೊಂದಾಗಿ ಮುನಿದು ನಿಮ್ಮಣುಗ
ಮುಂದಕೆಯ್ದಿದನು ನಾವೆಯ್ದಿ ತಿಳುಪಿ ಕರೆ
ತಂದಪೆವೆಂದರುಬ್ಬಿಯೊಳು ॥ ೩೯ ॥

ನಾನು ಬಪ್ಪೆನು ದೀಕ್ಷೆಗೆಲೆ ಹೆಣ್ಣುಗಳಿರಾ ಮ
ತ್ತೇನಿಲ್ಲಿ ಬಯಲಾಸೆಯೆನಗೆ
ಮಾನಿತಾರ್ಥವ ಭರತಣ್ಣಗಕ್ಕನಿಗೆ ಸಂ
ಧಾನಿಸಬೇಕೆಂದಳಾಕೆ ॥ ೪೦ ॥

ತಡವುಂಟು ನನಗದರಿಂದ ನೀವೆಯ್ದಿರೆಂ
ದೊಡಬಟ್ಟು ಮತ್ತವರವರ
ಒಡಹುಟ್ಟಿದವರು ಕೆಲಬರು ನಂಬುಗೆವಂತ
ರೊಡಗೂಡಿ ಬೀಳ್ಕೊಟ್ಟಳಾಕೆ ॥ ೪೧ ॥

ಸೊಸೆಯರ ಕಳುಹಿಸುವಾಗ ಸುಬಲರಾಜ
ನೆಸರಿನ ಮೂರು ವರುಷದ
ಹಸುಳೆ ಬಂದಯ್ಯನ ತೋರು ತೋರೆಂದು ಪೀ
ಡಿಸಿತು ಮನ್ಮಥನ ಮಾತೆಯನು ॥ ೪೨ ॥

ಇದ್ದಾಗ ತೊಡೆಯ ಮೇಲಿಟ್ಟುಕೊಂಡಂಗಜ
ಮುದ್ದಾಡುತಿಪ್ಪನಾ ಶಿಶುವ
ಗುದ್ದುವುದಜ್ಜಯ ಬಿದ್ದಳುವುದು ಕಾಡು
ತಿದ್ದುದು ಪಿತನ ತೋರೆಂದು ॥ ೪೩ ॥

ಏನೆಂಬೆ ಮಾರನ ಸತಿಯರಷ್ಟರೊಳು ವಿ
ಮಾನವನೇರಿ ದೂರದೊಳು
ಬಾನೆಡೆಯೊಳು ಪೋಗುತಿರೆ ಕಂಡು ಚಕ್ರಿಯ
ಸೇನೆಯೆಲ್ಲವು ಮರುಗಿದುದು ॥ ೪೪ ॥

ಶೋಕನಾದವ ಕೇಳಿ ಭರತೇಶ ಮನದಲ್ಲಿ
ವ್ಯಾಕುಲಬಟ್ಟು ಕೂಡೆನಗೆ
ಏಕೆ ಬಂದಿತು ಚಕ್ರವೀ ರಾಜ್ಯಪದವಿ ಮ
ಹಾ ಕಷ್ಟ ಹಾ ಹಾ ಸುಡೆಂದ ॥ ೪೫ ॥

ಫಲವಾವುದೈಸಿರಿ ಬಂದರೆ ತನ್ನು ಳ್ಳ
ಬಳಗ ಸಂತಸ ಮಾಡಬೇಡ
ಕುಲವ ಗೋಳಿಡಿಸುವ ಸಿರಿಯ ಸುಡೆಂದು ಭೂ
ತಳಪತಿ ನೊಂದ ತನ್ನೊಳಗೆ ॥ ೪೬ ॥

ಅವಾವ ದುಃಖ ಬಂದರು ಹಂಸನಾಥನ
ಭಾವನೆ ಬರಿಗೈವುದೆಂದು
ನೋವನೊತ್ತರಿಸಿ ಕಣ್ಮುಚ್ಚಿ ತನ್ನಾತ್ಮನ
ಭೂವರನೀಕ್ಷಿಸುತಿರ್ದ ॥ ೪೭ ॥

ಗುರುಹೆಂಬನನಾಥನೆ ಬಲ್ಲನಾ ನೃಪನ ಚಿ
ತ್ಪರಿಣತಿಯನು ಮುನ್ನ ಕವಿದ
ಉರುಚಿಂತೆಯೆತ್ತ ಹೋದುದೊ ಹತ್ತುಸಾವಿರ
ವರುಷದ ಯೋಗಿಯಂತಿರ್ದ ॥ ೪೮ ॥

ಅಣುಗರ ಜನನಿಯು ಪೆಂಡಿರ ಪಡೆಯ ಧಾ
ರಿಣಿಯು ತನ್ನೊಡಲನು ಮರೆದ
ಅಣುಮಾತ್ರವಾದರು ಪರಚಿಂತೆಯಿಲ್ಲದಾ
ಗುಣರತ್ನಸಿದ್ಧನಾತ್ಮದೊಳು ॥ ೪೯ ॥

ಅಳುತ ಕರೆವುತ ತನ್ನರಮನೆಯವರೆಲ್ಲ
ಮುಳುಗಿದ್ದರಧಿಕ ಶೋಕದೊಳು
ಒಲೆಯದಲ್ಲಾಡದೆ ಪರಮಾತ್ಮಸುಖದಲ್ಲಿ
ಮುಳುಗಿರ್ದನಾ ರಾಜಯೋಗಿ ॥ ೫೦ ॥

ಕೆಲರುಪವಾಸವ ಕೆಲರೇಕಭುಕ್ತವ
ಕೆಲರು ಫಲಾಹಾರವಿಡಿದು
ಒಳ್ಳಗೆ ಹೆಂಗಳು ಹೊರಗಖಿಲವಾಹಿನಿಯಿರೆ
ಕಳೆದುದಿಂತುಟು ಮೂರು ದಿವಸ ॥ ೫೧ ॥

ಸ್ವದಳವೆರಸಿ ಚಕ್ರಿ ತಪವಿದ್ದ ಸಾಮರ್ಥ್ಯ
ತ್ರಿದಶಲೋಕವ ನಡುಗಿಸಿತು
ಅದ ಕೇಳಿ ಮರುಗಿ ಮಗನ ಕಾಣ್ಬೆನೆಂದು ಬೇ
ಗದೊಳಿದ್ದಳಾ ಚಿಕ್ಕ ತಾಯಿ ॥ ೫೨ ॥

ಕಿರಿಯಮ್ಮನೆಯ್ತಂದಳಿನೆ ಹಂಸನಾಥಗ
ಕ್ಕರು ಮಿಗೆ ನಮಿಸಿ ಕಣ್ಬೆರೆದು
ಒರೆವ ಕಂಬನಿಕೂಡಿ ದಿಗಿಲನೆದ್ದಡಿಗಳಿ
ಗೆರಗಿದನಾ ಸಾರ್ವಭೌಮ ॥ ೫೩ ॥

ಅವರ ಪೂರ್ವಪ್ರಾಪ್ತಿಯವರ ಕೊಂಡೊಯ್ದುದು
ನವಗಿಷ್ಟು ನೋವಾಯ್ತು ಮೊದಲು
ದಿವಸ ಮೂರರ ಮೇಲೆ ತಂಪಾಯ್ತು ಮಗನೆ ಶೋ
ಕವ ಮರೆಯೆಂದಳಾ ಜನನಿ ॥ ೫೪ ॥

ಚಿಂತೆಯೆ ಮುಪ್ಪು ಸಂತೋಷ ಜವ್ವನವೆಂಬ
ಸಂತಾನ ವಾಕ್ಯವುಂಟಣ್ಣ
ಚಿಂತಿಸಬೇಡ ನನ್ನಾಣೆಯೆಂದಣುಗನ
ಸಂತಾಪವಾರೆ ನುಡಿದಳು ॥ ೫೫ ॥

ಹಸನಾಯ್ತು ಭೂವರನೆದೆಯಾಗ ಕುವರರ
ವಿಸರವೆರಗಿದುದಂಬಕೆಗೆ
ಸೊಸೆಯರಳುತ ಬಂದು ನಮಿಸಲಾ ಸೊಸೆಯರ
[1] ಹಸನಾಗಿ ಹರಸಿದಳಾಗ [1] ॥ ೫೬ ॥

ಚಿಕ್ಕಮ್ಮಗಾ ರಾಯ ಕೈಲಾಗುಗೊಟ್ಟೊಳ
ಹೊಕ್ಕು ದೊಡ್ಡಮ್ಮನ ಕಂಡ
ಅಕ್ಕ ತಂಗಿಯರಿಷ್ಟು ನೊಂದು ಮತ್ತಾ ನೋವ
ನಿಕ್ಕಿ ಸೈರಣೆವೆತ್ತರೊಡನೆ ॥ ೫೭ ॥

ಜಳಕ ದೇವಾರ್ಚನೆಗೈದು ಮತ್ತೆಲ್ಲರು
ಜ್ವಲದಿ ಪಾರಣೆಯ ಮಾಡಿದರು
ಬಲವೆಲ್ಲ ಪಾರಣೆ ಮಾಡಿತು ಸರ್ವರು
ಮ್ಮಳ ಹೋಯ್ತು ಕೂಡೆ ತಂಪಾಯ್ತು ॥ ೫೮ ॥

ಇತ್ತಲೀ ಕಟಕ ಶಾಂತಿಯೊಳಿದ್ದುದಾ ಹೆಂಗ
ಳತ್ತಲಾದೀಶನ ಕಂಡು
ಉತ್ತಮದೀಕ್ಷೆಯ ತಾಳ್ದರೆಂಬಲ್ಲಿಗೆ
ಚಿತ್ತಜನಿರ್ವೇಗ ಸಂಧಿ ॥ ೫೯ ॥

---

1 ಕುಶಲೆ ಹರಸಿದಳೋಜೆಯೊಳು 1 (ಸೊಸೆಯರು ಬಂದೆರಗಿದರು)

ನಗರೀಪ್ರವೇಶ ಸಂಧಿ

ಕಿರಿಯಮ್ಮ ದೀಕ್ಷೆಗೆಯ್ದುವೆನೆನೆ ಭರತೇಶ
ನರುಗೋಲನಾತ್ಮಜರಿನ್ನು
ನೆರೆವನ್ನ ದೀಕ್ಷೆಗೆಳಸಲಾಗದೆಂದು ಕಾ
ಲ್ಗರಗಿ ನಿಲ್ಲಿಸಿದನಾ ಚಕ್ರ ॥ ೧ ॥

ಕರೆದು ಮಹಾಬಲರಾಜಗೆ ಪೌದನ
ಪುರದ ಪಟ್ಟವ ಕಟ್ಟ ಕೂಡೆ
ವರಮಂತ್ರಿ ದಳಪತಿ ಬಲಕುಡತೊಡಲಿತ್ತು
ದೊರೆ ಪೊಕ್ಕನೊಡನರಮನೆಯ ॥ ೨ ॥

ಚಿಕ್ಕಮ್ಮಗಾ ಕಾರ್ಯವನು ಪೇಳಲಾ ಸ್ಥಿತಿ
ಜೊಕ್ಕವೆಂದೊಪ್ಪಿದಳಾಕೆ
ಮಕ್ಕಳು ಮೂವರಿಗುಡಲಿತ್ತು ತೊಡಲಿತ್ತು
ತಕ್ಕೈಸಿಕೊಂಡಿಂತು ನುಡಿದ ॥ ೩ ॥

ಅಮ್ಮಾಜಿಯಾರೈಕೆಗಿದ್ದ ಪಳಣ್ಣ ನಾ
ನೊಮ್ಮೆಮ್ಮೆ ಹಿತವರನಟ್ಟ
ನಿಮ್ಮನಾರೈಕೆ ಮಾಡುವೆನು ನಿಮ್ಮೂರಲ್ಲಿ
ಸುಮ್ಮಾನದೊಳಗಿಹುದೆಂದ ॥ ೪ ॥

ಅಂಗಜಸುತರತ್ತಲೆಯ್ದಿದರಿತ್ತ ಷ
ಡಂಗಭೇರಿಗಳು ಸೂಳ್ಯೈಸೆ
ಸಂಗರಮಲ್ಲನೆದ್ದನು ತನ್ನ ಪುರಕೆ ಷ
ಡಂಗವಾಹಿನಿಯ ಲಗ್ಗೆಯೊಳು ॥ ೫ ॥

ಸಾಕೇತಪುರದ ಮಹಾಪ್ರಜೆಗೂಡಿ ಪ
ತಾಕೆ ಪಲ್ಲವ ಛತ್ರಗೂಡಿ
ಮಾಕಾಳನಾಯಕನಿದಿರ್ವಂದು ಕಂಡಾಗ
ಭೂಕಾಂತನಿದಿರೊಳಿಂತೆಂದ ॥ ೬ ॥

ಪುರವ ಬಿಟ್ಟಿರುವತ್ತು ಸಾವಿರ ವರುಷವು
ಪುರಜನಗಳು ನಾವು ನಿನ್ನ
ಸ್ಮರಿಸಿದ ತಪಸಿಂದು ಸಿದ್ಧಿಯಾಯ್ತೆನೆ ರಾಯ
ಕರುಣದಿ ನೋಡಿಷ್ಟು ನಕ್ಕ ॥ ೭ ॥

ದೇವರೊತ್ತಿನೊಳಿರ್ದ ಸೇನೆಗೆ ದಂಡಾದ
ನೋವಿಲ್ಲ ದೇವರನಗಲಿ
ನಾವು ಧಾವತಿಬಟ್ಟಿವೆಂದರು ಪ್ರಜೆಗಳು
ಭೂವರ ನಗುತ ನೋಡಿದನು ॥ ೮ ॥

ಅಲ್ಲಲ್ಲಿ ಪುರಜನ ಪುರಸತಿಯರು ರಾಜ
ಮಲ್ಲ ಬೀದಿಯೊಳೆಯ್ದುವಾಗ
ಇಲ್ಲದ ಬಡವಗೆ ಬಲುರಾಜ್ಯ ಬಂದಂತೆ
ಸಲ್ಲೀಲೆವೆತ್ತು ನೋಡಿದರು ॥ ೯ ॥

ಅಂದು ನವ್ಮೊಡೆಯನೊಂದಾನೆಯೊಳ್ಪೋದ ನೋ
ಡಿಂದು ಕುಮಾರರಾನೆಗಳ
ಸಂದಣಿಯೊಳು ಬಂದದೊಂದು ಭಾಗ್ಯವೆಯೆಂದು
ಮುಂದಿ ನೋಡಿತು ನಲವೇರಿ ॥ ೧೦ ॥

ಬಂದನೊ ಧರೆಯೊಳುಳ್ಳಧಿಕವನಾಯ್ದಾಯ್ದು
ತಂದನೊ ರಾಯರ ದೇವ
ಇಂದಯೋಧ್ಯಾಪುರದೈಸಿರಿ ದ್ವಿಗುಣವಾ
ಯ್ತೆಂದುಲಿದುದು ಜನಸ್ತೋಮ ॥ ೧೧ ॥

ನುಡಿವ ಪ್ರಜೆಯ ನುಡಿಗೇಳುತ ನೋಡುತ
ಸಡಗರಕೆದೆಯುಬ್ಬಿ ನಗುತ
ಅಡಿಗಡಿಗವರಿಗಲ್ಲಲ್ಲಿ ಮನ್ನಣೆಗಳ
ಕೊಡಿಸುತೆಯ್ತಂದನಾ ಸುಮುಖ ॥ ೧೨ ॥

ರಾಜಗೃಹದ ಮುಂದೆ ನಿಂದು ಸರ್ವರನು ವಿ
ಭ್ರಾಜಿತವಿನಯದಿ ಕಳುಹಿ
ರಾಜಶಿರೋಮಣಿ ಜಯ ಜಯ ಚಾಂಗೆನ
ಲೋಜೆಯಿಂದಿಳಿದನಾನೆಯನು ॥ ೧೩ ॥

ತನುಜರುವೆರಸೊಳವೊಕ್ಕು ರಾಣಿಯರು ಚೆ
ಲ್ವಿನೊಳು ನೀರಾಜನವೆಸಗೆ
ಜನಪ ನೋಡುತ ಹಂಸನಾಥನ ನೆನೆದರೆ
ಮನೆವೊಕ್ಕನಧಿಕಲೀಲೆಯೊಳು ॥ ೧೪ ॥

ಮದುವೆಯ ಮನೆಯಂತೆ ಪುರದಲ್ಲಿ ಸಂದಣಿ
ಕೆದರಿದುದೆಲ್ಲಿ ನೋಡಿದರು
ಅದನೇನ ಪೇಳ್ವೆ ಷಟ್ಪಂಡದ ಸಿರಿಯೆಲ್ಲ
ವುದುಗಿದ್ದುದೊಂದೆ ತಾಣದೊಳು ॥ ೧೫ ॥

ಅರಸಿಯರೆಲ್ಲರ ಬಳಸಿನೊಳಗೆ ಪಟ್ಟ
ದರಸಿ ಸೋಂಕಿರಲೊಲ್ದು ಕುಳಿತು
ಧರಣಿಯ ಸಂತವಿಟ್ಟಂದವ ನುಡಿದು ಸಿಂ
ಗರದೊಳಿದ್ದನು ಭರತೇಶ ॥ ೧೬ ॥

ಶ್ರೇಣ್ಯಾರೋಹ ಸಂಧಿ

ಶತ್ರುಗಳಿಲ್ಲವೆಂಬಂತೆ ಷಟ್ಖಂಡದ
ಧಾತ್ರೀಪಾಲರ ಗೆಲ್ದು ಚಕ್ರಿ
ಮಿತ್ರಭಾವದೊಳಾಳುತಿರ್ದನುರ್ವಿಯನೇಕ
ಛತ್ರದೊಳೇನ ಬಣ್ಣಿಪೆನು ॥೧॥

ನೆರೆದ ಪೆಣ್ಗಂಡು ಮಕ್ಕಳ ಮದುವೆಯ ಮಾಡು
ತುರೆ ಹಸುಳೆಗಳ ಮುದ್ದಿಸುತ
ನಿರಿಗುರುಳಬಲೆಯರೊಳು ಲೀಲೆಮಾಡುತ
ಕ್ಕರಿನೊಳಿರ್ದನು ಮಹಾ ಸುಕೃತಿ ॥೨॥

ಮಸಗಿ ದಿನಂಪ್ರತಿಯೊಳು ತೋರ್ಪ ಹೊಸಪರಿ
ಯೊಸಗೆಯೊಳಾಟ ಪಾಟದೊಳು
ಅಸಮಪುಣ್ಯದ ಫಲಪಾಕವನುಂಡು ತೀ
ರಿಸುತಿರ್ದನಾತ್ಮಸಾಕ್ಷಿಯೊಳು ॥೩॥

ಆವಾಗ ಲೀಲೆಯೊಳಿರೆ ತನ್ನ ಸೋದರ
ಮಾವಂದಿರೆಸಿಪ ಯೋಗಿಗಳು
ಕೈವಲ್ಯಬೋಧವಡೆದ ಸುದ್ದಿ ಪರಿದುದು
ಭೂವರ ಕೇಳ್ದರ್ತಿವಟ್ಟ ॥೪॥

ಭುಜಬಲಿಯೋಗೀಂದ್ರನೆಂತಿರ್ದನೆಂದನು
ರಜತಗಿರಿಯ ಬಿಟ್ಟು ಬೇರೆ
ಗಜವಿಪಿನದೊಳಿರ್ದನಾತನ ತಪದ ಬ
ಲ್ಬುಜವ ಚಿತ್ತೈಸೆಂದರವರು ॥೫॥

ಮುಚ್ಚಿದ ಕಣ್ಣು ಮುಚ್ಚಿದ ತುಟಿ ಬಿಟ್ಟ ತೋ
ಳೊಚ್ಚತಾಗಿರೆ ನಡೆವುಸುರು
ಸಚ್ಚಿದಾತ್ಮನ ನೋಡುತೈದಾನೆ ಲೋಕವೆ
ಲ್ಲಚ್ಚರಿವಟ್ಟು ನೋಡುತಿದೆ ॥೬॥

ಹುತ್ತವೆದ್ದುವು ಬಳ್ಳಿ ಮೈಗೆ ಹಬ್ಬಿದುವು ಹಾ
ವತ್ತಿತ್ತ ಹರಿದುವಂಗದೊಳು
ಚಿತ್ತ ಕಂಪಿಸದೆ ನಿಂದಿಹನೆ ಯೋಗದ ಕಲ್ಲ
ಪುತ್ತಳಿಯಂತೆ ಯೋಗೀಂದ್ರ ॥೭॥

ಇನಿತುಗ್ರವೇಕೆ ಸ್ವಾಮಿಯ ಕೇಳ್ವೆನೆಂದು ಭೋಂ
ಕನೆ ವೊರಮಟ್ಟನಾ ಚಕ್ರಿ
ಘನಮಾರ್ಗವಿಡಿದು ಕೈಲಾಸಾದ್ರಿಗೆಯ್ತಂದು
ಜನಕಗೆರಗಿದನರ್ತಿಯೊಳು ॥೮॥

ಸ್ತುತಿ ಮಾಡಿ ಮತ್ತೆಲೆ ಸರ್ವಜ್ಞ ಭುಜಬಲಿ
ಯತಿಗುಗ್ರತಪವಿನಿತೇಕೆ
ಅತಿಘೋರ ತಪಸಾಗಿ ಘನಬೋಧವೇಕೆ ಶೋ
ಭಿತವಾಗದೆಂದನಯ್ಯನೊಳು ॥೯॥

ತಪಸುಗ್ರವಾದರೇನೊಳಗೆ ಕಷಾಯಗ
ಳುಪಶಮ ಬೇಕೆಲೆ ಭವ್ಯ
ಚಪಲಚಿತ್ತವ ಕೊಡಬೇಕಾತ್ಮಕಲೆಯೊಳಿಂ
ದುಪದೇಶಗೈದನಾ ಸ್ವಾಮಿ ॥೧೦॥

ಹೊರಗೆ ಸರ್ವವ ಬಿಡಬಹುದು ಚಿತ್ತದೊಳಿದ್ದ
ಕರೆಯನೊಂದನು ಬಿಡಲರಿದು
ಅರುವೆಯ ಬಿಸುಟರೆ ತಪಸಿಯೆ ಹೆರೆ ಬಿಟ್ಟ
ರರೆಗೋಲೆ[1] ವಿಷ ಹೋಯ್ತೆ ಫಣಿಗೆ ॥೧೧॥

1 ರರೆಗೊಲೆ (ಛ) (ಕ)

ಆ ಬುಭಬಲಿ ನಿನ್ನ ಬೀಳ್ಕೊಂಡು ಬಹಾಗ
ಶೋಭೆಯಿಲ್ಲದ ನುಡಿಗೇಳ್ದ
ಕ್ಷೋಭೆಯಾದುದು ಚಿತ್ತವದರಿಂದ ಘೋರ ತ
ಪೋಭಾರವಾಂತನ್ಯೆ ಕೇಳು ॥ ೧೨ ॥

ನಿನ್ನ ಕೆಳೆಯರಿಬ್ಬರೆಮ್ಮರಸಿನ ರಾಜ್ಯ
ದನ್ನ ಪಾವನ ಬಿಟ್ಟು ಬೇರೆ
ಇನ್ನೆಲ್ಲಿ ತಪಿಸುವೈ ಹೋಗೆಂದರದ ಕೇಳ್ದು
ಭಿನ್ನಮಾನಸನಾದನವನು ॥ ೧೩ ॥

ಇವನ ಸೀಮೆಯೊಳನ್ನ ಪಾನವ ಕೊಂಬೆನೆ
ವಿವಿಧ ಕರ್ಮವ ಸುಟ್ಟು ಬೇಗ
ಶಿವವನೆಯ್ದುವೆನೆಂದು ನಿಂದನು ಧ್ಯಾನ ಸಂ
ಭವಿಸಿತಿಲ್ಲ ಗರ್ವದಿಂದ ॥ ೧೪ ॥

ಒಂದು ಸಂವತ್ಸರ ಮುಟ್ಟುಸವಾಸಾಗ್ನಿ
ಯಿಂದ ಕಷಾಯದಿ ನೊಂದ
ಇಂದು ನೀನೆಯ್ದಿ ವಂದಿಸೆ ಶಲ್ಯ ಬಿಡುವುದೊ
ಳ್ಪಿಂದಹುದುತ್ತಮ ಧ್ಯಾನ ॥ ೧೫ ॥

ಘಾತಿಕರ್ಮಗಳಿಂದು ಕೆಡುವುವು ಸುಜ್ಞಾನ
ಜ್ಯೋತಿ ಬಿಂಬಿಸುವುದಾ ಮುನಿಗೆ
ನೀ ತೆರಳೆನಲೊಸೆದೆರಗಿದನೆದ್ದನು
ಭೂತಳಪತಿ ತಪೋವನಕೆ ॥ ೧೬ ॥

ಕಂಡನು ಘೋರವಿಪಿನದಲ್ಲಿ ನಿಜಬಾಹು
ದಂಡವನಿಳುಹಿ ಕಣ್ಮುಚ್ಚಿ
ಕೆಂಡದಂದದ ಬಿಸಿಲೊಳು ನಿಂದ ಮುನಿಯನಾ
ಮಂಡಲೇಶನು ಚೋದ್ಯವಟ್ಟ ॥ ೧೭ ॥

ಕಡುಬಿಸಿಲೊಳು ಹುತ್ತ ಬಿರಿದು ಕುಪ್ಪಳಿಸಿದ್ದು
ವೊಡನೆ ಮತ್ತೊಣಗಿದ ಲತೆಯ
ಕಡುಪಿಂದ ಬ್ರಾಹ್ಮಿಸೌಂದರಿಯರ ರೂಪಾಂತು
ಬಿಡಿಸುತಿದ್ದರು ಖಚರಿಯರು ॥ ೧೪ ॥

ಸುಜನಶೇಖರ ನೋಡುತೆಯ್ತಂದು ಪಾದವಾ
ರಿಜಗಳಿಗಿಟ್ಟು ಮಂಡೆಯನು
ಭುಜಬಲಿಯೋಗೀಶ್ವರಾಯ ನಮೋ ನಮೋ
ವಿಜರಾತ್ಮನೇ ನಮೋಸ್ತೆಂದ ॥ ೧೯ ॥

ಗುರುವೆ ನಿನ್ನಂತರಂಗದ ನೆಲೆಯನು ನಾನು
ಪುರುನಾಥನೊಳು ಕೇಳಿ ಬಂದೆ
ಧರೆ ನನ್ನದೆಂದು ನೆನೆವರೆ ಮಹಾತ್ಮ ಸ
ರ್ವರು ಮುನ್ನ ಪಿಡಿದಾಳ್ದುದಲ್ತೆ ॥ ೨೦ ॥

ಹಲಬರು ಮುನ್ನಾಳ್ದರಿಂದು ನಾನಾಳ್ವೆನಿ
ನ್ನೊಲಿದು ಮುಂದೆನಿಬರಾಳುವರೊ
ಬೆಲೆವೆಣ್ಣಿನಂತಿರ್ದ ಭೂಮಿಯ ನನ್ನ ದೆಂ
ದೆಲೆ ಸುಬೋಧಾತ್ಮ ಯೋಚಿಪರೆ ॥ ೨೧ ॥

ನೀನಿಳೆಯನು ತೃಣವೆಂದು ಬಿಸುಟು ಬಂದೆ
ನಾನಿದ ಬಿಡಲಾರದಾದೆ
ನೀನೀಗ ಗುರುವಾದೆ ಲಘುವಾದೆ ನಾನೆನೆ
ಮಾನ ಜಾರಿತು ಕೇಳ್ದು ಮುನಿಗೆ ॥ ೨೨ ॥

ಝೊಂಪಿಪ ಶಲ್ಯಭೂತವ ವಾಕ್ಯಮಂತ್ರದಿ
ತಾಂ ಪೊರಮಡಿಸೆ ಚಕ್ರೇಶ
ತಂಪಾಯ್ತು ಚಿತ್ತ ತಳ್ಕಂಕ ಜಾರಿತು ಧ್ಯಾನ
ಸಂಪತ್ತು ಫಲಿಸಿತಾ ಮುನಿಗೆ ॥ ೨೩ ॥

ಮೆಯ್ಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ
ಕೆಯ್ಯಿಕ್ಕಿ ನಿಂದನಾ ಮದನ
ಹುಯ್ಯಲನಾ ರಾಯ ಬಿಡಿಸಿದನೆಂಬಾಗ
ಸಯ್ಯಮವಾರದಿಬ್ಬರೊಳು ॥ ೨೪ ॥

ಭಾವಿತಾತ್ಮನ ನುಡಿಗೇಳಿದಷ್ಟಕೆ ಚಿತ್ತ
ದೋವರಿಯೊಳಮಬ್ಬು ಹೋಯ್ತು
ದೀವಿಗೆ ಹೊತ್ತಿಸಿದಂತಾತ್ಮರೂಪು ಪ್ರ
ಭಾವಿಸುತಿದ್ದುದಾ ಯತಿಗೆ ॥ ೨೫ ॥

ಭರತರಾಜೇಂದ್ರನಾನಂದಬಟ್ಟನು ಮನೋ
ಹರದಿ ಪೂಜಿಸಿದ ಕೀರ್ತಿಸಿದ
ನಿರುತ ಸಾಷ್ಟಾಂಗವೆರಗಿದನೆದ್ದೀಕ್ಷಿಸಿ
ಶಿರದೂಗಿ ಪೊಗಳ್ದನಾ ಜಿನನ ॥ ೨೬ ॥

ಸ್ವಾಮಿ ನಸ್ಮಿಂದುಪಸರ್ಗವಾದುದೆಯೆಂದು
ಭೂಮೀಶ ಬಿನ್ನವಿಸಿದನು
ಆ ಮಾತು ಬೇಡೆಲೆ ಭವ್ಯ ದುಷ್ಕರ್ಮಾಳಿ
ನೇಮಿಸಿತೆಂದನಾ ಸ್ವಾಮಿ ॥ ೨೭ ॥

ರಜತಶೈಲಕೆ ನಾವು ಗಮಿಸಬೇಕೆಲೆ ಭವ್ಯ
ನಿಜಪುರಿಗೆಯ್ದು ನೀನೆನಲು
ವಿಜಿತನೊಲ್ದೆರಗಿ ಬೀಳ್ಕೊಂಡನಾ ಜಿನ ಸುರ
ವ್ರಜಗೂಡಿ ತಳರ್ದನೋಜೆಯೊಳು ॥ ೨೮ ॥

ಜಯ ಜಯ ಸರ್ವಜ್ಞನೆಂಬ ಸಂಭ್ರಮದಿ ಸ್ವಾ
ಮಿಯ ಗಂಧಕುಟಿಯತ್ತ ತೆರಳಿ
ನಿಯಮಿತ ಜನಗೂಡಿ ಕೌಶಲಿಗಿತ್ತ ಲೀ
ಲೆಯೊಳೆಯ್ದುತಿರ್ದನಾ ಚಕ್ರಿ ॥ ೨೯ ॥

ಜಿನಗಾದ ಸಿರಿಯಲ್ಲ ತನಗೆ ತಜ್ಜಿನಪದ
ಜನಿಸಿತೊಯೆಂಬ ಲೀಲೆಯೊಳು
ನನೆ ಕೊನೆವೋಗುತೆಯ್ತಂದು ಪಟ್ಟಣವ ಹೊ
ಕ್ಕನು ನಿವಾಸವ ಹೊಕ್ಕನೊಡನೆ ॥ ೩೦ ॥

ತಾರಾದ್ರಿಗೆಯ್ದಿದುದಾದಿಯಾಗಾದ ವಿ
ಚಾರವನೆಲ್ಲರಿಗರುಹಿ
ಭೂರಾಮನಿದ್ದನೆಂಬಲ್ಲಿಗೆ ಕ್ಷಪಕಶ್ರೀ
ಣ್ಯಾರೋಹಸಂಧಿ ಸುಗಂಧಿ ॥ ೩೧ ॥

ಜನನೀ ವಿಯೋಗ ಸಂಧಿ

ಘಟನೆಯೊಳ್ತಿಲುಗ ಕನ್ನಡ ಹುರುಮುಂಜಿ ಸೊ
ರಟ ಗುಜ್ಜರಾದಿ ನಾಡಿನೊಳು
ರಟಿಸುತನಂತವೀರ್ಯಸ್ವಾಮಿಯುರುಗಂಧ
ಕುಟಿ ಬಂದುದಧಿಕ ಲೀಲೆಯೊಳು ॥ ೧ ॥

ಸುರಭೇರಿ ಮೊಳಗೆ ಸರ್ವರು ಜಯ ಜಯಯೆನೆ
ಧರೆಯಲ್ಲಿ ಪ್ರಭೆ ತುಂಬಿ ತುಳುಕೆ
ತರಣಿಮಂಡಳ ನಿಲುವೊಲು ಗಂಧಕುಟಿ ನಿಂದು
ದರರೆ ಬಾನದೊಳೂರ ಪೊರಗೆ ॥ ೨ ॥

ಒಸಗೆವೇಳ್ದರಿಗಂದುಚಿತವಿತ್ತು ಪಯಣಕ
ರ್ತಿಸುತರಮನೆಗೆಯ್ದಿ ನೃಪತಿ
ಉಸುರಲೆಲ್ಲರು ನಲಿದರು ತಾಯಿ ಸಂತೋಷ
ರಸದೊಳೋಲಾಡಿ ತೇಲಿದಳು ॥ ೩ ॥

ನಾ ಕಾಣ್ಬೆ ತಾ ಕಾಣ್ಬೆನೆಂದರು ನರ ಸುರಾ
ನೀಕವಿದ್ದೆಡೆಗೆ ರಾಣಿಯರ
ಏಕೆ ಕೊಂಡೊಯ್ವನಾ ಚಕ್ರಿಯೆಲ್ಲರ ಮೃದು
ವಾಕಿಂದ ತಿಳುಹಿ ನಿಲ್ಲಿಸಿದ ॥ ೪ ॥

ಶಿರದೊಳಗೊಂದು ಕಪ್ಪಿನ ಕುರುಳಿಲ್ಲಿನೆ
ನರೆತ ವಾರ್ಧಿಕೆಯಲ್ತೆ ನಾನು
ಅರುಹನ ಕಂಡರೇಸಣ್ಣಯೆಂದೆನೆ ತಾಯ
ಹರುಷಕಾ ನೃಪನೊಡಂಬಟ್ಟ ॥ ೫ ॥

ಆನಂದಭೇರಿಯ ಹೊಯ್ಸಿ ತಾಯೊಡನೆಯ್ದೆ
ಸೂನುಗಳ್ವೆರಸಿ ಲೀಲೆಯೊಳು
ಮಾನವೇಶ್ವರ ಬಂದು ಗಂಧಕುಟಿಯ ಪೊಕ್ಕ
ನೇನೆಂಬೆನೆಲ್ಲರರ್ತಿಸಲು ॥ ೬ ॥

ಮಾತೆಯ ಮುಂದಿಟ್ಟು ಸುತರುವೆರಸಿ ಚಕ್ರಿ
ವೀತರಾಗಗೆ ಕಾಣ್ಕೆಯಿಕ್ಕಿ
ಘಾತಿಕರ್ಮೋದ್ಧೂತ ಜಯಯೆಂದು ಸಾಷ್ಟಾಂಗ
ರೀತಿಯೊಳ್ಪೊಡವಟ್ಟು ನಿಂದ ॥ ೭ ॥

ಜಿನಪೂಜೆಗೆಂದು ಮುನ್ನವೆ ಶುಚಿವೆತ್ತರ
ಮನೆಯಿಂದ ಬಂದಿದ್ದರಲ್ತೆ
ಅನುಪಮಪೂಜೆಗೈದರು ಪಾದ್ಯಕೋಟಿ ಭೋ
ರೆನೆ ದಶದಿಕ್ಕು ಬಿಮ್ಮೆನಲು ॥ ೮ ॥

ಓರಂತೆ ಜನನಿ ಪೂಜಿಸುವಳದಕೆ ಪರಿ
ಚಾರಕನಾದನಾ ಚಕ್ರಿ
ಆರು ಬಣ್ಣಿಸಬಲ್ಲರಷ್ಟವಿಧಾರ್ಚನೆ
ಮೇರುವಾಯ್ತುರುಹನ ಮುಂದೆ ॥ ೯ ॥

ವಾರಿ ಗಂಧಾಕ್ಷತೆ ಪುಷ್ಪ ನೈವೇದ್ಯದಿಂ
ದಾರತಿಯಿಂ ಧೂಪ ಫಲದಿ
ಆ ರಾಜಮಾತೆ ಪೂಜಿಸಿದಳು ದಿವಿಜ ನ
ರೋರಗತತಿ ಪೊರೆಯಿಡಲು ॥ ೧೦ ॥

ಕಡೆಗಘ್ರ್ಯೆ ಶಾಂತಿಧಾರೆಯಮಾಡಿ ಮಿಸುನಿಪೂ
ಬಿಡುರನ್ನಗಳ ವೃಷ್ಟಿ ಮಾಡೆ
ತುಡುಕಿ ಮೇಲಮರರು ಪೂಮಳೆಗರೆದರು
ಗ್ಗಡವಾಯ್ತು ಜಯ ಜಯ ಘೋಷ ॥ ೧೧ ॥

ದೇವನ ಬಲಗೊಂಡು ಮುನಿಗಳಿಗೆರಗಿ ಮ
ಹಾ ವಿಭು ನಿಂದನಿಂಬರಿದು
ದೇವ ಗುರುಗಳ ವಂದಿಸಿ ತಾಯಿ ಪೊಕ್ಕಳು
ತೀವಿದಜ್ಜಿಯರ ಗೋಷ್ಠಿಯನು ॥ ೧೨ ॥

ಅಜ್ಜಿಕೆಗಳಿಗಾಕೆ ನಮಿಸಿದಳವರು ನೀ
ನಜ್ಜಿಕೆಯಲ್ತೆ ಬಾರೆನುತ
ಸಜ್ಜನಾರ್ಚಿತೆಯ ಮೈದಡವಿ ಮನ್ನಿಸಲೊಂದು
ಕಜ್ಜ ತೋರಿತು ದೇವಿಗೊಳಗೆ ॥ ೧೩ ॥

ಇವರಂತೆ ನಾನಪವರ್ಗವ ಗಳಿಸದೆ
ಭವನದೊಳಿಹುದಾವ ರೀತಿ
ನೆವದಿಂದ ಕಂಡೆನೀ ಸಭೆಯ ನಿನ್ನಾತ್ಮಕಾ
ರ್ಯವ ಮಾಳ್ಪೆನೆಂದೆಣಿಸಿದಳು ॥ ೧೪ ॥

ಮುನಿಗೋಷ್ಠಿಯೊಡನೆಯ್ದಿ ಪುತ್ರನೊಡನೆ ತನ್ನ
ಮನದೊಳಿದ್ದುದ ಪೇಳ್ದಳಾಕೆ
ಜಿನಸಿದ್ಧ ದೇವರಿಂತುಟು ನಿರೂಪಿಸಲಾಗ
ದೆನುತ ಕಾಲ್ಗೆರಗಿದನವನು ॥ ೧೫ ॥

ಕಂಡೆನು ಕಣ್ತುಂಬಿ ನಿನ್ನ ಸಂಪದವನ
ಖಂಡಿತೋತ್ಸಾಹದೊಳಿರ್ದೆ
ಮಂಡೆ ಬೆಳ್ಪಾದ ಮೇಲಿನ್ನು ತಪಸು ಮಾಳ್ಪೆ
ಗಂಡುಮಗನೆ ಕಳುಹೆನ್ನ ॥ ೧೬ ॥

ನ್ಯಾಯದೊಳಾತ್ಮಕಾರ್ಯವ ಮಾಳ್ಪೆನೆನಲಂತ
ರಾಯವ ಮಾಳ್ಪರೆ ನೀನು
ತಾಯಾರು ನೀನಾರು ಸುಮ್ಮನಿರೆಂದು ಸ
ಹಾಯರಾದರು ತಪೋಧನರು ॥ ೧೭ ॥

ನೆನೆದಾಗ ಬಹುದೆ ವಿರಕ್ತಿ ನೀನೊಪ್ಪಿಂದ
ಜನನಿಯ ಸುಮ್ಮನೆ ನೋಳ್ಪ
ಜನಪನ ಬಗೆಯರಿದಾ ಮುನಿಗಳು ಕೂಡೆ
ಜಿನನೊತ್ತಿಗೊಯ್ದರಾಕೆಯನು ||೧೮||

ಅರಸೆ ನಿನ್ನನುಮತವೆಯೆನೆ ನುಡಿಯದೆ
ಭರತೇಶ ಮೊಗಸನ್ನೆ ಗೊಟ್ಟ
ಅರುಹಗೊರೆದು ದೀಕ್ಷೆಗೊಡಿಸಿದರಾಕೆಗೆ
ಗುರುಗಳಿಂದಾಗದುದೇನು ||೧೯||

ದೇವದುಂಧುಭಿ ಮೊಳಗಲು ದೇವಗಾನವ
ದೇವಗಾಯಕಿಯರು ಪಾಡೆ
ದೇವಾಂಗವಸ್ತ್ರದ ತೆರೆವಿಡಿಯಲು ಜಿನ
ದೇವ ದೀಕ್ಷೆಯನಿತ್ತನೊಡನೆ ||೨೦||

ತನು ನೊದಲಾದುವೆಲ್ಲವು ಪರವಸ್ತು ಹಂ
ಸನೆ ನಿನ್ನ ವಸ್ತು ನಂಬೆಂದು
ನೆನಹೆಲ್ಲವಳಿದೊಂದೆ ವಸ್ತುವ ನೋಡೆಂದು
ಜಿನನುಪದೇಶ ಮಾಡಿದನು ||೨೧||

ಸುರ ಮರ್ತ್ಯ ಭುಜಗರಾ ನವ್ಯದೀಕ್ಷಾಂಗಿಗಾ
ದರದಿಂದ ವಿನತಿಮಾಡಿದರು
ಸರಿಯಾಯ್ತೆ ಇಂದಿಗೆ ತಾಯಾಸೆಯೆನುತ ಪು
ತ್ರರುಗೂಡಿ ಮಣಿದನಾ ನೃಪತಿ ||೨೨||

ಬಿಸುಟ ಕುರುಳ್ಹೊಡಿಗೆಯ ಸಗ್ಗವೆಂಗಳೊ
ಯ್ದೆಸೆದಬ್ಧಿಯೊಳು ಬಿಟ್ಟರತ್ತ
ವಸುಧೇಂದ್ರ ಜಿನಗೆ ವಂದಿಸಿ ಮುನಿಗಳಿಗೆ ವಂ
ದಿಸಿ ಪುರಕೆಯ್ದಿದನತ್ತ ||೨೩||

ಅತ್ತೆ ದೀಕ್ಷೆಯನಾಂತಳಿನೆ ಕೇಳ್ದು ಸೊಸೆಯರು
ಚಿತ್ತದಿ ಹಮ್ಮೈಸಿ ಕೆಡೆದು
ಎತ್ತಣ ತಳ್ಳಿ ಬಂದಿತೊ ಗಂಧಕುಟಿಯೆನು
ತತ್ತರು ಮನೆ ಮನೆಗಳಲಿ ॥ ೨೪ ॥

ಪೊರೆದ ಚಿಂತೆಯನೊತ್ತಿ ಮೂರು ದಿನದಮೇಲೆ
ಕರುಮಾಡದೊಳು ರಾಯನಿರಲು
ಅರಳಂಬೊ ತಾರೆಯೊ ಪಕ್ಷಿಯೊಯೆನೆ ದೂರ
ಬರುತಿದ್ದುದೊಂದು ಬಾನದೊಳು ॥ ೨೫ ॥

ಮುಟ್ಟ ಸಾರ್ವಾಗ ಪಾರಿವಪಕ್ಕಿಯದು ಗಾಳಿ
ವಟ್ಟಿಯಿಂದಿಳದೊತ್ತಿಗೆಯ್ದಿ
ಕಟ್ಟದ್ದುದರ ಕಂಠದೊಳೊಂದು ಕಾಗದ
ಬಿಟ್ಟು ನೋಡಿದನವನೀಶ ॥ ೨೬ ॥

ಶ್ರೀ ಸುನಂದಾಂಬಿಕೆ ಮಗಗರಸಣ್ಣ ಗೆ
ಸೇಸೆಯಿಟ್ಟರಿವುವ ಕಾರ್ಯ
ಭಾಸುರ ಭುಜಬಲೀಶನ ಗಂಧಕುಟಿ ಸಾರ್ದು
ದೀ ಸಮಯದೊಳಿಮ್ಮ ಪುರಕೆ ॥ ೨೭ ॥

ಆಡಬಾರದು ದೊಡ್ಡ ಕಾರ್ಯವುಂಟತಿ ಜೋಲಿ
ಮಾಡದಿಂದೆ ನೀನು ಬಹುದು
ನಾಡಿದು ನಾಳೆಯೆಂದರೆ ನನ್ನ ಕಾಣ್ಬುದು
ಕೂಡದು ನಿನಗಿತಿ ಸ್ವಾಹಾ ॥ ೨೮ ॥

ಎಂದೋದಿ ಲಿಪಿಗೆ ಕೈ ಮುಗಿದು ದೀಕ್ಷೆಯ ತಾಳ್ದೆ
ನೆಂದೆಂಬ ಪರಿಯಿದೆಂದರಿದು
ಬಂದ ಪಕ್ಕಿಗೆ ತಂಪು ಮಾಡಿ ವಿಮಾನದ
ಸಂದಣಿಯೊಳಗೆದ್ದ ನೊಡನೆ ॥ ೨೯ ॥

ಸ್ಮರಪುರಕೆಯ್ದಿ ನಂದನರಿದಿರ್ಗೊಳಿ ಮಾತೆ
ಯರಮನೆವೊಕ್ಕಮ್ಮಗೆರಗಿ
ಪರಕೆಯನಾಂತು ಸ್ವಸ್ಥದಿ ಕುಳಿತವನೀಶ
ಹರುಷವೇರಿಸಿದನಂಬಿಕೆಗೆ ||೩೦||

ಅಮ್ಮಾಜಿ ನಿಮ್ಮರ್ಥವೇನು ನಿಮ್ಮಕ್ಕನಂ
ತೆಮ್ಮ ಬಿಸಾಡುವ ಬಗೆಯೆ
ಮಮ್ಮಾ ನಾನೇನು ಕಪ್ಪನೊ ನಿವಗೆಂದ ಚಿ
ಕ್ಕಮ್ಮನೊಡನೆ ಚಕ್ರಧರನು ||೩೧||

ಪುರದೊತ್ತಿಗದೆ ಗಂಧ ಕುಟಿ ಸಾರ್ದುದಾನತಿ
ಜರತಿಯಲ್ಲವೆ ಅಂತುಟಾಗಿ
ಭರತಣ್ಣ ನಿನ್ನ ಕೇಳದೆ ಪೋಗಲಂಜಿರ್ದೆ
ನಿರೆನಿನ್ನು ದೀಕ್ಷೆಗೆ ಕಳುಹು ||೩೨||

ದೇವರೊಪ್ಪಿದುದಾಗಲೆಂದನದಕೆ ಹರು
ಷಾವೇಶವೆದ್ದಪ್ಪಿಕೊಂಡು
ಈ ವೇಳೆಯೊಳಿ ಗಂಧಕುಟಿಗೆ ಹೋಗುವವೆಂದ
ಳಾವಾಸದಿಂದೆದ್ದರೊಡನೆ ||೩೩||

ಭೂಮಿ ಭೋರನೆ ಗಂಧಕುಟಿಗೆಯ್ದಿ ಭುಜಬಲಿ
ಸ್ವಾಮಿಗಂಬಿಕೆಗೂಡಿ ನಮಿಸಿ
ಆ ಮಾತೆಗಂದು ಪ್ರೇರಿಸಿದಂತೆ ಜಿನಪೂಜೆ
ಗೀ ಮಾತೆಗಿಂದು ಪ್ರೇರಿಸಿದ ||೩೪||

ನಾಕಿಗಳ್ಕಗನು ವಂದಿಸೆ ಪರಸುತ ಸುನಂ
ದಾ ಕಂತಿ ಸಾರ್ದಳಜ್ಜಿಗಳ
ಭೂಕಾಂತ ಜಿನಗೆ ತಾಪಸರಿಗೆರಗಿ ಸ್ವಲ್ಪ
ವ್ಯಾಕುಲಾಂಗದಿ ಮಗುಳಿದನು ||೩೫||

ಬ್ರಾಹ್ಮಣನಾವು ಸಂಧಿ

ಜನನಿಯರ್ತಪಸುದಾಳಿದಮೇಲೆ ಮತ್ತೊಂದು
ದಿನದೊಳಾ ಭರತರಾಜೇಂದ್ರ
ಅನುಭವದಧ್ಯಾತ್ಮರಸವನೋಲಗದೊಳಿಂ
ಪೆನೆ ಪೇಳ್ದನೇನ ಬಣ್ಣಿಪೆನು ॥ ೧ ॥

ದ್ವಿಜರು ಕ್ಷತ್ರಿಯರು ವೈಶ್ಯರು ಶೂದ್ರರೊಂದು ವಾ
ರಿಜವ ಸುತ್ತಿದ ಮದಾಳಿಗಳ
ವ್ರಜವೆನಲಿರೆ ಕಂಪುಗರೆವಬ್ಜದಂತೆ ಭೂ
ಭುಜನಾತ್ಮಹಿತವ ಸೂಸಿದನು ॥ ೨ ॥

ಸೋಹೆ ಸೋಹೆಯೊಳಾಡಿ ಹೋಗುತಿರ್ದನು ಕೇಳು
ತಾ ಹದನನು ಮಂತ್ರಿ ತಿಳಿದು
ಶ್ರೀಹಂಸಕಲಿಯನೆಲ್ಲರಿಗರಿವಂತುಟು
ದಾಹರಿಸಲೆ ಸ್ವಾಮಿಯೆಂದ ॥ ೩ ॥

ದೂರವಲ್ಲಾ ಹಂಸನೆಲ್ಲರ ಮೈಯ ಬೀ
ಡಾರದೊಳಿರುತಿಹನವನ
ಸಾರಿ ಮುಕ್ತಿಯನೆಯ್ದಲರಿಯದೆ ಜಗವೆಲ್ಲ
ಬಾರದ ಭವ ಬರುತಿಹುದು ॥ ೪ ॥

ಶುದ್ಧನು ಬುದ್ಧನು ನಿತ್ಯನು ಸತ್ಯನು
ಶುದ್ಧಭಾವಕೆ ತೋರ್ಪ ಸುಲಭ
ಸಿದ್ಧನು ಜಿನನು ಶಂಕರನು ನಿರಂಜನ
ಸಿದ್ಧನಲ್ಲದೆ ಪೆರನಲ್ಲ ॥ ೫ ॥

ಜ್ಯೋತಿಸ್ವರೂಪನು ಜ್ಞಾನಸ್ವರೂಪನು
ವೀತರಾಗನು ನಿರಾಮಯನು
ಜಾತಿಜರಾಮೃತ್ಯುರಹಿತನು ಕರ್ಮಸಂ
ಘಾತದೊಳಿರ್ದು ನಿರ್ಮಲನು ||೬||

ತಾನನುಭವಿಸಬಹುದು ನುಡಿದನ್ಯರ್ಗೆ
ಮಾನಸದಟ್ಟಸಲರಿದು
ಏನೆನ್ನಬಹುದದು ಕೇಳ್ವರ್ಗೆ ಸಟೆಯಾಗಿ
ಧ್ಯಾನಿಸುವಗೆ ದಿಟವಹುದು. ||೭||

ಕಾಡುವಿಂದ್ರಿಯಗಳ ಕಟ್ಟಿ ತೆಳ್ಳುಸುರಲ್ಪ
ವಾಡಿ ಚಿತ್ತವನೊತ್ತಿ ತರುಬಿ
ನೋಡುವ ಕಣ್ಗಳ ಮುಗಿದು ಸುಜ್ಞಾನದಿ
ನೋಡಲೊಳಗೆ ತೋರ್ಪನಾತ್ಮ ||೮||

ತನುವೆಂಬ ಕೊಡದಲ್ಲಿ ತೆಕ್ಕನೆ ತುಂಬಿದ
ತನಿವಾಲೊ ಅಲ್ಲ ಮೈಯೆಂಬ
ಮನೆತುಂಬಿ ಢಾಳಿಪ ತಂಪಿನ ದೀಪವೊ
ಎನಲಾತ್ಮ ತೋರ್ಪನೈ ಮಂತ್ರಿ ||೯||

ನುಡಿಗೊಳಗಾಗದ ವಸ್ತುವನಿಂತೆಂದು
ನುಡಿದು ತೋರುವೆನೆಂದರಹುದೆ
ಪೊಡವಿಗಪ್ರತಿಯಾದ ಚಿದ್ರೂಪನೊಂದಕೆ
ಪಡಿಯಿಟ್ಟು ತೋರುವುದೆಂತು ||೧೦||

ನೋಡಿಸಿಕೊಂಬನು ತಾನೆ ನೋಳ್ಪನು ತಾನೆ
ನೋಡುವ ದೃಷ್ಟಿಯು ತಾನೆ
ಆಡಲಚ್ಚರಿ ಮುಂದೆ ಧ್ಯಾನದ ಫಲದಿಂದ
ಕೂಡುವ ಮುಕ್ತಿಯು ತಾನೆ ||೧೧||

ಒಳವರಿದಾತ್ಮನ ನೋಳ್ಪುದು ಕರ್ಮವ
ತುಳಿವುದು ಬಲ್ಲವರೆಲ್ಲ
ತೊಳಲದೆ ಭವಮಾಲೆಯೊಳು ಮುಕ್ತಿಗೇರಿ ನಿ
ರ್ಮಲದಲ್ಲಿ ಬಾಳ್ವುದೈಯೆಂದ ॥ ೧೨ ॥

ಮೈಯೊಳಗಿದ್ದ ಶುದ್ಧಾತ್ಮನ ನೋಳ್ಪಂಗೆ
ಕೈಯೊಳಗಿಹುದು ಕೈವಲ್ಯ
ಸಯ್ಯಮಿ ತಾನೆ ಸಾಹಸಿ ತಾನೆ ಧ್ಯಾನದಿ
ಕೊಯ್ಯನೆ ಕರ್ಮದ ಬೇರ ॥ ೧೩ ॥

ಸಂತುಷ್ಟರಾದರೆಲ್ಲರು ಮಂತ್ರಿ ಮಿತ್ರರೋ
ರಂತೆ ಹೋಹುರೆ ಸ್ವಾಮಿಯೆಂದು
ಮುಂತೆ ನಿವಾಳಿಯಿಟ್ಟಡಿಗೆರಗಿದರು ನಿ
ದ್ಧಾಂತ ಕೇಳ್ದಾರರ್ತಿವಡರು ॥ ೧೪ ॥

ಶೂದ್ರ ಕ್ಷತ್ರಿಯ ವೈಶ್ಯರುರೆ ನಿವಾಳಿಯನಿಟ್ಟು
ಚಿದ್ರೂಪರಸಿಕಗೆರಗಲು
ಉದ್ರೇಕವೆತ್ತು ಸಂತಸಗೂಡಿ ವಿಪ್ರ ನ
ಮುದ್ರವೆದ್ದುದು ಸೇಸೆವಿಡಿದು ॥ ೧೫ ॥

ಎಲ್ಲರ ಹರ್ಷವ ನೋಳ್ಪಾಗ ಭೂಸುರ
ರಲ್ಲಿದ್ದ ಹರುಷ ಹೆಚ್ಚಾಗೆ
ಅಲ್ಲಾಡಿ ಮಕುಟವನಧಿಕ ಜಾತಿಯಲಾಯೆಂ
ದುಲ್ಲಾಸವೆತ್ತನಾ ರಾಯ ॥ ೧೬ ॥

ಜಾತಿವಿಶಿಷ್ಟರಲ್ಲದೆ ಹಂಸನಾಥನ
ಖ್ಯಾತಿಗರ್ತಿಸರದೆಂತೆನಲು
ಶೀತಾಂಶು ಕಳೆಗೆ ಚಕೋರಗಳರ್ತಿಪಂ
ತಾತುರಿಸುವುವೆ ಕಾಗೆಗಳು ॥ ೧೭ ॥

ಬ್ರಹ್ಮವೆಂದರೆ ಹಂಸಾನುಭವಿ ತಾನೆ
ಬ್ರಾಹ್ಮಣನಿದು ಶಬ್ದ ಸಿದ್ಧ
ಬ್ರಹ್ಮವೇತ್ಯನುಭವತೀತಿಬ್ರಾಹ್ಮಣಯೆಂದು
ಬ್ರಾಹ್ಮಣವೆಸರಿತ್ತನವರ್ಗೆ ॥ ೧೮ ॥

ಜಿನನಿವಾಸ ನಿರ್ಮಿತ ಸಂಧಿ

ದ್ವಿಜರಿಗೆ ಬ್ರಾಹ್ಮಣವೆಸರಿತ್ತ ದಿವಸದ
ರಜನಿಯ ಕಡೆಯೊಳಾ ಚಕ್ರಿ
ನಿಜಗೆಟ್ಟ ಷೋಡಶಸ್ವಪ್ನವ ಕಂಡನಂ
ಬುಜಸಖ ಮೂಡ ಮೂಡಿದನು ॥ ೧ ॥

ವಿನಯದಿಂದಾ ವಿಪ್ರಜನವ ಬರಿಸಿ ಕಂಡ
ಕನಸ ಪೇಳ್ದವರ ಫಲವನು
ಜಿನನಲ್ಲಿ ಕೇಳ್ವೆನೆಂದಾ ರಾಯ ಪಯಣವಾ
ದನು ಕೂಡೆ ಕೈಲಾಸಗಿರಿಗೆ ॥ ೨ ॥

ಅಂಬರಮಾರ್ಗದೊಳೆಯ್ತಂದು ಜಿನಸಭೆ
ಯೆಂಬೊಂದು ತಾವರೆಗೊಳನ
ತುಂಬಿಗಳೊಗುವಂತೆ ಪೊಕ್ಕು ಭೂಸುರನಿಕು
ರುಂಬವೆರಸಿ ಕಂಡ ಜಿನನ ॥ ೩ ॥

ಮುನಿಗಳಿಗೆರಗಿ ವಿಪ್ರರುಗೂಡಿ ಕುಳಿತೆಲೆ
ಜಿನ ನಿನ್ನ ಸೃಷ್ಟಿಯ ದ್ವಿಜರ
ನೆನಹ ಕಂಡಾನು ಬ್ರಾಹ್ಮಣವೆಸರಿತ್ತೆನೊ
ಪ್ಪೆನುತ ಕೈಮುಗಿದನಾ ಚಕ್ರಿ ॥ ೪ ॥

ಪರಮ ನೀನಂದು ಸೃಷ್ಟಿಸಿದೆ ನಿನ್ನಣುಗ ಭಾ
ಸುರನಾಮವಿತ್ತು ಮನ್ನಿಸಲು
ಕರಸೋತುದೆದೆ ನಾವು ಚಕ್ರಿಯ ಸೃಷ್ಟಿಯೆಂ
ದರು ಚಕ್ರಿ ಹೋ ಹೋ ಬೇಡೆನಲು ॥ ೫ ॥

ಇಲ್ಲೆನಲೇಕೊಪ್ಪ ಭವ್ಯವಿಪ್ರರಿಗೆ ನಿ
ನ್ನಲ್ಲಿ ಮಹಾಪ್ರೀತಿಯಿವರ
ಸೊಲ್ಲಿಂದು ಬಿನದವಾಗಿಹುದು ಕಾಲಾಂತರ
ದಲ್ಲಿ ಮೆರೆವುದೆಂದನರುಹ ॥ ೬ ॥

ನಿಲಲಿ ಸಾಕಾ ಮಾತು ಹದಿನಾರು ಕನಸಿನ
ಫಲವ ನಿರೂಪಿಸೆಂದೊಡನೆ
ತಲೆಮಣಿದಾ ರಾಯ ನುಡಿವುತಿರ್ದನು ಸ್ವಾಮಿ
ತಿಳುಹಿದನೇನ ಬಣ್ಣಿಪೆನು* ॥ ೭ ॥

ಪ್ರಳಯವಹುದು ಮತ್ತೆ ಪ್ರಳಯದ ಮುಂದೆಲ್ಲ
ಮೊಳೆವುವು ಧರ್ಮ ಕರ್ಮಗಳು
ಬೆಳೆದು ಮತ್ತಂತ್ಯದೊಳ್ಕಿಡುತ ಕೂಗಾಡುತ
ಸುಳಿವುದೀಪರಿಯೆಂದನಭವ ॥ ೮ ॥

ದುಸ್ಸ್ವಪ್ನ ಮುಂದಿನ ಜನಕ್ಕೆಸೆ ನನಗಿಂದು
ಸುಸ್ವಪ್ನ ನಿನ್ನ ಕಂಡಾಗ
ಅಸ್ವಪ್ನ ಪತಿವಂದ್ಯ ಜಯ ಜಯ ಪುರೆಯೆಂದು
ಸುಸ್ವರಗೈದನಾ ರಾಯ ॥ ೯ ॥

ಇನ್ನೊಂದು ಬಯಕೆಯುಂಟೆಂದರುಹನ ಮುಂದೆ
ಮುನ್ನಹ ಜಿನನಿವಾಸಗಳ
ನಿನ್ನದ್ರಿಯೊಳು ರಚಿಸುವೆನೊಪ್ಪು ಸ್ವಾಮಿ ತು
ಭ್ಯನ್ನಮೋಯೆನುತೆದ್ದು ನಿಂದ ॥ ೧೦ ॥

ಮೇಲಿದ್ದ ಜಿನಸಭೆಯಿಂದಿಳಿದಡಿಯಣ
ಶೈಲದೊಳ್ನಿಂದು ರಾಜೇಂದ್ರ
ಲಾಲಿತಜಿನಗೃಹಗಳನಿಲ್ಲಿ ರಚಿಸೆಂದು
ಸಾಲುದೋರಿದ ಭದ್ರಮುಖಗೆ ॥ ೧೧ ॥

* ಕೊನೆಯ ಟಿಪ್ಪಣಿಯನ್ನು ನೋಡಿ.

ತತ್ತರ ಬೇಡೊಯ್ಯನೊಳ್ಪಾಗಿ ನಿರ್ಮಿಸೆ
ಪ್ಪತ್ತೆರಡಭವವಾಸಗಳ
ಮತ್ತಾನು ಬಂದು ಪ್ರತಿಷ್ಠೆಗುಜ್ಜುಗಿಪೆನೆಂ
ದಿತ್ತನಾತನಿಗೆ ನೇಮವನು ॥ ೧೨ ॥

ಶಿಖರಿಯೊಳಭವವಾಸಗಳ ನಿರ್ಮಿಸಿ ಭದ್ರ
ಮುಖ ಬಂದು ನೃಪಗೆ ಕೈಮುಗಿದು
ಸುಖದೊಳಾ ಕಾರ್ಯ ಸಂಪೂರ್ಣವಾಯ್ತೆನೆ ಕೊಟ್ಟ
ನಖಿಳರು ಮೆಚ್ಚಿ ಮನ್ನಣೆಯ ॥ ೧೩ ॥

ಪ್ರಗುಣ ಲಗ್ನವ ಕೂಡೆ ಕೇಳ್ದಾನು ಮುಖವಸ್ತ್ರ
ತೆಗೆವ ದಿನಕೆ ಬರ್ಪೆ ನೀವು
ನೆಗಳಿ ಪೂಜೆಯನೆಂದು ಮಂತ್ರಿ ಮಿತ್ರರು ಹೆ
ಮ್ಮಗನನು ಬೀಳ್ಕೊಟ್ಟನೊಡನೆ ॥ ೧೪ ॥

ಬಾರರೇತಕೆ ತನೂಜೆಯರು ತಂಗಿಯರೆಂದು
ಹಾರೈಸುತಿರ್ದನಷ್ಟರೊಳು
ಚಾರುವೈಭವ ತೋರೆ ವರರೊಡಗೂಡಿ ಕು
ಮಾರಿಯರೆಯ್ತಂದರೆಲ್ಲ ॥ ೧೫ ॥

ಜನನಿಯರೊಡಗೂಡಿ ಬಂದು ಪುತ್ರಿಯರು ಳೆ
ಮ್ಮನೆ ಕಾಣ್ಕೆಯಿಕ್ಕಿ ಕಾಲ್ಗೆರಗೆ
ಜನಕನಾಕ್ಷಣ ಬಹುರೂಪಾಗಿ ತನ್ನ ನಂ
ದನೆಯರ ಎದೆಗಪ್ಪಿಕೊಂಡ ॥ ೧೬ ॥

ಹೊಕ್ಕ ಮನೆಯೊಳವರೋಜೆಯೊಳ್ಬಾಳ್ವದ
ಮಕ್ಕಳಾಟಕೆಯಿಲ್ಲದಿಹುದ
ಪಕ್ಕವ ಸಾರ್ದು ದಾದಿಯರುಸುರಲು ಕೇಳಿ
ಚೊಕ್ಕಭೂವರನರ್ತಿವಟ್ಟ ॥ ೧೭ ॥

ಬಳಲಿದಿರಕ್ಕ ವಿಶ್ರಮಿಸಿರೆಂದೆಲ್ಲರ
ಕಳುಹಿಸಿದನವರ ತಾಯ್ಗೂಡಿ
ನಿಳಯದಿಂದೊಡನೆದ್ದು ನಡುವಣ ಚಾವಡಿ
ಯೊಳಗಿದ್ದ ಕಜ್ಜವೆಂಗಳರೆ ॥ ೧೮ ॥

ಅಣ್ಣನ ದೀರ್ಘರಾಜ್ಯವ ನೋಡುತೆದೆಯಲ್ಲಿ
ತಣ್ಣನೆ ಸಂತಸಬಡುತ
ಹೆಣ್ಣೊಡಹುಟ್ಟಬ್ಬರೆಯ್ತಂದು ಕಂಡರಾ
ಬಣ್ಣದ ಚಾವಡಿಯಲ್ಲಿ ॥ ೧೯ ॥

ಸೇಸೆಯನಿಕ್ಕಿದ ತಂಗಿಯರಿಗೆ ಮುಂಗ
ಲಾಸನಗೊಡಿಸಿ ರಾಜೇಂದ್ರ
ಬಾ ಸಿಂಧುದೇವಿ ಗಂಗಮ್ಮಿ ಕುಳ್ಳಿರಿನೆನ
ಲಾ ಸುದತಿಯರು ಕುಳಿತರು ॥ ೨೦ ॥

ಅನಿತರೊಳವರು ಬಂದುದ ಕೇಳುತೊಳಗಣಂ
ಗನೆಯರು ಕರೆಯಲಟ್ಟಿದರು
ಜನನಾಥ ಕಳುಹಲಾ ದಿವಿಜೆಯರೆದ್ದು ಭೋಂ
ಕನೆ ಹೊಕ್ಕರಣ್ಣನ ಮನೆಗೆ ॥ ೨೧ ॥

ಪಟ್ಟದಾಕೆಯ ಮುಂದುಮಾಡಿಕೊಂಡಬಲೆಯ
ರೊಟ್ಟುಗೊಂಡಿದಿರ್ವರುತಿರ್ದು
ಕಟ್ಟಿದಿರೊಳು ಕಾಣುತತ್ತಿಗೆಯರೊಳಿಷ್ಟು
ಸಟ್ಟಾಟವಾಡಿದರಾಗ ॥ ೨೨ ॥

ಆವ ದೇಶದ ಪೆಂಗಳೆಮ್ಮ ಮನೆಗೆ ನುಗ್ಗಿ
ತಾವೇಕೆ ಬಹರೆಂದರವರು
ನಾವು ಹುಟ್ಟಿದ ಮನೆಯಲಿ ತುಂಬಿಕೊಂಡಿದ್ದ
ಭಾವೆಯರಾರೆಂದರವರು ॥ ೨೩ ॥

ಪಟ್ಟದರಸಿಯು ತಾವನ್ಯೋನ್ಯ ತೋಳ್ತುಂಬಿ
ತೊಟ್ಟುಕೊಂಡೊಡನೆ ಕುಳಿತರು
ನಿಟ್ಟಿಸಿ ನಕ್ಕು ನುಡಿದು ಮಿಕ್ಕ ಸತಿಯರು
ಮುಟ್ಟಸಾರ್ದಿದ್ದರೊಪ್ಪದೊಳು ॥ ೨೪ ॥

ಏನು ಮೋಹವೊ ಮುಗ್ಧು ಸ್ಮರಪುರದೊಳಗಿದ್ದ
ಸೂನುಗಳನು ಸೊಸೆಯರನು
ಮಾನವಪತಿ ಕರೆಯಿಸಿಕೊಂಡು ತಳರ್ದನೊಂ
ದಾನಂದರಸವನೇನೆಂಬೆ ॥ ೨೫ ॥

ನಿಖಿಳಕುಟುಂಬವೆರಸಿ ವಾದ್ಯರವ ದಶ
ಮುಖದಿಕ್ಕು ತುಂಬಿ ಸೂಳ್ಗೈಸೆ
ಮುಖವಸ್ತ್ರದೆಗೆವ ದಿನಕೆ ಬಂದು ಶೈಲದ
ಶಿಖರವ ಸಾರ್ದನಾ ರಾಯ ॥ ೨೬ ॥

ತರದೊಳಿಪ್ಪತ್ತೆರಡಮಲವಾಸದೊಳು ಭಾ
ಸುರವೆತ್ತ ಜಿನಬಿಂಬಗಳಿಗೆ
ದರುಶನವಿಕ್ಕಿ ವಂದಿಸಿದನು ಪುತ್ರ ಮಿ
ತ್ರರು ಮೊದಲಾದರುವೆರಸಿ ॥ ೨೭ ॥

ಕದಲಿದರೆಲ್ಲರು ವೃದ್ಧತಾಪಸರ ಮೇ
ಳದೊಳಿರ್ದನಾ ಪುರುನಾಥ
ಇದೆ ವೇಳೆಯೆಂದು ಪೆಂಗಳುಗೂಡಿ ಚಕ್ರಿ ಬೇ
ಗದಿ ಹೊಕ್ಕನಾ ಜಿನಸಭೆಯ ॥ ೨೮ ॥

ಕಾಣುತ ಜಯಜಯಯೆನುತ ಕಾಣ್ಕೆಯನಿಕ್ಕಿ
ಕ್ಷೋಣೀಶ ಸಾಷ್ಟಾಂಗವೆರಗಿ
ವಾಣೀಶ ವೃಷಭೇಶ ಪರಮಾತ್ಮಯೆನುತ ಬಿ
ನ್ನಾಣದಿಂದೊಡನೆದ್ದು ನಿಂದ ॥ ೨೯ ॥

ಸೊಸೆಯರು ಪುತ್ರಿಯರನುಜೆಯರರಸಿಯ
ರೊಸೆದು ಕಾಣಿಕೆಯಿಕ್ಕಿ ಜಿನಗೆ
ಸಸಿನೆರಗಿದರು ಭೂಮಿಯಮೇಲೆ ಹಬ್ಬಿದ
ಪೊಸಲತೆಗಳೊಯೆಂಬ ತೆರದಿ ॥ ೩೦ ॥

ಕೂಡೆಲ್ಲರೆದ್ದು ಕೈಗಳ ಮುಗಿದುರೆ ಸುತ್ತಿ
ನೋಡುತ ದೇವನ ಸೊಬಗ
ನೋಡಿ ಬಾಷ್ಪಗಳೊಗೆ ರೋಮಾಂಚ ನೆಗೆಯಲೋ
ಲಾಡಿದರಾನಂದದಲ್ಲಿ ॥ ೩೧ ॥

ವಿಸ್ತಾರದಲಿ ಪೂಜೆಗೈವೊಡೀಗಾಗ ದೇ
ವಸ್ತೋಮ ಬಹುದೆಂಬ ಶಂಕೆ
ಪ್ರಸ್ತುತಾರ್ಚನೆಯ ಸಂಕಲ್ಪಗೆಯ್ದಿದನು ಸ
ಮಸ್ತ ನಾರಿಯರಿಂದ ನೃಪತಿ ॥ ೩೨ ॥

ಈ ಜನ್ಮವೊಂದಲ್ಲದಿವರಿಗೆ ಮುಂದಿನ್ನು
ಸ್ತ್ರೀಜನ್ಮವಿಲ್ಲ ಗಂಡಾಗಿ
ರಾಜಿಸುತಿರ್ದು ಕೈವಲ್ಯವೆಯ್ದುವರೆಂದು
ಶ್ರೀಜಿನೇಶ್ವರ ನಿರೂಪಿಸಿದ ॥ ೩೩ ॥

ಜಿನಗವರೆರಗಿ ಬೀಳ್ಕೊಂಡರು ಕೂಡೆ ಮೈ
ದುನರಳಿಯಂದಿರು ಸುತರು
ವನಿತೆಯರ್ಕಳ ಪೌಜ ಸಾಗಿಸಿಕೊಂಡು ಚೆ
ಕ್ಕನೆ ಪುರಕೆಯ್ದಿರೈಯೆಂದ ॥ ೩೪ ॥

ಬಂದಯೋಧ್ಯೆಯ ಪೊಕ್ಕು ಮಂತ್ರಿ ಮಿತ್ರರ ನೋಟ
ದಿಂದ ಬೀಳ್ಕೊಡುತ ರಾಜೇಂದ್ರ
ಮಂದಿರದೊಳವೊಕ್ಕು ತನ್ನಯ ಬಹುಪರಿ
ಸ್ಪಂದದೊಳಿರ್ದನೇನೆಂಬೆ ॥ ೩೫ ॥

ಬಸದಿಯುತ್ಸಾಹವ ಸ್ವಾಮಿಯ ಕಂಡುದ
ಬಿಸವಂದಬಟ್ಟು ರಾಣಿಯರು
ಕೊಸರಿ ಕೊಸರಿ ನುಡಿದಾಡಲಂತವರ ಸಂ
ತಸಗಂಡು ನಲವೇರುತಿರ್ದ ॥ ೩೬ ॥

ಕುಮಾರ ವಿಯೋಗ ಸಂಧಿ*

ಜಿನಿವಾಸ ರಚನೆ ಜಿನೇಂದ್ರ ಪೂಜಾರ್ಚನೆ
ಘನವೆನಲೆಸಗಿ ಚಕ್ರೇಶ
ತನಯರ ನೋಟ ಪೆಂಡಿರ ಕೂಟದಿಂದ ಮೇ
ದಿನಿಯನಾಳುತ ಸುಖವಿರ್ದ ॥೧॥

ಒಂದು ದಿನದೊಳಾದಿ ಚಕ್ರವರ್ತಿಯ ನೂರು
ಮಂದಿ ಕುಮಾರರೊಂದಾಗಿ
ಬಂದೊಂದು ತೊರೆಯ ತಡಿಯ ಮಳಲೊಳಗಾ
ನಂದಿಸುತಿರ್ದರೇನೆಂಬೆ ॥೨॥

ಚೆಲ್ಲಣ ಹೊನ್ನೊಡ್ಡಿಯಾಣ ಮೇಲ್ಬಿಗುಹಿನ
ಕುಲ್ಲಾಯಿ ಕುಂಕುಮ ತಿಲಕ
ಗೆಲ್ಲದಿ ಪಿಡಿದ ತಾವಡಗೋಲ್ಗಳಿಂದತಿ
ಮುಲ್ಲರೆದ್ದರು ಸಾಥನೆಗೆ ॥೩॥

ಹದಿನಾಲ್ಕು ಹದಿನೈದು ಹದಿನಾರು ಹದಿನೇಳು
ಹದಿನೆಂಟು ಪ್ರಾಯವಾದವರು
ಮದುವೆಯಾದವರಲ್ಲ ಗರುಡಿಯೋದಿನ ಮಠ
ದೊದವಿನೊಳಾಡುತಿರ್ದವರು ॥೪॥

---

* ಸಾಥನೆಯ ಸಂಧಿ, ವಿದ್ಯಾಗೋಷ್ಠಿ ಸಂಧಿ, ವಿರಕ್ತಿ ಸಂಧಿ, ಸಮವಸರಣಸಂಧಿ, ದಿವ್ಯಧ್ವನಿ ಸಂಧಿ. ತತ್ವಾರ್ಥ ಸಂಧಿ, ಮೋಕ್ಷ ಮಾರ್ಗ ಸಂಧಿ, ದೀಕ್ಷಾ ಸಂಧಿ, ಕುಮಾರ ವಿಯೋಗ ಸಂಧಿ, ಇವು ಮೂಲದಲ್ಲಿ ಕ್ರಮವಾಗಿ ಕಂಡುಬರುವ ಸಂಧಿಗಳು. ಇವು ಗಳೆಲ್ಲವನ್ನೂ ಸಂಗ್ರಹಿಸಿ ಒಂದು ಸಂಧಿಯಾಗಿ ಮಾಡಿದೆ.

ಹೊತ್ತುಮೀರಿಯು ಸಾಧನೆಗೆಯ್ವ ದೊರೆಗಳ
ಒತ್ತಿನೂಳಿಗದವರರಿದು
ಚಿತ್ತೈಸಿ ನಿಮಗಂಜಿ ರವಿಯೋಡಿ ಗಗನವ
ಹತ್ತಿದನೆಂದು ತೋರಿದರು ॥೫॥

ಸಾಕು ಹೋ ಹೊತ್ತಾದುದೆಂದೆಡ ಬಲ ಜಾರಿ
ಯಾಕುವರರು ಮೆಯ್ಯಮುರಿದು
ನಾಕಲಂಘಿಸಿ ಕೋಲುಕೋಲನೊಂದಿಸಿ ಜಿನ
ಗೇಕಚಿತ್ತದೊಳೆರಗಿದರು ॥೬॥

ಬನದ ತಣ್ನೆಳಲ ತಂಗಾಳಿಯೊಳೊಪ್ಪಚ್ಚಿ
ತನುವನೊರಗಿ ನಿದ್ದೆಗೆಯ್ದು
ಜಿನಸಿದ್ಧ ಗುರುವೆ ನಿರಂಜನಸಿದ್ಧಯೆಂ
ದೆನುತೆದ್ದರವರು ಜೋಕೆಯೊಳು ॥೭॥

ವೀಳೆಯಗೊಳುತ ಕನ್ನಡಿಯ ನೋಡುತ ತೆಳು
ಗಾಳಿಗೆ ಮೈಯನೊಪ್ಪಿಸುತ
ಮೇಲೊಯ್ಯನೊಯ್ಯನೆ ತಮ್ಮೊಳು ಸಂಗೀತ
ಕೇಳಿಗವರು ತೊಡಗಿದರು ॥೮॥

ದನಿಯಿಂಪು ರಾಗದ ಸೊಂಪು ತಾನದ ನುಂಪು
ಅನುವೆತ್ತ ಪದಗಳ ವ್ಯಕ್ತಿ
ನೆನೆಯ ಬಾರದು ಪಾಡಬಾರದಿನ್ನೊಬ್ಬರಿ
ಗೆನಿಸಿ ಪಾಡಿದರು ಗಾಡಿಯೊಳು ॥೯॥

ವ್ಯಾಕರಣದೊಳೊಮ್ಮೆ ತರ್ಕಶಾಸ್ತ್ರದೊಳೊಮ್ಮೆ
ಬೇಕಾದ ನ್ಯಾಸ ಭಾಷೆಯೊಳು
ಪ್ರಾಕೃತ ಗೀರ್ವಾಣ ದೇಶೀಯ ಭಾಷೆಯೊ
ಳಾ ಕುಶಲರು ವಚಿಸಿದರು ॥೧೦॥

ನುಡಿದುದೆಲ್ಲಾಗಮ ಭರತಪುತ್ರರು ತುಟಿ
ಮಿಡುಕಿದುದೆಲ್ಲ ಚಿತ್ರಾರ್ಥ
ತೊಡಗಿದುದೆಲ್ಲ ಪುರಾಣ ಕಾವ್ಯದ ಪಾಲು
ಗಡಲೆಂದರೇನ ಬಣ್ಣಿಪೆನು ॥ ೧೧ ॥

ಹಸ್ತಿನ ಪುರಪತಿ ಮೇಘೇಶ್ವರನು ಪ್ರ
ಶಸ್ತ ದೀಕ್ಷೆಯನಾಂತನೆಂದು
ಪ್ರಸ್ತುತವಾರ್ತೆಯು ಸಾಹಿತ್ಯಗೋಷ್ಠಿಯ
ಪ್ರಸ್ತಾಪದೊಳು ಬಂದುದವರ್ಗೆ ॥ ೧೨ ॥

ಇಂತೆಂಬ ಸುದ್ದಿಯ ಕೇಳ್ದವರೆಲ್ಲರೋ
ರಂತೆ ವಿಸ್ಮಯಚಿತ್ತರಾಗಿ
ಮುಂತೆ ಮೂಗಿನಮೇಲೆ ಬೆರಳಿಟ್ಟು ಜಿನ ಜಿನ
ನೋಂತರೆಂದೊಲೆದರು ಶಿರವ ॥ ೧೩ ॥

ಪ್ರಾಯ ತಗ್ಗದ ಮುನ್ನ ಕಾಯ ಜಗ್ಗದ ಮುನ್ನ
ಸ್ತ್ರೀಯರು ಮಕ್ಕಳೆಂದೆಂಬ
ಮಾಯೆ ಮುತ್ತದ ಮುನ್ನ ಯೆಚ್ಚರ ಬೇಕೆಂದು
ಪಾಯವ ನೋಡಿದರವರು ॥ ೧೪ ॥

ಕಣ್ಣರಿದಪ್ಪಾಜಿ ನಮಗೆಯಿನ್ನೊಂದೊಂದು
ಹೆಣ್ಣ ಸಂಬಂಧ ಮಾಡುವನು
ಹೆಣ್ಣಿಗೆ ಸಿಕ್ಕ್ಕ ಬಾಳುವ ಬಾಳು ನೊಣ ಹಾರಿ
ಯೆಣ್ಣೆಯೊಳಗೆ ಬಿದ್ದ ರೀತಿ ॥ ೧೫ ॥

ಹೆಣ್ಣ ಹಿಡಿದಮೇಲೆ ಹೊನ್ನ ಹಿಡಿಯಬೇಕು
ಮಣ್ಣ ಹಿಡಿಯಬೇಕು ಸಹಜ
ಹೆಣ್ಣು ಹೊನ್ನು ಮಣ್ಣು ವಿಡಿದಾತ್ಮರೆಲ್ಲರು
ಮಣ್ಣುವಿಡಿದ ಲೋಹದಂತೆ ॥ ೧೬ ॥

ಸಿರಿಯಿದ್ದು ತೊರೆವುದು ಹೆಚ್ಚು ಜೌವನದಲ್ಲಿ
ವರದೀಕ್ಷೆವಡೆವುದು ಹೆಚ್ಚು
ಪರಮಾತ್ಮತತ್ವವನರಿವುದು ಹೆಚ್ಚಿವು
ದೊರೆಕೊಂಡರೆಮಗರಿದುಂಟೆ ॥ ೧೬ ॥

ಕುಲ ಬಲ ಸಿರಿ ಸೊಬಗಿದ್ದರೆಲ್ಲವ ಬಿಟ್ಟು
ಗೆಲವಾಂತು ತಪಸು ಮಾಡಿದರೆ
ಚಿಲುವೆ ಪತಿವ್ರತೆಯಾದಂತೆ ಹೆಚ್ಚಿನ
ಫಲವಹುದೆಂದೆಣಿಸಿದರು ॥ ೧೪ ॥

ಕೈಲಾಸಗಿರಿಗೆ ಹೋಗುವವಲ್ಲಿ ಮುಂದರ
ಶೈಲದಂತೆಸೆವಾದಿಜಿನನ
ಕೈಲೇಸಿನಿಂದ ದೀಕ್ಷೆಯ ಕೊಂಬವೆನುತಾಗ
ಮೈಲಾಗಿನಿಂದೆದ್ದರವರು ॥ ೧೯ ॥

ಅಪ್ಪಾಜಿಗರುಹಿ ದೀಕ್ಷೆಯ ಕಳುಹಿಸಿಕೊಂಡು
ಬಪ್ಪೆವೆಂದರು ಕೆಲರಲ್ಲಿ
ಅಪ್ಪಾಜಿಯರಿದರೆ ನಮ್ಮ ದೀಕ್ಷೆಯ ಕಾರ್ಯ
ತಪ್ಪುವುದೆಂದರು ಕೆಲರು ॥ ೨೦ ॥

ಅಪ್ಪಾಜಿಯರನೊಮ್ಮೆ ಭಾವಿಸಿ ಬೀಳ್ಕೊಡ
ಲಪ್ಪುದೆಮ್ಮಯ ತಾಯಿಗಳನು
ಒಪ್ಪುಗೊಳಸಲರಿದವರರಿದರೆ ಕಾರ್ಯ
ತಪ್ಪುವುದೆಂದರು ಕೆಲರು ॥ ೨೧ ॥

ಒಡವೆಯನೊಪ್ಪಿಸಬೇಕೊ ಮಕ್ಕಳ ಕೈಯ
ಲೆಡೆಗೊಟ್ಟು ಬರಬೇಕೊ ನಮ್ಮ
ಮುಡದಿಯರನು ತೋರಿ ಸಲಹೆಂದು ಬರಬೇಕೊ
ತೊಡಕೇನು ನಮಗೈಯ್ಯನೊಡನೆ ॥ ೨೨ ॥

ಅವರ ಹಂಗೆಮಗಿಲ್ಲ ನಮ್ಮ ಹಂಗವರ್ಗಿಲ್ಲ
ಅವರಿಗವರು ನಾವು ನಮಗೆ
ಭವಮಾಲೆಯೊಳು ನೋಡಲಾರಿಗಾರುಂಟೆಂದು
ತವತಪಗೆಲ್ಲರಾಡಿದರು ॥ ೨೩ ॥

ಮಗನಯ್ಯನಾಗುವನಯ್ಯನಾ ಮಗನಿಗೆ
ಮಗನಹನೊಂದು ಜನ್ಮದೊಳು
ಮಗಳು ತಾಯಾಗುವಳಾ ತಾಯಿ ಮಗಳಿಗೆ
ಮಗಳಹಳೊಂದು ಜನ್ಮದೊಳು ॥ ೨೪ ॥

ತಾಯುದರದಿ ತಂದ ತನು ನಮಗೆರವಿನ್ನು
ತಾಯಿ ತಂದೆಗಳ ಮಾತೇನು
ನ್ಯಾಯವಿದೇಳ ದೀಕ್ಷೆಗೆ ನಮೋ ಹಂಸನಾ
ಥಾಯಯೆಂದೊಡನೆದ್ದರವರು ॥ ೨೫ ॥

ಬೆಳುಮುಗಿಲೊಡ್ಡಿ ಬೇರೂರಿ ಭೂಮಿಯೊಳುಬ್ಬಿ
ಬೆಳೆದು ಬೆಳ್ಪೆಟ್ಟವಾದಂತೆ
ತಳತಳಿಸುವ ಬೆಳುವೆಳಗಿಂದ ರಜತಾದ್ರಿ
ಹೊಳೆದುದಾ ಕುವರರ ಮುಂದೆ ॥ ೨೬ ॥

ಅಂಚೆಗಳಿಂಗಡಲೊಳು ಹರಿವಂತೆಳೆ
ಮಿಂಚೇರುವಂತೆ ಬೆಳ್ಮುಗಿಲ
ಹಿಂಚು ಮುಂಚಾಗದೆ ತಮ್ಮೊಳೊರ್ವರು ಹರಿ
ಹಂಚಾಗದೇರಿದರವರು ॥ ೨೭ ॥

ಬರುತಿರ್ದರೊಯ್ಯನೊಯ್ಯನೆ ಬಪ್ಪ ಪಥದೊಳಾ
ಗಿರಿಯಗ್ರ ಜಿನಸಭೆಯಿಂದ
ಸುರಭೇರಿ ದಂಧಣ ದಿಮ್ಮ ಭೋಭ್ಭೋರೆಂಬ
ಸ್ವರ ಕೇಳಲಾಯ್ತು ದೂರದೊಳು ॥ ೨೮ ॥

ಭೇರಿಯ ದನಿಗೇಳಿ ನಲಿದರು ನವಿಲು
ಮುಂಗಾರ ಮೊಳಗುಗೇಳಿದಂತೆ
ಆ ರಾಜಪುತ್ರರು ಕಟ್ಟಿದಿರೊಳಗೆ ಕ
ಣ್ಣಾರೆ ಕಂಡರು ಜಿನಸಭೆಯ ॥ ೨೯ ॥

ಬೆಳ್ಳಿಯ ಬೆಟ್ಟದಮೇಲೊಂದು ಕಾಮನ
ಬಿಲ್ಲಿನ ಬೆಟ್ಟ ನಿಂದಿದೆಕೊ
ಬೆಳ್ಳಿಬೆಟ್ಟವ ಮುಟ್ಟಿದಿದೆ ಚಿತ್ರವೆಂ
ದೆಲ್ಲರು ನೋಡುತೆಯ್ದಿದರು ॥ ೩೦ ॥

ಬೆಳಗಿನ ಕಡಲೊಳು ನಡೆವಂತೆ ತಂಪಿನ
ಹೊಳೆಯೊಳು ಮುಳುಗಿ ಬಹಂತೆ
ತಳತಳಿಸುತ ಗಮಗಮಿಸುವ ಭೂಮಿಯೊ
ಳೊಳಹೊಕ್ಕು ಗಮಿಸಿದರೊಸೆದು ॥ ೩೧ ॥

ನಿಮಿಷದೊಳಗೆ ಮಿಂದು ಕೂಡೆ ಸಿಂಗರಿಸಿಯು
ತ್ತಮವಸ್ತುಚಯವ ಸಂಗ್ರಹಿಸಿ
ಅಮರೇಂದ್ರನನುಮತದಿಂದ ಸ್ವಾಮಿಯ ಪೂಜೆ
ಗಮಲಚಿತ್ತರು ತೊಡಗಿದರು ॥ ೩೨ ॥

ಮೋಕ್ಷಕೆ ಕಾರಣ ಧ್ಯಾನವದಕೆ ಬಾಹ್ಯ
ರಕ್ಷೆಯಲ್ಲವೆ ಜಿನದೀಕ್ಷೆ
ದೀಕ್ಷಾಂ ದೇಹಿಯೆಂದೆಲ್ಲರು ಸಾಷ್ಟಾಂಗ
ಲಕ್ಷಿತವೆನಲೆರಗಿದರು ॥ ೩೩ ॥

ಮುಗಿದು ನೀಡಿದ ತೋಳು ನಿಮಿರಿ ಪಾಸಿದ ಕಾಲು
ಮಿಗೆ ಭೂಮಿ ಮುಟ್ಟಿದ ನೊಸಲು
ಜಗದೀಶನಿದಿರೊಳಿದ್ದರು ಮಿಸುಕದೆ ಹೊನ್ನ
ಹೊಗರ ಪುತ್ತಳಿಗಳೆಂಬಂತೆ ॥ ೩೪ ॥

ಅಸ್ತು ಭವ್ಯಾಸ್ಸಮುತ್ತಿಷ್ಠತಯೆಂದಾದಿ
ವಸ್ತು ನಿರೂಪಿಸಲೊಡನೆ
ಮಸ್ತಕವೆತ್ತಿ ನಿಂದರು ಕೆಲಬಲದ ಸು
ರಸ್ತೋಮ ಜಯಜಯಯೆನಲು ॥ ೩೫ ॥

ಹೊದೆದ ದುಕೂಲವ ಬಿಸುಟರು ತೆಗೆದರು
ಪದಕವ ಕಳೆದರು ಲುಳಿಯ
ಒದೆದಾಡುತಿಹ ಕರ್ಣದಾಭರಣಗಳ ಶಾಂ
ತದೊಳು ಸಡಿಲಿಸಿ ಹಾಕಿದರು ॥ ೩೬ ॥

ಕೇಶಪಾಶವ ಪರಿದಿಟ್ಟರು ದುರ್ಮೋಹ
ಪಾಶವ ಪರಿದಿಡುವಂತೆ
ಆಶಾಪಾಶವ ಪರಿವಂತೆ ಮಾಯಾ
ಪಾಶವ ಪರಿದಿಡುವಂತೆ ॥ ೩೭ ॥

ಸ್ವಸ್ತಿಕದಿಂದೆಲ್ಲರಿದ್ದು ನಡೆದರಾದಿ
ವಸ್ತುವಿನಂಘ್ರಿಯಗಲಕೆ
ಮಸ್ತಕವಿಟ್ಟಿರಗಿದರಾತ್ಮಸಿದ್ಧಿರೇ
ವಾಸ್ತುಯೆಂದನು ವೀತರಾಗ ॥ ೩೮ ॥

ಕರೆದರಾಗಳೆ ಸುರರಾಕಾಶದೊಳು ನಿಂದು
ನರುಗಂಪ ಕರೆವ ಪೂಮಳೆಯ
ತುರುಗಿ ಸೂಳ್ಯೈಸಿದುವೆಲ್ಲ ವಾದ್ಯಗಳು ಲೇ
ಸರಿದು ಮಂಗಲವ ಪಾಡಿದರು ॥ ೩೯ ॥

ಮುಸ್ಪಾದ ಮೀಸೆಗೆ ಕಪ್ಪನಿಟ್ಟಾದರು
ಚಪ್ಪರಿದಾಡುವರುಂಟು
ತುಪ್ಪುಳುಮೀಸೆಯೊಳಗೆ ತೊರೆದತಿಥಿಗ
ಳಪ್ಪವರಾರಿವರಂತೆ ॥ ೪೦ ॥

ಒಡೆಯರೆಲ್ಲರು ದೀಕ್ಷೆಗೊಂಡಮೇಲೊಡನಿರ್ದ
ಕಡುಹಿತದೂಳಿಗದವರು
ಹಡಗ ನೀಗಿದ ಪರದರು ಮಗುಳ್ವಂತೂರ
ಕಡೆಗೆ ಮಗುಳ್ದರೇನೆಂಬೆ ॥ ೪೧ ॥

ಕಡೆಯ ಚಾವಡಿಯೊಳಿರ್ದನು ಚಕ್ರಧರನಾಗ
ನಡೆತಂದು ಪೊರ್ದಿ ಸೇವಕರು
ಪಿಡಿದ ಕಠಾರಿ ಖಂಡೆಯಗಳ ಮುಂದಿಟ್ಟು
ಕೆಡೆದರು ಮೈನೀಡಿ ಮುಂದೆ ॥ ೪೨ ॥

ನೆರೆದರೆಲ್ಲರು ಸುಮ್ಮನಿರ್ದರಾಗರವಿಂದ
ಕರಗಳ ಮುಗಿದೆಲೆ ಸ್ವಾಮಿ
ಸಿರಿವೆತ್ತ ಕುವರರು ನೂರ್ವರು ದೀಕ್ಷೆಗೆ
ತೆರಳಿದರವಧಾನವೆಂದ ॥ ೪೩ ॥

ವೀಳೆಯದೆಲೆ ಹಸ್ತದಿಂ ಬಿದ್ದುದೆದೆಯಲ್ಲಿ
ಬಾಳ ಬೀಸಿದ ತೆರನಾಯ್ತು
ಗೋಳಿಟ್ಟುದಾಸ್ಥಾನ ಕೈಸನ್ನೆಯಿಂದ ಭೂ
ಪಾಲಕ ನಿಲಿಸಿ ಕೇಳಿದನು ॥ ೪೪ ॥

ಕವಿದ ಮೋಹಾಂಧಕಾರವನು ಸುಜ್ಞಾನದ
ರವಿಯ ಶಕ್ತಿಯೊಳೊತ್ತಿ ನಿಲಿಸಿ
ಅವನೀಶನೊಂದೆರಳ್ಳಳಿಗೆಯಮೇಲೆ ಸಂ
ತವಿಸಿಕೊಂಡೊಡನಿಂತು ನುಡಿದ ॥ ೪೫ ॥

ತುಪ್ಪಳುಮೀಮೈಸೆ ರೇಖೆಗೆ ಬಂದುದಿಲ್ಲ
ದಪ್ಪ ಸಂಪೂರ್ಣವಾಯ್ತಿಲ್ಲ
ನೆಪ್ಪದೋರಿತು ಪ್ರಾಯ ನೆರೆವರಿನ್ನಿವರೆನು
ತಿಪ್ಪನಿತರೊಳಿಂತುಟಾಯ್ತೆ ॥ ೪೬ ॥

ಅಣ್ಣ ತಮ್ಮಂದಿರ ಕೇಳಿಯೊಳಲ್ಲದೆ
ಹೆಣ್ಣೊಳೊಂದಿರುಳಿದ್ದುದಿಲ್ಲ
ಕಣ್ಣಹಬ್ಬವ ಕಾಣ್ಬೆನಿವರ ಮದುವೆಗೆಂದು
ಕಣ್ಣೊಳಿಟ್ಟರ್ದವಿಂತಾಯ್ತೆ ॥ ೪೭ ॥

ಕಳುಹಿದನೆಲ್ಲರನೊಡನೆದ್ದು ಮಂದಿರ
ದೊಳಹೊಕ್ಕನಾ ಸಾರ್ವಭೌಮ
ಬಲುಗಾಳಿ ಬಾಧಿಸಿದೆಳಲತೆಯಂತೆ ಹೆಂ
ಗಳು ಬಂದರಧಿಕ ಶೋಕದೊಳು ॥ ೪೮ ॥

ಬಂಬಳ ಬಾಡಿದ ದೇಹ ಕಟ್ಟಿದ ತು
ರುಂಬು ಕಂದಿದ ಮೊಗದಿಂದ
ಕಂಬನಿಬಿಡುತೆಯ್ದಿ ಕಾಲಮೇಲ್ಕೆಡೆದು ಪ
ಲುಂಬಿದರೇನ ಬಣ್ಣಿಪೆನು ॥ ೪೯ ॥

ನಂದನರಗಲಿದರರಸ ಕಣ್ಮನಸಿಗಾ
ನಂದನರ್ಪೋದರು ಹಾ ಹಾ
ಮುಂದೆಮ್ಮ ಕಣ್ಣರ್ತಿಗೆಳಸಿರ್ದವರಿಂದೆ
ಕೊಂದರೆಂದಳಲಿ ನುಡಿದರು ॥ ೫೦ ॥

ಕಾಣೆವು ಕಂದರ್ಪರೂಪಿನ ಮಕ್ಕಳ
ಮಾಣಿಕ್ಯಗಳನೇನೆ ಹಾ ಹಾ
ಕ್ಷೋಣೀಶ ಗತಿಯಾವುದೆಂದೆದೆ ಬಿರಿದರು
ಬಾಣ ತಾಗಿದ ಹುಲ್ಲೆಯಂತೆ ॥ ೫೧ ॥

ತೋಯಜಾಕ್ಷಿಯರಿರ ಸೈರಿಸಿಯವರೆಮ್ಮ
ನೋಯಿಸಿ ಹೋಗಬಂದವರು
ಬಾಯಳಿದಿನ್ನು ಶೋಕಿಸಿದರೇನಹುದೆಂದು
ರಾಯ ನುಡಿದನವರೊಡನೆ ॥ ೫೨ ॥

ನಾನಿವರಿಗೆ ತಕ್ಕ ಪೆಣ್ಗಳೆಲ್ಲುಂಟೆಂದು
ಜಾನಿಸುತಿರ್ದೆನಷ್ಟರೊಳು
ನಾನೊಲ್ಲೆ ಪೆಣ್ಣ ನಮ್ಮಯ್ಯನಾರಿಗೆ ಪೆಣ್ಣ
ತಾ ನೋಳ್ಪನೆಂಬ ಮಾತಾಯ್ತು ॥ ೫೩ ॥

ತಪಸಿಗೆಯ್ದಿದರೈಸೆ ಲೇಸೆನ್ನಿ ಜೇರೊಂದು
ಕುಪಥಕೆ ಹೋದವರಲ್ಲ
ಅಪಕೀರ್ತಿಮಾಡಿದರಳಲಬೇಕಲ್ಲದೆ
ವಿಪುಲಾರ್ಥಕಿದಕೇಕೆ ನೋವು ॥ ೫೪ ॥

ಒರ್ವೊರ್ವರಿಗೆ ನಿಮಗೋರೊರ್ವ ಕುವರರು
ಪರ್ವುಗೆಯಿಂದಾದ ನೋವು
ನೂರ್ವರೆನಗೆ ಸರಿಯಲ್ತೆ ಸೈರಿಸಿದೆನೌ
ಬಿರ್ವಾಗಿ ನೊಂದರೇನಹುದು ॥ ೫೫ ॥

ನಾರಿಯರೆಲ್ಲರ ಸಂತೈಸಿ ನಿಜ ನಿಜಾ
ಗಾರಕೆ ಕಳುಹಿ ರಾಜೇಂದ್ರ
ಗೌರವ ಲೀಲೆಯೊಳಿರ್ದನೆಂಬೆಡೆಗೆ ಕು
ಮಾರವಿಯೋಗದ ಸಂಧಿ ॥ ೫೬ ॥

———

ತೀರ್ಥೇಶ ಪೂಜಾ ಸಂಧಿ

ಹರುಷದೊಳಿಂತು ಕೆಲವು ಕಾಲ ಪೋಗಲೊಂ
ದಿರುಳಿನ ಕಡೆಯ ಜಾವದೊಳು
ಉರುಮಂದರಾದ್ರಿ ಲೋಕಾಗ್ರಕೆ ನೆಗೆವುದ
ಭರತೇಶ ಕಂಡ ಸ್ವಪ್ನದೊಳು ॥ ೧ ॥

ಶ್ರೀ ಹಂಸನಾಥಯೆಂದೊಡನೆದ್ದು ಕುಳಿತನಾ
ಬಾಹುದಕ್ಕೆಯ ಪಟ್ಟದರಸಿ
ಆ ಹೊತ್ತಿನೊಳೆ ರಾಯನಳುವ ಕನಸ ಕಂಡು
ದೇಹ ಕಂಪಿಸುತಿರ್ದಳೊಡನೆ ॥ ೨ ॥

ಅವಧಿವಿಜ್ಞಾನದಿಂದಾರೈದೆನಬಲೆ ಕೇ
ಳವು ವೃಷಭೇಶ್ವರನಿನ್ನು
ಶಿವಲೋಕಕೆಯ್ದುವ ಸೂಚನೆಯೆನಲಿನ್ನು
ನವಗಾರು ಶರಣೆಂದಳಾಕೆ ॥ ೩ ॥

ನವಗಿನ್ನು ಹಂಸನಾಥನೆ ಶರಣವನಂತೆ
ಶಿವಲೋಕಕೆಯ್ದುವ ನಾವು
ಭವದಲ್ಲಿ ಬಾಳ್ವುದೆಲ್ಲವು ಸ್ವಪ್ನವೀ ಸ್ವಪ್ನ
ದವಗಡಕೆಣಿಸಬೇಡೆಂದ ॥ ೪ ॥

ರಾಯ ಪೂಜಿಪೆನೆಂದು ನೆನೆದು ಸುವಸ್ತುನಿ
ಕಾಯಸಹಿತ ಬಹುದೆಂದು
ರಾಯಸಗಳ ದಿಕ್ಕುದಿಕ್ಕಿಗೆ ಬರಿಸಿ ನಿ
ರಾಯಸವೆನೆ ಕಳುಹಿದನು ॥ ೫ ॥

ಮಳೆಯ ಗಾಳಿಯವೋಲು ಬಿರ್ರನೆ ಬಂದು ತ
ಪ್ಪಲೊಳಿಷ್ಟು ನಿಂದು ಚಕ್ರೇಶ
ಚಲುವಿಕೆಯಾಗಿ ಪೂಜೆಯಮಾಳ್ಪೆನೆಂದು ತ
ನ್ನೊಳಗಿಂತು ನೆನೆದನೇನೆಂಬೆ ॥೬॥

ಗಗನದೊಳಿರ್ದುದು ಸಮವಸರಣ ದೇವ
ನಗಲಿದ ದೇಗುಲದಂತೆ
ಜಗದೀಶನದ್ರಿಯೊಳಿರ್ದನು ಮನೆಯ ದಂ
ದುಗ ಬಿಟ್ಟ ನಿಸ್ಪೃಹನಂತೆ ॥೭॥

ಸಿದ್ಧಶಿಲೆಯವೋಲು ಶಿಲೆಯಿದ್ದುದದರಲ್ಲಿ
ಬದ್ಧಪಲ್ಯಂಕಯೋಗದೊಳು
ಸಿದ್ಧನಂತಿರ್ದ ದೇವನ ಕಂಡು ನೃಪ ಜಿನ
ಸಿದ್ಧಯೆಂದೊಲೆದನು ಶಿರವ ॥೮॥

ಮರುಕ ಪುಟ್ಟದು ಜಿನನಿದಿರಿನೊಳದರಿಂದ
ಮರುಗಿತಿಲ್ಲಾ ಚಕ್ರವರ್ತಿ
ಎರಗಿ ಮಹಾಪೂಜೆಗೆಸಗಿದನದನು ಬಾ
ಯ್ದೆರೆದು ಬಣ್ಣಿಪ ದಕ್ಷನಾರು ॥೯॥

ಕಡಲ ಮಾಗಧ ಮೊದಲೆನೆ ಹಿಮವಂತಾಂಕ
ಕಡೆಯೆನೆ ವ್ಯಂತರಾಧಿಪರು
ಕಡುಪಿನ ಖಗರು ಪೂಜಾವಸ್ತುಗಳ ತಂದು
ಹಿಡಿಯಲಾ ನೃಪನಳ್ತಿವಟ್ಟ ॥೧೦॥

ಫಲಪೂಜೆಗಳ ಮಾಡಿ ರನ್ನ ಚಿನ್ನದೊಳಾದ
ಫಲಗಳ ಮಂದರದಂತೆ
ನೆಲೆಗೊಳಿಸಿದನರ್ಘ್ಯಕೋಟಿಯನೆತ್ತಿದ
ನೊಲಿದೆಲ್ಲ ಜಯ ಜಯಯೆನಲು ॥೧೧॥

ಪೆರಮಾರ್ಘ್ಯವನೆತ್ತಿಯಿರಿಸಲುವರು ತುದಿ
ಗಿರಿಸಿದ ಮೂಡೆಗರ್ಪುರವು
ಉರಿವುತಿರ್ದುವು ಮರ್ಮು ಕಪ್ಪುರಗಳ ಸಾಲು
ಗಿರಿಯ ಕಾಳ್ಕಿಚ್ಚುಗೊಂಡೊತೆ ॥ ೧೨ ॥

ರತ್ನದ ನಿಡುಗಿಂಡಿಗಳನೆತ್ತಿ ಭವದುಃಖ
ಯತ್ನಾಗ್ನಿ ಕೆಡಲೆಂದು ಜಗಕೆ
ನೂತ್ನಮಂತ್ರವನೋದಿ ಶಾಂತಿಧಾರೆಯ ರಾಜ
ರತ್ನ ಮಾಡಿದನಾದಿಜಿನಗೆ ॥ ೧೩ ॥

ದ್ವಾದಶಗಣಗೂಡಿ ತನ್ನವರೊಡಗೂಡಿ
ಯೋದುತ ಸ್ತೋತ್ರ ಮಂತ್ರಗಳ
ಆದಿನಾಥನ ಬಲಗೊಂಡನಾ ನೃಪತಿ ಪ್ರ
ಮೋದಕೆ ಸುರರರ್ತಿವಡಲು ॥ ೧೪ ॥

ಹಗಲಿಂತು ಹೋದುದು ಜಿನನಂಗಪ್ರಭೆಯಿಂದ
ಹಗಲಿನಂತಿರ್ದುದು ರಾತ್ರಿ
ನೆಗಳಿದ ಳಳಿಗೆಯ ಸನ್ನೆಯಿಂದಿರುಳೆಂದು
ಬಗೆಸುದು ಕೂಡಿದ ಪರಿಸೆ ॥ ೧೫ ॥

ಮೇರುವಿಗೆಂಟದ್ರಿ ಕೆಲದಲ್ಲಿ ಗೋಡೆಯಾ
ಕಾರದೊಳಿರಲವ ಜರೆದು
ತಾರಾದ್ರಿಗೆಂಟದ್ರಿ ನೇರದೊಳಿದ್ದಂತೆ
ತೇರಿದ್ದುವೆಂಟು ದಿಕ್ಕಿನೊಳು ॥ ೧೬ ॥

ಸುರಿವ ಪೂಮಳೆ ಸೂಸಲುರಿಬಾಣ ಗಗನದೊ
ಳುರವಣಿಸುವ ಪಾತ್ರದಿಂದ
ಗರಿಗರಿ ಗೀಕು ಗಿರ್ರೆಂಬ ಗಾಲಿಗಳಿಂದ
ಸರದೋರಿ ಹರಿದುವಾ ತೇರು ॥ ೧೭ ॥

ಹೊಸ ಹೊಸ ಪರಿಯ ತೇರೊಂದೊಂದು ದಿನಕೆ ಮು
ತ್ತಸಮ ನೂತನ ಪೂಜೆ ನೃತ್ಯ
ರಸ ರಸಾಯನದೂಟ ಪರಿಸೆಗೆ ಸಂದು ರಾ
ಜಿಸಿತಿಂತು ಪದಿನಾಲ್ಕು ದಿವಸ ॥ ೧೪ ॥

ಕಡೆಯ ದಿನದೊಳು ಮೂರನೆಯ ಜಾವದೊಳಿಲ್ಲ
ಕಡೆಯಿಂದ ಕೂಡಿದ ಪ್ರಜೆಗೆ
ನಡೆಗಂಡು ಸಂಘೆಪೂಜೆಯ ಮಾಡಲಾ ಚಕ್ರೆ
ತೊಡಗಿದನೇನ ಬಣ್ಣಿಪೆನು ॥ ೧೯ ॥

ಗಣಧರರೆಂಭತ್ತುನಾಲ್ವರ್ಗೆ ಭಕ್ತಿಯೊ
ಳ್ಕಾಣಿದು ಮತ್ತವರನುಮತದಿ
ಗಣನೆಯಿಲ್ಲದ ಭವ್ಯಗಣಕೆ ಚಕ್ರೇಶ ಮ
ನ್ನಣೆಗೈದನುಚಿತವೃತ್ತಿಯೊಳು ॥ ೨೦ ॥

ದಾರಿದ್ರ್ಯ ಜಗದೊಳಿಲ್ಲೆಂಬಂತೆ ಹೋಯ್ತು ಮ
ತ್ತಾ ರಾತ್ರಿ ಹರಿದುವು ತೇರು
ಭೂರಾಮನೀ ಜನ್ಮಕಿನ್ನು ಪೂಜಿಪ ವ್ಯವ
ಹಾರಕುದ್ಯಾಪನೆಯಾಯ್ತು ॥ ೨೧ ॥

ಗಂಧ ಪನ್ನೀರು ಪುಷ್ಪಗಳಿಂದ ಭೂಮಿ ಸು
ಗಂಧವಾಯ್ತದ್ರಿ ಕಪ್ಪಾಯ್ತು
ಗಂಧವಾಹಕನೆಂದು ಗಾಳಿಗೆ ಪೆಸರೆಂದು
ಬಂಧುರವಾಯ್ತಲ್ಲಿ ಸುಳಿದು ॥ ೨೨ ॥

ಸ್ವರ್ಗಪಥವ ಬಹು ಪ್ರಜೆ ಗಳಿಸಿತು ಕೂಡೆ
ತಾಗೊಂಡು ನೃಪನ ಕೀರ್ತಿಸಿತು
ತೇರ್ಗಳು ಹರಿದಮೇಲಾ ರಾತ್ರಿ ದೇವೇಂದ್ರ
ಸ್ವರ್ಗದಿಂದಿಳಿದನೇನೆಂಬೆ ॥ ೨೩ ॥

ಬಣ್ಣ ಹಾರದ ಪ್ರಾಯ ಜಾರದ ಮೈ ಬಿಡು
ಗಣ್ಣುಗಳೆಸೆಯೆ ನೋಟಕರ
ಕಣ್ಣ ಕೈಸೆರೆವಿಡಿವುತ ಬಂದರಾ ಸಗ್ಗ
ವೆಣ್ಣುಗಳವನನೋಲೈಸಿ ॥ ೩೪ ॥

ದೇವಗೆ ಮುನಿಗಳ್ಗೆ ಸತಿಗೂಡಿ ಪ್ರೌಢಮಟ್ಟು
ಭಾವೆಯ ದೂರಕೆ ಸಾರ್ಚಿ
ದೇವೇಂದ್ರ ಬಂದು ಪೂಜಾವಿಭವಕೆ ಮೆಚ್ಚಿ
ದೇವನಾತ್ಮಜನನಪ್ಪಿದನು ॥ ೩೫ ॥

ಪಡೆದನೊ ದೇವರ ದೇವೆ ರೋಹಣಕ್ಷ್ಮೆಲ
ಪಡೆದಂತನರ್ಘ್ಯರತ್ನವನು
ಪೊಡವಿ ಮೂರನು ಪುರೆಯಿಡಿಸಿವ ಮಗನನೆಂ
ದೊಡನೆ ಬೋಳ್ಕೆಸಿದನುಬ್ಬಿ ॥ ೩೬ ॥

ಜಿನನುಕ್ತಿಗಮನ ಸಂಧಿ

ಪರಮಪೂಜೋತ್ಸವದೊಳು ರಾತ್ರಿ ಹೋಯ್ತುಮ
ತ್ತಿರದರುಣೋದಯವಾಯ್ತು
ಪುರುಪರಮೇಶ್ವರ ಜಯ ಜಯೆಂದೊಸೆದು
ಪರಿಸೆ ವಂದನೆಗೆಯ್ದುದೆಲ್ಲ ॥ ೧ ॥

ಪಳುಕಿ ನ ಕೊಡದಲ್ಲಿ ತುಂಬಿದ ಪಾಲ ನಿ
ರ್ಮಲತೆಯ ನಗುತ ದೇಹದೊಳು
ಜಳಜಳಿಸುವ ವಿಮಲಾತ್ಮನೊಳಗೆ ಮೂಡಿ
ಮುಳುಗಾಡುತಿರ್ದನಾ ಸ್ವಾಮಿ ॥ ೨ ॥

ಆಕಾಶವನ್ನೊಂದು ಮಾರಿಕ್ಕುನಂತೆ ಮೂ
ಲೋಕವ ಜೋಟಕ್ಕುವಂತೆ
ದಾಕೊಂದರೊಳು ಕೋಟಿ ವಾರ್ಧಿಯ ಪಾಯ್ವ ನಿ
ರಾಕುಲೋನ್ನತಿಯಿರ್ದುದೊಳಗೆ ॥ ೩ ॥

ಓಡಲೆಂಬ ಕುಂಭದೊಳಿರ್ದಾತ್ಮನೆಂಬ ಪಾ
ಲ್ಗಡಲಿಗೆ ಸಮ್ಯಕ್ತ್ವಗಿರಿಯ
ಕಡೆಗೋಲನಿಟ್ಟು ಚಿದ್ಭಾವದ ನೇಣಿಂದ
ಕಡೆವವೊಲಿರ್ದುದಾ ಧ್ಯಾನ ॥ ೪ ॥

ಬೆಳಗನೆ ವಿಾವಂತೆ ಬೆಳಗನೆ ಪಾಯ್ವಂತೆ
ಬೆಳಗಿನೋಕುಳಿಯಾಡುವಂತೆ
ಬೆಳಗಿನೊಳೋಲಾಡಿ ತೇಂಕಾಡುವಂತೆ ತ
ನ್ನೊಳಗೆ ತಾನಿರ್ದನಾ ಪರಮ ॥ ೫ ॥

ಒಮ್ಮೆಯೆಪ್ಪತ್ತೈರಕ್ಕರ್ಮ ಜಾರಿದುವು ಕೂ
ಡೊಮ್ಮೆ ಬಿದ್ದುವು ಪದಿಮೂರು
ಜುಮ್ಮನೆ ಮೂರಂಗ ಬಯಲಾದುವಾ ಪಡೆ
ಬೊಮ್ಮ ಲೋಕಾಗ್ರಕೆ ನೆಗೆದ ॥ ೬ ॥

ತಿರುಗದ ಪದವದು ತೀರದ ಘನಸುಖ
ನರಸುರೋರಗರಿಂಗಶಕ್ಯ
ವಿರಚಿಸಲರಿದಾದ ಮುಕ್ತಿಸಾಮ್ರಾಜ್ಯದೊ
ಳಿರುರ್ತಿದನಾ ಸಿದ್ಧನತ್ತ ॥ ೭ ॥

ಇತ್ತಲಾತನ ದೇಹ ಪರಿವುದು ಮೇಲಿರ್ದ
ವೃತ್ತಸಮವಸರಣೋರ್ವಿ
ಎತ್ತ ಪೋದುದೊ ಮರ್ಮು ಬಯಲಾಯ್ತು ಮುಗಿಲೊಡ್ಡು
ಮುತ್ತಿರ್ದು ಮಾಯವಾದಂತೆ ॥ ೮ ॥

ಸಮವಸರಣ ಬಯಲಪ್ಪದು ಜಿನರ ಸಂ
ಭ್ರಮ ಗಂಧಕುಟಿಗಳಾಕ್ಷಣವೆ
ಗಣಿಸಿದುವಿಚ್ಛೆಬಂದತ್ತಲಾದೀಶನಿ
ಲ್ಲನೆಯೊಳಿನ್ನಾರಿಹರಲ್ಲಿ ॥ ೯ ॥

ಅಯ್ಯನ ಯೋಗವ ನಿಟ್ಟಿಸುತಿರ್ದಿರ್ದು
ಮೆಯ್ಯಳಿದರ್ಹ ಲಂಘಿಸಲು
ರಯ್ಯವಳಿದು ಮೋರೆ ಕಂದಿತು ಚಕ್ರಿಗೆ
ಚುಯ್ಯನೇರಿತು ಶೋಕವೊಳಗೆ ॥ ೧೦ ॥

ಏರಿತು ಮೂರ್ಛೆ ಸರ್ವರೆ ಮುಂದೆ ಗಂಭೀರ
ಜಾರದಂದದೊಳೊತ್ತಿ ತಡೆದ
ಮೀರಿತು ಪಿತನೋಹ ತಡೆದು ತಡೆದು ತಾಳ
ಲಾರದೆ ಮೂರ್ಛೆಗೆ ಸಂದ ॥ ೧೧ ॥

ಕೆಳೆಯರು ಶೈತ್ಯೋಪಚಾರದಿಂದೆಬ್ಬಿಸೆ
ಕುಳಿತು ಕಂಬಿನಿ ಕಣ್ಣೊಳಗುತ
ತಿಳಿವುಗೆಟ್ಟಾ ಚಕ್ರಿ ತನ್ನಯ್ಯ ನೊದಲಿರ್ದ
ಶಿಲೆಯತ್ತ ನೋಡಿ ಶೋಕಿಸಿದ ॥ ೧೨ ॥

ಹಾ ಹಾ ಸ್ವಾಮಿ ನನ್ನೊಡೆಯ ನನ್ನಪ್ಪಾಜಿ
ಮೋಹಾಸುರದರ್ಪಮಥನ
ಖಾಹಿರದೊಳಗೆನ್ನ ನೀಡಾಡಿ ಮುಕ್ತಿಗೆ
ಹೋಹರೆ ಪುರುಪರಮೇಶ ॥ ೧೩ ॥

ಪಟ್ಟವೆಂದೊಂದು ಪಾಶವ ಕಟ್ಟಿ ರಾಜ್ಯವ
ಕೊಟ್ಟೊಂದು ಹೊರೆಗೊಡುವಂತೆ
ಕಟ್ಟಕಡೆಯೊಳೆನ್ನ ಮುಕ್ತಿಗೆಯ್ದಿ ಸದಿಂತು
ಬಿಟ್ಟು ಹೋಹರೆ ಮಹಾದೇವ ॥ ೧೪ ॥

ಎಲ್ಲಿ ಹೋದುದು ನಿನ್ನ ಸಭೆ ನಿನ್ನ ದಿವ್ಯಾಂಗ
ಚೆಲ್ಲಿರ್ದ ಗಂಧಕುಟಿಗಳು
ಬೆಳ್ಳಿಯ ಬೆಟ್ಟವೈಸಿರಿ ಮಾಯವಾದುದಿ
ನ್ನೆಲ್ಲಿಯದುಳಿದರ ಬದುಕು ॥ ೧೫ ॥

ಆಗಲಿನ್ನಳಲಿದರೇನಾಯ್ತು ನೀನಿತ್ತ
ಯೋಗಮಾರ್ಗದೊಳಾನು ಬಹೆನು
ಶ್ರೀಗುರುಹಂಸನಾಥಾಯ ನಮೋಸ್ತೆಂದು
ಬೇಗೆಯ ಕೂಡೆ ನಂದಿಸಿದ ॥ ೧೬ ॥

ವರಪುತ್ರ ಮಿತ್ರ ಪ್ರಧಾನ ಮುಂತಾದಾಪ್ತ
ಪರಿವಿತಾನವ ಕೂಡಿಕೊಂಡು
ಗುರುಹಂಸನಾಥನ ಭಾವಿಸುತಾ ಜಾಣ
ರರಸನೆದ್ದನು ತನ್ನ ಪುರಕೆ ॥ ೧೭ ॥

ಮಿಗೆ ಮಾಘ ಬಹಳ ಚತುರ್ದಶಿಯಂದು ಮು
ಕ್ತಿಗೆ ಸಂದನಾದಿತೀರ್ಥೇಶ
ಹಗಲಿರುಳೆನ್ನ ದಾ ದಿನ ಸರ್ವಜನಕರ್ತಿ
ಸೊಗಸಿತು ಮೂಲೋಕದಲ್ಲಿ ॥ ೧೪ ॥

——

ರಾಜ್ಯಪಾಲನ ಸಂಧಿ

ಸುಮುಖದಿ ಸುಖದಲ್ಲಿ ಮತ್ತೆ ಕೆಲವು ಕಾಲ
ಗಮಿಸಲೊಂದಾನೊಂದು ಪಗಲು
ನಮಿರಾಜ ವಿನಮಿರಾಜರು ದೀಕ್ಷೆವಡೆದ ಸಂ
ಯಮವಾರ್ತೆ ಬಂದಿತು ನೃಪಗೆ ॥ ೧ ॥

ಉಗುಳ್ದನಾಕ್ಷಣವೆ ತಂಬುಲವ ಕೊರಳ ಸೆರೆ
ಬಿಗಿದು ಕಣ್ಣೀರ್ಗಳುಮ್ಮಿದುವು
ಒಗಲೀಯದೊತ್ತಿ ನಿಲ್ಲಿಸಿದನು ಮೈದುನ
ರಗಲೆ ನೋವಹುದು ಸೈರಿಸಿದ ॥ ೨ ॥

ಅರಮನೆಗೆದ್ದನಾಗಳೆ ಸುಭದ್ರಾದೇವಿ
ಪಿರಿದು ಶೋಕಿಸುತಿರಲವಳ
ಸುರುಚಿರೋಕ್ತಿಯೊಳು ಸಂತೈಸಿದನಾ ಜಾಣ್ಮೆ
ಭರತೇಶಗೇನಿಂದು ಪೊಸತೆ ॥ ೩ ॥

ಅಳಿಯಂದಿರೆಡೆಗೆ ನಾನಿದ್ದೆನಂಜದಿರಿಯೆಂ
ದೊಳುನುಡಿದೋರಿ ರಾಯಸವ
ಕಳುಹಿ ಸಂತೈಸಿ ಸಂತೋಷದಿ ಕಾಲವ
ಕಳೆಯುತಿರ್ದನು ಮಹೋದಾತ್ತ ॥ ೪ ॥

ಸ್ಪೃಹೆಮಾಡಿದರ್ಥವ ಕೊಡುವ ಚಿಂತಾಮಣಿ
ಮಹಿತಾರ್ಥ ನವಸಿದ್ಧಿಯುಂಟು
ಗುಹೆಯಲ್ಲಿ ಪ್ರಭೆದೋರ್ಪ ಕಾಕಿಣಿಯುಂಟಿನ್ನು
ಗೃಹದೊಳಿರನೆ ಸುಖದಲ್ಲಿ ॥ ೫ ॥

ಪರಬಾಧೆ ತನಗಿಲ್ಲ ತಾನಿನ್ನು ದಂಡೆಯ್ದಿ
ಪರರ ಸಾಧಿಪ ಚಿಂತೆಯಿಲ್ಲ
ಪರವಿದು ತನ್ನದಿದೆಂದರಿದಾತ್ಮತ
ತ್ಪರನಾಗಿ ಭೋಗಿಸುತಿರ್ದ ॥ ೬ ॥

ಗಂಧಕುಟಿಗಳು ಚಾರಣರಡಿಗಡಿಗೆ ಸಂ
ಬಂಧಿಸುತಿಹರಲ್ಲಿಗಲ್ಲಿ
ಗಂಧೇಭ ಜಾತ್ಯಶ್ವವಲ್ಲಲ್ಲಿ ಹುಟ್ಟಿ ವ
ಸುಂಧರೆ ಸುಲಭವಾಗಿಹುದು ॥ ೭ ॥

ಅಲ್ಲಲ್ಲಿ ರತ್ನ ಹಟ್ಟಿಹುವು ಹೂಳಿದ ನಿಧಿ
ಪಲ್ಲುಗಿರಿದು ತೋರುತಿಹುವು
ಅಲ್ಲದೆ ಕೊನೆಯಂತೆ ಚಿನ್ನ ಹುಟ್ಟಿಹುದೇನ
ಸೊಲ್ಲಿಪೆನವನ ಕಾಲದೊಳು ॥ ೮ ॥

ಕಾಡೆಲ್ಲ ಶ್ರೀಗಂಧವೃಕ್ಷ ಕಪ್ಪುರವಾಳೆ
ಕೂಡೆ ಕತ್ತುರಿಮಿಗದೊಡ್ಡು
ನಾಡೆಲ್ಲ ತ್ಯಾಗಿ ಭೋಗಿಗಳ ಸಂಪದದಲ್ಲಿ
ಕೋಡಿವರಿದುದೇನನೆಂಬೆ ॥ ೯ ॥

ನೀಲಾಬ್ಜ ತಾವರೆ ನೆರೆದ ನೀರ್ಗೆರೆ ಗಂಧ
ಶಾಲಿ ಜೋತೊಲೆದಗದ್ದೆಗಳು
ಗಾಳಿ ಘಮ್ಮೆಂಬ ನಾನಾ ವನಗಳು ರಸ
ದಾಳಿಯಮಲೆ ವಿರಾಜಿಪುದು ॥ ೧೦ ॥

ಊರೂರೊಳಮೃತಾನ್ನ ಛತ್ರಿ ದಾರಿಯೊಳೆಳೆ
ನೀರು ಸಕ್ಕರೆಯರವಟಿಗೆ
ವಾರ ತಿಥಿಗೆ ನೋಂಪು ಮುನಿಭುಕ್ತಿ ವಿಪ್ರಸ
ತ್ಕಾರ ಭೋರೆನಲೊಪ್ಪುತಿಹುವು ॥ ೧೧ ॥

ಧರೆಗೆ ಸ್ವರ್ಗಕೆ ಸುರಸೋಪತಿ ನಡೆವುದು
ಸಿರಿ ಸರ್ವದೇಶ ತುಂಬಿಹುದು
ಧರೆಯನಾಳುವ ಚಿಂತೆ ತನಗಿಲ್ಲದಿಪ್ಪನಾ
ಭರತೇಶನೇನ ಬಣ್ಣಿಪೆನು ॥ ೧೨ ॥

ದೇಗುಲ ಭಾರವ ಗೋಡೆ ಕಂಭದ ಮುಂಡೆ
ಗಾಗಿಸಿ ದೇವರಿಪ್ಪಂತೆ
ಭಾಗಿಸಿ ಧರೆಯ ದಂದುಗವನಾಪ್ತರಿಗೆ ಸಂ
ಯೋಗಿಸಿ ಸುಖದಿ ತಾನಿಹನು ॥ ೧೩ ॥

ಪುಣ್ಯಫಲವನುಂಡು ತೀರಿಸುತಾತ್ಮಲಾ
ವಣ್ಯವನೊಳಗೆ ನಿಟ್ಟಿಸುತ
ಗಣ್ಯವೆ ಮುಕ್ತಿಯೆಂದೆಂಬಭಿಪ್ರಾಯವ
ರೇಣ್ಯದೊಳಿರ್ದನಾ ಧನ್ಯ ॥ ೧೪ ॥

ಒಪ್ಪುವ ಧ್ಯಾನಯೋಗಾನಿಲಬಲದಿಂದ
ಕಪ್ಪಿನ ಮುರಿಮೀಸೆ ಮೆರೆಯೆ
ಇಪ್ಪತ್ತೈಕೆಂಟು ವರಿಸದ ಜವ್ವನ
ತಪ್ಪದಿರ್ದನು ಬಹುಕಾಲ ॥ ೧೫ ॥

ಸರಸಿಜಾಕ್ಷಿಯರೊಡನರ್ತಿಮಾಡುತ ಮೂರು
ವರೆಕೋಟಿ ಬಂಧುವರ್ಗವನು
ಹರುಷವೇರಿಸುತ ಷಟ್ಖಂಡ ಜೀಯೆನೆ ಚಕ್ರ
ಧರನಿರ್ದನೊಲಿದಯೋಧ್ಯೆಯೊಳು ॥ ೧೬ ॥

ಭರತೇಶ ನಿರ್ವೇಗ ಸಂಧಿ

ಕೀರ್ತಿಗೆ ತ್ರಿಭುವನ ಸಾಲದು ತೇಜಕೆ
ಮಾರ್ತಾಂಡ ಸಾಟಿಯಲ್ಲೆಂದು
ಕೀರ್ತಿಸೆ ನರ ಸುರರಾಳುತಿರ್ದನು ಚಕ್ರ
ವರ್ತಿ ಭೂತಳವನೇನೆಂಬೆ ॥ ೧ ॥

ಆ ವಿಭು ಮತ್ತೊಂದು ಪಗಲು ಮೂವತ್ತೈರ
ಳ್ನಾವಿರ ಮಕುಟವರ್ಧನರ
ತೀವಿದೊಡ್ಡೋಲಗದೊಳಗಿರಲೊಂದು ಸು
ಖಾವಾಪ್ತಿ ತೋರಿತೇನೆಂಬೆ ॥ ೨ ॥

ನಿನ್ನಯ ಮುಖಕಿದು ಸರಿಯೊ ಮೇಣಲ್ಲವೊ
ಚನ್ನಿಗರರಸ ನೀನೊಲೆದು
ಚೆನ್ನಾಗಿ ನೋಡೆಂಬುವೊಲು ಮುಖಚಿತ್ರಕ
ಕನ್ನಡಿವಿಡಿದನಾ ನೃಪಗೆ ॥ ೩ ॥

ಹೊಳೆಹೊಳೆದರಸ ನಿಟ್ಟಿಸುವಾಗ ಮೊಗವೆಡ
ಬಲಕೊಲೆವಂದವೊಪ್ಪಿದುದು
ಇಳಿಯೊಡೆತನವಿನ್ನು ಸಾಕೆಂದು ಮನ ಹೇಸಿ
ತಲೆಗೊಡಹುವನೊಯೆಂಬಂತೆ ॥ ೪ ॥

ಚಿರಕಾಲ ಬೇಟವ ಮಾಡಿ ಮುಕ್ತ್ಯಂಗನೆ
ಕರೆಯಟ್ಟಿದಾ ದೂತಿ ಬಂದು
ಪೊರೆಸಾರ್ದು ಪೇಳ್ವಂತೆ ನೃಪನ ಕೆನ್ನೆಯೊಳೊಂದು
ನೆರೆಯಿದ್ದುದಾ ಸಮಯದೊಳು ॥ ೫ ॥

ಮುಟ್ಟಲಾಗಿರ್ದುದಾಯುಷ್ಯ ಮುಕ್ತಿಗೆ ತಾನು
ತೊಟ್ಟನೆ ನಾಳೆ ಲಂಘಿಸುವ
ತಿಟ್ಟವಿರ್ದುದು ಘಾತಿಯಾ ದಿನ ಜಾರುವ
ಕಟ್ಟಣೆಯಿರೆ ಕಂಡನೊಳಗೆ ॥ ೬ ॥

ಮರೆದಿರ್ದೆನಹುದೆನ್ನ ನೀ ನರೆ ಜನಿಸಿಯೆ
ಚ್ಚರಿಸಿತಲ್ಲಾಯೆಂದು ನಕ್ಕ
ಹರಿದುದು ಸಂಸಾರಸುಖದಾಶೆ ಮನದಲ್ಲಿ
ನೆನೆದುದಾ ನೃಪಗೆ ವಿರಕ್ತಿ ॥ ೭ ॥

ಸುಡು ಸುಡು ನನ್ನ ನಡೆಯ ತಪಸೆಂಬ ಪಾ
ಲ್ಗಡಲೊಳು ಮೂಡಿ ಮುಳುಗದೆ
ಜಡದೇಹ ಸುಖವೆಂಬ ಲವಣಸಮುದ್ರವ
ಕುಡಿದು ಬಾಯಾರಿದೆನೆಂದ ॥ ೮ ॥

ನೋಡು ನೋಡೆನ್ನೊಡಹುಟ್ಟಿದವರು ಮೀಸೆ
ಮೂಡುವಂದೆ ದೀಕ್ಷೆವಡೆದು
ಕೂಡಿದರಮೃತವನಿಂದುವರೆಗೆ ಜೋಲಿ
ಮಾಡಿದೆ ನಾನೊಬ್ಬನೆಂದ ॥ ೯ ॥

ಒಡಹುಟ್ಟಿದವರ ವಾರ್ತೆಯದೇಕೆ ಮತ್ತೆಯೆ
ನ್ನೊಡಲೊಳು ಹುಟ್ಟಿದರ್ಭಕರು
ಕಡುದೀಕ್ಷೆಯೊಳು ಸಿದ್ಧಿವಡೆದರಲ್ಲವೆ ನನ್ನ
ಜಡತೆಯ ನೋಡು ನೋಡೆಂದ ॥ ೧೦ ॥

ಆಗಲಿ ನಮ್ಮವರೆಲ್ಲ ಮುಕ್ತಿಗೆ ಮುಂದೆ
ಹೋಗಲಿ ಹೋದರೇನಾಯ್ತು
ಹೋಗುತ ಹಾದಿಯನುಡೆ ಸುತ್ತಿಕೊಂಡರೆ
ಲಾಗಿಸಿದರೆ ಮಾರ್ಗವಿದಕೊ ॥ ೧೧ ॥

ಬುದ್ಧಿ ಸಾಗರನೊಡನೆದ್ದು ಕೈಮುಗಿದು ಸು
ವೃದ್ಧಿ ಸಂಪದವಿದರಿಂದ
ಉದ್ದದ ಸಿರಿಯುಂಟೆ ಸುಖಿಸೀಗ ತಪಸಿನ
ಸುದ್ದಿಯೇಕವನೀಶಯೆಂದ ॥ ೧೨ ॥

ಅಲ್ಲವೈ ಕೇಳಂದು ಪುರುನಾಥ ತನಗೇನು
ಮಿಲ್ಲದೆ ತಪಸಿಗೆಯ್ದಿದನೆ
ಬಲ್ಲವಗೀತನು ಸ್ಥಿರವಲ್ಲ ಕುಟ್ಟಿಗೊಂ
ಡಲ್ಲವೈಯೆಂದನಾ ಚಕ್ರಿ ॥ ೧೩ ॥

ಆರು ಖಂಡವ ಗೆಲ್ದರೇನಾಯ್ತು ಕರ್ಮದ
ಮೂರು ಕಾಂಡವಗೆಲ್ಲದೆನಗೆ
ಮೂರು ರನ್ನವೆ ಜೀವಹಿತವೈಸೆ ಹದಿನಾಲ್ಕು
ಸೋರೆಯ ಮಣಿಯೊಳೀನೆಂದ ॥ ೧೪ ॥

ಅರಿಯದಾನೊಂದನಾಡಿದೆನು ನೀ ಕಂಡುದೆ
ತೆರನೆನಗದು ತಾನೆ ಶರಣು
ಮರೆವುದೆಮ್ಮಯ ತಪ್ಪನೆಂದು ಚಕ್ರಿಯ ಪಾದ
ಕೆರಗಿ ಕುಳಿತನವನೊಡನೆ ॥ ೧೫ ॥

ಮಗನೆ ಬಾ ದೊಡ್ಡಣ್ಣ ರಾಜ್ಯವನಾಂತು ದೀ
ಕ್ಷೆಗೆ ನನ್ನ ಕಳುಹೆಂದು ಚಕ್ರಿ
ತೆಗೆದಪ್ಪಿ ನುಡಿದನಾ ನುಡಿಗೇಳ್ದ ಕಣ್ಣನೀ
ರೊಗುತ ಮೂರ್ಛೆಗೆ ಸಂದನವನು ॥ ೧೬ ॥

ಆನೆಯ ರಂಜಿಕೆ ಕಳಭಕಹುದೆ ದೇವ
ರಾನುವ ರಾಜ್ಯಭಾರವನು
ಆನಲಾಪೆನೆ ನಾನು ಸ್ವಾಮಿಯಿಂತೇಕೆ ಸಂ
ಧಾನಿಪುದೆಂದನಾ ಕುವರ ॥ ೧೭ ॥

ದೇವರಿಗಿಷ್ಟವಾದನ್ನ ಭೂಷಣ ವಸ್ತ್ರ
ವೀವುತ ಪೊರೆದಿಷ್ಟು ಕಾಲ
ಈ ವೇಳೆಯೊಳು ದೇವರೇಕೆ ಕೊಕ್ಕರಿಸಿದ
ಭೂವಲಯವನೀವುದೆಂದ ॥ ೧೮ ॥

ನುಡಿಜಾಣನೆಂಬುದ ಬಲ್ಲೆನೈ ಮಗನೆಯೀ
ಪೊಡವಿ ಹೆಡ್ಡಗೆ ಕಷ್ಟವಹುದು
ಕಡುಜಾಣಗಿದು ಕಷ್ಟವಲ್ಲಿಷ್ಟವಹುದೊಡಂ
ಬಡು ಪಟ್ಟಕೆಂದನು ಜನಕ ॥ ೧೯ ॥

ಮೋಕ್ಷರಾಜ್ಯಕೆ ದೇವರಿಚ್ಛೈಸಿ ನನಗೆ ಮ
ತ್ತೀ ಕ್ಷೇತ್ರವಿತ್ತರೇಕಹುದು
ದೀಕ್ಷೆಯೆ ಶರಣು ನಾನೂ ಬಪ್ಪೆನೆಂದವ
ನಾಕ್ಷೇಪವಿಲ್ಲದಾಡಿದನು ॥ ೨೦ ॥

ಅಪ್ಪಾಜಿ ನನಗೆ ರಾಜ್ಯವಸಿತ್ತು ಮುನಿಯಾದ
ನೊಪ್ಪಿಸಬೇಕಾನು ನಿನಗೆ
ಒಪ್ಪಬೇಕದಕೆ ನೀನೀಗ ಸೈರಿಸಿ ಹಿಂದೆ
ಬಪ್ಪುದು ತಪಸಿಗೆಮ್ಮಂತೆ ॥ ೨೧ ॥

ಆ ನುಡಿಗೇಳ್ದೆದೆ ಹವ್ವನೆ ಹಾರಿ ಸು
ಮಾನಗುಂದಿರ್ದನಾ ಕುವರ
ನೀನುತ್ತರಂಗೊಟ್ಟರೆನ್ನಾಣೆ ನಿಲ್ಲೆಂದು
ಸೂನುವ ಮಾತ ಕಟ್ಟಿದನು ॥ ೨೨ ॥

ಕರವಿಡಿದೊಡನರ್ಕಕೀರ್ತಿರಾಜನನೆತ್ತಿ
ಹರಿಪೀಠದಲ್ಲಿ ಕುಳ್ಳಿರಿಸಿ
ದೊರೆ ತನ್ನ ಮಕುಟವನಾತಗಿಕ್ಕಿದನು ಭೂ
ಸುರವೃಂದ ಜಯ ಜಯಯೆನಲು ॥ ೨೩ ॥

ತೆಗದಾದಿರಾಜನ ಕೆಲದಲ್ಲಿ ಪುಟ್ಟ ಗ
ದ್ದುಗೆಗಿಟ್ಟು ಯುವರಾಜನೆಂದು
ಮಿಗೆ ಕಂಠಮಾಲೆಯನಿಕ್ಕಿ ಸೇಸೆಯನಿಟ್ಟು
ಸುಗುಣ ರಾಜೇಂದ್ರ ಮನ್ನಿಸಿದ ॥ ೨೪ ॥

ಕಂಬನಿಬಿಡುತಿರ್ದರಾ ಪುತ್ರರೊಡನೆನ್ನ
ಹಂಬಲ ಬಿಟ್ಟು ನೀವಿವರ
ಬೆಂಬಳಿವಿಡಿದಿಹುದೆಂದು ಭೂಪಾಲಕ
ದಂಬಕೆ ಕೈವೀಸಿ ಬಿಟ್ಟ ॥ ೨೫ ॥

ಮತ್ತೆ ನೋಡಿದನೆ ತನ್ನಯ ಪುತ್ರರೆಂದವ
ರತ್ತರಳಲಿಯೆಂದು ನೂಂಕಿ
ಮತ್ತೀಭದಂತೆ ಲೀಲೆಯೊಳು ತಪೋವನ
ದತ್ತೆಯ್ದುತಿರ್ದನಾ ಧೀರ ॥ ೨೬ ॥

ವಸುಧಾಧಿಪತಿ ದೀಕ್ಷೆಗಡಿಯಿಟ್ಟನೆನೆ ಕೇಳ್ದು
ಮಸಗಿತು ಸತಿಯರ್ಗೆ ವಿರಹ
ಬಿಸಿಲೊಳೀಡಾಡಿದ ಮಾಂದಳಿರಂತಾದ
ರಸುವಿಗೆ ಮೂರ್ಛೆ ತಟ್ಟಿದುದು ॥ ೨೭ ॥

ಅಕ್ಕಟ ಚಕ್ರವರ್ತಿಯ ಮಹಾಭಾಗ್ಯ ಕ
ಣ್ಣಿಕ್ಕುವಷ್ಟಕೆ ಮಾಯವಾಯ್ತೆ
ಕಕ್ಕುಲಿತೆಯ ಸುಡು ಸುಡು ಕಷ್ಟವೆಂದು ಹೆ
ಮ್ಮಕ್ಕಳತ್ತರು ತಮು ತಮಗೆ ॥ ೨೮ ॥

ಬಾಳ ಬೀಸಾಡಿ ಹೋದವನಲ್ಲ ಮುಕ್ತಿಗೆ
ನಾಳೆಪಯಣವೆಂಬುದರಿದು
ಪೇಳದೆಯ್ದಿನ್ನೈಸೆ ನಮಗೂ ದೀಕ್ಷೆಯೆ ಗತಿ
ಯೇಳಿರೆಂದನುವಾದರೆಲ್ಲ ॥ ೨೯ ॥

ಸುಖದಲ್ಲಿ ಬಾಳ್ದು ನಿಮ್ಮಯ್ಯನಂದದಿ ಮೋಕ್ಷ
ಸುಖವೆಯ್ದಿರೆಂದೊಲ್ದು ಪರಸಿ
ಸುಖಕಾಗಿ ನಾವು ದೀಕ್ಷೆಯನಾಂಪೆವೆಂದೊರೆ
ದಖಿಲ ನಾರಿಯರು ಸಾಗಿದರು ॥ ೩೦ ॥

ತಡೆಯಬಾರದು ತಮ್ಮ ಪತಿಯ ಕೈಯೊಳೆ ದೀಕ್ಷೆ
ವಡೆದು ಸುಖಿಗಳಾಗಲೆಂದು
ಒಡನೆ ಪನ್ನಂಗ ಪಲ್ಲಕ್ಕಿಯೊಳ್ತಾಯ್ಗಳ
ಬಿಡುಗೆಗೊಟ್ಟರು ಕುಮಾರಕರು ॥ ೩೧ ॥

ಪುರದ ಕಾಂತೆಯರೆಲ್ಲ ಮುದಿಲು ಮಾಡವನೇರಿ
ಪರಿಕಿಸಿ ಗೋಳಿಡುತಿರಲು
ಪರಿವಾರ ಪ್ರಜೆ ಶೋಕಗೈಯೆ ಪೆಂಗಳು ಹಿಂದೆ
ಬರೆ ರಾಯ ಮುಂದೆಯ್ದುತಿರ್ದ ॥ ೩೨ ॥

ಅಯ್ಯೋ ನಮ್ಮೊಡೆಯನೆ ಸಿರಿಯ ಕಾಮನ ಬಿಲ್ಲ
ರಯ್ಯವೊಲ್ತೋರಿ ಜಾರುವೆಯ
ಮೆಯ್ಯ ಪೊತ್ತವರ ಸುಖವ ಸುಡಲೆಂದು ಪೆ
ಣ್ಬಯ್ಯಲೆದ್ದುದು ಪುರದೊಳಗೆ ॥ ೩೩ ॥

ಬೀದಿಯೊಳ್ನೀನೆಯ್ದುವಾಗ ಕಂಡರೆ ಸ್ವರ್ಗ
ವಾದಂತೆ ನಲವಪ್ಪುದೆಮಗೆ
ಹೋದುದೆ ನಮ್ಮ ಸಂಪತ್ತು ಹಾ ಹಾ ಯೆಂದು
ವೇದನೆಬಟ್ಟರಲ್ಲಲ್ಲಿ ॥ ೩೪ ॥

ಪೆಂಡಿರು ಮಕ್ಕಳು ಸೊಸೆಯರುವೆರಸಿ ಷ
ಟ್ಖಂಡವ ಜಯಿಸಿ ಮತ್ತವರ
ಕೊಂಡೊಯ್ಯುತಿರ್ದೆಯ ತಪಕೆಂದು ಪೆಂಗಳ
ತಂಡ ಗೋಳಿಟ್ಟುದಲ್ಲಲ್ಲಿ ॥ ೩೫ ॥

ಶೋಕಿಸುವವರತ್ತ ನೋಡದೆ ನೃಪತಿ ಪ
ರಾಕಿಂದಪುರವನು ದಾಂಟಿ
ಭೀಕರಾರಣ್ಯವ ಸಾರ್ದನು ಬಳಸಿರ್ದ
ನೇಕ ಪರಿಸ್ಪಂದವೆರಸಿ ॥ ೩೬ ॥

ಮಲಯಜತರುವಿರ್ದುದದರ ಮೂಲದೊಳೊಂದು
ಶಿಲೆಯಿರ್ದುದತಿ ತೆರಪಾಗಿ
ಕೆಲದವರ್ಜಯ ಜಯಯೆನಲು ಪಲ್ಲಕ್ಕಿಯಿಂ
ದಿಳಿದನಾ ನಿಶ್ಯಂಕಮಲ್ಲ ॥ ೩೭ ॥

———

ಧ್ಯಾನ ಸಾಮರ್ಥ್ಯ ಸಂಧಿ

ತೆರೆಯ ಮರೆಯೊಳು ಸಿದ್ಧಾಸನದಲ್ಲಿ ಬಂ
ಧುರಶಿಲೆಯೊಳು ರಾಯ ಕುಳಿತು
ಗುರುವಿಲ್ಲ ತನಗೆ ತಾನೆ ಗುರುವೆಂಬುದ
ಹರಹಿದನೇನ ಬಣ್ಣಿಪೆನು ॥ ೧ ॥

ದೇಹಕಲ್ಲದೆ ವಸ್ತ್ರಭೂಷಣದೊಪ್ಪ ನಿ
ರ್ದೇಹದಾತ್ಮನಿಗಿಲ್ಲವಿವರ
ಮೋಹವೇನೆಂದು ವಸ್ತ್ರಾಭರಣವ ಬಿಸು
ಟಾ ಹೇಮವರ್ಣನೊಪ್ಪಿದನು ॥ ೨ ॥

ಆಸನಾಯತ ಮುಚ್ಚಿದಕ್ಷಿಗಳಿಂದ ಮು
ಹಾ ಸಿದ್ಧ ಬಿಂಬದಂತೆಸೆವ
ಭಾಸುರ ಬಾಹ್ಯಸಾಮಗ್ರಿಯೊಳ್ಮನಿ ಧ್ಯಾನ
ಬೀಸರಿಸದೆ ನಿಂದನೊಳಗೆ ॥ ೩ ॥

ನೋಡುತಿರ್ದನು ತನ್ನ ನಿಜವ ಕರ್ಮಗಳು ಕೆ
ಟ್ಟೋಡುತಿರ್ದುವು ಕಂಡ ಕಡೆಗೆ
ಕೂಡೆ ಕೂಡಾನಂದ ಸುಜ್ಞಾನ ಸುಪ್ರಭೆ
ಮೂಡುತಿರ್ದುವು ನಿಜಾತ್ಮನೊಳು ॥ ೪ ॥

ಎರಡು ಕಂಗಳ ಮುಚ್ಚಿ ಸುಜ್ಞಾನವೆಂಬ ದೊ
ಡ್ಡುರಿಗಣ್ಣ ತೆಗೆದಾತ್ಮ ಶಿವನು
ಅರಿಕರ್ಮದನುಜರಿಪ್ಪಂಗ ಮೂರೆಂಬ ಮು
ಪ್ಪುರಗಳ ಸುಡುತಿರ್ದನಾಗ ॥ ೫ ॥

ಧ್ಯಾನವೆಂಬುರೆ ಧ್ಯೇಯವೆಂಬ ಧ್ಯಾನಿಪನೆಂಬ
ಧ್ಯಾನದ ಫಲನೆಂಬ ನಾಲ್ಕು
ತಾನೊಬ್ಬನಾಗಿ ತನ್ನೊಳಗೆ ತಾನಿರ್ದನಾ
ತ್ಮಾನಂದನಾ ದಿವ್ಯಯೋಗಿ ॥ ೬ ॥

ನಗುವಂತೆ ಮೊಗವಿರ್ದುದಲುಗದೆ ಮೈಯಿರ್ದು
ದೊಗುವೊಲಿರ್ದುದು ಹೊಸ ಕಾಂತಿ
ಪ್ರಗುಣ ಯೋಗಿಯ ನೋಡಿ ತುಟಿ ಮಿಸುಕದೆ ಮಂದಿ
ತೆಗೆದಿರ್ದುದುರೆ ಬೆರಗಾಗಿ ॥ ೭ ॥

ಬಳಬಳನುದುರುತಿರ್ದುದು ಕವ.ಗ ಚಿತ್ಪ್ರಭೆ
ಚಳಚಳನೊಳಗೇರುತಿಹುದು
ಎಳನೇಸರೊಳಗೈಕ್ಯವಾದಂತೆ ಪರಮಾತ್ಮ
ಕಳೆಯೊಳಿರ್ದನು ಯೋಗಿರತ್ನ ॥ ೮ ॥

ತೊಳಲಿ ನಾಡೆಲ್ಲವ ತನ್ನಯ ಮನೆಯ ಹೊ
ಕ್ಕಲಸಿಕೆಗಳಿವನಂದದೊಳು
ಇಳೆಯ ಚಿಂತೆಯೊಳಾಡಿದವನೀಶ ತನ್ನಾತ್ಮ
ನೊಳು ನಿಂದು ವಿಶ್ರಮಿಸಿದನು ॥ ೯ ॥

ಎರವೆಂದು ಕಂಡು ಮುನ್ನಾಳ್ದನು ರಾಜ್ಯವ
ಸ್ಥಿರವೆಂದೆ ತನ್ನ ಕಂಡಿರ್ದ
ಎರವೆಂಬುದೆರವಾಯ್ತು ಸ್ಥಿರ ತಾನೆ ಸ್ಥಿರವಾಯ್ತು
ಭರತೇಶ ಕಂಡಲ್ಲಿ ಹುಸಿಯೆ ॥ ೧೦ ॥

ಗುರುಹಂಸನಾಥನೆಂಬಾನೆಂಬ ಸಂಕಲ್ಪ
ವೆರಡಿರುತಿರ್ದುದು ಮತ್ತೆ
ಎರಡಳಿದೊಂದಾಗಿ ನಿರ್ವಿಕಲ್ಪದೊಳು ಭಾ
ಸುರಯೋಗಿ ತನ್ನೊಳಗಿರ್ದ ॥ ೧೧ ॥

ತರುಣಿ ಪುಷ್ಪವ ನೀಡುತಿರೆ ಮಂಚವಲುಗಲಾ
ಕರೆದ ಪೂ ಜಗುಳಲಾರೈದು
ಭರತೇಶಮುನಿಯಾದ ನಲ್ಲೆಯೆಂದಿಂದ್ರನ
ಚ್ಚರಿವಟ್ಟು ನುಡಿದನಂಗನೆಗೆ ॥ ೧೨ ॥

ಜಾರಿದುವರುವತ್ತು ಮೂರು ಕರ್ಮಗಳಾಗ
ಮೀರಿದನಂತರಾತ್ಮತೆಯಾ
ತೋರಿತು ಪರಮಾತ್ಮ ಸಂಪತ್ತು ಮುನಿಯಲ್ಲ
ಧೀರನಾಕ್ಷಣ ಜಿನನಾದ ॥ ೧೩ ॥

ಕವಿದ ಕರ್ಮದ ಮುಸುಕಳಿಯೆ ಶುದ್ಧಾತ್ಮನ
ಸ್ತುವಿನ ಚಿತ್ಪ್ರಭೆ ಪೊರಪೊಣ್ಮೆ
ರವಿ ಚಂದ್ರಕೋಟಿಪ್ರಕಾಶ ಮೈಯಿಂದುಕ್ಕಿ
ಭುವನನವ ತುಂಬಿತಾಕ್ಷಣವೆ ॥ ೧೪ ॥

ವಿಲಸಿತ ಸಿದ್ಧಲೋಕಕೆ ದಾಳಿಯಿಡುವೆನೆಂ
ದೆಳಸಿ ಪ್ರಸ್ಥಾನಗೈದಂತೆ
ನೆಲದಿಂದ ಮೇಲೈದುಸಾವಿರ ಮಾರಿನೊ
ಳ್ನೆಲಸಿದನಾ ಪರಮಾತ್ಮ ॥ ೧೫॥

ತೆರವಿಡಿದೊತ್ತಿಲಿರ್ದವರಾಗ ದೂರವಾ
ದರು ಕೂಡೆ ಕೈಗಳ ಮುಗಿದು
ಶಿರವೆತ್ತಿ ನೋಡುತ ಜಯ ಜಯವೆನುತಿರೆ
ಭರತಜಿನೇಂದ್ರ ಮೇಲಿರ್ದ ॥ ೧೬ ॥

ಮೇಲಣಿಂದಿಂದ್ರನೆಯ್ತರುತಿರಲಿತ್ತ ಪಾ
ತಾಳದಿಂದುರಗೇಂದ್ರ ತನ್ನ
ಬಾಲೆವೆರಸಿ ಫಣಿಗಣಗೂಡಿ ಸುರವಾದ್ಯ
ಜಾಲದೊಳೆಯ್ತರುತಿರ್ದ ॥ ೧೭ ॥

ಸುರಪನು ಫಣಿಪನು ತಮ್ಮ ತಮ್ಮರಸಿಯ
ವೆರಸಿ ಪಾದಾನತರಾಗಿ
ಪರಿಪರಿಯಲಿ ಸ್ತುತಿಸಿದರು ಪೂಜಿಸಿದರಾ
ದುರಿತನಿರ್ಧೂಮಧಾಮನನು ॥ ೧೮ ॥

ಆರುಹ ನಮ್ಮಂಬಿಕೆಯರಿಗೆ ನಾದುನಿಯರ್ಗೆ
ಕರುಣಿಸು ದೀಕ್ಷೆಯನೆಂದು
ಒರೆದರ್ಕಕೀರ್ತ್ಯಾದಿರಾಜರೆರಗೆ ಜಿನೇ
ಶ್ವರನೇಳಿರೆನಲೆದ್ದರೊಡನೆ ॥ ೧೯ ॥

ಉರಗೇಂದ್ರನರಸಿಯರಿಂದ್ರನ ಸತಿಯರು
ತೆರೆವಿಡಿದರು ನಲ್ಮೆಯಿಂದ
ಕರೆತಂದು ಮುನಿಗಳಾ ಪುಣ್ಯಕಾಂತೆಯರನಾ
ತೆರೆಯೊಳು ಪುಗಿಸಿದರಾಗ ॥ ೨೦ ॥

ಸುರವಾದ್ಯ ಮೊಳಗೆ ತೇಜೋರಾಶಿ ಮೊದಲಾದ
ಗುರುಗಳು ಸ್ತೋರ್ದಿ ಸತ್ಕರಿಸೆ
ನಿರುಪಮದೀಕ್ಷೆಯನಾ ಪುಣ್ಯಸತಿಯರೆ
ಲ್ಲರಿಗಿತ್ತನಾ ಪರಂಜ್ಯೋತಿ ॥ ೨೧ ॥

ಚಕ್ರೇಶ ಕೈವಲ್ಯ ಸಂಧಿ

ನಡುವಗಲಲ್ಲಿ ಘಾತಿಯನಿಕ್ಕಿ ಚಕ್ರಿ ಸಂ
ಗಡದವರ್ಗಿತ್ತು ದೀಕ್ಷೆಯನು
ಕಡುಚಿತ್ರ ವೃಷಭಯೋಗಿಗೆ ಘಾತಿಕರ್ಮವಾ
ಕಡೆವಗಲೊಳು ಕೆಟ್ಟುದೊಡನೆ ॥ ೧ ॥

ವಿರಚಿಸಿದರು ಕೂಡೆ ಗಂಧಕುಟಿಯನೊಲ್ದು
ನರಸುರೋರಗರರ್ಚಿಸಿದರು
ಭರತಜಿನನ ಸಾರೆ ವೃಷಭಜಿನೇಶ್ವರ
ನರಮನೆಗಟ್ಟಿದನಾಗ ॥ ೨ ॥

ಆ ರಾತ್ರಿ ಬೆಳಗಿನೊಳಗೆ ಹೋಯ್ತು ರವಿ ಮೂಡ
ಲಾರಾಧ್ಯ ಭರತ ಸರ್ವಜ್ಞ
ದೂರಿತ ನಿರ್ಘಾತಿಗಳನಿಕ್ಕಲನುವಾದ
ವೀರವನೇನ ಬಣ್ಣಿಪೆನು ॥ ೩ ॥

ಗಂಧಕುಟಿಯನುಳಿದನು ದೀಕ್ಷೆಗೊಂಡ ಶ್ರೀ
ಗಂಧವೃಕ್ಷದ ಮೊದಲ್ಗಿಳಿದು
ಬಂಧುರಶಿಲೆಯಲ್ಲಿ ಪಲ್ಯಂಕಯೋಗಾನು
ಬಂಧದಿ ಕುಳಿತನಾ ಸ್ವಾಮಿ ॥ ೪ ॥

ರಾಜಿಪ ಶಿಲೆಯಲ್ಲಿ ಬಾಹ್ಯಾಂಗವಿರ್ದದು
ತೈಜಸ ಕಾರ್ಮಣಗೂಡಿ
ಮೂಜಗದುದ್ದದೊಳಾತ್ಮ ನಿಂದಿರ್ದನು
ಸೋಜಿಗವಲ್ತೆ ಚಿದ್ಘನತೆ ॥ ೫ ॥

ಎಳೆವಿಸಿಲೆಂತು ಬೆಳ್ಮುಗಿಲೆಂತು ಮುಂಜೆಂತು
ಬೆಳುದಿಂಗಳೆಂತೊಮ್ಮೆ ಜಗವ
ಮುಳುಗಿಕೊಂಡಿಪ್ಪುವಂತಾತ್ಮ ಮೂಜಗವನ
ಗ್ಗಳವೆತ್ತು ತುಂಬಿರ್ದನಾಗ ॥ ೬ ॥

ಕೆಡೆದುವೆಪ್ಪತ್ತೆರಡೊಮ್ಮೆ ಕರ್ಮಗಳವ
ರೊಡನೆ ಬಿದ್ದುವು ಪದಿಮೂರು
ಕುಡುವಿಂಚಿನಂತಂಗ ಬಯಲಾಗೆ ಜಗದ ಮೇ
ಲ್ಗಡೆಗೆ ಲಂಘಿಸಿದನಾ ಸ್ವಾಮಿ ॥ ೭ ॥

ಭರತೇಶನೆಂಬುದು ದೇಹ ಹೋದಂದೆ ಹೋ
ಯ್ತುರರೆ ಸಿದ್ಧರ ಸಮೂಹದೊಳು
ತಿರುಗದ ಹಾದಿಯ ಹೋಗಿ ಮುಕ್ತಿಯೊಳು ನಿಂ
ದಿರುತಿರ್ದನಾ ಸಿದ್ಧನತ್ತ ॥ ೮ ॥

ಶ್ರೀ ಹಂಸ ಹಂಸ ನೋಡೇನೆಂಬೆನೊಡನಿತ್ತ
ಲಾ ಹೊತ್ತಿನೊಳು ಪಂಚಸುತರು
ಮೋಹದ ಘಾತಿಯನಿಕ್ಕಿ ಬಾಂಗಡೆಯೊಳು
ತ್ಸಾಹವೆತ್ತಿರ್ದರಾಶ್ಚರ್ಯ ॥ ೯ ॥

ತಂದೆ ಹೋದಳಲರ್ಕಕೀರ್ತ್ಯಾದಿ ರಾಜರ್ಗೆ
ಸಂದಿಸಿತಿಲ್ಲ ಸೋದರರು
ಒಂದೆ ಬಾರುನ್ನತಿವೆತ್ತುದಕೆದೆಯೊಳಾ
ನಂದಿಸುತಿರ್ದರಚ್ಚರಿಸಿ ॥ ೧೦ ॥

ಭರತಸರ್ವಜ್ಞ ಮುಕ್ತಿಗೆ ಸಂದ ಶಿಲೆಯ ಹ
ತ್ತಿರ ವಜ್ರ ಹೋಮವ ರಚಿಸಿ
ಹರುಷನೃತ್ಯವನಾಡಲರ್ಕಕೀರ್ತ್ಯಾದಿರಾ
ಜರು ನೋಡುತಿರ್ದರರ್ತಿಯೊಳು ॥ ೧೧ ॥

ಭೂವಲಯದ ಭಾರವೆತ್ತ ತೊಂಬತ್ತಾರು
ಸಾವಿರ ಹೆಣ್ಣಾಟವೆತ್ತ
ಕೈವಲ್ಯ ಕ್ಷಣಕಹುದೆತ್ತಲೆಂದುರಗೇಂದ್ರ
ಭಾವಿಸಿ ಪೊಗಳ್ದನಾ ವಿಭುವ ॥ ೧೨ ॥

ತನಗೆ ತಾಂ ಗುರುವಾಗಿ ದೀಕ್ಷೆಯನಾಂತು ತ
ನ್ನನು ತಾನೆ ತನ್ನಲ್ಲಿ ನೋಡಿ
ತನುವಳಿದಮೃತವೆಯ್ದಿದನಹೊ ಪೂತು ಬಾ
ಪೆನುತಿರ್ದ ಮಕುಟವಲ್ಲಾಡೆ ॥ ೧೩ ॥

ಮೆಯ್ಯ ದಂಡಿಸಿದನೆ ಭಿಕ್ಷಗೆಂದೊರ್ವಗೆ
ಕೆಯ್ಯೊಡ್ಡಿದನೆ ಚಕ್ರಧರನು
ಉಯ್ಯಲ ತೂಗಿದಂತಮೃತಕೆ ಸಂದ ಬ
ಲ್ಗೆಯ್ಯನಲ್ಲವೆ ಪುರೆಯೆಂದ ॥ ೧೪ ॥

ಸಾಕಾಗದದ ಪೇಳುತಿರೆ ಕಲಿಯುಗದ ರ
ತ್ನಾಕರಸಿದ್ಧಗಿಷ್ಟರಲಿ
ಸಾಕು ನಿಲ್ಲೆಂದಮರೇಂದ್ರ ವಿನೋದಾರ್ಥ
ವಾಕುದೋರಿದನನಿತರೊಳು ॥ ೧೫ ॥

ನಾನೆಷ್ಟರವನಿನ್ನು ರತ್ನಾಕರಸಿದ್ಧ
ತಾನೆಷ್ಟರವನು ಬಣ್ಣಿಪೊಡೆ
ನೀನೆಷ್ಟರವನೆಂದು ನಾಗೇಂದ್ರ ಪೊಗಳ್ದನ
ತ್ಯಾನಂದ ಮಿಗೆ ಚಕ್ರಧರನ ॥ ೧೬ ॥

ಅಹುದಲಾ ಗುಣಕೆ ಮತ್ಸರವೆ ಚಕ್ರಿಯವೊಲು
ಬಹುಭಾರವಾಂತಿರ್ದು ಕ್ಷಣಕೆ
ಸಹಜದಿ ಮುಕ್ತರಾದವರಾರು ನೀನಾಡ
ಬಹುದೆಂದನೊಡನೆ ದೇವೇಂದ್ರ ॥ ೧೭ ॥

ಆತನಂದದಿ ಮುಕ್ತಿ ನವಗಾಗಲೆಂದು ತ
ಧ್ಭೂತಳಹೋಮ ಭಸ್ಮವನು
ಪ್ರೀತಿಯಿಂದಮರೇಂದ್ರ ಧರಿಸಿದನುರಗೇಂದ್ರ
ನಾತುರದಿಂದಿಟ್ಟ ತಾನು ॥ ೧೮ ॥

ನೆರೆದರ್ಕ ಕೀರ್ತ್ಯಾದಿರಾಜ ಮುಂತಾದ ಸ
ರ್ವರು ಧರಿಸಿದರಕ್ಕರಿಂದ
ಭರತನಾಥನ ಮೋಕ್ಷಕಲ್ಯಾಣ ಜಗವನು
ದ್ಧರಿಸಿತು ಸುಖವೆತ್ತರೆಲ್ಲ ॥ ೧೯ ॥

ಶ್ರೀ ಜಿನಸಭೆಯ ಬೀಳ್ಕೊಂಡಿತ್ತ ತಮ್ಮೊಡ
ನೋಜೆಯಿಂದೋಲೈಸಿ ಬರ್ಪ
ಪೌಜನೆಲ್ಲವನು ಬೀಳ್ಕೊಟ್ಟರ್ಕಕೀರ್ತ್ಯಾದಿ
ರಾಜರು ಹೊಕ್ಕರು ಪುರವ ॥ ೨೦ ॥

ಬಿಮ್ಮಗಿದ್ದುದು ಪುರ ಪ್ರಜೆಗಳ ಕಂಗಳೊ
ಳುಮ್ಮುತಿರ್ದುದು ಕಣ್ಣ ನೀರು
ಸುಮ್ಮನೆ ನೋಡುತ ಸುಯ್ವುತ ಸಾರ್ದರು
ತಮ್ಮ ಚಾವಡಿಯನಾ ನೃಪರು ॥ ೨೧ ॥

ತಂದೆ ಕುಳ್ಳಿರುವ ಗದ್ದುಗೆಯ ಕಾಣುತ ಭುಗಿ
ಲೆಂದೆದ್ದುದೆದೆಯಲ್ಲಿ ಶೋಕ
ಬಂದುವು ಕಣ್ಣೀರು ಸ್ವಾಮಿ ಹಾ ಹಾ ಕೆಟ್ಟಿ
ವೆಂದು ಬಾಯ್ಬಿಟ್ಟೊರಲಿದರು ॥ ೨೨ ॥

ಧೈರ್ಯ ಜಾರಿದುದೋಜೆ ಹಾರಿತು ನುಡಿಯ ಚಾ
ತುರ್ಯವೆಂಬುದು ಬಯಲಾಯ್ತು
ಸೂರ್ಯನಿದ್ದವರಿಗಾಗಿರುಳಾಯ್ತು ಪಿತನ ಸೌಂ
ದರ್ಯದ ರೂಪು ತೋರದಿರೆ ॥ ೨೩ ॥

ಆಲಸ್ಯ ನಿನಗಿಲ್ಲ ನಿನ್ನ ಚಾವಡಿಗನು
ಕೂಲಸಂದಣಿ ತಪ್ಪದಿಂದು
ಹಾಳುಸುರಿವುತಿದೆಯೆಂತು ನೋಡುವೆವೆಂದು
ಬಾಲೆಯರಂತೆ ಶೋಕಿಪರು ॥ ೨೪ ॥

ಇಂತಳುತಿದ್ದಿದ್ದು ತಮ್ಮ ಬೇಗೆಯ ತಾವೆ
ಸಂತೈಸಿಕೊಂಡರು ಕೂಡೆ
ಅಂತದಕೆಲ್ಲರರ್ತಿಸಿದರು ಭರತಭೂ
ಕಾಂತಪುತ್ರರಿಗದು ಸಹಜ ॥ ೨೫ ॥

ಮಂಗಳ ಸಂಧಿ

———

ಮುಕ್ತರೆಲ್ಲರು ಸರಿಯಹುದಾದರೇನಾತ್ಮ
ಶಕ್ತಿಯನರಿದಿಲ್ಲಿ ಮೊದಲು
ವ್ಯಕ್ತಭೋಗದೊಳಿರ್ದು ಕ್ಷಣಕೆ ಮುಕ್ತಿಗೆ ಸಂದ
ಯುಕ್ತಿಗೆನ್ನೆದೆ ಸೂರೆಹೋಯ್ತು ॥ ೧ ॥

ಮರೆಯೇಕೆ ಪ್ರಥಮಾನುಯೋಗದಿ ಮುಖ್ಯವ
ಕುರಿತು ಶಲಾಕೆಗೆ ಬಂದ
ಅರವತ್ತು ಮೂರರೊಳಾಯ್ದುಕೊಂಡೀ ಜಾಣ
ರೆರೆಯನ ಪೊಗಳ್ದಿನರ್ತಿಯೊಳು ॥ ೨ ॥

ಬಗೆ ಮೆಚ್ಚಿ ಹಂಸನಾಥನೊಳಿರ್ದು ಕ್ಷಣಕೆ ಮು
ಕ್ತಿಗೆ ಸಂದ ಭರತಭಾಸ್ಕರನ
ಪೊಗಳದಿರ್ದಾಗ ರತ್ನಾಕರಸಿದ್ಧ ನಾ
ಡುಗನಲ್ಲದೇನಾತ್ಮ ಸುಖಿಯೆ ॥ ೩ ॥

ಶೃಂಗಾರಕಾಗಿ ಕಷ್ಟದ ಕಥೆಗೇಳ್ದು ಜ
ನಂಗಳು ಕೆಡಬೇಡವೆಂದು
ಅಂಗಸುಖಿಯ ಮೋಕ್ಷಸುಖಿಯ ಕಾವ್ಯವನಿಷ್ಟು
ಶೃಂಗಾರ ಕಟ್ಟಿ ಪೇಳಿದೆನು ॥ ೪ ॥

ಮರುಳರ ಪಾದರಿಯರ ನೀಚಸತಿಯರ
ವಿರಚಿಸಿತಿಲ್ಲ ಸಿಂಗರಕೆ
ಭರತಚಕ್ರಿಯ ಪೇಳ್ದಿನವರ ಪೆಂಡಿರ ಪೇಳ್ದಿ
ಸ್ಮರಿಸಿದರೆಲ್ಲರ್ಗೆ ಪುಣ್ಯ ॥ ೫ ॥

ಈ ಕಥೆಯನು ನಾನು ಪೇಳ್ದಾಗ ಧರೆಯೊಳ
ನೇಕರು ಹರುಷವೇರಿದರು
ಸ್ತೋಕರು ನಾಲ್ಕೆಂಟು ಮಂದಿ ಚಿತ್ತದೊಳತಿ
ವ್ಯಾಕುಲಬಟ್ಟರೆಂತೆನಲು ॥ ೬ ॥

ಕೀರ್ತಿಯ ಬಯಸಿ ನಾನುಸಿರಿತಿಲ್ಲೆನಗೆ ಸ
ತ್ಕೀರ್ತಿ ತಾನೆ ಬರುತಿಹುದು
ಕೀರ್ತಿಯ ಬಯಸಿ ಕಣ್ಣು ಸುರಾಗಿ ಕೆಲಬರು
ಧೂರ್ತರು ಪೇಚಾಡುತಿಹರು ॥ ೭ ॥

ತೊಡಗುವರ್ತಾವು ಕವಿತ್ವವ ಕಡೆಗದು
ನಡೆಯದು ಕವಿಗೆ ಶೋಭಿಸದು
ಬಿಡು ಹೊಸಕವಿತೆಯನೆಂದು ಪೂರ್ವದ ಶಾಶ್ತ್ರ
ಗಡಬಡೆ ಮಾಡುವರೊಡನೆ ॥ ೮ ॥

ಧ್ಯಾನಕೆ ಬೇಸರಾದಾಗ ನನ್ನಾತ್ಮಲೀ
ಲಾನುವೃದ್ಧಿಗೆ ಪೇಳ್ದೆನ್ನೈಸೆ
ನಾನೊಬ್ಬರೊಡನೆ ಮತ್ಸರಕೆ ಪೇಳ್ದವನಲ್ಲ
ನೋನದೊಳಿಹೆನದು ಸಾಕು ॥ ೯ ॥

ಹಂಸನಾಥನ ಶಕ್ತಿಯೊಳು ಪೇಳ್ದ ಕಾವ್ಯಕೆ
ಸಂಶಯವುಂಟೆ ಲೋಕದೊಳು
ನಾಂ ಸೂಚಿಸಿದ ಮುನ್ನ ಮುನಿಗಳು ನೃಪರು ವಿ
ದ್ವಾಂಸರು ಕೊಂಡೊಯ್ದರೊಲಿದು ॥ ೧೦ ॥

ಗುರುಹಂಸನಾಥನಾಜ್ಞೆಯೊಳು ಸಿದ್ಧಾಂತದ
ತಿರುಳರಿದಾತ್ಮಲೀಲಾರ್ಥ
ಭರತೇಶವೈಭವವೆಂಬ ಕಾವ್ಯವನಿದ
ನೊರೆದೆನು ಸುಖಿಗಳಾಲಿಪುದು ॥ ೧೧ ॥

ಬೇಕಾದರಾಲಿಸುವುದು ಬೇಡವಾಗೆ ಪ
ರಾಕುಮಾಡುವುದೆನಗಲ್ಲಿ
ವ್ಯಾಕುಲವಿಲ್ಲ ಸಂತಸವಿಲ್ಲ ನಾನು ನಿ
ರಾಕಾಂಕ್ಷಿ ಸಾಕದಂತಿರಲಿ ॥ ೧೨ ॥

ಈ ಜಿನಕಥೆಯನು ಕೇಳಿದವರ ಪಾಪ
ಬೀಜ ನಿರ್ನಾಶನವಹುದು
ತೇಜವಹುದು ಪುಣ್ಯವಹುದು ಮುಂದೊಲಿದಪ
ರಾಜಿತೇಶ್ವರನ ಕಾಣುವರು ॥ ೧೩ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ
ರಾಮೋದವೈದುವರವರು
ನೇಮದಿ ಸುರರಾಗಿ ನಾಳೆ ಶ್ರೀ ಮಂದರ
ಸ್ವಾಮಿಯ ಕಾಣ್ಬರರ್ತಿಯೊಳು ॥ ೧೪ ॥

ವೃಷಭಮಾಸದಿ ತೊಡಗಿತು ಕುಂಭಮಾಸ ಸ
ದ್ವಿಷಯದಿ ಕೃತಿ ಪೂರ್ಣವಾಯ್ತು
ವೃಷಭಾಂಕ ಹಂಸನಾಥನೆ ಜಯ ಪರಮ ಪು
ರುಷನೆ ಚಿದಂಬರ ಪುರುಷ ॥ ೧೫ ॥

ಭರತೇಶವೈಭವ ಸಂಗ್ರಹಂ ಸಂಪೂರ್ಣಂ

ಶಬ್ದಕೋಶ

(ಸೂಚನೆ: ಮೊದಲನೆಯ ಸಂಖ್ಯೆ ಪುಟಕ್ಕೂ, ಎರಡನೆಯ ಸಂಖ್ಯೆ ಪದ್ಯಕ್ಕೂ, ಸಂಬಂಧಿಸಿದ್ದು.)

ಅ

ಅಕಳಂಕ	೧೫೫-೧೬	ಕಳಂಕವಿಲ್ಲದ
ಅಕ್ಕರು	೧೬೬-೨೬	ಪ್ರೀತಿ
ಅಖಂಡಿತ	೧೦೦-೩೧	ಸಂಪೂರ್ಣವಾದ
ಅಗಲ	೧೦೦-೩೧	ತಟ್ಟೆ, ತಳಿಗೆ
ಅಗ ಅಗ್ರಿಣಿ	೩೫೩-೪೩ ೩೪೯-೧೪	} ಶ್ರೇಷ್ಠ
ಅಚ್ಚರಿಸು	೪೩೩-೧೦	ಆಶ್ಚರ್ಯಪಡಿಸು
ಅಚ್ಚಜೊನ್ನ	೨೪೭-೨೧	ಸುಂದರವಾದ ಬೆಳುದಿಂಗಳು
ಅಜಡ	೨೦೯-೧೪	ಜಡವಲ್ಲದ, ಚಲನೆಯುಳ್ಳ
ಅಟ್ಟು	೩೫೨-೩೯	ಕಳುಹಿಸು, ದೂಡು
ಅಡ್ಡಗೆಡೆ	೨೨೦-೨೪	ಅಡ್ಡಬೀಳು, ನಮಸ್ಕರಿಸು
ಅಡ್ಡತೆಗೆ	೧೪೪-೨೨	ಪಕ್ಕಕ್ಕೆ ತಿರುಗಿಸು, ಓರೆಮಾಡು
ಅಡ್ಡಪಿಡ್ಡಗೆ	೨೬೬-೧೬	ಅತ್ತ ಇತ್ತ, ಸೊಟ್ಟಪಟ್ಟಗೆ
ಅಣೆ	೨೬೪- ೨	ಕೇಲಿಸು, ಒತ್ತು
ಅಣಿದೋರು	೩೯೯-೧೭	ಸಿದ್ಧವಾಗಿರು
ಅತಿಜೋಲಿ	೩೪೬-೨೪	ಹೆಚ್ಚಾದ ಪ್ರೀತಿ
ಅಧ್ಯಾಯನ	೨೫೬- ೪	(ಅಧ್ಯಯನ) ? ಧ್ಯಾನ, ಅಪೇಕ್ಷೆ ಪ್ರಯತ್ನ
ಅನುಮಿಸು	೨೦-೧೪	ಊಹಿಸು, ಅನುಮಾನಿಸು
ಅನುವಡಿಸು	೩೩೨-೩೧	ಅನುವಾದಮಾಡು, ಹೇಳು
ಅನುವೆತ್ತ	೪೦೦- ೯	ಉಚಿತವಾವ

ಅನ್ನಕ	೩೫೩-೪೨	ಅಲ್ಲಿಯವರೆಗೆ
ಅಪರ	೨೩೯-೧೯	ಪಶ್ಚಿಮ
ಅಪವರ್ಗ	೯೭-೧೬	ಮೋಕ್ಷ
ಅಬ್ಬೆ	೧- ೩	ಅಮ್ಮ
ಅಭವವಾಸ	೩೯೪-೧೨	ಗುಡಿ
ಅಮರಿಸು	೨೬೦- ೮	ಹೊಂದಿಕೆಗೊಳಿಸು
ಅಮ್ಮದು	೧೨-೧೩	ಆಗುವುದಿಲ್ಲ
ಅಮೃತ	೪೩೪-೧೪	ಮೋಕ್ಷ
ಅಮೃತಭಾಸ್ಕರ	೧೧೯-೪೭	ಚಂದ್ರ
ಅರಲಂಬ	೩೫೪- ೫	ಪುಷ್ಪಬಾಣ, ಮನ್ಮಥ
ಅರಳೆಲೆ	೨೧೭- ೮	ಅರಳೀ ಎಲೆ ಆಕಾರದ ಆಭರಣ
ಅರಾತಿ	೨೧೬- ೧	ಶತ್ರು
ಅರಿಕೆ	೩೩೩-೩೭	ಪ್ರಸಿದ್ಧಿ
ಅರಿದು	೨೬೬-೧೨	ಕಷ್ಟ, ಅಸಾಧ್ಯ
ಅರೆಗೋಲೆ	೩೭೭-೧೧	?
ಅರ್ಘ್ಯ	೧೫೬-೨೨	ಪೂಜೆ
ಅರ್ತಿ	೩೫-೨೦	ಸಂತೋಷ
ಅರ್ಭಕ	೪೨೭-೧೦	ಮಗು
ಅಲಗೆ	೪೯-೫೪	ಎಲೆ (ಸ್ತ್ರೀ ಸಂಬೋಧನೆ)
ಅಲಸು	೧೬೪-೧೫	ಸೋತುಹೋಗು
ಅವಗಡ	೫೭-೭೯	ಅಪಾಯ
ಅಸಿಯಳು	೭೬-೪೩	ಕತ್ತಿಯಂತೆ ಬಳುಕುವ ಹೆಣ್ಣು
ಅಸ್ತು	೧೦- ೩	ಆಗಲಿ
ಆಳಗು	೨೪೧-೩೧	ಆಗಳು, ಕಂದಕ
ಆಳ್ಕೆ	೪೪-೫೩	ಭಯ
ಆಳ್ತಿವಡು	೪೧೦-೧೦	ಸಂತೋಷಪಡು
ಆಂಕ	೨೧೭- ೭	ತೊಡೆ

ಅಂಕಮಾಲೆ	೨೮೨-೧೯	ಪ್ರಶಸ್ತಿ ಪದ್ಯ
ಅಂಕರು	೩೫೬-೧೨	ಹೆಸರಾದವರು, ಪ್ರಸಿದ್ಧರು
ಅಂಗಪಟ್ಟ	೩೧-೧೦	ಹೊದೆಯುವ ಪಂಚೆ
ಅಂಗುಲಿ	೨೯೯-೧೦	ಬೆರಳು
ಅಂತರಾಯ	೧೯೬-೨೧	ಭೇದ, ಪಕ್ಷಪಾತ
ಅಂತರಿಸು	೭೦- ೬	ವ್ಯತ್ಯಾಸಮಾಡು
ಅಂದಣ	೨೦೦-೧೫	ರಥ, ಪಲ್ಲಕ್ಕಿ
ಅಂಬರಚರ	೨೫೬-೧೨	ದೇವತೆ
ಅಂಶು	೫-೨೭	ಕಿರಣ

ಆ

ಆಗಸ	೨೩೩- ೧	ಆಕಾಶ
ಆಗಾರ	೪೦೮-೫೬	ವಾಸಸ್ಥಾನ, ಮನೆ
ಆಣ್ಮ	೭೬-೪೬	ಗಂಡ
ಆದಿದೇವ	೧೫೬-೧೮	ಪ್ರಥಮ ತೀರ್ಥಂಕರ
ಆದಿವಸ್ತು	೧೭೫- ೧	ಮೊದಲ ವಸ್ತು, ದೇವರು
ಆನಕ	೧೧೫-೨೦	ಭೇರಿ
ಆಸೀಕ	೧೫೫-೧೪	ಸೈನ್ಯ
ಆನು	೪೨೩-೧೭	ಧರಿಸು, ಸ್ವೀಕರಿಸು
ಆಮೋದ	೪೯೯-೧೪ ೩೨೨-೧೪	ಸಂತೋಷ
ಆಯತ	೨೨೮-೨೦	ಸಂಯಮಪೂರ್ಣ
ಆರಯ್	೩೨೨-೧೩	ವಿಚಾರಿಸು
ಆಲವಟ್ಟ	೯೯-೨೮	ಬೀಸಣಿಗೆ
ಆಲಿವರಲ್	೨೬೭-೨೧	ಆಲಿಕಲ್ಲು
ಆಲ್ದು	೧೭೮-೨೩	ದೃಷ್ಟಿಸಿ

ಆಸರ	೨೦೪-೩೮	ಅವಲಂಬನ
ಆಸನ್ನ	೩೬೪-೪೩	ಸಮೀಪಿಸಿದ
ಆಳಿ	೩೦೪-೨೨	ಸೇವಕಿ, ಸಖಿ
ಆಂಪು	೪೨೬-೩೦	ಆತುಕೊ

ಇ

ಇಕ್ಕು	೨೧೪-೧೬	ದಾನಮಾಡು, ಕೊಡು
ಇಟ್ಟಾಡು	೧೭೪-೨೨	ಚಲ್ಲು
ಇಡಿಕೆರಿ	೧೭೯-೨೪	ಒತ್ತಾಗಿ ಸೇರು
ಇಡು	೨೧೩-೪೪	ಹೊಡೆ
ಇಡುಗುಡ್ಡೆ	೨೪೧-೧೭	ಕಿರಿದಾದ ನಡುಗಡ್ಡೆಗಳು
ಇಂಗೋಲ	೩೪೪-೧೪	ಸಿಹಿಯಾದ ಬಾಣವುಳ್ಳವನು ಮನ್ಮಥ
ಇಂಬು	೧೪೯-೧೨	ಅವಕಾಶ

ಈ

ಈರಾರು	೩೦೧-೫	ಹನ್ನೆರಡು

ಉ

ಉಕ್ಕು	೩೬೧-೪೧	ಉಬ್ಬು
ಉಗ್ಗಡ	೩೪೩-೧೧	ಘೋಷಣೆ, ಗಟ್ಟಿಯಾಗಿ ಹೇಳುವುದು
ಉಚ್ಚಳಿಸು	೨೪೧-೧೪	ಮೇಲೆ ಚಿಮ್ಮು
ಉಚ್ಚು	೧೪೫-೬೦	ಬಿಚ್ಚು
ಉಜ್ಜುಗಿಸು	೩೯೪-೧೨	ಪ್ರಾರಂಭಿಸು
ಉಡೆ	೧೯೦-೧೪ ೨೫೦-೨೦	ಉಡುವ ಬಟ್ಟೆ

ಉಣ್ಮು	೩೦೩-೧೬	ಉಬ್ಬು, ಉಕ್ಕು, ಹೆಚ್ಚಾಗು
ಉತ್ತುಂಗ	೪-೧೯	ಎತ್ತರ
ಉದ್ದವನೇರು	೨೯೮- ೪	ಕೊಬ್ಬು
ಉದ್ಯನ್ಮೋಕ್ಷಗಾಮಿ	೩೬೧-೪೫	ಶ್ರೇಷ್ಠವಾದ ಮೋಕ್ಷದತ್ತ ಹೋಗುತ್ತಿರುವವನು
ಉದ್ಯಾಪನೆ	೪೧೨-೨೧	ಕೊನೆಯ ಪೂಜೆ
ಉಮ್ಮು	೨೬೬-೧೬	ಉಬ್ಬು, ಉತ್ಸಾಹಿಸು
ಉರುಬು	೩೩೩-೩೭	ಮೇಲೆದ್ದು ಕುಣಿ
ಉರುವ	೨೬೭-೨೩	ಶ್ರೇಷ್ಠವಾದ
ಉರ್ವಿ	೨೬೦- ೯	ಭೂಮಿ
ಉರ್ವಿಂದ	೧೨೭-೪೦	ಉಬ್ಬಿನಿಂದ
ಉಲುಪೆ	೨೨೪-೪೮	ಕಾಣಿಕೆ
ಉಂಬಳಿ	೩೨೯-೧೪	ಜಹಗೀರು

ಊ

ಊಡು	೩೧೦-೨೫	ಊಟಮಾಡು, ಉಣಿಸು
ಊಣೆಯ	೧೪೨-೫೫	ನ್ಯೂನತೆ, ಕೊರತೆ, ಕುಂದು

ಎ

ಎಡೆಗಟ್ಟು	೨೪೪-೧೧	ನಿಯಮ, ನಿರ್ಬಂಧ
ಎಡೆಗುತ್ತಿ	೨೦೫-೪೩	(?) ತೀರದ ಸಮೀಪದಲ್ಲಿ ಅಗಲ ಕೆರಿದಾಗಿ,ನಿಡಿದಾಗಿ ಚಾಚಿದ ದಿಣ್ಣೆ
ಎಡೆಯಾಡು	೨೦೫-೪೩	ಅಲ್ಲಿ ಇಲ್ಲಿ ಓಡಾಡು
ಎಡ್ಡ	೩೫೩-೪೨	ಮನೋಹರ
ಎರಕ	೨೫೪-೧೪	ಪ್ರೀತಿ
ಎರಳೆ	೩೫೬-೧೪	ಜಿಂಕೆ

ಎರೆಯ	೭೩-೨೫	ಪ್ರೀತಿಪಾತ್ರ
ಎಳೆವೆಂಗಳು	೨೩೫-೧೩	ಯುವತಿಯರು
ಎಳೆವರೆಯ	೩೦೭-೧೧	ಎಳೆಯ ಪ್ರಾಯ

ಏ

ಏಕಾರ್ಣವ	೨೬೮-೨೪	ಒಂದೇ ಸಮುದ್ರ
ಏಣಲೋಚನೆ	೧೪೧-೫೦	ಜಿಂಕೆಯ ಕಣ್ಣಿನಂತಹ ಕಣ್ಣುಳ್ಳ ವಳು
ಏಳಿಸು	೧೦೬-೧೪	ಹೀಯಾಳಿಸು
ಏಳೆಲೆವೋಗು	೯೧-೬೬	ಏಳೆಲೆ ಬಿಡು, ಬಲಿ

ಐ

ಐಸೆ	೩೩೦-೧೪	ಅಲ್ಲವೆ

ಒ

ಒಕ್ಕು ಒಗು	೩೬೫-೧೭ ೩೯೭-೩೧	} ಚಲ್ಲು
ಒಗುಮಿಗೆ	೪೩-೧೯	ಹೆಚ್ಚಾಗಿ
ಒಗ್ಗು	೩೫೪- ೧	ಒಟ್ಟಿಗೆ ಸೇರು
ಒಚ್ಚತಾಗಿರು	೩೭೭- ೬	ಹೊಂದಿಕೆಯಾಗು, ಸಮ್ಮೇಳನ ಗೊಳ್ಳು
ಒಚ್ಚಯ	೩೩೪-೪೩	ಅಪಮಾನ
ಒಟ್ಟೈಸು	೨೪೪- ೨	ಗುಂಪುಗೂಡು
ಒಡ್ಡು	೨೬೬-೧೬	ಗುಂಪು

ಒತ್ತಿನುಡಿ	೭೧-೧೬	ಚುಚ್ಚಿ ಮಾತನಾಡು
ಒಪ್ಪಚ್ಚಿ	೨೦೭-೩೦	ಸ್ವಲ್ಪ
ಒಬ್ಬುಳಿ	೨೭೩- ೭	ಗುಂಪು
ಒಸಗೆ	೨೩೩- ೩	ಸಂತೋಷ ಸಮಾಚಾರ
ಒಸೆಯೆ	೩೩೦-೩೭	ಸಂತೋಷಗೊಳ್ಳಲು
ಒಳುನುಡಿ	೨೧೯- ೧	ಒಳ್ಳೆಯ ಮಾತು
ಒಂದಿಸು	೨೫೪-೪೬	ಸೇರಿಸು

ಓ

ಓತು	೩೬೧-೪೬	ಪ್ರೀತಿಸಿ
ಓಪ	೨೦೩,೩೫	ಪ್ರೀತಿಪಾತ್ರ
ಓವರಿ	೨೮೦-೨೫	ಕೋಣೆ, ಗುಹೆ

ಕ

ಕಜ್ಜ	೩೮೪-೧೩	ಕೆಲಸ, (ಕಾರ್ಯ ತ್ಸ)
ಕಟಕ	೨೦೧-೨೧	ಸೈನ್ಯ, (ರಾಜಧಾನಿ)
ಕಟಸೂತ್ರ	೪೪-೧೬	ಉಡುದಾರ, ಡಾಬು
ಕಟ್ಟಕ್ಕರು	೩೦೮-೧೨	ಹೆಚ್ಚಾದ ಪ್ರೀತಿ
ಕಟ್ಟಣೆ	೧೦೫- ೭	ಕಟ್ಟಪ್ಪಣೆ, ಕಟ್ಟಳೆ
ಕಟ್ಟಳಲು	೨೦೪-೪೧	ಹೆಚ್ಚಾದ ದುಃಖ
ಕಟ್ಟಾಯ	೧೧೭-೩೧	ಕಠಿಣವಾದ ಆಜ್ಞೆ
ಕಟ್ಟಗೆಕಾರ	೧೧೪-೧೫	ಹೊಗಳುಭಟ್ಟ
ಕಡುಗಿ	೨೪೪- ೮	ಉತ್ಸಾಹಗೊಂಡು
ಕಡುಪು	೨೪೫-೧೨	ಶೌರ್ಯ, ಧೈರ್ಯ, ಉತ್ಸಾಹ
ಕಣ್ಣಿಲ್ಲ	೨೫೫-೫೦	ಕಣ್ಣಿನ ಚಾಪಲ್ಯ

ಕಣ್ಣಿ	೩೫೬-೧೪	ದನಗಳ ಕೊರಳಿಗೆ ಹಾಕುವ ಹಗ್ಗ
ಕಣ್ಣೊಳಲು	೧೨೬-೩೩	ಕಣ್ಣಿನ ಓಡಾಟ, ಕಣ್ಣಿನ ಓಟ
ಕತ್ತರ	೧೧೫-೧೪	ಮದ್ದಲೆ ಬಾರಿಸುವ ಚದುರು
ಕದುಬು (ಕದುಂಬು)	೨೬೫- ೭	ಇಕ್ಕಟ್ಟಾಗಿ
ಕನ್ನಡಹಕ್ಕಿ	೬೬-೨೧	ಗಿಳಿ
ಕನ್ನಡಿಸು	೧೦೪- ೩	ಪ್ರತಿಬಿಂಬಿಸು
ಕಬ್ಬಿಗ, ಕಬ್ಬ	೧- ೩	ಕವಿ, ಕಾವ್ಯ (ತ್ಸ)
ಕಮ್ಮಂಗಣಿಯ	೩೩೭-೧೧	ಮನ್ಮಥ
ಕಮ್ಮನೆ	೧೫-೩೪	ಸುವಾಸನೆಯಾಗಿ, ರುಚಿಯಾಗಿ
ಕರಡಿಗೆ	೧೧೩- ೬	ಭರಣಿ
ಕರುಮಾಡ	೩೪೯-೨೫	ಮಹಡಿ
ಕರ್ನಾಟಿಸು	೧೧೨- ೫	ಕವಿಯನ್ನು ಹೊಗಿಸು
ಕಲಾಪ	೨೧೨-೩೭	ಸಮೂಹ, ನವಿಲಿನ ಗರಿ
ಕಲಿಲಾರಿ	೧೯೩-೧೧	ಕಳವಳ ವಿನಾಶಕ, ದೇವರು, ಜಿನ
ಕವುದಿ	೩೩೩-೩೬	ತೇವೆಯ ಬಟ್ಟೆ, ಬಟ್ಟೆ
ಕವ್ವರಿಸು	೧೨೫-೨೭	ಕಾತರಗೊಳ್ಳು
ಕಷಾಯ	೩೭೭-೧೦	ವ್ಯಥೆ
ಕಳ	೨೪೧-೧೪	ಕಣ, ರಂಗ
ಕಲಕಂಠ	೧೦೬-೧೩	ಕೋಗಿಲೆ
ಕಳಾಸ	೧೧೫-೧೪	ಮದ್ದಳೆ ಬಾರಿಸುವ ಜಾಣ್ಮೆ
ಕಾದಲೆ	೧೩೪-೩೪	ಪ್ರಿಯೆ
ಕಾಹು (ಪು)	೧೪೯-೧೬	ರಕ್ಷಣೆ
ಕಾರ್ಗಾಲ	೧೯೯-೧೧	ಮಳೆಗಾಲ
ಕಾಲ್ದುಡುಕು	೧೦೧-೩೪	ಅಡ್ಡವಾಗು
ಕಾಸರಕ	೨೯೫-೨೧	ಒಂದು ಜಾತಿಯ ಮರ
ಕಾಳಂಜಿ	೪೧- ೪	ಪನ್ನೀರುದಾನಿ

ಕಿವಿಗಚ್ಚು	೫೩- ೧	ಗುಟ್ಟಾಗಿ ಕೇಳು
ಕೀರ	೫೮-೩೫	ಗಿಳಿ
ಕೀಲಿಸು	೧೫೪- ೬	ಸೇರಿಸು, ನೆಡು
ಕುಡುಹು	೮-೪೭	ವಾದ್ಯವನ್ನು ನುಡಿಸುವ ಕೋಲು, ಕೋಣ
ಕುಡ್ಯ	೧೮೦-೩೫	ಗೋಡೆ
ಕುಪ್ಪಿಗೆ	೫೯-೪೧	ಸಣ್ಣ ಡಬ್ಬಿ, ಭರಣಿ
ಕುರು	೨೦೧-೨೨	ಚಿಕ್ಕ (ಮೋಟಾದ)
ಕುಲಿಶ	೩೫೪- ೩	ವಜ್ರಾಯುಧ
ಕೂಪ	೧೮೯-೧೬	ಕೂರ್ಪ, ಪ್ರೇಮಾಸ್ಪದರಾದ
ಕೂರ್	೧೦೨-೪೩	ಹರಿತ (ಸ್ನೇಹ)
ಕೂರ್ಮ	೨೦೮-೧೨	ಆಮೆ
ಕೈಗಟ್ಟು	೩೭-೪೨	ನಮಸ್ಕರಿಸು
ಕೈಲಾಗು	೯೯-೨೬	ಕೆಯ್ ಕುಲುಕುವುದು
ಕೊರ್ವು	೩೦೬- ೫	ಕೊಬ್ಬು
ಕೊಲ್ಲಣಿ	೧೧೫-೧೯	ಆಟ, ವಿನೋದ
ಕೊಲ್ಲೆಲ್ಸು	೨೧೨-೪೩	ಬಗ್ಗಿಸು
ಕೋವಿದ	೮೯-೫೬	ಜಾಣ
ಕೌಳಿಕ	೭೫-೪೦	ಮೋಸ
ಕಂಚುಮಿಂಚು	೧೨೪-೧೯	ತೋರಿ ಮಾಯವಾಗು
ಕಂತು	೩೪೦-೨೯	ಮನ್ಮಥ
ಕಂದ	೨೪೬-೧೯	ಕುತ್ತಿಗೆಯ ಕೆಳಭಾಗ
ಕಂಬಿ	೧೭೩-೬೯	ಲತ್ತೆ
ಕಾಂಡಪಟ	೧೨೪-೨೧	ಆಂತರ್ಪಟ, ತೆರೆ
ಕೆಂಗೂಳು	೧೪೫-೬೨	ಕೆಂಪಾದ ಅನ್ನ
ಕೆಂಬಜ್ಜೆ	೩೫೯-೩೫	ಕೆಂಪಾದ ಹೆಜ್ಜೆ, ವಾದ

ಕ್ರಮ	೨೫-೪೭	ಪಾದ

ಖ

ಖೋಡಿ	೩೪೭-೧೧	ಕೊರತೆ
ಖಂಡೆಯ	೫-೨೬	ಕತ್ತಿ
ಖೇಂದ್ರ	೧೭೮-೧೯	ಆಕಾಶಕ್ಕೆ ಒಡೆಯ, ಗಂಧರ್ವ

ಗ

ಗದಕ	೧೦೭-೨೪	ಕೃತಕ (ತ್ಸ)
ಗನ್ನ	೨೮೬-೧೬	ಮೋಸ
ಗರಗರಿಕೆ	೪೮-೪೩	ಸ್ವಚ್ಛತೆ
ಗರುವಿಕೆ	೨೭೬-೨೭	ಹಿರಿಯತನ
ಗಳಗಳಸು	೨೫೨-೩೩	ಗಲಗಲ ಶಬ್ದಮಾಡು
ಗಳದೌತಗಿರಿ	೨೪೩- ೨	ವಿಜಯಾರ್ಥಪರ್ವತ
ಗಳಗೆ	೧೬೦-೪೫	ಬುಟ್ಟಿ
ಗಾಜಗೋಜು	೧೬೦-೪೩	ಬಣ್ಣಬಣ್ಣದ ಗಾಜಿನ ಮಣಿಗಳನ್ನು ಗುಂಪುಗುಂಪಾಗಿ ಎರಚಿದಂತೆ
ಗಾಡಿ	೭೩-೨೮	ಠೀವಿ
ಗಾವಿಲ	೨೭೧-೩೦	ಮೂಢ
ಗಾಳಿವಟ್ಟೆ	೩೮೬-೨೬	(ಗಾಳಿಯ+ಬಟ್ಟೆ) ಆಕಾಶ
ಗೀರ್ವಾಣ	೪೦೦-೧೦	ಸಂಸ್ಕೃತ
ಗುಡಿ	೧೭೭-೧೨	ಬಾವುಟ
ಗುಡಿಕೇತು	೩೧೪-೧೨	ಕಟ್ಟಿಗೆಗೆ ಕಟ್ಟಿರುವ ಬಾವುಟ
ಗುಲ್ಫ	೩೭-೪೩	ಕಾಲಿನ ಹರಡು
ಗುಸುಟು	೪೩-೧೩	ಗುಟ್ಟು
ಗೃಹ ಜಾಲ	೨೨೫- ೫	ಮನೆಗಳ ಸಾಲು

ಗೆಣ್ಡೋರು	೧೫೦-೩೦	ಗೇಣು ದೂರದಲ್ಲಿರುವಂತೆ ತೋರು, ಹತ್ತಿರದಲ್ಲಿರುವಂತೆ ತೋರು
ಗಂಧೆ	೭೫-೩೯	ತುರಿ, ತಿಂಡಿ
ಗಂಧಕುಟ	೩೮೨- ೧	ಗಂಧದ ಗುಡಿ

ಘ

ಘಟ	೨೧೦-೨೬	ಗಡಿಗೆ
ಘಟಿತ	೩೪೬- ೧	ಉಂಟಾದ, ಸೇರಿಕೊಂಡ
ಘನಮಾರ್ಗ	೩೭೭- ೪	ಆಕಾಶಮಾರ್ಗ
ಘೂರ್ಣಿಸು	೪೦- ೧	ಗರ್ಜಿಸು
ಘೀಳಿಡು	೨೪೫-೧೫	ಗರ್ಜಿಸು

ಚ

ಚಚ್ಚರ	೩೧೪-೧೪	ಬೇಗ, ಎಚ್ಚರಿಕೆ
ಚಡಾಳಿಸು	೨೭೦-೩೯	ಗದರಿಸು, ಮೇಲೆ ಬೀಳು
ಚಪ್ಪರಿದಾಡು	೪೦೫-೪೦	ಬಾಯಿ ಚಪ್ಪರಿಸುತ್ತಾ ಆನಂದ ಪಡು
ಚಪ್ಪಳಿಸು	೧೪೨-೫೪	ದುಃಖ ಸೂಚಕ ಲೊಚಲೊಚ ಧ್ವನಿ ಮಾಡು
ಚಮ್ಮಾವುಗೆ	೩೨೧-೧೧	ಚರ್ಮಪಾದುಕಾ (ತ್ಸ) ಚರ್ಮದ ಜೋಡು
ಚರು	೩೭೫-೨೪	ಆಹುತಿಯ ಅನ್ನ
ಚಳಯ	೯೬- ೬	ನೀರು ಚಿಮುಕಿಸುವುದು
ಚಾಗಿ	೧೪೪- ೫	ತ್ಯಾಗಿ (ಸಂ)
ಚಾಟುಕಾತಿ	೪೮-೪೪	ಮೋಹಕಳಾದ ಹೆಣ್ಣು

ಚಾರಿವರಿ	೧೦೭-೩೫	ಜಾಣ್ಮೆಯಿಂದ ಓಡಾಡು
ಚಾಳಿಸು	೬೯- ೪	ಸೋಲಿಸು, ಮೋಸ ಮಾಡು
ಚಾಳಿಯ	೧೧೪-೩೭	ಕುಣಿಯುತ್ತಾ ಇಡುವ ಹೆಜ್ಜೆ, ಗತಿ ಲಾಘವ
ಚೀನಾಂಬರ	೧೫೩- ೩	ರೇಷ್ಮೆಯ ಬಟ್ಟೆ
ಚುನ್ನ	೨೯೫-೨೦	ಮೋಸದ ಮಾತು
ಚುಮ್ಮುರಿ	೪-೨೩	ಸುತ್ತಿ ಕಟ್ಟಿದ
ಚೌಕ	೩೪-೨೪	ಕೊಠಡಿ
ಚೌಕುಳಿ	೧೧೦-೩೬	ಕವಿಯ ಆಭರಣ
ಚಂಪೆ	೧೨೭-೩೭	ಸಂಗೀತ ಸಾಧನ
ಚಂಬಕವರೆ	೨೬೯-೩೧	ವಾದನ ಸಾಮಗ್ರಿ
ಚಾಂಗು	೨೭೪-೩೬	(ಕೊಂಡಾಟದ ನುಡಿ), ಭಲೆ
ಚಾಂದಸಿಕೆ (ಛಾಂದಸಿಕೆ)	೪೪-೪೪	ವಿಳಂಬ, ನಿಧಾನವಾಗಿ ಕೆಲಸ ಮಾಡು

ಛ

ಛದ್ಮ	೧೫೦-೩೧	ಮೋಸ
ಛಪ್ಪನ್ನ	೩೬೩- ೨	ಐವತ್ತಾರು
ಛವಿ	೩-೧೭	ಕಾಂತಿ

ಜ

ಜಕ್ಕುಲಿಸು	೨೫೨-೩೩	ಬಿಕ್ಕಳಿಸುತ್ತಾ ಮಾತನಾಡು
ಜತನೆ	೧೪೨- ೨	ಜೋಕೆ
ಜಮ್ಮುದಟ್ಟಿಸು	೧೭೭-೧೩	ಜುಂ ಎನ್ನುವಂತೆ ಸಂತೋಷ ಗೊಳಿಸು
ಜರತಿ	೩೪೭-೩೨	ಮುದುಕಿ

ಜಸ	೩೫೮-೨೪	ಯಶಸ್ಸು (ತ್ಸ) ಕೀರ್ತಿ
ಜಾಗರ	೧೬೧-೫೦	ನಿದ್ರೆ ಕೆಡುವುದು
ಜಾನು	೨೦-೧೨	ತೊಡೆ
ಜಾಳಿಗೆ	೨೨೧-೩೪	ಸಮೂಹ, ಚೀಲ, ಜಾಲಂದ್ರ
ಜೂಟು	೧೦೨-೪೫	ಹುಡುಗಾಟ, ಸುಳ್ಳು
ಜೇವಡೆ	೨೦೯-೨೩	ಟಂಕಾರ ಮಾಡು
ಜೋಲಿ	೭೮-೫೭	ತೂಗಾಟ

ಝ

ಝುಲ್ಲಿ	೯೪- ೩	ಕುಚ್ಚು
ಝುಂಕಣಿ (ಝುಂಕೆ)	೫೧೫-೧೯	ಗದರಿಕೆ

ಟ

ಟವಣೆ	೪೯-೪೮	ಹೊಂದಿಕೆ
ಟಿಕ್ಕೆಯ (ಟಿಕ್ಕೆ)	೧೯೮- ೩	ವಾದ್ಯ ವಿಶೇಷ
ಟ್ಟೌಳಿ	೬೩- ೨	ಮೋಸ

ಡ

ಡಾಳ	೫-೨೮	ಹೊಳಪು
ಡಂಗರಿಸು	೩೧೩- ೯	ಎಲ್ಲರಿಗೂ ಸಾರಿ ಹೇಳು

ತ

ತಕ್ಕೈಸು	೧೭೦-೪೯	ಸಮಾಧಾನ ಮಾಡು

ತಗಹಿಕ್ಕು	೨೬೮-೨೮	ಅಡ್ಡಿಪಡಿಸು,
ತರಲ	೧೨೩-೧೪	ಚಂಚಲ
ತರಹರಿಸು	೩೧೨- ೫	ಸಹಿಸು
ತಳರ್	೧೯೬-೧೯	ಹೊರಡು
ತಳಹೊಳಗೊಳ್ಳು	೩೦೭-೧೧	ಗಾಬರಿಯಿಂದ ದಿಕ್ಕು ತೋಚದಂತಾಗು
ತಳಿ	೧೨೩-೧೬	ಬಳಿ, ಲೇಪಿಸು
ತಳ್ಳಂಕಗೊಳ್ಳು	೨೪೬-೧೮	ತಲ್ಲಣಗೊಳ್ಳು, ಭೀತಿಗೊಳ್ಳು
ತಳ್ಳಿ	೩೮೬-೨೪	ತಂಟೆ
ತಾಡ್ಯಮಾನ	೧೪೦-೩೫	ಬಾರಿಸಲ್ಪಟ್ಟ
ತಾರಾದ್ರಿ	೩೦೩-೧೩	ಬೆಳ್ಳಿಯ ಬೆಟ್ಟ
ತಾರೆ	೧೫೫-೨೬	ನಕ್ಷತ್ರ
ತಾರ್ಗೊಳ್	೪೧೨-೨೩	ತಾರಸ್ಸರದಲ್ಲಿ
ತಾವರೆಯೋಪ	೩೪೦-೨೬	ಕಮಲದ ಪ್ರಿಯ, ಸೂರ್ಯ
ತಿಟ್ಟ	೧೯೬-೧೮	ಉಪಾಯ
ತಿಟ್ಟವಿಕ್ಕು	೧೧೭-೩೧	ಚಿತ್ರವನ್ನು ಬರೆ
ತಿತ್ತಿ	೧೨೭-೩೪	ಚೀಲ
ತುಡುಮು	೧೧೫-೨೦	ಟುಮುಕಿ, ಸಣ್ಣ ನಗಾರಿ
ತುಪ್ಪುಳು	೪೦೫-೪೦	ತುಪ್ಪಟದಂತೆ ಕಪ್ಪಾದ
ತುರಿಹ	೩೩೬- ೫	ಆತುರ
ತುರುಗು	೫೬-೩೬	ತುಂಬು
ತೂಪಿರಿ	೧೪೪- ೬	ನೆತ್ತಿಯ ಮೇಲೆ ಊದು, ಆಘ್ರಾಣಿಸು
ತೂಳವೇಳು	೨೧೧-೩೩	ಆಟ್ಟಿಸಿಕೊಂಡು ಬಾ
ತೆಗಹು	೨೬೮-೨೮	ತೆರಪು, ಅವಕಾಶ
ತೆಟ್ಟು	೧೭೮-೧೪	ಚಪ್ಪಟೆಯಾದ ಪ್ರದೇಶ
ತೆತ್ತಿಸು	೫೯-೩೯	ಸೇರಿಸು

ತೆಮಳ್	೩೧೫-೧೯	ಓಟ್ಟೊಟ್ಟಿಗೆ ಹೊಡದಟ್ಟು
ತೊಡಹಗಾರಿಕೆ	೧೮೪-೫೮	ಯುದ್ಧಮಾಡುವುದರಲ್ಲಿ ಜಾಣ್ಮೆ
ತೋಯೆ್ಧಿ	೨೧೫-೫೪	ಸಮುದ್ರ (ತೋಯ–ನೀರು)
ತೋರ	೧೫೮-೩೮	ದೊಡ್ಡದಾದ
ತೋಳ್ವಲ	೩೫೯-೨೭	(ತೋಳ್+ಬಲ) ಭುಜಬಲ
ತಂತ್ರಾಂಗ	೬೨-೨೦	ಉಪಾಯದ ಮಾರ್ಗ
ತಂಬಟ	೨೬೯-೩೧	ತಮಟೆ
ತೂಂತಿಡು	೨೦೫-೪೪	ತುಂತುರುಗಳನ್ನು ಎರಚು
ತೂಂಬು	೨೪೫-೧೬	ತೂಬು
ತೊಂಡರು	೨೪೮- ೯	ಚಾಡಿಕೊರೇರು
ತೊಂಡಲಿಪಿ	೨೮೨-೨೨	ಅಯೋಗ್ಯವಾದ ಬರವಣಿಗೆ
ತೊಂಡಿಲು	೨೯೦- ೬	ಕುಚ್ಚು

ದ

ದರ್ಪಕ	೩೬೪- ೯	ಮನ್ಮಥ
ದಳವೇರು	೧೪೧-೪೮	ಸಂತೋಷದಿಂದ ಉಬ್ಬು
ದಿಬ್ಬೆ	೪೭-೩೮	ದಿವ್ಯ, ಸತ್ಯ ಪರೀಕ್ಷೆಗಾಗಿ ನಡೆಸುವ ಬೆಂಕಿ ಹಿಡಿಯುವುದೇ ಮೊದಲಾದ ಪವಾಡ
ದೀಕ್ಷಾ ಗಮ	೩೦೭-೧೦	ದೀಕ್ಷೆಗೆ ಸಂಬಂಧಿಸಿದ ಶಾಸ್ತ್ರ
ದೀವ	೬೦-೪೫	ದ್ವೀಪ, ನಡುಗುಡ್ಡೆ
ದುಗ್ಗಿ	೨೦೫-೪೩	ಹಡಗು
ದುಗುಲ	೭೮-೫೫	ದುಕೂಲ (ತ್ಸ) ಬಟ್ಟೆ
ದುರ್ವಹ	೨೬೩-೨೪	ಕೆಟ್ಟ
ದೂರಿತ	೪೩೨- ೩	ದೂರ ಮಾಡಲ್ಪಟ್ಟ
ದೂರಿಸು (ದೂನಿಸು)	೩೪೮-೧೩	ಚಿಂತಿಸು, ವ್ಯಥೆಪಡು

ದೂವಟ	೩೧೬-೨೪	ದುಪ್ಪಟ, ದುಪಟ
ದೇವಾಂಗ	೯-೫೨	ರೇಷ್ಮೆ ವಸ್ತ್ರ
ದೇಹಾರ	೨೯೨- ೧	ವಾಸಯೋಗ್ಯವಾದ ಪಟಗೃಹ (?)
ದಂಡಿಗೆ	೪೯-೫೧	ವೀಣೆ
ದಂದುಗ	೧೬೬-೨೪	ತೊಂದರೆ
ದುಂದುಭಿ	೩೮೫-೨೦	ನಗಾರಿ
ದ್ಯುಮಣಿ	೨೫-೪೨	ಸೂರ್ಯ

ಧ

ಧಾರೆಕೋರೆ	೨೪೪-೧೯	ಉಡಿಗೆ ತೊಡಿಗೆ, ಧರಿಸಿರುವ ಕತ್ತಿ, ಮುಖದ ಮೀಸೆ ಇವುಗಳಿಲ್ಲದರಿಂದ ಉಂಟಾಗುವ ಸಾಮೂಹಿಕ ಭಾವ ಭಂಗಿ

ನ

ನಚ್ಚು	೩೩೪-೪೩	ನಂಬು
ನಟ್ಟುವ	೧೧೬-೨೪	ನೃತ್ಯವನ್ನು ಕಲಿಸುವವನು
ನನೆಕೊನೆವೋಗು	೧೭೬- ೯	ಮೊಗ್ಗು, ಚಿಗುರುಗಳಿಂದ ತುಂಬು, ರೋಮಾಂಚಗೊಳ್ಳು
ನಯಕಾರ	೧೨೨- ೭	ನೀತಿಯನ್ನು ತಿಳಿದವನು
ನರುಗಬ್ಬು	೮-೪೫	ಸುವಾಸನೆಯಿಂದ ಕೂಡಿದ ಕಬ್ಬು
ನರುಗೋಲ	೩೭೩- ೧	ಮನ್ಮಥ
ನರುಗಂಪು	೪೦೫-೩೯	ಸುವಾಸನೆ
ನವ್ಯ ದೀಕ್ಷಾಂಗಿ	೩೮೫-೨೨	ಹೊಸದಾಗಿ ದೀಕ್ಷೆಯನ್ನು ವಹಿಸಿದ ಹೆಂಗಸು
ನಾಡುಗ	೩೪೪-೫೧	ಸಮಾನ್ಯ ಮನುಷ್ಯ
ನಾಳಿನವನು	೨೨೨-೩೭	ಉತ್ತರಾಧಿಕಾರಿ (?)
ನಿಕಾಯ ನಿಕುರುಂಬ	೪೦೯- ೫ ೩೯೨- ೩	} ಸಮೂಹ

ನಿಗಶಣೆ	೯೦-೯೨	ಅಟ್ಟಹಾಸ
ನಿಚಿತ	೨-೧೦	ನಿಶ್ಚಯಿಸಲ್ಪಟ್ಟ
ನಿಚ್ಚ	೧೪೧-೩೪	ಪ್ರತಿದಿನ
ನಿಜದೋರು	೨೫೬- ೩	ಸತ್ಯವನ್ನು ತಿಳಿಸು
ನಿಟ್ಟಾಯತ	೨೬೫- ೬	(ನಿಡು + ಆಯತ) ಹೆಚ್ಚು ವಿಸ್ತಾರವಾದ
ನಿಟಲ	೩೧೩-೧೦	ಹಣೆ
ನಿಧಾನ	೨೩-೩೧	ನಿಧಿ
ನಿಯತ	೧೯೭-೨೬	ನಿಶ್ಚಿತವಾದ
ನಿರಾಕುಲ	೪೧೪- ೩	ವ್ಯಥೆಯಿಲ್ಲದ
ನಿರಾಮಯ	೩೪೯- ೬	ರೋಗವಿಲ್ಲದ
ನಿರುತ	೩೪೦-೨೬	ಯಾವಾಗಲೂ
ನಿರಂಗ	೫೯-೪೧	?
ನಿಸ್ಸಾಳ	೧೯೪-೧೦	ಭೇರಿ
ನಿಹಾರ	೩-೧೪	ಮಲವಿಸರ್ಜನೆ
ನೀಟ	೪೮-೪೪	ನೇರವಾಗಿ
ನೀರಾಜನ	೨೫೨-೩೫	ಮಂಗಳಾರತಿ
ನೀರ	೨೦೪-೧೬	ಸುಂದರ
ನೀರೇಜಧೂಳಿ	೧೬೦-೪೩	ಕಮಲದ ಪರಾಗ
ನೀಲಾಂಬುಜ	೬-೩೪	ಕನ್ನೈದಿಲೆ
ನುಡಿವಕ್ಕಿ	೭೭-೪೮	ಗಿಳಿ
ನುಣ್ಚರ	೨೫೫-೫೦	ಇಂಪಾದ ಧ್ವನಿ
ನೆಗಳು	೧೯೯-೧೦	ಮೊಸಳೆ
ನೆಮ್ಮು	೧೩೫-೧೪	ಒರಗು
ನೆರವಿ	೧೦- ೧	ಗುಂಪು
ನೇಜಯ	೧೯೪- ೩	ಬಾಕು, ಸಣ್ಣ ಕತ್ತಿ
ನೊಸಲಿಡು	೩೧೭-೩೨	ನಮಸ್ಕರಿಸು

ನೋಂಪಿ	೫೪-೧೦	ವ್ರತ
ನಂದನ	೩೦೬- ೪	ಮಗ
ನಂಗಲ್ಲು	೨೦೯-೨೧	ಲಂಗರು
ನೋಂತರು	೪೦೧-೧೩	ವ್ರತಮಾಡಿದರು
ನ್ಯಾಸ	೪೦೦-೧೦	ಉಪನ್ಯಾಸ

ಪ

ಪಗಡಣೆ	೯೦-೬೨	ಅಹಂಕಾರ
ಪಚ್ಚೆವಿಲ್ಲಣ್ಣ	೩೬೩-೩೦	ಮನ್ಮಥ
ಪಟಹ	೧೯೪-೧೦	ಭೇರಿ
ಪಟುಮತಿ	೩೧೩-೧೦	ಶಕ್ತನಾದ, ಅತಿಸೂಕ್ಷ್ಮವಾದ ಬುದ್ಧಿ
ಪಟ್ಟಿ	೯೫- ೩	ರೇಷ್ಮೆ
ಪಡಗು	೧೯೯-೧೦	ಹಡಗು
ಪಡಲಿಗೆ	೫೬-೨೨	ಪಟಲಕ (ಸಂ)
ಪಡೆವಳ್ಳ	೨೪೪- ೮	ಸೈನ್ಯಾಧಿಪತಿ
ಪಣ್ಣೆ ಪಣ್ಣೆ	೧೨೯-೫೨	ಸುಂದರವಾಗಿ ಸಜ್ಜುಗೊಂಡು
ಪದುಳ	೪-೧೯	ಸುಖ
ಪದೆದು	೬೯- ೨	ಪ್ರೀತಿಸಿ
ಪನ್ನಗ	೩೫೮-೨೪	ಹಾವು
ಪನ್ನಂಗೆ	೨೦೩-೩೨	ರಥದಲ್ಲಿ ಛತ್ರಿಯಂತಿರುವ ಭಾಗ
ಪರಿಸ್ಪಂದ	೩೯೭-೩೫	ನಡುಗುವಿಕೆ
ಪರ್ವುಗೆ	೪೦೮-೫೫	ಹಬ್ಬುಗೆ
ಪಱೆರು	೨೪೫-೧೭	ಅನುಕರಣ ಶಬ್ದ
ಪಲುಂಬು	೪೦೭-೪೯	ಹಲುಬು, ಗೋಳಿಡು
ಪಲ್ಲವ	೧೭೯-೨೯	ಚಿಗುರು
ಪವನಾಭ್ಯಾಸ	೧೩೦-೫೬	ಯೋಗಾಭ್ಯಾಸ
ಪವಿ	೨೬೯-೩೩	ವಜ್ರಾಯುಧ

ಪಸರ	೩೫೪. ೩	ಅಂಗಡಿ
ಪಸೆ	೨೫೭- ೭	ಹಸೆ
ಪಳಮಂಜರಿ	೨೮೯- ೫	ಒಂದು ರಾಗ
ಪಳುಕು	೧೫-೩೧	ಸ್ಫಟಿಕಾ
ಪಳಂಚು	೧೨೪-೧೮	ಮುಟ್ಟು
ಪಾಗುಡ	೨೭೪-೧೫	ಪ್ರಾಭೃತ (ತ್ಸ) ಕಾಣಿಕೆ
ಪಾಟ	೮೧- ೬	ಸಮಾನ
ಪಾಟಸು	೩೫೭-೨೩	ವಿಸ್ತರಿಸು
ಪಾತ್ರಸತಿ	೧೩೩- ೪	ವೇಶ್ಯೆ, ನರ್ತಕಿ
ಪಾಯ್ದಳ	೧೯೩- ೩	ಮೇಲೆಬೀಳುವ ಸೈನ್ಯ
ಪಾರಣೆ	೧೭೪-೭೨	ಉಪವಾಸದ ಮರುದಿನ
ಪಾರಿವ	೩೨೩-೧೮	ಪಾರಿವಾಳ
ಪಾಲ	೨೬೪- ೫	ಸೇತುವೆ
ಪಾಸಟ	೧೭೨-೬೪	ಸಮಾನ
ಪಾಸರೆ	೨೪೫-೧೫	ಹಾಸುಬಂಡೆ
ಪಿಸುಣ	೨೦೩-೩೨	ಚಾಡಿಕೋರ
ಪೀನ	೨೩೧-೩೮	ದೊಡ್ಡ
ಪುರೆಯಿಡು	{೨೩೧-೩೯ {೩೯೩- ೯	ಮೊರೆಯಿಡು, ವ್ಯಥೆಯಿಂದ ಕೂಗಿಕೊಳ್ಳು
ಪುದಿ	೫-೨೭	ಹುದುಗಿಕೊ
ಪುದುವಾಳ್	೧೮೪-೫೬	ಜೊತೆಗೂಡಿ ರಾಜ್ಯಭಾರಮಾಡು
ಪೂದುರುಬಿ	೧೦೦-೩೫	ಹೂಮುಡಿದ ಹೆಣ್ಣು
ಪೂಸರಲ	೨೯೩-೧೧	ಮನ್ಮಥ
ಪೆಟಲು	೧೯೪- ೯	ವಿನೋದಕೇಳಿಯ ಬಂದೂಕದಂತ ಸಾಮಗ್ರಿ
ಪೆಂಡೆಯ	೪-೨೦	ಕಾಲಿನಲ್ಲಿ ಧರಿಸುವ ಬಿರುದಿನ ಬಾವುಲಿ

ಪೇತು	೨೦೨-೨೫	ಮನೋವಿಕಾರ (ಪ್ರೇತ)
ಪೈಸರ	೨೪-೩೯ ೩೬೦-೩೯	ಜಾರಿಕೆ
ಪೊಚ್ಚರಿಸು	೨೪೫-೧೫	ಒಡೆ, ತುಂಡಾಗು
ಪೊನ್ನಂದಣ	೨೦೦-೧೫	ಚಿನ್ನದ ಪಲ್ಲಕ್ಕಿ
ಪೊರವು	೧೧೩- ೬	ಹೊರಡುವಿಕೆ
ಪೊಳಲು	೧೪೯-೧೭	ಪಟ್ಟಣ
ಪಂಚವಿಂಶತಿ	೩೫೮-೨೭	ಇಪ್ಪತ್ತೈದು
ಪಿಂಜರಿತ	೩೦೪-೨೧	ದಟ್ಟವಾಗಿ ಕೆಂಬಣ್ಣದಿಂದ ತುಂಬಿದ
ಪುಂಖಾನು ಪುಂಖ	೧೦೬-೧೨	ಒಂದಾದ ಮೇಲೊಂದು
ಪುಂಡರೀಕ	೧೬-೩೯	ಹುಲಿ, ಶ್ರೇಷ್ಠ
ಪೊಂದುಡುಗೆ	೨೪೭-೨೧	ಬಂಗಾರದ ಉಡುಗೆ
ಪ್ರಗುಣ	೩೯೪-೧೪	ಶ್ರೇಷ್ಠವಾದ ಗುಣ
ಪ್ರಣುತ	೧೨೯-೫೧	ನಮಸ್ಕರಿಸಿದ
ಪ್ರಮದ	೩೦೧- ೪	ಹೆಚ್ಚು ಸಂತೋಷ
ಪ್ರಸ್ತುತಾರ್ಚನೆ	೩೯೭-೩೨	ಸಮಯಕ್ಕೆ ತಕ್ಕ ಪೂಜೆ
ಪ್ರಸ್ಥಾನ	೧೯೭-೨೯	ಪ್ರಯಾಣ
ಪ್ರಾಜ್ಯ	೨೯೭-೩೯	ಮಹತ್ತಾದ
ಪ್ರೇರಣಿಸು	೩೨೯-೧೭	ಪ್ರೇರಿಸು, ಮಾಡುವಂತೆ ಹೇಳು
ಪ್ರಾಂಶು	೨೪೩- ೪	ಕಿರಣ

ಫ

ಫಣಿ	೪೩೦-೧೭	ಹಾವು
ಫಣಿಪ	೪೩೧-೧೪	ಹಾವುಗಳ ಒಡೆಯ, ಆದಿಶೇಷ
ಫುಲ್ಲ	೫೧೩- ೭	ಹೂವು

ಬ

ಬಜಾವಣೆ	೬-೫೩	ವಾದ್ಯವನ್ನು ಬಾರಿಸುವುದು

ಬಟ್ಟವರೆ	೧೫೩- ಳ	ದುಂಡಾದ ಚಂದ್ರ
ಬಟ್ಟೆ	೮೦- ಳ	ದಾರಿ
ಬಡಬಡಿಸು	೨೫೨-೨೦	ಸಿಕ್ಕಿದಂತೆ ಹರಟು
ಬಡಿಗೆ	೨೬೭-೧೯	ಕೋಲು
ಬಣ್ಣಗಾರಿಕೆ	೧೩೬-೨೦	ಜಾಣತನ
ಬದೆಗ	೩೫೮-೨೫ ೯೬-೧೧	} ಕೀಳು ಮನುಷ್ಯ
ಬನ್ನ	೧೮೪-೫೬	ಕಷ್ಟ, ಭಂಗ
ಬಯಲು ಮಾಡು	೧೫೧-೪೧	ಪ್ರತ್ಯಕ್ಷವಾಗಿ ತೋರಿಸು
ಬಲಗೊಳ್	೨೩-೩೩	ಪ್ರದಕ್ಷಿಣೆ ಮಾಡು
ಬಲಿ	೧೮೪-೫೯	ಪೂಜೆ
ಬಲಿಪು	೯೯-೨೪	ಬಲವಂತವಾಗಿ
ಬಲ್ಲಡಣೆ	೨೦೪-೪೦	ದೊಡ್ಡ ಗುಂಪು
ಬಲ್ಲಾರಿಕೆ	೧೭೬- ೮	ಶಕ್ತಿ
ಬಲ್ಲಿರವು	೨೩೩- ೫	ಹೆಚ್ಚು ಅವಕಾಶ
ಬಲ್ಲವಿಕೆ	೨೬೧-೧೧	ಜ್ಞಾನ
ಬಲ್ಲಿತು	೭೧-೧೪	ದೊಡ್ಡದು
ಬಲ್ವಿಡಿ	೨೯೬-೨೪	ಬಲವಾಗಿ ಹಿಡಿ
ಬವರ	೩೫೫- ೮	ಯುದ್ಧ
ಬವರಿ	೫೯-೩೬	ಭ್ರಮರ (ತ್ಸ) ದುಂಬಿ
ಬಸವಳಿ	೩೩೭- ೮	ಶಕ್ತಿಗುಂದು
ಬಳ್ಳ	೭-೩೬	ಆಳತೆಯ ಸಾಧನೆ
ಬಾಕುಳಿ	೯೨-೭೭	ಅತಿ ಆಸೆ
ಬಾದಣ	೧೧೦-೩೭	ಗವಾಕ್ಷಿ
ಬಾಯಳಿ	೪೦೭-೫೨	ಶಕ್ತಿಗುಂದು
ಬಾಯ್ದೆರೆ	೧೦೫-೧೦	ತುಟಿ
ಬಾಲಾರ್ಕ	೧೭೫- ೫	ಬಾಲಸೂರ್ಯ

ಬಿಣ್ಣಿತು	೩೧೯-೪೩	ದೊಡ್ಡದು
ಬಿತ್ತಗ	೧೩೮-೩೦	ಜಾಣ
ಬಿನ್ನಣಿಸು	೯೬- ೯	ಜಾಣತನದಿಂದ ವರ್ಣಿಸು
ಬಿರುಬು	೨೩೩- ೫	ಆವೇಶ
ಬಿರ್ವಾಗಿ	೪೦೮-೫೫	ವಿಶೇಷವಾಗಿ
ಬುದ್ಧ	೩೮೮- ೫	ಜ್ಞಾನಿ
ಬೆಕ್ಕಸ	೬೭-೨೭	ಆಶ್ಚರ್ಯ
ಬೆಟ್ಟಂತೆ	೮೮-೪೮	ಬೆಸುಗೆ ಹಾಕಿದಂತೆ
ಬೆಟ್ಟಿಮಾಡದೆ	೩೪೧-೩೩	ಲಕ್ಷ್ಯ ಮಾಡದೆ
ಬೆರೆತುಕೊಳೆ	೨೨೬- ೭	ಗರ್ವಿಸು
ಬೆಲೆವೆಣ್ಣು	೧೯೦-೪೫	ವೇಶ್ಯೆ
ಬೆಸೆದವರು	೨೦೩-೩೪	ಕೆಲಸಗಾರರು, ಸೇವಕರು
ಬೆಸಗೊಳ್	೬೬-೧೯	ಪ್ರಾರ್ಥಿಸು
ಬೆಸನ	೨೬೯-೩೦	ಕಾರ್ಯ
ಬೆಸಲಾದಳು	೨೨೨-೪೧	ಹೆತ್ತಳು
ಬೆಳ್ವಾಗು	೩೮೪-೧೬ ೯೦-೬೪	ಬೆಪ್ಪಾಗು
ಬಳ್ವಿಟ್ಟ	೩೦೮-೧೨	ಬೆಳ್ಳಿಯ ಬೆಟ್ಟ
ಬೆಳ್ಳಿಲೆ	೧೦೨-೪೫	ಬಿಳಿದಾದ ಎಲೆ
ಬೇಳುವೆ	೯೦-೬೪	ಮುಂಕುಗೊಳಿಸುವ ಶಕ್ತಿ
ಬೋಳ್ಪೈಸು	೪೧೩-೨೬	ಸಮಾಧಾನ ಮಾಡು, ಮುದ್ದಿಸು
ಬಂಟಮಾನಸ	೨೯೩- ೯	ದೂತ
ಬಂಬಳಿ	೪೦೭-೪೯	ಆಯಾಸ
ಬಾಂಬಟ್ಟಿ	೨೪೬-೨೧	ಆಕಾಶಮಾರ್ಗ
ಬಿಂಗ	೫೯-೪೧	ಬಂಗಾರ
ಬೆಂಜೆ	೩೬೮-೨೪	ಸಣ್ಣ ಸರೋವರ

ಭ

ಭಟ	೨೨೧-೩೧	ಹೊಗಳುಭಟ್ಟ
ಭದ್ರ	೧೯೦-೧೯	ಮಂಗಳ
ಭರತ	೭-೩೮	ಅಲೆಯ ಶಬ್ದ
ಭರ್ತೃ	೧೧೯-೪೭	ಸ್ವಾಮಿ
ಭವನಕೃತ್ಯ	೮೭-೪೫	ಮನೆಕೆಲಸ
ಭವಮಾಲೆ	೪೦೩-೨೩	ಜನ್ಮಾಂತರಗಳು
ಭವ್ಯಗಣ	೪೧೨-೨೦	ಶ್ರೇಷ್ಠರ ಸಮೂಹ
ಭಾನು	೪-೧೯	ಸೂರ್ಯ
ಭಿತ್ತಿ	೩೨೨-೧೫	ಗೋಡೆ
ಭಿನ್ನಕುಂತಳ	೧೦೦-೩೪	ಬೈತಲೆ
ಭುಕ್ತಿ	೭೫-೩೭	ಊಟ
ಭೂಚಕ್ರ	೩೨೪-೭೮	ಜಗತ್ತು, ಭೂಮಿ
ಭೂಧವ	೧೪೨-೫೭	ರಾಜ
ಭೂಭಾಗೇಂದ್ರ	೧೩೫-೧೬	ಭೂದೇವೇಂದ್ರ, ರಾಜ
ಭೂರಿ	೧೭೯-೭೮	ದೊಡ್ಡ
ಭೂವರಾವಳಿ	೨೪೮- ೭	ರಾಜ ಸಮೂಹ
ಭಂಗುರ	೩೬೪- ೮	ಕ್ಷಣಿಕವಾದ
ಭಂಜಿತ	೩೦೪-೨೧	ಸೋಲಿಸಲ್ಪಟ್ಟ
ಭಂಡು	೮೯-೫೯	ಗೇಲಿ
ಭೃಂಗ	೩೪೮-೧೪	ದುಂಬಿ

ಮ

ಮಕರಾಂಕ	೧೨೨- ೯	ಮೊಸಳೆಯ ಗುರುತುಳ್ಳವನು, ಮನ್ಮಥ
ಮಕುಟವರ್ಧನ	೪೨೦- ೨	ರಾಜ
ಮಜ್ಜನ	೧೫೩- ೧	ಸ್ನಾನ
ಮಡ	೧೧೭-೩೦	ಹಿಮ್ಮಡಿ

ಮಡಿ	೨೦೯-೨೦	ಬಗ್ಗಿಸು
ಮತಂಗರಿಪು	೩೦೪-೨೦	ಆನೆಯ ಶತ್ರು—ಸಿಂಹ
ಮದಾಳಿ	೩೬೯-೩೪	ಮದಿಸಿದ ದುಂಬಿಗಳು
ಮತ್ತೇಭ	೪೨೫-೨೭	ಮದಿಸಿದ ಆನೆ
ಮದಧಾರೆ	೨೪೧-೧೭	ಆನೆಯು ಮದಿಸಿದಾಗ ಪ್ರವಹಿಸುವ ರಸ
ಮದವಕ್ಕಳು	೨೯೭-೩೫	ಮದುವೆಯಾಗುವ ಮಕ್ಕಳು
ಮದಿಲು	೪೨೬-೩೨	ಕೋಟೆಯ ಗೋಡೆ
ಮಧುಮಾಸ	೨೪೨-೨೩	ವಸಂತಮಾಸ
ಮಧುವ್ರತ	೧೦- ೩	ದುಂಬಿ
ಮಯೂಖ	೧೨೩-೧೨	ಕಿರಣ
ಮಲಯಜ	೪೧- ೪	ಶ್ರೀಗಂಧ
ಮಲಹರಿ	೧೫೪- ೯	ಸಂಗೀತದಲ್ಲಿ ಒಂದು ರಾಗ
ಮಲ್ಲಿಕಾ	೪೬-೩೫	ಮಲ್ಲಿಗೆ
ಮಲ್ಲಿಗೆಗೋಲ	೩೨೪- ೪	ಮನ್ಮಥ
ಮಸ್ತಕ	೧೪೦-೪೫	ತಲೆ
ಮಾಗಾಯಿ	೨೧೭- ೪	ಮಾವಿನಕಾಯಿ ಆಕಾರದ ಒಡವೆ
ಮಾಡ	೨೦೫-೪೫	ಉಪ್ಪರಿಗೆ
ಮಾತುಗುಟ್ಟು	೩೪೦-೨೪	ಹರಟೆ ಹೊಡಿ
ಮಾತುಳ	೨೪೪-೧೧	ಸೋದರಮಾವ, ತಾಯಿಯ ಸೋದರ
ಮಾರಾಂಕದಲ್ಲಣ	೨೫೪-೧೭	ಎದುರಾಳಿಯನ್ನು ನಡುಗಿಸುವವನು
ಮಾಕೊಂಡು	೧೬-೩೭	ಇದಿರಾಗಿ
ಮಾರ್ತಾಂಡ	೧೭೫- ೫	ಸೂರ್ಯ
ಮಾಸಾಳು	೨೨೭-೧೬	ತಿಂಗಳು ಸಂಬಳದ ಸೇವಕ
ಮಿಸುನಿ	೩೪೧-೩೪	ಬಂಗಾರ
ಮಿಟಾಗಿ	೨೪೦-೨೪	ಅತಿಶಯವಾಗಿ

ಮಿನಾನಂಕ	೩೨೦- ೫	ಮನ್ಮಥ
ಮುಕ್ಕಡೆಯೊಡೆಯ	೨೨೦- ೨	ಮೂರು ಕೊಡೆಗಳ ನಡುವೆ ಪ್ರಕಾಶಿಸುವವನು, ತೀರ್ಥಂಕರ
ಮುಕ್ತಾಂಶು	೩೦೪-೧೯	ಮುತ್ತಿನ ಕಾಂತಿ
ಮುಗುಳಂಬ	೩೧೨- ೩	ಮನ್ಮಥ
ಮುದ್ರಿಕೆ	೨೯೦- ೯	ಉಂಗುರ
ಮೂಗವಡು	೩೩೫-೫೦	ಮೂಕನಾಗು
ಮೂಡೆ	೨೧೬- ೩	ಒರಗು ದಿಂಬು
ಮೃದುಲ	೩೫೫- ೭	ಮೃದುವಾದ
ಮೊರಹು	೫೯-೩೫	ಕಾಂತಿ
ಮೇಲ್ಗವಿ	೩೧೪-೧೬	ಮೇಲೆ ನುಗ್ಗು
ಮೈಗೊಡು	೨೩-೩೧	ನಮಸ್ಕರಿಸು
ಮೊಗ್ಗೆಗೋಲ	೩೨೨-೧೬	ಮನ್ಮಥ
ಮೊನೆದೋರು	೨೫೯- ೨	ಯುದ್ಧಮಾಡು
ಮೋಡಿ	೨- ೯	ಜಾಣತನ
ಮೋಹರ	೨೨೦-೨೪	ಸೈನ್ಯ
ಮೌಕ್ತಿಕ	೨೩೦-೩೩	ಮುತ್ತು
ಮಂಗಲಯಾನ	೨೮೪-೨೪	ಶುಭಪ್ರಯಾಣ, ಮಂಗಳ ವಾಹನ
ಮಂಗಳಾಸನ	೩೯೫-೨೦	ಸಿಂಹಾಸನ
ಮಂಚಿದಿ	೧- ೪	ಒಳ್ಳೆಯದು
ಮಂಡಿತ	೪೧- ೫	ಅಲಂಕರಿಸಿದ
ಮಾಂದಳಿರು	೧೫೪-೩೧	ಮಾವಿನ ಚಿಗುರು
ಮಿಂಟೆ	೩೪೯-೨೩	ಆಯುಧ ವಿಶೇಷ
ಮಿಾಂಬುಳು	೪೭-೩೭	ಮಿಣುಕು ಹುಳು
ಮುಂಡಾಡು	೧೦೪-೨೫	ಮುದ್ದಾಡು
ಮುಂಡಾಸು	೧೩೨- ೪	ತಲೆಗೆ ಸುತ್ತುವ ರುಮಾಲು
ಮುಂಬಗಲು	೨೯೨- ೫	ಬೆಳಿಗ್ಗೆ
ಮುಂಬಟ್ಟೆ	೩೩೦-೨೨	ಮುಂದಿನ ಹಾದಿ

ರ

ರುಯ್ಯ	೧- ೪	ಮನೋಹರ
ರವ	೧೨೨- ೭	ಶಬ್ದ
ರಾಗ	೨೭-೫೯	ಪ್ರೀತಿ
ರಾಜಮಾರ್ತಾಂಡ	೨೩೩- ೧	ರಾಜರಲ್ಲಿ ಸೂರ್ಯ ಸಮಾನ
ರಾಜಿ	೨೪೬-೨೩	ಶ್ರೇಣಿ
ರಾಯಸ	೪೦೯- ೫	ಓಲೆ
ರಾಯಸದಂಬು	೨೧೫-೫೪	ಓಲೆಯನ್ನು ಕೊಂಡೊಯ್ಯುವ ಬಾಣ
ರುಜೆ	೨೪೧-೩೨	ರೋಗ
ರೂಹಿಸು	೬೦-೪೨	ರೂಢಿಸು
ರಿಂಚೆಯ	೧೫೫-೨೦	ವಾದ್ಯ ವಿಶೇಷ

ಲ

ಲಗ್ಗೆ	೧೯೪- ೯	ಮುತ್ತಿಗೆ
ಲಹರಿ	೨೬೩-೨೩	ಪ್ರವಾಹ
ಲಾಗು	೧೩೫-೧೬	ಚಮತ್ಕಾರ
ಲಾಲಿತ	೯೫- ೧	ಆಟವಾಡಿಸಲ್ಪಟ್ಟ
ಲಾಸಿಕೆ	೧೩೪-೧೦	ಕುಣಿತ
ಲುಳಿ	೪೦೫-೩೬	ಆಭರಣ ವಿಶೇಷ, ಕಾಲುರುಳಿ
ಲೋಗರು	೨೯೧- ೧	ಸಾಮಾನ್ಯ ಮನುಷ್ಯರು
ಲೌಡಿ	೧೮೫-೬೩	ಲಗುಡಾ, ಆಯುಧವಿಶೇಷ

ವ

ವಕ್ರಿ	೨೩೦-೩೪	ಅಡ್ಡದಾರಿ ಹಿಡಿಯುವವ
ವಜ್ರಿ	೪೩೩-೧೧	ಇಂದ್ರ
ವರ್ಣಕ	೨- ೬	ಷಡ್ಪದಿ, ಸಾಂಗತ್ಯ ಇತ್ಯಾದಿ ದೇಶೀ ಕಾವ್ಯಗಳು

ವನಜಗಂಧಿನಿ	೫೫೩-೫೯	ಕಮಲದಂತೆ ಸುವಾಸನಾಯುಕ್ತಳು
ವನಧಿ	೧೭೬- ೯	ಸಮುದ್ರ
ವರೇಣ್ಯ	೪೨೦-೧೪	ಶ್ರೇಷ್ಠ
ವಲಯ	೪೨೪-೧೮	ಭಾಗ
ವಸುಮತಿ	೨೬೫-೧೧	ಭೂಮಿ
ವಸ್ತುಕ	೨- ೬	ಚಂಪೂ, ಕಾವ್ಯ
ವಾಗ್ಜಾಲ	೬೫-೧೨	ಮಾತುಗಳ ಸಮೂಹ
ವಾಜಿ	೨೦೯-೧೯	ಕುದುರೆ
ವಾಗ್ಮಧುರ	೨೧೯-೨೨	ಮಾತಿನ ಸವಿ
ವಾರಣ ಗಮನ	೫೫೬- ೫	ಆನೆಯ ನಡಿಗೆ
ವಾರಣ ವೈರಿ	೧೭೭-೧೭	ಆನೆಯ ವೈರಿ, ಸಿಂಹ
ವಾರಿಜ	೧೭೦-೪೯	ಕಮಲ
ವಾರ್ಧಿತಟ	೨೧೪-೫೦	ಸಮುದ್ರದ ದಡ
ವಾಹಿನಿ	೨೭೫-೨೦	ಸೈನ್ಯ
ವಿಕಳ	೨- ೬	ಮತಿಗೆಟ್ಟ
ವಿಕ್ರಾಂತಲಗ್ನ	೧೪೬-೬೬	ಸಿಂಹಲಗ್ನ
ವಿಗುರ್ವಣೆ	೨೯೫-೧೦	ಗೆಲ್ಲಲು ಅಸಾಧ್ಯ
ವಿಜಿತ	೩೪೦-೨೪	ಗೆದ್ದ
ವಿಡಾಯ	೧೪- ೧	ಶೌರ್ಯ
ವಿತ್ತ	೨೨೯-೨೭	ಹಣ
ವಿದ್ಧಿ	೧೯೫-೧೬	ಶಿಲ್ಪಿ
ವಿನ್ಯಾಸ	೨೪೯- ೪	ಹೊಂದಿಕೆ
ವಿಪ್ರ	೨೯೨- ೨	ಬ್ರಾಹ್ಮಣ
ವಿಭಾಡ	೧೪೭- ೨	ಭಂಗಿಸುವವನು
ವಿಭ್ರಾಜಿತ	೧೨೭-೩೬	ಹೊಳೆವ
ವಿಭು	೩-೧೬	ಸ್ವಾಮಿ
ವಿಷ	೨೬೭-೨೦	ನೀರು

ವಿಷ್ಟರಾಶ್ಯ	೩೦೪-೨೦	ಸಿಂಹಾಸನವನ್ನು ಅಲಂಕರಿಸುವವನು
ವಿಸರ	೨೬೭-೫೯	ಸಮೂಹ
ವಿಹಗ (ವಿಹಂಗ)	೬೦-೪೮	ಪಕ್ಷಿ
ವೀಟಿಕಾ	೪೧- ೪	ವೀಳೆಯ
ವೀತರಾಗ	೧೧- ೬	ಆಶೆ ನೀಗಿದವನು
ವೃತ್ಯನುಮತ	೧೪೪-೧೧	ಅಭ್ಯಾಸಕ್ಕೆ ಯೋಗ್ಯವಾದ
ವೃಷ್ಟಿ	೧೬೪-೧೨	ಮಳೆ
ವೆಗ್ಗಳಿಸು	೯೪-೪೪	ಹೆಚ್ಚಾಗು
ವೆಟ್ಟಿತಟ್ಟೆ	೯೩-೭೪	ಹೆಚ್ಚು, ಕಡಿಮೆ
ವೇತ್ರಧಾರಿಣಿ	೭೬-೪೭	ಬೆತ್ತ ಹಿಡಿದವಳು
ವೇಧಿಸು	೯೩-೪೨	ಹೇಳು
ವೇದ್ಯ	೯-೪೪	ಗೊತ್ತಾದ
ವೈಶಿಕ	೧೪೪-೨೨	ವೇಶ್ಯೆಗೆ ಸಂಬಂಧಿಸಿದ
ವೈಹಾಳಿ	೨೪೪- ೭	ಕುದುರೆ ಸವಾರಿ
ವ್ಯಲೀಕ	೨೫೪- ೪	ಸುಳ್ಳು, ಮಾಡಬಾರದುದು
ವ್ಯಾಕುಲ	೩೭೦-೪೫	ವ್ಯಥೆ
ವ್ಯೋಮ	೨೪-೩೯	ಆಕಾಶ
ವ್ರಂದ	೨೪೧-೩೨	ಸಮೂಹ
ವ್ರಜ	೨೪೬-೨೦	ಸಮೂಹ
ವ್ರತಿಕೆ	೧೬೫-೨೧	ಜೈನ ಆಣುವ್ರತ ಸ್ವೀಕರಿಸಿದ ಹೆಣ್ಣು

ಶ

ಶರಧಿ (ಶರನಿಧಿ)	೨೦೬- ೩	ಸಮುದ್ರ
ಶಲಾಕೆ	೪೩೭- ೨	ಶ್ರೇಷ್ಠ
ಶಶಿಕಾಂತ	೨೦೪- ೭	ಚಂದ್ರಕಾಂತ ಶಿಲೆ
ಶಾಲಿ	೫-೨೪	ಬಟ್ಟೆ
ಶಿಖರಿ	೩೯೪-೧೩	ಶಿಖರವುಳ್ಳದ್ದು, ಪರ್ವತ

ಶೀತಾಂಶು	೩೯೦-೧೭	ತಂಪು ಕಿರಣಗಳುಳ್ಳವನು, ಚಂದ್ರ
ಶುಕಾವಳಿ	೧೪೭-೧೨	ಗಿಳಿಗಳ ಸಮೂಹ
ಶೇಷಾನ್ನ	೩೨-೧೫	ಊಟಮಾಡಿ ಉಳಿದ ಅನ್ನ
ಶೈಲ	೨೪೪- ೭	ಬೆಟ್ಟ

ಷ

ಷೋಡಶ	೨೯೨- ೭	ಹದಿನಾರು

ಸ

ಸಘಾಟಿಕೆ	೪೮-೪೪	ಧೈರ್ಯ, ಹಠಮಾರಿತನ
ಸಜ್ಜನಾರ್ಚಿತೆ	೩೮೪-೧೩	ಸಜ್ಜನರಿಂದ ಪೂಜಿಸಲ್ಪಡುವವಳು
ಸಟೆ	೯೮-೫೧	ಸುಳ್ಳು
ಸಡ್ಡಕ	೩೪೮-೧೭	ಹೆಂಡತಿಯ ಸೋದರಿಯ ಗಂಡ
ಸತ್ತಿಗೆ	೩೨೧-೧೧	ಛತ್ರಕಾ (ಸಂ), ಕೊಡೆ
ಸದನ	೨೪-೪೦	ಮನೆ
ಸದ್ಮ	೧೫೦-೩೧	ಮನೆ
ಸನಿಹ	೪೩-೧೫	ಹತ್ತಿರ
ಸಬಳ	೧೮೫-೬೨	ಕತ್ತಿ
ಸಬ್ಬವ	೧೧೭-೩೫	ಹಾಸ್ಯ, ಹುಡುಗಾಟ
ಸಭಾಮಸ	೩೪೦-೨೭	ಸಭಾಗೃಹ
ಸಯ್ಯಮ	೩೮೦-೨೪	ಮನೋನಿಗ್ರಹ
ಸಯ್ಯರಿದು	೧೯೮- ೫	ಉಚಿತವರಿತು
ಸರಲ	೬೦-೬೩	ಬಾಣ
ಸರಿಗೆ	೧೨೩-೧೫	ಜರತಾರಿ
ಸಲ್ಲಲಿತ	೨೨೭-೧೨	ಮನೋಹರ
ಸಲ್ಲೆಹ	೧೮೫-೬೩	ಆಯುಧ ವಿಶೇಷ, ಶಲ್ಯ (ತ್ಸ)
ಸಸಿನೆ	೩೪೯-೨೨	ಚೆನ್ನಾಗಿ
ಸಾಸಿನೆ	೨೪೯-೨೨	ಸಾಕು

ಸಾಕೇತಪುರ	೧೯೮- ೧	ಅಯೋಧ್ಯೆ
ಸಾಟಿ	೬೦-೪೨	ಸಮಾನ
ಸಾಮಜ	೧೯೪-೧೧	ಆನೆ
ಸಾಲಭಂಜಿಕೆ	೪೧- ೪	ಪ್ರತಿಮೆ
ಸಿಬ್ಬದಿಗೊಳು	೩೨-೧೪	ಕಳವಳಗೊಳ್ಳು
ಸಿಹಿವಿಲ್ಲ	೩೫೮-೧೫	ಮನ್ಮಥ
ಸುಗಿ	೩೧೪-೧೭	ಎಳೆ
ಸುಗತ ನಿವಾಸ	೫೪-೧೦	ಜಿನ ದೇವಾಲಯ
ಸುತ್ರಾಮ	೧೬೩-೧೦	ಇಂದ್ರ
ಸುಧಾಂಗ	೩೪-೨೮	ಸುಣ್ಣ ಬಳಿದಿರುವುದು
ಸುಪ್ರಭೆ	೪೨೮- ೪	ಒಳ್ಳೆಯ ಕಾಂತಿ
ಸುಮ್ಮಾನ	೮೯-೫೮	ಸಂತೋಷ
ಸುರಗುರು	೧೨೨-೧೧	ಬೃಹಸ್ಪತಿ
ಸುರಭಿ, ಸುರಪಶು	೬-೩೩	ಕಾಮಧೇನು
ಸುರವೇತ್ರಧಾರರು	೩೦೩-೧೫	ದೇವಲೋಕದ ಹೊಗಳುಭಟ್ಟರು
ಸುರಸೋಪತಿ	೫೨೦-೧೨	ದೇವತೆಗಳಿಗೆ ತಕ್ಕ ಉಪಚಾರ
ಸುವರ್ಣಾದಿ	೨೮೧-೧೬	ಮೇರು ಪರ್ವತ
ಸೂನು	೧೮೮- ೭	ಮಗ
ಸೂಳೈಸು	೨೦೫-೧೮	ಶಬ್ದಮಾಡು
ಸೆಜ್ಜೆವನೆ	೧೪೫- ೧	ಮಲಗುವ ಮನೆ
ಸೆಡೆ	೨೧೧-೩೧	ಹೆದರು
ಸೆಳೆವೆ	೧೨೨- ೮	ಕೋಲು (?)
ಸೇತುಗಟ್ಟಾಗಿ	೨೭೮- ೩	ಜೋಡಿಸು
ಸೈವೆರಗಾಗಿ	೧೯೧-೨೭	ಆಶ್ಚರ್ಯಗೊಂಡು
ಸೊನ್ನಾಹ	೩೧೨-೩೧	ಹೊಳವು
ಸೋಟಗೆ	೩೫-೩೩	ಸೌಟು
ಸೊಪ್ಪ ಸೊಪ್ಪನೆ	೧೨೬-೩೪	ತಡೆದು ತಡೆದು

ಸೊಮ್ಮ	೧೪೪-೧೦	ಐಶ್ವರ್ಯ (ವಿವೇಕ ಜ್ಞಾನ)
ಸೂರಟ	೩೪೨- ೧	ಸೌರಾಷ್ಟ್ರ
ಸೋಹೆ	೩೪೪- ೩	ಜಾಡು, ಕ್ರಮ
ಸುರಭಾನಿಲ	೩೨೨-೧೨	ಸುವಾಸನೆಯಗಾಳಿ
ಸಂಕ್ರಮ	೬೬-೧೪	ಸಮೂಹ
ಸಂಕ್ರಮಿಸು	೫೪- ೭	ಸೇರು
ಸಂಗ್ರಾಮ	೨೭೨- ೩	ಯುದ್ಧ
ಸಂಚಯಸಭೆ	೨೩೭-೧೧	ಒಟ್ಟು ಸೇರಿದ ಸಭೆ
ಸಂತಾನ ವಾಕ್ಯ	೩೭೨-೫೫	ಆಶೀರ್ವಚನ
ಸಾಂಬ್ರಾಣಿ	೨೦೯-೧೪	ಶ್ರೇಷ್ಠ ಕುದುರೆ, ಸುವಾಸನಾ ಸಾಮಾಗ್ರಿ
ಸಿಂಗಳ	೪೫-೩೩	ಸಿಂಹಳ
ಸಿಂಗಾಡಿ	೨೬೯-೩೫	ಬಿಲ್ಲು
ಸಿಂಧೂರ	೨೯೬-೨೭	ಆನೆ, ಕೆಂಪುಬಣ್ಣ
ಸ್ಮರಪುರ	೩೨೭- ೪	ಕೈಲಾಸ
ಸ್ಯಂದನ	೨೦೦-೧೫	ರಥ
ಸ್ವರ್ಗಸರಣಿ	೩೨-೧೫	ಸ್ವರ್ಗಕ್ಕೆ ಸಮಾನ
ಸ್ಪೃಹೆ	೪೧೪- ೫	ಆಸೆ
ಸ್ತೋಮ	೨೨೪-೪೪	ಗುಂಪು

ಹ

ಹಗರಣ	೧೦೩-೫೨	ಕ್ಷುಲ್ಲಕ ರಗಳೆ
ಹದನು	೩೩೫-೫೦	ವಿಚಾರ
ಹಮ್ಮೈಸು	೩೪೬-೨೬	ಮೈಮರೆ
ಹರಣ	೧೪೪-೨೩	ಪ್ರಾಣ
ಹರಿಗೆ	೩೧೫-೧೪	ಫಲಕಾ (ತ್ಸ), ಹಲಗೆ
ಹರುವ	೨೦೨-೨೬	ದಾರಿ, ರೀತಿ

ಹರಿದುಪ್ಪ	೧೫೯-೩೭	ಹೆತ್ತ ತುಪ್ಪ
ಹವಣಿಸು	೧೭೯-೧೧	ಸಿದ್ಧಗೊಳಿಸು
ಹಳಹಳಚು	೧೧೩- ೭	ಫಳ, ಫಳ ಹೊಳಿ
ಹಾರು	೨೦-೧೭	ನಿರೀಕ್ಷಿಸು, ನೋಡು
ಹಾರುವ	೬-೩೩	ಬ್ರಾಹ್ಮಣ
ಹಾವುಗೆ	೪-೨೦	ಪಾದುಕ (ತ್ಸ)
ಹಿಕ್ಕು	೨೬-೪೫	ಬೆದಕು, ಹುಡುಕು
ಹೂಣಿದ	೬೯- ೪	ಹೊತ್ತ
ಹೂಣಿಸು	೨೨೭-೧೭	ಪ್ರತಿಜ್ಞೆ ಮಾಡಿಸು
ಹೆಗ್ಗಾರ	೩೨೨-೧೭	ಭರದ್ವಾಜಪಕ್ಷಿ
ಹೆದ್ದೊರೆ	೨೯೮-೨೮	ನದಿ
ಹೆಮ್ಮಗ	೩೬೫-೧೮	ಹಿರಿಯಮಗ
ಹೆರೆ	೧೬೩- ೩	ಪೆರೆ, ಚಂದ್ರ
ಹೇಮ	೩-೧೩	ಚಿನ್ನ
ಹೊಗರು	೪೦೪-೩೪	ಕಾಂತಿ
ಹೊತ್ತಗೆ	೩೬-೨೧	ಪುಸ್ತಕ
ಹೊನ್ನೊರೆ	೪-೨೧	ಬಂಗಾರದಿಂದ ಮಾಡಿದ ಕತ್ತಿಯ ಚೀಲ